ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಕಥೆಗಳ : ಅಭಿವ್ಯಕ್ತಿ ಮತ್ತು ತಾತ್ವಿಕತೆಯ ಸ್ವರೂಪ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಕುಮಾರ ಹೆಚ್.

ಮಾರ್ಗದರ್ಶಕರು
ಡಾ.ಅಮರೇಶ ಎಸ್.
ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೨೦

ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಕಥೆಗಳ : ಅಭಿವ್ಯಕ್ತಿ ಮತ್ತು ತಾತ್ವಿಕತೆಯ ಸ್ವರೂಪ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕುಮಾರ ಹೆಚ್.

ಮಾರ್ಗದರ್ಶಕರು

ಡಾ.ಅಮರೇಶ ಎನ್.

ಪ್ರಾಧ್ಯಾಪಕರು

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೨೦

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ **ಕುಮಾರ ಹೆಚ್**. ಅವರು **"ವೀಣಾ ಶಾಂತೇಶ್ವರ, ವೈದೇಹಿ ಮತ್ತು** ಗೀತಾ **ನಾಗಭೂಷಣ ಕಥೆಗಳ : ಅಭಿವ್ಯಕ್ತಿ ಮತ್ತು ತಾತ್ವಿಕತೆಯ ಸ್ವರೂಪ"** ಎಂಬ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಅಮರೇಶ ಎಸ್.
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ : 10-01-2020
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

"ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಕಥೆಗಳ : ಅಭಿವ್ಯಕ್ತಿ ಮತ್ತು ತಾತ್ವಿಕತೆಯ ಸ್ವರೂಪ" ಎಂಬ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು **ಡಾ.ಅಮರೇಶ ಎನ್**. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಕುಮಾರ ಹೆಚ್.
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ : 10-01-2020
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವಿಧಾನ

ಪ್ರಸ್ತಾವನೆ

ಕನ್ನಡ ಸಾಹಿತ್ಯದ ನವ್ಯೋತ್ತರ ಕಾಲಘಟ್ಟದಲ್ಲಿ ವಿಭಿನ್ನ ಬಗೆಯ ಸ್ಥಿತ್ಯಂತರಗಳಾದವು. ಅವುಗಳಲ್ಲಿ ಮಹಿಳಾ ಸಂವೇದನೆಯು ಒಂದಾಗಿದೆ. ಈ ಸಂವೇದನೆಯು ಮಹಿಳೆಯರನ್ನು ಸಮಾಜದ ಕೆಳಸ್ತರದಲ್ಲಿ ಇಟ್ಟು ನೋಡಿದ ಪುರುಷವಾದಿ ಧೋರಣೆಗಳನ್ನು ವಿರೋಧಿಸುತ್ತ ತನ್ನತನವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಲು ಆರಂಭಿಸಿತು. ಅದಕ್ಕೆ ಆಯ್ದುಕೊಂಡ ದಾರಿ ಸಾಹಿತ್ಯ. ತಮ್ಮ ಅಭಿವ್ಯಕ್ತಿಯನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುವುದು ಮುಖ್ಯವಾಗಿತ್ತು. ಹಾಗಾಗಿಯೇ ನವ್ಯೋತ್ತರ ಪೂರ್ವಸಾಹಿತ್ಯ ಸಂದರ್ಭದಲ್ಲಿನ ಮಹಿಳೆಯರ ಸಾಹಿತ್ಯ ಅಭಿವ್ಯಕ್ತಿ ಒಂದು ರೀತಿಯಲ್ಲಿದ್ದರೆ, ನವ್ಯೋತ್ತರದಲ್ಲಿ ಬದಲಾಯಿತು. ತಿರುಮಲಾಂಬ, ಕೊಡಗಿನ ಗೌರಮ್ಮ, ತ್ರಿವೇಣಿಯವರ ಬರಹಗಳು ಆದರ್ಶ ಮಹಿಳಾ ಸಂವೇದನೆಯ ಅಭಿವ್ಯಕ್ತಿಯನ್ನು ಅವರ ಕೃತಿಗಳಲ್ಲಿ ಕಾಣಬಹುದು.

ಮಹಿಳಾ ಸಂವೇದನೆಯನ್ನು ಕನ್ನಡ ಸಾಹಿತ್ಯದಲ್ಲಿ ಮಹಿಳೆಯರೇ ವ್ಯಕ್ತಪಡಿಸಿಲ್ಲ. ಅನೇಕ ಪುರುಷ ಲೇಖಕರು ಮಹಿಳಾಭಿವ್ಯಕ್ತಿಯನ್ನು ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಹಾಗೆ ನೋಡಿದರೆ ಕನ್ನಡದ ಮೊದಲಘಟ್ಟದ ಕಾದಂಬರಿಗಳು ಆರಂಭವಾಗಿದ್ದು ಸ್ತ್ರೀವಾದಿ ನೆಲೆಯಲ್ಲಿ. 'ಇಂದಿರಾಬಾಯಿ', 'ವಾಗ್ದೇವಿ' ಮತ್ತು 'ಇಂದಿರೆ' ಮುಂತಾದ ಕಾದಂಬರಿಗಳನ್ನು ನೆನೆಪಿಸಿಕೊಳ್ಳಬಹುದು. ಇವುಗಳ ಅಭಿವ್ಯಕ್ತಿ ಮತ್ತು ವಸ್ತು ವಿಚಾರದಲ್ಲಿ ಸ್ತ್ರೀಕೇಂದ್ರಿತ ತಾತ್ವಿಕ ದೃಷ್ಟಿಕೋನ ಮಹತ್ತರವಾಗಿಲ್ಲ. ಏಕೆಂದರೆ ಆರಂಭದಲ್ಲಿ ಹಿಂದೂ ಧರ್ಮದಲ್ಲಿದ್ದ ಮೂಢಾಚಾರಗಳನ್ನು ಪ್ರಶ್ನಿಸುವ ಮಾದರಿಗಿಂತ ಅದನ್ನು ಒಪ್ಪಿಕೊಳ್ಳುವ ನೆಲೆಯೇ ಹೆಚ್ಚಾಗಿತ್ತು. ಈ ಕಾದಂಬರಿಗಳನ್ನು ಬರೆದ ಪುರುಷ ಲೇಖಕರೆಲ್ಲ ಸಮಾಜವಾದ ಮತ್ತು ಜ್ಯಾತ್ಯತೀತ ದೃಷ್ಟಿಕೋನಕ್ಕಿಂತ ಹೆಚ್ಚಾಗಿ ಬ್ರಾಹ್ಮಣ ಸ್ತ್ರೀ ಸಂವೇದನೆಯನ್ನು ಕುರಿತು

ಬರೆದರು. ಅನುಭವಿಸುತ್ತಿದ್ದ ನೋವುಗಳನ್ನು ಮಾತ್ರವೇ ಏಕಮುಖಿಯಾಗಿ ನೋಡುವ ಕ್ರಮವು ಅವರಲ್ಲಿತ್ತು. ಅವರೊಟ್ಟಿಗೆ ಬದುಕುತ್ತಿದ್ದ ಇತರ ಸಮಾಜದ ಗೈರನ್ನು ಕಾದಂಬರಿಗಳಲ್ಲಿ ಕಾಣಬಹುದಿತ್ತು. ಕನ್ನಡ ಸಾಹಿತ್ಯದಲ್ಲಿ ಇದೇ ಪರಂಪರೆಯನ್ನು ಮೊದಲಘಟ್ಟದ ಮಹಿಳಾ ಬರೆಹಗಾರರಲ್ಲೂ ಕಾಣಬಹುದು. ಈ ಕಾರಣದಿಂದ ನವ್ಯೋತ್ತರ ಸಂದರ್ಭದಲ್ಲಿನ ಮಹಿಳಾ ಬರೆಹಗಾರರ ಅಭಿವ್ಯಕ್ತಿ ಕ್ರಮವು ವಿಭಿನ್ನವಾಗಿ ಕಂಡುಬಂದಿತು.

ಆರಂಭಿಕ ಕನ್ನಡ ಕಥನಸಾಹಿತ್ಯವು ವಿಧವಾ ಸಮಸ್ಯೆ, ಹೊರಗಿನ ಸಮಾಜದೊಂದಿಗೆ ಸ್ವಾತಂತ್ರ್ಯವನ್ನು ಕಡಿದುಕೊಂಡು ಕುಟುಂಬದೊಳಗೆ ಬಂಧಿಸಿಕೊಂಡಿರುವುದು. ಸಂಪ್ರದಾಯ ಬದ್ಧವಾಗಿರುವುದು. ಉನ್ನತವರ್ಗದ ಬ್ರಾಹ್ಮಣರ ಕೆಲವೇ ಸ್ತ್ರೀಯರು ಮಾತ್ರ ಶಿಕ್ಷಣ ಪಡೆಯುವಂತಹ ಅವಕಾಶವಿದ್ದು, ಉಳಿದ ಸ್ತ್ರೀಯರು ಶಿಕ್ಷಣ ವಂಚಿತರಾಗಿದ್ದರು. ಗಂಡಸರಿಗೆ ವಿಪರೀತವಾದ ಸ್ವಾತಂತ್ರ್ಯವಿದ್ದು, ಅನೇಕ ಸಂದರ್ಭಗಳಲ್ಲಿ ಅನೈತಿಕ ಕೃತ್ಯಗಳಲ್ಲಿಯೂ ತೊಡಗಿದರೂ ಗಂಡೆಂಬ ಕಾರಣಕ್ಕೆ ಮಾನ್ಯ ಮಾಡಲಾಗಿತ್ತು. ಸ್ತ್ರೀಯು ಆದರ್ಶ ನಾರಿಯಾಗಿಯೇ ಉಳಿದಿರಬೇಕೆಂಬ ವ್ಯವಸ್ಥಿತ ಜಾಲವನ್ನು ಪುರುಷರು ಹೆಣೆದಿರುವುದನ್ನು ಎಲ್ಲಾ ಕಾಲದಲ್ಲೂ ನೋಡಬಹುದು. ಆದರೆ ನವ್ಯೋತ್ತರದ ಬರೆಹಗಾರರು ಇಂತಹ ಕೆಲವು ಪುರುಷ ನಿಲುವುಗಳನ್ನು ತಾತ್ವಿಕವಾಗಿ ಪ್ರತಿಭಟಿಸುವಂತಹ ನೆಲೆಯಲ್ಲಿ ಕಥೆಗಳನ್ನು ಕಟ್ಟಿರುವುದನ್ನು ಗುರುತಿಸಿಕೊಳ್ಳಲು ಸಾಧ್ಯವಿದೆ. ಇಂತಹ ನಿಲುವು ನವ್ಯೋತ್ತರ ಪೂರ್ವದಲ್ಲಿರಲಿಲ್ಲ. ಇದನ್ನು ಆ ಕಾಲದ ಮಹಿಳಾ ಮತ್ತು ಪುರುಷ ಬರೆಹಗಾರರ ಈರ್ವರಲ್ಲೂ ಕಾಣಲು ಸಾಧ್ಯವಿಲ್ಲ. ಆಧುನಿಕ ಮಹಿಳೆಯರ ಜೀವನ ಶ್ರದ್ಧೆಯನ್ನು ವಿಭಿನ್ನವಾಗಿ ಕಂಡುಕೊಂಡು ಬರೆಯುತ್ತಿರುವವರು ಕಂಡುಬರುವುದು ನವ್ಯೋತ್ತರ ಸಂದರ್ಭದಲ್ಲಿ. ಈ ಕಾಲದಲ್ಲಿ ಅನೇಕ ಮಹಿಳಾ ಪರವಾದ ಸಂವೇದನೆಗಳು ಹುಟ್ಟಿಕೊಂಡವು. ದಲಿತ, ಬ್ರಾಹ್ಮಣ, ಮುಸ್ಲಿಂ, ಕ್ರಿಶ್ಚಿಯನ್, ಶೂದ್ರ, ಅಧಿಕಾರಸ್ಥ ಮಹಿಳೆ ಇತ್ಯಾದಿಯಾಗಿ ಅವೆಲ್ಲವನ್ನು ಸೀಳಿಕೊಳ್ಳದೆ ಏಕೀಭವಿಸಿಕೊಂಡು ಕಥಾಭಿವ್ಯಕ್ತಿಯನ್ನು ಮಾಡಿರುವುದನ್ನು ಕಾಣಬಹುದು.

ಮಹಿಳಾ ಕಥಾಪರಂಪರೆಯನ್ನು ಕನ್ನಡದಲ್ಲಿ ಮೇಜರ್ ಎನ್ನಬಹುದಾದ ರೀತಿಯಾಗಿ ಕಟ್ಟಿದವರಲ್ಲಿ ಮೂವರು ಮುಖ್ಯವಾಗಿ ಕಾಣುತ್ತಾರೆ. ಒಂದೇ ಕಾಲಮಾನದಲ್ಲಿ ಇರುವವರಾದರೂ ಪ್ರಾದೇಶಿಕವಾಗಿ ಭಿನ್ನರಾಗಿದ್ದಾರೆ. ಅವರ ಕಥೆಗಳಲ್ಲಿ ನವ್ಯತೆಯ ಧೋರಣೆಗಳು, ನವ್ಯೋತ್ತರದ ಚಿಂತನೆಗಳು ಕಾಣುತ್ತವೆ. ಈ ಅಧ್ಯಯನಕ್ಕೆ ಆಯ್ದುಕೊಂಡಿರುವ ವೀಣಾ ಶಾಂತೇಶ್ವರ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಬರೆದರೆ, ಗೀತಾ ನಾಗಭೂಷಣ ಅವರು ಸಮಾಜ ಕೇಂದ್ರಿತ ನೆಲೆಯಲ್ಲಿ, ವೈದೇಹಿ ಅವರು ಈ ಎರಡು ಮಾದರಿಗಳನ್ನು

ಸ್ವೀಕರಿಸದೇ ತಮ್ಮದೇ ಆದ ಕುಟುಂಬ ಕೇಂದ್ರಿತ ನೆಲೆಯಲ್ಲಿ ಬರೆಯುತ್ತಾರೆ. ಈ ಮೂವರಲ್ಲಿ ನಿರ್ದಿಷ್ಟವಾಗಿ ಇದೇ ನೆಲೆಯಲ್ಲಿಯೇ ಬರೆಯುತ್ತಾರೆ ಎಂದು ಹುಡುಕಬಹುದಾದರೂ ಕೆಲವೊಮ್ಮೆ ಎಲ್ಲರೂ ಸಾಹಿತ್ಯ ಪಂಥ ಮತ್ತು ಧೋರಣೆಗಳನ್ನು ಮೀರಿಯೂ ಬರೆದ ಕಥೆಗಳಿವೆ. ಈ ಹಿನ್ನೆಲೆಯಲ್ಲಿ ಅವರ ಕಥೆಗಳ ಅಭಿವ್ಯಕ್ತಿ ಮತ್ತು ತಾತ್ವಿಕ ಸ್ವರೂಪವನ್ನು ಹುಡುಕಾಡುವ ಉದ್ದೇಶವಿದೆ.

೧.೧ ಅಧ್ಯಯನದ ಉದ್ದೇಶ

ಈ ಅಧ್ಯಯನದಲ್ಲಿ ಕನ್ನಡ ಕಥಾಪರಂಪರೆಯನ್ನು ಸ್ಥೂಲವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿಲ್ಲ. ಕನ್ನಡ ಕಥಾಸಾಹಿತ್ಯಕ್ಕೆ ಈ ಮೂವರು ಲೇಖಕಿಯರು ತಮ್ಮದೇ ಮಹಿಳಾ ಕಥಾಪರಂಪರೆಯನ್ನು ಕಟ್ಟುವಷ್ಟರ ಮಟ್ಟಿಗೆ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಮಹಿಳೆಯನ್ನು ನೋಡುವ ಕ್ರಮವನ್ನು ಮತ್ತು ಮಹಿಳೆಯನ್ನು ಕುರಿತು ಪುರುಷರು ತಾಳಿರುವ ನಿಲುವನ್ನು ಕುರಿತು ಅಭಿವ್ಯಕ್ತಿಸುತ್ತಾರೆ. ಮಹಿಳಾ ಕಥನಪರಂಪರೆಯನ್ನು ಕಟ್ಟುವಷ್ಟು ವಿಶಿಷ್ಟ ಕಥನ ಮಾದರಿಗಳು ಅವರ ಕಥೆಗಳಿಗಿವೆ. ಕನ್ನಡದ ಮಟ್ಟಿಗೆ ಈ ಮಹಿಳಾ ಲೇಖಕಿಯರದ್ದೇ ಪ್ರತ್ಯೇಕವಾದ ಅಭಿವ್ಯಕ್ತಿ ಮಾದರಿಗಳು ಇರಲು ಸಾಧ್ಯವಿದೆ. ಆ ಪ್ರತ್ಯೇಕ ಮಾದರಿಯನ್ನು ಆ ಮೂವರು ಕಥೆಗಾರ್ತಿಯರ ಕಥೆಗಳ ಹಿನ್ನೆಲೆಯಿಂದ ಅಧ್ಯಯನ ಮಾಡುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಇಪ್ಪತ್ತನೇ ಶತಮಾನದಿಂದ ಮಾಸ್ತಿಯಿಂದ ಹಿಡಿದು ಇಲ್ಲಿಯವರೆಗಿನ ಒಟ್ಟು ಕನ್ನಡ ಕಥಾಪರಂಪರೆಯನ್ನು ಗಣನೆಗೆ ತೆಗೆದುಕೊಂಡರೆ ವಿಭಿನ್ನವಾದ ಅಭಿವ್ಯಕ್ತಿ ಕ್ರಮಗಳು ಕನ್ನಡದಲ್ಲಿವೆ. ಪ್ರತಿಯೊಬ್ಬ ಲೇಖಕರದ್ದು ವಿಭಿನ್ನ ಅಭಿವ್ಯಕ್ತಿಯೇ ಆಗಿರುತ್ತದೆ. ಲೇಖಕರ ಅಭಿವ್ಯಕ್ತಿ ಕ್ರಮವು ಒಂದೇ ರೀತಿಯಾಗಿರುವುದಿಲ್ಲ. ಉದಾಹರಣೆಗೆ ಮಾಸ್ತಿ ಅವರ ಅಭಿವ್ಯಕ್ತಿ ಕ್ರಮವೇ ಬೇರೆ, ಕುವೆಂಪು ಅವರ ಅಭಿವ್ಯಕ್ತಿ ಕ್ರಮವೇ ಬೇರೆ, ಪೂರ್ಣಚಂದ್ರ ತೇಜಸ್ವಿ ಅವರ ಅಭಿವ್ಯಕ್ತಿ ಕ್ರಮವೇ ಬೇರೆ, ಅನಂತಮೂರ್ತಿ, ಲಂಕೇಶ್ ಹೀಗೆ ಎಲ್ಲರ ಕಥೆಗಳ ಅಭಿವ್ಯಕ್ತಿ ಬೇರೆ ಬೇರೆಯಾಗಿಯೇ ಇರುತ್ತದೆ. ಅವರ ಅಭಿವ್ಯಕ್ತಿಯಲ್ಲಿ ಮಹಿಳೆಯ ಬದುಕಿನ ವಿನ್ಯಾಸಗಳನ್ನು ಸಹ ಭಿನ್ನವಾಗಿಯೇ ಚಿತ್ರಿಸಿರುತ್ತಾರೆ. ಆದರೆ ಮಹಿಳೆಯರಲ್ಲೂ ಅಭಿವ್ಯಕ್ತಿ ಕ್ರಮಗಳು ಸಹ ಬೇರೆ ಬೇರೆಯಾಗಿವೆ. ತಿರುಮಲಾಂಬ, ಕೊಡಗಿನ ಗೌರಮ್ಮ, ತ್ರಿವೇಣಿ, ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಅವರ ಅಭಿವ್ಯಕ್ತಿ ಕ್ರಮವೇ ಬೇರೆ. ಆದರೂ ಮಹಿಳೆಯನ್ನು ಕುರಿತು ಮಹಿಳೆಯರೇ ಬರೆದ ಕಥೆಗಳು ಸೂಕ್ಷ್ಮವಾಗಿರಬಲ್ಲವು. ಆ ದೃಷ್ಟಿಯಿಂದ ಈ ಮೂವರು ಕಥೆಗಾರ್ತಿಯರು

ಮಹಿಳೆಯನ್ನು ನೋಡಿದ ಹಾಗೂ ಅನುಭವಿಸಿದ ಬದುಕಿನ ಅನೇಕ ಆಯಾಮಗಳನ್ನು ಕಥೆಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಅದನ್ನು ಇಲ್ಲಿ ತಾತ್ವಿಕವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

೧. ಒಂದೇ ಕಾಲಘಟ್ಟದಲ್ಲಿ ಬರೆಯತೊಡಗಿದ ಮೂವರು ಲೇಖಕಿಯರು ಬರವಣಿಗೆಗೆ ಒಂದೇ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡವರು. ಅಭಿವ್ಯಕ್ತಿಯ ಕಥನಕೌಶಲ್ಯ, ವಸ್ತು, ತಂತ್ರ, ಭಾಷೆ, ಆಶಯ, ತಾತ್ವಿಕತೆ ಮತ್ತು ಸಂವಿಧಾನ ಮುಂತಾದವುಗಳಲ್ಲಿ ಹೇಗೆ ವಿಭಿನ್ನರಾಗಿದ್ದಾರೆ ಎಂಬುದನ್ನು ಗುರುತಿಸುವುದು.

೨. ಪ್ರಾದೇಶಿಕ ಭಿನ್ನತೆ, ಸಮುದಾಯ ಲೋಕದೃಷ್ಟಿ, ಸಾಂಸ್ಕೃತಿಕ ಬಹುತ್ವ ಇವುಗಳನ್ನು ತಮ್ಮ ಕತೆಗಳಲ್ಲಿ ಕಟ್ಟಿಕೊಡುವ ವಿಧಾನ ಯಾವ ಬಗೆಯದು ಎಂಬುದನ್ನು ಅಧ್ಯಯನ ಮಾಡುವುದು.

೩. ಕಥೆಗಳಲ್ಲಿನ ಪುರುಷ ಮತ್ತು ಮಹಿಳೆಯರ ಪಾತ್ರಗಳ ಮೂಲಕ ಲೇಖಕಿಯರು ಕಟ್ಟಬಯಸುವ ಪುರುಷ ಮತ್ತು ಸ್ತ್ರೀ ಅಭಿವ್ಯಕ್ತಿ ಹಾಗೂ ಆಶಯಗಳನ್ನು ಸಂಘರ್ಷಾತ್ಮಕ ನೆಲೆಯಲ್ಲಿ ಹೇಗೆ ನಿರ್ವಚಿಸಿಕೊಳ್ಳುತ್ತಾರೆ ಎಂಬುದನ್ನು ವಿಶ್ಲೇಷಣೆ ಮಾಡುವುದು.

೪. ಪ್ರಾದೇಶಿಕವಾಗಿ ಭಿನ್ನತೆ ಕಂಡುಬಂದರೂ ಸಮಾಜದ ಸಾರ್ವತ್ರಿಕ ವ್ಯವಸ್ಥೆಗಳಾದ, ಜಾತಿಪದ್ಧತಿ, ಜಮೀನ್ದಾರಿ ವ್ಯವಸ್ಥೆ, ಸ್ತ್ರೀ ಶೋಷಣೆಯ ಭಿನ್ನ ಮಾರ್ಗಗಳು, ದೇವದಾಸಿ ಪದ್ಧತಿ, ಪುರುಷ ಆಲೋಚನಾ ಕ್ರಮ, ದಲಿತಲೋಕ ಹಾಗೂ ಇವುಗಳಿಗೆ ಲೇಖಕಿಯರು ಸೂಚಿಸುವ ಪರಿಹಾರ ಮಾರ್ಗಗಳನ್ನು ವಿಶ್ಲೇಷಣೆ ಮಾಡುವುದು.

೫. ವೈದೇಹಿಯವರಲ್ಲಿ ಸ್ವಗತ ಮಾದರಿಯ ಅಭಿವ್ಯಕ್ತಿ ಕ್ರಮವು ಕಂಡುಬಂದರೆ, ವೀಣಾ ಶಾಂತೇಶ್ವರ ಅವರ ಕಥೆಗಳಲ್ಲಿ ಆಧುನಿಕವೆನಿಸುವ ಮುಕ್ತ ಸಂವಾದದ ರೀತಿಯ ಅಭಿವ್ಯಕ್ತಿ ಕ್ರಮವು ಕಂಡುಬರುತ್ತದೆ. ಇವರಿಬ್ಬರಿಗೂ ಭಿನ್ನವಾದ ನೆಲಮೂಲ ಸಾಂಸ್ಕೃತಿಕ ದಲಿತಲೋಕ ಅಭಿವ್ಯಕ್ತಿ ಕ್ರಮವು ಗೀತಾ ನಾಗಭೂಷಣ ಅವರಲ್ಲಿ ಕಂಡುಬರುತ್ತದೆ. ಭಿನ್ನಭಿನ್ನವಾಗಿರುವ ಅಭಿವ್ಯಕ್ತಿ ಕ್ರಮಗಳಲ್ಲಿಯೂ ಸಮಾನ ಆಶಯವು ಕಂಡುಬರುವುದಕ್ಕೆ ಕಾರಣಗಳನ್ನು ಗುರ್ತಿಸುವುದು.

೬. ವ್ಯಕ್ತಿಗತ ಮಾದರಿಯಲ್ಲಿ ನಿರೂಪಿಸುವ ವೀಣಾ ಶಾಂತೇಶ್ವರರಲ್ಲಿ ನವ್ಯತೆಯು ಢಾಳಾಗಿ ಕಂಡುಬರುತ್ತದೆ. ಇದಕ್ಕೆ ಪ್ರಭಾವ ಮತ್ತು ಪ್ರೇರಣೆಗಳನ್ನು ಗುರುತಿಸುವ ಜೊತೆಗೆ ನವ್ಯತೆಯನ್ನು ಮೀರುವ ಬಗೆಯನ್ನು ಚರ್ಚಿಸುವುದು.

೭. ಕುಟುಂಬ ಕೇಂದ್ರಿತ ಮಾದರಿಯಲ್ಲಿ ನಿರ್ವಚಿಸುವ ವೈದೇಹಿಯವರು ತಮ್ಮ ಸಮುದಾಯದ ಅಂತರಂಗವನ್ನು ನಿರೂಪಿಸುವಲ್ಲಿ ಹೆಚ್ಚು ಆಸಕ್ತರಾಗುತ್ತಾರೆ. ಸಾಂಸ್ಕೃತಿಕ ವಿವರಗಳನ್ನು ಕಟ್ಟಿಕೊಡುತ್ತಲೇ ಅದರಲ್ಲಿನ ಕಂದಾಚಾರಗಳನ್ನೂ ವಿಮರ್ಶೆಗೆ ಒಳಪಡಿಸುತ್ತಾರೆ. ಸಾಹಿತ್ಯದ ಮುಖೇನ ವೈದೇಹಿಯವರ ಸಾಮಾಜಿಕ ಕಳಕಳಿ ಮತ್ತು ಆಶಯವನ್ನು ಗುರುತಿಸುವುದು.

೮. ಸಮಾಜ ಕೇಂದ್ರಿತ ಮಾದರಿಯಲ್ಲಿ ಬರೆಯುವ ಗೀತಾ ನಾಗಭೂಷಣ ಅವರು ಜಾತಿವ್ಯವಸ್ಥೆ, ಸಾಮಾಜಿಕ ಕಂದಾಚಾರ ಮತ್ತು ತಳಸಮುದಾಯಗಳ ಸಾಂಸ್ಕೃತಿಕ ಲೋಕವನ್ನು ತಮ್ಮದೇ ದೃಷ್ಟಿಯಲ್ಲಿ ದಾಖಲಿಸುತ್ತಾರೆ. ಉಳಿದ ಇಬ್ಬರು ಲೇಖಕಿಯರಿಗಿಂತ ಭಿನ್ನವಾದ ಭಾಷೆ, ನಿರೂಪಣೆ, ಪರಿಹಾರ ಮಾರ್ಗಗಳ ಹುಡುಕಾಟದಲ್ಲಿ ತೊಡಗುತ್ತಾರೆ. ವರ್ತಮಾನದ ಆಗುಹೋಗುಗಳಿಗೆ ಕಥೆಗಳ ಮುಖೇನ ಹೇಗೆ ಪರಿಹಾರ ಸೂಚಿಸುತ್ತಾರೆ ಎಂಬುದನ್ನು ಗುರುತಿಸುವುದು ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ.

ಕಥಾ ಅಭಿವ್ಯಕ್ತಿಯಲ್ಲಿ ಕತೆಗಾರ್ತಿಯರು ಸಮಾಜವನ್ನು ನೋಡಿರುವ ಕ್ರಮ ಯಾವುದು? ಮಹಿಳೆಗೆ ಬೇಕಾಗಿರುವುದು ಸ್ವೇಚ್ಛೆಯ ಸ್ವಾತಂತ್ರ್ಯವೇ? ಮಹಿಳೆಯ ಅಭಿವ್ಯಕ್ತಿ ಕಥೆಯಲ್ಲಿ ಹೊಸಿಲನ್ನು ದಾಟಿ ಬಂದಿರುವಂತೆ ರಚನೆಯಾಗಿದೆಯೋ ಅಥವಾ ಮಹಿಳೆಯ ಮುಖವಾಣಿ ಆನುಷಂಗಿಕವಾಗಿ ಮಾತ್ರವೇ ಬಂದಿದೆಯೋ ಎಂಬುದನ್ನು ಈ ಮೂವರ ಕಥೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡುವ ಉದ್ದೇಶವಿದೆ. ಅದರಲ್ಲೂ ಈ ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡಿರುವ ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಅವರಲ್ಲಿ ಮಹಿಳಾ ಅಭಿವ್ಯಕ್ತಿಯ ಸ್ಥಾನವನ್ನು ಗುರುತಿಸಿಕೊಳ್ಳುವುದಾಗಿದೆ.

೧.೨ ಅಧ್ಯಯನದ ಮಹತ್ವ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಈ ಮೂವರು ಕತೆಗಾರ್ತಿಯರು ಕರ್ನಾಟಕದ ಬೇರೆ ಬೇರೆ ಪ್ರದೇಶದಲ್ಲಿ ಹುಟ್ಟಿ ಬೆಳೆದವರು. ಆ ಪ್ರಾದೇಶಿಕ ಭಿನ್ನತೆಯ ಹಿನ್ನೆಲೆಯಿಂದ ತಮ್ಮದೇ ಆದ ವಿಶಿಷ್ಟತೆ ಹೊಂದಿದವರು. ಆಯಾ ಸಂಸ್ಕೃತಿಯ ಜನರ ಬದುಕನ್ನು ಕುರಿತು ಕಥೆಗಳಲ್ಲಿ ಕಟ್ಟಿಕೊಟ್ಟರು. ಈ ಕಾರಣದಿಂದ ಈ ಮೂವರು ಕಥೆಗಾರ್ತಿಯರು ಮಹತ್ವವನ್ನು ಪಡೆದಿದ್ದಾರೆ. ಆಯಾ ಪ್ರದೇಶದ ಸಂಸ್ಕೃತಿಯ ಬೇರೆ–ಬೇರೆ ಮುಖಗಳ ಅಧ್ಯಯನವನ್ನು ಕಥೆಗಳ ಮೂಲಕ ಮಾಡುವುದು ಈ ದೃಷ್ಟಿಯಿಂದ ಮುಖ್ಯವಾಗಿದೆ.

ಈ ಅಧ್ಯಯನವು ಎರಡು ದೃಷ್ಟಿಯಿಂದ ಮಹತ್ವವುಳ್ಳದ್ದಾಗಿದೆ. ಒಂದು 'ಅಭಿವ್ಯಕ್ತಿ' ಮತ್ತು 'ತಾತ್ವಿಕತೆ' ಎಂಬ ಎರಡು ಪರಿಕಲ್ಪನೆಗಳನ್ನು ಇಟ್ಟುಕೊಂಡಿರುವುದು. ಎರಡು,

ಬೇರೆ ಬೇರೆ ಪ್ರದೇಶಕ್ಕೆ ಸೇರಿದ ಮಹಿಳೆಯರೇ ಬರೆದ ಕಥಾಸಂಕಲನಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದು. ನವ್ಯಸಾಹಿತ್ಯ ಸಂದರ್ಭದಲ್ಲಿ ಈ ಪರಿಕಲ್ಪನೆಗಳನ್ನು ಅನೇಕ ವಿಮರ್ಶಕರು ಪುರುಷ ಲೇಖಕರ ಸಾಹಿತ್ಯ ಕೃತಿಗಳನ್ನು ವಿಮರ್ಶಿಸುವಾಗ ಬಳಸಿದ್ದಾರೆ. ನವ್ಯ ಮತ್ತು ನವ್ಯೋತ್ತರ ಕಾಲಘಟ್ಟದಲ್ಲಿ ಕಾಣುವ ಈ ಮೂವರು ಲೇಖಕಿಯರ ಕಥೆಗಳನ್ನು ಕುರಿತು ಈ ರೀತಿಯಾದ ಅಧ್ಯಯನ ಇದುವರೆಗೆ ಕಂಡುಬರುವುದಿಲ್ಲ. ಮಹಿಳಾ ಕಥೆಗಾರ್ತಿಯರ ಕತೆಗಳ 'ಅಭಿವ್ಯಕ್ತಿ' ಮತ್ತು 'ತಾತ್ವಿಕ ಸ್ವರೂಪ' ಎಂಬ ಪರಿಕಲ್ಪನೆಗಳ ಮೂಲಕ ಅಧ್ಯಯನ ಮಾಡುತ್ತಿರುವುದು ಇದೇ ಮೊದಲು. ಆ ದೃಷ್ಟಿಯಿಂದ ಈ ಅಧ್ಯಯನವು ಮಹತ್ವವುಳ್ಳದ್ದಾಗಿದೆ.

ಮಹಿಳಾ ಕಥಾಸಾಹಿತ್ಯಕ್ಕೆ ಹೊಸ ತಿರುವು ಕೊಟ್ಟವರಲ್ಲಿ ಈ ಮೂವರು ಪ್ರಮುಖರು. ವೀಣಾ ಶಾಂತೇಶ್ವರ ಅವರು ಆಧುನಿಕ ಮಹಿಳೆಯ ಸ್ಥಿತ್ಯಂತರಗಳನ್ನು ಮತ್ತು ಮನೆ ತಾಕಲಾಟಗಳನ್ನು ಅಭಿವ್ಯಕ್ತಿಸಿದರೆ, ವೈದೇಹಿ ಅವರು ಗೃಹಣಿಯ ಬದುಕಿನ ಸೂಕ್ಷ್ಮ ಭಾವನೆಗಳನ್ನು ಅಭಿವ್ಯಕ್ತಿಸಿದರೆ; ಸಮಾಜದ ಮತ್ತು ಬರಪೀಡಿತ ಬಡ-ಕೆಳವರ್ಗ ಸಮುದಾಯಗಳ ಹೆಣ್ಣಿನ ಧಾರುಣ ಬದುಕಿನ ಸ್ಥಿತಿಯನ್ನು ಗೀತಾ ನಾಗಭೂಷಣ ಅವರು ಕಟ್ಟಿಕೊಡುತ್ತಾರೆ. ಮೂವರ ಕಥೆಗಳ ಅಧ್ಯಯನ ವಿಭಿನ್ನ ಸಮುದಾಯ-ಸಂಸ್ಕೃತಿಗಳ ಅಧ್ಯಯನವಾಗಿ ಮಹತ್ವ ಪಡೆದಿದೆ. ಆ ಕಥೆಗಳು ಮಹಿಳೆಯರೇ ಇತರ ಮಹಿಳೆಯರ ಬದುಕಿನ ವಿವರಗಳನ್ನು ಬರೆದ ಕಥೆಗಳಾಗಿರುವುದರಿಂದ ಈ ಅಧ್ಯಯನಕ್ಕೆ ಇನ್ನೊಂದು ರೀತಿಯಲ್ಲಿ ಮಹತ್ವವಿದೆ. ಕನ್ನಡ ಕಥಾಸಾಹಿತ್ಯವು ಈಗಾಗಲೇ ಸೃಷ್ಟಿಸಿರುವ ಪಾತ್ರಗಳಿಗಿಂತಲೂ ಭಿನ್ನವಾದ ಮಾದರಿಗಳನ್ನು ಸಾಹಿತ್ಯ ಕೃತಿಗಳಲ್ಲಿ ವೀಣಾ ಶಾಂತೇಶ್ವರ, ವೈದೇಹಿ, ಗೀತಾ ನಾಗಭೂಷಣ ಅಭಿವ್ಯಕ್ತಿಸಿದ್ದಾರೆ. ಕಥಾ ಬರವಣಿಗೆಯಲ್ಲಿ ಮಹಿಳೆಯರ ಬದುಕಿನ ಗಾಢವಾದ ಶ್ರದ್ಧೆಯನ್ನು ಚಾರಿತ್ರಿಕವಾಗಿ ಮತ್ತು ಸಾಹಿತ್ಯವಾಗಿ ಅಧ್ಯಯನ ಮಾಡಿರುವುದರಿಂದ ಇದಕ್ಕೆ ಮತ್ತೊಂದು ರೀತಿಯಲ್ಲಿ ಮಹತ್ವವಿದೆ.

ಈ ಅಧ್ಯಯನವು ಶೈಕ್ಷಣಿಕ ಅಗತ್ಯದ ದೃಷ್ಟಿಯಿಂದ ಮಹತ್ವದ್ದಾಗಿದೆ. ಸಾಹಿತ್ಯದ ವಿದ್ಯಾರ್ಥಿಗಳಿಗೆ ಕನ್ನಡ ಕಥೆಗಳಲ್ಲಿ ಈ ಮೂವರು ಕಥೆಗಾರ್ತಿಯರು ಎಷ್ಟು ಪ್ರಮುಖರೆಂಬುದನ್ನು ಈ ಅಧ್ಯಯನವು ತಿಳಿಸುತ್ತದೆ. ಸಮಗ್ರವಾಗಿ ಈ ಲೇಖಕಿಯರ ಕಥೆಗಳನ್ನು ಕುರಿತು ಒಂದೆಡೆ ಚಿಂತನೆಗಳು ಸಿಗುವುದಿಲ್ಲ. ವಿದ್ಯಾರ್ಥಿಗಳು ಅವರ ಸಾಹಿತ್ಯದ ಅಭಿವ್ಯಕ್ತಿಯನ್ನು ಕುರಿತು ತಿಳಿದುಕೊಳ್ಳಬೇಕಾದ ಸಂದರ್ಭ ಬಂದೊದಗಿದರೆ ಈ ಅಧ್ಯಯನವು ಸಹಕಾರಿಯಾಗಬಲ್ಲದು.

ಅಂಬೇಡ್ಕರ್ ಅವರು ದಲಿತ ಮತ್ತು ಮಹಿಳೆಯರಿಗೆ ಇರಬೇಕಾದ ಸ್ವಾಭಿಮಾನದ ಅಗತ್ಯವನ್ನು ತಮ್ಮ ಚಿಂತನೆಗಳಲ್ಲಿ ಹೇಳುತ್ತಾರೆ. ಅದನ್ನು ಈ ಮೂವರು ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ಪ್ರಭಾವಿಸಿಕೊಂಡಿದ್ದಾರೆ. ಮಹಿಳೆ ದೌರ್ಜನ್ಯಕ್ಕೆ ಒಳಗಾಗುವ ಮತ್ತು ಅವಳನ್ನು ಅಸ್ಪೃಶ್ಯಳಂತೆ ಕಾಣುವ ಪುರುಷ ಸಮಾಜದ ವಿವರಗಳು ಕಥೆಗಳಲ್ಲಿವೆ. ಜಾತಿಸಂಘರ್ಷ ಚರ್ಚೆ ಬಂದಾಗಲೆಲ್ಲ ಬಸವನ ಕಾಲದ ತಾತ್ವಿಕತೆಯ ಕಡೆಗೆ ಸರಿಯುತ್ತಾರೆ. ಈ ಹಿನ್ನೆಲೆಯಲ್ಲಿ ಮಹಿಳಾ ಮೀಮಾಂಸೆಯನ್ನು ಕಟ್ಟಿಕೊಡುವ ದಿಕ್ಕಿನತ್ತ ಕಥೆಗಳು ಸಾಗುತ್ತವೆ. ಬಸವ ಅಂಬೇಡ್ಕರ್‌ರವರ ತಾತ್ವಿಕ ದರ್ಶನಗಳಲ್ಲಿ ಕಾಣಸಿಗುವ ಹಲವಾರು ಸ್ತ್ರೀವಾದಿ ಚಿಂತನೆಯ ಹೊಳಪುಗಳು ಬರವಣಿಗೆಯಲ್ಲಿ ಸಿಗುತ್ತವೆ. ಸಮಾಜದಲ್ಲಿ ಮಹಿಳೆಯರು ಎದುರಿಸುವ ಶೋಷಣೆಯ ವಿವಿಧ ಮುಖಗಳು ಮತ್ತು ಆ ಶೋಷಣೆಯ ನೆಲೆಗಳು ಕಂಡುಬರುತ್ತವೆ. ಹಾಗಾಗಿ ಈ ಅಧ್ಯಯನವು ಸಾಂಸ್ಕೃತಿಕ ಆಯಾಮದಿಂದ ತಪ್ಪಿಸಿಕೊಂಡಿಲ್ಲವೆಂಬುದು ಮಹತ್ವ ಸಂಗತಿಯಾಗಿದೆ.

೧.೩ ಅಧ್ಯಯನದ ವ್ಯಾಪ್ತಿ

ಈ ಅಧ್ಯಯನದ ವ್ಯಾಪ್ತಿಯು ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಅವರ ಸಮಗ್ರ ಕಥೆಗಳನ್ನು ಒಳಗೊಂಡಿದೆ. ಕಾಲದ ದೃಷ್ಟಿಯಿಂದ ವೀಣಾ ಅವರ ಕಥೆಗಳು ಮೊದಲಿಗೆ ಬಂದಿವೆ. ವೀಣಾ ಶಾಂತೇಶ್ವರ ಅವರ 'ಮುಳ್ಳುಗಳು', 'ಕೊನೆಯ ದಾರಿ', 'ಕವಲು', 'ಹಸಿವು', 'ಬಿಡುಗಡೆ' ಕಥಾಸಂಕಲನಗಳನ್ನು ಸಂಗ್ರಹಿಸಿ 'ನಡೆದದ್ದೇ ದಾರಿ' ಎಂಬ ಸಂಪುಟವು ಪ್ರಕಟಗೊಂಡಿದೆ. ಈ ಸಂಪುಟವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ವೈದೇಹಿ ಅವರ 'ಮರಗಿಡಬಳ್ಳಿ'(೧೯೭೯), 'ಅಂತರಂಗದ ಪುಟಗಳು'(೧೯೮೪), 'ಗೋಲ'(೧೯೮೬), 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು'(೧೯೯೦), 'ಅಮ್ಮಚ್ಚಿಯೆಂಬ ನೆನಪು'(೨೦೦೦), 'ಕ್ರೌಂಚ ಪಕ್ಷಿಗಳು'(೨೦೦೫), 'ಕತೆ ಕಾರಣ'(೨೦೧೬) ಎಂಬ ಕಥಾಸಂಕಲನಗಳು ಸಮಗ್ರ ಸಂಪುಟದಲ್ಲಿ ಪ್ರಕಟಗೊಂಡಿವೆ. 'ವೈದೇಹಿ ಕಥೆಗಳು'(೧೯೭೯–೨೦೧೬) ಎಂಬ ಕೃತಿಯನ್ನು ಈ ಅಧ್ಯಯನಕ್ಕೆ ಆಕರವಾಗಿ ಬಳಸಿಕೊಳ್ಳಲಾಗಿದೆ. ಗೀತಾ ನಾಗಭೂಷಣ ಅವರು ರಚಿಸಿದ ಇಲ್ಲಿಯವರೆಗಿನ ಕಥೆಗಳು 'ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು' ಸಂಪುಟದಲ್ಲಿವೆ. ಈ ಮೂವರು ಕಥೆಗಾರ್ತಿಯರ ಸಮಗ್ರಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಿ "ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಕಥೆಗಳ ಅಭಿವ್ಯಕ್ತಿ ಮತ್ತು ತಾತ್ವಿಕತೆಯ ಸ್ವರೂಪ" ಎಂಬ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೪ ಅಧ್ಯಯನದ ವಿಧಾನ

ಈ ಪ್ರಬಂಧದಲ್ಲಿ ವೀಣಾ ಶಾಂತೇಶ್ವರ, ವೈದೇಹಿ, ಮತ್ತು ಗೀತಾ ನಾಗಭೂಷಣ ಎನ್ನುವ ಮಹಿಳಾ ಕಥೆಗಾರ್ತಿಯರನ್ನು ಮುಖ್ಯವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವರ ಕಥೆಗಳ ವಸ್ತು, ನಿರೂಪಣೆ, ಜೀವನ ದರ್ಶನ ಇರುವುದೇ ಮಹಿಳಾ ಕೇಂದ್ರಿತವಾಗಿ. ಹಾಗಾಗಿ ಮಹಿಳಾ ಲೇಖಕಿಯರು ಮಹಿಳೆಯರನ್ನು ಕುರಿತು ಯಾವ ರೀತಿಯಲ್ಲಿ ಸೃಜನಶೀಲಾತ್ಮವಾಗಿ ಕಥಾಭಿವ್ಯಕ್ತಿಯನ್ನು ಮಾಡಿದ್ದಾರೆಂಬುದು ಗಮನಿಸಬೇಕಾದ ನೆಲೆಯಾಗಿದೆ. ಈ ಹಿನ್ನೆಲೆಯಲ್ಲಿ ಸ್ತ್ರೀವಾದಿ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ.

ಮಹಿಳೆಯರು ಸಂಪ್ರದಾಯ, ಸಂಸ್ಕೃತಿಯಿಂದಾಗಿ ಸಮಾಜದಲ್ಲಿ ವಾಸ್ತವವಾಗಿ ಎದುರಿಸುವ ಸಂಘರ್ಷವು ಧಾರ್ಮಿಕಶಕ್ತಿಗಳ ವಿರುದ್ಧವೇ ಆಗಿರುತ್ತದೆ. ಅಷ್ಟೆ ಅಲ್ಲದೆ ಕುಟುಂಬ, ಕಚೇರಿದಲ್ಲಿ ಸ್ತ್ರೀ ಅನುಭವಿಸುವ ದೌರ್ಜನ್ಯ ಮತ್ತು ದಬ್ಬಾಳಿಕೆಗಳ ಸ್ವರೂಪವು ಭಿನ್ನವಾಗಿರುತ್ತದೆ. ಆಕೆ ಹೆಂಡತಿಯಾಗಿ, ತಾಯಿಯಾಗಿ, ಮಗಳಾಗಿ ಹೀಗೆ ಬೇರೆ ಬೇರೆ ನೆಲೆಯಲ್ಲಿ ತನ್ನ ಇರುವಂತಿಕೆಯನ್ನು ಪುರುಷನ ಮುಖಾಂತರವೇ ತನ್ನನ್ನು ತಾನು ಗುರುತಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಅಧ್ಯಯನವು ಏಕಮುಖಿಯಾಗಿ ಅವರ ಕಥಾಭಿವ್ಯಕ್ತಿಯನ್ನು ಪರಿಗಣಿಸದೆ, ಬಹುಮುಖಿ ನೆಲೆಯಲ್ಲಿ ಅಧ್ಯಯನ ಮಾಡುವ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ.

ಈ ಮೂವರು ಕಥೆಗಾರ್ತಿಯರಲ್ಲಿನ ಕಥೆಗಳನ್ನು ಸಾಹಿತ್ಯಾತ್ಮಕವಾಗಿ ಅಧ್ಯಯನ ಮಾಡಲಾಗುವುದು. ಅವರ ಕಥೆಗಳಲ್ಲಿನ ಭಾಷೆ, ನಿರೂಪಣೆ, ತಂತ್ರ, ಸಂವಿಧಾನ, ಅಭಿವ್ಯಕ್ತಿ ಮತ್ತು ತಾತ್ವಿಕ ಸ್ವರೂಪಗಳನ್ನು ಕುರಿತು ಅಧ್ಯಯನ ಮಾಡುವಾಗ ಸಾಹಿತ್ಯಕ ವಿಧಾನವನ್ನು ಅನುಸರಿಸಲಾಗಿದೆ.

ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮತ್ತು ಪುರುಷ ಯಾಜಮಾನಿಕೆಯ ದರ್ಪವನ್ನು ಈ ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಅಭಿವ್ಯಕ್ತಿಸಿದ ಕಥೆಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡುವ ವಿಧಾನವನ್ನು ಅನುಸರಿಸಿದೆ.

ಅಭಿವ್ಯಕ್ತಿ ವಿಧಾನವು ಎಲ್ಲ ಕಥೆಗಾರರ ಕಥೆಗಳಲ್ಲಿ ಏಕಮುಖಿಯಾಗಿರುವುದಿಲ್ಲ. ಭಿನ್ನ-ಭಿನ್ನ ಕಾರಣಗಳಿಂದ ಅವರ ಕತೆಗಳಲ್ಲಿ ಭಿನ್ನತೆಗಳನ್ನು ಹುಡುಕಬಹುದು. ಪ್ರಾದೇಶಿಕ,

ಭಾಷಿಕ, ಪಾತ್ರಗಳು ಮತ್ತು ಅವುಗಳ ಜೀವನ ವಿಧಾನ ಹೀಗೆ ಬೇರೆ ಬೇರೆಯಾಗಿ ಗಮನಿಸಲು ಸಾಧ್ಯವಿದೆ. ಹಾಗಾಗಿ ಇಲ್ಲಿ ತೌಲನಿಕ ಅಧ್ಯಯನ ವಿಧಾನವನ್ನು ಕೂಡ ಅನುಸರಿಸಿದೆ.

ಈ ಮೂವರು ಕತೆಗಾರ್ತಿಯರಲ್ಲಿ ವೀಣಾ ಮತ್ತು ಗೀತಾರ ಮೇಲೆ ಜಾಗತಿಕ ಸ್ತ್ರೀವಾದದ ಪ್ರಭಾವವೂ ಇರುವುದರಿಂದ ಸ್ತ್ರೀವಾದಿ ಅಧ್ಯಯನ ವಿಧಾನವೂ ಪೂರಕವಾಗಿ ಪ್ರವೇಶ ಪಡೆಯಲಿದೆ. ಕಥೆಗಳ ವಸ್ತು, ನಿರೂಪಣೆ, ಜೀವನದರ್ಶನ ಇರುವುದು ಮಹಿಳಾ ಕೇಂದ್ರಿತವಾಗಿ. ಮಹಿಳಾ ಲೇಖಕಿಯರು ಮಹಿಳೆಯರನ್ನು ಯಾವ ರೀತಿಯಲ್ಲಿ ಸೃಜನಶೀಲಾತ್ಮವಾಗಿ ಕಥಾಭಿವ್ಯಕ್ತಿಯನ್ನು ಮಾಡಿದ್ದಾರೆಂಬುದು ಗಮನಿಸಬೇಕಾದ ನೆಲೆಯಾಗಿದೆ. ಮಹಿಳಾ ಬದುಕಿನ ಸಮಗ್ರ ದೃಷ್ಟಿಕೋನಗಳ ನೆಲೆಯಲ್ಲಿ ಸಾಹಿತ್ಯವು ಅಭಿವ್ಯಕ್ತಗೊಂಡ ಕಾರಣ ವರ್ತಮಾನದ ಮಹಿಳಾ ಲೋಕದ ಬೆಳಕಿಂಡಿಯಾಗಬಹುದಾದ ಪರಿಹಾರಗಳು ಅವರ ಕಥೆಗಳಲ್ಲಿ ಕಂಡುಬರುತ್ತವೆ. ಈ ಸಮಗ್ರ ನೋಟದ ಅಗತ್ಯದಿಂದ ಪ್ರಸ್ತುತ ಅಧ್ಯಯನಕ್ಕೆ 'ಬಹುಶಿಸ್ತೀಯ ವಿಶ್ಲೇಷಣಾತ್ಮಕ' ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ.

೧.೫ ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಎಲ್.ಜಿ. ಮೀರಾ ಅವರ 'ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ' ಎಂಬ ಕೃತಿಯಲ್ಲಿ ಕವಿಗಳು ಹಾಗೂ ಕವಯಿತ್ರಿಯರ ಕೃತಿಗಳನ್ನು ಕುರಿತು ವಿಮರ್ಶಿಸಿದ್ದಾರೆ. ಅವುಗಳಲ್ಲಿ ವೀಣಾ ಶಾಂತೇಶ್ವರರ 'ಮುಳ್ಳುಗಳು' ಕಥಾಸಂಕಲನವನ್ನು ಇಟ್ಟುಕೊಂಡು 'ಮುಳ್ಳುಗಳ' ನಡುವೆ ಮೈತಳೆದ ನಿರ್ಭಿಡೆಯ ಕಥನ' ಶೀರ್ಷಿಕೆಯಡಿಯಲ್ಲಿ ಹತ್ತು ಕಥೆಗಳನ್ನು ಅಧ್ಯಯನಕೊಳ್ಳಪಡಿಸಿಕೊಂಡು ಸ್ತ್ರೀವಾದಿಯ ಹಿನ್ನೆಲೆಯನ್ನಿಟ್ಟುಕೊಂಡು ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಪುರುಷನ ಕಣ್ಣಿಂದ ಹೇಗೆ ಗ್ರಹಿಸಲಾಗುತ್ತದೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಸ್ತ್ರೀಲೋಕವನ್ನು ಪುರುಷನ ಜೊತೆಜೊತೆಯಲ್ಲಿ ಹೆಣೆದಿರುವುದನ್ನು ಕಾಣಬಹುದಾಗಿದೆ. ಮೀರಾರವರು ಪುರುಷ ದೃಷ್ಟಿಯ ಮುಳ್ಳುಗಳನ್ನು ಗುರುತಿಸಿದ್ದಾರೆ. ವೀಣಾ ಶಾಂತೇಶ್ವರರ ಮುಂಬೈ ಕರ್ನಾಟಕದ ಹಾಗೂ ಹೊಸ ಶಿಕ್ಷಣಪದ್ಧತಿಯಿಂದ ಅವರ ಕತೆಗಳ ಹಂದರದಲ್ಲಿ ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬುದನ್ನು ತಿಳಿಸುವ ಪ್ರಯತ್ನವಾಗಿದೆ. ಕಥೆಗಳು ಹೇಗೆ ತನ್ನ ತಿರುವುಗಳನ್ನು ಪಡೆದುಕೊಳ್ಳುತ್ತವೆ. ಅವುಗಳ ವಸ್ತು, ತಂತ್ರ ಮತ್ತು ಸಂವಿಧಾನ, ಅವುಗಳನ್ನು ಎಲ್.ಜಿ. ಮೀರಾರವರು ಗುರುತಿಸಿರುವುದಿಲ್ಲ. ಇವುಗಳನ್ನು ಈ ಅಧ್ಯಯನದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ವೀಣಾ ಶಾಂತೇಶ್ವರ ಅವರ ಒಟ್ಟು ಇಪ್ಪತ್ತೆಂಟು ಕಥೆ, ಕಾದಂಬರಿಗಳನ್ನು ಸೇರಿಸಿಕೊಂಡು 'ನಡೆದದ್ದೇ ದಾರಿ' ಕೃತಿ ರಚಿಸಿದ್ದಾರೆ. ಒಟ್ಟು ಕಥೆ ಹಾಗೂ ಕಾದಂಬರಿಗಳ

ಕೃತಿಗೆ ಚಿಂತಕರು, ಬರೆಹಗಾರರು ವಿಮರ್ಶಕರಾದ ಜಿ.ಎಸ್.ಆಮೂರ ಅವರು 'ಮುನ್ನುಡಿ'ಯನ್ನು ಬರೆದಿದ್ದಾರೆ. ಇದರಲ್ಲಿ ಬಹುಮುಖ್ಯವಾಗಿ ಕಥೆಗಳ ಬಗ್ಗೆ ತಿಳಿಸಿರುವ ಅಂಶಗಳನ್ನು ಮಾತ್ರ ಪರಿಗಣಿಸಲಾಗಿದೆ. ಜಿ.ಎಸ್. ಆಮೂರರವರು ಕಥೆಗಳನ್ನು ಕುರಿತು ಈ ರೀತಿ ತಿಳಿಸಿದ್ದಾರೆ. 'ವೀಣಾರ ಎಲ್ಲಾ ಕಥೆಗಳನ್ನು ಒಟ್ಟಿಗೆ ನೋಡಿದಾಗ ಅರಿವಿಗೆ ಬರುವ ಒಂದು ಅಂಶವೆಂದರೆ ಅವರ ಪ್ರೀತಿಯ ಹಂಬಲ, ಪ್ರೀತಿಯ ಕ್ಷಣಗಳು ಎಷ್ಟೇ ಕ್ಷಣಿಕವೆನಿಸಿದರೂ, ಹಿನ್ನೋಟದಲ್ಲಿ ಭ್ರಾಮಕವೆನಿಸಿದರೂ ಅವರ ಕಥೆಗಳ ನಾಯಕಿಯರು ಜೀವಂತಿಕೆಯನ್ನು ಅನುಭವಿಸುವುದು ಈ ಕ್ಷಣಗಳಲ್ಲಿಯೇ, ಇದೇ ಅವರ ಸೃಜನ ಶೀಲತೆಯ ಉಗಮವೂ ಆಗಿದೆ. ವೀಣಾ ಬದುಕನ್ನು ಪ್ರೀತಿಸುತ್ತಾರೆ. ಆದರೆ ಅವರು ನವ್ಯರಂತೆ ಅಸ್ತಿತ್ವವಾದಿಗಳಲ್ಲ'. ಆದರೆ ವೀಣಾ ಶಾಂತೇಶ್ವರವರು ನವ್ಯಸಾಹಿತ್ಯ ಪಂಥದ ಕಾಲಘಟ್ಟದಲ್ಲಿ ಬರೆಯಲು ಪ್ರಾರಂಭಿಸಿದವರು. ಅವರ ಬರಹಗಳಲ್ಲಿ ಎದ್ದು ಕಾಣುವುದು ನವ್ಯದ ಲಕ್ಷಣಗಳು. ಎಲ್ಲಾ ಕಥೆ ಕಾದಂಬರಿಗಳನ್ನು ಅಭ್ಯಸಿಸಿದಾಗ ಯಾವುದಾದರೂ ಒಂದು ನೆಲೆಯಲ್ಲಿ ನಿಂತು ನೋಡಿದಾಗ ವೀಣಾರವರು ನವ್ಯತೆಯನ್ನು ಒಪ್ಪಿಕೊಂಡಿದ್ದಾರೆನಿಸುತ್ತದೆ.

ಜಿ.ಎಸ್.ಆಮೂರರವರು ಬರೆದಿರುವಂತಹ ಮುನ್ನುಡಿಯಲ್ಲಿ ಪ್ರಮುಖವಾಗಿ ಕಥೆಗಳಲ್ಲಿ ಕಾಣುವ ನೆಲೆಗಳು ಯಾವುವು? ಕಥೆಗಳಲ್ಲಿ ಬಳಕೆಯಾಗಿರುವ ಅಂಶಗಳು ಯಾವುವು, ಅವರು ಆಯ್ಕೆ ಮಾಡಿಕೊಂಡಂತಹ ಕಥಾಲೋಕ ಎಂತಹುದು ಎಂಬುದನ್ನು ಗುರುತಿಸುತ್ತಾರೆ. ಈ ವಿಚಾರಗಳು ಪ್ರಸ್ತುತ ಪಿಎಚ್.ಡಿ ಶೀರ್ಷಿಕೆಗೆ ಪೂರಕವಾಗಿರುತ್ತದೆ. ಕೆಲವು ಅಂಶಗಳನ್ನು ಹೊರತುಪಡಿಸಿ ಈ ಶೀರ್ಷಿಕೆಗೆ ಸಂಬಂಧಿಸಿದಂತೆ ವೀಣಾ ಶಾಂತೇಶ್ವರವರ ಕಥೆಗಳ ಅಭಿವ್ಯಕ್ತಿ ಹೇಗೆ ಹಾಗೂ ಎಂತಾದ್ದು; ತಾತ್ವಿಕತೆಯ ಸ್ವರೂಪ ಹೇಗಿದೆ ಎಂದು ತಿಳಿಸುವ ಪ್ರಯತ್ನ ಪ್ರಸ್ತುತ ಸಂಶೋಧನೆಯ ಪ್ರಮುಖ ಸಮಸ್ಯೆ.

ವೀಣಾ ಶಾಂತೇಶ್ವರರನ್ನು ಕುರಿತು ಶಾಂತಾ ಇಮ್ರಾಪುರರವರು ಪ್ರಧಾನ ಸಂಪಾದಕರಾಗಿ 'ನಿರ್ಥಿಗಂತ' ಎಂಬ ಶೀರ್ಷಿಕೆಯಡಿಯಲ್ಲಿ 'ಅಭಿನಂದನಾ ಗ್ರಂಥ'ವನ್ನು ಸಂಪಾದಿಸಿದ್ದಾರೆ. ಇದು ಎರಡು ಸಂಪುಟಗಳಲ್ಲಿ ಹೊರಬಂದಿದೆ. ಮೊದಲನೆಯ ಸಂಪುಟದಲ್ಲಿ 'ಸಹೃದಯ ಸ್ಪಂದನ' ಎಂಬ ಭಾಗದಲ್ಲಿ ವೀಣಾ ಶಾಂತೇಶ್ವರವರ ಗೆಳೆಯರ ಬಳಗದವರು ಅವರನ್ನು ಕುರಿತು ಪ್ರಶಂಸನೀಯವಾದ ಅಭಿಪ್ರಾಯಗಳನ್ನು ಅಭಿವ್ಯಕ್ತಿಸಿದ್ದಾರೆ. ಕೃತಿಯ ಎರಡನೆಯ ಭಾಗದಲ್ಲಿ ವೀಣಾ ಅವರ ಸಮಗ್ರ ಸಾಹಿತ್ಯ ಸಮಾಲೋಚನೆ. ಸಣ್ಣಕಥೆ ಪ್ರಕಾರ ವಿಮರ್ಶೆಗಳನ್ನು ಕುರಿತು ಜಿ.ಎಸ್.ಆಮೂರ, ಗಿರಡ್ಡಿ ಗೋವಿಂದರಾಜ, ಸಿ.ಎಸ್.ರಾಮಚಂದನ್‌ರವರು ಲೇಖನಗಳನ್ನು ಪ್ರಕಟಿಸಿದ್ದಾರೆ. ಸಮಗ್ರ

ಕಥಾಸಾಹಿತ್ಯದ ವಿಭಿನ್ನ ಓದುಗಳು ಎಂಬ ಭಾಗದಲ್ಲಿ ಎಚ್.ಎಸ್.ರಾಘವೇಂದ್ರರಾವ್, ಕುಂ.ವೀರಭದ್ರಪ್ಪ, ರವಿ ಉಪಾಧ್ಯ, ವಿನಯಾ ಒಕ್ಕುಂದ, ಎಂ.ಎಸ್.ಆಶಾದೇವಿ, ಬಸು ಜೇವಿನಗಿಡದ ಎಂಬುವವರು ವೀಣಾ ಶಾಂತೇಶ್ವರವರ ಕಥಾಲೋಕವನ್ನು ಕುರಿತು ಅಭಿಪ್ರಾಯಗಳನ್ನು ಅಭಿವ್ಯಕ್ತಿಸಿದ್ದಾರೆ.

ಎಂ.ಎಸ್.ಆಶಾದೇವಿಯವರ ಲೇಖನ 'ತಾತ್ವಿಕ ಬದ್ಧತೆ ಮತ್ತು ಸೃಜನಶೀಲ ಶೋಧದ ಅನನ್ಯ ಮಾದರಿ' ಎಂಬ ಲೇಖನ ಪ್ರಸ್ತುತ ಸಂಶೋಧನಾ ಶೀರ್ಷಿಕೆಗೆ ಅನುಕೂಲವಾಗುವಂತಿದೆ. ವರ್ಗೀಕೃತ ಓದು ಸಾಹಿತ್ಯ ಪರಂಪರೆಯು ವೀಣಾ ಶಾಂತೇಶ್ವರವರ ಪರಿಸರದಲ್ಲಿ ನಡೆಯದೆ ಹೋದರೆ ಎದುರಾಗುವ ಸಮಸ್ಯೆಗಳನ್ನು ವೀಣಾ ಶಾಂತೇಶ್ವರವರ ಸಾಹಿತ್ಯದ ಚರ್ಚೆಯ ಸಂದರ್ಭದಲ್ಲಿಟ್ಟು ನೋಡುವ ಪ್ರಯತ್ನ ಮಾಡಿದ್ದಾರೆ. ವೀಣಾ ಶಾಂತೇಶ್ವರವರು ಕೇವಲ ಶ್ರೇಣಿಕೃತ ವ್ಯವಸ್ಥೆಯ ಕಾರ್ಯ ಮಾದರಿಗಳನ್ನು ಅರ್ಥ ಮಾಡಿಕೊಳ್ಳುವ ಸಾಮಾಜಿಕ, ರಾಜಕೀಯ ಅಥವಾ ಲಿಂಗರಾಜಕಾರಣದ ಅಧ್ಯಯನದ ತಾತ್ವಿಕ ಒತ್ತಡದಲ್ಲಿ ಮಾತ್ರ ಮಾಡುವುದಿಲ್ಲ ಎನ್ನುವುದು. ಎಂ.ಎಸ್.ಆಶಾದೇವಿಯವರ ಈ ಅಭಿಪ್ರಾಯ ಇನ್ನು ವಿಸ್ತರಿಸುವಂತಾದ್ದು. ಹೆಣ್ಣು ಕೇವಲ ಒತ್ತಡವಿದ್ದಾಗ ಮಾತ್ರ ಲಿಂಗರಾಜಕಾರಣಕ್ಕೆ ಬಲಿಯಾಗದೇ, ಒಳಗಾಗದೇ ಸಾವಧಾನಿಸಿದಾಗಲೂ ಅದರ ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳಬಲ್ಲಳು ಎಂಬ ಅಭಿಪ್ರಾಯ ಇವರದಾಗಿದೆ. ಬದಲಾಗಿ ಕಥೆಗಳಲ್ಲಿನ ವಸ್ತು, ಪಾತ್ರ, ಸಂವಿಧಾನ, ಸ್ತ್ರೀಕೇಂದ್ರಿತ ಅಭಿವ್ಯಕ್ತಿಯನ್ನು ಕುರಿತು ಅಷ್ಟಾಗಿ ಗಮನಿಸದೇ ಇರುವುದರಿಂದ ಪ್ರಸ್ತುತ ಸಂಶೋಧನೆಯಲ್ಲಿ ಈ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಬಸು ಬೇವಿನಗಿಡದರವರು ಬರೆದಿರುವ ಲೇಖನ 'ವೀಣಾ ಶಾಂತೇಶ್ವರರ ಕಥಾಲೋಕದಲ್ಲಿ ಮೌಲ್ಯಶೋಧನೆ'. ಲೇಖನದ ಹಂದರದೊಳಗೆ ಕಥೆಗಳಲ್ಲಿ ಕಂಡುಬರುವಂತಹ ಮೌಲ್ಯತ್ವವನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಬಸುರವರೇ ಹೇಳುವಂತೆ 'ವೀಣಾ ಶಾಂತೇಶ್ವರ ಕಥಾಲೋಕದಲ್ಲಿ ಸ್ತ್ರೀ ಕಲಿತವಳೆನಿಸಿಕೊಂಡವಳು ಹಾಗೂ ಬೌದ್ಧಿಕವಾಗಿ ಮಿಗಿಲೆನಿಸಿಕೊಂಡವಳು ಕೂಡ ಗಂಡನ ಕ್ರೌರ್ಯಕ್ಕೆ ಸಿಲುಕಿ ನಲುಗುತ್ತಿರುವಾಗ ಆಕೆಯಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿಸಿ ಅದನ್ನು ಪ್ರಜ್ವಲಿಸುವಂತೆ ಮಾಡುವಲ್ಲಿ ವೀಣಾರವರು ಯಶ್ವಸಿಯಾಗುತ್ತಾರೆ ಎಂದಿದ್ದಾರೆ. ಮುಂದುವರೆದಂತೆ ವೀಣಾಶಾಂತೇಶ್ವರವರ ಕಥೆಗಳ ಬಗ್ಗೆ ತಿಳಿಸುತ್ತಾ 'ಹೋರಾಟದ ಬೀಜವನ್ನು ಬಿತ್ತುವುದು ಮುಖ್ಯ ಬಿಡುಗಡೆಯ ದಾರಿಯನ್ನು ತೋರಿಸುವುದು ಮುಖ್ಯ ಹೆಂಡತಿಯಾದವಳು ಗಂಡನಿಗೆ ಮರಳಿ ಪ್ರಶ್ನೆ ಕೇಳುವುದು ಮುಖ್ಯ, ಗಂಡಸು ತನಗೆ–ತಾನೇ ಪ್ರಶ್ನೆ

ಹಾಕಿಕೊಳ್ಳುವಂತೆ ಮಾಡುವಲ್ಲಿ ಹೆಂಗಸು ಯಶಸ್ವಿಯಾದಳೋ-ಇಲ್ಲವೋ ಎನ್ನುವುದು ಮುಖ್ಯ, ಹೆಣ್ಣಿನ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತೊ - ಇಲ್ಲವೋ ಎಂಬುದು ನಂತರದ ಪ್ರಶ್ನೆ, ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವಾಗಿ ವೀಣಾ ಶಾಂತೇಶ್ವರವರ ಕಥೆಗಳು ಸರಿದಾರಿಯಲ್ಲಿವೆ ಎಂಬ ಬಸು ಬೇವಿನಗಿಡದ ಅವರ ಬರಹದ ಮಾತುಗಳನ್ನು ಒಪ್ಪತಕ್ಕದ್ದು. ವೀಣಾ ಶಾಂತೇಶ್ವರರ ಕಥಾಲೋಕದ ಅಭಿವ್ಯಕ್ತಿಯನ್ನು ಗುರುತಿಸಲು ಇವರ ಬರೆಹ ಪ್ರಸ್ತುತ ಸಂಶೋಧನೆಗೆ ಸಹಕಾರಿಯಾಗಿದೆ.

ಎಂ.ಉಷಾರವರು ವೀಣಾ ಶಾಂತೇಶ್ವರವರ 'ಕಥನಸಾಹಿತ್ಯ ಸಮಾಲೋಚನೆಯ' ಭಾಗದಲ್ಲಿ 'ಕನ್ನಡ ಸಾಹಿತ್ಯಕ್ಕೆ ಸ್ತ್ರೀವಾದಿ ವಾಗ್ವಾದದ ಬಿಸಿಯೇರಿಸಿದ 'ಮುಳ್ಳುಗಳು' ಎಂಬ ಶೀರ್ಷಿಕೆಯಲ್ಲಿ ಸ್ತ್ರೀವಾದದ ನೆಲೆಯನ್ನು ಕುರಿತು ಚರ್ಚಿಸಿರುವುದನ್ನು ಗುರುತಿಸಬಹುದಾಗಿದೆ. ಎಂ.ಉಷಾರವರು 'ಮುಳ್ಳುಗಳು' ಕೃತಿಯಲ್ಲಿ ಕಂಡುಬರುವ ವಸ್ತುವಿನ ಹೊಸತನ, ನಿರ್ಭಿಡೆಯ ಸ್ವರೂಪ ಎಂಥದ್ದು, ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅದರ ವಿಶಿಷ್ಟತೆಯೇನು, ವಿಮರ್ಶೆಗಳು ಗ್ರಹಿಸುವ ಕ್ರಮ ಯಾವುದು ಎಂಬುದನ್ನು ಪರಿಶೀಲಿಸಿದ್ದಾರೆ. ಪ್ರಸ್ತುತ ಸಂಶೋಧನೆಯಲ್ಲಿ ವೀಣಾ ಶಾಂತೇಶ್ವರರ ಕಥೆಗಳ ಅಭಿವ್ಯಕ್ತಿಯನ್ನು ಕುರಿತು ಅದು ಹೇಗೆ ವಿಸ್ತೃತಗೊಂಡಿತು; ಕಥೆಗಳಲ್ಲಿನ ವಸ್ತು ಪಾತ್ರಗಳು, ಸಂಸ್ಕೃತಿ ಹೇಗೆ ಅಭಿವ್ಯಕ್ತಿಗೊಂಡಿದೆ ಎಂದು ತಿಳಿಯುವ ಪ್ರಯತ್ನ ಪ್ರಸ್ತುತ ಸಂಶೋಧನೆಯ ಪ್ರಮುಖವಾದ ಕೆಲಸವಾಗಿದೆ. ಅಭಿವ್ಯಕ್ತಿಯ ವಿಭಿನ್ನತೆಗಳನ್ನು ಗುರುತಿಸಿ ಅದಕ್ಕೊಂದು ಮಾದರಿಯನ್ನು ಹುಡುಕಿ ಕಥೆಯೊಂದಿಗೆ ಜೋಡಣೆ ಮಾಡಿ ಅದರಲ್ಲಿರುವ ಸ್ತ್ರೀವಾದವನ್ನು ವಿವರಿಸುವ, ವಿಶ್ಲೇಷಿಸುವ ಪ್ರಯತ್ನವಾಗಿದೆ.

ಆಧುನಿಕೋತ್ತರ ಸಂಕಥನಗಳಾಗಿ 'ಕವಲುದಾರಿ' ಹಾಗೂ 'ಇನ್ನಷ್ಟು ಕತೆಗಳು' ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ಪ್ರೀತಿ ಶುಭಚಂದ್ರರವರು ಕೆಲವು ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ವೀಣಾ ಶಾಂತೇಶ್ವರವರ ಕಥಾಸಂಕಲನವನ್ನು ಅಸ್ತಿತ್ವವಾದಿ ನೆಲೆಯ ಶೋಧವು ಆಧುನಿಕೋತ್ತರ ಸಂಕಥನಕ್ಕೆ ದಾರಿ ಮಾಡಿಕೊಟ್ಟದ್ದನ್ನು ಇವರ ಕತೆಗಳಲ್ಲಿ ಕಾಣಬಹುದು ಎಂದಿದ್ದಾರೆ. ಇದರ ಜೊತೆಗೆ ಜಾಗತಿಕ ಮಹಿಳಾ ಆಂದೋಲನವೂ ಸ್ವ ವಿಮರ್ಶೆಯ ನಿಷ್ಠುರ ಪಾತಳಿಯಲ್ಲಿ ಕೆಲಸ ಮಾಡಬೇಕೆಂಬ ನಿಲುವಿನ ಗಾಯಿತ್ರಿ ಸ್ಪೀವಾಕ್‌ರ ಆಧುನಿಕೋತ್ತರ ಚಿಂತನೆಗಳ ದಾರಿಯಲ್ಲಿಯೇ ವೀಣಾ ಶಾಂತೇಶ್ವರರು ಕೂಡ ಯೋಚಿಸುತ್ತಾರೆಂದಿದ್ದಾರೆ. ಸ್ತ್ರೀ-ಪುರುಷ ಅಸ್ತಿತ್ವಗಳನ್ನು ವಿರುದ್ಧಗಳಾಗಿ ಪರಿಭಾವಿಸದೆ, ಅವುಗಳ ನಡುವಿನ ಮುಖಾಮುಖಿಯನ್ನು ಆಟವಾಗಿ ಕಾಣಿಸುವ ಕಲೆಗಾರಿಕೆ ವೀಣಾ ಶಾಂತೇಶ್ವರರಿಗಿದೆ ಎಂಬ ಅಂಶವನ್ನು ಪ್ರೀತಿ ಶುಭಚಂದ್ರರವರು ಮನದಟ್ಟು ಮಾಡುತ್ತಾರೆ.

ಮುಂದುವರೆದು ವೀಣಾ ಶಾಂತೇಶ್ವರರ ಬರಹಗಳ ಗುಚ್ಛವಾದ 'ನಡೆದದ್ದೇ ದಾರಿ' ಎಂಬ ಶೀರ್ಷಿಕೆಯನ್ನು ಕುರಿತು ಕೆಲವು ವಿಷಯಗಳನ್ನು ಅಭಿವ್ಯಕ್ತಿಸಿದ್ದಾರೆ. ವೀಣಾರ ಸಮಗ್ರ ಕಥಾಸಂಕಲನದ ಶೀರ್ಷಿಕೆ 'ನಡೆದದ್ದೇ ದಾರಿ' ಆಯ್ಕೆಯು ಮಾನವ ಅಸ್ತಿತ್ವದ ಅನಿವಾರ್ಯತೆ ಎಂಬುದನ್ನು ಧ್ವನಿಸುತ್ತದೆ ಎಂಬ ಹೇಳಿಕೆ ಇಂದಿನ ಹೆಣ್ಣುಕುಲಕ್ಕೆ ಸರಿ ಎನಿಸಿದೆ. ಎಲ್ಲದರ ನಡುವೆ ವೀಣಾ ಶಾಂತೇಶ್ವರರ ಕಥನಶೈಲಿಯು ಹೇಗೆ ಅಭಿವ್ಯಕ್ತಿಗೊಂಡಿದೆ ಎಂದು ತಿಳಿಯುವುದು ಬಹುಮುಖ್ಯವಾದ ಕೆಲಸವಾಗಿದೆ.

ಕೇಶವ ಶರ್ಮರವರು ವೀಣಾ ಶಾಂತೇಶ್ವರರ 'ಬಿಡುಗಡೆ' ಕಥಾಸಂಕಲನ ಕುರಿತು ಲೇಖನ ಬರೆದಿದ್ದಾರೆ. 'ಸ್ತ್ರೀತ್ವದ ಹೊಸ ವ್ಯಾಖ್ಯಾನ ಬಿಡುಗಡೆ' ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ಅದರಲ್ಲಿ ಬರುವ ಸುಮಾರು ಹತ್ತು ಕಥೆಗಳನ್ನು ಕುರಿತು ವಿಶ್ಲೇಷಣಾತ್ಮಕ ಚರ್ಚೆ ಮಾಡಿದ್ದಾರೆ. ಮೊದಲ ಹಂತದಲ್ಲಿ ವೀಣಾ ಶಾಂತೇಶ್ವರರ ಬರೆಯುವ ಸಂದರ್ಭದಲ್ಲಿದ್ದಂತಹ ಪರಿಸ್ಥಿತಿಯನ್ನು ತಿಳಿಸಿ ಕಾಲದ ಬಿಕ್ಕಟ್ಟುಗಳ ಬಗ್ಗೆ ವಿವರಿಸಿದ್ದಾರೆ. ಅದರಿಂದ ನುಣಚಿಕೊಂಡು ಹೇಗೆ ತನ್ನದೇ ಆದಂತಹ ಕಥಾಭಿವ್ಯಕ್ತಿಯ ಮಾದರಿಯನ್ನು ಕಟ್ಟಿಕೊಂಡರು ಎಂಬುದನ್ನು ಸ್ವಚ್ಛವಾಗಿ ತಿಳಿಯಪಡಿಸಿದ್ದಾರೆ. ನಂತರ ಒಂದೊಂದೆ ಕಥೆಯನ್ನು ವಿವರಿಸುತ್ತಾ, ಸ್ತ್ರೀಯರು ಹೇಗೆ ತನ್ನತನವನ್ನು ಅಭಿವ್ಯಕ್ತಿಸುತ್ತಾರೆ ಇದರ ಜೊತೆಗೆ ಅಭಿವ್ಯಕ್ತಿಸುವ ಕ್ರಮ ಎಂತಹದ್ದು ಎಂಬುದನ್ನು ಕಥೆಗಳಲ್ಲಿನ ಕಥೆಗಾರ್ತಿಯರ ವಿಶ್ಲೇಷಣೆಯ ವ್ಯಾಖ್ಯಾನದ ಮೂಲಕ ತಿಳಿಸುತ್ತಾರೆ. ಕೇಶವ ಶರ್ಮರವರು ಸಮಾಜದಲ್ಲಿ ಹೆಣ್ಣು ಹೇಗೆ ಅಭಿವ್ಯಕ್ತಿಗೊಂಡಿದ್ದಾಳೆ ಎಂಬುದನ್ನು ತಿಳಿಸದೆ ಅವಳ ಧೈರ್ಯ, ಸ್ಥೈರ್ಯ ಹೊಸ-ಹೊಸ ಅಂತರಂಗಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಈ ಕಾರ್ಯವನ್ನು ಸಂಶೋಧನೆಯಲ್ಲಿ ಭಿನ್ನವಾಗಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಅನುಪಮಾರವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧದ ಶೀರ್ಷಿಕೆ 'ಆಧುನಿಕ ಮಹಿಳಾ ಸಣ್ಣಕಥಾ ಸಾಹಿತ್ಯ: ಪುರುಷವಿನ್ಯಾಸದ ನೆಲೆಗಳು'. ಇವರು ಆಯ್ಕೆ ಮಾಡಿಕೊಂಡ ಆರು ಜನ ಸಣ್ಣಕಥೆಗಾರ್ತಿಯರಲ್ಲಿ ವೀಣಾ ಶಾಂತೇಶ್ವರರು ಒಬ್ಬರು. ಅನುಪಮಾರವರು ಪಿಎಚ್.ಡಿ. ಮಹಾಪ್ರಬಂಧದಲ್ಲಿ ವೀಣಾ ಶಾಂತೇಶ್ವರರರ ಕಥೆಗಳಲ್ಲಿನ ಪುರುಷ ಎಂಬ ಪರಿಕಲ್ಪನೆಯನ್ನು ಜೈವಿಕ, ಸಾಮಾಜಿಕ, ಆರ್ಥಿಕ, ಭಾಷಿಕ, ಮನೋವೈಜ್ಞಾನಿಕ ನೆಲೆಗಳಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಕೊನೆಯ 'ಭಾಷೆ, ಶೈಲಿ ಮತ್ತು ತಂತ್ರ' ಎಂಬ ಅಧ್ಯಾಯದಲ್ಲಿ ವೀಣಾ ಶಾಂತೇಶ್ವರರ ಭಾಷಿಕ ನೆಲೆ, ಶೈಲಿ ಮತ್ತು ತಂತ್ರವನ್ನು ಕುರಿತು ವಿವರಿಸಿರುವುದನ್ನು ಕಾಣಬಹುದು.

ಶಕೀಲಾರವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧದಲ್ಲಿ ವೀಣಾ ಶಾಂತೇಶ್ವರವರ ಸಣ್ಣಕಥೆಗಳನ್ನು ಬಳಸಿಕೊಂಡಿದ್ದಾರೆ. ವೀಣಾ ಶಾಂತೇಶ್ವರ ಅವರು ಕಥೆಗಳಿಗೆ ಆಯ್ಕೆ ಮಾಡಿಕೊಂಡ ವಸ್ತು, ಪಾತ್ರಗಳ ಸ್ಥಿತಿಗತಿಯನ್ನು ತಿಳಿಸಿದ್ದಾರೆ. ಶಕೀಲಾರವರು ವೀಣಾ ಶಾಂತೇಶ್ವರರ ಬರಹದ ಸಂದರ್ಭವನ್ನು ಕುರಿತು 'ವೀಣಾ ಶಾಂತೇಶ್ವರರು ಇಂಗ್ಲೀಷ್ ಸಾಹಿತ್ಯ ಅಧ್ಯಯನ ಮಾಡಿದವರು. ಅವರು ಬರೆಯಲಾರಂಭಿಸಿದ ಕಾಲದಲ್ಲಿ ನವ್ಯಪಂಥದ ಲೇಖಕರೇ ಹೆಚ್ಚಿದ್ದು ಅವರ ಅಬ್ಬರ ಹೆಚ್ಚಾಗಿತ್ತು. ಅಂತಹ ಸಂದರ್ಭದಲ್ಲಿ ವೀಣಾರವರು ತಮ್ಮದೇ ಆದ ನೆಲೆಯನ್ನು ಕಂಡುಕೊಂಡರು. ವೀಣಾರವರು ಕುಟುಂಬದಲ್ಲಿ ಮಹಿಳೆಯ ಸ್ಥಾನಮಾನ ಪ್ರಶ್ನೆ 'ಸ್ತ್ರೀ ಸ್ವಾತಂತ್ರ್ಯ' ಪ್ರಶ್ನೆ ಅವರ ಕಥೆಗಳಲ್ಲಿ ಕಾಣಬರುತ್ತವೆ ಎಂದಿದ್ದಾರೆ. ವೀಣಾ ಶಾಂತೇಶ್ವರರ ಕಥೆಗಳ ಹಂದರವನ್ನು ಅಧ್ಯಯನಿಸಿದಾಗ ಅಲ್ಲಿರುವ ಹೆಣ್ಣು ಪಾತ್ರಗಳು ಶಿಕ್ಷಣವಂತರು, ಜೊತೆಗೆ ಆರ್ಥಿಕವಾಗಿ ಸಬಲರು. ಆದರೂ ತಮ್ಮತನವನ್ನು ಕಾಪಾಡಿಕೊಳ್ಳುವುದರಲ್ಲಿ ಸೋಲುತ್ತಿದ್ದಾರೆಂಬುದು ವಾಸ್ತವ.

ಎಲ್.ಜಿ.ಮೀರಾರವರ 'ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ' ಕೃತಿಯಲ್ಲಿ ಐದನೆಯ ಅಧ್ಯಾಯದಲ್ಲಿ 'ವೈದೇಹಿ ಅವರ ಕಥನ' ಎಂಬ ಶೀರ್ಷಿಕೆಯಡಿಯಲ್ಲಿ 'ಅಡುಗೆ ಮನೆ ಹುಡುಗಿ'ಯ ಅಂತರಂಗದ ಪ್ರಶ್ನೆಗಳು ಎಂಬ ಮತ್ತೊಂದು ಉಪಶೀರ್ಷಿಕೆಯನ್ನು ಇಟ್ಟುಕೊಂಡಿದ್ದಾರೆ. ವೈದೇಹಿಯವರ ಮರಗಿಡಬಳ್ಳಿ, ಅಂತರಂಗದ ಪುಟಗಳು, ಸಮಾಜಶಾಸ್ತ್ರಜ್ಞೆಯ ಟಿಪ್ಪಣಿ ಎಂಬ ಕಥಾಸಂಕಲನಗಳಲ್ಲಿ ಕೆಲವು ಮುಖ್ಯವಾದ ಕಥೆಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ನಾಲ್ಕು ಆಯಾಮಗಳನ್ನಿಟ್ಟುಕೊಂಡು ವಿಶ್ಲೇಷಣೆ ಮಾಡಿದ್ದಾರೆ. ಪಿತೃಪ್ರಧಾನ ಚೌಕಟ್ಟು ವರ್ಣಿತವಾಗಿರುವ ಕ್ರಮ, ಸ್ತ್ರೀಯರನ್ನು ಕುರಿತ ದೃಷ್ಟಿಕೋನ, ಭಾಷೆಯ ಬಳಕೆ ಮತ್ತು ನುಡಿಗಟ್ಟುಗಳ ಪರಿಶೀಲನೆ, ಕಥನಪ್ರಜ್ಞೆಯ ಅಧ್ಯಯನ ಎಂದು ವಿಭಾಗಿಸಿದ್ದಾರೆ. ಅವುಗಳ ಶೀರ್ಷಿಕೆಗಳಿಗೆ ಅನುಗುಣವಾಗಿ ಕಥೆಗಳನ್ನು ಉದಾಹರಿಸುತ್ತಾ ವಿವರಿಸಿದ್ದಾರೆ. ಆದರೆ ಇಲ್ಲಿ ಎಲ್ಲಿಯೂ ವೈದೇಹಿಯವರ ಕಥೆಗಳ ಅಭಿವ್ಯಕ್ತಿಯ ತಾತ್ವಿಕತೆಯನ್ನು ಕುರಿತು ಮಾತನಾಡಿರುವುದು ಕಂಡುಬರುವುದಿಲ್ಲ.

ನವಕರ್ನಾಟಕ ಪ್ರಕಾಶನದವರು 'ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಪುರಸ್ಕೃತ ಲೇಖಕರು' ಎಂಬ ಹೆಸರಿನಲ್ಲಿ 'ನವಕರ್ನಾಟಕ ಸಾಹಿತ್ಯ ಸಂಪದ-೫೩' ಎಂಬ ಉಪ ಶೀರ್ಷಿಕೆಯಡಿಯಲ್ಲಿ ವೈದೇಹಿಯವರ ಪರಿಚಯಾತ್ಮಕ ಕೃತಿಯನ್ನು ಹೊರ ತಂದಿದ್ದಾರೆ. ಇದರ ಕರ್ತೃ ಸ.ಉಷಾರವರು; ಸಂಪಾದಕರು ಪ್ರಧಾನ್ ಗುರುದತ್. ವೈದೇಹಿಯವರ ಈವರೆಗಿನ ಸಾಹಿತ್ಯ ಪ್ರಕಾರಗಳನ್ನು ಕುರಿತು ಸಂಕ್ಷಿಪ್ತವಾದ ಮಾಹಿತಿ ಇದರಲ್ಲಿದೆ.

ಸ.ಉಷಾರವರು ವೈದೇಹಿಯವರ ಕಥಾಲೋಕವನ್ನು ಕುರಿತು ಹೇಳಿದ ಮಾತುಗಳು ಅರ್ಥಪೂರ್ಣವಾದವು. ವೈದೇಹಿಯವರ ಪ್ರಥಮ ಕಥಾಸಂಕಲನ ಪ್ರಕಟವಾದ ೧೯೭೯ರ ಕಾಲಘಟ್ಟ; ಹೊಸ ಎಚ್ಚರಗಳ ಕಾಲ. ಜಗತ್ತಿನಾದ್ಯಂತ ಇನ್ನೊಂದು ಆಯಾಮ ಎಚ್ಚರಗೊಂಡ ಕಾಲ. ತಾತ್ವಿಕತೆಯ ಹಂಗಿಲ್ಲದೆಯೂ ಕಲೆ ಬದುಕಿನಿಂದಲೇ ಬೆಳೆದ ಕಾಲ. ಕನ್ನಡ ಬರಹಗಾರ್ತಿಗೆ ಕ್ಯಾಥರೀನ್ ಮಿಲೆಟ್, ಗ್ಲೋರಿಯಾ ಸ್ಟೀನೆವೆಲ್, ಸಿಮೋನ್‌ದ ಬೋವಾರಿಗಿಂತಲೂ ಅಡಿಗರ ಪದ್ಯ, ಅನಂತಮೂರ್ತಿಯವರ ಕಥೆ, 'ಸಾಕ್ಷಿ' ಎಂಬ ಪತ್ರಿಕೆ, 'ಮನ್ವಂತರ' 'ಗ್ರಾಮಾಯಣ'ಗಳು ಹತ್ತಿರವಾಗಿದ್ದ ಕಾಲ. ತಾನು ಬರೆಯ ಬಹುದಾದ ವಿಷಯ, ವಸ್ತು, ಭಾಷೆಗಾಗಿ ಸ್ತ್ರೀ ಸಂವೇದನೆ ಅರಸುತ್ತಲೇ ಇದ್ದ ಕಾಲವೆಂದು ವೈದೇಹಿಯವರ ಕಥಾರಚನೆಯ ಸಂದರ್ಭವನನ್ನು ಸ.ಉಷಾರವರು ನೆನಪಿಸುತ್ತಾರೆ.

ವೈದೇಹಿಯವರ ಏಳು ಕಥಾಸಂಕಲನಗಳಲ್ಲಿ ಐದು ಕಥಾಸಂಕಲನಗಳ ಬಗ್ಗೆ ಸ.ಉಷಾರವರರು ಸಂಕ್ಷಿಪ್ತವಾದ ಮಾಹಿತಿ ನೀಡಿದ್ದಾರೆ. 'ಮರ-ಗಿಡ-ಬಳ್ಳಿ' ಕಥಾಸಂಕಲನದಲ್ಲಿ ಬರುವ ಮುಖ್ಯವಾದ ಕಥೆಗಳನ್ನು ಜೊತೆಗೆ ಕಥೆಯಲ್ಲಿನ ಕಥಾನಾಯಕಿಯರ ಆಶಯವನ್ನು ಗುರುತಿಸುತ್ತಾರೆ. ಉದಾಹರಣೆಗೆ 'ಪದವೀಧರ' ಕಥೆಯಲ್ಲಿ ಹೇಗೋ ಅಡ್ಡದಾರಿಯಲ್ಲಿ ಪದವಿ ನೌಕರಿಗಳನ್ನು ಗಳಿಸಿದ ವ್ಯಕ್ತಿಯೊಬ್ಬ ದೊಡ್ಡ ಮನುಷ್ಯನಾಗಿದ್ದಾನೆ. ಅವನ ಪೊಳ್ಳುತನ ಅವನಿಗೆ ಗೊತ್ತಿದೆ. ಹೆಂಡತಿ ತನಗೆ ಕೊಡುವ ಗೌರವ-ಪ್ರೀತಿಗಳನ್ನು ಕಂಡು ಅವನಿಗೆ ತಾನು ಬದಲಾಗಬೇಕೆಂದು ಅರ್ಹನಾಗಬೇಕೆಂದು ಅನಿಸುತ್ತದೆ. ಹೀಗೆ ಮುಖ್ಯವಾದ ಕಥೆಗಳನ್ನು ಉದಾಹರಿಸುತ್ತಾ ಅವುಗಳ ಆಶಯಗಳನ್ನು ಗುರುತಿಸಿದ್ದಾರೆ. ಕೆಲವೊಂದು ಕಡೆ ಕಥೆಗಳಲ್ಲಿನ ಸಂಭಾಷಣೆಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಉದಾಹರಿಸಿ ಬರೆದಿರುವುದು ಬರೆಹದ ವಿಶೇಷ. ಇದೇ ರೀತಿಯಲ್ಲಿ ಐದು ಕಥಾಸಂಕಲನಗಳನ್ನು ಉದಾಹರಿಸಿ ಕಥೆಯ ಒಟ್ಟು ಸಾರಾಂಶವನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ.

ಪ್ರಸ್ತುತ ಸಂಶೋಧನೆಯಲ್ಲಿ ಈ ತೆರನಾದ ಬರವಣಿಗೆಯನ್ನು ಮಾಡಿದ್ದರೂ ಸ.ಉಷಾರವರಂತೆ ಸಂಕ್ಷಿಪ್ತ ಸಾರಾಂಶವನ್ನು ಹೇಳುವುದರ ಜೊತೆಗೆ ಕಥೆಗಳ ಅಭಿವ್ಯಕ್ತಿ, ಪ್ರತಿನಿಧಿಸುವ ಪ್ರತಿಬಿಂಬ, ಕಥೆಗಳ ನಿಲ್ದಾಣಗಳ ತಾತ್ವಿಕ ಚರ್ಚೆ ಮಾಡಲಾಗಿದೆ. ವಸ್ತು-ಪಾತ್ರಗಳು ಕಥೆಯ ತಂತ್ರ ಮತ್ತು ಸಂವಿಧಾನ ಹಾಗೂ ಸ್ತ್ರೀ ಅಭಿವ್ಯಕ್ತಿಯ ಬಗ್ಗೆ ಟಿ.ಪಿ.ಅಶೋಕರವರು 'ವೈದೇಹಿ ಕಥನ' ಕೃತಿಯನ್ನು ಪ್ರಕಟಿಸಿದ್ದಾರೆ. ೧೯೭೯ರಲ್ಲಿ ವೈದೇಹಿ ಅವರ ಮೊದಲ ಕಥಾಸಂಕಲನ 'ಮರ-ಗಿಡ-ಬಳ್ಳಿ' ಪ್ರಕಟವಾದಾಗಿನಿಂದ ಟಿ.ಪಿ.ಅಶೋಕರವರು ವೈದೇಹಿಯವರ ಬರವಣಿಗೆಯನ್ನು ಅನುಸಂಧಾನ ಮಾಡುತ್ತ

ಬಂದವರು. ವೈದೇಹಿಯವರ ಕಥೆಗಳ ಬಗ್ಗೆ ಕಟುವಾದ ಮಾತುಗಳನ್ನು ಬರೆದಿದ್ದು ನೆನಪಿಸಿಕೊಳ್ಳುತ್ತಾರೆ. ಇವರೇ ಹೇಳುವಂತೆ 'ಸಣ್ಣ ಪುಟ್ಟ ಸಮಸ್ಯೆಗಳಿಗೆಲ್ಲ ಇಲ್ಲಿನ ಕೆಲವು ವನಿತೆಯರು ಕಣ್ಣೀರ್ಗರೆಯುತ್ತಾರೆಂದೂ, ಇಲ್ಲಿನ ಕೆಲವು ಕಥೆಗಳನ್ನು ಓದುವುದರಿಂದ ನಿದ್ರೆ-ಗುಳಿಗೆಗಳ ಖರ್ಚು ಉಳಿಯುತ್ತದೆ ಎಂದು ಲೇವಡಿ ಮಾಡಿದ್ದೇನೆಂದು ಅವರೇ ಹೇಳಿಕೊಂಡಿದ್ದಾರೆ. ನಂತರದ ದಿನಗಳಲ್ಲಿ ಬಂದ ಕಥಾಸಂಕಲನಗಳು ಅವರ ಟೀಕೆಗಳಿಗೆ-ಲೇವಡಿಗಳಿಗೆ ಉತ್ತರವನ್ನು ನೀಡಿವೆ. ೧೯೭೪ರಿಂದ ಇಲ್ಲಿಯವರೆಗೆ ವೈದೇಹಿಯವರ ಬರೆಹಗಳನ್ನು ಕುರಿತು ಟಿ.ಪಿ.ಅಶೋಕರವರು ಬರೆದ ಬಿಡಿಬಿಡಿ ಟಿಪ್ಪಣಿ ಲೇಖನಗಳೆಲ್ಲವೂ ಒಗ್ಗೂಡಿ, ಪರಿಷ್ಕಾರಗೊಂಡು 'ವೈದೇಹಿ ಕಥನ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ವೈದೇಹಿಯವರ ಕಥೆ, ಕವಿತೆ, ಕಾದಂಬರಿ, ಪ್ರಬಂಧಗಳನ್ನು ಆಪ್ತ ಅವಲೋಕನ ಈ ಕೃತಿಯಲ್ಲಿದೆ.

ವೈದೇಹಿಯವರ ಕಥೆಗಳ ಬಗ್ಗೆ ಮೊದಲು ಅವರ ಕಥೆಗಳು ಹುಟ್ಟಿಕೊಂಡ ಸಂದರ್ಭ ಜೊತೆಗೆ ಪ್ರಕಟಣೆಯಾದ ವರ್ಷವನ್ನು ತಿಳಿಸಿದ್ದಾರೆ. ಅಂದಿನ ನವ್ಯ-ದಲಿತ-ಬಂಡಾಯದ ಸಂದರ್ಭದಲ್ಲಿ ವೈದೇಹಿಯವರು ಯಾವುದೇ ಸಾಹಿತ್ಯ ಪಂಥಕ್ಕೆ ಒಳಗಾಗದೇ ತಮ್ಮದೇ ಆದ ತಾತ್ವಿಕತೆಯ ಹಿನ್ನೆಲೆಯಲ್ಲಿ ಕಥೆಗಳನ್ನು ರಚಿಸಿದ್ದಾರೆಂದಿದ್ದಾರೆ. ಮೊದ-ಮೊದಲು ತ್ರಿವೇಣಿಯವರಿಂದ ಪ್ರಭಾವಿತರಾಗಿದ್ದಾರೆ ಎಂದೆನಿಸುವಂತೆ ಬರೆಯುತ್ತಿದ್ದ ವೈದೇಹಿ ಈಗ ತ್ರಿವೇಣಿಯವರನ್ನು ದಾಟಿ ಮುನ್ನಡೆದಿದ್ದಾರೆ ಎನಿಸುತ್ತದೆ. ಇದರ ಜೊತೆಗೆ ರಾಜಲಕ್ಷ್ಮೀ ಎನ್.ರಾವ್., ವೀಣಾ ಶಾಂತೇಶ್ವರ, ನೇಮಿಚಂದ್ರ ಇವರೆಲ್ಲರಿಗಿಂತ ಭಿನ್ನವಾಗಿ ಬರೆಯುತ್ತಿದ್ದ ವೈದೇಹಿ ಇವರೆಲ್ಲರಿಗಿಂತ ಹೆಚ್ಚು ವೈವಿಧ್ಯಮಯವಾಗಿ ಬರೆಯುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಮೊದಲು ಕಥಾಸಂಕಲನದಲ್ಲಿ ವೈದೇಹಿಯವರ ಕಥೆಗಳಲ್ಲಿ ಘಟನೆಗಳು ಹೇಗೆ ನಿರೂಪಣೆಗೊಂಡಿದೆ ಎಂಬುದನ್ನು ತಿಳಿಸಿದ್ದಾರೆ. ವರ್ಗ ದಾಂಪತ್ಯದ ಚಿತ್ರಣಗಳನ್ನು ಕುರಿತು ಚಿತ್ರಿಸಿದ್ದಾರೆ. ಕಥೆಗಳಲ್ಲಿ ಬರುವ ಸಣ್ಣಪುಟ್ಟ ಜಗಳಗಳು, ಸಂತೋಷಗಳು, ನೀತಿಗಳು ಸರಳವಾಗಿ ಮಂಡಿತವಾಗಿವೆ. 'ಪದವೀಧರ' ಎಂಬ ಕಥೆಯಲ್ಲಿ ಒಬ್ಬ ತರುಣನ ಚಿತ್ರ ಉತ್ತಮ ಪುರುಷ ನಿರೂಪಣೆಯಲ್ಲಿ ಮೂಡಿಬಂದಿದೆ ಎಂದಿದ್ದಾರೆ. ಇದು ವೈದೇಹಿಯವರ ನಿರೂಪಣಾ ತಂತ್ರವಾಗಿದೆ. ವೈದೇಹಿಯವರು ಕಥೆಕಟ್ಟುವ ರೀತಿಯಲ್ಲಿ ಸರಳವಾದ ಮಾರ್ಗವನ್ನು ಕಂಡುಕೊಂಡಿದ್ದಾರೆ. ಮೊದಲ ಹಂತದ ಕಥೆಗಳಲ್ಲಿ ಸಮಸ್ಯೆಗಳು, ಸರಳವಾದ ಕಥಾ ನಿರೂಪಣೆ, ಸಮಸ್ಯೆಗಳಿಗೆ ಪರಿಹಾರ, ದಾಂಪತ್ಯ, ಹೆಣ್ಣುಗಳ ಸುರಕ್ಷತೆ, ಸಣ್ಣಪುಟ್ಟ ಏರಿಳಿತಗಳು, ಸುಖಾಂತ ಮುಕ್ತಾಯ, ಮಧ್ಯೆ ಒಂದಷ್ಟು ಸರಸ, ವಿರಸ, ಕಣ್ಣೀರು, ಮುಗುಳ್ನಗೆ ಈ ಜನಪ್ರಿಯ ದಾಟಿಯ ಅಂಶಗಳು ಕಂಡುಬರುತ್ತವೆ.

ಮುಂದುವರಿದಂತೆ ವೈದೇಹಿಯವರ ಕಥೆಗಳು ಕನ್ನಡಿಯೂ ಹೌದು ಇದು ಪ್ರಸ್ತುತ ಸಂಶೋಧನೆಗೆ ಪೂರಕವಾಗಿದೆ. ವೈದೇಹಿಯವರು ಹೆಣ್ಣಿನ ಮೂಕವೇದನೆಯ ಆತಂಕದ ಕಥೆಗಳು, ಕೆಲವು ದ್ವಂದ್ವಗಳಿಗೆ ಸ್ಪಷ್ಟತೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಹೆಣ್ಣಿನ ಜಗತ್ತೇ ಬೇರೆ. ಸಿಟ್ಟು, ವ್ಯಂಗ್ಯ, ನೋವು, ವಿಷಾದ ಈ ಎಲ್ಲವೂಗಳನ್ನು ತನ್ನ ಹಂದರದೊಳಗಿಟ್ಟುಕೊಂಡು ನಲುಗುವ ಹೆಣ್ಣಿನ ಜಗತ್ತು ಕೂಡ ವೈದೇಹಿಯವರ ಕಥೆಗಳಲ್ಲಿವೆ. ವೈದೇಹಿಯವರ ಮೊದಲ ಹಂತದ ಕಥೆಗಳಲ್ಲಿರುವಂತಹ ಹೆಣ್ಣಿನ ಗಟ್ಟಿತನಕ್ಕೂ ನಂತರದಲ್ಲಿ ಕಾಣಿಸಿಕೊಳ್ಳುವ ಹೆಣ್ಣುಪಾತ್ರಗಳ ಗಟ್ಟಿತನಕ್ಕೂ ತುಂಬಾ ವ್ಯತ್ಯಾಸಗಳಿವೆ ಎಂದಿದ್ದಾರೆ ವಿಮರ್ಶಕರಾದ ಟಿ.ಪಿ.ಅಶೋಕರವರು. ವೈದೇಹಿಯವರ ಕಥೆಗಳ ವೈಶಿಷ್ಟ್ಯವೆನೆಂದರೆ ಅವರ ನಾಯಕಿಯರು ತಮ್ಮ ಜೀವನಶೈಲಿಯಲ್ಲಿ, ಬಹಿರಂಗ ನಡವಳಿಕೆಗಳಲ್ಲಿ ಇತರ ಹೆಣ್ಣುಮಕ್ಕಳಂತೆಯೇ ಕಂಡರೂ ಅಂತರಂಗದಲ್ಲಿ ಮಾತ್ರ ಜ್ವಾಲಾಮುಖಿಗಳನ್ನು ಇಟ್ಟುಕೊಂಡವರು. 'ಮರಗಿಡಬಳ್ಳಿ'ಯಲ್ಲಿ ಮೂಕರಾಗಿದ್ದವರು 'ಅಂತರಂಗದ ಪುಟಗಳು' ಸಂಕಲನದಲ್ಲಿ ಮಾತನಾಡಲು ಪ್ರಾರಂಭಿಸಿದ್ದಾರೆ ಎನ್ನುವುದು ಒಂದು ಅರ್ಥ ಪೂರ್ಣ ಬೆಳವಣಿಗೆಯೇ ಆಗಿದೆ ಎಂಬ ಅಭಿಪ್ರಾಯ ಅಶೋಕರವರದು.

ಮುಂದುವರೆದಂತೆ ವೈದೇಹಿಯವರ ಕಥೆಗಳನ್ನು ಕುರಿತ ತಾತ್ಪರ್ಯ ರೂಪದಲ್ಲಿ ಹೇಳುವುದು ಸಾಧ್ಯವಿಲ್ಲ ಎಂದಿದ್ದಾರೆ. ಕಥೆಯೊಳಗಿನ ಸ್ತ್ರೀಲೋಕವನ್ನು ವಿಭಿನ್ನ ಪದಗಳಿಂದ ಗುರುತಿಸುತ್ತಾರೆ. 'ಒಳ್ಳೆಯವಳೆಂದು' 'ಸಭ್ಯಳೆಂದು', ತಗ್ಗಿ-ಬಗ್ಗಿ ನಡೆಯುವವಳೆಂದು, ಗುರು-ಹಿರಿಯರಲ್ಲಿ ಭಯ ಭಕ್ತಿ ಇಟ್ಟುಕೊಂಡವಳೆಂದು, ಕರುಣಾಮೂರ್ತಿ, ಸಹನಶೀಲೆಯೆಂದು, ಇಂತಹವರ ಮನಸ್ಸಿನಲ್ಲಿ ಎಂತಹ ಭಾವಗಳಿರುತ್ತವೆಯೆಂದರೆ ಸಿಟ್ಟು, ವ್ಯಂಗ್ಯ, ವಿಷಾದ, ಆಶ್ಚರ್ಯಗಳು ಮುಚ್ಚಿಟ್ಟ-ಬಚ್ಚಿಟ್ಟ ಭಾವನೆಗಗಳು ಹೊರಬರುತ್ತೇವೆ ಹೇಗೆ ಟಿ.ಪಿ.ಅಶೋಕರವರು ವಿಮರ್ಶಾ ಬರವಣಿಗೆ ಸುದೀರ್ಘವಾಗಿ ಮೂಡಿಬಂದಿರುವುದನ್ನು ಕಾಣಬಹುದು.

ಅಕ್ಕು, ಚಂದಲೆ, ಗೋಲ, ಶಕುಂತಲೆಯೊಂದಿಗೆ ಕಳೆದ ಅಪರಾಹ್ನ, ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ, ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು, ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು 'ಹಕ್ಕಿಲ್ಲದವರು' ಇತ್ಯಾದಿ. ಕಥೆ ಹಾಗೂ ಸಂಕಲನದಲ್ಲಿ ಬರುವ ಇನ್ನಿತರೆ ಕಥೆಗಳ ಬಗ್ಗೆ ಅಲ್ಲಿನ ಸ್ತ್ರೀಲೋಕವನ್ನು ಕುರಿತು ಹಲವಾರು ಆಯಾಮಗಳನ್ನು ತಿಳಿಸಿಕೊಡುವುದರ ಮೂಲಕ ಓದುಗರಿಗೊಂದು ದಾರಿದೀಪವಾಗಿದೆ. ಟಿ.ಪಿ.ಅಶೋಕರವರ ವಿಮರ್ಶಾ ಬರವಣೆಗೆ 'ಕ್ರೌಂಚ ಪಕ್ಷಿಗಳು' ಎಂಬ ಕಥಾ ಸಂಕಲನವನ್ನು ಕುರಿತು ವಿಶೇಷ ಬರವಣಿಗೆ ಮಾಡಿದ್ದಾರೆ. ಈ ಕಥೆಯನ್ನು ಕುರಿತು ವಿಮರ್ಶಕರು 'ಕ್ರೌಂಚಪಕ್ಷಿಗಳು' ಭಾರತ ವಿಭಜನೆಯ ದುರಂತವನ್ನು

ವ್ಯಕ್ತಿಗಳ ಮಟ್ಟದಲ್ಲಿ ಪರಿಭಾವಿಸುವ ಮನೋಜ್ಞ ಕಥೆಯಾಗಿರುವಂತೆ 'ಕಥೆ'ಯನ್ನು ಕುರಿತ ಕಥೆಯೂ ಆಗಿದೆ. ಈ ಕಥೆಯ ನಿರುಪಣಾ ವಿಧಾನವೂ ವೈದೇಹಿಯವರು ಈ ಮಾಧ್ಯಮದ ಮೇಲೆ ಸಾಧಿಸಿರುವ ಸೃಜನಶೀಲ ನಿಯಂತ್ರಣದ ಉಜ್ವಲ ನಿದರ್ಶನವಾಗಿದೆ. ಬಹುನಿರೂಪಣೆಗಳ ಈ ಸಂಕೀರ್ಣ ಕಥನದಲ್ಲಿ ವೈದೇಹಿ ವಿಭಜನೆಯ ದುರಂತದ ಜೊತೆಜೊತೆಗೆ ಕಥೆ ಹೇಳುವ ಮತ್ತು ಕೇಳುವ ಪ್ರಕ್ರಿಯೆಯ ಹಿಂದಿನ ತಾತ್ವಿಕತೆಯನ್ನೇ ಸಮಸ್ಯಾತ್ಮಕಗೊಳಿಸಿಬಿಡುತ್ತಾರೆಂದು ಟಿ.ಪಿ.ಅಶೋಕರವರು ಅಭಿಪ್ರಾಯಪಟ್ಟಿದ್ದಾರೆ.

ಸ್ತ್ರೀ ಪುರುಷ ಸಂಬಂಧಗಳು ಅಸಮಾನ ನೆಲೆಯಲ್ಲಿರುವುದಕ್ಕೆ ಕಾರಣ ಅವರಿಬ್ಬರೂ ಪರಂಪರಾಗತವಾಗಿ ಮಾಡಿಕೊಂಡು ಬಂದಿರುವ ಕೆಲಸಗಳೇ ಎಂದರೆ ಅವನ್ನು ಬದಲು ಮಾಡಿಕೊಂಡಾಗ ಎಲ್ಲ ಕೆಲಸಗಳೂ ಸಮಾನ ಪ್ರಾಮುಖ್ಯ ಪಡೆದು ಸಂಬಂಧಗಳೂ ಸಮಾನವಾಗಬಹುದೆಂದು ವೈದೇಹಿ ಹಲವು ಬಾರಿ ಸೂಚಿಸಿದ್ದಾರೆ. ಗೃಹಕೃತ್ಯದ ಕೆಲಸಗಳು ಹೆಣ್ಣಿನವು: ಆಕೆ ಹೊಸ್ತಿಲು ದಾಟಬಾರದು. ದಾಟಿ 'ಗಂಡುಬೀರಿ' ಯಾಗಬಾರದು, ಮನೆಯ ಹೊರಗಿನ ಕೆಲಸಗಳಿಗೆ ಗಂಡೇ ಜವಾಬ್ದಾರಿ ಅವನು ಅಡುಗೆ ಮನೆ ಪ್ರವೇಶಿಸಿ 'ಹೆಣ್ಣಿಗ' ನಾಗಬಾರದು ಎಂಬ ಮೀಸಲಾತಿ ತತ್ತ್ವಗಳನ್ನು ವೈದೇಹಿ ವಿರೋಧಿಸುತ್ತಾರೆ. ಎಲ್ಲರೂ ಎಲ್ಲ ಕೆಲಸಗಳನ್ನು ಸಮಾನ ಶ್ರದ್ಧೆ ಗೌರವಗಳಿಂದ ಮಾಡುವುದು ಸಾಧ್ಯವಾದಾಗ ಲಿಂಗ ಅಸಮಾನತೆ ಕ್ರಮೇಣ ಕಡಿಮೆಯಾಗಬಹುದು ಎಂಬುದು ಲೇಖಕಿಯ ಆಶಯವಾಗಿದೆ. ಇದರೊಂದಿಗೆ ವೈದೇಹಿಯವರ ಕಥಾಸಾಹಿತ್ಯವನ್ನು ಕುರಿತು ಸಂಪೂರ್ಣವಾದ ವಿಮರ್ಶೆ 'ವೈದೇಹಿ ಕಥನ' ಕೃತಿಯು ಒಳಗೊಂಡಿರುವುದನ್ನು ಮನಗಾಣಬಹುದು.

ಕೆ.ಹೆಚ್.ಧರ್ಮವೀರ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ 'ಹೊಸ ತಲೆಮಾರಿನ ಕಥಾಸಾಹಿತ್ಯದ ಪ್ರವೃತ್ತಿಗಳ ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಬಳಸಿಕೊಂಡಂತಹ ಕಥೆಗಾರ್ತಿಯಲ್ಲಿ ವೈದೇಹಿಯವರು ಪ್ರಮುಖರು. ಧರ್ಮವೀರ ಅವರು, ವೈದೇಹಿಯವರು ಯಾವ ಸಂದರ್ಭದಲ್ಲಿ ಕಥೆ ಬರೆಯಲು ಪ್ರಾರಂಭಿಸಿದ್ದಾರೆ ಎಂಬುದನ್ನು ತಿಳಿಸಿದ್ದಾರೆ. 'ಆಧುನಿಕ ಕಥಾ ಸಾಹಿತ್ಯದಲ್ಲಿ ಮಹತ್ವದ ಬದಲಾವಣೆಗಳು ಎಂಬುದರ ಪರಿಣಾಮದಿಂದ ಬದಲಾದ ಸಂದರ್ಭದಲ್ಲಿ ಮಹಿಳೆಯ ಮೂಲಕ ಮಹಿಳೆಯ ಲೋಕವೊಂದನ್ನು ನೋಡುವ ಕ್ರಮವೊಂದು ಪ್ರಾರಂಭವಾಯಿತು. ಇಂಥಹ ಸಂದರ್ಭದಲ್ಲಿ ಹಲವಾರು ಬರಹಗಾರ್ತಿಯರು ಸೃಜನಶೀಲ ಬರವಣಿಗೆಯ ಮೂಲಕ ಈವರೆಗೂ ತೋರಿಸಲಾಗದ ಹೆಣ್ಣಿನ ಬದುಕಿನ ಒಳನೋಟಗಳನ್ನು ಕಟ್ಟಿಕೊಡುವುದಕ್ಕೆ ಪ್ರಾರಂಭಿಸಿದರು. ಅಂತಹವರಲ್ಲಿ ವೈದೇಹಿ ಸುಮಾರು ಎಂಬತ್ತು–ತೊಂಭತ್ತರ ದಶಕದ ಹಿಂದೆ–ಮುಂದೆ

ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಅವರ ಕಥೆಗಳ ಕೆಲವು ಪ್ರವೃತ್ತಿಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ ಎಂದು ಧರ್ಮವೀರ ಅವರು ಮಹಾ ಪ್ರಬಂಧದಲ್ಲಿ ವಿವರಿಸಿದ್ದಾರೆ. ಸಮಾಜವು ಹೆಣ್ಣಿನ ಮೇಲೆ ತೋರಿಸುತ್ತಿರುವ ಸಾಮಾಜಿಕ ಅಸಮಾನತೆಯನ್ನು ಕುರಿತ ಸಂಗತಿ ಧರ್ಮವೀರರ ಸಂಶೋಧನಾ ಪ್ರಬಂಧದಲ್ಲಿದೆ. ಮಹಿಳೆಯಿಂದಲೇ–ಮಹಿಳೆಗೆ ಪುರುಷತ್ವದ ರೀತಿಯಲ್ಲಿ ಅಧಿಕಾರ ಚಲಾಯಿಸುವ ಮಾಹಿತಿಯನ್ನು ತಿಳಿಸಿದ್ದಾರೆ (ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು) ವೈದೇಹಿ ಕಥೆಗಳಲ್ಲಿ ಕಂಡುಬರುವ ಸ್ತ್ರೀಯ ಆಂತರಿಕ ಜಗತ್ತು ಮತ್ತು ಹೊರಜಗತ್ತಿನ ನೋಟಗಳನ್ನು ಪ್ರತಿಬಿಂಬಿಸುವ ಕೆಲಸ ಮಾಡಿದ್ದಾರೆ. ಪುರುಷನಿಂದ–ಮಹಿಳೆ ಹೇಗೆ ಶೋಷಣೆಗೆ ಒಳಗಾಗಿದ್ದಾಳೆ ಎನ್ನುವುದನ್ನು ತಿಳಿಸಿದ್ದಾರೆ.

ನವಕರ್ನಾಟಕ ಪ್ರಕಾಶನದವರು ಐವತ್ತು ವರ್ಷಗಳ ಸಂಭ್ರಮಾಚರಣೆಯ ಸಂದರ್ಭದಲ್ಲಿ ನಾಡಿನ ಹೆಸರಾಂತ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕವಿಗಳು ಹಾಗೂ ಕವಯಿತ್ರಿಯರ ಬಗ್ಗೆ ಅವರ ಸಾಹಿತ್ಯವನ್ನು ಕುರಿತು ಒಂದೊಂದು ಕೃತಿಯನ್ನು ಹೊರತಂದಿದ್ದಾರೆ. ಅಂಥಹ ಪ್ರಮುಖ ಲೇಖಕಿಯರಲ್ಲಿ ಗೀತಾ ನಾಗಭೂಷಣರವರು ಕೂಡ ಒಬ್ಬರು. 'ಗೀತಾ ನಾಗಭೂಷಣ' ಎಂಬ ಶೀರ್ಷಿಕೆಯಡಿಯಲ್ಲಿ ಎನ್. ಗಾಯಿತ್ರಿಯವರು ಬರೆದಂತಹ ಕೃತಿಯಾಗಿದೆ. ಪ್ರಧಾನ್ ಗುರುದತ್ ಇದರ ಸಂಪಾದಕರು. ಈ ಕೃತಿಯು ಗೀತಾರವರ ಒಟ್ಟಾರೆ ಸಾಹಿತ್ಯವನ್ನು ಕುರಿತು ಸಂಕ್ಷಿಪ್ತವಾದ ಮಾಹಿತಿಯನ್ನು ನೀಡುತ್ತದಷ್ಟೇ.

ಈ ಕೃತಿಯಲ್ಲಿ ಗೀತಾ ನಾಗಭೂಷಣರವರ ಸುಮಾರು ನಲವತ್ತೊಂಭತ್ತು ಕಥೆಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತದೆ. ಕಥೆಯಲ್ಲಿ ಬರುವಂತಹ ಪಾತ್ರಗಳು ಯಾವುವು ದೀರ್ಘವಾಗಿರುವಂತಹ ಕಥೆಯನ್ನು ಸಂಕ್ಷೇಪ್ತಗೊಳಿಸಿಕೊಂಡು ಓದುಗ ಸಹೃದಯ ಸಮಾಜಕ್ಕೆ ಅನುಕೂಲವಾಗುವ ರೀತಿಯಲ್ಲಿ ಬರೆದಿದ್ದಾರೆ. ಉದಾಹರಣೆಗೆ 'ಗೌಡನಗೋರಿ' ಎಂಬ ಕಥೆಯನ್ನು ಕುರಿತು, 'ಸಂಗಪ್ಪಗೌಡನ ಹೆಂಡತಿ ನೀಲಗಂಗಾ ತನ್ನ ಗಂಡನ ಸಮಾಧಿಯ ಮುಂದೆ ಕಣ್ಣು ಮುಚ್ಚಿ ಪಿಸುಮಾತಿನಲ್ಲಿ ಸಂಭಾಷಿಸುತ್ತಿರುತ್ತಾಳೆ. ಪ್ರತಿ ಹುಣ್ಣಿಮೆ, ಅಮಾವಾಸ್ಯೆಗಳ ಬೆಳಗಿನಲ್ಲಿ ಗೌಡನ ತೋಟದಲ್ಲಿ ನೀಲಗಂಗವ್ವನ ಈ ದಾರುಣದೃಶ್ಯ ಕಾಣಸಿಗುತ್ತಿತ್ತು. ಈ ವರ್ತನೆಯ ಹಿಂದೆ ಒಂದು ನಿಗೂಢ ಸತ್ಯವಿದೆ'. ಆ ಸತ್ಯವನ್ನು ಭೇದಿಸುವುದೇ ಈ ಕತೆಯ ಮುಖ್ಯ ನಿರೂಪಣೆ.

'ಗಂಡನಿಂದ ಮಕ್ಕಳಾಗದ ನೀಲಗಂಗಾ ದೇವಾಲಯದ ಕರಣಿಕರಿಂದ ಮಗುವನ್ನು ಪಡೆಯುತ್ತಾಳೆ. ಅದು ತನ್ನ ಗಂಡನ ಮಗುವೇ ಎಂದು ನಟಿಸುತ್ತಾಳೆ. ಆದರೆ ತನಗೆ

ಮಕ್ಕಳೇ ಆಗುವುದಿಲ್ಲವೆಂದು ಅಂತಿದ್ದ ಗೌಡನಿಗೆ ಹೆಂಡತಿಯ ಈ ಕೃತ್ಯ ಅರಿವಾದರೂ ಈ ಗುಟ್ಟು ರಟ್ಟಾಗದಿರಲು ಆ ಮಗುವಿಗೆ ಕಾರಣವಾದ ಪುರಾಣಿಕನನ್ನು ಕೊಂದುಹಾಕಿರುತ್ತಾನೆ. ಈ ಸತ್ಯವನ್ನು ಗೌಡ ಬಯಲು ಮಾಡುವುದು ಅವನು ಮರಣಶಯ್ಯೆಯಲ್ಲಿರುವಾಗ ಈ ವಿಷಯ ತಿಳಿದ ಅನಂತರ ಗೌಡನ ಗೌಡ್ತಿಯ ಸಲ್ಲಾಪ ಮುಂದುವರಿದಿತ್ತು'. ಈ ರೀತಿಯ ಒಂದು ಕಥೆಯ ಒಪ್ಪಂದವನ್ನು ತಿಳಿಸಿಕೊಡುವ ಕಾರ್ಯವನ್ನು ಎನ್. ಗಾಯಿತ್ರಿಯವರು ಮಾಡಿದ್ದಾರೆ. ಕೆಲವೊಂದು ಕಥೆಗಳಲ್ಲಿನ ಸಂಭಾಷಣೆಗಳನ್ನು ಉದಾಹರಿಸುವುದರ ಮೂಲಕ ಕಥೆಯನ್ನು ಸಹೃದಯರಿಗೆ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ.

ಕೆ.ಷರಿಷಾ ಮತ್ತು ಬಸವರಾಜ ಸೂಳಿಭಾವಿಯವರ ಸಂಪಾದಕತ್ವದಲ್ಲಿ 'ಗೀತಾ ನಾಗಭೂಷಣ: ಮಹಿಳಾ ಮಾರ್ಗ'ವೆಂಬ ಶೀರ್ಷಿಕೆಯಲ್ಲಿ ಕೃತಿ ಪ್ರಕಟಿಸಿದ್ದಾರೆ. ಈ ಕೃತಿಯು ಗೀತಾ ನಾಗಭೂಷಣರವರ ಸಾಹಿತ್ಯ ಕುರಿತು ನಾಡಿನ ಸಾಹಿತಿಗಳು, ವಿಮರ್ಶಕರು ಬರೆದಂತಹ ವಿಮರ್ಶಾ ಲೇಖನಗಳ ಒಟ್ಟಂದವಾಗಿದೆ. ಇವುಗಳಲ್ಲಿ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಶೀರ್ಷಿಕೆಗೆ ಅನ್ವಯಿಸುವಂತಹ ವಿಷಯವನ್ನು ಮಾತ್ರ ಅಂದರೆ ಗೀತಾ ನಾಗಭೂಷಣರವರ ಕಥಾ ಸಾಹಿತ್ಯದ ಮೇಲಿನ ವಿಮರ್ಶಾ ಬರವಣಿಗೆಗಳನ್ನು ಮಾತ್ರ ಇಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ವಿನಯಾರವರು 'ಗೀತಾ ನಾಗಭೂಷಣರ ಬರವಣಿಗೆ: ಮಹಿಳಾ ಸಂವೇದನೆಯ ಬಿಕ್ಕಟ್ಟಿನ ರೂಪಕ' ಎಂಬ ಶೀರ್ಷಿಕೆಯಲ್ಲಿ ಗೀತಾನಾಗಭೂಷಣರವರ ಬರವಣಿಗೆಯನ್ನು ಕುರಿತು ಬರೆದಿದ್ದಾರೆ. ಆ ಕಾಲದ ಮಹಿಳಾ ಬರವಣಿಗೆ ಕುಟುಂಬದೊಳಗಿನ ಹೆಣ್ಣನ್ನು ವಿಶ್ಲೇಷಿಸಿಕೊಳ್ಳುತ್ತಾ ಅಲ್ಲಿಂದ ಸಮಾಜ ವಿಶ್ಲೇಷಣೆಯ ಕಡೆಗೆ ಮುಂಚಾಚುತ್ತದೆ. ಆದರೆ ಗೀತಾ ನಾಗಭೂಷಣರ ಕಥೆ–ಕಾದಂಬರಿಗಳು ಹೆಣ್ಣನ್ನು ಸಮಾಜದ ಮುಖ್ಯ ಘಟಕವಾಗಿ ಭಾವಿಸುತ್ತವೆ. ಹೆಣ್ಣಿನ ವೈಯಕ್ತಿಕ ಬದುಕಿನಲ್ಲಿ ನಡೆಯುವ ಸಂಗತಿಗಳು ಸಾಮಾಜಿಕ, ರಾಜಕೀಯ ಕಾರ್ಯ ಕಾರಣಗಳ ಪರಿಣಾಮಗಳು ಎಂಬುದನ್ನು ನಿರೂಪಿಸುತ್ತಾರೆಂದು ವಿನಯಾರವರು ಅಭಿಪ್ರಾಯಸಿದ್ದಾರೆ. ಗೀತಾ ನಾಗಭೂಷರವರ ಬರಹದಲ್ಲಿ ಮೂಡಿ ಬಂದಿರುವ ಹೆಣ್ಣುಗಳ ಕ್ಷೇತ್ರಗಳನ್ನು ಗುರುತಿಸಿರುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಗೀತಾರವರ ಕಥೆಗಳಲ್ಲಿನ ಹೆಣ್ಣು ಪಾತ್ರಗಳು ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬುದು ಈ ಬರವಣಿಗೆಯ ಆಶಯವಾಗಿದೆ.

'ಗೀತಾ ನಾಗಭೂಷಣ–ಮಹಿಳಾ ಮಾರ್ಗ' ಎಂಬ ಕೃತಿಯಲ್ಲಿ ರಹಮತ್ ತರೀಕೆರೆಯವರು 'ಗೀತಾ ನಾಗಭೂಷಣ ಅವರ ಕಥೆಗಳು' ಎಂಬ ಶೀರ್ಷಿಕೆಯಲ್ಲಿ

ಗೀತಾರವರ ಕಥೆಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಗೀತಾ ನಾಗಭೂಷಣರವರು ಬರೆಯುವ ಸಂದರ್ಭದಲ್ಲಿ ಹಲವಾರು ಕಥೆಗಾರ್ತಿಯರು ಕಥೆ ಬರೆಯುತ್ತಿದ್ದರು. ಅಂತವರಲ್ಲಿ ಇವರು ಮುಖ್ಯರು ಎಂದು ತಿಳಿಸುತ್ತಾರೆ. ಮೂಲಕಥೆಗೆ ಆಯ್ಕೆ ಮಾಡಿಕೊಂಡ ವಸ್ತುಗಳನ್ನು ಭಿನ್ನವಾಗಿ ಅಭಿವ್ಯಕ್ತಿಸುವವರಲ್ಲಿ ಇವರು ಭಿನ್ನರು ಎಂದು ವಿಶ್ಲೇಷಿಸುತ್ತಾರೆ. ಗೀತಾ ನಾಗಭೂಷಣರವರ ಕಥೆಗಳು ಸ್ತ್ರೀವಾದವನ್ನು ಅವಾಹಿಸಿಕೊಂಡು ಹುಟ್ಟಿದವುಗಳಲ್ಲ ಎನ್ನುತ್ತಾರೆ ರಹಮತ್ ತರೀಕೆರೆ. ಇವರ ಕಥನಕ್ರಮವನ್ನು ಕುರಿತು ಹೇಳುತ್ತಾ 'ಗೀತಾರವರ ಕಥನಕ್ರಮ ದಲಿತ-ಬಂಡಾಯದ್ದಾಗಿದೆ. ದುರ್ಬಲವಾದ ಬದುಕು ಪ್ರಬಲವಾಗಬೇಕು ಎಂಬ ಆಶಯದೊಂದಿಗೆ ಗೀತಾರವರು ಕಥೆಗಳನ್ನು ರಚಿಸಿದ್ದಾರೆಂಬ ಅಭಿಪ್ರಾಯಪಡುತ್ತಾರೆ. ಗೀತಾನಾಗಭೂಷಣರವರ ಬರಹದ ಮಿತಿಗಳನ್ನು ಈ ಲೇಖನದಲ್ಲಿ ಪಟ್ಟಿ ಮಾಡಿದ್ದಾರೆ. ಮತ್ತೆ ಅದೇ ಮಿತಿಗಳನ್ನು ಮೀರಿ ಬರೆಯಬಲ್ಲರು ಎಂಬಂತಹ ಸಕಾರಾತ್ಮಕ ಸಂದೇಶವನ್ನು ತಿಳಿಸಿದ್ದಾರೆ.

ಎನ್.ಗಾಯಿತ್ರಿಯವರು 'ಗೀತಾರ ಸಣ್ಣ ಕಥೆಗಳು: ಅನುಭವ ಲೋಕದ ಅನಾವರಣ' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಲೇಖನವನ್ನು 'ಗೀತಾ ನಾಗಭೂಷಣ ಮಹಿಳಾ ಮಾರ್ಗ' ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಇವರು ಗೀತಾ ನಾಗಭೂಷಣರವರ ಕಥೆಗಳನ್ನು ಕುರಿತು ಅವರ ಕಥೆಗಳಲ್ಲಿ ಬರುವ ಸಮಾಜ ಕೇದಿಗೆಯ ಬನದಲ್ಲಿನ ಮುಳ್ಳುಗಳಂತೆ ಚಿತ್ರಿಸುತ್ತಾರೆ ಎಂಬ ಅಭಿಪ್ರಾಯ ಲೇಖಕರರು. ಗೀತಾರವರು ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾಗದಿರುವ ಹೊಸ-ಹೊಸ ತಾಜಾ ಅನುಭವವನ್ನು ಕೂಡುವವರು ಆಗುತ್ತಾರೆ ಎಂದಿದ್ದಾರೆ. ಸ್ವತಂತ್ರ ಭಾರತದಲ್ಲಿ ನಡೆದ ಸಾಮಾಜಿಕ ಬದಲಾವಣೆಗಳಿಂದ ದಲಿತ ಜಗತ್ತಿನಲ್ಲೂ ಸಂಚಲನವೊಂದು ಮೂಡಿದೆ. ಶೋಷಣೆಯ ಜೊತೆ-ಜೊತೆಗೆ ಶೋಷಿತ ಸಮುದಾಯದ ಜಾಗೃತಿ, ಎಚ್ಚರದ ಎಳೆಗಳನ್ನು ದಾಖಲಿಸುವ ಕೆಲಸವನ್ನು ಗೀತಾ ನಾಗಭೂಷಣರವರು ಮಾಡಿದ್ದಾರೆಂಬ ಭಾವನೆ ಲೇಖಕಿಯವರದು. ಕಥೆಗಾರ್ತಿ ಬಳಸಿಕೊಂಡ ವರ್ಗಸಂಘರ್ಷವನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ,

ಗೌಡ ಕುಲಕರ್ಣಿ, ಶಾನುಭೋಗ, ಮುಂತಾದವರ ಕೃತ್ಯಗಳನ್ನು ಇಲ್ಲಿ ಸ್ಮರಿಸಿ ಪ್ರಸ್ತುತ ಸಂಶೋಧನೆಗೂ ಕೂಡ ಸಹಕಾರಿಯಾಗುವ ರೀತಿಯಲ್ಲಿ ಈ ಲೇಖನವಿದೆ. ಅರ್ಜುನಗೊಳಸುಗಿಯವರು 'ದಲಿತ ಜಗತ್ತನ್ನು ಅನಾವರಣಗೊಳಿಸಿದ ಕತೆಗಾರ್ತಿ' ಎಂಬ ಶೀರ್ಷಿಕೆಯ ಲೇಖನವೊಂದನ್ನು 'ಗೀತಾ ನಾಗಭೂಷಣ ಮಹಿಳಾ ಮಾರ್ಗ' ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. 'ಗೀತಾ ನಾಗಭೂಷಣ ಮೂವತ್ತೈದಕ್ಕೂ ಹೆಚ್ಚು ಕೃತಿಗಳನ್ನು ಬರೆಯದೇ ಹೋಗಿದ್ದರೆ ದಲಿತ ಜಗತ್ತಿನ ಬದುಕು ಕಳಕೊಂಡವರ ಗೋಳು

ಅನಾವರಣಗೊಳ್ಳುತ್ತಿರಲಿಲ್ಲ. ಮಹಿಳೆ ಶಿಕ್ಷಣದಿಂದ ವಂಚಿತಳಾಗಿರುವ ಸ್ವಾತಂತ್ರ್ಯ ಪೂರ್ವದ ಸಂದರ್ಭದಲ್ಲಿ ದಲಿತ ಮಹಿಳೆಯೊಬ್ಬಳು ಓದಿ, ದಿಟ್ಟತನದಿಂದ ಎರಡೂ ವರ್ಗಗಳ ಬದುಕಿನ ವಾಸ್ತವ ಸಂಗತಿಗಳನ್ನು ತೆರೆದಿಡಲು ಮಾಡಿದೆ. ಧೈರ್ಯ ಸಾಹಸ ಮನನೀಯವಾದುದು. ವೇದನೆಯಿಂದ ಬದುಕು ಸಾಗಿಸುವ ಮಹಿಳೆಯರ ಧ್ವನಿಯಾಗಿ ದಲಿತ ಮಹಿಳಾ ಸಂವೇದನೆಯ ಎಳೆಗಳನ್ನು ಬಿಚ್ಚಿಟ್ಟ ಕ್ರಮ ಸಾರ್ಥಕ ಎಂದೆನಿಸುತ್ತದೆ' ಎಂಬ ಲೇಖಕರ ಈ ಮೇಲಿನ ಮಾತುಗಳು ಅಕ್ಷರಶ ಸತ್ಯವಾದವುಗಳು. ಅರ್ಜುನ ಗೊಳಸಂಗಿಯವರು ಗೀತಾ ನಾಗಭೂಷಣರವರ ಕೆಲವು ಕಥೆಗಳನನ್ನು ಉದಾಹರಿಸುವುದರ ಮೂಲಕ ಅಲ್ಲಿ ಕಂಡುಬರುವ ಮೇಲುವರ್ಗದ ಪರುಷರು ಕೆಳಜಾತಿಯ ಮಹಿಳೆಯರನ್ನು ಯಾವ ರೀತಿಯಲ್ಲಿ ಲೈಂಗಿಕವಾಗಿ, ಶೋಷಣೆ ಮಾಡುತ್ತಿದ್ದರು ಎಂಬುದನ್ನು ಅತೀ ಸೂಕ್ಷ್ಮವಾಗಿ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಇಲ್ಲಿ ಬಹು ಮುಖ್ಯವಾಗಿ ಗೊಳಸಂಗಿಯವರು ಗುರುತಿಸಿರುವುದೇನೆಂದರೆ ಕೆಳವರ್ಗದ ಪುರುಷರಿಗೆ ಕ್ಷಮಿಸುವ ಗುಣವಿದೆ ಎಂಬುದನ್ನು ಕತೆಯ ಮೂಲಕವಾಗಿ ಉದಾಹರಿಸಿರುವುದು ಮನೋಜ್ಞವಾಗಿ ಚಿತ್ರಿಸಿರುವುದು ಈ ತರಹದ ಹೊಸ-ಹೊಸ ಹೊಳಪುಗಳು ಪ್ರಸ್ತುತ ಸಂಶೋಧನೆಗೆ ಪೂರಕವಾಗಿವೆ.

ಸರಸ್ವತಿ ಚಿಮ್ಮಲಗಿಯವರು ಸಂಪಾದಕತ್ವದಲ್ಲಿ 'ಗೀತಾ ನಾಗಭೂಷಣ ಕಲಬುರ್ಗಿಯ ಸ್ಪಂದನ' ಎಂಬ ಕೃತಿಯನ್ನು ಹೊರತಂದಿದ್ದಾರೆ. ಇದರಲ್ಲಿ 'ಚಿತ್ರ ಶೇಖರ ಕಂಠಿ'ಯವರ ಬರೆದಂತಹ 'ಗೀತಾ ನಾಗಭೂಷಣರ ಕಥೆಗಳಲ್ಲಿ ಪ್ರಾದೇಶಿಕತೆ' ಎಂಬ ಲೇಖನವು ಪ್ರಸ್ತುತ ಸಂಶೋಧನೆಗೆ ಉಪಯುಕ್ತವಾಗಿದೆ ಈ ಲೇಖನದಲ್ಲಿ ಗೀತಾರವರ ಕಥೆಗಳು ಒಳಗೊಂಡಿರುವ ಪ್ರದೇಶ ಯಾವುದು? ಬಳಕೆ ಮಾಡಿಕೊಂಡಿರುವ ಭಾಷೆ ಯಾವುದು? ಇವರ ಬರವಣಿಗೆಯ ಮೇಲೆ ಯಾರ ಪ್ರಭಾವ ಬೀರಿದೆ? ಅವರ ಆಹಾರ, ಉಡುಗೆ-ತೊಡುಗೆ ಸಂಸ್ಕೃತಿಯ ವಿವರವಾದ ಮಾಹಿತಿ ಈ ಲೇಖನದಲ್ಲಿದೆ. ಪ್ರಸ್ತುತ ಸಂಶೋಧನೆಯಲ್ಲಿ ಮೂರನೆಯ ಅಧ್ಯಾಯನವು ಮೂವರು ಕಥೆಗಾರ್ತಿಯರ ಪ್ರಾದೇಶಿಕತೆಯನ್ನು ಗುರುತಿಸುವುದಾಗಿದೆ. ಆದ್ದರಿಂದ ಈ ಲೇಖನ ಸಂಶೋಧನೆಗೆ ಪೂರವಾದದ್ದಾಗಿದೆ. ಕಥೆಗಳಲ್ಲಿ ಭಾಷೆ ಹೇಗಿದೆ? ಹೇಗೆ ಅಭಿವ್ಯಕ್ತಿಗೊಂಡಿದೆ, ಅಲ್ಲಿರುವ ಪ್ರದೇಶವೂ ಕೂಡ ಹೇಗೆ ಅಭಿವ್ಯಕ್ತಿಗೊಂಡಿದೆ ಎಂದು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ : ಎರಡು

ಅಧ್ಯಯನದ ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ : ಎರಡು

ಅಭಿವ್ಯಕ್ತಿಯ ಪರಿಕಲ್ಪನಾತ್ಮಕ ಚರ್ಚೆ

ಮಾನವನು ಸುಪ್ತಭಾವನೆಗಳನ್ನು ಹೊರಚೆಲ್ಲುವುದನ್ನು ಬಹು ಹಿಂದಿನಿಂದಲೂ ಆರಂಭಿಸಿರುವನು. ಒಂಗರ್ಥದಲ್ಲಿ ಮಾನವನ ಬದುಕಿಗೂ ಮತ್ತು ಅಭಿವ್ಯಕ್ತಿಗೂ ಅವಿನಾಭವ ಸಂಬಂಧವಿದೆ. ಮಾನವನ ಬದುಕು ಅಭಿವ್ಯಕ್ತಿಯ ರೂಪಕವಾಗಿದೆ. ಅಭಿವ್ಯಕ್ತಿಯನ್ನು ತೋರದ ಮಾನವ ಜಗತ್ತಿನಲ್ಲಿ ಕಾಣುವುದಿಲ್ಲ. ಈ ದೃಷ್ಟಿಯಿಂದ ಅಭಿವ್ಯಕ್ತಿ ಯಾವಾಗ ಉಗಮವಾಯಿತು ಎಂಬುದನ್ನು ನಿಖರವಾಗಿ ತಿಳಿಸುವುದು ಕಷ್ಟಕರ. ಮಾತುಗಳಷ್ಟನ್ನೆ ಗಮನದಲ್ಲಿಟ್ಟು ಅಭಿವ್ಯಕ್ತಿಯ ಉಗಮವನ್ನು ತಿಳಿಸುವುದಾದರೆ ಮಾತುಗಳೊಂದಿಗೆ ಮಾನವನ ಭಾವನೆಗಳು ಅಭಿವ್ಯಕ್ತಿಯ ರೂಪದಲ್ಲಿ ಆರಂಭವಾಗಿವೆ ಎಂಬ ತರ್ಕಕ್ಕೆ ಬರಬಹುದು. ಆದರೆ ಅಭಿವ್ಯಕ್ತಿ ಕೇವಲ ಮಾತುಗಳಿಗೆ ಸೀಮಿತವಲ್ಲ ಅದು ಮಾನವನ ಶಾರೀರಿಕ ಚಟುವಟಿಕೆಗಳ ಮೂಲಕವೂ ಒಳಮನಸ್ಸು ಹೊರಹೊಮ್ಮುತ್ತಿರುತ್ತದೆ. ಹೀಗಾಗಿ ಮಾನವನ ಉಗಮದೊಂದಿಗೆ ಅಭಿವ್ಯಕ್ತಿಯು ಉಗಮವಾಗಿದೆಯೆಂದು ನಿರ್ಧರಿಸಿದರೆ ದೋಷಗಳಿರುವುದಿಲ್ಲ.

ಅಭಿವ್ಯಕ್ತಿ ಕೇವಲ ಮಾನವನಿಗೆ ಸೀಮಿತವಲ್ಲ. ಜೀವಜಗತ್ತು ಹಲವು ರೂಪದಲ್ಲಿ ಭಾವನೆಗಳನ್ನು ಅಭಿವ್ಯಕ್ತಿ ಪಡಿಸುತ್ತಿರುತ್ತದೆ. ಪ್ರಾಣಿಗಳ ಜಗತ್ತಿನಲ್ಲಿ ಅಭಿವ್ಯಕ್ತಿ ಹಾಸುಹೊಕ್ಕಾಗಿದೆ. ಇತ್ತೀಚಿನ ಅಧ್ಯಯನಗಳಲ್ಲಿ ಸಸ್ಯಜಗತ್ತಿನಲ್ಲಿ ಅಭಿವ್ಯಕ್ತಿ ರೂಪಕಗಳು ಶೋಧಿಸಲ್ಪಟ್ಟಿರುವುದು ಗ್ರಹಿತವಾಗಿರುವ ವಿಷಯವಾಗಿದೆ. ಅಭಿವ್ಯಕ್ತಿಯು ಪ್ರಾಣಿಜಗತ್ತಿನಲ್ಲಂತೂ ಆಂಗಿಕ ಚಟುವಟಿಕೆಗಳ ಮೂಲಕ ಪ್ರಕಟವಾಗುತ್ತಿರುವುದು ವೇದ್ಯವಾದ ಸಂಗತಿ. ಈ ದೃಷ್ಟಿಯಿಂದ ಅಭಿವ್ಯಕ್ತಿಯೆಂಬುದು ಒಂದು ವಿಶಾಲ ತಳಪಾಯದಲ್ಲಿ ಬೆಳೆದಿರುವ ಸೂಕ್ಷ್ಮದ ಪರಿಕಲ್ಪನೆ.

ಅಭಿವ್ಯಕ್ತಿಯ ಉಗಮ ಎಂದಾಯಿತು? ಹೇಗಾಯಿತು? ಅದು ಹೇಗಿದೆ? ಅದರ ಲಕ್ಷಣ ಸ್ವರೂಪಗಳೇನು? ಎಂಬುವುಗಳ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ನೀಡುವುದು

ಕಷ್ಟಸಾಧ್ಯ. ಮಾನವ ಕುಲ ಎಂದು ಬೆಳಕಿಗೆ ಬಂದಿತೋ, ಅಂದಿನಿಂದಲೇ ಅಭಿವ್ಯಕ್ತಿಯು ಉಗಮವಾಗಿದೆ ಎಂದು ಹೇಳಬಹುದು. ಪ್ರಾಣಿಗಳಲ್ಲಿ ಅಭಿವ್ಯಕ್ತಿ ಕಂಡುಬರುವುದಿಲ್ಲ ಎಂದಲ್ಲ. ತಾಯಿ ಕರುವಿಗೆ ಜನ್ಮ ನೀಡಿದಾಗ ಕರುವನ್ನು ಪ್ರೀತಿಸುವ ದೃಶ್ಯಗಳು, ಕರು ತಾಯಿಯ ಮೊಲೆಹಾಲನ್ನು ಕುಡಿಯಲು ಹಪಹಪಿಸುವುದು ಕೂಡ ಅಭಿವ್ಯಕ್ತಿ. 'ಇದು ಒಂದು ರೀತಿಯ ಸಮೂಹ ಮಾಧ್ಯಮ' ಮನಸ್ಸಿನ ಭಾವನೆಗಳನ್ನು ಮತ್ತೊಬ್ಬರಿಗೆ ಮತ್ತೊಂದೆಡೆಗೆ ತಿಳಿಸುವ, ಹೇಳುವ ಕೊಂಡೊಯ್ಯುವ ಕೆಲಸ ಮಾಡುತ್ತದೆ. ಆದ್ದರಿಂದ ಅಭಿವ್ಯಕ್ತಿಯನ್ನು 'ಚಾಲಕ'ನೆಂದು ಕರೆದರೂ ತಪ್ಪಾಗಲಾರದು. ಭಾವನೆಗಳ ಆಗರವನ್ನು ಮತ್ತೊಬ್ಬರಿಗೆ ತಿಳಿಸುವ ಕೆಲಸ ಮಾಡುವುದರಿಂದ ಸಮೂಹ ಮಾಧ್ಯಮಗಳ ಚಾಲಕವೆಂದು ಕರೆಯಬಹುದು.

ಪ್ರತಿಯೊಂದು ಜೀವರಾಶಿಯು ಅಂತರಾಳದಲ್ಲಿ ಭಾವನೆಗಳ ಆಗರವನ್ನು ಇಟ್ಟುಕೊಂಡು ಹುಟ್ಟಿರುತ್ತವೆ. ಅವುಗಳನ್ನು ಅಭಿವ್ಯಕ್ತಿಸುವ ಮಾದರಿಗಳು ಮಾತ್ರ ಬೇರೆ- ಬೇರೆಯಾಗಿವೆ. ಪ್ರಾಣಿ ಪಕ್ಷಿಗಳ ಸಮೂಹ ಕೂಗುವುದು, ಅರಚುವುದು, ಘರ್ಜಿಸುವುದು; ಯಾವುದಾದರೊಂದರ ಮುಖಾಂತರ ಹೊರಹಾಕುತ್ತವೆ. ಕೋಗಿಲೆ ಕೂಗುತ್ತದೆ, ಹುಲಿ-ಸಿಂಹಗಳು ಘರ್ಜಿಸುತ್ತವೆ. ಯಾವುದು ಪ್ರೀತಿಯಿಂದ ಕೂಡಿದ ಕೂಗು, ಯಾವುದು ಸಿಟ್ಟು, ಕೋಪ, ಕುಚೇಷ್ಟೇಗಳೆಂದು ಅವುಗಳ ಧ್ವನಿಗಳ ಏರಿಳಿತಗಳ ಮೂಲಕವಾಗಿಯೇ ತಿಳಿಯಬಹುದು. ಮಾನವನಾದವನು ಕೂಡ ಮಂಗನಿಂದ ಮಾನವನೆಂದಾದನೇ ಅಂದಿನಿಂದ ವ್ಯಕ್ತಿಯ ನಡವಳಿಕೆಯ ಮೂಲಕ ಭಾವನೆಗಳ ಲೋಕಕ್ಕೆ ವಿಭಿನ್ನವಾದ ಮಾಧ್ಯಮದ ರೀತಿಯಲ್ಲಿ ತೊಡಗಿಸಿಕೊಂಡರು. ಸಕಲಜೀವರಾಶಿಗಳಿಂದ ಅಭಿವ್ಯಕ್ತಿಗೊಂಡ ಭಾವನೆಗಳು, ಆಸೆ-ಆಕಾಂಕ್ಷೆಗಳು ಸಾಂಕೇತಿಕವಾಗಿರಬಹುದು, ಮೂರ್ತವಾಗಿರಬಹುದು, ಅಮೂರ್ತ-ವಾಗಿರಬಹುದು, ಮಾಧ್ಯಮದ ರೀತಿಯಲ್ಲಿರಬಹುದು ಹಾಗೂ ಕಾಲಾಂತರದಲ್ಲಿ ಅದು ಶಾಬ್ದಿಕವಾಗಿ ನಂತರ ಚಿತ್ರಕಲೆ ರೂಪದಲ್ಲಿ ಇವುಗಳ ಜೊತೆಗೆ ಆಂಗಿಕವಾಗಿಯು ಅಭಿವ್ಯಕ್ತಿ ಕಾಣಿಸಿಕೊಂಡಿದೆ ಎಂದು ಹಂತ - ಹಂತವಾಗಿ ತಿಳಿದುಬರುತ್ತದೆ. ಆಭಿವ್ಯಕ್ತಿಯು ಕಾಲಕ್ಕೆ ತಕ್ಕಂತೆ ತನ್ನನ್ನು ತಾನು ಮುರಿದು ಕಟ್ಟುವ (ಪರಿವರ್ತನೆ) ಬದಲಾವಣೆಗೂ ಒಳಗಾಗಿದೆ. ಅಭಿವ್ಯಕ್ತಿಯು ಹೇಗೆ ಬದಲಾವಣೆಯನ್ನು ಹೊಂದಿದೆ. ಅವುಗಳ ವಿದ್ವಾಂಸರಗಳ ವ್ಯಾಖ್ಯಾನ ಅರ್ಥಗಳೇನು ಎಂಬುದನ್ನು ತಿಳಿಯುವುದು ಸೂಕ್ತವಾಗಿದೆ.

ಅಭಿವ್ಯಕ್ತಿಯ ವ್ಯಾಖ್ಯಾನಗಳು

ಕನ್ನಡದ ಅಭಿವ್ಯಕ್ತಿ ಎಂಬ ಪದವನ್ನು ಇಂಗ್ಲೀಷ್ ಭಾಷೆಯಲ್ಲಿ Expession ಎಂದು ಕರೆಯುತ್ತಾರೆ. Expession ಎಂಬ ಪದವನ್ನು ಮೊಟ್ಟಮೊದಲು ಕಾನೂನಾತ್ಮಕವಾಗಿ ೧೫ನೇ ಶತಮಾನದಲ್ಲಿ ಬಳಸಿದವನು 'ಜಾನ್‌ಡೂಯಿ' ಎಂದು ತಿಳಿದುಬಂದಿದೆ. ಜಾನ್‌ಡೂಯಿಯವರು 'ಅಭಿವ್ಯಕ್ತಿ' ಎಂಬ ಪದಕ್ಕೆ ವಿಶೇಷವಾದ ಅರ್ಥವನ್ನು ನೀಡಿದ್ದಾರೆ.

- ಒಬ್ಬ ವ್ಯಕ್ತಿಯು ತನ್ನ ಮುಖದ ಮುಖಾಂತರವಾಗಿ ತನ್ನ ಅಂತರಾಳದಲ್ಲಿಡಗಿರುವ ಭಾವನೆಗಳನ್ನು ವ್ಯಕ್ತಪಡಿಸುವ ಪ್ರಕ್ರಿಯೆಯೇ ಅಭಿವ್ಯಕ್ತಿ ಎಂದಿದ್ದಾರೆ.
- The way someone's face looks that shows emotions and feelings
- "The act of making your thought feelings, etc.... know by speech, writing or some other method: The act of expression something. A mode, means or use of significant representation or symbolism; especially; felicition or vivid indication or depiction of mood or sentiment.
- ಗ್ರಹಿಸಿ ಅರ್ಥ ಮಾಡಿಕೊಂಡಿರುವ ವಿಷಯವನ್ನು ಅಥವಾ ತಮ್ಮ ಆಲೋಚನೆ, ಕಲ್ಪನೆ, ಅನಿಸಿಕೆ, ಅಭಿಪ್ರಾಯಗಳನ್ನು ಅರ್ಥಬದ್ಧ, ಸುಸಂಬದ್ಧ ವಾಕ್ಯಗಳ ಮೂಲಕ ಮಾತಿನಲ್ಲಾಗಲಿ, ಕೈಬರಹದಲ್ಲಾಗಲಿ, ಅಭಿನಯದ ಮೂಲಕವಾಗಲಿ ಪ್ರಕಟಪಡಿಸುವ ಕ್ರಿಯೆಯೇ ಅಭಿವ್ಯಕ್ತಿ.
- ಒಂದು ವಿಷಯ, ಅನಿಸಿಕೆ, ಅಭಿಪ್ರಾಯಗಳಿಗೆ ಭಾಷೆಯನ್ನು ಸುಸಂಬದ್ಧವಾಗಿ ತೊಡಿಸಿ/ರಚಿಸಿ ವ್ಯಕ್ತಗೊಳಿಸುವ ಕೌಶಲ್ಯವೇ ಅಭಿವ್ಯಕ್ತಿ.

"ವ್ಯಕ್ತಿಯ ತನ್ನ ಅನುಭವ, ಅಮೂರ್ತವಾದ ಭಾವನೆ, ಆಲೋಚನೆ, ಬಯಕೆ ಚಿಂತನೆಗಳಿಗೆ ಸಾಮಾಜಿಕವಾಗಿ ಅಂಗೀಕೃತವಾದ ಯಾವುದೇ ಒಂದು ಮಾಧ್ಯಮದಲ್ಲಿ ತಕ್ಕಮಟ್ಟಿಗೆ ಖಚಿತವಾದ, ಮೂರ್ತವಾದ ರೂಪವನ್ನು ಕೊಡುವ ಕ್ರಿಯೆಯನ್ನು ಅಭಿವ್ಯಕ್ತಿ ಎನ್ನಬಹುದಾಗಿದೆ."[೧] ಇದರ ಪ್ರಮುಖವಾದ ಉದ್ದೇಶವೆಂದರೆ ಅನುಭವ ಇತ್ಯಾದಿಗಳನ್ನು ಸಮಾಜದ ಇತರರೊಂದಿಗೆ ಹಂಚಿಕೊಳ್ಳುವುದು; ಆಲೋಚನೆ ಚಿಂತನೆಗಳತ್ತ ಒಲಿಸಿಕೊಳ್ಳುವುದು. ಈ ಅಭಿವ್ಯಕ್ತಿಯು ನಾಲ್ಕು ರೂಪಗಳಲ್ಲಿ ಪ್ರತಿಬಿಂಬಿತವಾಗುತ್ತಾ ಹೋಗುತ್ತದೆ. ಮೊದಲನೆಯದಾಗಿ ಭಾಷೆ, ಮಾತು, ಸಂಭಾಷಣೆ, ಭಾಷಣ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ್ದಾಗಿದೆ. ನಂತರ ಶಿಲೆ-ಲೋಹ ಮುಂತಾದವು. ಶಿಲ್ಪ ಮತ್ತು ವಸ್ತುಗಳನ್ನು ಆಯಾ ವ್ಯಕ್ತಿಗಳು ಅವುಗಳನ್ನು ಮನಃಪಟಲದಲ್ಲಿರುವ ಚಿತ್ರಗಳನ್ನಾಗಿ ನಿರೂಪಿಸುತ್ತಾ ಅಥವಾ ಕೆತ್ತುತ್ತಾರೆ. ಮುಂದುವರೆದು ಧ್ವನಿ ವಿನ್ಯಾಸ ಮತ್ತು ವಾದ್ಯಗಳು ಹಾಡುಗಾರನಾದವನು ವಾದ್ಯಗಾರನಾದವನು ತಮ್ಮ-ತಮ್ಮ ಹಾಡು ರಾಗ, ತಾಳ, ಲಯ ಇತ್ಯಾದಿಗಳಿಗೆ ಸಂಬಂಧಿಸಿದಂತೆ ತಮ್ಮ ಅನುಭವಗಳ ಭಾವನೆಗಳನ್ನು ಅಭಿವ್ಯಕ್ತಿಸುತ್ತಾ

ಸಾಮಾಜಿಕರನ್ನು ತನ್ನ ಕಡೆ ಸೆಳೆಯುವ ಪ್ರಯತ್ನ ಮಾಡುತ್ತಾರೆ. ಕೊನೆಯದಾಗಿ ದೇಹವಿನ್ಯಾಸ, ಅಂಗ-ಭಂಗಿಗಳು ಇವು ಪ್ರಮುಖವಾಗಿ ನಾಟ್ಯ ಅಥವಾ ನೃತ್ಯ ಮಾಡುವವರಿಗೆ ಹಾಗೂ ನಾಟಕಗಳಿಗೆ ಸಂಬಂಧಿಸಿದ್ದಾಗಿದೆ. ನೃತ್ಯವನ್ನು ಮಾಡುವಂತ ವ್ಯಕ್ತಿ ಒಂದೇ ರೀತಿಯಲ್ಲಿ ನೃತ್ಯ ಮಾಡುವುದಿಲ್ಲ. ಯಾವ-ಯಾವ ರೀತಿಯಾದ ಹಾಡಿಗೆ ತಾಳಕ್ಕೆ ತಕ್ಕಂತೆ ತನ್ನ ಭಾವನೆಗಳ ಅಭಿವ್ಯಕ್ತಿಯ ಮುಖಾಂತರ ನೃತ್ಯ ಮಾಡುತ್ತಾರೆ.

'ಕನಸು' ಕೂಡ ಒಂದು ಅಭಿವ್ಯಕ್ತಿಯಾದರೂ ಅದು ವೈಯಕ್ತಿಕ ಮಟ್ಟದಲ್ಲಷ್ಟೇ ನಿಲ್ಲುತ್ತದೆ. ಸಾಹಿತ್ಯ ವಿಮರ್ಶೆಯಲ್ಲಿ 'ಅಭಿವ್ಯಕ್ತಿ' ಎಂಬ ಪದ ಅನುಭವಗಳನ್ನು ಓದುಗಳು ತಲುಪಿಸಬಲ್ಲ ಮತ್ತು ಅದಕ್ಕೆ ಸಹಾಯಕವಾಗುವ ಲೇಖಕರ ಭಾಷೆ, ಸಾಮರ್ಥ್ಯ, ಶೈಲಿ ಕೃತಿಯ ಪ್ರಕಾರ ಇವೆಲ್ಲವನ್ನೂ ಒಳಗೊಳ್ಳುವಂತೆ ಅಥವಾ ಇವುಗಳಲ್ಲಿ ಯಾವುದಾದರೊಂದು ಅಂಶಕ್ಕೆ ಅನ್ವಯವಾಗುವಂತೆ ಬಳಕೆಯಾಗುತ್ತದೆ.

ಅನುಭವವು ತೀವ್ರವಾದಂತೆಲ್ಲ ಅಂತರಂಗ ಜಗತ್ತು ಹೆಚ್ಚು ಶ್ರೀಮಂತವೂ ನಿಗೂಢತರವೂ ಆಗುವುದರಿಂದ ಅಭಿವ್ಯಕ್ತಿಯ ಸಾಧನಗಳಾದ ಬಾಹ್ಯಜಗತ್ತಿನ ರೂಪಸಾಮಾಗ್ರಿಗಳು ವಿಫುಲವಾಗುತ್ತ ಹೋಗುತ್ತವೆ. ದೇವತೆಗಳಿಂದ ಹಿಡಿದು ದಾನವ, ಮಾನವ, ಪಶು, ಪ್ರಾಣಿಗಳ ತನಕ ಭೂಮದಿಂದ ಹಿಡಿದು ಕ್ಷುದ್ರದತನಕ ಎಲ್ಲವೂ ಅಂತರಂಗದ ಅನುಭವಾಭಿವ್ಯಕ್ತಿಯ ಸಾಧನವಾಗುತ್ತದೆ ಎಂಬಂತೆ ಅಭಿವ್ಯಕ್ತಿಯ ಅರ್ಥವನ್ನು ತುಂಬ ಹಿಗ್ಗಿಸುವುದು ವಿಮರ್ಶೆಯಲ್ಲಿ ಗೊಂದಲಗಳನಷ್ಟೆ ಹುಟ್ಟಿಸಬಹುದು. ಶಾಬ್ಧಿಕ ಅಭಿವ್ಯಕ್ತಿಯನ್ನು ಕುರಿತು ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಕುತೂಹಲಕರ ಚಿಂತನೆಯನ್ನು ಕಾಣಬಹುದು. 'ಅಭಿನವಗುಪ್ತನು ಸಹೃದಯನ ಮನಸ್ಸಿನಲ್ಲಿ ಸುಪ್ತವಾಗಿದ್ದದ್ದು ಸ್ಫುಟವಾಗುವುದೇ 'ಅಭಿವ್ಯಕ್ತಿ' ಎಂದು ಅಭಿನವ ಭಾರತಿಯಲ್ಲಿ ಹೇಳುತ್ತಾನೆ'. ಹಾಗೆಯೇ ಬೇಂದ್ರೆಯವರ ಪರಾಗ ಕವನವೂ ಓದುಗರು ಮತ್ತು ಕವಿತೆಯ ಸಂಬಂಧವನ್ನು ದುಂಬಿ ಹೂಗಳ ಸಂಬಂಧದಂತೆ ಪರಿಭಾವಿಸಿ 'ನಿನ್ನ ಮುಖಸ್ಪರ್ಶವೂ ಸಾಕು ಹೊಸ ಸೃಷ್ಟಿಯೆ ಬರಬಹುದು' ಎನ್ನುತ್ತದೆ. ಅಭಿವ್ಯಕ್ತಿಯ ಜವಾಬ್ದಾರಿ ಕೇವಲ ಕವಿಯದು ಮಾತ್ರವಲ್ಲ ಓದುಗರದ್ದೂ ಹೌದು.

ಶಾಬ್ಧಿಕ ಅಭಿವ್ಯಕ್ತಿ ಕವಿಗೆ ಎಂದೂ ಅಪೂರ್ಣತೆಯ ಭಾವವನ್ನೇ ತರುತ್ತದೆ. ಎಂಬ ಕುವೆಂಪು ಮಾತನ್ನು ಗಮನಿಸಿ ಅಭಿವ್ಯಕ್ತಿಸಬೇಕಾದ ಸಂಗತಿ-ಸತ್ಯ ಭಾಷೆಯಾಚೆಗೆ ಇದೆ. ಅದನ್ನು ಭಾಷೆಯಲ್ಲಿ ಹೇಳುವುದೆಂದರೆ ಶಬ್ಧಕ್ಕೆ ಲಜ್ಜೆಯಾಗುತ್ತದೆ ಎನ್ನುವ ಧೋರಣೆಯನ್ನು ವಚನಗಳಲ್ಲಿ ಕಾಣಬಹುದು. ಅನುಭವವನ್ನು ಸಮಗ್ರವಾಗಿ ಹಿಡಿದಿಟ್ಟು ಓದುಗರಿಗೆ, ಕೇಳುಗರಿಗೆ ಸಲುಪಿಸಲಾಗದ್ದಕ್ಕೆ ಶಬ್ಧಸೂತಕ ಎನ್ನುವ ಮಾತು ಹುಟ್ಟಿಕೊಂಡಿದೆ.

ಶಾಬ್ಧಿಕ ಅಭಿವ್ಯಕ್ತಿಯನ್ನು ಸಾಧಿತರೂಪವೆಂದು ಪರಿಗಣಿಸುವುದಕ್ಕಿಂತ ಚಲನಶೀಲ ಪ್ರಕ್ರಿಯೆ ಎಂದು ನೋಡುವುದು ಉಪಯುಕ್ತ. ವಕ್ತೃವಿಗೆ ಒಂದು ವಿವಕ್ಷ ಅಥವಾ ಉದ್ದೇಶ ಇರುವಂತೆ ಶ್ರೋತೃ ಓದುಗರಿಗೂ ವಿವಕ್ಷಗಳಿರುತ್ತವೆ. ಬೇರೆ-ಬೇರೆ ಕಾಲದ ಶಾಬ್ಧಿಕ ರಚನೆಗಳು ನಮ್ಮ ಕಾಲದಲ್ಲಿ ಹೊಸ ಅರ್ಥ ಸಾಧ್ಯತೆಗಳೊಂದಿಗೆ ತೆರೆದುಕೊಳ್ಳುತ್ತವೆ. ಅಭಿವ್ಯಕ್ತಿಗೆ ಆಯ್ದುಕೊಳ್ಳುವ ಮಾಧ್ಯಮ, ಪ್ರಕಾರ, ಭಾಷೆಯ ಸ್ವರೂಪ ಸಮಕಾಲೀನ ಅಧಿಕಾರ ವಿನ್ಯಾಸ ವೈಯಕ್ತಿಕವಾದ ದೈಹಿಕ, ಮಾನಸಿಕ, ಬೌದ್ಧಿಕ ಲಕ್ಷಣಗಳು ಇವೆಲ್ಲ ಅಭಿವ್ಯಕ್ತಿಯ ಸ್ವರೂಪವನ್ನು ನಿರ್ಧರಿಸುತ್ತವೆ. ನಿಯಂತ್ರಿಸುತ್ತವೆ. ಛಂದಸ್ಸು, ವಾಕ್ಯರಚನೆ ಭಾಷೆಯ ಶಬ್ಧಸಂಪತ್ತು ಇವು ಅಭಿವ್ಯಕ್ತಿಯನ್ನು ನಿರ್ಧರಿಸುವುದು ಸುಲಭವಾಗಿ ತಿಳಿಯುತ್ತದೆ. ಆದರೆ ಸಮಾಜವೊಂದು ಒಪ್ಪಿಕೊಂಡ ಲೋಕದೃಷ್ಟಿ ವ್ಯಕ್ತಿಗಳ ಗ್ರಹಿಕೆಯನ್ನು ಅಭಿವ್ಯಕ್ತಿ ಕ್ರಮವನ್ನು ಸೂಕ್ಷ್ಮವಾಗಿ ನಿಯಂತ್ರಿಸುತ್ತಿರುತ್ತವೆ. ಯಾವುದೇ ಅಭಿವ್ಯಕ್ತಿ ಅಂಗೀಕೃತ ಗ್ರಹಿಕೆ ನಂಬಿಕೆಗಳನ್ನು ಸ್ಫೋಟಿಸುವಂತೆ ಕಂಡಾಗ ಅಂಥದ್ದನ್ನು ಅದುಮಿಡುವ ದಮನಿಸುವ ಕ್ರಿಯೆಯೂ ಮೊದಲಾಗುತ್ತದೆ. ಧಾರ್ಮಿಕ ಮತ್ತು ರಾಜಕೀಯ ಕಾರಣಗಳಿಂದ ಅಭಿವ್ಯಕ್ತಿಯ ದಮನ ನಡೆದಿರುವುದಕ್ಕೆ ಚರಿತ್ರೆಯಲ್ಲೂ ಸಾಹಿತ್ಯ ಚರಿತ್ರೆಯಲ್ಲೂ ಅಸಂಖ್ಯಾತ ಉದಾಹರಣೆಗಳಿಲ್ಲದಿಲ್ಲ.

'ಸಾಹಿತ್ಯ'ವೆಂಬ ಅಧ್ಯಯನ ವಸ್ತುವಿನ ಕಲ್ಪನೆ ಈ ಶತಮಾನದ ಆರಂಭದಲ್ಲಿ ಇಂಗ್ಲಿಷ್ ಶಿಕ್ಷಣ ಕ್ರಮದಿಂದ ಮೂಡಿತಷ್ಟೆ. ಆ ಕಾಲ್ಪನಿಕ ನಿರ್ವಚನಕ್ಕೆ ಹೊಂದಿಕೆಯಾಗದ ಅಸಂಖ್ಯಾತ ಶಾಬ್ಧಿಕ ಅಭಿವ್ಯಕ್ತಿಗಳು ಶಿಕ್ಷಿತರ ಪ್ರಜ್ಞೆಯಾಚೆಗೆ ಉಳಿದುಬಿಟ್ಟವು. ಇದು ಮಲೆಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪರಂಥಹ ಕಥನಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಈ ಉದಾಹರಣೆಯು ಹೇಗೆ ಒಂದು ಕಾಲದ ಅಂಗೀಕೃತ ಚಿಂತನಾಕ್ರಮ ಕೆಲವು ಅಭಿವ್ಯಕ್ತಿ ರೂಪಗಳನ್ನು ನಿರ್ಲಕ್ಷಸುವಂತೆ ಮಾಡುತ್ತದೆ ಎಂಬುದನ್ನು ಸೂಚಿಸುತ್ತದೆ. ಶಾಬ್ಧಿಕ ಮತ್ತು ಕಲಾತ್ಮಕ ಅಭಿವ್ಯಕ್ತಿಗಳಿಗೆ ಈ ಶತಮಾನದ ಕೊನೆಯ ಕಾಲದಲ್ಲಿ ತೀವ್ರವಾದ ಅಪಾಯ ಒದಗಿದೆ. ಸಮೂಹ ಮಾಧ್ಯಮಗಳ ಬೆಳವಣಿಗೆ ಮತ್ತು ವಾಣಿಜ್ಯ ಆಸಕ್ತಿಗಳು ಕೆಲವು ಬಗೆಯ ಅಭಿವ್ಯಕ್ತಿಗಳನ್ನು ಮಾತ್ರ ಬೆಂಬಲಿಸುತ್ತ ಸ್ಥಳೀಯ ದೇಶೀಯ ಅಭಿವ್ಯಕ್ತಿಗಳು ಕಣ್ಮರೆಯಾಗುತ್ತಿವೆ. ಅಥವಾ ವಾಣಿಜ್ಯ ಮತ್ತು ಸಮೂಹ ಮಾಧ್ಯಮಗಳಿಗೆ ಬೇಡವಾದ ಅಭಿವ್ಯಕ್ತಿಗಳು ಓದುಗರಿಗೆ ತಲುಪುವುದು ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ತಿಳಿಯುತ್ತಿದೆ.

ಅಭಿವ್ಯಕ್ತಿಗೆ ವಿಶಾಲವಾದ ತಳಪಾಯವಿದೆ. ಹತ್ತು-ಹಲವು ಆಯಾಮಗಳಲ್ಲಿ ಅದನ್ನು ವ್ಯಾಖ್ಯಾನಿಸಬಹುದಾಗಿದೆ. ಅಭಿವ್ಯಕ್ತಿಯೆಂಬುದು ಮಾನವನ ಭಾವನೆಗಳನ್ನು ಅಥವಾ

ಯೋಚನೆಗಳನ್ನು ಅಭಿವ್ಯಕ್ತಿ ಎಂದು ಕರೆಯಬಹುದಾಗಿದೆ. ಅಭಿವ್ಯಕ್ತಿಯ ಸಂದರ್ಭದಲ್ಲಿ ಮನುಷ್ಯನ ಮುಖಚರ್ಯೆಯಲ್ಲಿ ಆತನ ಭಾವನೆಗಳು ಅಭಿವ್ಯಕ್ತಿಗೊಳ್ಳುತ್ತಿರುತ್ತವೆ. ಮನುಷ್ಯನ ಮುಖದ ಮೂಲಕ ಅನೇಕ ಭಾವನೆಗಳು, ಚಿಂತನೆಗಳು ಹೊರ ಸೂಚಿಸುತ್ತಿರುತ್ತವೆ. ಆ ಕಾರಣವೇ Englishನಲ್ಲಿ 'face is index of mind' ಅನ್ನುವ ಪ್ರಸಿದ್ದ ನಾಣ್ನುಡಿಯು ಪ್ರಚಲಿತದಲ್ಲಿದೆ. ಮನುಷ್ಯನ ಚಿಂತನೆಗಳು ಭಾವನೆಗಳು ಮೂಲತಃ ಅಭಿವ್ಯಕ್ತಿಗೊಳ್ಳುವುದು ಪದಗಳು, ಕ್ರಿಯೆಗಳು ಅಥವಾ ಕಲಾತ್ಮಕ ಚಟುವಟಿಕೆಗಳ ಎಂದಾದರೂ ಆ ಎಲ್ಲಾ ಭಾವನೆಗಳು ಒಪ್ಪಂದದಲ್ಲಿ ಮಾನವನ ಮುಖಚರ್ಯೆ ಇತರ ಅಂಗಾಂಗಳ ಮೂಲಕ ಪ್ರಕಟವಾಗುತ್ತಿರುತ್ತವೆ. ಸಾಹಿತ್ಯ ಪ್ರಕಾರಗಳಾದ ಕವಿತೆ, ಕಾದಂಬರಿ, ಕಥಾನಕಗಳು, ನಾಟಕ ಇತರೆ ರೂಪಕಗಳಲ್ಲಿ ಮನುಷ್ಯ ಒಳಗಿನ ಭಾವನೆಗಳನ್ನು ಮತ್ತು ಚಿಂತನೆಗಳನ್ನು ಸ್ಫೋಟಿಸುತ್ತಾನೆ.

ಸಾಹಿತ್ಯದ ಮೂಲಕ ವ್ಯಕ್ತಿಯು ತನ್ನ ಚಿಂತನೆಗಳು, ಭಾವನೆಗಳನ್ನು ಪದ್ಯದ ಕ್ರಮದಲ್ಲಿ ದಾಖಲಿಸಿರುವ ಕ್ರಿಯೆಯು ಪ್ರಜ್ಞಾಪೂರ್ವಕವಾಗಿರಬಹುದು, ಅಪ್ರಜ್ಞಾಪೂರ್ವಕವಾಗಿರಬಹುದು. ಸಾಹಿತ್ಯವನ್ನು ಒಂದು ವ್ಯಾಖ್ಯಾನದಲ್ಲಿ ಅಡಕಗೊಳಿಸಲಾಗುವುದಿಲ್ಲ. ಸಾಮಾನ್ಯವಾಗಿ ಸಾಹಿತ್ಯ, ಕೃತಿಕಾರನು ರೂಪಕಗಳು, ಮಾದರಿಗಳು, ಶೈಲಿಗಳು, ಸಂಕೇತಗಳನ್ನು ಪ್ರಜ್ಞಾಪೂರ್ವಕವಾಗಿ ಅಭಿವ್ಯಕ್ತಿಪಡಿಸುತ್ತಾನೆ. ಸಾಹಿತ್ಯವನ್ನು ಗಂಭೀರ ಸೃಜನಾತ್ಮಕವಾಗಿಯೂ, ಜನಪ್ರಿಯ ಸೃಜನಾತ್ಮಕ ರೂಪಕದಲ್ಲಿಯು ಕಾಣಬಹುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಸಾಹಿತ್ಯವನ್ನು ಗಂಭೀರ ಸಾಹಿತ್ಯವಾಗಿ ಪರಿಗಣಿಸಿದರೆ ಕಾಲಮಾನದ ಆಚೀಚೆ ಬರೆಯುತ್ತಿದ್ದ ಡಿಟೆಕ್ಟೀವ್ ಕಾದಂಬರಿ ಕರ್ತ (ರಹಸ್ಯ)ರಾದ ನರಸಿಂಹಯ್ಯನವರನ್ನು ಜನಪ್ರಿಯ ಸಾಹಿತ್ಯಗಳೆಂದು ಪರಿಗಣಿಸಬಹುದು. ಒಂದು ನೂರಕ್ಕೂ ಹೆಚ್ಚು (ಡಿಟೆಕ್ಟಟೀವ್ ಗೂಢಾಚಾರಿ ಕಾದಂಬರಿಗಳನ್ನು ರಚಿಸಿದ ನರಸಿಂಹಯ್ಯನವರು ನವೋದಯ ಮತ್ತು ಪ್ರಗತಿಶೀಲ ಮಧ್ಯದ ಬರಹಗಾರರಾಗಿದ್ದು ಅಧಿಕ ಸಂಖ್ಯೆಯ ಓದುಗಾರರನ್ನು ಗಳಿಸಿದ್ದರು.

ಸಾಹಿತ್ಯ ಮನುಷ್ಯನ ಭಾವನೆಗಳು ಮತ್ತು ಚಿಂತನೆಗಳನ್ನು ಪ್ರಕಟಿಸುವ ಸಂವಹನ ಮಾರ್ಗವನ್ನು ಹಿಡಿದಿರುತ್ತಾನೆ. ಸಂವಹನ ಮೂಲಕ ಕೃತಿಕಾರ ಭಾವನೆ ಮತ್ತು ವಿಚಾರಗಳನ್ನು ಹೊರಹಾಕುವಾಗ ಭಾಷಾಪ್ರತಿಮೆಯನ್ನು ಸಾಧಿಸುವುದು ಅನಿವಾರ್ಯವಾಗಿದೆ. ಬರಹಗಾರರು ಸಂಸ್ಕೃತಿ, ಮೌಲ್ಯ ಮತ್ತು ವಿಚಾರಗಳನ್ನು ಇತರರಿಗೆ ಪ್ರಸ್ತುತಪಡಿಸುತ್ತಿರುವಾಗ ಎದುರುಗೊಳ್ಳುವ ಅಗತ್ಯವಿಲ್ಲ. ಬದಲಿಗೆ ವಿಚಾರಗಳನ್ನು ಓದುಗನಿಗೆ ತಲುಪಿಸಲು ತನ್ನ ಕಡೆಗೆ ಗಮನ ಸೆಳೆಯುತ್ತಾನೆ.

ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ಅಭಿವ್ಯಕ್ತಿಪಡಿಸುವುದಾದರೆ ಪ್ರಥಮವಾಗಿ ಸಂಸ್ಕೃತಿಯನ್ನು ಸರಳವಾಗಿ ಅರ್ಥೈಸಿಕೊಳ್ಳುವುದು ಅಗತ್ಯವಿದೆ. ಸಾಮಾಜಿಕ ಆಚರಣೆ, ಪದ್ಧತಿಗಳು, ರೂಢಿಗಳು, ಕ್ರಮಗಳು, ನಂಬಿಕೆಗಳು ಮುಂತಾದ ಅಂಶಗಳ ಒಳಗೊಂಡಿರುವುದು ಸಂಸ್ಕೃತಿಯೆಂದು ಸರಳವಾಗಿ ಅರ್ಥೈಸಿಕೊಳ್ಳಬಹುದಾಗಿದೆ. ಬರಹಗಾರರು ಸಂಸ್ಕೃತಿಯನ್ನು ಅಭಿವ್ಯಕ್ತಿಪಡಿಸುವಾಗ ಯಾವುದೇ ನಿರ್ದಿಷ್ಟ ಮೌಲ್ಯ ಅಥವಾ ಆಲೋಚನೆಯನ್ನು ಪ್ರಸ್ತುತಪಡಿಸುವುದಿಲ್ಲ. ಬದಲಿಗೆ ವ್ಯವಸ್ಥೆಯೊಳಗಿನ ಮೌಲ್ಯಗಳು ಮತ್ತು ವಿಚಾರಗಳು ಹೇಗೆ ನಿತ್ಯದ ಬದುಕಿನ ಮೇಲೆ ಪ್ರಭಾವಿಸುತ್ತವೆ ಎಂಬುದನ್ನು ಅಭಿವ್ಯಕ್ತಿಪಡಿಸುತ್ತಾನೆ.

ಸ್ತ್ರೀಯ ಸಾಮಾಜಿಕ ಅಭಿವ್ಯಕ್ತಿ

ಭಾವಲೋಕದ ಪ್ರಪಂಚವನ್ನು ಅತ್ಯಂತ ವಿಸ್ತಾರವಾಗಿ, ವಿಶಾಲವಾಗಿ ತನ್ನ ವ್ಯಾಪ್ತಿಯನ್ನು ಮೀರಿ ಅಭಿವ್ಯಕ್ತಿಸಲು ಬರವಣಿಗೆ ಅಥವಾ ಲಿಖಿತಮಾಧ್ಯಮ ಉತ್ತಮಮಾರ್ಗ. ಲಿಖಿತ ಅಭಿವ್ಯಕ್ತಿಯನ್ನು ಗುರುತಿಸಲು ನಮಗಿರುವ ಆಧಾರಗಳೆಂದರೆ, ಸಾವಿರಾರು ವರ್ಷಗಳ ಹಿಂದೆ ಕೆತ್ತಲ್ಪಟ್ಟ ಶಾಸನಗಳು ಬರೆಯಲ್ಪಟ್ಟ ಹಸ್ತಪ್ರತಿಗಳು (ಒಲೆಗರಿಗಳು, ತಾಳೆಗರಿಗಳು) ಇವುಗಳ ಜೊತೆಗೆ ಸಂಸ್ಕೃತ ಭಾಷೆಯಲ್ಲಿ ರಚನೆಗೊಂಡ ಶಾಸ್ತ್ರಗ್ರಂಥಗಳಾದ ವೇದಗಳು, ಉಪನಿಷತ್ತುಗಳು, ಅರಣ್ಯಕಗಳು, ಖಂಡಕಗಳು (ಕಂಡಕಗಳು) ಜೋತಿಷ್ಯ, ವ್ಯಾಕರಣ, ಮನುಸ್ಮೃತಿ, ಛಂದಸ್ಸು, ರಾಮಾಯಣ, ಮಹಾಭಾರತ, ಭಗವದ್ಗೀತೆ, ಮುಂತಾದವುಗಳು. ಈ ಕೃತಿಗಳಲ್ಲಿ ಹೆಚ್ಚು ಅಭಿವ್ಯಕ್ತಿಗೊಂಡ ಕ್ಷೇತ್ರವೆಂದರೆ ಭಾಷೆಯ ದೃಷ್ಟಿಯಿಂದ ಪಂಡಿತರು ಪುರೋಹಿತಶಾಹಿಗಳು, ಅಕ್ಷರಸ್ಥರ ಗ್ರಾಂಥಿಕ ಭಾಷೆ ಪ್ರಭುದ್ದತೆಯ ಮೂಲಕ ಅಭಿವ್ಯಕ್ತಿಯೊಂದಿಗೆ ಅನುಸಂಧಾನವಾಗಿ ರಾಜಶ್ರಯದ ನೆರವಿನಿಂದ ಭದ್ರಪಡಿಸಿಕೊಂಡಿದೆ.

ಮೌಖಿಕವಾಗಿದ್ದ ಭಾವನೆಗಳ ಸಾಹಿತ್ಯ ಕಾಲಾಂತರವಾಗಿ ಲಿಖಿತವಾಗುತ್ತಾ ಹೋಗಿದೆ. ಸ್ತ್ರೀಯು ಅಂತರಾಳದ ಭಾವನೆಗಳಿಗೆ ಮೌಖಿಕವಾಗಿ ಕೆಲವು ಸೀಮಿತ ಸ್ಥಳಗಳಲ್ಲಿ ಮಾತ್ರ ಅಭಿವ್ಯಕ್ತಿಸಲು ಸ್ಥಳಾವಕಾಶ ದೊರೆಯುತ್ತಿತ್ತು. ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಿಸಿದಾಗ ಅವರಿಗೆ ಹೃದಯಲ್ಲಿನ ನಗು, ಅಳು, ಸಂತೋಷ, ದುಃಖ, ನೋವು, ನಲಿವು, ಇತ್ಯಾದಿಗಳ ಹೊರೆ ಇಳಿದಂತಾಗುತ್ತಿತ್ತು. ಆದರೆ ಸ್ತ್ರೀಯ ಪ್ರಪಂಚಕ್ಕೆ ತಿಳುವಳಿಕೆ ಬರುವುದರ ಜೊತೆಗೆ ಪುರುಷನು ಸ್ತ್ರೀಯರಿಗಿಂತಲೂ ಬುದ್ಧಿವಂತನಾಗಲು ಪ್ರಯತ್ನಿಸಿದನು. ಮನುಷ್ಯನ ಭಾವನೆಗಳಿಗೆ ಲಿಖಿತ ಅಭಿವ್ಯಕ್ತಿ ನೀಡಿದಾಗ ಅಲ್ಲಿ ಮಹಿಳೆಯರ ಪಾತ್ರದ

ಶೂನ್ಯತೆ ಕಂಡುಬರುತ್ತದೆ. ಮಹಿಳೆಯರನ್ನು ಒಂದು ವಸ್ತುವನ್ನಾಗಿಟ್ಟುಕೊಂಡು ಅನುಕೂಲಕ್ಕೆ ತಕ್ಕಂತೆ ಕಾವ್ಯಗಳಲ್ಲಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ ಸ್ತ್ರೀಯನ್ನು ಹೀನಾಯವಾಗಿ ನೆಡೆಸಿಕೊಂಡಿರುವುದನ್ನು ಉದಾಹರಣೆಯೊಂದಿಗೆ ವಿವರಿಸಬಹುದಾಗಿದೆ.

ವಾಲ್ಮೀಕಿ ಮಹರ್ಷಿ ರಚಿಸಿದ ರಾಮಾಯಣದಲ್ಲಿ ಬರುವ ಸೀತೆ, ಊರ್ಮಿಳೆ, ಸಾವಿತ್ರಿ, ಕೈಕೆ, ಮಂಥರೆ, ಕೌಶಲ್ಯ, ಮಂಡೋದರಿ, ಶೂರ್ಪನಖಿ, ಅಹಲ್ಯೆ ಇತ್ಯಾದಿ ಸ್ತ್ರೀಸಂಕುಲದ ಕಥೆಗಳನ್ನು ಅಧ್ಯಯನಿಸಿದಾಗ ಸ್ತ್ರೀಯರು ಪುರುಷ ಪ್ರಧಾನತೆಯನ್ನು ಒಪ್ಪಿಕೊಂಡು ಒಪ್ಪಿತ ಸಮಾಜದೊಂದಿಗೆ ಜೀವಿಸಿದಂತಹವರು. ಈ ಮಹಾಕಾವ್ಯದ ನಾಯಕಿಯಾದ ಸೀತಾದೇವಿಯನ್ನು ಪ್ರಾರಂಭದಿಂದ ಕಥೆಯ ಕೊನೆಯವರೆಗೂ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಸಿಕೊಂಡೇ ಕಥೆ ನಡೆದುಕೊಂಡು ಹೋಗುತ್ತದೆ. ಸೀತೆಯನ್ನು ಶ್ರೀರಾಮಚಂದ್ರನು ಪಡೆದುಕೊಂಡಾಗ ಆಕೆಯನ್ನು ಪರೀಕ್ಷೆಗೊಳಪಡಿಸಿಕೊಂಡು ಆಕೆಯನ್ನು ವಿವಾಹವಾಗುತ್ತಾನೆ. ಸೀತೆಯು ಯಾವ ಮಾತುಗಳನ್ನು ಅಭಿವ್ಯಕ್ತಿಸಲು ಅನುಮತಿ-ಯಿರುವುದಿಲ್ಲ. ಕೈಕೆಯ ಹಾದಿ ಮಂಥರೆಯಿಂದ ರಾಮಾಯಣದ ಕಥೆಯ ಸ್ವರೂಪ ಬದಲಾವಣೆಯನ್ನು ಕಾಣುತ್ತದೆ. ಕಥೆ ಮುಂದುವರೆಯಲು ಮಂಥರೆಯೇ ಕಾರಣೀಭೂತಳಾಗುತ್ತಾಳೆ. ಆದರೆ ಇತಿಹಾಸದುದ್ದಕ್ಕೂ ಮಂಥರೆಯನ್ನು ಕೆಟ್ಟವಳನ್ನಾಗಿಯೇ ಪುರುಷ ಬರವಣಿಗೆ ಪ್ರತಿಬಿಂಬಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಸೀತಾಮಾತೆಯನ್ನು ರಾವಣನಿಂದ ಹಿಂತಿರುಗಿ ಕರೆ ತಂದಾಗಲೂ ಅವಳನ್ನು ಅಗ್ನಿ ಪ್ರವೇಶದ ಮುಖೇನ ಪರೀಕ್ಷೆಗೊಳಪಡಿಸುತ್ತಾನೆ ಶ್ರೀರಾಮ. ಇಲ್ಲಿ ಸೀತೆಯ ಮನದಾಳದ ಮಾತುಗಳಿಗೆ ಅಭಿವ್ಯಕ್ತಿಯೇ ಇಲ್ಲದಂತಾಗಿದೆ.

ಯಾರದೋ ಅವಮಾನದ ಮಾತುಗಳಿಗೆ ಶ್ರೀರಾಮಚಂದ್ರನು ತುಂಬು ಗರ್ಭಿಣಿಯಾದ ಸೀತಾದೇವಿಯನ್ನು ಕಾಡಿಗೆ ಕಳಿಸುತ್ತಾನೆ. ಸೀತಾಮಾತೆಯು ದಟ್ಟಾರಣ್ಯದ ಪ್ರದೇಶಕ್ಕೆ ಹೋದಾಗ ಆಕೆಗೆ ಅಭಿವ್ಯಕ್ತಿ ನೀಡಿದ್ದಾನೆ. ನಾಗಚಂದ್ರ ತನ್ನ 'ರಾಮಚರಿತ ಪುರಾಣ'ದಲ್ಲಿ ಎಲ್ಲಾ ವಿಷಯ ತಿಳಿದ ಸೀತಾದೇವಿಯು ಕರುಣಾಳು ರಾಘವನೋಳಿನಿತಾದ ತಪ್ಪಿಲ್ಲ ಪೆಣ್ಣಾಗಿ ಪುಟ್ಟಿ ಒಡಲ ಹೊರೆಯುವೆನ್ನೊಳಪರಾಧಮುಂಟು' ಎಂಬ ಮಾತು ಪುರುಷ ಕುಲಕ್ಕೆ ವ್ಯಂಗ್ಯತೆಯ ಅಭಿವ್ಯಕ್ತಿಯನ್ನು ನೀಡಿರುವುದು ಕಂಡುಬರುತ್ತದೆ. ಸೀತೆ-ಶ್ರೀರಾಮಚಂದ್ರನನ್ನು ನಯವಾಗಿ ತಿರಸ್ಕರಿಸುವ ಅಪಮಾನಕ್ಕೆ ಈಡು ಮಾಡುವ, ವ್ಯಂಗ್ಯತೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾಳೆ ಎಂದೆನಿಸುತ್ತದೆ. ಇತಿಹಾಸದುದ್ದಕ್ಕೂ ತನ್ನ ನೋವುಗಳನ್ನು ಅಭಿವ್ಯಕ್ತಿಸಲು ಅವಕಾಶ ಸಿಕ್ಕಿರುವುದು ಕೇವಲ ಒಂಟಿಯಾಗಿದ್ದಾಗ ಮಾತ್ರ (ಕಾಡಲ್ಲಿ, ಹೊಲಗಳಲ್ಲಿ) ಎಂದೆನಿಸುತ್ತದೆ. ಊರ್ಮಿಳೆಯಂತೂ ರಾಮಾಯಣದಲ್ಲಿ

ಧೀಮಂತ ಮಹಿಳೆಯಾಗಿದ್ದಾಳೆ. ಹದಿನಾಲ್ಕು ವರ್ಷಗಳ ಕಾಲ ತನ್ನ ಪತಿಯಾದ ಲಕ್ಷ್ಮಣನ ಬರುವಿಕೆಯನ್ನೇ ಕಾಯುತ್ತಿರುವ ಪರಿಯಲ್ಲಿಯೇ ಜೀವನವನ್ನು ಕಳೆಯುತ್ತಾಳೆ. ಪತಿಯ ಜೊತೆಯಲ್ಲಿ ನಾನು ಬರುತ್ತೇನೆ ಎಂಬ ಮಾತುಗಳೂ ಅಬದ್ಧವಾಗಿವೆ. ಪತಿಯ ಬರುವಿಕೆಯನ್ನು ಊರ್ಮಿಳೆ ನಾಮಕಾವಸ್ಥೆಗೆ ಮಾತ್ರ ಸ್ವಾಗತಿಸುತ್ತಾಳೆ. ಏಕೆಂದರೆ ಅಷ್ಟೊತ್ತಿಗೆ ತನ್ನ ಪತಿಯ ಮೇಲಿದ್ಧ ಪ್ರೀತಿ, ಪ್ರೇಮ, ಅಭಿಮಾನ, ಪ್ರಣಯ ಕಳೆದುಕೊಂಡವಳಾಗಿರುತ್ತಾಳೆ ಎಂದೆನಿಸುತ್ತದೆ.

ವಚನ ಚಳವಳಿ ಮುಖ್ಯವಾಗಿ ಗಮನಿಸಬೇಕಾದ ಕಾಲಘಟ್ಟ. ಮಹಿಳಾ ಅಭಿವ್ಯಕ್ತಿಗೆ ಒಂದು ಸೂಕ್ತ ವೇದಿಕೆಯನ್ನು ಒದಗಿಸಿದ್ದು ಶರಣ ಚಳವಳಿ. ವಚನಕಾರ್ತಿಯರು ಬರುವ ಮುಂಚೆ ಮಹಿಳಾ ಸಾಹಿತ್ಯದ ಸ್ವತಂತ್ರ ರಚನೆಗಳು ಕಾಣಿಸುವುದಿಲ್ಲ. ಈ ಕಾರಣಕ್ಕಾಗಿ ವಚನ ಚಳವಳಿ ಮಹತ್ವವಾದದ್ದು. "ಸ್ತ್ರೀ ವ್ಯಕ್ತಿತ್ವವನ್ನು ದೇಹದ ನೆಲೆಯಲ್ಲಿ ವ್ಯಾಖ್ಯಾನಿಸಿ, ಸಂತಾನೋತ್ಪತ್ತಿ ಮತ್ತು ವಿಷಯ ಸುಖದ ಸಾಧನವಾಗಿಸಿಕೊಂಡಿದ್ದ ಪುರುಷನಿಷ್ಠ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಮನುಷ್ಯರನ್ನಾಗಿ, ಆತ್ಮವುಳ್ಳ ಅರಿವಿನ ಜೀವಿಯೆಂದು ಗೌರವಿಸಿದ ಶರಣದ ಸ್ತ್ರೀಪರ ಧೋರಣೆಗಳಿಂದಾಗಿ ವ್ಯವಸ್ಥೆಯ ಸ್ತ್ರೀಸಂಬಂಧಿತ ಅಮಾನವೀಯ ಆಲೋಚನಾಕ್ರಮದಲ್ಲಿ ಪರಿವರ್ತನೆ ಸಾಧ್ಯವಾಯಿತು. ಸ್ತ್ರೀಯರ ಸಾಮಾಜಿಕ, ಧಾರ್ಮಿಕ ಪ್ರವೇಶವನ್ನು ನಿರ್ಬಂಧಿಸಿದ್ದ ಕಟ್ಟುಪಾಡುಗಳು ಬಿಗಿಯನ್ನು ಕಳೆದುಕೊಂಡವು."[೨] ವಚನ ಚಳವಳಿಯ ಉದಾರವಾದಿ, ಮಾನವತಾವಾದಿ ಧೋರಣೆಯು ಮಹಿಳಾ ಅಭಿವ್ಯಕ್ತಿಗೆ ಅವಕಾಶ ಒದಗಿಸಿತು. ವಚನ ಚಳವಳಿಯ ವಿಚಾರದಿಂದ ಪ್ರಭಾವಿತರಾದ ವಚನಕಾರ್ತಿಯರ ಕೇಂದ್ರ ಕಾಳಜಿ ಆಧ್ಯಾತ್ಮ ಸಾಧನೆಯೇ ಆಗಿದೆ. ಕುಟುಂಬದಾಚೆಯ ಬದುಕಿನೊಂದಿಗೆ ಸಂಘರ್ಷಕ್ಕೊಳಗಾಗುತ್ತಾ ಪ್ರತಿಕ್ರಿಯಿಸಿದ ವಚನಕಾರ್ತಿಯರಲ್ಲಿ ಕೆಳವರ್ಗದ ಮಹಿಳೆಯರು ಕಂಡುಬರುವುದು ವಿಶೇಷ. ಒಟ್ಟಾರೆ ವಚನ ಚಳವಳಿಯ ಧೋರಣೆಯನ್ನು ವಚನಕಾರ್ತಿಯರಲ್ಲೂ ಕಾಣಬಹುದು.

"ದಾಂಪತ್ಯ ಕೇಂದ್ರವನ್ನು ಆಧ್ಯಾತ್ಮಿಕ ಆಶಯದಲ್ಲಿ ಎತ್ತಿಹಿಡಿದ ವಚನ ಚಳವಳಿಯು ಪತಿನಿಷ್ಠೆ, ಪಾತಿವ್ರತ್ಯ ಅನುಸರಣೆಗಳನ್ನು ಸತಿಧರ್ಮವಾಗಿ ಭಾವಿಸಿದ್ದರೂ, ವಿಧೇಯತೆಯನ್ನು ಬೌದ್ಧಿಕ, ಮಾನಸಿಕ ಗುಲಾಮಗಿರಿಯಾಗಿಸಲಿಲ್ಲ."[೩] ಈ ನೆಲೆಯಲ್ಲಿ ಆಯ್ಕೆಯ ಸ್ವಾತಂತ್ರ್ಯ ದೊರಕಿದರೆ ಸಹಜವಾಗಿಯೇ ಮಹಿಳಾ ಬದುಕು ವಿಸ್ತರಿಸುತ್ತದೆ. ವಚನ ಚಳವಳಿ ದಾಂಪತ್ಯವನ್ನು ನೋಡಿದ ಕ್ರಮದಿಂದಾಗಿಯೇ ಸಾಕಷ್ಟು ದಿಟ್ಟವಾಗಿ ಈ ಬಗ್ಗೆ ಪ್ರತಿಕ್ರಿಯಿಸಲು ಅಕ್ಕನಂತಹ ವಚನಕಾರ್ತಿಗೆ ಸಾಧ್ಯವಾದದ್ದು. ವಚನ ಚಳವಳಿಯ ಹಲವು ಉದಾರವಾದಿ, ಮಾನವತಾವಾದಿ ಧೋರಣೆಗಳು ಮುಂದಿನ ಮಹಿಳಾ ಸೃಜನಶೀಲತೆಗೆ ಬಹುಮುಖ್ಯ

ಮಾದರಿಯಾಗಿದೆ. ಶೋಷಿತ ವರ್ಗಕ್ಕೆ ವಚನ ಚಳವಳಿ ಸಾಹಿತ್ಯ ಮಾದರಿಯಾಗಿದೆ. ೧೨ನೇ ಶತಮಾನದ ಈ ಸಮಾಜಮುಖಿ ಧೋರಣೆ ವಚನ ಕಾಲಘಟ್ಟದ ನಂತರ ಕಣ್ಮರೆಯಾದಂತೆ ಕಂಡರೂ ಅದರ ಪ್ರಭಾವ ಇಂದಿಗೂ ಇದೆ.

ವಚನಯುಗದ ಪ್ರಭಾವದ ನಂತರದಲ್ಲಿ ಹಲವು ಕವಯಿತ್ರಿಯರು ಸಾಹಿತ್ಯ ನಿರ್ಮಿಸಿದ್ದಾರೆ. ಆದರೆ ಎಲ್ಲೂ ಪ್ರತಿಭಟನೆಯ ರೂಪದ ಮಾದರಿ ಕಾಣುವುದಿಲ್ಲ. ಮೇಲ್ವರ್ಗದವರು ಹೆಚ್ಚಾಗಿ ರಚಿಸಿದ ಈ ಸಾಹಿತ್ಯ ಭಕ್ತಿ ಪ್ರಾಧಾನ್ಯತೆಯನ್ನು ಹೇಳುತ್ತದೆ. ಅಕ್ಕನ ನಂತರದಲ್ಲಿ ಹೊನ್ನಮ್ಮ ವಿಶಿಷ್ಟಳಾಗಿ ಕಂಡುಬರುತ್ತಾಳೆ. ಅವಳ ಹದಿಬದೆಯ ಧರ್ಮ ಮಹಿಳೆ ಆದರ್ಶನಾರಿಯಾಗಿರಬೇಕಾದ ರೀತಿಯನ್ನು ಹೇಳಿದರೂ ಅಲ್ಲಲ್ಲಿ ಈ ಸಮಾಜದ ಹೆಣ್ಣಿನ ವಿರೋಧಿ ಧೋರಣೆಯನ್ನು ಬಿಂಬಿಸಿದೆ. ಯುರೋಪಿಯನ್ನರ ಆಗಮನದ ನಂತರದಲ್ಲಿ ಆದ ಬದಲಾವಣೆಗಳು ಸಾಹಿತ್ಯದಲ್ಲಿ ಮಹಿಳೆ ತೊಡಗಿಸಿಕೊಳ್ಳಲು ಕಾರಣವಾದದ್ದನ್ನು ವಿಶೇಷವಾಗಿ ಗಮನಿಸಬಹುದು. ಬ್ರಿಟಿಷರ ಆಗಮನವು ಭಾರತದ ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕವಾಗಿ ಹಲವು ಪಲ್ಲಟಗಳಿಗೆ ಕಾರಣವಾಯಿತು. ವಿದೇಶಿ ವ್ಯಾಪಾರ ಹೆಚ್ಚಿತು. ಕೈಗಾರಿಕೆಗಳ ಸ್ಥಾಪನೆಯೊಂದಿಗೆ ದೇಶೀ ಕೈಗಾರಿಕೆಗಳು ಪ್ರಭಾವಿಸಲ್ಪಟ್ಟವು. ರಾಜಕೀಯವಾಗಿ ಬ್ರಿಟಿಷರು ತಮ್ಮ ಅಧಿಕಾರ ಬಲಪಡಿಸಲು ಹಲವು ತಂತ್ರಗಳನ್ನು ರೂಪಿಸಿದರು. ಅದರಲ್ಲಿ ಇಂಗ್ಲಿಷ್ ಶಿಕ್ಷಣ ಕಲಿಸುವಿಕೆಯೂ ಒಂದು. ಇಂಗ್ಲಿಷ್ ಶಿಕ್ಷಣದಿಂದ ಅಲ್ಲಿಯ ಸಮಾಜ, ರೀತಿ–ನೀತಿ ತಿಳಿಯಿತು. ಇದು ನಮ್ಮ ಸಾಮಾಜಿಕ, ಧಾರ್ಮಿಕವಾದ ಹಲವು ಆಚರಣೆಗಳ ಮೇಲೆ ಪ್ರಭಾವ ಬೀರಿತು.

ಲಿಂಗಾಧಾರಿತ ವಿಭಜನೆಯೊಂದಿಗೆ ಮಹಿಳಾ ಅಸಮಾನತೆಯನ್ನು ಅರ್ಥೈಸಿಕೊಂಡಿದ್ದ ಬ್ರಿಟಿಷರಿಗೆ ಭಾರತೀಯ ಸಂದರ್ಭದಲ್ಲಿ ಸ್ವಲ್ಪ ತೊಡಕಾಯಿತು. ಇಲ್ಲಿರುವ ಜಾತಿಪದ್ಧತಿಯನ್ನು ತಿಳಿದುಕೊಳ್ಳುವಾಗ ಅದರ ಹಿನ್ನೆಲೆಯಲ್ಲಿ ಮಹಿಳಾ ಸಮಸ್ಯೆಯನ್ನು ಪ್ರಸ್ತುತ ಪಡಿಸುವುದು ಕಷ್ಟವಾಯಿತು. ಆದ್ದರಿಂದ "ಅವರು ಲಿಂಗಾಧಾರಿತ ಶ್ರೇಣೀಕರಣ ಪ್ರಶ್ನೆಯನ್ನು ತಿರುಚಿ ಮಹಿಳಾ ಹಿನ್ನೆಲೆಯಲ್ಲಿ ಮಹಿಳೆಯರ ಸಮಸ್ಯೆಯಾಗಿ ಮಾತ್ರ ಗುರುತಿಸಿಕೊಂಡರು. ಒಟ್ಟಿನಲ್ಲಿ ಮಹಿಳೆಯರ ಈ ಸಮಸ್ಯೆಗಳೇ ಭಾರತೀಯ ಸಮಾಜದ ಬರ್ಬರತೆಗೆ ಕಾರಣವೆಂಬಂತೆ ಅದನ್ನು ಪ್ರಾದೇಶಿಕಗೊಳಿಸಿದರು."[೪] ಹೀಗೆ ಜಾತಿಪದ್ಧತಿಯನ್ನು ಗೌಣವಾಗಿಸಲಾಯಿತು ಮತ್ತು ಮಹಿಳಾ ಸಮಸ್ಯೆಯನ್ನು ತಮಗೆ ಬೇಕಾದ ರೀತಿ ಪ್ರಚುರಪಡಿಸಿದರು. "ವೈದಿಕ ಮಹಿಳಾ ಸಮಸ್ಯೆಗಳು ಜಾತಿಗಳ ಒಳಗೆ ಅಸ್ತಿತ್ವ ಹೊಂದಿದ್ದರಿಂದ ಅದನ್ನು ಜಾತಿ, ಧರ್ಮಕೇಂದ್ರಿತ ಸಮಸ್ಯೆಗಳಾಗಿ ನೋಡುವುದಕ್ಕೆ

ಪ್ರಯತ್ನಿಸಿದರು."[೫] ಆದರೆ ಎಲ್ಲ ಜಾತಿಗಳಲ್ಲಿ ಇಲ್ಲದ ವೈದಿಕ ಸ್ತ್ರೀಯರ ಸಮಸ್ಯೆಯನ್ನೇ ಮುಖ್ಯವಾಗಿ ತಮ್ಮ ಸುಧಾರಣೆಗೆ ಬಳಸಿಕೊಂಡರು. ಅದನ್ನು ಸಾರ್ವತ್ರಿಕಗೊಳಿಸುವ ಪ್ರಯತ್ನ ಮಾಡಿದರು.

"ವಸಾಹತು ಆಡಳಿತವನ್ನು ಸಮರ್ಥಿಸುವ ಐರೋಪ್ಯರು ಒಂದು ಕಡೆಯಾದರೆ, ಏಕರೂಪಿ ನೆಲೆಯ ವಸಾಹತು ಶಿಕ್ಷಣ ಪಡೆದ ಭಾರತೀಯ ಸುಧಾರಣಾವಾದಿಗಳು ಇನ್ನೊಂದು ಕಡೆ. ಆಗ ಐರೋಪ್ಯರಿಗೆ ಮಹಿಳೆ ಒಂದು ಸುಧಾರಿಸುವ ವಸ್ತುವಾದರೆ ಭಾರತೀಯರಿಗೆ ಆಕೆ ಸಂಸ್ಕೃತಿಯ ಪ್ರತೀಕವಾಗಿದ್ದಳು."[೬] ಒಟ್ಟಾರೆಯಾಗಿ ವಸಾಹತುಶಾಹಿಗಳು ಮತ್ತು ಭಾರತೀಯರಿಬ್ಬರೂ ಮಹಿಳೆಯ ಸಮಸ್ಯೆಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡರು. ಅವಳನ್ನು ಸುಧಾರಿಸುವಂತೆ ಹೇಳುತ್ತಾ ತಮ್ಮ ಅಸ್ತಿತ್ವ ಭದ್ರಗೊಳಿಸಿಕೊಂಡರು. ಬ್ರಿಟಿಷರು ಆಗಮನದಿಂದ ಭಾರತದ ಸಾಂಸ್ಕೃತಿಕ ಜಗತ್ತಿನಲ್ಲಿ ಒಂದು ಪಲ್ಲಟವಾಯಿತು. ಬ್ರಿಟಿಷರೊಂದಿಗೆ ಮುಖಾಮುಖಿಗೊಳ್ಳುತ್ತಲೇ ದೇಶೀಯತೆಯನ್ನು ಉಳಿಸಿಕೊಳ್ಳುವ ಸಂದರ್ಭದಲ್ಲಿ ಆದರ್ಶದ ಮಾದರಿಯೊಂದನ್ನು ಸ್ಥಾಪಿಸಲಾಯಿತು. "ವಸಾಹತುಪೂರ್ವ ಭಾರತವೆಂದರೆ ವೇದಕಾಲೀನ ಭಾರತವೂ, ನಿಜವಾದ ಭಾರತೀಯ ಮಹಿಳೆಯೆಂದರರೆ ಈ ಆದರ್ಶೀಕೃತ ಆರ್ಯಕುಲಾಂಗನೆಯ ಪ್ರತಿಮೆಯೆಂದು ಚಿತ್ರಿಸಲಾಯಿತು."[೭] ವೇದಕಾಲೀನ ಮಹಿಳೆಯ ಕಲ್ಪನೆಯನ್ನು ಆದರ್ಶವಾಗಿ ಸ್ವೀಕರಿಸಲಾಯಿತು. ಇದೇ ಆರ್ಯಕುಲಾಂಗನೆಯ ಕಲ್ಪನೆ ವಸಾಹತುಶಾಹಿಯನ್ನು ಪ್ರತಿಭಟಿಸುವ ಮಾದರಿಯಾಗಿ ಬದಲಾದದ್ದನ್ನೂ ಗಮನಿಸಬೇಕು.

ರಾಷ್ಟ್ರೀಯತೆ ಹುಟ್ಟಿ ತೀವ್ರಗೊಂಡ ಸಂದರ್ಭದಲ್ಲಿ ಸ್ವದೇಶಿ ಆಂದೋಲನವೂ ತೀವ್ರಗೊಂಡಿತು. ಮಹಿಳೆಯು ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವವರೆಂದು ಹೇಳುತ್ತಲೇ ಅವಳ ಮೇಲಿನ ಆದರ್ಶದ ಕಲ್ಪನೆಯನ್ನು ಗಟ್ಟಿಗೊಳಿಸಲಾಯಿತು. ಧಾರ್ಮಿಕವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ ನಮ್ಮ ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಮಹಿಳೆಯಿಂದ ನಿರೀಕ್ಷಿಸಲಾಯಿತು. "ನಾವು ನಮ್ಮ ಸಂಸ್ಕೃತಿಯನ್ನು ಪುಟಕ್ಕಿಟ್ಟು ಶುದ್ಧೀಕರಿಸಬಲ್ಲ, ಸಾಮರ್ಥ್ಯವುಳ್ಳ ನಾಗರಿಕ ಜನಾಂಗ ಎನ್ನುವುದನ್ನು ವಸಾಹತುಶಾಹಿಗೆ ಸಾಧಿಸಿ ತೋರಿಸುವುದು ಸಮಾಜ ಸುಧಾರಣಾ ಚಳವಳಿಯ ಪ್ರೇರಣೆಗಳಲ್ಲಿ ಒಂದಾಗಿತ್ತು."[೮] ತಮ್ಮ ಪರಂಪರಾಗತ ಯಜಮಾನಿಕೆಯನ್ನು ಉಳಿಸಿಕೊಳ್ಳುವ ನೆಲೆಯಲ್ಲೇ ಸುಧಾರಣಾವಾದ ರೂಪುಗೊಂಡಿದ್ದು. ವೈದಿಕಧರ್ಮದ ಯಜಮಾನಿಕೆ, ಹಿತಾಸಕ್ತಿಗಳು ಕಾಲಾಂತರಗಳಲ್ಲಿ ಹರಿಯುತ್ತಲೇ ಬರುತ್ತಿರುವುದರ ಹಿನ್ನೆಲೆಯಲ್ಲೇ ಸುಧಾರಣಾವಾದದ ಹಿಂದಿನ ಉದ್ದೇಶ ಅರಿಯಬೇಕು. ಆದರೆ ಇದರಿಂದ ಬದಲಾವಣೆಯ ಗಾಳಿ ಬೀಸಲು ಸಾಧ್ಯವಾದದ್ದನ್ನೂ ಅಲ್ಲಗಳೆಯಲಾಗದು.

ಸುಧಾರಣೆಯ ಸಂದರ್ಭವನ್ನು ಅರ್ಥೈಸಿಕೊಂಡರೆ ಈಗ ಅದು ಮಿತಿಯಾಗಿ ಕಾಣಬಹುದು. ಆದರೆ ವಿಜಯಾದಬ್ಬೆಯವರ ಮಾತು ಇಲ್ಲಿ ಗಮನಿಸಬಹುದಾಗಿದೆ. "ಇವತ್ತು ತನ್ನ ವೃತ್ತಿಪರತೆಯನ್ನೋ, ತಾಯ್ತನದ ಆಯ್ಕೆಯ ಹಕ್ಕನ್ನೋ ಉಳಿಸಿಕೊಳ್ಳಲು ಯಾವ ತುರ್ತಿನಿಂದ ಹೋರಾಡಬೇಕಾಗಿದೆಯೇ ಅದೇ ತುರ್ತಿನಿಂದ ಆ ದಿನಗಳಲ್ಲಿ ವಿಧವೆ ತನ್ನ ಕೂದಲನ್ನು ಉಳಿಸಿಕೊಳ್ಳಲು, ಮಹಿಳೆಯೊಬ್ಬಳು ಪುಸ್ತಕವನ್ನು ಹಿಡಿಯಲು ಹೋರಾಡಬೇಕಾಗಿತು."[೯] ಇದು ಆ ಘಟ್ಟದಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆ ಎನ್ನುವುದು ಸುಳ್ಳಲ್ಲ. ಮಹಿಳೆಯೊಬ್ಬಳು ಶಿಕ್ಷಣಕ್ಕೆ ತನ್ನನ್ನು ತೆರರೆದುಕೊಂಡದ್ದೇ ವಿಶಿಷ್ಟವಾದದ್ದು. ಪ್ರಾರಂಭದ ಶಿಕ್ಷಣ ನೀಡುವಾಗಿನ ದ್ವಂದ್ವವನ್ನು ಈ ನೆಲೆಯಲ್ಲಿ ತಿಳಿಯಬೇಕಾದ ತುರ್ತಿದೆ.

ಸುಧಾರಣಾವಾದವು ಮೂಲತಃ ಪುರುಷ ನಿರ್ಮಿತವಾಗಿದ್ದು, ವಿಷಯದ ವಸ್ತು ಮಹಿಳೆ ಆಗಿದ್ದಾಳೆ. "ಮಹಿಳೆಯರ ಅನುಭವದ ಒಳಗಿನ ಸತ್ಯ ಹಾಗೂ ಅದರ ವಾಸ್ತವ ಪುರುಷರದಕ್ಕಿಂತ ಯಾವಾಗಲೂ ಭಿನ್ನವೇ ಆಗಿದ್ದು, ಅಂತಹ ಸತ್ಯವನ್ನೂ ಅದನ್ನು ಕಲಾತ್ಮಕವಾಗಿ ಹೇಳುವಂಥ ಕೃತಿಗಳ ಉತ್ಪಾದನೆಯನ್ನೂ ಪಿತೃಪ್ರಾಧಾನ್ಯವು ಸದಾ ಅಪಮೌಲ್ಯಕ್ಕೆ ಒಳಗು ಮಾಡುತ್ತಲೇ ಬಂದಿದೆ. ಇಂಥ ಸ್ತ್ರೀ ಸಾಂಸ್ಕೃತಿಕ ಉತ್ಪಾದನೆಗಳು ಪಿತೃಪ್ರಧಾನ ಸಂಸ್ಕೃತಿಯೊಳಗೆ ಹುಟ್ಟುವಾಗಲೇ ತಮ್ಮ ನ್ಯಾಯವಾದ ಹಕ್ಕಿನಿಂದ ವಂಚಿತವಾಗಿರುತ್ತವೆ."[೧೦] ಆದ್ದರಿಂದ ಅಂದಿನ ಮಹಿಳಾ ಸಾಹಿತ್ಯವೂ ಪುರುಷಪ್ರಧಾನ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿದೆ. ಆ ಪ್ರಭಾವದ ಹೊರತಾಗಿಯೂ ಅನುಭವ ವಿಶಿಷ್ಟತೆಯಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಆದರೆ ಇಂದಿಗೂ ಅಂತಹ ಮಹಿಳಾ ಅಭಿವ್ಯಕ್ತಿಯೊಂದನ್ನು ಸಾಹಿತ್ಯ ಚರಿತ್ರೆ ಗಮನಿಸದೇ ಇಲ್ಲದಿರುವುದನ್ನೂ ನೋಡಬಹುದು. ಈ ಹಿಂದಿನ ಲಿಂಗರಾಜಕಾರಣವನ್ನು ತಿಳಿಯಬಹುದು. ಅಗಾಧವಾದ ಸಾಹಿತ್ಯ ಪರಂಪರೆಯೊಂದು ದೊರಕಿದರೆ ತಮ್ಮ ಅಸ್ತಿತ್ವಕ್ಕೆಲ್ಲಿ ಧಕ್ಕೆಯಾಗುತ್ತದೋ ಎಂಬ ಭಯದಿಂದಲೂ ಮಹಿಳಾ ಸಾಹಿತ್ಯವನ್ನು ಅದೃಶ್ಯಗೊಳಿಸಿರಬಹುದಾದ ಸಾಧ್ಯತೆಗಳಿವೆ.

"ಆಧುನಿಕ ಮಹಿಳಾ ಸಾಹಿತ್ಯದ ಮೊದಲ ಪೀಳಿಗೆಯ ಲೇಖಕಿಯ ಲೇಖಕಿಯರು ಮನೆಯಲ್ಲಿನ ಧಾರ್ಮಿಕ ವಾತಾವರಣವನ್ನು ತಮ್ಮ ಸ್ಫೂರ್ತಿ ಸೆಲೆಯಾಗಿ ಸ್ವೀಕರಿಸಿದಾಗ ಭಗವಂತನ ನಾಮಸಂಕೀರ್ತನೆ ಮಾಡುವ ಭಕ್ತಿಕಾವ್ಯವನ್ನು ಬರೆದರು. ಸಮಾಜದಲ್ಲಿ ನಡೆಯುತ್ತಿದ್ದ ಸುಧಾರಣಾವಾದಿ ಚಳವಳಿಯಿಂದ ಸ್ಫೂರ್ತಿ ಪಡೆದಾಗ ಸ್ತ್ರೀ ಶಿಕ್ಷಣ, ಸ್ತ್ರೀ ಕಲ್ಯಾಣವನ್ನು ವಸ್ತುವಾಗಿ ಸ್ವೀಕರಿಸಿದರು. ಕೆಲವೊಮ್ಮೆ ಇವೆರೆಡನ್ನುಳಿದು ಬದುಕಿನ ದುಃಖ–ದುಮ್ಮಾನಗಳನ್ನು ಹೊರಚೆಲ್ಲುವ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಸಾಹಿತ್ಯವನ್ನು ಕಂಡಾಗ

ಆತ್ಮಕಥೆಯನ್ನು ಬರೆದರು. ಈ ಮೂರು ಧಾರೆಗಳನ್ನು ನಾವು ಆ ಕಾಲದ ಮಹಿಳಾ ಸಾಹಿತ್ಯದಲ್ಲಿ ಮುಖ್ಯವಾಗಿ ಗುರುತಿಸಬಹುದಾಗಿದೆ. ಈ ಲೇಖಕಿಯರಲ್ಲಿ ಸಂಪ್ರದಾಯಿಕತೆ ಮತ್ತು ಪ್ರಗತಿಗಾಮಿತನದ ವಿಚಿತ್ರ ಸಂಯೋಜನೆಯೊಂದು ಕಾಣಿಸುತ್ತದೆ."[೧೧] ಅಂದರೆ ಕುಟುಂಬ ವಾತಾವರಣಕ್ಕೆ ತಕ್ಕಂತೆ ಸಾಮಾಜಿಕ ಹಿನ್ನೆಲೆಗೆ ತಕ್ಕಂತೆ ಸಾಹಿತ್ಯವು ರೂಪುಗೊಂಡಿದೆ. ಅಂದಿನ ಸಮಾಜದ ನೇರ ಪ್ರಭಾವವನ್ನು ಅವರಲ್ಲಿ ಕಾಣುತ್ತಾ ಹೋಗಬಹುದು. ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯಾಗಿ ಗುರುತಿಸಿಕೊಂಡ ತಿರುಮಲಾಂಬ ಮೊದಲು ಭಕ್ತಿಕಾವ್ಯವನ್ನು ರಚಿಸಿದರು. ನಂತರದಲ್ಲಿ ಅವರ ಸಾಹಿತ್ಯಾಸಕ್ತಿ ಸ್ತ್ರೀ ಶಿಕ್ಷಣದ ಮಹತ್ವವನ್ನು ತಿಳಿಸುವ ನಿಟ್ಟಿನಲ್ಲಿ ಬದಲಾಯಿತು. ಶಿಕ್ಷಣದಿಂದ ಹೆಣ್ಣು ಪಡೆಯಬಹುದಾದ ಆತ್ಮವಿಶ್ವಾಸವನ್ನು ಅವರು ತಮ್ಮ ಸಾಹಿತ್ಯ ಪಾತ್ರಗಳ ಮೂಲಕ ಹೇಳಿದರು. ನವೋದಯದ ಪ್ರಾರಂಭದ ಲೇಖಕಿಯರು ತಾವು ಎದುರಿಸಿದ ಸಮಸ್ಯೆಗಳಿಗೆ ಪರಿಹಾರಗಳನ್ನು ಸಾಹಿತ್ಯ ಪಾತ್ರಗಳಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ಅವರ ಕಾದಂಬರಿ ಪಾತ್ರಗಳಲ್ಲಿ ಆತ್ಮಕಥೆಯ ರೂಪವನ್ನು ಕಾಣಬಹುದಾಗಿದೆ. ಉದಾಹರಣೆಗೆ ತಿರುಮಲಾಂಬರ ನಭಾ, ವಿರಾಗಿಣಿಯ ಪಾತ್ರಗಳನ್ನು ಹೆಸರಿಸಬಹುದು.

ಪಾಶ್ಚಾತ್ಯ ಆಧುನಿಕತೆಯೆಂಬುದು ನಮ್ಮ ಚಿಂತನೆಗೆ ಕಾರಣವಾಯಿತಾದರೂ ಪರಂಪರೆಯಿಂದ ಹೊಸತಾದ ವೈಚಾರಿಕತೆ ಬೆಳೆಸಿಕೊಳ್ಳಲು ಸಂಘರ್ಷವೇರ್ಪಟ್ಟಿತು. ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ಸಂಘರ್ಷಗಳೊಂದಿಗೆ ಒಂದು ಹೊಸ ಎಚ್ಚರ ಪ್ರಾರಂಭವಾಯಿತು. ತಕ್ಷಣದಲ್ಲಿ ಬದಲಾವಣೆ ಆಗದಿದ್ದರೂ ಕಾಲಾನಂತರದ ಸಾಮಾಜಿಕ ಚಲನೆಗೆ ತಳಹದಿ ಒದಗಿಸಿತು. ಸ್ತ್ರೀಶಿಕ್ಷಣದಿಂದ ಹಲವು ಮಹಿಳಾ ಸಮಸ್ಯೆಗಳಿಗೆ ಪರಿಹಾರ ದೊರಕಬಹುದೆಂಬ ಆಶಾಭಾವನೆ ಮೂಡಿತು. ಆ ದಿಕ್ಕಿನಲ್ಲಿ ಸ್ತ್ರೀಶಿಕ್ಷಣಕ್ಕೆ ಮಹತ್ವ ಬಂದಿತು. ಆದರೆ ಯಾವ ರೀತಿಯ ಶಿಕ್ಷಣ ನೀಡಬೇಕೆಂಬ ದ್ವಂದ್ವ ಪ್ರಾರಂಭ ಆಯಿತು. ಗೃಹಿಣಿ ಧರ್ಮದಿಂದ ವಿಮುಖಳಾಗಬಹುದೆಂಬ ಆತಂಕ ಒಂದೆಡೆ ಮತ್ತೊಂದು ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು, ಸುಧಾರಣೆ ತರಲು ಶಿಕ್ಷಣ ನೆರವಾಗುತ್ತದೆ ಎಂಬ ಗ್ರಹಿಕೆಯೊಂದಿಗೆ ಸ್ತ್ರೀಶಿಕ್ಷಣಕ್ಕೆ ಮಾನ್ಯತೆ ದೊರಕಿತು.

ಒಟ್ಟಾರೆಯಾಗಿ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯದ ಕಾಲಘಟ್ಟದಲ್ಲಿ ಹಲವಾರು ಲೇಖಕಿಯರು ಕುಟುಂಬ, ವಿವಾಹ, ಸ್ತ್ರೀಶಿಕ್ಷಣದಂತಹ ವಿಷಯಗಳ ನಡುವೆಯೇ ಸುತ್ತುತ್ತಾರೆ. ಅಂದಿನ ಸಾಮಾಜಿಕ, ರಾಜಕೀಯ ಸಂದರ್ಭಗಳು ಅವರ ಸಾಹಿತ್ಯ ರೂಪಿಸಿರುವುದನ್ನು, ಆ ಮೂಲಕ ಸಾಹಿತ್ಯಾಭಿವ್ಯಕ್ತಿಯ ವಿಶಿಷ್ಟತೆಯನ್ನು ತಿಳಿಯಲಾಗಿದೆ.

ಕೊನೆ ಟಿಪ್ಪಣಿ

೧. ವಿಕಿಪೀಡಿಯಾ.

೨. ಶ್ರೀಮತಿ. ಹೆಚ್.ಎಸ್. (ಸಂ). ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪುಟ.೧೩೨

೩. ಪೂರ್ವೋಕ್ತ. ಪುಟ.೧೦೩

೪. ಯರ್ರಿಸ್ವಾಮಿ. ಈ. ಮಹಿಳೆ ಮತ್ತು ಜಾತಿ ಶ್ರೇಣಿಕರಣ ಅಂಬೇಡ್ಕರ್ ದೃಷ್ಟಿಕೋನ, ಪುಟ.೬೩

೫. ಪೂರ್ವೋಕ್ತ. ಪುಟ.೬೪

೬. ಪೂರ್ವೋಕ್ತ. ಪುಟ.೬೫

೭. ತೇಜಸ್ವಿನಿ ನಿರಂಜನ, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಪುಟ.೬

೮. ಪೂರ್ವೋಕ್ತ. ಪುಟ.೭

೯. ವಿಜಯಾ ದಬ್ಬೆ, ನಾರಿ: ದಾರಿ–ದಿಗಂತ, ಪುಟ.೨

೧೦. ಸುಮಿತ್ರಾಬಾಯಿ, ಸ್ತ್ರೀವಾದ: ಸಾಹಿತ್ಯ ಪಾರಿಭಾಷಿಕ ಮಾಲೆ, ಪುಟ.೭೪–೭೫

೧೧. ಶ್ರೀಮತಿ ಹೆಚ್.ಎಸ್.(ಸಂ): ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪುಟ.೨೫೧

ಅಧ್ಯಾಯ : ಮೂರು

ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಅವರ ಕಥೆಗಳ : ಪ್ರಾದೇಶಿಕ ಭಿನ್ನತೆಯ ಸ್ವರೂಪ

ಅಧ್ಯಾಯ : ಮೂರು

ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಅವರ ಕತೆಗಳ : ಪ್ರಾದೇಶಿಕ ಭಿನ್ನತೆಗಳ ಸ್ವರೂಪ

ಭಾರತೀಯ ಸಾಹಿತ್ಯವನ್ನು ಅವಲೋಕಿಸಿದರೆ ಸಾಹಿತ್ಯ ಪುರುಷ ಪ್ರಾಧಾನ್ಯತೆಯಲ್ಲೇ ಸಾಗಿರುವುದು ಸ್ಪಷ್ಟವಾಗುತ್ತದೆ. ಅಲ್ಲಿ ಸ್ತ್ರೀಯರ ಸ್ಥಾನಮಾನ, ಅವರ ಸಂವೇದನೆಗಳನ್ನು ಮಾನವೀಯ ನೆಲೆಗಳಿಂದ ನೋಡಿಯೇ ಇಲ್ಲ. ಮನುವಿನ ಧರ್ಮಶಾಸ್ತ್ರ, ವೇದ, ಉಪನಿಷತ್ತು, ಪುರಾಣ, ಇತಿಹಾಸ ಪರಂಪರೆಯಿಂದಲೂ ಸ್ತ್ರೀಯನ್ನು ಎಲ್ಲಾ ಗ್ರಂಥಗಳನ್ನು ಅವಲೋಕಿಸಿದಾಗ ಮಹಿಳೆಯನ್ನು ಶೋಷಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳವರೆಗೂ ಇಂತಹ ಪುರುಷವ್ಯವಸ್ಥೆಯ ಧೋರಣೆಯನ್ನು ಮಹಿಳಾ ಹಿನ್ನೆಲೆಯಲ್ಲಿ ಗುರ್ತಿಸಬಹುದು. ಈ ಮಾತನ್ನು ಸ್ವಲ್ಪ ಬದಲಾವಣೆಯೊಂದಿಗೆ ಮಧ್ಯಕಾಲೀನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭಕ್ಕೂ ಅನ್ವಯವಾಗುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ಸ್ತ್ರೀಯು ಪುರುಷ ಸಮಾಜದ ಶೋಷಣೆಯ ಮಡುವಿನಲ್ಲೇ ಮುಳುಗಲಿಲ್ಲ. ಅದರಿಂದ ಹೊರಬಂದು ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಹೆಜ್ಜೆಯನ್ನು ಮೂಡಿಸಲಾರಂಭಿಸಿದ್ದಾರೆ. ಅದರಲ್ಲೂ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಇಂತಹ ಬೆಳವಣಿಗೆಯನ್ನು ಇಂದು ಮಹಿಳಾ ಸಾಹಿತ್ಯವೆಂದು ಕರೆಯುತ್ತಿರುವುದು.

ಈ ಸಾಹಿತ್ಯವು ಹೆಣ್ಣಿನ ಬಗೆಗೆ ಇದ್ದ ಇಂತಹ ಪೂರ್ವಕಲ್ಪಿತ ಧೋರಣೆಯನ್ನು ಸಾಹಿತ್ಯದ ಮುಖೇನ ಪ್ರಶ್ನಿಸುತ್ತಾ ಸ್ತ್ರೀ, ಸ್ತ್ರೀತ್ವ, ಸ್ತ್ರೀತನಗಳ ಬಗೆಗೆ ಅರಿವನ್ನು ಮೂಡಿಸಲು ಪ್ರಯತ್ನಿಸಿದ್ದನ್ನು ಗಮನಿಸಬಹುದು. ಇದು ಬರವಣಿಗೆಯಲ್ಲಿ ಪ್ರತಿಭಟನಾತ್ಮಕ ನೆಲೆಯಲ್ಲಿಯೇ ಆರಂಭದಿಂದಲೂ ಅಭಿವ್ಯಕ್ತವಾದದ್ದನ್ನು ನೋಡಬಹುದು. ಈ ಪ್ರತಿಭಟನೆಯ ಸ್ವರೂಪ ಹೇಗಿತ್ತೆಂದರೆ ಹೆಣ್ಣಿನ ಅಸ್ತಿತ್ವದ ಬಗ್ಗೆ ಮೂಲಭೂತ ಅವಶ್ಯಕತೆಗಳ ಕುರಿತು, ಸಮಾಜ ನಂಬಿಕೊಂಡು ಬಂದಿದ್ದ ಏಕಮುಖಿ ಮೌಲ್ಯಗಳನ್ನು ವಿರೋಧಿಸುವ ನೆಲೆಯಲ್ಲಿ

ಮೂಡಿಬಂದಿತು. ಹಾಗಾಗಿಯೇ ಜೀವವಿರೋಧಿ ಸಂಸ್ಕೃತಿಯನ್ನು ವಿರೋಧಿಸಿ ಜೀವಪರ ನಿಲುವನ್ನು ಮೊದಲಿಗೆ ಸೂಕ್ಷ್ಮನೆಲೆಯಲ್ಲಿ ಪ್ರತಿಪಾದಿಸುವ ಕೆಲಸವನ್ನು ಈ ಮಹಿಳಾ ಬರವಣಿಗೆಯು ಮಾಡಿತು. ಈ ರೀತಿಯ ಕಾರ್ಯದಲ್ಲಿ ಹಲವಾರು ಬರಹಗಾರರ ಪ್ರೇರಣೆ, ಪೋಷಣೆ ಇದೆ ಎಂಬುವುದರಲ್ಲಿ ಯಾವುದೇ ಸಂಶಯಗಳಿಲ್ಲ. ಹಾಗಾಗಿಯೇ ಹೆಣ್ಣೆಂಬ ಕಾರಣದಿಂದ ಸ್ವಾತಂತ್ರ್ಯ, ಸಮಾನತೆ, ಮೂಲಭೂತ ಅವಕಾಶಂತಹ ಮಹತ್ವವಾದ ವಿಷಯಗಳ ಪರವಾಗಿ ಹಲವಾರು ಲೇಖಕಿಯರು ತಮ್ಮ ನಿಲುವನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಇಲ್ಲಿ ಸಮಾನ ಮನಸ್ಸಿನ ಸ್ತ್ರೀ ಪುರುಷರಿಬ್ಬರ ಸಮ್ಮಿಳಿತದ ಬರಹಗಳು ಮುಖ್ಯವಾಗಿ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದವು. ಹೀಗೆ ಸೃಷ್ಟಿಯಾದ ಬರಹದ ಪ್ರಧಾನ ಉದ್ದೇಶವನ್ನು ಹೀಗೆ ಗ್ರಹಿಸಬಹುದು. ದೈಹಿಕವಾದ ವ್ಯತ್ಯಾಸಗಳಿಂದಲೂ ಶೋಷಣೆಗೊಳಗಾಗುತ್ತಿರುವ ಹೆಣ್ಣಿನ ಕುಲಕ್ಕೆ ಸಮಾನತೆಯ ಸ್ವಾತಂತ್ರ್ಯದ ಅವಕಾಶಗಳನ್ನು ತಿಳಿಸಲು ಸಾಹಿತ್ಯವನ್ನು ಒಂದು ಮಾಧ್ಯಮವನ್ನಾಗಿ ಬಳಸಿಕೊಳ್ಳಲಾಯಿತು. ಇದರ ಯಶಸ್ಸೇ ಸಮಾಜದಲ್ಲಿ ಅಸಮಾನತೆ, ಲಿಂಗತಾರತಮ್ಯ, ಮುಂತಾದ ಏಕಮುಖವಾದ ತೀರ್ಮಾನಗಳನ್ನು ವಿರೋಧಿಸಿ, ತಮ್ಮ ಸ್ಥಾನಮಾನಗಳನ್ನು ಸಾರ್ವತ್ರಿಕ ಹಾಗೂ ಸಾಮಾಜಿಕ ಮೌಲ್ಯಗಳ ಮೂಲಕ ಗುರ್ತಿಸಿಕೊಳ್ಳುವಂತಾಯಿತು. ಇದರ ಪರಿಣಾಮ ಮಹಿಳೆಯರು ತಮ್ಮ ದೃಷ್ಟಿಯಲ್ಲಿ ಬಂಧಿಸಲ್ಪಟ್ಟಿರುವ ಸಂಕೋಲೆಗಳಿಂದ ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಬರಹಗಾರರು ಹಲವಾರು ಮಾರ್ಗಗಳನ್ನು ಗುರ್ತಿಸಿಕೊಂಡರು. ಇದರಲ್ಲಿ ಮುಖ್ಯವಾದ ಇಂತಹ ಪುರುಷವಾದಿ ಧೋರಣೆಗಳನ್ನು ಪರಿಣಾಮಕಾರಿಯಾಗಿ ಸಾಹಿತ್ಯ ಕೃತಿಗಳ ಮೂಲಕ ಪ್ರತಿರೋಧಿಸಿದರು.

ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀಯರು ಪುರುಷನಿಗೆ ನೇರವಾದ ಸ್ಪರ್ಧೆಯನ್ನು ಎಲ್ಲಾ ಕ್ಷೇತ್ರಗಳಲ್ಲಿ ನೀಡಲು ಶಕ್ತಳಾಗಿದ್ದಾಳೆ. ಇದಕ್ಕೆ ಕಾರಣ ಮೇಲೆ ತಿಳಿಸಿದಂತೆ ಸ್ತ್ರೀವಾದಿಗಳು ಮತ್ತು ಸ್ತ್ರೀಪರ ಚಿಂತಕರು ಮುಖ್ಯರಾಗಿದ್ದಾರೆ. ಈ ಪರಂಪರೆಯನ್ನು ಉಳಿಸಿ, ಬೆಳೆಸಿ, ಪ್ರಗತಿಯತ್ತ ಕೊಂಡೊಯ್ಯಲು ಸಾಹಿತಿಗಳು ಸಾಹಿತ್ಯ ಕೃತಿಗಳ ಮೂಲಕ ಶ್ರಮಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ತ್ರೀ ಚಿಂತಕರ ಪರಂಪರೆಯನ್ನು ಸ್ಥೂಲವಾಗಿ ಹೀಗೆ ನೋಡಬಹುದು. ವೇದ, ಪುರಾಣ, ಉಪನಿಷತ್ತುಗಳ ಕಾಲದಿಂದಲೂ ಅಲ್ಲಲ್ಲಿ ಸ್ತ್ರೀ ಪ್ರಾಧಾನ್ಯತೆಯು ಕಂಡುಬರುತ್ತದೆ. ಮುಂದುವರೆದಂತೆ ಮುಖ್ಯವಾಗಿ ಸ್ತ್ರೀಯರು ಸಮಾಜದ ಮುನ್ನೆಲೆಗೆ ಬಂದು ತಮ್ಮನ್ನು ತಾವು ಗುರುತಿಸಿಕೊಂಡದ್ದು ವಚನ ಸಂದರ್ಭದಲ್ಲಿ ಮತ್ತು ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಎನ್ನಬಹುದು. ಇಂತಹ ಸಾಹಿತ್ಯ ಸಂಬಂಧಿಯಾಗಿ ಸ್ತ್ರೀಪರ ಕಾಳಜಿ ಹೊತ್ತ ಲೇಖಕರ ಕೃತಿಗಳನ್ನು ಮುಖ್ಯವಾಗಿ ಹೀಗೆ ಗುರ್ತಿಸಬಹುದು. ಗುಲ್ವಾಡಿ

ವೆಂಕಟರಾಯರ 'ಇಂದಿರಾಬಾಯಿ', ಕೆರೂರು ವಾಸುದೇವಾಚಾರ್ಯರ 'ಇಂದಿರೆ', ಕಾರಂತ – ಕುವೆಂಪುರವರ ಕಾದಂಬರಿಗಳು, ತ್ರಿವೇಣಿ, ತಿರುಮಲಾಂಬ, ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಎಂ.ಕೆ.ಇಂದಿರಾ ಅವರ ಸಾಹಿತ್ಯ ಅಲ್ಲದೇ ಕಾವ್ಯ-ಕಾದಂಬರಿಗಳು ಮುಖ್ಯವಾದವುಗಳು. ಬಿ.ಟಿ.ಲಲಿತಾನಾಯಕ, ವಿಜಯದಬ್ಬೆ, ಹೆಚ್.ಎಲ್.ಪುಷ್ಪ, ಬಿ.ಎನ್.ಸುಮಿತ್ರಾಬಾಯಿ, ನೇಮಿಚಂದ್ರ, ಎನ್.ಗಾಯಿತ್ರಿ, ಸಾರಾ ಅಬೂಬಕರ್ ಮುಂತಾದವರು ಸ್ತ್ರೀಪರ ಚಿಂತನೆಯುಳ್ಳ ಸಾಹಿತ್ಯವನ್ನು ಮುಂದುವರೆಸಿಕೊಂಡು ಬಂದರು. ಅದರಲ್ಲೂ ವಿಶೇಷವಾಗಿ ಸಾಹಿತ್ಯ ಕ್ಷೇತ್ರದಲ್ಲಿಯೇ ಮಹಿಳಾ ಪರವಾದ ಬರವಣಿಗೆಯಲ್ಲಿ ಪ್ರಧಾನವಾಗಿ ತಮ್ಮನ್ನೇ ತಾವು ತೊಡಗಿಸಿಕೊಂಡವರಲ್ಲಿ ಗೀತಾ ನಾಗಭೂಷಣ, ವೈದೇಹಿ, ವೀಣಾ ಶಾಂತೇಶ್ವರವರು ಮುಖ್ಯರಾಗುತ್ತಾರೆ. ಅವರ ಒಟ್ಟು ಸಾಹಿತ್ಯ ಕೃಷಿಯೇ ಮಹಿಳೆಯರ ಬದುಕಿಗೆ ಮೀಸಲಾಗಿರುವಂತೆ ಕಂಡುಬರುತ್ತದೆ. ಹೀಗಾಗಿ ಅವರ ಸಾಹಿತ್ಯ ಸೃಷ್ಟಿಗೆ ಒಂದು ವಿಶೇಷತೆಯಿದೆ. ಈ ಹಿನ್ನೆಲೆಯಲ್ಲಿ ಮೂರು ಕತೆಗಾರ್ತಿಯರು ರಚಿಸಿರುವಂತಹ ಕತೆಗಳಲ್ಲಿ ಪ್ರಾದೇಶಿಕ ಭಿನ್ನತೆಯ ವೈಶಿಷ್ಟ್ಯಗಳನ್ನು ಗುರುತಿಸುವುದು ಮುಖ್ಯವಾಗುತ್ತದೆ.

ಪ್ರಾದೇಶಿಕತೆ

'ಪ್ರಾದೇಶಿಕತೆ' ಎನ್ನುವುದು ಆಯಾ ಪ್ರದೇಶಗಳ ವಿಶಿಷ್ಟವಾದ ಭಾಷೆ, ಸಂಸ್ಕೃತಿ ಅಲ್ಲಿಯ ಜನಗಳ ಆಸಕ್ತಿ ಆಶೋತ್ತರಗಳಿಗೆ ಒತ್ತನ್ನು ಕೊಡುವ ಪ್ರಾದೇಶಿಕ ಘಟಕಗಳನ್ನೊಳಗೊಂಡು ರಾಷ್ಟ್ರೀಯ ಸಾಹಿತ್ಯದ ಭಾಗವಾಗಿ ಬೆಳೆಯುವುದು. ಹಾಗೆಯೇ ಒಂದು ರಾಷ್ಟ್ರದ ಚಿಕ್ಕ ಘಟಕವಾಗಿರಬಹುದು, ಇಲ್ಲವೇ ಅತೀ ವಿಸ್ತಾರವಾದ ಹಲವು ವರ್ಗ, ಜಾತಿ, ಸಂಸ್ಕೃತಿಯನ್ನು ಒಳಗೊಂಡಿರಬಹುದು. ಅಂದರೆ ಪ್ರಾದೇಶಿಕ ಕತೆಗಳು, ಕಾದಂಬರಿಗಳು ಇತರೆ ಬಗೆಯ ಕತೆಗಳು, ಕಾದಂಬರಿಗಳಂತೆ ವಿಶಾಲವಾದ ಜೀವನವನ್ನು ಕುರಿತವು ಎಂಬುದು ಈ ಮಾತಿನ ಅರ್ಥ. ಹಾಗೆಯೇ ಮುಂದುವರೆದು ಹೇಳುವುದಾದರೆ ಪ್ರಾದೇಶಿಕತೆ ಎನ್ನುವುದು ಕೇವಲ ವರ್ಗೀಕರಣವಲ್ಲ. ಒಂದು ಪ್ರಕಾರವಾಗಿ ಅಭಿವ್ಯಕ್ತಿಯ ವಿಧಾನಗಳಲ್ಲಿ ಒಂದೆನಿಸಿದರೂ ಅದು ಕೇವಲ ಕಾದಂಬರಿ ತಂತ್ರಕ್ಕಾಗಲೀ ಇಲ್ಲವೇ, ವಿಶಿಷ್ಟ ಭೌಗೋಳಿಕ ಹಿನ್ನೆಲೆಗಾಗಲೀ ಮಾತ್ರವೇ ಸಂಬಂಧಪಟ್ಟ ಅಂಶವಲ್ಲ. ಅವಶ್ಯಕತೆಗೆ ಅವಿರ್ಭವಿಸಿ ಅದೊಂದು ಚಳುವಳಿಯಾಗಿ ರೂಪಿತಗೊಂಡಿದೆ. ಅಷ್ಟೇ ಅಲ್ಲ. ಅದೊಂದು ದೃಷ್ಟಿಕೋನವಾಗಿ ಜೀವನದ ತತ್ವ ಪ್ರಣಾಳಿಕೆಯಾಗಿಯೂ ತನ್ನ ವಿಸ್ತಾರವನ್ನು ಉನ್ನತೀಕರಿಸಿಕೊಂಡಿದೆ.

ವಿಶೇಷತೆ ಎಂದರೆ ಪ್ರಾದೇಶಿಕ ಕತೆಗಳು, ಕಾದಂಬರಿಗಳು, ಅಪರಿಚಿತ ಭೂ ಕ್ಷೇತ್ರಗಳ ಅಜ್ಞಾನ, ಜಾತಿ-ಜನಾಂಗಗಳ ವೈವಿಧ್ಯಪೂರ್ಣವಾದ ಚಿತ್ರಣವನ್ನು ಕೊಡುವುದಾಗಿದೆ.

ಹಾಗಾಗಿ ಇಲ್ಲಿ ಸಾಮಾನ್ಯವಾಗಿ ಪ್ರಾದೇಶಿಕ ಭಾಷೆಯ ಮೇಲೆ ಒತ್ತು ಬೀಳುತ್ತದೆ. ಕತೆಗಾರ ಹಾಗೂ ಕಾದಂಬರಿಕಾರ/ಗಾರ್ತಿಯು ಆಯಾ ಪ್ರದೇಶಕ್ಕೆ ತೀವ್ರ ಹತ್ತಿರದವರಾಗಿ ಅಲ್ಲಿಯ ಗಾಳಿ ನೀರುಗಳಿಂದ ಬೆಳೆದವರಾಗಿರುವುದರಿಂದ ಅವರು ಪ್ರಾದೇಶಿಕ ಸಂಸ್ಕೃತಿಯ ಜೀವಂಥ ವಿವರಗಳನ್ನು ಯಥಾರ್ಥವಾಗಿ ವಿಶ್ವಾಸಾರ್ಹವಾಗಿ ಸಹೃದಯರ ಎದುರು ಇಡುತ್ತಾರೆ. ಇವು ನಾಗರೀಕತೆಯಿಂದ ಬೇರ್ಪಟ್ಟವುಗಳಾಗಿ, ಯಾವುದೇ ಒಂದು ಪ್ರದೇಶದ, ಜನಾಂಗದ, ಜೀವನ ವಿಧಾನವನ್ನು ವಿವರಿಸುತ್ತವೆ. ಮನೆತನವೊಂದರ, ಗ್ರಾಮಗಳ, ಜನಾಂಗವೊಂದರ ಪರಾಭವ, ಸೋಲು–ಅಸಹಾಯಕತೆ, ಪತನದ ಇಳಿಮುಖದ ಚಿತ್ರಣವನ್ನು ಕೊಡುತ್ತದೆ. ಅಲ್ಲದೆ ಜನ ಸಮುದಾಯಕ್ಕೆ ಹಳೆಯ ಮೌಲ್ಯಗಳು ಪ್ರಾಚೀನ ಸಂಪ್ರದಾಯಗಳು, ರೂಢಿ–ಪರಂಪರೆಗಳ ಬಗ್ಗೆ, ದೇವರು ದೆವ್ವ, ಹಬ್ಬ, ಹರಕೆ, ಮೊದಲಾದವುಗಳಲ್ಲಿ ಪ್ರೀತಿ, ಗೌರವ, ಭಕ್ತಿ, ಭಯ ವಿಶ್ವಾಸವಿರುತ್ತದೆ. ಇಂತಹ ಕಥೆ–ಕಾದಂಬರಿಗಳಲ್ಲಿ ಮುಖ್ಯವಾಗಿ ಪ್ರೇಮ ಕಾಮಗಳಲ್ಲಿ ಅವರ ಬಂಧನದಿಂದ ಬಿಡಿಸಲಾಗದ ಸಂಬಂಧಗಳನ್ನು ಕಾಣಬಹುದು. ಜೊತೆಗೆ ಕಾದಂಬರಿ, ಕಥೆ ತನ್ನದೇ ಆದ ಭಾಷೆಯ ವೈಶಿಷ್ಟ್ಯತೆಯನ್ನು ಹೊಂದಿದ್ದು ಅಲ್ಲಿ ಜಾನಪದ, ಕತೆ, ಪುರಾಣಗಳು, ನಂಬಿಕೆಗಳು, ಸ್ಥಳ ಐತಿಹ್ಯಗಳು ಸೇರಿ ಕತೆ–ಕಾದಂಬರಿಗಳಿಗೆ ಕಸುವನ್ನು ತಂದು ಕೊಡುತ್ತದೆ.

ಈ ಪ್ರಾದೇಶಿಕ ವಿಶಿಷ್ಟತೆಯಿಂದಾಗಿ ಆಧುನಿಕ ಕನ್ನಡ ಸಾಹಿತ್ಯದ ರಚನೆಗೆ ವಿಶಿಷ್ಟವಾದ ಶೈಲಿಯೊಂದು ರೂಪುಗೊಂಡಿದೆ. ಪ್ರಾದೇಶಿಕತೆಯ ದೃಷ್ಟಿಯಿಂದ ನೋಡಿದಾಗ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯದ ಸಂದರ್ಭದಲ್ಲಿ ರಚನೆಗೊಂಡಂತಹ ಸಾಹಿತ್ಯದಲ್ಲಿ ಪ್ರಾದೇಶಿಕತೆಯನ್ನು ಮಹತ್ವದ್ದಾಗಿ ಗುರುತಿಸಬಹುದು. ಕುವೆಂಪು ಅವರ ಕಥೆ–ಕಾದಂಬರಿಗಳಲ್ಲಿ ಮಲೆನಾಡಿನ ಪ್ರಕೃತಿ ಮತ್ತು ಅಲ್ಲಿನ ಸಮುದಾಯಗಳ ಸಂಸ್ಕೃತಿಗಳನ್ನು ಕಟ್ಟಿಕೊಟ್ಟಿದ್ದಾರೆ. ಇದೇ ರೀತಿಯಾಗಿ ಕಾರಂತರು, ಬೇಂದ್ರೆ, ರಾವ್‌ಬಹದ್ದೂರ್, ಲಂಕೇಶ್, ಭೈರಪ್ಪ, ಬರಗೂರು ರಾಮಚಂದ್ರಪ್ಪ, ವಿಶೇಷವಾಗಿ ದಲಿತ–ಬಂಡಾಯದ ಹೊಸ್ತಿಲಲ್ಲಿ ಕಾಣಬರುವ ದೇವನೂರು ಮಹಾದೇವರ 'ಒಡಲಾಳ', 'ಕುಸುಮಬಾಲೆ', ಸಿದ್ಧಲಿಂಗಯ್ಯನವರ 'ನನ್ನ ಜನಗಳು', 'ಸಾವಿರಾರು ನದಿಗಳು' ಮುಂತಾದ ಕೃತಿಗಳಲ್ಲಿ ಪ್ರಾದೇಶಿಕತೆಯನ್ನು ಗುರುತಿಸಬಹುದಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಕೇವಲ ಪುರುಷ ಲೇಖಕರು ಮಾತ್ರ ಪ್ರಾದೇಶಿಕತೆಯ ಕೃತಿಗಳನ್ನು ರಚಿಸಲಿಲ್ಲ. ಇವರ ಜೊತೆಯಲ್ಲಿ ಸ್ತ್ರೀಯರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದು ವಿಶೇಷವಾಗಿತ್ತು. ನವ್ಯ ಸಾಹಿತ್ಯದಲ್ಲಿ ಮುಖ್ಯವಾಗಿ ಹೊಸ ಛಾಪನ್ನು ಮೂಡಿಸಿರುವ ವೀಣಾ ಶಾಂತೇಶ್ವರ, ದಲಿತ–ಬಂಡಾಯದ ನೆಲೆಯ ಸಾಹಿತ್ಯ ರಚಿಸಿದಂತಹ ಗೀತಾ ನಾಗಭೂಷಣ ಮತ್ತು ಇವರ ಕಾಲದಲ್ಲಿಯೇ

ಬರಹಕ್ಕಿಳಿದ ವೈದೇಹಿ ಅವರು ಪ್ರಮುಖರು. ಮಾಸ್ತಿಯವರ ಕಥೆಗಳಲ್ಲಿ ಬೆಂಗಳೂರು ಸುತ್ತಲಿನ ದೇಸಿ ಭಾಷೆಯನ್ನಾಡುವ ಸಮುದಾಯಗಳ ಸಂಸ್ಕೃತಿಗಳನ್ನು ಕಟ್ಟಿಕೊಟ್ಟಂತೆ, ಹೆಚ್.ನಾಗವೇಣಿ ಅವರ ಕಥೆಗಳು ದಕ್ಷಿಣ ಕನ್ನಡದ ಕಡಲತೀರದ ಪ್ರಾದೇಶಿಕತೆಯನ್ನು ಕಟ್ಟಿಕೊಟ್ಟರು. ಕುಂ.ವೀರಭದ್ರಪ್ಪನವರು ಬಳ್ಳಾರಿ ಜಿಲ್ಲೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದರು. ಗೀತಾ ನಾಗಭೂಷಣ, ವೀಣಾ ಶಾಂತೇಶ್ವರ, ವೈದೇಹಿ ಅವರು ತಮ್ಮ ಸಮುದಾಯಗಳ ಸಂಸ್ಕೃತಿಯ ವಿಶೇಷತೆ ಅಥವಾ ಅವರ ಭಿನ್ನತೆಯನ್ನು ಆಯಾ ಪ್ರಾದೇಶಿಕ ಹಿನ್ನೆಲೆಯಲ್ಲಿ ಕಥೆಗಳ ಮೂಲಕ ರಚಿಸಿದ್ದಾರೆ.

ಕಥೆಗಾರ್ತಿಯರು ತಮ್ಮ ಸುತ್ತಮುತ್ತಲಿನ ಪರಿಸರದ ಪ್ರಭಾವದಿಂದ ಸಾಹಿತ್ಯ ರಚನೆಯಲ್ಲಿ ತೊಡಗುತ್ತಾರೆ. ಸಮಾಜದಲ್ಲಿರುವ ಅಸಮಾನತೆಯ ವಿರುದ್ಧ ಪ್ರತಿಭಟನೆ ಮಾಡುವಂತೆ ಕಥೆಯ ಮೂಲಕ ಕಥಾನಾಯಕ, ಉಪಕಥಾನಾಯಕ, ನಾಯಕನ ತಂದೆ–ತಾಯಿ, ಸಂಬಂಧಿಕರು, ಸ್ನೇಹಿತರು ಮುಂತಾದ ಪಾತ್ರಗಳ ಮೂಲಕ ಚಿತ್ರಿಸುತ್ತಾರೆ. ಕಥೆಗಾರ್ತಿಯರು ಅತ್ಯಂತ ಸೂಕ್ಷ್ಮವಾದ ವಿಚಾರಗಳನ್ನು ವಿವರವಾಗಿ ಉಪಮಾನದ ರೀತಿಯಲ್ಲಿ ಕಥೆಯ ತಿರುಳನ್ನು ಸಹೃದಯರಿಗೆ ತಿಳಿಯಪಡಿಸುತ್ತಾರೆ. ಇದು ಲೇಖಕಿಯರ ಒಳಗೆ ಕಾಡುತ್ತಿರಬಹುದಾದ ಮಾನಸಿಕ ತೊಳಲಾಟವನ್ನು ಬಿಡಿಸಿಕೊಳ್ಳುವ ಪರಿಯೂ ಆಗಿರಬಹುದು. ಅತ್ಯಂತ ಸೂಕ್ಷ್ಮವಾಗಿ ಪ್ರತಿಭಟಿಸುವ ಪ್ರಕ್ರಿಯೆಯೂ ಹೌದು. ಸಮಾಜದಲ್ಲಿನ ಮೌಢ್ಯ ಸಂಸ್ಕೃತಿಯ ಭ್ರಮೆಯಲ್ಲಿ ಬಿದ್ದು ಒದ್ದಾಡುವ ಚಿತ್ರಣವಿರಬಹುದು. ಆಧುನಿಕತೆಯ ಸ್ಪರ್ಶ ಕೂಡ ಇರಬಹುದು. ಇಂತಹ ಅನೇಕ ವಿಷಯಗಳನ್ನು ತಮ್ಮ ಅಮೂರ್ತ ಚಿಂತನೆಯಲ್ಲಿ ಹುದುಗಿರುವ ಅಂಶಗಳನ್ನು ನಯವಾಗಿ ತಿರಸ್ಕರಿಸುವ ಮೂಲಕ ಸರಿ–ತಪ್ಪು, ಸತ್ಯ–ಅಸತ್ಯದ ಬಗ್ಗೆ ಓದುಗ ವರ್ಗಕ್ಕೆ ತಮ್ಮ ಕಥೆಯ ಮೂಲಕ ತಾರ್ಕಿಕ ಅಭಿಪ್ರಾಯದ ಬಗೆಗೆ ಅಭಿವ್ಯಕ್ತಿಸಿರುವುದನ್ನು ಗಮನಿಸಬಹುದು.

ಸ್ತ್ರೀಯರು ಸಮಾಜದ ಸಂಸ್ಕೃತಿಯ ಪರ ಇಲ್ಲವೇ ವಿರೋಧದ ನಿಲುವುಗಳನ್ನು ತೋರ್ಪಡಿಸುತ್ತಾರೆ. ಇದು ವ್ಯಕ್ತಿಯ ವಿರುದ್ಧವಾಗಿರಬಹುದು ಇಲ್ಲವೇ ಸಮಾಜದ ವಿರುದ್ಧವಾಗಿರಬಹುದು. ಬದುಕಿನ ಭಾವನೆಗಳನ್ನು ಅನೇಕ ಬಗೆಯ ಸಮಸ್ಯೆಗಳ ಮೂಲಕ ಒಂದು ಚೌಕಟ್ಟಿನಲ್ಲಿ ಕಟ್ಟಿಕೊಡುವ ಮೂಲಕ ನಯವಾಗಿ ಅದನ್ನು ತಿರಸ್ಕರಿಸುವ ಇಲ್ಲವೇ ಒಪ್ಪುವಂತಹ ಅಂಶಗಳನ್ನು ಕತೆಯಲ್ಲಿ ಬರುವ ಪಾತ್ರಗಳ ಹಿನ್ನೆಲೆಯಲ್ಲಿ ಚಿತ್ರಿಸುತ್ತಾರೆ.

ವೀಣಾ ಶಾಂತೇಶ್ವರವರ ಕತೆಗಳಲ್ಲಿನ ಪ್ರಾದೇಶಿಕ ಭಿನ್ನತೆಯ ವೈಶಿಷ್ಟ್ಯತೆಗಳು

ವೀಣಾ ಶಾಂತೇಶ್ವರ ಸುಮಾರು ನಾಲ್ಕೂವರೆ ದಶಕಗಳಲ್ಲಿ ಕೇವಲ ೩೮ ಕಥೆಗಳನ್ನು ಮತ್ತು ಎರಡು ಕಿರುಕಾದಂಬರಿಗಳನ್ನು ಮಾತ್ರ ಬರೆದಿದ್ದಾರೆ. ಅತ್ಯಂತ ಸಂಯಮ ಮತ್ತು ಸಂವೇದನಾಶೀಲ ಕತೆಗಾರ್ತಿಯಾದ ವೀಣಾ ಶಾಂತೇಶ್ವರ ಮೃದು ನಡೆನುಡಿಯ ಆಧುನಿಕ ದೃಷ್ಟಿಕೋನವುಳ್ಳವರು. ಆಧುನಿಕೋತ್ತರ ಕತೆಗಾರ್ತಿಯರಿಗೆ ಹೊಸದಾರಿಯನ್ನು ಹಾಕಿಕೊಟ್ಟವರು. ಇತ್ತೀಚಿನ ಬಹುಪಾಲು ಲೇಖಕಿಯರಲ್ಲಿ ಕಾಣಿಸಿಕೊಳ್ಳುದ ಸರಳ ಭಾಷಾ ಪ್ರಯೋಗದ ಸಂಕೀರ್ಣತೆಯನ್ನು ಇವರ ಕತೆಗಳಲ್ಲೂ ಕಾಣಬಹುದು. ದೈನಂದಿನ ಬದುಕಿನ ಸೂಕ್ಷ್ಮ ವಿವರಗಳ ಹಂದರ ಇವರ ಕತೆಗಳಲ್ಲಿದೆ. ಸೃಜನಶೀಲತೆಯಿಂದ ರಚಿಸಿದ ಇವರ ಕತೆಗಳು ಮನಸ್ಸನ್ನು ಗಾಢವಾಗಿ ತಟ್ಟುತ್ತವೆ. ಕತೆಗಳ ಜೀವಂತಿಕೆಯಿಂದಾಗಿ ಜನರ ಮನಸ್ಸಿನಲ್ಲಿ ಧೀರ್ಘಕಾಲ ಉಳಿಯುತ್ತವೆ. ಅವುಗಳಿಗೆ ನಿಶ್ಚಿತ ರೂಪ, ಶಿಲ್ಪ, ವಿನ್ಯಾಸ, ನಿರ್ದಿಷ್ಟ ಗುರಿ ಇದೆ. ಪ್ರಾಣ ಸಂಚಾರಕ್ಕೆ ಆಮಂತ್ರಣ ನೀಡುವ ಇಂಥ ಸಶಕ್ತ ಕತೆಗಳು ಧಾರವಾಡದ ಪ್ರದೇಶದಿಂದ ಪರಿಸರದಲ್ಲಿ ಮೂಡಿಬಂದಿವೆ. ಪ್ರತಿಯೊಂದು ಕತೆಯ ಜೀವವ್ಯಾಪಾರದ ಆಂತರಿಕ ಕಾಳಜಿ ಮತ್ತು ಆಸೆಗಳು, ಸುಶಿಕ್ಷಿತ, ಉದ್ಯೋಗಸ್ಥ ಮಹಿಳೆಯು ಅನುಭವಿಸುವ ಕಷ್ಟನಷ್ಟಗಳನ್ನು ವೈಚಾರಿಕವಾಗಿ ಚಿತ್ರಿಸುತ್ತಾರೆ. ಲಿಂಗತಾರತಮ್ಯದ ಸೂಕ್ಷ್ಮತೆಗಳನ್ನು ತಾತ್ವಿಕವಾಗಿ ಚರ್ಚಿಸುತ್ತವೆ. ಕಥೆಗಾರ್ತಿಯ ಮಾನವೀಯ ಗ್ರಹಿಕೆಯ ಜಗತ್ತು ನಮ್ಮ ವೈಯಕ್ತಿಕ ಪ್ರಜ್ಞೆಯೊಳಗೆ ಜ್ಞಾನ ಮತ್ತು ಅನುಭವವಾಗಿ ರೂಪುಗೊಳ್ಳುತ್ತವೆ. ಪ್ರತಿ ಓದಿಗೊಮ್ಮೆ ಹೊಸ ಅರ್ಥ ಸ್ಫುರಿಸುವ ಕತೆಗಳು ಸ್ತ್ರೀ ಸಮುದಾಯದ ದುರಂತಕ್ಕೆ ಹೊಸ ವಾಖ್ಯಾನ ಬರೆಯುತ್ತವೆ.

ವೀಣಾ ಶಾಂತೇಶ್ವರ ಅವರ ಕತೆಗಳು ನಾಲ್ಕು ಹಂತಗಳಲ್ಲಿವೆ. ಅವರ ಕತೆಗಳು ಹೊಸ ಅರ್ಥಗಳನ್ನು ಪ್ರತಿಬಿಂಬಿಸುತ್ತವೆ. ಇವರು ಬರೆದ ಕತೆಗಳ ವಸ್ತುವಿನಲ್ಲಿ ಸ್ವಂತಿಕೆ ಇದ್ದರೂ ಪಾತ್ರ ನಿರೂಪಣೆಯಲ್ಲಿ ಮತ್ತು ತಂತ್ರದಲ್ಲಿ ಬೇರೆ ಲೇಖಕರು ಅನುಕರಣೆಯನ್ನು ಗುರುತಿಸಬಹುದು. ವಸ್ತು ಯಾವಾಗಲೂ ಒಂದು ಕ್ರಾಂತಿಕಾರಕ ವಿಚಾರಸರಣಿಯನ್ನು ಪ್ರತಿಪಾದಿಸುತ್ತವೆ. ಮಧ್ಯ ವಯಸ್ಸಿಗೆ ಸಾಮಾನ್ಯವಾದ ಭಾವನಾತ್ಮಕತೆ ಕಾಲ್ಪನಿಕತೆ, ರಮ್ಯತೆ, ಆದರ್ಶಪ್ರಿಯತೆ ಇವೆಲ್ಲ ಅಂಶಗಳಿದ್ದ ಆ ಕತೆಗಳಲ್ಲಿ ನಾಯಕಿ ಅನ್ಯಾಯವನ್ನು ವಿರೋಧಿಸುವ ಮನೋಭಾವದವಳಾಗಿದ್ದಳು. ಹೆಚ್ಚಿನ ಕತೆಗಳಲ್ಲಿ ಅನ್ಯಾಯ ಅತ್ಯಾಚಾರಿಗಳ ವಿರುದ್ಧ ನಡೆಸಿದ ಹೋರಾಟದಲ್ಲಿ ವೀಣಾ ಶಾಂತೇಶ್ವರ ಅವರು ಯಶಸ್ವಿಯಾಗಿದ್ದಾರೆ.

ವೀಣಾ ಶಾಂತೇಶ್ವರ ಅವರು ಎರಡನೇ ಹಂತದ ಕತೆಗಳನ್ನು ಬರೆಯುವ ಸಾಹಿತ್ಯದ ಅಭಿರುಚಿಯಿಂದ ಬೌದ್ಧಿಕವಾಗಿ, ವಿಚಾರವಂತಿಕೆಯಲ್ಲಿ ಸ್ವಲ್ಪ ಭಿನ್ನವಾಗಿ ಕಾಣುತ್ತಾರೆ.

ತನ್ನ ಅಧ್ಯಯನದ ಸಂದರ್ಭದಲ್ಲಿ ಕನ್ನಡ ಹಿಂದಿ ಹಾಗೂ ಇಂಗ್ಲೀಷ್ ಸಾಹಿತ್ಯಗಳ ಓದಿನ ವ್ಯಾಪ್ತಿ ಒಮ್ಮೆಲೆ ವಿಸ್ತಾರವಾಗಿ ಅನೇಕ ವಿರುದ್ಧ ವಿಚಾರ ಸರಣಿಯುಳ್ಳ ಲೇಖಕರಿಂದ ವೀಣಾ ಅವರು ಪ್ರಭಾವಿತರಾದರು. ಕನ್ನಡದ ಮಾಸ್ತಿ, ನಿರಂಜನ, ಅಡಿಗರು, ಶಾಂತಿನಾಥ ದೇಸಾಯಿ, ಇಂಗ್ಲೀಷನ ಇಬ್ಸನ್, ಏಲಿಯಟ್, ಸಾರ್ತ್ರ ಕಾಮು, ಕಾಫ್ಕಾ ಮುಂತಾದವರನ್ನು ಅನುಸರಿಸುವುದರ ಜೊತೆಗೆ ಅವರ ಸಾಹಿತ್ಯವೂ ಕೂಡ ಇವರನ್ನು ಪ್ರಭಾವಿಸಿದೆ. ವೀಣಾಶಾಂತೇಶ್ವರರ ಮೇಲೆ ಹೆಚ್ಚಿನದಾಗಿ ಗುರುಗಳಾದ ಶಾಂತಿನಾಥ ದೇಸಾಯಿಯವರು ಪ್ರಭಾವ ಬೀರಿದ್ದಾರೆ. ಅದರಲ್ಲೂ ಅವರು ಬರೆದ 'ಮುಕ್ತಿ' ಕಾದಂಬರಿ, ವಸ್ತುವಿನ ನಿರೂಪಣಾ ವಿಧಾನ, ತಂತ್ರ ರಚನೆ, ಪಾತ್ರಸೃಷ್ಟಿ, ವಿಚಾರ ಪ್ರತಿಪಾದನೆ ಇದನ್ನೆಲ್ಲ ಹೀಗೆ ಕಲಾತ್ಮಕವಾಗಿ ದುಡಿಸಿಕೊಳ್ಳಬಹುದು ಎಂಬುದನ್ನು ಕಲಿತಿದ್ದಾರೆ. ಸಾಮಾಜಿಕ ಅನಿಷ್ಟಗಳ ಬಗ್ಗೆ ಪ್ರತಿಭಟನೆ, ಮಹಿಳೆಯ ಮೇಲಾಗುವ ದೌರ್ಜನ್ಯದ ವಿವಿಧ ರೂಪಗಳು, ಇವರ ಮಧ್ಯಂತರ ಅವಧಿಯ ಕಥಾವಸ್ತುಗಳಾಗಿದ್ದವು. ಅನ್ಯಾಯವನ್ನು ವಿರೋಧಿಸುವ, ಕಥಾ ನಾಯಕಿಗೆ ಸೋಲು, ಅಪಮಾನಗಳೇ ಎದುರಾಗುತ್ತಿದ್ದರೂ ಮಹಿಳೆಯು ಎದೆಗುಂದುವುದಿಲ್ಲ. ಇವು ಲೇಖಕಿಯ ಮೊದಲ ಎರಡು ಕಥಾ ಸಂಕಲನಗಳ ಬಹುಮುಖ್ಯವಾದ ಆಶಯವಾಗಿದೆ.

ವೀಣಾ ಶಾಂತೇಶ್ವರ ಅವರ ಮೂರು ಹಾಗೂ ನಾಲ್ಕನೆಯ ಕಥಾ ಸಂಕಲನಗಳು ಒಳಗೊಂಡಿರುವ ಅಂಶಗಳೆಂದರೆ ವಸ್ತುವಿಗೆ ಹಾಗೂ ತಂತ್ರಕ್ಕೆ ಅನುಗುಣವಾಗಿ ಬಳಸಿಕೊಂಡಿರುವುದು. ಪಾತ್ರಗಳಲ್ಲಿ ಜೀವಂತಿಕೆ ಹಾಗೂ ಕಲಾತ್ಮಕತೆಯನ್ನು ತುಂಬಿರುವುದು, ಈ ಕತೆಗಳಲ್ಲಿ ತಕ್ಕಮಟ್ಟಿಗೆ ಸ್ವಂತಿಕೆಯನ್ನು ಸಾಧಿಸಲು ವೀಣಾ ಶಾಂತೇಶ್ವರ ಅವರಿಗೆ ಸಾಧ್ಯವಾಗಿದೆ ಎನಿಸುತ್ತದೆ. ಈ ಅವಧಿಯ ನಾಯಕಿಯರು ಸ್ವಾವಲಂಬಿಗಳು, ಸಂಪ್ರದಾಯ ವಿರೋಧಿಗಳೂ ಆಗಿದ್ದು, ಇಂತಹ ಮಹಿಳೆಯರು ಎದುರಿಸಬೇಕಾದ ಸಾಮಾಜಿಕ, ವೈಯಕ್ತಿಕ, ವೈಚಾರಿಕ ಹಾಗೂ ಮಾನಸಿಕ ಸಮಸ್ಯೆಗಳು ಈ ಕತೆಗಳ ವಸ್ತುಗಳಾಗಿವೆ.

ಮುಂದಿನ ಕಾಲ ಘಟ್ಟದಲ್ಲಿ ಬರೆದ ಕತೆಗಳು ವೀಣಾ ಶಾಂತೇಶ್ವರ ಅವರ ಮತ್ತೊಂದು ರೀತಿಯ ಸಂವೇದನೆಗಳನ್ನು ಮತ್ತು ಕಥಾ ಶೈಲಿಯನ್ನು ಪರಿಚಯಿಸುತ್ತವೆ. ಅವರು ಬರೆದ ಕೆಲವು ಕತೆಗಳಲ್ಲಿ ಮಹಿಳೆ ಧೈರ್ಯವಂತಳಾಗಿರಲಿ, ಗಂಡನನ್ನು ಧಿಕ್ಕರಿಸುವವಳಾಗಿರಲಿ, ಸಂಪ್ರದಾಯ ವಿರೋಧಿಯಾಗಿರಲಿ ಪ್ರಸ್ತುತ ಸಮಾಜ ಆಕೆಯನ್ನು ಸುಖನಿದ್ರೆ ಮಾಡಲು ಬಿಡುವುದಿಲ್ಲ ಎಂಬ ನೋವಿನ ಅರಿವು ಇದೆ. ಏಕಾಏಕಿ ಪುರುಷ ಹಾಗೂ ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡುವ ಮಹಿಳೆಯ ದಾರಿ ಇನ್ನೂ ಸುಗಮವಾಗಿಲ್ಲ. ಪರಿಪೂರ್ಣ ಮಹಿಳಾ ಸ್ವಾತಂತ್ರ್ಯಕ್ಕೆ ಕಾಲವಿನ್ನೂ ಸರಳವಾಗಿಲ್ಲ.

ಹೆಂಡತಿಯಾದವಳು ಅಥವಾ ಪ್ರೇಯಸಿಯಾದವಳು ಹೊಂದಾಣಿಕೆ ಮಾಡಿಕೊಳ್ಳಬೇಕು ಅಥವಾ ತನ್ನ ತತ್ವಗಳಿಗಾಗಿ ನೋವು ಅನುಭವಿಸುತ್ತ ಬದುಕಿರಬೇಕು. ಶತಾಯ ಗತಾಯ ಮಾಡಿಯಾದರೂ ಜಯಗಳಿಸಿಯೂ ಸುಖವಾಗಿರುವ ಭಾಗ್ಯ ತೀರಾ ಕಡಿಮೆ ಸಂಖ್ಯೆಯ ಮಹಿಳೆಯರಿಗಿದೆ. ಉಳಿದವರನ್ನು ಈ ಸಮಾಜ ಒತ್ತಾಯದಿಂದ ಹೊಂದಾಣಿಕೆ ಮಾಡಿಕೊಳ್ಳಲು ಹಚ್ಚುತ್ತದೆ. ಈ ಮಹಿಳೆಯರು ಅಂಜುಬುರುಕರಲ್ಲ. ಹೇಡಿಗಳಲ್ಲ, ಕಟುವಾಸ್ತವದ ಅರಿವುಳ್ಳವರು. ಇವರು ಸೋತವರಲ್ಲ ಗೆದ್ದವರು ಗಟ್ಟಿಯಾಗಿ ನಿಂತವರು.

ವೀಣಾ ಶಾಂತೇಶ್ವರ ಅವರ ಕಥೆಗಳ ಪಾತ್ರಗಳು ಪ್ರಾತಿನಿಧಿಕವಾಗಿ ವಿಶಿಷ್ಟವಾಗಿರುವುದರಿಂದಲೇ ಅವರು ಸ್ತ್ರೀವಾದಿ ಲೇಖಕಿಯಾಗಿರುವುದು. ಇದು ಕಡುಕಷ್ಟ. ಅವರು ಚಿತ್ರಿಸುವ ಪಾತ್ರಗಳನ್ನು ಎಚ್ಚರಿಕೆಯಿಂದ ನೋಡಿದಾಗ ಈ ಮಾತು ಗೊತ್ತಾಗುತ್ತದೆ. ಅವರು ಒಳ್ಳೆಯ ಇಲ್ಲವೇ ಕೆಟ್ಟ ರೀತಿಯಲ್ಲಿ ಪುರುಷ ಹಾಗೂ ಮಹಿಳಾ ಪಾತ್ರಗಳನ್ನು ಸೃಷ್ಟಿಸುತ್ತಾರೆ. ಅವರು ಈ ನಾಲ್ಕು ಸಾಧ್ಯತೆಗಳನ್ನು ಒಂದೇ ಪಾತ್ರದಲ್ಲಿ ಚಿತ್ರಿಸಬಲ್ಲರು ಎನ್ನುವುದು ವೀಣಾರವರ ಕಥನಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ. ವೀಣಾರ ಪಾತ್ರಗಳ ವೈವಿಧ್ಯವು ಅವರು ಕೊಡುವ ವಿವರಗಳ ಏಕತಾನತೆಯಲ್ಲಿ ಮರೆಯಾಗಿರುತ್ತದೆ. ಅವರು ಕಟ್ಟಿಕೊಟ್ಟಿರುವುದು ಹೆಣ್ಣಿನ ಯಾತನೆಯನ್ನು ಮಾತ್ರವಲ್ಲ, ಪುರುಷರ ಬವಣೆಯನ್ನು ಕೂಡ. ವೀಣಾ ಸೃಷ್ಟಿಸಿರುವ ಹುಡುಗಿಯರು / ಮಹಿಳೆಯರು ದೇವತೆಗಳೂ ಅಲ್ಲ, ರಾಕ್ಷಸಿಯರೂ ಅಲ್ಲ. ಅವರು ಕೂಡಾ ಪುರುಷರಂತೆ ಶೋಷಣೆ ಮಾಡುವುದರಲ್ಲಿ ಸಹಭಾಗಿಯಾಗಿರುತ್ತಾರೆ ಎನ್ನುವುದು ವೀಣಾ ಶಾಂತೇಶ್ವರರ ನಿಲುವಾಗಿದೆ.

ವೀಣಾ ಶಾಂತೇಶ್ವರ ಅವರು ಈ ಮೇಲೆ ತಿಳಿಸದಂತಹ ಕತೆಗಳ ವಸ್ತು ಹಾಗೂ ಆಶಯಗಳನ್ನು ಪ್ರಾದೇಶಿಕವಾಗಿ ಹೇಗೆ ಕಟ್ಟಿಕೊಟ್ಟಿದ್ದಾರೆ ಎಂಬುದು ಬಹುಮುಖ್ಯವಾದ ವಿಷಯವಾಗಿದೆ. ಭಾಷೆಯ ಬಳಕೆಯ ಬಗ್ಗೆ ವಿಶೇಷವಾದ ಪ್ರಶ್ನೆಯೊಂದು ಈಚೆಗೆ ಬೆಳೆಯ ತೊಡಗಿರುವುದನ್ನು ಗಮನಿಸಬಹುದಾಗಿದೆ. "ಹೊಸ ಅವಶ್ಯಕತೆಗಾಗಿ ಭಾಷೆಯನ್ನು ಕಾಲಕಾಲಕ್ಕೆ ಪುರ್ನನಿರ್ಮಿಸಿಕೊಳ್ಳುವ ಪ್ರಯತ್ನ ಕನ್ನಡ ಸಾಹಿತ್ಯ ಪರಂಪರೆಗೂ ಹೊಸದಲ್ಲ. ಪಂಪ, ಬಸವಣ್ಣ, ಹರಿಹರ, ರಾಘವಾಂಕ, ಕುಮಾರವ್ಯಾಸ, ರತ್ನಾಕರವರ್ಣಿ, ಬಿ.ಎಂ.ಶ್ರೀಕಂಠಯ್ಯ, ಬೇಂದ್ರೆ ಮೊದಲಾದವರಲ್ಲಿ ಈ ಪ್ರಯತ್ನಗಳನ್ನು ಕಾಣುತ್ತೇವೆ. ಹಾಗೆಯೇ ನವ್ಯ ಸಾಹಿತಿಗಳೇ ತಮ್ಮ ಕಾಲದಲ್ಲಿ ಬಹು ಬಳಕೆಯಿಂದ ನಿಸ್ತೇಜವಾದ ಭಾಷೆಯನ್ನು ಬಿಟ್ಟು ಹೊಸದನ್ನು ಕಟ್ಟಿಕೊಳ್ಳುತ್ತಿದ್ದಾರೆ."[೧]

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಕಾರರಿಂದ ಪ್ರಾರಂಭವಾದ ಭಾಷೆಯ ಬಳಕೆ ಪ್ರಾದೇಶಿಕ ಅಂಶಗಳು ಇಂದಿನ ಅಂದರೆ ಆಧುನಿಕ ಕನ್ನಡ ಸಾಹಿತ್ಯ ವಿಭಿನ್ನವಾಗಿ

ಕಟ್ಟಿಕೊಡುತ್ತಿರುವ ಹೊಸ ತಲೆಮಾರಿನ ಹಲವಾರು ಕವಿಗಳು ತಮ್ಮದೇ ಆದ ಭಾಷೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ವೀಣಾ ಶಾಂತೇಶ್ವರ ಅವರ ಸಾಹಿತ್ಯದ ಮೇಲೆ ಹಲವಾರು ಸಂಗತಿಗಳು ಪ್ರಭಾವ ಬೀರಿವೆ. ಮುಂಬೈ ಕರ್ನಾಟಕ ಪ್ರದೇಶವೆಂದು ಕರೆಯಲ್ಪಡುವ ಧಾರವಾಡ ಪರಿಸರ, ಮೇಲ್ವರ್ಗದ ಬ್ರಾಹ್ಮಣ ಕುಟುಂಬದ ಪರಿಸರ ಮತ್ತು ಹಿನ್ನೆಲೆ, ಪೇಶ್ವೆಗಳ ಆಡಳಿತ ನೆರಳಿನಿಂದಾಗಿ ಮರಾಠಿ ಭಾಷೆಯ ಪ್ರಭಾವ, ಪ್ರಾದೇಶಿಕವಾಗಿ ಹತ್ತಿರವಾಗಿರುವ ಬೆಳಗಾಂ, ಮುಂಬೈ, ಪುಣೆ ನಗರಗಳ ನಂಟು ಶಾಂತೇಶ್ವರ ಅವರ ಕತೆಗಳ ಮೇಲೆ ಪ್ರಭಾವ ಬೀರಿದೆ. ಹಾಗಾದರೆ ವೀಣಾ ಶಾಂತೇಶ್ವರ ಅವರ ಕತೆಗಳಲ್ಲಿ ಪ್ರಾದೇಶಿಕ ಭಿನ್ನತೆಯ ವೈಶಿಷ್ಟ್ಯಗಳನ್ನು ಅವರ ಕತೆಗಳ ಮೂಲಕ ಗುರುತಿಸಬಹುದು. ಅವರು ಬದುಕಿದ ಪರಿಸರ, ನೆಲ-ಜಲ, ಉಡುಗೆ-ತೊಡುಗೆ, ಆಚಾರ-ವಿಚಾರ, ಅಲ್ಲಿಯ ಭಾಷೆ, ಶೈಲಿ, ಸಂಸ್ಕೃತಿ, ಊಟ-ಉಪಚಾರ, ಬಹುಮುಖ್ಯವಾದವುಗಳು. ಅದರಲ್ಲಿಯೂ ಅವರು ಆಯ್ಕೆ ಮಾಡಿಕೊಂಡ ಕಥೆಯ ಪಾತ್ರಗಳೆಲ್ಲವೂ ಸ್ತ್ರೀಪ್ರಧಾನವಾದವುಗಳು, ಹಸಿವಿನ ಚಿಂತೆಯಿಲ್ಲದವು, ಶಿಕ್ಷಣ ಪಡೆದ ವಿದ್ಯಾವಂತ ಹೆಣ್ಣುಮಕ್ಕಳು, ಜೊತೆಗೆ ಯಾವುದಾದರೊಂದು ಉದ್ಯೋಗ ಇಲ್ಲವೇ ಕೆಲಸದಲ್ಲಿ ನಿರತರಾಗಿ ತನ್ನತನವನ್ನು ಉಳಿಸಿಕೊಳ್ಳಲು ಪ್ರಯತ್ನಸುತ್ತಿರುವವರು.

ಮುಳ್ಳುಗಳು ಕತೆಯ ನಾಯಕಿ ಶಾಂತಿ ಪುರುಷನ ಲೈಂಗಿಕಾಸಕ್ತಿಯನ್ನು ಗ್ರಹಿಸುತ್ತ ಹಾಸ್ಟೆಲಿನ ಮುಂದೆ ಸದಾ ಬಾಲ ಅಲ್ಲಾಡಿಸುತ್ತ ಬಿದ್ದಿರುವ ಆ ಗಂಡು ನಾಯಿಯ ಕಣ್ಣಲ್ಲೂ ಅದೇ ನಾಯಿಯಾದರೇನು? ಗಂಡಲ್ಲವೆ? ಎನ್ನುತ್ತಲೇ ಪುರುಷರ ಲೈಂಗಿಕ ವರ್ತನೆಯನ್ನು ವಿಮರ್ಶೆಗೊಳಪಡಿಸುತ್ತಿದ್ದಾಳೆ. "ಸ್ನಾನದ್ದೂ ಒಂದು ಮಜ. ಬಡಬಡಾ ಒಂದು ನಿಮಿಷದಲ್ಲಿ ನೀರು ಸುರುವಿಕೊಂಡಾದ ನಂತರ ಬಹಳ ಹೊತ್ತಿನವರೆಗೆ ಮೈ ಒರೆಸಿಕೊಳ್ಳುತ್ತ ನಿಲ್ಲಬೇಕೆನಿಸುತ್ತದೆ."[೨] ಇಲ್ಲಿಯ ವಾಕ್ಯಗಳನ್ನು ಗಮನಿಸಿದರೆ ಗಂಡು-ಹೆಣ್ಣಿನ ಲೈಂಗಿಕಾಸಕ್ತಿಯನ್ನು ಭಿನ್ನ ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ಅಂದರೆ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ಲೈಂಗಿಕ ವಿಷಯಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಇಲ್ಲವೇ ಅದನ್ನು ತೋರ್ಪಡಿಸಿದರೆ ಅವಳನ್ನು ವಿರೋಧಿಸುವ, ಬೇರೆ ದೃಷ್ಟಿಯಿಂದ ಅವಳನ್ನು ನಡೆಸಿಕೊಳ್ಳುವ ಸಮಾಜದ ಬಗೆಗೆ ವೀಣಾ ಶಾಂತೇಶ್ವರ ಅವರು ಕತೆಯ ಪಾತ್ರವಾದ ಶಾಂತಿಯ ಮೂಲಕ ಹೆಣ್ಣಿಗೂ ಲೈಂಗಿಕ ಆಸಕ್ತಿಗಳಿವೆ ಎನ್ನುವುದನ್ನು ಈ ಮೂಲಕ ತಿಳಿಸುತ್ತಿದ್ದಾರೆ. ಮುಳ್ಳುಗಳು ಕತೆಯಲ್ಲಿ ವೀಣಾರವರು ಈ ರೀತಿ ಹೇಳಿದ್ದಾರೆ.

ವೀಣಾ ಶಾಂತೇಶ್ವರ ಅವರ ಬಹುತೇಕ ಕತೆಗಳಲ್ಲಿನ ಹೆಣ್ಣು ಪಾತ್ರಗಳು ತಮ್ಮ ಆಸೆ-ಆಕಾಂಕ್ಷೆಗಳು ಈಡೇರದ ಸಂದರ್ಭದಲ್ಲಿ ಗಂಡಸರನ್ನು ಗಂಡಸರನ್ನಾಗಿ ಕಾಣದೇ

ಗಂಡಸರು ಯಾವುದೇ ಸಾಧನೆಗೆ ಅರ್ಹರಲ್ಲ ಎಂಬುದನ್ನು ತಿಳಿಸಲೆತ್ನಿಸುತ್ತಾರೆ. ಆದರೆ ಗೀತಾನಾಗಭೂಷಣ ಅವರ ಕತೆಗಳಲ್ಲಿ ಕೆಲವು ಹೆಣ್ಣು ಮಕ್ಕಳ ಪಾತ್ರಗಳು ತಮ್ಮ ದೈಹಿಕ ತೃಷೆಯನ್ನು ಮತ್ತೊಬ್ಬರ ಜೊತೆ ಸೇರಿ ತೀರಿಸಿಕೊಳ್ಳುತ್ತಾರೆ. ಲೇಖಕಿ ಕಡೆ ಮಹಿಳಾ ಪಾತ್ರಗಳನ್ನು ಸಮಾಜವು ಗೊಡ್ಡಿ, ಬಂಜೆ ಎಂದು ನಿಂದಿಸುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಮತ್ತೊಬ್ಬ ವ್ಯಕಿಯ ಜೊತೆ ಸೇರಿಸಿ ಗರ್ಭ ಧರಿಸುವ ಚಿತ್ರಣವನ್ನು ಸೃಷ್ಟಿಸುತ್ತಾರೆ.

ಆದರೆ ವೀಣಾ ಅವರ 'ಕೊನೆಯದಾರಿ' ಕತೆಯಲ್ಲಿ ಬರುವ ಡಾಕ್ಟರ್ ಗೋವಿಂದಮೂರ್ತಿ, ಬಾಸ್, ವಿಲಿಯಮ್ಸ್, ವಿನಯ ಸಾಳಕರ ಈ ನಾಲ್ಕು ಜನ ಪುರುಷರನ್ನು ಕುರಿತು ಪ್ರಶ್ನೆ ಮಾಡುತ್ತಾರೆ. ಮುಂದೆ ಶಂಕರಗೌಡರ ಜೊತೆ ಹೋಗಲು ಲೀಲಾ ಸಿದ್ಧಳಾದಾಗ ಅವರು ಸಹ ಪ್ರಶ್ನೆಯಾಗಿಯೇ ಉಳಿಯುತ್ತಾರೆ. ಕೊನೆಯ ದಾರಿ ಕತೆಯ ಒಂದು ಕಡೆ ಲೀಲಾ ಗೋವಿಂದಮೂರ್ತಿಯಿಂದ ಸಿಗಲಾರದದ್ದು ಬಾಸ್ ನಿಂದಲಾದರೂ ಸಿಕ್ಕಿತ್ತು ಎಂಬ ಭಾವನೆಯಿಂದ ಅವನಿಗೂ ಸಹ ಮನೆಗೆ ಬರಲು ಒಪ್ಪಿದಾಗ "ಏನಂದಿ ಲಿಲ್ಲಿ? ಮಗು ಬೇಕೆ ನಿನಗೆ? ತೋಬಾ ತೋಬಾ ನೀನು ಇನ್ನು ಮದುವೆಯಾಗದ ಹುಡುಗಿ ನಮ್ಮಿಂದ ಇಂಥ ಪಾಪದ ಕೆಲ್ಸ ಆಗೋದಿಲ್ಲ ಅಲ್ಲಾಕೆ. ಕಸಮ್ ಅಂತ ತಡವರಿಸಿದ. ಬಾಸನ ಮಾತಿಗೆ ಪ್ರತಿಯಾಗಿ ಲೀಲಾ ಇವನ ಗಡ್ಡಕ್ಕೆ ಬೆಂಕಿ ಹಚ್ಚಬೇಕು ಮದುವೆಯಾದ ಹುಡುಗಿಯ ಕೂಡ ಮಲಗಲಿಕ್ಕೆ ಬೇಕು ಈ ಸಾಬನಿಗೆ ಆದರೆ ಅವಳಿಗೆ ಇಷ್ಟೊಂದು ಅವಶ್ಯವಾಗಿರುವ ಒಂದು ಸಣ್ಣ ಸಹಾಯ ಮಾಡಲಿಕ್ಕೆ ಬೇಡ ಅವನಿಗೆ, ಪಾಪವಂತೆ, ಥೂ ....."[೨] ಎಂದು ಉಗಿಯುತ್ತಾಳೆ.

ವೀಣಾ ಶಾಂತೇಶ್ವರ ಅವರು ಮನುಷ್ಯನ ರೂಪದ ಕುರಿತು ಹೇಳುತ್ತಾರೆ. ವ್ಯಕ್ತಿಯ ವ್ಯಕ್ತಿತ್ವದಿಂದ ಪ್ರಾರಂಭದಿಂದಾಗಿ ಆತನ ಸ್ವರೂಪದವರೆಗೂ ವರ್ಣಿಸಲು ಮುಂದಾಗುತ್ತಾರೆ ವೀಣಾ ಹೆಚ್ಚು ವಾಸ್ತವಕ್ಕೆ ಹೊಂದಿಕೊಂಡಿದ್ದಾರೆ. ಆದ್ದರಿಂದ ಅವರು ಕೊಡುವ ಉದಾಹರಣೆಯ ಪಾತ್ರಗಳು ತುಂಬಾ ಸರಳವಾಗಿರುತ್ತವೆ. ಅವರು ಬರೆದ ಕೊನೆಯ ದಾರಿ ಕತೆಯಲ್ಲಿ ದೇವೂರಿನ ಶಂಕರಗೌಡರನ್ನು ನೋಡಿ ಲೀಲಾ ಈ ರೀತಿಯಾಗಿ ತನ್ನ ಮನಸ್ಸಿನಲ್ಲಿ ಅಂದುಕೊಳ್ಳುತ್ತಾಳೆ. ಅವರ ಹೊಸ ಇಂಪಾಲಾ ನೋಡುತ್ತಿದ್ದೆ ಆರಡಿ ಎತ್ತರದ ಅಗಲವಾದ ಎದೆಯ ಗಿರಿಜಾ ಮೀಸೆಯ ಶಂಕರಗೌಡರಿಗೆ ಆ ಮೊದಲಿನ ಫಯಾಜ್‌ಗಿಂತ ಇದೇ ಹೆಚ್ಚು ಒಪ್ಪುತ್ತದೆ ..... ಅಂದುಕೊಳ್ಳುತ್ತಿದ್ದೆ. ಈ ರೀತಿಯಾಗಿ ಅಂದು ಕೊಂಡ ಲೀಲಾ ತನಗೆ ಬೇಕಾಗಿರುವಂತದ್ದು ಯಾವುದಿರುತ್ತದೇ ಅದನ್ನು ಹೆಚ್ಚು ವರ್ಣಿಸುವುದು, ಹೊಗಳುವುದು ಮಾಡುತ್ತಾಳೆ. ಇದು ಕೇವಲ ಲೀಲಾಳ ಮಾತು

ಮನಸ್ಥಿತಿಯಲ್ಲಿ ಇಡೀ ಸಮಾಜ ವರ್ಗದಲ್ಲಿರುವ ಹೆಣ್ಣು ಗಂಡುಗಳ ಮನಸ್ಥಿತಿಯು ಆಗಿರುತ್ತದೆ. ನಮ್ಮ ಮನಸ್ಥಿತಿಗೆ ಹತ್ತಿರವಾಗದವರನ್ನು ಹೊಗಳುವುದಿಲ್ಲ, ವರ್ಣಿಸುವುದಿಲ್ಲ ಬದಲಾಗಿ ತೆಗಳುತ್ತೇವೆ. ಏಕೆಂದರೆ ಇಂದಿನ ಸಮಾಜ ಅಪೇಕ್ಷಿಸುವುದು ಆದಾಯವನ್ನು ಹಾಗೂ ಅವರಿಂದ ಸಹಾಯ ಸುಖ ಮುಂತಾದವುಗಳನ್ನು ಅದು ಅವರಿಂದ ಸಿಗುವುದಿಲ್ಲ ಎಂದ ಮೇಲೆ ವ್ಯಕ್ತಿಯನ್ನು ಆ ಸಮಾಜವು ತಿರಸ್ಕರಿಸುವುದಕ್ಕೆ ಮುಂದಾಗುತ್ತದೆ.

ಇವರ ೧೪ ಕತೆಗಳು ಒಂದು ಕಾದಂಬರಿಯನ್ನು ಬಿಟ್ಟು ಉಳಿದ ೨೪ ಕತೆಗಳು ಹಾಗೂ 'ಗಂಡಸರು' ಎಂಬ ಕಾದಂಬರಿಯಲ್ಲಿ ಇಂಗ್ಲೀಷ್ ಅಕ್ಷರಗಳನ್ನು ಬಳಸಿ ಇಂಗ್ಲೀಷ್ ಶಬ್ದಗಳನ್ನು ಸೇರಿಸಿ ಕತೆ–ಕಾದಂಬರಿಯನ್ನು ರಚಿಸಿದ್ದಾರೆ. ಉದಾಹರಣೆಗೆ ಮುಳ್ಳುಗಳು. ಇದೇ ಕಾದಂಬರಿಯಲ್ಲಿ ಒಂದು ಪತ್ರವನ್ನು ಇಂಗ್ಲೀಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಇನ್ನುಳಿದ ಕತೆ–ಕಾದಂಬರಿಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಬಳಸಿದ್ದಾರೆ. ಆದರೆ ಇಂಗ್ಲೀಷ್ ಶಬ್ಧಗಳನ್ನು ಕನ್ನಡ ಅಕ್ಷರಗಳಲ್ಲಿ ಬಳಸಿದ್ದಾರೆ. ಉದಾಹರಣೆಗೆ ಹನುಮಾಪುರದಲ್ಲಿ ಹನುಮಜಯಂತಿ ಕತೆಯಲ್ಲಿ ಟ್ರಸ್ಟ್, ಚೇರ್‌ಮನ್, ಕಾಯತ್ತಲಿದ್ದ ಕರಿಯ ಕತೆಯಲ್ಲಿ ಕರಿಯನ ಮಗಳು ತುಂಬಾ ಚೆನ್ನಾಗಿ ಓದುತ್ತಿದ್ದುದ್ದರಿಂದ ಅವರ ಗುರುಗಳು ಕರಿಯ ನಿಮ್ಮ ಮಗಳನ್ನು ಡಾಕ್ಟರ್ ಮಾಡಬೇಕು ಎನ್ನುತ್ತಾರೆ. ಅದೇ ಕತೆಯಲ್ಲಿ ಕ್ಲಾಸು, ಡೊನೇಶನ್, ಮೆಡಿಕಲ್, ಸರ್ಟಿಫೀಕೆಟು, ಮಾರ್ಕ್ಸ್‌ಕಾರ್ಡ, ಸ್ಟೇಶನ್ ಇನ್ನು ಮುಂತಾದ ಇಂಗ್ಲೀಷ್ ಶಬ್ಧಗಳನ್ನು ಕನ್ನಡದಲ್ಲಿ ಬಳಸಿದ್ದಾರೆ. ವೀಣಾ ಶಾಂತೇಶ್ವರ ಅವರು ಆಂಗ್ಲ ಭಾಷೆಯ ಪ್ರಾಧ್ಯಾಪಕರಾಗಿದ್ದರಿಂದ, ಇಂಗ್ಲೀಷ್ ಭಾಷೆಯಲ್ಲಿ ಪ್ರಬುದ್ಧತೆ ಇದ್ದದ್ದರಿಂದ ಇಲ್ಲವೇ ಆಧುನಿಕ ಸಮಾಜದಲ್ಲಿ ಇಂಗ್ಲೀಷ್ ಭಾಷೆ ಅವಶ್ಯವಾಗಿ ಬೇಕಾಗಿರುವುದರಿಂದ ವೀಣಾ ಅವರು ಸಮಯಕ್ಕೆ ತಕ್ಕಂತೆ ಇಂಗ್ಲೀಷ್ ಭಾಷೆಯನ್ನು ಕತೆಗಳಲ್ಲಿ ಬಳಸಿದ್ದಾರೆ.

ವೀಣಾ ಶಾಂತೇಶ್ವರ ಬರೆದ 'ಹನುಮಾಪುರದಲ್ಲಿ ಹನುಮಜಯಂತಿ' ಎಂಬ ಕತೆಯಲ್ಲಿ ಹನುಮಾಪುರದ ಹಿರಿಯರೂ ಆದ ರಾಮೇಗೌಡರು ಈತನ ಮಗ ವೀರಭದ್ರಗೌಡ ಇವರು ಲಿಂಗಾಯತ ಜಾತಿಗೆ ಸೇರಿದವರು. ಈತನ ಹೆಂಡತಿಗೆ ಅನಾರೋಗ್ಯದಿಂದ ನರಳುತ್ತಿದ್ದಾಗ. ಬ್ರಾಹ್ಮಣರ ಗೋಪಾಲಾಚಾರ್ಯರನ್ನು ಕರೆಸಿ ನಾಟಿ ಔಷಧಿಯನ್ನು ಕೊಡಿಸುತ್ತಾಳೆ. ಅದರ ಪ್ರತಿಯಾಗಿ ಗೋಪಾಲಾಚಾರ್ಯರಿಗೆ ಎರಡು ದೊಡ್ಡ ತಾಜಾ 'ರಾಜಗಿರಿ ಸೋಪ್ಪಿ'ನ ಸೊಡುಗಳನ್ನು ಕೊಟ್ಟಿದ್ದಳು. "ಇಕಾ, ಹಿಡಿ, ನಾಳೆ ಪ್ರಾಣದೇವರ ನೇವೇದ್ಯಕ್ಕೆ ಪಲ್ಯಾ ಇಲ್ಲಾ – ಪಲ್ಯಾ ಇಲ್ಲ ಅಂತ ಜೀವಾ ತಿಂತಿದ್ದಿ ಬಂತಿಲ್ಲೋ ಪಲ್ಯಾ? ರಾಮಗೌಡ ಕೇಳದನ ಕೊಟ್ಟಾ ತಟ್ಟನೆ ಪಲ್ಯದ ಸೂಡುಗಳನ್ನು ಬದಿಯ ಕಟ್ಟೆಯ ಮೇಲೆ ಚೆಲ್ಲಿ ಮುಖ ಸಿಂಡರಿಸಿ ಆಕೆ ಅಂದಳು. ಅಯ್ಯ ಸುಡ್ಲಿ,

ಮೊದಲs ಹೇಳಬಾರ್ದ? ನೀರ ಹಾಕಿ ಒಳಗ ತಗೋತಿದ್ದೆ ನಿಮಗ ಹಜಾರ ಬ್ಯಾರೆ ಹೇಳಿನಿ, ಹಿಂಗ ಮೈಲಿಗೀ ಮಾಡಬ್ಯಾಡ್ರೀ ಅಂತ. ಸುಮ್ಮನ ರೊಕ್ಕಾ ಕೊಡೂ ಅನ್ರಿ ಅವ್ರಿಗೆ ಔಷಧ ಕೊಟ್ಟಿದ್ದಕ್ಕ. ಇಲ್ದಿದ್ರ ಔಷಧಾನs ಕೊಡಬ್ಯಾಡ್ರಿ. ಸಾಯ್ಲಿ ಸೂಳೇಮಕ್ಳು, ಬದಿಯಲ್ಲೇ ನಿಂತಿದ್ದ ಕೇಶವಾಚಾರಿ, ಹಾಂಗ ನೋಡಿದರ ಅವರ ರೊಕ್ಕಾನೂ ನಮಗ ಮೈಲಿಗೀನs, ಅಪ್ಪಾ ಶೂದ್ರರ ಮನೀಗೆ ಹೋಗೊದs ನನಗ ಸೋರೊದಿಲ್ಲ."೪

ವೀಣಾ ಅವರು ತಮ್ಮ ಕತೆಗಳಲ್ಲಿ ಧಾರವಾಡ ಪರಿಸರದ ಭಾಷೆಯನ್ನು ಬಳಸಿದ್ದಾರೆ ಎಂಬುದಕ್ಕೆ ಈ ಮೇಲಿನ ಉದಾಹರಣೆಯಿಂದ ತಿಳಿಯಬಹುದಾಗಿದೆ. ಇದರ ಜೊತೆಗೆ ಮುಂಬಯಿ ಕರ್ನಾಟಕದ ಭಾಷಾ ಪರಿಸರವನ್ನು ಗುರುತಿಸಬಹುದು. ವಿಶೇಷವಾಗಿ ಗೋಪಾಲಾಚಾರ್ಯರಿಗೆ ರಾಮೇಗೌಡರು ಕೊಟ್ಟಂತಹ ಎರಡು ಸೂಡು ರಾಜಗಿರಿ ಪಲ್ಯ / ಸೊಪ್ಪನ್ನು ಗಮನಿಸಿದರೆ ಅಲ್ಲಿಯ ಸುತ್ತಮುತ್ತಲಿನ ನೆಲದಲ್ಲಿ ಬೆಳೆಯುವ ದೇಸಿ ಬೆಳೆಯ ಕುರಿತು ಮಾಹಿತಿ ನೀಡುತ್ತದೆ. ಇದರೊಂದಿಗೆ ಅಲ್ಲಿ ಬೆಳೆಯುವ ಆಹಾರ ಬೆಳೆಗಳು, ವಾಣಿಜ್ಯ ಬೆಳೆಗಳನ್ನು ತಿಳಿಸುತ್ತಿದ್ದಾರೆ. ಧಾರವಾಡದ ಪರಿಸರದಲ್ಲಿ ಬೆಳೆಗಳನ್ನು ದಾನವಾಗಿ ನೀಡುತ್ತಾರೆ ಎಂಬುದು ಅತ್ಯಂತ ವಿಶೇಷವಾದ ಸಂಗತಿಯಾಗಿದೆ. ಇದನ್ನು ಗಮನಿಸಿದರೆ ಮತ್ತೊಂದು ಅಂಶ ಕಂಡುಬರುತ್ತದೆ. ಅಂದರೆ ಲಿಂಗಾಯತರ ಮನೆಯಿಂದ ತಂದಂತಹ ಯಾವುದೇ ವಸ್ತು ಅಥವಾ ಆಹಾರ ಪದಾರ್ಥವಾಗಿರಬಹುದು ಇಲ್ಲವೇ ಹಣವೇ ಆಗಿರಬಹುದು ಅದು ಬ್ರಾಹ್ಮಣರಿಗೆ ಮೈಲಿಗೆಯಾದಂತೆ. ಯಾವುದೇ ಪದಾರ್ಥವನ್ನು ನೇರವಾಗಿ ಮನೆಯ ಒಳಗೆ ತೆಗೆದುಕೊಂಡು ಹೋದರೆ ಬ್ರಾಹ್ಮಣರು ಹಾಗೂ ಅವರ ಮನೆಯೇ ಮೈಲಿಗೆಯಾದಂತೆ ಎಂಬ ಭಾವನೆಯು ಕತೆಯಲ್ಲಿದೆ. ಬದಲಾಗಿ ತಂದ ಪದಾರ್ಥವನ್ನು ಅಥವಾ ವಸ್ತುವನ್ನು ತೊಳೆದು ಅದರ ಮೇಲೆ ನೀರು ಹಾಕಿ ಮನೆಗೆ ತೆಗೆದುಕೊಂಡರೆ ಅದು ಮೈಲಿಗೆ ಅಲ್ಲ ಎನ್ನುವುದು ಧಾರವಾಡ ಪ್ರದೇಶದ ಬ್ರಾಹ್ಮಣರ ನಿಲುವಾಗಿದೆ.

ಗೋಪಾಲಾಚಾರ್ಯರ ಹೆಂಡತಿಯ ಕೈಗೆ ಎರಡು ಸೂಡು ತಾಜಾ ರಾಜಗಿರಿ ಪಲ್ಯ ಕೊಟ್ಟಾಗ ಅದು ರಾಮೇಗೌಡರ ಮನೆಯದೆಂದು ತಿಳಿದಾಗ ಗೋಪಾಲಾಚಾರ್ಯರ ಹೆಂಡತಿ ನಿಮಗ ಹಜಾರ ಬ್ಯಾರೆ ಹೇಳಿನಿ ಹಿಂಗ ಮೈಲಿಗೀ ಮಾಡಬ್ಯಾಡ್ರಿ ಅಂತ ಅನ್ನುವ ಮಾತಿನಲ್ಲಿ ಹಜಾರ ಅನ್ನುವ ಪದ ಸಾವಿರ ಸಾರಿ ಎನ್ನುವ ಅರ್ಥವನ್ನು ನೀಡುತ್ತದೆ. ಅಂದರೆ ಹಜಾರ ಎನ್ನುವ ಪದ ಧಾರವಾಡಕ್ಕೆ ಮುಂಬಯಿ, ಪುಣೆ, ಬೆಳಗಾಂ ಪ್ರದೇಶಗಳು ಹತ್ತಿರವಾಗಿರುವುದರಿಂದ ಅಲ್ಲಿಯ ಮರಾಠಿ, ಭಾಷೆಯ ಪ್ರಭಾವ ಧಾರವಾಡ ಪರಿಸರದ ಮೇಲೆ ಪ್ರಭಾವ ಬೀರಿದೆ ಎನ್ನುವುದನ್ನು ಗಮನಿಸಬಹುದು.

ಹಾಗೆಯೇ ಮುಂದುವರೆದಂತೆ ಆಚಾರ್ಯರ ಹೆಂಡತಿಯ ಬಾಯಲ್ಲಿ ಬರುವ ಮಾತು ಕೂಡ ಆಶ್ಚರ್ಯವಾಗುವಂತಹದ್ದು, ಕೊಡಬ್ಯಾಡ್ರಿ ಸಾಯ್ಲಿ ಸೂಳೇಮಕ್ಳು ಈ ಮಾತು ಧಾರವಾಡ ಪ್ರದೇಶ ಬೈಗಳು ಎಂತಹವು ಎಂಬುದನ್ನು ತಿಳಿಸುವುದರ ಜೊತೆಗೆ ಮೇಲ್ವರ್ಗದವರ ದ್ವೇಷ, ಅಸೂಯೆ, ಹೊಟ್ಟೆ ಕಿಚ್ಚು ಹೇಗಿರುತ್ತದೆ ಎಂದು ತಿಳಿಯಬಹುದಾಗಿದೆ.

"ಸಾಯಂಕಾಲದ ಹೊತ್ತು ಎರಡು ತಾಸು ಬಸ್‌ಸ್ಟ್ಯಾಂಡಿಗೆ ಹೋಗಿ ಕೂಲಿ ಮಾಡಲಾರಂಭಿಸಿದ. ಸಂತೆಯ ದಿನವಂತೂ ರಾತ್ರಿ ಹತ್ತರವರೆಗೆ ಹಮಾಲಿ ಮಾಡತೊಡಗಿದ. ಆಗಿನ ಗೌಡರು ಕೊಡುತ್ತಿದ್ದ ಅಷ್ಟಿಷ್ಟು ಹಣವನ್ನು ಜತನದಿಂದ ಕಾಯ್ದಿಡುತ್ತಿದ್ದ. ತೀರಾ ನಸುಕಿನಲ್ಲೆದ್ದು ತಾಸೆರಡು ತಾಸು ಹಿತ್ತಲಲ್ಲಿ ಕಾಯಿಪಲ್ಲೆ ಗಿಡ ಬೆಳೆಸುವ ಕೆಲಸ ಮಾಡುತ್ತಿದ್ದ. ಗೌಡರ ಮನೆಗಷ್ಟು ಕೊಟ್ಟು ಉಳಿದುದೆಲ್ಲವನ್ನೂ ಬುಟ್ಟಿಗಳಲ್ಲಿ ತುಂಬಿ ಬಾಗವಾನರಿಗೆ ಗುತ್ತಿಗೆ ಕೊಟ್ಟು ಬರುತ್ತಿದ್ದ."[೫] ವೀಣಾ ಶಾಂತೇಶ್ವರ ಅವರು ಬರೆದ 'ಕಾಯುತ್ತಲಿದ್ದ ಕರಿಯ' ಕತೆಯಲ್ಲಿ ಈ ಮಾತನ್ನು ತಿಳಿಸುತ್ತಾರೆ.

ಇಲ್ಲಿ ತಂದೆ-ಮಗಳ ಸಂಬಂಧದ ನಡುವೆ ಇರಬೇಕಾದ ಪ್ರೀತಿ ಮತ್ತು ಆತ್ಮೀಯತೆಯನ್ನು ಕಟ್ಟಿಕೊಟ್ಟಿದ್ದಾರೆ. ಮಗಳನ್ನು ಸಾಕಲು ಒಬ್ಬ ತಂದೆ ಏನೆಲ್ಲಾ ಮಾಡಬಲ್ಲ ಎಂಬುದಕ್ಕೆ ಈ ಕತೆಯಲ್ಲಿ ಬರುವ ಕರಿಯನೇ ಉತ್ತಮ ನಿದರ್ಶಕನಾಗಿದ್ದಾನೆ. ಇದರ ಜೊತೆಗೆ ಅವನ ಬಡತನವು ಅವನನ್ನು ಕಿತ್ತು ತಿನ್ನುತ್ತಿದೆ. ಹಮಾಲಿ ಎಂದರೆ ಚೀಲ ಹೊರುವವನು, ಜತನದಿಂದ ಎಂದರೆ ಜೋಪಾನವಾಗಿ, ಹುಷಾರಾಗಿ, ಕಳೆದುಹೋಗದ ಹಾಗೆ ಎಂಬ ಅರ್ಥವನ್ನು ಕೊಡುವ ಪದ, ಹಾಗೆಯೇ ಬಾಗವಾನ ಎನ್ನುವ ಪದಕ್ಕೆ ತೋಟಗಾರಿಕೆ, ಕೊಂಡು ಮಾರುವವ ಎಂಬ ಪ್ರಾದೇಶಿಕ ಅರ್ಥಗಳನ್ನು ನೀಡುತ್ತವೆ. ಇವು ಲೇಖಕಿಯು ಕತೆಗಳಲ್ಲಿ ಬಳಸಿರುವ ಪ್ರಾದೇಶಿಕತೆಯ ಶಬ್ಧಗಳಾಗಿವೆ. ಜೊತೆಗೆ ಇಂತಹ ಸಾಲುಗಳನ್ನು ಓದುಗ ಓದುವಾಗ ಹಳ್ಳಿಯ ಪಾತ್ರಗಳೇ ಜೀವ ತಳೆದು ಓದುಗನೆದುರು ಅನಾವರಣಗೊಂಡಂತೆ ಭಾಸವಾಗುತ್ತದೆ. ಓದುಗನ ಎದೆಯಲ್ಲೊಬ್ಬ ಕರಿಯ ಕಂಡುಬರಬೇಕು. ಅಂದಾಗ ಮಾತ್ರ ಲೇಖಕಿಯ ಸಂಭಾಷಣೆ ಓದುಗರ ಮೇಲೆ ಪರಿಣಾಮ ಬೀರುತ್ತದೆ.

ಒಂದು ಕತೆಯ ವಸ್ತು, ಪರಿಸರ, ಭೌಗೋಳಿಕತೆ, ಸಾಮಾಜಿಕ ಚಿತ್ರಣ, ಊಟ, ಉಡುಗೆ-ತೊಡುಗೆ, ಎಲ್ಲವೂ ಒಂದು ನಿಖರವಾದ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಈ ಸಂದರ್ಭದಲ್ಲಿ ಪಾತ್ರಗಳ ಮಾತುಗಳು ಅಥವಾ ಸಂಭಾಷಣೆಗಳು ಅತ್ಯಂತ ಮಹತ್ವ

ಪಡೆದುಕೊಳ್ಳುವುದರಿಂದ ಪ್ರಾದೇಶಿಕತೆಯ ಅಂಶಗಳು ವೀಣಾ ಶಾಂತೇಶ್ವರ ಅವರ ಕತೆಗಳಲ್ಲಿ ಹೆಚ್ಚಾಗಿ ಬಳಕೆಯಾಗಿವೆ. ಹನುಮಾಪುರದಲ್ಲಿ ಹನುಮಜಯಂತಿ ಕಥೆಯಲ್ಲಿ, ಶ್ರೀರಾಮದೇವರು, ಹನುಮಂತ ರಾಮಾಯಾಣ, ರಾಮನವಮಿ, ಶಿವಪೂಜೆ ಎಂಬ ಶಬ್ಧಗಳು ಕಂಡುಬರುತ್ತದೆ. ಹಾಗೆಯೇ ನಿರಾಕರಣೆ ಕತೆಯಲ್ಲಿ ಅರ್ಯಪುತ್ರ, ದುಷ್ಯಂತ ಮಹಾರಾಜ, ಶಕುಂತಲೆ, ಪುರುವಂಶದ ಯುವರಾಜ ಭರತಕುಮಾರ, ಹಿರಿಯರಾಣಿ ವಸುಮತಿ, ಕಣ್ವಮುನಿಗಳು, ಮೇನಕೆ ಪೂಜ್ಯ ಮಾರೀಚ ಮುನಿಗಳು, ಎಂಬ ಪುರಾಣೆತಿಹಾಸದ ಹೆಸರುಗಳನ್ನು ಕತೆಗಳಲ್ಲಿ ತಂದಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಈ ಎಲ್ಲಾ ಪಾತ್ರಗಳ ಹೆಸರುಗಳನ್ನು ನೋಡಿದರೆ ಪುರಾಣೆತಿಹಾಸದ ಜೊತೆಗೆ ಆಧುನಿಕತೆಯನ್ನು ಎಣಿಯುವ ಆಧುನಿಕ ಎಣಿಗೆಕಾರರಾಗಿ ಲೇಖಕಿಯು ನಿಲ್ಲುತ್ತಾರೆ. ಇತಿಹಾಸ ಬಲ್ಲವನು ಇತಿಹಾಸವನ್ನು ನಿರ್ಮಿಸುತ್ತಾನೆ. ಇತಿಹಾಸ ತಿಳಿಯದವನು ಇತಿಹಾಸವನ್ನು ನಿರ್ಮಿಸಲಾಗುವುದಿಲ್ಲ ಎಂಬ ಅಂಬೇಡ್ಕರರ ಮಾತು ಪ್ರಸ್ತುತಕ್ಕೆ ಅನ್ವಯಿಸುತ್ತದೆ. ಆಧುನಿಕತೆಯ ಪುನರ್ ನಿರ್ಮಾಣಕ್ಕೆ ಇತಿಹಾಸದ ಕೆಲವು ಕಾವ್ಯಗಳು, ಅವುಗಳ ಪಾತ್ರಗಳು, ಪಾತ್ರಗಳಲ್ಲಿ ಕಂಡುಬರುವ ಮಾನವೀಯತೆ, ನಿಷ್ಠೆ, ಬದ್ದತೆ, ಆತ್ಮವಿಶ್ವಾಸ, ಪೂಜ್ಯನೀಯತೆ ಅಂತಃಕರಣ, ಸೃಜನಶೀಲತೆಯ ಗುಣ ಇನ್ನೂ ಮುಂತಾದ ಅಂಶಗಳು ಬೇಕಾಗಿವೆ.

ಚಾರಿತ್ರಿಕ ದಾಖಲೆಯಾಗಿ ಉಳಿಯುವ ಪ್ರದೇಶವನ್ನು ಪ್ರತಿನಿಧಿಸುವ ನಗರ ಪ್ರದೇಶದ ಸ್ಥಳಗಳನ್ನು ಕತೆಗಾರ್ತಿ ತಮ್ಮ ಕತೆಗಳಲ್ಲಿ ಬಳಸಿಕೊಂಡಿದ್ದಾರೆ. ಉದಾಹರಣೆಗೆ ಮುಂಬಯಿ, ಹುಬ್ಬಳ್ಳಿ, ನೀರಾ, ವಾಠಾರ, ಸಾಂತಾರೆ, ಲೋಂಡಾ ಸ್ಟೇಷನ್, ಪುನಾ, ಹನುಮಾಪುರ, ತಿಮ್ಮಾಪುರ, ವಿಜಾಪುರ, ಬೆಳಗಾಂ, ಕೃಷ್ಣಾಪುರ, ರಾಮನಗರ, ಮುಂತಾದ ನಗರ ಪ್ರದೇಶಗಳು ತಮ್ಮದೇ ಆದಂತಹ ಇತಿಹಾಸವನ್ನು ಒಳಗೊಂಡಿವೆ. ಈ ಎಲ್ಲಾ ನಗರಗಳನ್ನು ಅವಲೋಕಿಸಿದಾಗ ಇಡೀ ಮುಂಬೈ ಕರ್ನಾಟಕದ ಕಲ್ಪನೆ ಬರುತ್ತದೆ.

ವೀಣಾ ಶಾಂತೇಶ್ವರ ಅವರು ಈ ಹಿಂದೆ ಬರೆದಂತಹ ಎಲ್ಲಾ ಕತೆಗಳು ನಮಗೆ ಸ್ತ್ರೀ ಸಂವೇದನೆಯನ್ನು ಗುರುತಿಸುವಂತಹವುಗಳು. ಜೊತೆಗೆ ನವ್ಯ ಸಾಹಿತ್ಯಕ್ಕೆ ಹೊಂದಿಕೊಂಡ ಕತೆಗಳಾಗಿವೆ. ಅವರು ಪ್ರಸ್ತುತ ದಿನಮಾನಗಳಲ್ಲಿ ಆಗುತ್ತಿರುವ ಸಾಂಸ್ಕೃತಿಕ ಬದಲಾವಣೆಯ ಕುರಿತು ಬರೆಯುತ್ತಾರೆ. ಸ್ತ್ರೀಯರ ಜೊತೆಯಲ್ಲಿಯೇ ಪುರುಷರೂ ಇದ್ದಾರೆ ಎಂಬುದು ಬಹುಮುಖ್ಯದ ಸಂಗತಿಯಾಗಿದೆ. ಕೇವಲ ವಿದ್ಯಾವಂತ ಸ್ತ್ರೀಯರನ್ನು ಕುರಿತು,

ಮದುವೆಯಾಗಲು ಸಿದ್ಧರಿರುವ ಮಹಿಳೆಯರು ಅದರಲ್ಲೂ ವೃತ್ತಿಯಲ್ಲಿರುವಂತಹ ಸ್ತ್ರೀ ಪಾತ್ರಗಳನ್ನು ಆಯ್ಕೆ ಮಾಡಿಕೊಂಡು ಕತೆಗಳನ್ನು ರಚಿಸಿದ್ದಾರೆ. ಆದರೆ ಇದಕ್ಕೆ ವಿರುದ್ಧವಾದಂತಹ ಮತ್ತೊಂದು ಸ್ತ್ರೀ ಸಮಾಜವಿದೆ ಎಂಬುದನ್ನು ಮರೆಯುವಂತಿಲ್ಲ. ಜಾಗತೀಕರಣದ ಸಂದರ್ಭದಲ್ಲಿ ಅತೀ ವೇಗವಾಗಿ ಸಾಗುತ್ತಿರುವ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಹೆಣ್ಣು ವಂಚನೆಗೆ ಒಳಗಾಗುತ್ತಿದ್ದಾಳೆ. ವಿದ್ಯಾವಂತರೇ ಮೋಸ ಮಾಡಲನುವಾಗುತ್ತಿದ್ದಾರೆ. ದಿನಪತ್ರಿಕೆ ತೆರೆದು ನೋಡಿದರೆ ಸಾಕು ಒಂದಲ್ಲ ಒಂದು ಕೊಲೆ ನಡೆದಿರುತ್ತದೆ. ಅದು ಹೆಣ್ಣಿನಿಂದಲೂ ಆಗಿರಬಹುದು. ಗಂಡಿನಿಂದಲಾದರೂ ಆಗಿರಬಹುದು. ಇದು ಶಾಲಾ–ಕಾಲೇಜುಗಳಲ್ಲಿ ಹೆಣ್ಣಿಗೆ ಇರುವ ಸೌಲಭ್ಯಗಳ ಕುರಿತು ಗಮನಿಸಬೇಕು. ಕೆಲವು ಸಂಘ ಸಂಸ್ಥೆಗಳಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ ಹೆಣ್ಣಿನಿಂದ ಗಂಡಿಗೆ ಆಗುತ್ತಿರುವ ಸಮಸ್ಯೆಗಳು, ಗಂಡಿನಿಂದ ಹೆಣ್ಣಿಗೆ ಆಗುತ್ತಿರುವ ಅವಮಾನಗಳನ್ನು ಗುರುತಿಸುವುದು ಬಹುಮುಖ್ಯವಾದ ವಿಷಯಗಳಾಗಿದೆ.

ವೈದೇಹಿ ಅವರ ಕಥೆಗಳಲ್ಲಿ ಪ್ರಾದೇಶಿಕ ಭಿನ್ನತೆಯ ವೈಶಿಷ್ಟಗಳು

ಆಧುನಿಕ ಕನ್ನಡ ಕಥಾಸಾಹಿತ್ಯದ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿರುವ ವೈದೇಹಿ ಅವರು ಅತ್ಯಂತ ಜನಪ್ರಿಯ ಲೇಖಕಿಯೂ ಆಗಿದ್ದಾರೆ. ಅವರು ಕನ್ನಡ ಕಥಾಲೋಕವನ್ನು ಪ್ರವೇಶಿಸಿದ ಬಗೆಯೂ ಅನನ್ಯವಾದದ್ದು, ವಿಶಿಷ್ಟವಾದದ್ದಾಗಿದೆ. ನೈಜ ಜೀವನದ ಘಟನೆಗಳಿಂದ ಪ್ರೇರಿತರಾಗಿ ತಾವು ಬರೆದ ಕಥೆಯನ್ನು ಪ್ರಕಟಣೆಗೆಂದು ಕಳುಹಿಸಿದರಾದರೂ, ಸಂಬಂಧಪಟ್ಟವರಿಗೆ ನೋವಾಗಬಾರದು ಎಂಬ ಮರು ಚಿಂತನೆಯಿಂದ ಅದನ್ನು ಪ್ರಕಟಿಸಬಾರದೆಂದು ಸಂಪಾದಕರಿಗೆ ಪತ್ರ ಬರೆಯುತ್ತಿದ್ದರು. ಆ ಸಂಪಾದಕರು ಲೇಖಕಿಯ ಹೆಸರನ್ನು ವೈದೇಹಿ ಎಂದು ಬದಲಾಯಿಸಿ, ಅದನ್ನು ಪ್ರಕಟಿಸಿಯೇ ಬಿಟ್ಟರು. ಮುಂದೆ ಅದೇ ಅವರ ಕಾವ್ಯನಾಮವೂ ಆಗಿಬಿಟ್ಟಿತು. ಈ ಕಾವ್ಯನಾಮದಲ್ಲಿಯೇ ಅವರು ಸದ್ದಿಲ್ಲದೇ ತಮ್ಮ ಸಾಹಿತ್ಯ ಸಾಧನೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕಥೆಗಳ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ಮಕ್ಕಳ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿಯೂ ಕೈ ಆಡಿಸಿರುವ ಅವರು ಅನೇಕ ಮಹತ್ವದ ಕೃತಿಗಳನ್ನೇ ನೀಡಿದ್ದಾರೆ. ನಮ್ಮ ಕೃತಿಗಳಲ್ಲಿ ಅವರು ಬರೆದಿರುವ ಮಹಿಳಾ ಸಂವೇದನೆ ನೈಜವೂ, ಹೃದಯಸ್ಪರ್ಶಿಯೂ ಆಗಿದೆ. ಮೌಲಿಕ ಕೃತಿಗಳನ್ನು ಮಾತ್ರವಲ್ಲದೆ, ಭಾಷಾಂತರಿತ ಕೃತಿಗಳ ಮೂಲಕವೂ ಅವರು ಗಣನೀಯವಾದ ಸಾಹಿತ್ಯ ಸೇವೆಯನ್ನು ಸಲ್ಲಿಸಿದ್ದಾರೆ.

ಮಲೆನಾಡಿನ ಹವ್ಯಕ ಆಡುಭಾಷೆಯ ಸೊಗಡಿನಲ್ಲಿ ವೈದೇಹಿ ಅವರ ಬಹುತೇಕ ಕತೆಗಳು ಬರೆಯಲ್ಪಟ್ಟಿದ್ದು ಅವುಗಳ ವಸ್ತುಗಳು, ಪಾತ್ರಗಳು, ಘಟನೆಗಳು ಎಲ್ಲವೂ ಆ

ಪರಿಸರದಿಂದಲೇ ಜನ್ಮ ತಳೆದವುಗಳಾಗಿವೆ. ಕನ್ನಡದ ಆಧುನಿಕ ಕಥೆಗಾರ್ತಿಯರಲ್ಲಿ ಪ್ರಾದೇಶಿಕ ಭಾಷೆಯನ್ನು ಇವರಷ್ಟು ಸಮರ್ಥವಾಗಿ ಬಹುಶಃ ಬೇರೆ ಯಾರೂ ಬಳಸಿಲ್ಲ. ವೀಣಾ ಶಾಂತೇಶ್ವರ, ನೇಮಿಚಂದ್ರರಂತಹ ಸಂವೇದನಾಶೀಲರಾದ ಲೇಖಕಿಯರು ತಮ್ಮ ಪಾತ್ರಗಳಿಗೆ ಹೊಸದೊಂದು ಬೌದ್ಧಿಕ ಚೌಕಟ್ಟನ್ನು ನಿರ್ವಹಿಸುವಾಗಲೂ ಸಹ ಗ್ರಾಮೀಣ ಅಥವಾ ಅಯಾ ಪರಿಸರದ ಸಾಂಸ್ಕೃತಿಕ ವಿವರಗಳು ಪ್ರಧಾನವಾಗದೆ ಪಾತ್ರಗಳು ಒಂದು ರೀತಿಯ ಪರಕೀಯತೆಯನ್ನು ಅನುಭವಿಸುತ್ತವೆ. ಇಂತಹ ಕಡೆ ನಗರ ಕೇಂದ್ರಿತ ಬದುಕಿನ ಒಂಟಿತನ ಹೆಣ್ಣಾಗಿ ಎದುರಿಸುವ ಸಮಸ್ಯೆ. ಬೌದ್ಧಿಕ ಪ್ರಜ್ಞೆ, ಈ ಭಾರಗಳಿಂದ ಪಾತ್ರಗಳು ಕುಸಿದು ಸೋಲೊಪ್ಪುತ್ತವೆ. ವೈದೇಹಿಯವರ ಕಥಾಲೋಕದಲ್ಲಿ ಬರುವ ಎಲ್ಲ ವಿವರಗಳೂ ಅಲ್ಲಿಯ ನೆಲದಿಂದಲೇ ಹುಟ್ಟಿ ಅಲ್ಲಿಯೇ ಕೊನೆಗೊಳ್ಳುವಂತವು.

ಕರ್ನಾಟಕದ ಕರಾವಳಿ ಪ್ರದೇಶ ಅದರಲ್ಲೂ ಕುಂದಾಪುರ ಕೋಟಾ ಪ್ರದೇಶದ ಭಾಷೆ, ಜೀವನ ಶೈಲಿ ಮತ್ತು ಪ್ರಾದೇಶಿಕವಾಗಿ ಹತ್ತಿರವಾಗುವ ಕೇರಳದ ಜೀವನ ಶೈಲಿಯ ಪ್ರಭಾವ, ಕರ್ನಾಟಕದ ಇತರ ಪ್ರದೇಶಗಳಿಗಿಂತ ಭಿನ್ನವಾದ ಆಚರಣೆಗಳು ಹಾಗೂ ಹೆಚ್ಚಾಗಿ ಮನೆವಾರ್ತೆಯ ಗೃಹಿಣಿಯ ಬದುಕು ವೈದೇಹಿಯವರನ್ನು ಪ್ರಭಾವಿಸಿದೆ. ಅಲ್ಲಿನ ನೈಸರ್ಗಿಕವಾದ ಕಾಡುಗಳು, ಸಸ್ಯಗಳು ಸಹಜವೆಂಬಂತೆ ಅವರ ಕಥೆಗಳಲ್ಲಿ ಪ್ರವೇಶ ಪಡೆಯುತ್ತವೆ. ಕನ್ನಡ ಸಾಹಿತ್ಯದಲ್ಲಿ ನವ್ಯದ ನಂತರದಲ್ಲಿ ಬರೆಯತೊಡಗಿದ ಲೇಖಕಿಯರಲ್ಲಿ ಪ್ರಮುಖರಾದ ವೈದೇಹಿ ಅವರ ಕತೆಗಳು ಆರಂಭವಾಗುವುದೇ ಕುಟುಂಬ ಕೇಂದ್ರಿತ ಚಿಂತನೆಗಳಿಂದ. ಮಹಿಳೆಯರು ಬರೆದದ್ದೆಲ್ಲ ಅಡುಗೆ ಮನೆ ಸಾಹಿತ್ಯ ಏನೂ ಘನವಾದದ್ದನ್ನು ಹೇಳಲಾರರೆಂಬ ವಿಮರ್ಶೆಗೆ ಅಡುಗೆ ಮನೆಯ ಹುಡುಗಿಯ, ಅಡುಗೆ ಮನೆಯಲ್ಲಿದ್ದುಕೊಂಡೆ ಪ್ರಪಂಚವನ್ನು ತಿಳಿದಿರಬಲ್ಲಳು ಎಂದು ಸಾಧಿಸಿದವರು. ಅಡುಗೆ ಮಾಡುವುದು ನನಗಿಷ್ಟ ಎಂದು ಹೇಳುವ ಮೂಲಕವೇ ಅಡುಗೆ ಮನೆಯ ಹುಡುಗಿಗೆ ಅಭಿವ್ಯಕ್ತಿಯನ್ನು ಕೊಡುತ್ತಾರೆ.

ಯಾವುದೇ ಸ್ತ್ರೀವಾದದ ಚಳುವಳಿಯ ರೀತಿ-ರಿವಾಜುಗಳ ಪ್ರಭಾವಕ್ಕೆ ಒಳಗಾಗದೇ ನಿರ್ದಿಷ್ಟ ಸಾಹಿತ್ಯ ಪಂಥಗಳ ಪ್ರಭಾವವನ್ನು ಆಶ್ರಯಿಸದೇ ತಮ್ಮದೇ ಮಾರ್ಗದಲ್ಲಿ ಬರೆಯುತ್ತಾ ಹೋಗುತ್ತಾರೆ. ಕುಟುಂಬದಲ್ಲಿನ ವ್ಯಕ್ತಿಗೆ ಇರುವ ಮಹತ್ವವನ್ನು ಸಂಬಂಧಗಳ ಸೂಕ್ಷ್ಮತೆಯನ್ನು ಹೇಳುತ್ತಾ ಹೋಗುತ್ತಾರೆ. ಕುಟುಂಬ ಕೇಂದ್ರಿತವೆಂದರೆ ಅವರು ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾರೆಂದಲ್ಲ. ನವಿರಾದ ಆದರೆ ಅಷ್ಟೇ ಖಚಿತವಾದ ರೀತಿಯಲ್ಲಿ ಇವರ ಕತೆಗಳ ಪಾತ್ರಗಳು ಸಂಪ್ರದಾಯಕ್ಕೆ ಅರ್ಥವಿಲ್ಲದ ಮೌಲ್ಯಗಳಿಗೆ ವಿರೋಧ ಸೂಚಿಸುತ್ತವೆ. ವೈದೇಹಿಯವರ ವಿಶೇಷತೆಯೆಂದರೆ ಅವರ ಕತೆಗಳಲ್ಲಿ ಪ್ರಧಾನ ಸೆಲೆಯ ಸಂಗತಿಗಳಾವುವು

ಪ್ರಾಮುಖ್ಯ ಪಡೆಯುವುದಿಲ್ಲ. ಜೀವನದ ಅತೀ ಚಿಕ್ಕ ಚಿಕ್ಕ ಘಟಕಗಳು ಒಂದು ದಿನದ ಮಟ್ಟಿಗೆ ಬಂದು ಹೋಗುವ ಇತರರಿಗೆ ಮುಖ್ಯವಲ್ಲದ ಸಂಗತಿಗಳನ್ನು ಕತೆಯಾಗಿಸುತ್ತಾರೆ ಹಾಗೂ ಸಣ್ಣ ಸಂಗತಿಗಳೇ ಬದುಕನ್ನು ನಿಯಂತ್ರಿಸುವ ಬಗೆಯನ್ನು ವೈದೇಹಿಯ ಕತೆಗಳು ಸೂಕ್ಷ್ಮವಾಗಿ ಗ್ರಹಿಸುತ್ತವೆ.

ಭಾಷೆಗೆ ಸಂಬಂಧಿಸಿದಂತೆ ಕುಂದಾಪುರ, ಕೋಟಾ ಪ್ರದೇಶದ ಭಾಷೆಯ ಆಡು ಮಾತಿನ ಲಯಗಾರಿಕೆ ಕತೆಗಳಿಗೆ ಸೊಗಡನ್ನು, ಹೆಚ್ಚು ಅಧಿಕೃತತೆಯನ್ನು ತಂದುಕೊಟ್ಟಿದೆ. ಆ ಮೂಲಕ ಒಂದು ಸಮುದಾಯದ ಬದುಕನ್ನು, ಸಂಸ್ಕೃತಿಯನ್ನು ಕಟ್ಟಿಕೊಡುತ್ತದೆ ಹಾಗೂ ವೈದೇಹಿಯ ಕಾವ್ಯಾತ್ಮಕ ನಿರೂಪಣೆ ಗದ್ಯಕ್ಕೂ – ಪದ್ಯದ ಗಮ್ಮತ್ತು ಒದಗಿಸುತ್ತದೆ.

ವೈದೇಹಿ ಅವರ ಬರಹ ಕಾವ್ಯಾತ್ಮಕವಾದ ನಿರೂಪಣಾ ಶೈಲಿಯಿಂದ ಕೂಡಿದೆ. ಅದು ಅವರ ವಿಶೇಷತೆ. ಅವರು ಬರೆದಿರುವ 'ಹಕ್ಕಿಲ್ಲದವರು' ಕತೆಯಲ್ಲಿ ಬರುವ ಪದ್ಮನಾಭಮಾವಯ್ಯನ ಅಕ್ಕ ದೊಡಕಳ ಮನೆಯ ಹತ್ತಿರವಿದ್ದ ಅರಳಿಮರದ ಒಂದು ಸನ್ನಿವೇಶವನ್ನು ಉದಾಹರಿಸಬಹುದು. "ಮಕ್ಕಳು ಮೂಗಿನ ಮೇಲೆ ಕೈ ಒತ್ತಿ ಇಟ್ಟು ಕಂಡು ಅರಳೀ ಮರದ ಕೆಳಗೆ ಸಂತೆ ಎನ್ನಲು ಹೋಗಿ, ಪದ್ದಮಾವಯ್ಯ ಹೇಳಿಕೊಟ್ಟಂತೆ, ಸಂತೆ, ಇದ್ದದ್ದು ಸತ್ತೆ ಆಗುವ ಮೋಜಿಗೆ ನಗುತ್ತ ಅದೇ ಆಟ ಆಡತೊಡಗಿ ಗಲಾಟೆ ಎಬ್ಬಿಸಿದಾಗ ತಾಯಂದಿರು ಗುಟ್ಟಲೇ ಗದರಿಸಿದರು. ಗುಟ್ಟಲೇ ಕಣ್ಣು ಬಿಟ್ಟರು. ಗುಟ್ಟಲೇ ಚಿವುಟಿದರು ಗುಟ್ಟಿನ ಕಟ್ಟಿಗೆ ಸಿಗದ ಮಕ್ಕಳು ಹೊರಹೋಡಿದವು. ಆದರೂ .... ಆ ಕೋಣೆಯಲ್ಲಿ ಯಾರದು? ಮಣ ಮಣ ಮಣ ಕೇಳಿಸುತ್ತಿದೆಯಲ್ಲ......... ಅದು ಅವಳೇ ಇರಬಹುದೇ ? ತಮ್ಮೊಡನೆಲ್ಲ ಆಡುತ್ತಿದ್ದ ರಾಧೆ? ..... ದೊಡಕನ ಇನ್ನೊಬ್ಬ ಮಗಳು ಸಿರಿಯ ತಂಗಿ ಹದಿಹರೆಯದಲ್ಲೇ ಏನೋ ಆಗಿ (ಏನಂತ ಯಾರು ಹೇಳದೆ ನಾನಾ ಕಾರಣಗಳಿಗೆ ಬಲಿಯಾಗಿರುವ) ಅಂದಿನಿಂದ ಇಂದಿನವರೆಗೂ ಸರಿಯಾಗದೇನೆ ಉಳಿದು ಹೋದ ರಾಧೆ."[೬] ಇಲ್ಲಿ ಉದಾಹರಿಸಿರುವ ಹಕ್ಕಿಲ್ಲದವರು ಕತೆಯ ಕೆಲವು ಸಾಲುಗಳು ವೈದೇಹಿಯವರ ಕಾವ್ಯಾತ್ಮಕ ನಿರೂಪಣೆಯನ್ನು ಗುರುತಿಸಬಹುದು.

ತಾಯಂದಿರು ಗುಟ್ಟಲೇ ಗದರಿಸಿದರು.
ಗುಟ್ಟಲೇ ಕಣ್ಣು ಬಿಟ್ಟರು.
ಗುಟ್ಟಲೇ ಚಿವುಟಿದರು
ಗುಟ್ಟಲೇ ಕಟ್ಟಿಗೆ ಸಿಗದ ಮಕ್ಕಳು ಹೊರಗೋಡಿದವು.

ದೊಡಕನ ಇನ್ನೊಬ್ಬ ಮಗಳು ರಾಧೆ ಹದಿಹರೆಯದಲ್ಲೇ ಏನೋ ಆಗಿ ಅಂದಿನಿಂದ ಇಂದಿನವರೆಗೂ ಹಾಗೆಯೇ ಇದ್ದಾಳೆ ಅನ್ನುವ ಮಾತು ಅತೀ ಸೂಕ್ಷ್ಮವಾದದ್ದು.

ರಾಧೆಗೆ ಆದ ನೋವನ್ನು, ಸಂಕಟವನ್ನು, ಅವಮಾನವನ್ನು ಹೇಳಲಾಗದೇ ಕವಿ ಹೆಣ್ಣಿನ ಮನದಾಳದ ಭಾವನೆಗಳಿಗೆ ಕೆಟ್ಟದ್ದು ಬಂದೊದಗಿದಾಗ ತನ್ನನ್ನು ತಾನು ಬಿಟ್ಟುಕೊಡದೇ ಹಾಗೆಯೇ ಮುಚ್ಚಿಡಲು ಪ್ರಯತ್ನಿಸಿದ್ದಾರೆ. ಬಚ್ಚಿಟ್ಟಷ್ಟು ಅದಕ್ಕೆ ಬೆಲೆ ಹೆಚ್ಚು ಎನ್ನುವ ವಾಡಿಕೆ ಇಂದಿಗೂ ಕವಿಗಳ ಮನದಲ್ಲಿ ಮನೆಮಾಡಿದೆ.

"ಎಂ.ಕೆ.ಇಂದಿರಾ ಅವರನ್ನು ಬಿಟ್ಟರೆ ಬಹುಶಃ ಕುಂದಾಪುರ ಸುತ್ತಮುತ್ತಲ ಪ್ರಾದೇಶಿಕ ಭಾಷೆಯನ್ನು ಇವರಷ್ಟು ಸಮರ್ಥವಾಗಿ ಬಳಸಿದ ಲೇಖಕಿ ಇಲ್ಲವೆನ್ನಬಹುದು. ಭಾಷೆ ಅಲ್ಲಲ್ಲಿ ಕೆಲವು ಬಾರಿ ಸಂವಹನಕ್ಕೆ ಅಡ್ಡಿ ಎನಿಸಿದರೂ ಕಥೆ-ಕಥೆಯ ಪಾತ್ರಗಳು ನಿರೂಪಣಾ ರೀತಿ ಆ ಕುಂದನ್ನು ಮರೆಸಿಬಿಡುತ್ತವೆ."[೭] ಈ ಮಾತು ಅಕ್ಷರಶಃ ಸತ್ಯವಾದದ್ದು ಎಚ್.ಎಲ್.ಪುಷ್ಪ ಅವರು ವೈದೇಹಿ ಅವರ ಬರಹದ ಸಾಹಿತ್ಯವನ್ನು ತುಂಬಾ ಹತ್ತಿರದಿಂದ ನೋಡಿ, ಅಧ್ಯಯನ ನಡೆಸಿ ಈ ಮಾತು ಹೇಳಿದ್ದಾರೆ ಎಂದೆನಿಸಿದೆ. ಮಲೆನಾಡಿನ ಹವ್ಯಕ ಆಡು ಭಾಷೆಯ ಸೊಗಡಿನಲ್ಲಿ ಇವರ ಬಹುತೇಕ ಕತೆಗಳು ಬರೆಯಲ್ಪಟ್ಟಿದ್ದು ಅವುಗಳ ವಸ್ತುಗಳು, ಪಾತ್ರಗಳು, ಘಟನೆಗಳು ಎಲ್ಲವೂ ಆ ಪರಿಸರದಿಂದಲೇ ಜನ್ಮ ತಳೆದವುಗಳಾಗಿವೆ. ಉದಾಹರಣೆಗೆ ವೈದೇಹಿ ಅವರ ಹಕ್ಕಿಲ್ಲದವರು ಕಥೆಯ ಕೆಲವು ಸಂಭಾಷಣೆಗಳನ್ನು ನೋಡಬಹುದು. ಪದ್ದಮಾವಯ್ಯ ದೊಡಕಗೆ ಹೇಳುವ ಮಾತುಗಳು "ಯಾರು ಹೇಳು ನೀನೇ, ನಂಗೆ ಕಾಣ್ತಾ? ಮಧುರಾ, ಮಾಲತಿ, ಅರುಣ, ಕಿರಣ ಅವರ ಮಕ್ಕಳು, ಶಾರದೆ, ಅವಳ ಮಕ್ಕಳು ಯೇಣು: ಇಲ್ಲಿ ಕಾಣೆಯ ..... ಇವಳು ಅರುಣ, ಅಮೆರಿಕಲೆ ಇರ್ತದ. ಇವಳ ಗಂಡ ಅಲ್ಲಿ ದೊಡಾ...... ಇಂಜನಿಯರ್ ಅವಳು ಕಿರಣ ಸಿಂಗಾಪುರಲೆ ಇರ್ತವುಳು, ಮಾಲತಿ ಬಾರದೆ. ಮೂರು ವರ್ಷ ಆಯಿತು...... ಮಧುರಾ ನಾನು ಹಾಂಗ್‌ಕಾಂಗ್‌ಲೆ ಇರ್ತ್‌ದ್. ದೊಡಕ..... ಸೈ, ಮೈಮೇಲೆ ದೈವ ಆಳ್ ತಾ ಕಾಣ್ತ್"[೮] ದೊಡಕ ಸಿರಿಯು ಕಾಯಿ ಕರಕರವೆಂದು ಹರೆಯುವುದನ್ನು ಕೇಳಿಸಿಕೊಂಡಾಗ ಈ ಮಾತನ್ನು ತನ್ನಲ್ಲಿಯೇ ಗೊಣಗಿಕೊಳ್ಳುತ್ತಾಳೆ.

ಈ ಸಂಭಾಷಣೆಯಲ್ಲಿ ವೈದೇಹಿ ಅವರು ತಮ್ಮ ಬರವಣಿಗೆಯಲ್ಲಿ ತಾವು ಬಳಸಿಕೊಂಡಿರುವ ಮಲೆನಾಡಿನ ಹವ್ಯಕ ಕನ್ನಡದ ಆಡು ಭಾಷೆಯ ಸೊಗಡನ್ನು ಕಾಣಬಹುದಾಗಿದೆ. ಕಾಣ್ತಾ, ಅನ್ನುವ ಶಬ್ದ ಕಾಣುತ್ತದೆಯೇ? ಎಂಬ ಅರ್ಥವನ್ನು ಕೊಡುತ್ತದೆ. ಇಲ್ಲಿ ಕಾಣೆಯ ಎನ್ನುವ ಪದದಲ್ಲಿ ವ್ಯಂಗತೆಯು ಕಂಡುಬರುತ್ತದೆ. ಎಂಭತ್ತರ ಆಸುಪಾಸಿನ ದೊಡಕಗೆ ಇಲ್ಲಿ ಕಾಣುತ್ತಿದಿಯೋ ಎಂದು ಕೇಳಿದರೆ ಅವಳಿಗೆ ದೃಷ್ಟಿದೋಷದ ಸಮಸ್ಯೆಯಿದೆ ಎಂದು ಗೊತ್ತಿದ್ದರೂ ಸಹ ತಮ್ಮನಾದ ಪದ್ಮನಾಭನು ಈ ಮೇಲಿನಂತೆ ಕೇಳುತ್ತಾನೆ. ಅಮೆರಿಕಲೆ ಇರ್ತ್‌ದ್, ಅಮೇರಿಕಾದಲ್ಲೇ ಇರುತ್ತಾರೆ. ಗಂಡ, ದೊಡಾ

ದೊಡ್ಡ, ಸಿಂಗಾಪುರಲೆ ಇರ್ತವುಳು ಸಿಂಗಾಪುರದಲ್ಲೇ ಇರುವವಳು. ಈ ಎಲ್ಲಾ ಪದಗಳನ್ನು ಗಮನಿಸಿದರೆ ವೈದೇಹಿಯವರ ಭಾಷಾ ಪ್ರಾದೇಶಿಕತೆಯು ಸಂಕ್ಷಿಪ್ತವಾದದ್ದು ಎನಿಸುತ್ತದೆ. ಸಂಭಾಷಣೆಯ ಮಧ್ಯ ಮಧ್ಯದಲ್ಲೇ ಅಮೇರಿಕಾ, ಸಿಂಗಾಪುರ, ಹಾಂಕಾಂಗ್, ಎಂಬ ದೊಡ್ಡ ದೊಡ್ಡ ದೇಶಗಳ ಹೆಸರುಗಳನ್ನು ಪರಿಚಯಿಸುತ್ತಾರೆ. ಭಾಷಾ ವಿಷಯದಲ್ಲಿ ವೈದೇಹಿಯವರು ತಮ್ಮತನವನ್ನು ತಾವು ಬಿಟ್ಟುಕೊಟ್ಟಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು. ಇಲ್ಲಿ ಮತ್ತೊಂದು ವಿಶೇಷವೆಂದರೆ ದೊಡಕ ಸಿರಿಯು ಮಾಡುವ ಶಬ್ದವನ್ನು ಗಮನಿಸಿ 'ಸೈ ಮೈಮೇಲೆ ದೈವ ಆಳ್‌ತಾ ಕಾಣ್‌ತ್' – ಎಂಬ ವಾಕ್ಯವು ಮೈಮೇಲೆ ದೇವರು ಬಂದಿರಬೇಕು ಎಂಬುದಾಗಿದೆ. ಮಲೆನಾಡಿನ ಕಡೆ ದೇವರು ದೆವ್ವಗಳು, ಪೀಡೆಗಳು ಎಂಬುದರ ಸಂಪ್ರದಾಯಗಳು ಕಂಡುಬರುತ್ತವೆ. ವೈದೇಹಿಯವರು ಅವುಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸದೇ ಇದ್ದರೂ ಸಹ ಅವಳಿಗೆ ಬಂದ ಸಿಟ್ಟು ಅಥವಾ ಕೋಪ ದೈವಕ್ಕೆ ಹೋಲಿಸಲಾಗಿದೆ. ದೇವರು ಬಂದವರು ದೆವ್ವ ಬಂದರೂ ಸಹ ಇದೇ ರೀತಿಯಾಗಿ ಬಡಬಡಿಸುತ್ತಿರುತ್ತಾರೆ ಎನ್ನುವುದಾಗಿದೆ.

ವೈದೇಹಿ ಅವರ ಪ್ರಾದೇಶಿಕತೆಯನ್ನು ಪ್ರಮುಖವಾಗಿ ಮನೆಯ ಒಳಗಡೆಯೇ ಹುಡುಕುವುದು ಹೆಚ್ಚು ಸೂಕ್ತ ಎಂದೆನಿಸಿದೆ, ಏಕೆಂದರೆ ಮನೆಯೇ ಒಂದು ಮಂಟಪವಾಗಿದೆ. ಅದೇ ಅವರ ಜಗತ್ತು. ಅಡುಗೆ ಮನೆಯೇ ಅವರ ಪರಮಾಪ್ತವಾದ ಸಂಗಾತಿ, ಅಲ್ಲಿರುವಂತಹ ಪ್ರತಿಯೊಂದು ಸಾಮಾನುಗಳು, ಕಾಳು–ಕಡಿಗಳು, ಅವಳ ರಕ್ತ ಸಂಬಂಧಿಕರು, ಮಕ್ಕಳು ಎಂದರೆ ತಪ್ಪೆನಿಸದು. ಅಡುಗೆ ಮನೆಯಲ್ಲಿದ್ದಕೊಂಡೇ ಕವಯಿತ್ರಿ ಇಡೀ ಜಗತ್ತಿನ ರುಚಿ ತಿಳಿಯಲೆತ್ನಿಸುತ್ತಾರೆ. ಆ ಕೋಣೆಯಿಂದ ಹೊರ ಬರಲೆತ್ನಿಸಿದರೆ ಪುರುಷ ಪ್ರಧಾನ ಸಂಸ್ಕೃತಿ–ಸಂಸ್ಕಾರ, ಸಮಾಜ ಆಕೆಯನ್ನು ನಾಲ್ಕು ಗೋಡೆಯ ಮಧ್ಯದಲ್ಲೇ ನಿಲ್ಲಿಸಿದ್ದಾರೆ. ಅಡುಗೆ ಮನೆಯ ಗೋಡೆಗಳು ಮುರಿದು ಬಿದ್ದರೂ ಅವು ಮತ್ತೊಂದು ರೂಪದಲ್ಲಿ ಮಹಿಳೆಯನ್ನು ಆವರಿಸಿಕೊಂಡಿವೆ ಎನ್ನುವುದು ಸುಳ್ಳೇನಲ್ಲ. ಈ ಹೊಸ ಗೋಡೆಗಳ ಚೌಕಟ್ಟನ್ನು ಸೂಚ್ಯವಾಗಿ ಹೇಳುವ ತಾರಿಣಿ ಶುಭಾದಾಯಿನಿ 'ಬಯಲಿಗೆ ಹೆಜ್ಜೆ ಇಡಬೇಕು ಎನ್ನುವಷ್ಟರಲ್ಲಿ ಆಕೆಯ ಸುತ್ತ ನೂರಾರು ವಿಚಾರಗಳು ಗೋಡೆಗಳಾಗಿ ನಿಲ್ಲುತ್ತವೆ ಎಂದು ಅಭಿಪ್ರಾಯಪಡುತ್ತಾರೆ.'

ವೈದೇಹಿಯವರು ಬರೆದಿರುವ ಹಕ್ಕಿಲ್ಲದವರು ಕತೆಯಲ್ಲಿ ಒಂದು ಮನೆಯ ಚಿತ್ರಣವನ್ನು ಹೀಗೆ ಕಟ್ಟಿಕೊಡುತ್ತಾರೆ. "ಮಸಿ ಹಿಡಿದ ತೊಲೆ, ಮಾಡು, ಗೋಡೆ, ಕಪ್ಪುನೆಲ, ಕತ್ತಲೆ ಗವಿ, ಎರಡು ಜೋಡಿಸಿ ಮಾಡಿದ ಮಂಚದ ಮೇಲೆ ಮಲಗಿ – ಮಲಗಿ ಚಪ್ಪಟೆಯಾದ ಹಾಸಿಗೆ, ಮೇಲೆ ಹಳೆಯ ಹರಕು ಸೀರೆಯ ಹಾಸು, ತೆಳ್ಳನೆ ಹೊದಿಕೆ, ಯಾವತ್ತೋ

ಕಟ್ಟಿದ, ಕಪ್ಪಿನಲ್ಲಿ ಕಪ್ಪೇರಿದ, ತಂತಿಯ ಮೇಲೆ ಯಾವತ್ತಿನಿಂದಲೂ ನೇತಾಡುತ್ತಲೇ ಇವೆ ಎಂದು ತೋರುವ ಬಟ್ಟೆಗಳ ಸಾಲು – ಸಾಲು ಹರಕು – ಮುರುಕು."[8] ಇಲ್ಲಿ ತಿಳಿಸಿದ ಸಾಲುಗಳು ಒಂದೊಂದು ಶಬ್ಧವೂ ಒಂದೊಂದು ಇತಿಹಾಸವನ್ನು ತಿಳಿಸುತ್ತವೆ. ಮಸಿ ಹಿಡಿದ ತೊಲೆ, ಚಪ್ಪಟ್ಟೆಯಾದ ಹಾಸಿಗೆ, ಹರಕು ಸೀರೆ, ಕಪ್ಪೇರಿದ ತಂತಿ, ಹರಕು – ಮುರುಕು, ಈ ಎಲ್ಲಾ ಶಬ್ಧಗಳು ಆ ಮನೆಗೆ ಎಷ್ಟು ವರ್ಷಗಳಾಗಿವೆ. ಅದರಲ್ಲಿರುವವರಿಗೆ ಎಷ್ಟು ವರ್ಷವಾಗಿದೆ. ಅವರ ಜೀವನ ಶೈಲಿ ಎಂತಾದ್ದು, ಅವರು ಶ್ರೀಮಂತರೋ ಅಥವಾ ಬಡವರೋ ಎಂಬುದನ್ನು ಸಾರಿ – ಸಾರಿ ಹೇಳುವಂತಿದೆ.

ವೈದೇಹಿಯವರ 'ಸಪ್ಪಳ ಮಾಡದ ಹೆಜ್ಜೆಗಳು', 'ಆತ' ಈ ಎರಡು ಕತೆಗಳಲ್ಲಿ ಬಸ್ಸನ್ನು ತರುವುದರ ಮೂಲಕ ಅದರಿಂದ ಇತಿಹಾಸವನ್ನು ಆಧುನಿಕರಿಂದ ಹೇಳಿಸುವ, ಬಿಚ್ಚಿಡುವ ಪ್ರಯತ್ನ ನಡೆದಿದೆ. 'ರೋಹಿಣಿ' 'ನಾರಾಯಣ ಗುರುಗಳ'ನ್ನು ಕಂಡಾಗ ಅವರು ಗುರುತಿಸದೇ ಇದ್ದರೂ ರೋಹಿಣಿಯೇ ಹೋಗಿ ಅವರಿಗೆ ನಮಸ್ಕಾರ ಮಾಡಿ ನಾನು ನಿಮ್ಮ ಶಿಷ್ಯೆ ಸಾರ್, ನಮಗೆ ಭೂಗೋಳ ಶಾಸ್ತ್ರ ಪಾಠ ಮಾಡಿದ್ದಿರಿ ಎಂದು ನೆನಪಿಸಿದ್ದು ತುಂಬಾ ಖುಷಿ ತರುವಂತಹ ವಿಷಯ. ಗುರುಗಳಾದವರು ತಮ್ಮನ್ನು ಪ್ರವಾಸ ಕರೆದುಕೊಂಡು ಹೋದ ನೆನಪು ಅಲ್ಲಿ ಅವರು ಗಾಂಧಿವಾದದ ಕುರಿತು ಭಾಷಣ ಮಾಡಿದ್ದು, ಅವರೇ ಸ್ವತಃ ಕೈಯಾರೆ ಅಡುಗೆ ಮಾಡಿ ಊಟಕ್ಕೆ ಬಡಿಸಿದ್ದು, ಎಲ್ಲಾ ಇತಿಹಾಸವಾದರೂ ಸಹ ರೋಹಿಣಿಗೆ ಹಸಿರಾಗಿಯೇ ಇದೆ. ಅಂದರೆ ಇತಿಹಾಸದ ಜೊತೆಯಲ್ಲಿಯೇ, ನೆನಪುಗಳ ಜೊತೆಯಲ್ಲಿಯೇ ಜೀವನ ಸಾಗಿಸುವುದು ಒಂದು ರೀತಿಯ ಅವಿಸ್ಮರಣೀಯವಾದ ಸಂದರ್ಭಗಳಾಗಿವೆ.

ಆತ ಕತೆಯಲ್ಲಿ ಬಸ್ಸಿನಲ್ಲಿ ಹತ್ತಿ ಕುಳಿತ ಸುಮನ ತನ್ನ ಪತಿದೇವನು ಬರದೇ ಇದ್ದ ಸಂದರ್ಭದಲ್ಲಿ ಚಡಪಡಿಸುತ್ತಾ ಸುತ್ತ ನೋಡುವಾಗ ಯಾವುದೇ ಪರಿಚಯವಿರುವಂತಹ ಎರಡು ಕಣ್ಣುಗಳು ಸುಮನಗಳನ್ನೇ ನೋಡುತ್ತಿರುತ್ತದೆ. ಆತ ಯಾರು ಇರಬಹುದು ಎಂದು ಜ್ಞಾಪಿಸಿಕೊಳ್ಳುವಾಗ ಒಬ್ಬರನ್ನೇ ನೆನಸುವಾಗ ವೈದೇಹಿಯವರು ದೇಶದ ವಿದ್ಯಾವಂತ ನಿರುದ್ಯೋಗ ಯುವಕರ ಬಗ್ಗೆ ತುಂಬಾ ಕರುಣಾ ಜನಕವಾದ ಮಾತುಗಳನ್ನಾಡಿದ್ದಾರೆ. ಯುವಕ ಶಕ್ತಿಯ ಕುರಿತು ಚಿಂತಿಸುತ್ತಾರೆ. ಅವರ ದಿನನಿತ್ಯದ ಅನ್ನದ ಬಗ್ಗೆ ಚಿಂತಿಸುತ್ತಾರೆ.

'ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ' ಎಂಬ ಗಾದೆಯೊಂದಿಗೆ ಅದರ ಪ್ರಾಮುಖ್ಯತೆಯನ್ನು ಅತೀಸೂಕ್ಷ್ಮವಾಗಿ ತಿಳಿಯಾಗಿ ಹೇಳಲು ಹೊರಟಿದ್ದಾರೆ. "ಸುಮನ ನೆನಸಿಕೊಂಡ ಆತ ಈತನೇ ಇರಬಹುದಾ? ಎಂಬ ಪ್ರಶ್ನೆ ಎತ್ತುತ್ತಾರೆ. ಶಕಿಗೆ ಕೆಲಸ ಸಿಕ್ಕಿತಂತೆ. ಆ ಕೆಲಸಕ್ಕೆ ತುಂಬ ಜನ ಅರ್ಜಿ ಹಾಕಿದ್ದರಂಥೆ ಹೆಚ್ಚಿನವರು

ಹುಡುಗರಂತೆ. ಇಂಟರ್‌ವ್ಯೂನಲ್ಲಿ ಅವರನ್ನೆಲ್ಲ ಕಂಡು ಇವಳಿಗೆ ಪಾಪ ಅಲ್ಲ? ಅದರಲ್ಲಿ ಒಬ್ಬನಂತೂ ತುಂಬ ಚೆನ್ನಾಗಿ ಇಂಟರ್‌ವ್ಯೂ ಮಾಡಿದ್ದ ಎಂತ ಹೇಳಿದರು ಯಾರೋ ಆದರೆ ಆತನಿಗೆ ಯಾರದೂ ಶಿಫಾರಸು ಇರಲಿಲ್ಲವಂತೆ. ನನಗೆ ಅವನ ಅನ್ನ ನಾನು ಕಸಿದೆನೇನೋ ಅಂತ ಅನಿಸುತ್ತದೆ ಎಂದಿದ್ದಳು."[೧೦] ಅಂದರೆ ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ತನ್ನ ಜೀವನ ರೂಪಿಸಿಕೊಳ್ಳಬೇಕಾದರೆ ಯಾರದಾದರೂ ಕೈವಾಡ, ಶಿಫಾರಸ್ಸು ಇರಲೇಬೇಕು ಅಂದಾಗ ಮಾತ್ರ ವಿದ್ಯಾವಂತ ನಿರುದ್ಯೋಗ ವ್ಯಕ್ತಿ ಉದ್ಯೋಗಸ್ಥನಾಗುತ್ತಾನೆ. ಇದು ಅಕ್ಷರಶಃ ಸತ್ಯವಾದ ಮಾತಾಗಿದೆ. ವೈದೇಹಿಯವರು ಕಟ್ಟಿರುವುದು ಕತೆಯಾದರೂ ಅದರಲ್ಲೊಂದು ಜೀವನದ ನಾನಾರ್ಥಗಳನ್ನು ತಿಳಿಸಿದ್ದಾರೆ. ಅವರ ಪ್ರತಿಯೊಂದು ಕತೆಗಳು ವಿಭಿನ್ನತೆಯಿಂದ ಕೂಡಿದ್ದರೂ ಅವುಗಳು ಒಂದೊಂದು ಜೀವ ಜಗತ್ತನೇ ಕಟ್ಟಿಕೊಡುತ್ತವೆ.

ವೈದೇಹಿಯವರು ಮೂಲತಃ ಕುಂದಾಪುರದ ಕೋಟಾ ಪರಿಸರದಲ್ಲಿ ಬೆಳೆದವರು. ಅವರ ಕಡೆ ಮಲೆನಾಡೇ ಹೆಚ್ಚಾಗಿರುವುದರಿಂದ ಅವರ ಕತೆಗಳಲ್ಲಿ ನೈಸರ್ಗಿಕವಾದ ಕಾಡುಗಳು, ಸಸ್ಯಗಳು ಸಹಜವೆಂಬಂತೆ ಪ್ರವೇಶ ಪಡೆದಿವೆ. ವೈದೇಹಿಯವರು ಬರೆದ ಬೆದಕಾಟ ಬದುಕೆಲ್ಲ ಎಂಬ ಕತೆಯಲ್ಲಿ ಅಂಜು ಮತ್ತು ಅಕೆಯ ಗೆಳತಿ ವಿಜಯ ಮಾತನಾಡುತ್ತ ಒಂದು ಸೂಯಿಸೈಡ್ ಪಾಯಿಂಟ್‌ಗೆ ಹೋಗಿ ನಿಂತರು. ಆಗ ಅಂಜು ಹೇಳುತ್ತಾಳೆ. ಹೂಂ, ನನಗಂತೂ ಬಹಳ ಇಷ್ಟ. ಈ ಪ್ರಪಾತ, ನೋಡಿ ಪತಿತರಿಗೆ, ನಿರಾಶ್ರಿತರಿಗೆ ಬೆಂದ ಹೃದಯಿಗಳಿಗೆಲ್ಲ ಅಭಯ ನೀಡುವಂತಿಲ್ಲವೆ? ಎಲ್ಲಾದರೂ ಬಿದ್ದೆವೆಂದರೆ ಜೀವ ಉಳಿಯುವುದು ಕಷ್ಟ. ಕಷ್ಟವೇನು? ..... ಅಸಾಧ್ಯ ...... ದೇಹವೇ ಸಿಗಲಿಕ್ಕಿಲ್ಲ ಎಂದು ತಾನೂ ಬಗ್ಗಿ ನೋಡಿ ಕಣ್ಣಿಂದ ಅಳೆಯುತ್ತ ಇವರು ನನ್ನೆಡೆಗೆ ನಗು ಬೀರಿ ಅಂದರು. ಹಾರಲೇನೆ? ಕೆಳಗಡೆ ಇನ್ನೂ ಚೆನ್ನಾಗಿದೆ. ಎಂತಂತಹ ಮರಗಳು ಎಷ್ಟು ಪುಟ್ಟ ಪೊದೆಗಳಂತೆ ಕಾಣುತ್ತಿವೆ ನೋಡು; ಅಲ್ಲಿಯೇ ಹೋಗಿ ಪ್ರಪಾತವನ್ನೇ ಪರಿಚಯಿಸಿದ್ದಾರೆ. ಅಲ್ಲಿರುವ ಮರಗಳು ಎಷ್ಟು ಎತ್ತರಕ್ಕೆ ಬೆಳದಿದ್ದವು ಮತ್ತು ಅವುಗಳ ಆಕಾರ ಹೇಗಿದೆ ಎಂಬುದನ್ನು ತಿಳಿಸಿದ್ದಾರೆ. ನಿಸರ್ಗ ತಾನು ಸೃಷ್ಟಿಸಿಕೊಂಡಿರುವ ತನ್ನ ಸುತ್ತಲ ಪರಿಸರ ಅತ್ಯಂತ ಮನಮೋಹಕವಾದದ್ದಾಗಿದೆ. ಇಂದಿನ ಮಲೆನಾಡಿನ ಪ್ರದೇಶಕ್ಕೆ ಹೋದಾಗ ಅಲ್ಲಿ ಪಾತಾಳ ಕಾಣದೇ ಇರುವ ಭೂಪ್ರದೇಶ ಪರಿಚಯವಾಗುತ್ತದೆ. ಹಾಗೆಯೇ ಅಂತಹ ಪ್ರದೇಶಗಳಲ್ಲಿ ಬೆಳೆದಂತಹ ಮರಗಳು ಮುಗಿಲಿಗೆ ಮುತ್ತಿಡುತ್ತಿವೆಯೋ ಏನೋ ಎನ್ನುವಷ್ಟು ಎತ್ತರಕ್ಕೆ ಬೆಳೆದುನಿಂತಿರುತ್ತವೆ. ಮಲೆನಾಡಿನಲ್ಲಿ ಬೀಸುವ ಗಾಳಿಯು ಅತಿಯಾದ ಚಳಿಯಿಂದ ಕೂಡಿರುತ್ತದೆ. ನೋಡುಗರ ಕಣ್ಣಿಗೆ ಅಲ್ಲಿಯ ಹಸಿರು

ರೋಮಾಂಚನಗೊಳಿಸುತ್ತದೆ. ಆಶ್ಚರ್ಯಚಕಿತಗೊಳಿಸುತ್ತದೆ. ಬೆಳಗಿನ ಜಾವದಲ್ಲಿ ಅಲ್ಲಿಯ ಕಾಡು ಬೆಟ್ಟ ಗುಡ್ಡಗಳು ಮಂಜಿನ ಮುಸುಕಿನಲಿ ಮುಳುಗಿಕೊಂಡಿದೆ ಎಂಬಂತಿರುತ್ತದೆ. ಅಂತಹ ಕಾಡಲ್ಲಿ ವಾಸವಾಗಿರುವ ಹಕ್ಕಿಗಳ ಉಲಿತದ ಗಂಧರ್ವ ನಿನಾದ ಕೇಳಿಬರುತ್ತಿದೆ. ಹಿಮಹನಿಗಳು ಎಲೆಗಳ ಮೇಲೆ ಬಿದ್ದಿರುವವು ಮುತ್ತಿನ ಹನಿಯಂತೆ ಕಣ್ಣಿಗೆ ರಾಚುತ್ತಿರುತ್ತವೆ.

ವೈದೇಹಿಯವರು ಸುಸಂಸ್ಕೃತ ಜಗತ್ತನ್ನು ಕಟ್ಟಿಕೊಂಡವುದರಲ್ಲಿ ಎತ್ತಿದ ಕೈ ಅವರ ಮಾತು, ನಯ-ವಿನಯತೆ, ಸಂಸ್ಕಾರ-ತಿಳುವಳಿಕೆ-ನಡವಳಿಕೆ ಕೆಲಸದಲ್ಲಿನ ಪ್ರಾಮಾಣಿಕತೆ ಇತ್ಯಾದಿಗಳನ್ನು ಅವರ ಕತೆಗಳಲ್ಲಿ ಕಾಣಬಹುದು. ಉದಾಹರಣೆ ವೈದೇಹಿಯವರ 'ಕ್ರೌಂಚ ಪಕ್ಷಿಗಳು' ಕತೆಯಲ್ಲಿ ಅರುಂಧತಿ ಅನಿತಾ ಅವರು ಸ್ವಾತಂತ್ರ್ಯ ಹೋರಾಟಗಾರರಾದ ವಿಶಾಖಾ ಬೆನ್ ಎಂಬುವವರ ಮನೆಗೆ ಹೋದಾಗ ಆ ಮನೆಯ ಲೀಜಿಯೆ ಎಂಬ ಮನೆಯ ಸಹಾಯಕಿ, ಅನಿತಾ-ಅರುಂಧತಿಯವರು ಬಂದಾಗ ಅವಳು ಮಾಡಿದ ಆತಿಥ್ಯ ಅದ್ಭುತವಾದದು. "ಬನ್ನಿ, ಒಳಗೆ ಬನ್ನಿ, ಕುಳಿತುಕೊಳ್ಳಿ...... ಅಮ್ಮ ಈಗ ಬರುತ್ತಾರೆ. ಎರಡು ಗ್ಲಾಸು ನೀರು ತಂದಿಟ್ಟು ಲೀಜಿಯೆ ಮುಗುಳು ನಕ್ಕು ತಲೆಯ ಮೇಲೆ ಸರಿಯಾಗಿಯೇ ಇದ್ದ ಸೆರಗನ್ನು ಸುಮ್ಮನೆ ಮುಟ್ಟಿ ಸರಿಮಾಡಿಕೊಳ್ಳುತ್ತ ಒಳನಡೆದಳು. ತೆಳ್ಳಗಿನ ಸೆರಗಿನ ಮರೆಯಲ್ಲಿ ಕಾಣುತ್ತಿದ್ದ ಜಡೆ ಹಾಕಿ ಸುತ್ತಿನ ತುರುಬು ಮೇಲೆ ಅರ್ಧ ಚಂದ್ರಾಕೃತಿಯಲ್ಲಿ ಹೂದಂಡೆ! ಹೇ, ಇದು ಥೇಟ ನಮ್ಮೂರ ಹಳೆಸ್ಟೈಲ್ ಎಂದೆ ಮೆಲ್ಲಗೆ"[೧೧] ಈ ಮಾತುಗಳನ್ನು ನೆನೆಸಿಕೊಂಡರೆ ನಮ್ಮ ಪೂರ್ವಜರ ಸಂಪ್ರದಾಯಗಳು ನೆನಪಿಗೆ ಬರುತ್ತವೆ. ಹಿಂದಿನ ಕಾಲದಲ್ಲಿದ್ದ ಆತಿಥ್ಯ ಯಾವ ರೀತಿಯಾಗಿತ್ತು ಎಂಬುದು ಇದರ ಜೊತೆಯಲ್ಲಿಯೇ ವೈದೇಹಿಯವರ ವೈದಿಕ ಸಂಪ್ರದಾಯಗಳು ಕುಂದಾಪುರದ ಮಲೆನಾಡಿನ ಅತಿಥ್ಯ ಹೇಗಿರುತ್ತದೆ ಎಂಬುದನ್ನು ತಿಳಿಯಬಹುದು. ಇಂದಿನ ಸಮಾಜಕ್ಕೆ ಅಂಟಿಕೊಂಡಿರುವ ವಿದೇಶಿ ಸಂಸ್ಕೃತಿಯನ್ನು ಹೋಗಲಾಡಿಸಲು ವೈದೇಹಿಯವರ ಬರಹಗಾರ್ತಿಯರು ಮುಂದಾಗಬೇಕಾಗಿದೆ.

ವೈದೇಹಿಯವರು ಮಲೆನಾಡಿನ ಕುಂದಾಪುರದ ಕೋಟಾ ಗ್ರಾಮದವರಾದರು. ಅವರ ಮೇಲೆ, ಅವರ ಬರಹದ ಮೇಲೆ ಬೇರೊಂದು ಭಾಷೆಯು ಪ್ರಭಾವ ಬೀರಿವೆ. ವೀಣಾ ಶಾಂತೇಶ್ವರ ಅವರ ಮೇಲೆ ಇಂಗ್ಲೀಷ್ ಭಾಷೆಯ ಪ್ರಭಾವ ಬೀರಿತು. ಕುವೆಂಪುರವರು ಮೊಟ್ಟಮೊದಲು ಇಂಗ್ಲೀಷ್ ಭಾಷೆಯಲ್ಲಿಯೇ ಸಾಹಿತ್ಯ ರಚಿಸುತ್ತಿದ್ದರು. ಗೀತಾ ನಾಗಭೂಷಣ ಅವರ ಮೇಲೆ ಮಹಾರಾಷ್ಟ್ರದ ಹಾಗೂ ಆಂಧ್ರಪ್ರದೇಶವು ಅವರಿರುವ ಸ್ಥಳಕ್ಕೆ ಸಮೀಪವಿರುವುದರಿಂದ ಅವರ ಮೇಲೆ, ಅವರ ಬರಹದ ಮೇಲೆ

ಮರಾಠಿ ಹಾಗೂ ತೆಲುಗು, ಹಿಂದಿ ಭಾಷೆಯ ಪ್ರಭಾವವಾಯಿತು. ಇವರಂತೆಯೇ ವೈದೇಹಿಯವರ ಬರಹದ ಮೇಲೆಯು ಸಹ ಹಿಂದಿ ಭಾಷೆಯ ಪ್ರಭಾವವಾಗಿರುವುದನ್ನು ಕಾಣಬಹುದು. ವೈದೇಹಿಯವರ 'ಕ್ರೌಂಚಪಕ್ಷಿಗಳು' ಕತೆಯಲ್ಲಿ ಅನಿತಾ–ಅರುಂಧತಿಯವರು ವಿಶಾಖಾ ಬೆನ್‌ರವರ ಜೊತೆ ಮಾತನಾಡುವಾಗ ಅಶ್ನಾರ್ಣ ಭಟ್ಟರ ಬಗ್ಗೆ ಮಾತನಾಡುವಾಗ ಅವರು ಮಾಡುವ ಅಡುಗೆಯನ್ನು ಕುರಿತು. "ಎಲ್ಲರೂ ಭಟ್‌ಜೀ ಏಕ್ ಚಾಯ್, ಭಟ್‌ಜೀ ಏಕ್ ದೋಸಾ, ಪೂರೀ, ರೋಟೀ, ಸಬ್ಜೀ, ಬಾಜೀ, ಭಟ್‌ಜೀ ಎನ್ನುತ್ತ ಪಟ್ಟಾಂಗ ಹೊಡೆದು ತಿಂದು ಕುಡಿದು ಹೋಗುವವರೇ......."[೧೨] ವೈದೇಹಿಯವರು ಬಳಸಿರುವ ಈ ಪದಗಳು ಹಿಂದಿನ ಭಾಷೆಯವು. ಭಟ್‌ಜೀ ಅನ್ನುವ ಪದವು ಮರ್ಯಾದೆ ಸೂಚಕವಾದ ಪದವಾಗಿದೆ. ಜೀ ಎನ್ನುವ ಅಕ್ಷರ ಹಿರಿಯರನ್ನು ಮಾತನಾಡಿಸುವಾಗ, ಅವರ ವೃತ್ತಿಯೊಂದಿಗೆ ಸೇರಿಸಿ ಮಾತನಾಡಿಸುತ್ತಿದ್ದರು, ಭಟ್‌ಜೀ, ಸೇಠ್‌ಜೀ ಇತ್ಯಾದಿಯಾಗಿ ಸಂಬೋಧಿಸುತ್ತಾರೆ. ಚಾಯ್, ದೋಸಾ, ಪೂರೀ, ರೋಟಿ, ಸಬ್ಜೀ, ಬಾಜೀ ಎಂಬ ಪದಗಳು ಕುಂದಾಪುರ ತಾಲ್ಲೂಕಿನ ಸುತ್ತ ಮುತ್ತಲಿನ ಖಾದ್ಯಗಳನ್ನು ಕುರಿತು ಪರಿಚಯಿಸುತ್ತವೆ.

ಇದೇ ಕತೆಯ ಮತ್ತೊಂದು ಕಡೆಯಲ್ಲಿ ವೈದೇಹಿಯವರು ಸಂಸ್ಕೃತ ಭಾಷೆಯನ್ನು ಬಳಸಿರುವುದು ಕಂಡುಬರುತ್ತದೆ. ಜೌ ಪ್ರಭು ದೀನ ದಯಾಲು ಕಹಾವಾ! ಆರತ ಹರಸಿ ಬೇದ ಜಸು ಗಾವಾ! ಜಪಂಹಿ ನಾಮ ಜಪ ಆರತ ಬಾರೀ! ಮಿಠಂಹಿ ಕುಸಂಕಟ ಹೋಹಿ ಸುಖಾರೀ॥ ವೇದಗಳಲ್ಲಿರುವ ಈ ಶ್ಲೋಕವನ್ನು ತುಲಸಿದಾಸರು ಸೀತಾರಾಮನ ಬಳಿ ಮೊರೆ ಹೋಗುತ್ತಾರೆ. ವೈದೇಹಿಯವರು ತಾವುಗಳು ವೈದಿಕ ಸಂಸ್ಕಾರ ಅಥವಾ ಸಂಸ್ಕೃತಿಯನ್ನು ಆರಾಧಿಸುವ ಬಗೆಯನ್ನು ಸಹ ಇಲ್ಲಿ ತಿಳಿಸಿದ್ದಾರೆ. ರಾಮಾಯಣದ ಕಥೆಯೊಡನೆ, ದೇಶ ವಿಭಜನೆಯ ದುರಂತ, ಅಯೋಧ್ಯೆಯ ದುರ್ಘಟನೆ, ಜೊತೆಗೆ ನಿರಂತರವಾಗಿ ಪರೀಕ್ಷೆಗೊಳಗಾಗುವ ಸ್ತ್ರೀಪುರುಷ ಸಂಬಂಧಗಳು, ಒಂದೇ ಘಟನೆ ಬೇರೆ–ಬೇರೆಯವರಿಗೆ ಕಾಣಿಸುವ ಹೀಗೆ ಬೇರೆ–ಬೇರೆ ಆಯಾಮಗಳು ಈ ಕಥೆಗಿದೆ. ವೈದೇಹಿಯವರು ತಾವು ಬಳಸಿರುವ ಪದಗಳು ಕಾವ್ಯಾತ್ಮಕತೆಯಿಂದ ಕೂಡಿದವುಗಳಾಗಿವೆ. ಹಾಗೆಯೇ ಅವರು ಬಳಸುವ ಉಪಮೆಗಳು ಯಾರೂ ಬಳಸದೇ ನಿರ್ಗತಿಕವಾಗಿ ಉಳಿದಿರುವಂತಹವುಗಳಾಗಿವೆ. ಇವರ ಭಾಷಾಶೈಲಿಯಲ್ಲಿ ಬಳಸಿದ ಭಾಷೆಯು ಕೊಂಚ ಸಂಸ್ಕೃತಮಯವಾದದ್ದು, ವೈದೇಹಿಯವರು ಒಂದು ಬ್ರಾಹ್ಮಣ ಕುಟುಂಬದಲ್ಲೇ ಹುಟ್ಟಿ ಬೆಳೆದಿದ್ದರಿಂದ ಅವರ ಮೇಲೆ ಸಂಸ್ಕೃತದ ಪ್ರಭಾವ ನೇರವಾಗಿ ಬಿದ್ದಿವೆ.

'ಅಕ್ಕು' ಕಥೆಯಲ್ಲಿ ಅಕ್ಕುವಿನ ದೊಡ್ಡ ಕುಂಕುಮ, ಅವಳ ಕೈಯಲ್ಲಿ ಯಾವಾಗ ಕಂಡರೂ ಒಂದು ಟುವಾಲು, 'ಕ್ರೌಂಚಪಕ್ಷಿಗಳು' ಕಥೆಯಲ್ಲಿ ಅಣ್ಣಾರ್ಣ ಭಟ್ಟರು ಹಿಡಿದ ಸೌಟು, ಗಾಂಧೀಜಿಯವರ ಕೋಲು, ಮನದಲ್ಲಿ ಮೋಡ ಕಟ್ಟುವುದು. ಗಾಂಧೀಜಿಯನ್ನು ಅಡುಗೆ ಭಟ್ಟರಂತೆ ಬಿಂಬಿಸುವುದೂ 'ಮದುವೆ ಹೆಣ್ಣು ಸೀರೆ' ಕಥೆಯಲ್ಲಿ ಅವಳು ಉಟ್ಟ ಸೀರೆ, ಇಂತಹ ಉಪಮೆಗಳು ವೈದೇಹಿಯವರ ಕತೆಗಳಲ್ಲಿ ಸಾಲುಗಟ್ಟಿ ನಿಲ್ಲುತ್ತವೆ.

ಅಕ್ಕುವಿನ ಹಣೆಯಲ್ಲಿರುವ ಕುಂಕುಮವು ಕೇವಲವಾದದ್ದಲ್ಲ. ಅದೊಂದು ಹೆಣ್ಣಿನ ಪ್ರತೀಕ. ಅದನ್ನು ಮತ್ತೊಂದು ನೆಲೆಯಲ್ಲಿ ನೋಡುವುದಾದರೆ ಆ ಕುಂಕುಮವನ್ನಿಟ್ಟು ಅವಳನ್ನು ದಾಸಿಯನ್ನಾಗಿ, ಗುಲಾಮಳನ್ನಾಗಿಸಿದ ಪುರುಷಪ್ರಧಾನ ಸಮಾಜವಿದು. ಕುಂಕುಮವಿದ್ದರೆ ಮಾತ್ರ ಅವಳನ್ನು ಹೆಣ್ಣು ಎಂದು ಪ್ರತಿಬಿಂಬಿಸುವುದು ಸರಿಯೇ? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಇಲ್ಲ. ಇಂದು ಹೆಣ್ಣು ಪ್ರತಿಯೊಂದು ಕ್ಷೇತ್ರದಲ್ಲಿ ತನ್ನದೇ ಆದಂತಹ ಗುರುತರವಾದ ನೆಲೆಯನ್ನು ಕಂಡುಕೊಂಡಿದ್ದಾಳೆ ಅದರ ಹಿಂದೆ ಪುರುಷನ ಪ್ರೋತ್ಸಾಹ ಇರಲೇಬೇಕು ಎಂಬ ಉದ್ಧಟತನದ ಮಾತುಗಳು ಬೇಕಾಗಿಲ್ಲ. ಅಕ್ಕು ಹಿಡಿದಿರುವ ಟುವಾಲು ಬಹುದೊಡ್ಡ ಪ್ರತಿಮೆಯಾಗಿದೆ. ತನ್ನತನವನ್ನು ತಿರಸ್ಕರಿಸಲು ಹೆಣ್ಣು ಪಣತೊಟ್ಟ ಸಂದರ್ಭದಲ್ಲಿ ಅವಳಿಗೆ ಯಾವುದಾದರೊಂದು ಧೈರ್ಯ ತುಂಬಲು ಬೇಕಲ್ಲವೆ? ಆದ್ದರಿಂದ ಆಕೆಗೆ ಟುವಾಲು ಒಬ್ಬ ಪುರುಷನ ಸಂಕೇತವಾಗಿದೆ. ತನ್ನ ಪತಿಯಾದವನು ತನ್ನ ಜೊತೆಯಲ್ಲಿರದೇ ಊರೂರು, ಕೇರಿ–ಕೇರಿ, ಮನೆ–ಮನೆ ಅಲೆಯುತ್ತಿರುವಾಗ ತನ್ನ ಜೊತೆಯಲ್ಲಿರುವವರು ಯಾರು? ಎಂಬ ಪ್ರಶ್ನೆ ಅವಳದಾದರೂ ಅವನಂತೆಯೇ ಅಕ್ಕು ಸಹ ನಡೆದು ಕೊಳ್ಳುತ್ತಳಾದರೂ ನೋವನ್ನು ಅನುಭವಿಸುತ್ತಾಳೆ. ಒಬ್ಬ ಅಡಿಗೆಭಟ್ಟನಿಗೆ ಗಾಂಧೀಜಿಯನ್ನು ಹೋಲಿಸುವುದು ಅವನ ಸೌಟಿಗೆ ಗಾಂಧೀಜಿಯ ಕೋಲಿಗೆ ಹೋಲಿಸುವುದು ಅವರ ಸೌಟಿಗೆ ಗಾಂಧೀಜಿಯ ಕೋಲಿಗೆ ಹೋಲಿಸುವುದು ಬಹುದೊಡ್ಡದಾದಂತಹ ಪ್ರತಿಮೆಗಳಾಗಿವೆ.

'ಬ್ರಿಟಿಷರಿಗೆ ತರಿಸೀತೆ ಸೋಲು ಗಾಂಧೀಜಿಯ ಕೋಲು' ಎಂಬ ಕವಿತೆ ಈ ಸಂದರ್ಭದಲ್ಲಿ ನೆನಪಾಗುತ್ತದೆ. ವೈದೇಹಿಯವರಿಗೆ ಗಾಂಧಿ ಬೇರೆಯಲ್ಲ, ಅಡುಗೆ ಮಾಡುವ ಭಟ್ಟ ಬೇರೆಯಲ್ಲ, ಗಾಂಧೀಜಿಯವರ ಕೋಲು ಬೇರೆ ಅಲ್ಲ, ಭಟ್ಟನ ಸೌಟು ಬೇರೆ ಅಲ್ಲ. ಗಾಂಧೀಜಿಯವರಷ್ಟೇ ದೇಶ ಭಕ್ತಿಯನ್ನು ಭಟ್ಟರ ಹತ್ತಿರ ಕಾಣಲು ಹೊರಟರೆ, ಕೋಲು ಏನೇನು ಕೆಲಸ ಕಾರ್ಯಗಳನ್ನು ಮಾಡುತ್ತಿದೆಯೋ ಅದೇ ಕಾರ್ಯಗಳನ್ನು ಕೂಡ ಭಟ್ಟನ ಸೌಟು ಮಾಡುತ್ತದೆ ಎನ್ನುವ ಅಂಶ ಕಂಡುಬರುತ್ತದೆ. ಒಂದು ಹೆಣ್ಣು ತಾನು ಮದುವೆಯ ಸಂದರ್ಭದಲ್ಲಿ ಹುಟ್ಟುಕೊಂಡ ಸೀರೆಯನ್ನು ಯಾರಾದರೂ ನೋಡಿ

ಅದರ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಬೇಕು ಅಂದಾಗ ಮಾತ್ರ ಅ ಸೀರೆಯೂ ಗೆದ್ದಂತೆ ಇಲ್ಲದಿದ್ದರೆ ಆ ಸೀರೆಯೂ ಸೋತಂತೆ ಎಂಬ ನಂಬಿಕೆಯೂ ಇದೆ. ಇದರ ಹಿಂದೆ ಸುಮಳ ಒಂದು ಜಗತ್ತು ಇದೆ. ಅದರಿಂದ ಅವಳನ್ನು ಗುರುತಿಸಬೇಕೆಂಬುದೇನು ಇಲ್ಲ. ಸಮಾಜ ನೋಡುವ ನೂರು ವಿಭಿನ್ನತೆಯಿಂದ ಕೂಡಿರಬೇಕು ಎಂಬ ಆಶಯ ವೈದೇಹಿಯವರದು. ಇದೇ ರೀತಿಯ ಆಶಾ ಭಾವನೆಗಳನ್ನಿಟ್ಟುಕೊಂಡು ವೈದೇಹಿಯವರು ಎಂಭತ್ತು ಕಥೆಗಳನ್ನು ಸಹೃದಯ ಲೋಕಕ್ಕೆ ನೀಡುವುದರ ಮೂಲಕ ಕನ್ನಡ ಸಾಹಿತ್ಯ ಮೆರವಣಿಗೆಯಲ್ಲಿ ಮಹಿಳೆಯು ಸಹ ಭಾಗಿದಾರಳು ಎಂಬ ಗುರುತರವಾದ ಅಂಶವನ್ನು ಪ್ರತಿಬಿಂಬಿಸಿದ್ದಾರೆ.

ಕನ್ನಡದ ಸಾಮಾನ್ಯ, ಓದುಗರಿಗೆ ವೈದೇಹಿಯವರ ಕತೆಗಳು ಗೊತ್ತು, ಅವರು ತಮ್ಮ ಪರಿಧಿಗೆ ಬಂದ ಎಲ್ಲ ವಿಷಯಗಳನ್ನು ಕುತೂಹಲದಿಂದ ಅಭ್ಯಸಿಸಿದ ಶ್ರದ್ಧೆಯಿಂದ ವಾಙ್ಞಯವನ್ನು ಕಟ್ಟಿದರು ಎಂಬ ವಿಷಯ ಬಹುಮಂದಿಗೆ ತಿಳಿಯದು. ಒಬ್ಬ ಕಲಾವಿದೆಯ ವಿಷಯದಲ್ಲಿ ಒಂದು ಎಲೆ ಎಂಬುದು ತವರು ಮನೆಯಾಗಬಹುದು. ಅತ್ತೆಮನೆಯಾಗಬಹುದು, ಪತಿಯಾಗಬಹುದು, ಗೆಳತಿ ಗುರು ಆಗಬಹುದು. ತನ್ನ ಜೊತೆಗೆ ಅರಳದೇ ಉಳಿದ ಹೂಗಳು ಉದುರಿ ಒಣಗಿದರೂ ಎಲೆ ಮರೆಯ ಹೂ ಸುಗಂಧ ಬೀರುತ್ತಲೇ ಇರುತ್ತವೆ. ಸಾಂಪ್ರದಾಯಿಕ ಕುಟುಂಬದ ನೀತಿ – ನಿಯಮಗಳು, ಕಟ್ಟು ಪಾಡುಗಳು ನಿರಾಳವಾಗಬಹುದು.

ಗೀತಾ ನಾಗಭೂಷಣರವರ ಕತೆಗಳಲ್ಲಿನ ಪ್ರಾದೇಶಿಕ ಭಿನ್ನತೆ

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಭ್ಯಸಿಸಿದಾಗ ನಮಗೆ ಎರಡು ರೀತಿಯ ರಚನಾಕಾರರು ಕಂಡುಬರುತ್ತಾರೆ. ಮೊದ–ಮೊದಲು ಕೇವಲ ಪುರುಷ ರಚನೆಯನ್ನು ಕಂಡರೆ, ನಂತರದ ಅಂದರೆ ೧೨ನೇ ಶತಮಾನದ ಸಂದರ್ಭದಲ್ಲಿ ಅಕ್ಕಮಹಾದೇವಿಯಿಂದ ಪ್ರಾರಂಭವಾಯಿತು. ಸ್ತ್ರೀಯರ ಸಾಹಿತ್ಯ ಮುಂದುವರೆದಂತೆ ಎಪ್ಪತ್ತರ ದಶಕದಲ್ಲಿ ಮಹಿಳಾ ಲೋಕವೇ ಪ್ರಜ್ವಲಿಸಿತು. ಅಂದಿನಿಂದ ಇಂದಿನವರೆಗೂ ಸ್ತ್ರೀ ಸಾಹಿತ್ಯ ಪ್ರಕಾರವು ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬರುತ್ತದೆ. ಅಂತಹವರಲ್ಲಿ ಗೀತಾ ನಾಗಭೂಷಣ ಅವರು ಪ್ರಮುಖರು. ಅವರು ರಚಿಸಿದ ಕಥೆ ಕಾದಂಬರಿಗಳು ದಲಿತ ಲೋಕವನ್ನು ಅನಾವರಣಗೊಳಿಸುತ್ತವೆ. ಇವರು ಆಯ್ಕೆ ಮಾಡಿಕೊಂಡ ಶೈಲಿ, ಬರಹ ವಿಭಿನ್ನವಾದದ್ದು. ಏಕೆಂದರೆ ಅವರು ಎಲ್ಲರೂ ಮೆಚ್ಚುವಂತಹ ಶಿಷ್ಟ ಭಾಷೆಯಲ್ಲಿಯೇ ಸಾಹಿತ್ಯ ರಚಿಸಿದ್ದಾದರೂ ನಂತರದ ಬರಹ ಪಕ್ಕಾ ಹಳ್ಳಿ ಭಾಷೆಯಲ್ಲಿಯೇ ರಚನೆಗೊಂಡವು.

ಗೀತಾ ನಾಗಭೂಷಣರು ತಮ್ಮ ಶೈಲಿ ಅಥವಾ ಬರಹದ ಭಾಷೆಯನ್ನು ಬದಲಾಯಿಸಲು ತಮ್ಮದೇ ಆದಂತಹ ಕೆಲವು ಕಾರಣಗಳು, ಒತ್ತಡಗಳು ಇದ್ದಿರಬಹುದು. ಒಂದು ಕತೆ ಸಿದ್ದಲಿಂಗಯ್ಯನವರು ಈ ರೀತಿ ಹೇಳುತ್ತಾರೆ. "ದೇವ್ನೂರ್ ಮಹಾದೇವ ಅವರು ಕುಸುಮಬಾಲೆಯನ್ನು ಆ ಉಪಭಾಷೆಯಲ್ಲಿ ಬರೆಯದೇ ಇದ್ದಿದ್ರೆ ಪರಿಣಾಮ ಏನಾಗ್ತಿತ್ತೋ ಗೊತ್ತಿಲ್ಲ. ಆದ್ರೆ ಅವರು ಹಾಗೆ ಬರ್ದಿದ್ದರಿಂದ ಬಹಳ ಪರಿಣಾಮವಾಯ್ತು. ಭಾಷೆಯನ್ನು ಆಯ್ಕೆ ಮಾಡಿಕೊಳ್ಳೋದು ಬಹಳ ಮುಖ್ಯ. ಮೊದಲೇ ಇದರ ಬಗ್ಗೆ ತೀರ್ಮಾನ ಮಾಡಬೇಕು ಅಂತ. ಮೇಲುವರ್ಗದವರ ಭಾಷೆಯನ್ನು ನಾವು ಒಪ್ಕೊಂಡ ಕೂಡ್ಲೆ ಸೃಜನಶೀಲ ಬರಹಗಾರರ ಸಮಸ್ಯೆ ಏನಾಗ್ತದೆ. ಅಂದ್ರೆ ಭಾಷೆ ಜೊತೆಗೆ ಆ ಮೌಲ್ಯಗಳು ಬಂದುಬಿಡ್ತವೆ. ಆದ್ರಿಂದ ಮೇಲುವರ್ಗದವರ ಭಾಷೆಯಲ್ಲಿ ಕೆಳವರ್ಗದ ಮೌಲ್ಯಗಳನ್ನು ಸಂಸ್ಕೃತಿಯನ್ನು ಹೇಳಲು ಸಾಧ್ಯವಾಗುವುದಿಲ್ಲ"[೧೩] ಎಂದಿದ್ದಾರೆ. ಬಹುಶಃ ಈ ನೆಲೆಯಲ್ಲಿಯೇ ಗೀತಾ ನಾಗಭೂಷಣ ಪಕ್ಕಾ ಗ್ರಾಮೀಣ ಭಾಷೆಯನ್ನು ಬಳಸಿದ್ದಾರೆ. ಅವರೇ ಹೇಳುವಂತೆ "ನನ್ನ ಜಿಲ್ಲೆಯ ದಲಿತರ ಜೋಪಡಿ ಪಟ್ಟಿಯ ಹೆಂಗಸರ ಗೋಳು ಎಲ್ಲರಿಗೂ ತಿಳಿಯಲಿ ಅನ್ನುವ ಜಿದ್ದಿನಲ್ಲಿ ಕಟ್ಟುಬಿದ್ದು ನಾನೇನಾದ್ರೂ ಶಿಷ್ಟ ಭಾಷೆಯಲ್ಲಿ ಅವರ ಬದುಕನ್ನು ಸುತ್ತಿಟ್ಟಿದ್ದರೆ ಅದು ನನ್ನ ಅಸಲಿತನವನ್ನು ಕಳೆದುಕೊಂಡು ನಕಲಿಗಾಗಿ, ಅದರ ಮೂಲ ಆಶಯದ ಮುಖ್ಯ ಬೇರಿಗೆ ಕೊಡಲಿ ಪೆಟ್ಟಾಗುತ್ತಿತ್ತು. ಹೀಗಾಗಿ ನಾನು ನನ್ನೂರಿನ ಈ ಭಾಷೆಯಲ್ಲೇ ಬರೆದೆ"[೧೪] ಎಂದು ಹೇಳಿದ್ದಾರೆ.

ಈ ಮೇಲಿನ ಮಾತನ್ನು ವಿಸ್ತರಿಸುವುದಾದರೆ ಸ್ಥಳೀಯ ಶೋಷಿತ ಮಹಿಳೆಯರ ಬದುಕನ್ನು ಕುರಿತು ಬರೆಯಬೇಕೆಂಬ ಛಲದೊಂದಿಗೆ, ಪಾಳೆಗಾರಿಕೆ ಕ್ರೌರ್ಯವನ್ನು ಬಯಲಿಗೆಳೆಯಬೇಕೆಂಬ ಹಠದೊಂದಿಗೆ, ಪುರುಷಪ್ರಧಾನ ವ್ಯವಸ್ಥೆಯು ಒಡ್ಡಿದ ದಬ್ಬಾಳಿಕೆಯನ್ನು ಧಿಕ್ಕರಿಸುವ ಮನೋಭೂಮಿಕೆಯ ಕಾರಣವಾಗಿ ಸ್ಥಳೀಯ ಭಾಷಾ ಸೊಗಡನ್ನು ದುಡಿಸಿಕೊಳ್ಳುವ ನಿಲುವಿಗೆ ಬದ್ಧವಾಗಿ ನಿಂತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ನಾಡಿನ ಸೌಹಾರ್ದ ಪರಂಪರೆಯನ್ನು ಜನಸಂಸ್ಕೃತಿಯನ್ನು ದಲಿತ ಮಹಿಳೆ ಮತ್ತು ನೊಂದವರ ಜೀವನವನ್ನು ನಿಷ್ಕಲ್ಮಷ ಪ್ರೇಮವನ್ನು ಕಟ್ಟಿಕೊಡುವಾಗೆಲ್ಲಾ ಲೇಖಕಿಯ ಕೈಯಲ್ಲಿ ನೆಲಮೂಲದ ಭಾಷೆಯು ಧೀಮಂತಿಕೆಯಿಂದ ಅರಳುತ್ತದೆ. ಮಾತನಾಡುವ ಭಾಷೆಯೇ ಬರಹದ ಭಾಷೆಯಾಗುತ್ತದೆ. ಹೀಗಾಗುವುದರಿಂದ ಪ್ರತಿಯೊಂದು ಭಾಷಾ ಶೈಲಿಯು ಜನಾಂಗವೊಂದರ ಸಾಂಸ್ಕೃತಿಕ ಬದುಕಿನ ಪ್ರತಿಬಿಂಬವಾಗಲು ಸಾಧ್ಯವಾಗುತ್ತದೆ. ಆದ್ದರಿಂದಲೇ ಇಂದು ದಲಿತ ಭಾಷೆಯನ್ನು ಕುರಿತ ಅನೇಕ ವ್ಯಾಖ್ಯಾನಗಳೇ ಬಂದಿವೆ. ಕೆ.ವಿ.ನಾರಾಯಣರವರು ಸಾಮಾಜಿಕ ಚಹರೆಯಾಗಿ ದಲಿತ ಭಾಷೆಯನ್ನು ನೋಡಿದರೆ,

ಸಿದ್ಧಲಿಂಗಯ್ಯನವರು ಪ್ರತಿರೋಧದ ನೆಲೆಯಾಗಿ ಕಾಣುತ್ತಾರೆ. ಬರಗೂರು ರಾಮಚಂದ್ರಪ್ಪಂತೂ ದಲಿತರ ಭಾಷೆ ಹಸಿವಿನ ಭಾಷೆ ಎಂತಲೇ ಕರೆಯುತ್ತಾರೆ. ಹಾಗೆಯೇ ದಲಿತರ ಆಸ್ತಿ ಮತ್ತು ಶಕ್ತಿ ಅವರಾಡುವ ಭಾಷೆಯೇ ಆಗಿದೆ ಎಂಬ ನಿಲುವಿಗೆ ಕರೀಗೌಡ ಬೀಚನಹಳ್ಳಿಯವರು ಬಂದರೆ, ಕನ್ನಡ ತಿಳುವಳಿಕೆಗೆ ಮಿಂಚು ತಂದು ಕೊಟ್ಟು ಭಾಷೆಯೆಂದು ಕಲ್ಗುಡಿಯವರು ಹೇಳುತ್ತಾರೆ. ಆದರೆ ಕೆಲವು ಮಡಿವಂತರು ದಲಿತ ಭಾಷೆ ಆಶ್ಲೀಲವೆಂದು ಒರಟುತನವೆಂದು ವಿರೋಧಿಸಿದ್ದಾರೆ ಎಂದು ಲೇಖಕಿಯು ಹೇಳುತ್ತಾರೆ.

"ಅಲ್ಲಮ ಹೇಳಿದಂತೆ ನಮ್ಮ ಜನರಿಗೆ ಶಬ್ದಸೂತಕವಿಲ್ಲ ಮೈಲಿಗೆ ಅಂಬಾದು ಆಶ್ಲೀಲ ಅಂಬಾದು ಶಬ್ಧದಾಗ ಇರುವುದಿಲ್ಲ. ಅದು ಮನಸ್ಸಿಗೆ ಹತ್ತಿದ ಮೈಲಿಗೆ, ಇದನ್ನು ತಿಳಿಯದ ಅನೇಕರು ಅಲಲಾ ಎನ್ ಖತರೆನಾಕ್ ಬರಿತಿರೀ ಮೇಡಂ ಅಂದವ್ರು ಇದ್ರು. ಆದ್ರ ಏನೆ ಮಾಡುತೀರಿ ಇಂಥ ಬದುಕು ಭಾಷೆಯನ್ನೆ ಓದುವುದೇ ನಿಮಗೆ ಇಷ್ಟು ಹೈರಾಣ ಅನಸ್‌ತಿದ್ರೆ ಅಂಥದೊಂದು ಒರಟು ಬದುಕು ಬಾಯಿ ಮುಚಿಕೊಂಡು ಕಳಿತಿದ್ದರಲ್ಲಾ ಅವ್ರಿಗಿ ಏನ್ ಅನ್‌ಸ್ತಿರಬೇಕು? ಅಂಥವರ ಬದುಕಿನ ಬಗ್ಗೆ ಆಲೋಚನೆ ಹರಿಸಬೇಕು. ಅಂಬಾದೇ ನನ್ನ ಕಾಳಜಿ ಆಗಿತ್ತು."೧೫ ಮೊದಲೇ ತತ್ವಪದಕಾರರ ಜವಾರಿ ಭಾಷೆಯಿಂದ ಪ್ರೇರಣೆ ಪಡೆದಿದ್ದರು. ನೀಲಾ. ಕೆ ಹೇಳುವಂತೆ ಕಲಬುರ್ಗಿ ಜಿಲ್ಲೆಯ ಜೇವರಗಿ ತಾಲೂಕಿನ ಕಡಕೋಳ ಮಡಿವಾಳಪ್ಪ ಎಂಬ ತತ್ವಪದಕಾರರು ಬಳಸಿದ ಒಂದು ಪದ್ಯ ಇಲ್ಲಿ ನೋಡಬಹುದು.

"ಗರ್ಜಿನ ಮಾತು ಆಡುವುದ್ಯಾಕೋ
ನಿಜಗುರ್ತದ ಪರ್ಜಿಗ ಕೈಹಾಕೋ,
ಅರ್ಜಿ ಸದ್ಗುರುವಿಗೆ ಕೊಡಬೇಕೋ, ಅವರ
ಅರ್ಜಿ ತಿಳಿದು ಬಾಣ ಬಿಡಬೇಕೋ.

ಈ ಪದ್ಯದ ನುಡಿಯೊಂದರಲ್ಲಿ ಬಳಕೆಯಾದ ಗರ್ಜ, ಅರ್ಜಿ, ಮರ್ಜಿ, ಪರ್ಜಿ, ಮುಂತಾದ ಪದಗಳು ಉರ್ದುವಿನಿಂದ ಬಂದವುಗಳಾಗಿವೆ. ಕ್ರಿ.ಶ.೧೩೪೭ ರಿಂದ ೧೯೪೮ ರವರೆಗೆ ಆಳಿದ ಅರಸೊತ್ತಿಗೆಯ ಪ್ರಭಾವದಿಂದಾಗಿ ಒಂದು ಕಡೆ ಉರ್ದು ಪದಗಳು, ಇನ್ನೊಂದೆಡೆ ಮರಾಠಿ ಭಾಷಿಕರ ಒಡನಾಟದಿಂದ ಮರಾಠಿ ಪದಗಳು, ಆಂಧ್ರ ನೆರೆಯಲ್ಲಿರುವುದರಿಂದ ಕೆಲವು ತೆಲಗು ಪದಗಳು ಸಮ ಸಮವಾಗಿ ಸೇರಿಕೊಂಡಿವೆ."೧೬ ಹಾಗಾಗಿ ತತ್ವಪದಕಾರರಂತೆ ಲೇಖಕಿಯು ದಲಿತರ ಭಾಷೆಯನ್ನು ತಮ್ಮ ಕಥೆ ಕಾದಂಬರಿಗಳೊಳಗೆ ತಂದರು.

ಗೀತಾ ನಾಗಭೂಷಣ ಈ ಮೊದಲೆಲ್ಲ ಶಿಷ್ಟ ಭಾಷೆಯಲ್ಲಿಯೇ ರಚಿಸುತ್ತಿದ್ದರು. ನಂತರದ ದಿನಗಳಲ್ಲಿ ತಮ್ಮ ಬರವಣಿಗೆಯ ಶೈಲಿಯನ್ನು ಬದಲಾಯಿಸಿಕೊಂಡರು. ಶಿಷ್ಟ ಭಾಷೆಯನ್ನು ಬಿಟ್ಟು ಹಳ್ಳಿ ಅಥವಾ ಗ್ರಾಮೀಣ (ಜನಪದ ಜವಾರಿ) ಭಾಷೆಯಲ್ಲಿ ಸಾಹಿತ್ಯ ರಚಿಸಲು ಪ್ರಾರಂಭಿಸಿದರು. ಎನ್.ಗಾಯಿತ್ರಿಯವರು ಹೇಳುವಂತೆ ಗೀತಾರವರು ಆರಂಭದಲ್ಲಿ "ಜನಪ್ರಿಯ ಮಾದರಿಯ ಶಿಷ್ಟ ಭಾಷೆಯಲ್ಲಿಯೇ ಕೃತಿಗಳನ್ನು ರಚಿಸುತ್ತಾ ಇದ್ದರು. ಒಮ್ಮೆ ಚಂದ್ರಶೇಖರ ಕಂಬಾರರು ಬರೆದ ಸಿಂಗಾರವ್ವ ಮತ್ತು ಅರಮನೆ ಕೃತಿ ಓದಿದ ಅನಂತರ ಅದನ್ನು ಬಹುವಾಗಿ ಮೆಚ್ಚಿಕೊಂಡರು. ಈ ಕೃತಿಯ ಭಾಷೆಯನ್ನು ಓದಿದ ಮೇಲೆ ಅವರಿಗೆ ಧೈರ್ಯ ಬಂದಿತು. ಅಲ್ಲಿಂದ ಅವರು ಹಿಂದೆ ನೋಡಲೇ ಇಲ್ಲ. ಅನಂತರ ಅವರು ತಮ್ಮದೇ ಆಡುಭಾಷೆಯಲ್ಲಿ (ಜವಾರಿ ಭಾಷೆ) ಕೃತಿ ರಚನೆಗೆ ತೊಡಗಿದರು"[೧೭] ಎಂದಿದ್ದಾರೆ.

ಗೀತಾ ನಾಗಭೂಷಣ ಅವರು ಚಂದ್ರಶೇಖರ ಕಂಬಾರರ ಶೈಲಿಗೆ ಬೆರಗಾಗಿದ್ದಾರೆ. ಬಹುಶಃ ರೋಗಿ ಬಯಸಿದ್ದು ಹಾಲು ಅನ್ನ, ಡಾಕ್ಟರ್ ಹೇಳಿದ್ದು ಹಾಲು ಅನ್ನ ಎನ್ನುವ ಹಾಗೆ ಇವರು ತಮ್ಮ ಜನಾಂಗದ ಸಂಸ್ಕೃತಿಯನ್ನು ಕಟ್ಟಿಕೊಡಲು ಆಡುಭಾಷೆಯೇ ಸೂಕ್ತ ಎಂದು ನಿರ್ಧರಿಸಿದ್ದಾರೆ. ಮತ್ತೊಂದೆಡೆ ಎನ್.ಗಾಯತ್ರಿ ಅವರು ಹೇಳಿದಂತೆಯೇ ಎಮ್.ಎಸ್.ಪಾಟೀಲ ಅವರೂ ಸಹ ಹೇಳಿದ್ದಾರೆ. "ಶಿಷ್ಟ ಸಾಹಿತ್ಯದಲ್ಲಿ ಬರೆಯುವ ತಾಕತ್ತು ಅವರಿಗಿದ್ದರೂ ಯಾಕೋ ಆ ವಿಧಾನ ಅವರಿಗೆ ಹಿಡಿಸದೇ ಹೋಯಿತು. ಅದೇ ಸಂದರ್ಭದಲ್ಲಿ ಚಂದ್ರಶೇಖರ ಕಂಬಾರರ ಸಿಂಗಾರವ್ವ ಮತ್ತು ಅರಮನೆ ಅವರ ಮೇಲೆ ದಟ್ಟ ಪ್ರಭಾವವನ್ನು ಬೀರಿತು. ಅಲ್ಲಿಯ ಭಾಷೆ. ವಿನ್ಯಾಸ ಅವರಿಗೆ ಹಿಡಿಸಿದವು. ಈ ಹಿನ್ನೆಲೆಯಲ್ಲಿ ಕಾರಂತರ ಬೆಟ್ಟದ ಜೀವ ಹಾಗೂ ಮರಳಿ ಮಣ್ಣಿಗೆ ಶುದ್ಧ ಪ್ರಾದೇಶಿಕ ಸೋಗಡನ್ನು ಅಳವಡಿಸಿಕೊಂಡು ಬಂದವುಗಳಾಗಿವೆ."[೧೮]

ಗೀತಾ ನಾಗಭೂಷಣ ಅವರ ತಮ್ಮ ಸಂವೇದನೆಗಳನ್ನು ಬರಹಕ್ಕಿಳಿಸಲು ತಾವು ಆಯ್ಕೆ ಮಾಡಿಕೊಂಡ ಭಾಷೆ ಹಳ್ಳಿಯ ಭಾಷೆ, ಅದೊಂದು ಜವಾರಿ ಭಾಷೆ ಎಂಬುದು ಈ ಮೇಲಿನ ಎಲ್ಲಾ ವಿದ್ವಾಂಸರಿಂದ ತಿಳಿದು ಬಂದ ವಿಷಯವಾಗಿದೆ. ಪ್ರಾದೇಶಿಕತೆ ಎನ್ನುವುದು ಹಳ್ಳಿಸೊಗಡಿನ ಅಥವಾ ದೇಸಿಯತೆಯ ಕುರಿತಾದ ಒಂದು ಹೊಸ ದೃಷ್ಠಿಕೋನ. ದೇಸಿ ಎನ್ನುವುದು ಭಾಷೆಯ ಶೈಲಿಯೇನಲ್ಲ. ಸಾಹಿತ್ಯದ ಪ್ರಾದೇಶಿಕ ಸತ್ವವನ್ನು ಬಿಂಬಿಸುವಂತದ್ದು. ಸಾಹಿತ್ಯಿಕ, ಸಾಂಸ್ಕೃತಿಕ ಛಾಪನ್ನು ಗುಣದ ರೀತಿಯಲ್ಲಿ ಒಪ್ಪಿಕೊಳ್ಳುವ ಒಂದು ಧೋರಣೆ. ಈ ಹಿನ್ನಲೆಯಲ್ಲಿ ಗೀತಾ ನಾಗಭೂಷಣರ ಕತೆಗಳಲ್ಲಿ ವ್ಯಕ್ತವಾಗುವ ಭೌಗೋಳಿಕ ಆ ಕಲಬುರ್ಗಿ ಪ್ರದೇಶದ ಜನಪದ ಪರಿಸರವೇ ಆಗಿರುತ್ತದೆ.

ಗೀತಾ ನಾಗಭೂಷಣರವರು ಬದುಕು ನುಂಗುವ ಮಂದಿ ಎಂಬ ಕಥೆಯಿಂದ ಪ್ರಾರಂಭಿಸಿ ಸುಮಾರು ನಾಲ್ಕರಿಂದ ಐದು ದಶಕಗಳಲ್ಲಿ ಅತಿಕ್ರಮಣದವರೆಗೆ ೫೦ ಕಥೆಗಳನ್ನು ಬರೆದಿದ್ದಾರೆ. ಈ ಎಲ್ಲಾ ಕತೆಗಳನ್ನು ಅಧ್ಯಯಸಿದಾಗ ಲೇಖಕರು ನಮಗೆ ವಿಭಿನ್ನವಾಗಿ ಕಾಣುತ್ತಾರೆ. ಬೇರೊಂದು ಲೋಕವನ್ನು ತೋರಿಸುತ್ತಾರೆ. ವಿಭಿನ್ನ ನೆಲೆಯಲ್ಲಿ ನಿಲ್ಲುತ್ತಾರೆ. ಅವರ ಬರಹದಲ್ಲಿ ಕಂಡುಬರುವಂತಹ ಪ್ರಾದೇಶಿಕತೆಯು ಸಹ ಮಹತ್ವದಿಂದ ಕೂಡಿದೆ. ಅವರು ಆಯ್ಕೆ ಮಾಡಿಕೊಂಡ ಜವಾರಿ ಭಾಷೆಯ ಶೈಲಿ ಅವರ ಕಥೆಗಳಿಗೆ ಕಾದಂಬರಿಗಳಿಗೆ ಶಕ್ತಿಯನ್ನು ತಂದು ಕೊಟ್ಟಿದೆ.

ಸ್ವಾತಂತ್ರ್ಯ ಪೂರ್ವದಲ್ಲೇ ರಾಷ್ಟ್ರಕವಿ ಕುವೆಂಪು ಅವರು ಮಲೆನಾಡಿನ ಆಡುಭಾಷೆಯನ್ನು ತಮ್ಮ ಬರವಣಿಗೆಯಲ್ಲಿ ಯಥೇಚ್ಚವಾಗಿ ಬಳಸಿಕೊಂಡಿದ್ದೆನ್ನುವ ಕುತೂಹಲಕರ ಸಂಗತಿ ಅವರ ರಚನೆಗಳಿಂದ ತಿಳಿದುಬರುತ್ತದೆ. ಕುವೆಂಪು ಅವರ ಯಾರೂ ಅರಿಯದ ವೀರ ಕಥೆಯಲ್ಲಿ ಎಂಥಾ ಸೊಗಸಾದ ಆಡುನುಡಿಗಳನ್ನು ಬಳಸಿಕೊಂಡಿದ್ದಾರೆ ಎನ್ನುವುದಕ್ಕೆ ಉದಾಹರಣೆಗೆ ಸುಬ್ಬಣ್ಣಗೌಡರು ಲಿಂಗನನ್ನು ಕುರಿತು ಮೇಲ್ಮಳೆ ಬಹಳ ಜೋರಾಗಿದೆಯಂತೆ, ಶೃಂಗೇರಿ ಆ ಕಡೆಯಂತೂ ಒಂದು ನಿಮಿಷ ಬಿಡದೇ ಹೊಡೆಯುತ್ತಿದೆಯಂತೆ ಎಂದು ಹೇಳುತ್ತಾರೆ. ಇದೇ ಕಥೆಯಲ್ಲಿ ಲಿಂಗ ಹೇಳ್ತಾನೆ... ಹೌದ್ರಯ್ಯ ..... ಎಲ್ಲಾ ಕಟ್ಟಿದ್ದೇನೆ. ತುಂಗೆದನ ಪುಟ್ಟಗುಡ್ಡ ಯಲ್ಡು ಮಾತ್ರ ಕೊಟ್ಟಿಗೆಗೆ ಬರಲೇ ಇಲ್ಲ ಎಂದು ಲೇಖಕರು ಒಟ್ಟಾರೆ ಬರಹಗಾರರು ನಿರಂತರ ಶೋಧಕರೆಂದು ನಾವು ಭಾವಿಸಬೇಕಾಗಿದೆ. ಶೋಧಕರಾದವರಿಗೆ ಮಾತ್ರ ಒಂದು ವಸ್ತು, ವಿಷಯ, ವ್ಯಕ್ತಿ, ಪ್ರಾಣಿ, ಪಕ್ಷಿ, ನೆಲ–ಜಲ ಮುಂತಾದವುಗಳು ವಿಶೇಷವಾಗಿ ಕಾಣುತ್ತದೆ. ಪ್ರೀತಿ ಔದಾರ್ಯವಿಲ್ಲದಿದ್ದರೆ, ತನ್ನ ಬಗ್ಗೆ ನಿಷ್ಠುರತೆ ಮತ್ತು ಇತರರ ಬಗ್ಗೆ ಸಹಾನುಭೂತಿ ಇಲ್ಲದಿದ್ದರೆ ಜೀವನದ ಬಾಗಿಲು ಲೇಖಕನಿಗೆ ತೆರೆಯುವುದೇ ಇಲ್ಲ ಅಂದಿರುವ ಲಂಕೇಶರ ಈ ಮಾತುಗಳು ಗೀತಾನಾಗಭೂಷಣರ ವಿಷಯದಲ್ಲಂತೂ ಅಕ್ಷರಶಃ ನಿಜವೆಂದೇ ಹೇಳಬೇಕು. ಏಕೆಂದರೆ ಶೋಷಿತರ ನೋವಿಗೆ ಸ್ಪಂದಿಸುವ, ನೊಂದವರಿಗೆ ನೆಮ್ಮದಿಯ ನುಡಿ, ಸಾಂತ್ವನ ಹೇಳುವ, ಅಬಲೆಯರಿಗೆ ಸಬಲತೆಯ ಕಿಚ್ಚು, ತುಂಬುವ ಅಸಹಾಯಕರಿಗೆ ಆಶ್ರಯದ ಅಭಯಹಸ್ತ ನೀಡುವ ಮತ್ತು ಬಲಾತ್ಕಾರ ದೌರ್ಜನ್ಯಗಳಿಗೆ ಬಲಿಯಾಗಿ, ಬಿಸಿಯುಸಿರಿಂದ ಬಿಕ್ಕುವವರ ಬೆನ್ನಿಗೆ ಗುದ್ದಿ ಬಡಿದೆಬ್ಬಿಸಿ, ಬಂಡೆದ್ದು ಬಲ ಪ್ರದರ್ಶಿಸುವ ಅಗಣಿತ ಪಾತ್ರಗಳ ಅನೇಕ ಕತೆಗಳಲ್ಲಿ ಹಸಿ–ಹಸಿಯಾಗಿ ಚಿತ್ರಿಸಿದ್ದಾರೆ. ಉದಾಹರಣೆಗಾಗಿ ಗೀತಾ ನಾಗಭೂಷಣ ಅವರು ಬರೆದಿರುವ ಐಬು ಕತೆಯಲ್ಲಿ ಬರುವ ಅಣ್ಣಾರಾಯ ಸಾವ್ಕಾರರ ಮಗನಾದ ಅಪ್ಪಾರಾಯ ಸಾವ್ಕಾರ ತನ್ನ ಹೆಂಡತಿಯಾದ ನೀಲಗಂಗಾಳನ್ನು ಮೆಚ್ಚಿಕೊಂಡೇ

ಮದುವೆಯಾಗಿದ್ದ. ಪ್ರಾದೇಶಿಕವಾಗಿ ನಾವು ಗುರುತಿಸುವಂತಹ ಪ್ರಮುಖ ಅಂಶಗಳಲ್ಲಿ ಉಡುಗೆ–ತೊಡುಗೆಯ ಬಹುಮುಖ್ಯವಾದದ್ದಾಗಿದೆ. ಐಬು ಕತೆಯಲ್ಲಿ ಬರುವ ನೀಲಗಂಗಾಳ ಉಡುಪಿನ ಬಗ್ಗೆ ಈ ರೀತಿ ಹೇಳುತ್ತಾರೆ. "ನೀಲಗಂಗಾ ಎದ್ದು ಮೈತೊಳ್ಕೊಂಡು ಕಬ್ಬಿಣದ ಸಂದೂಕದೊಳಗಿಂದ ಹಣ್ಣು ಮೆಣಸಿನಕಾಯಿ ಬಣ್ಣದ ಜರದ ಧಡಿಯ ಟೋಪಿನ ಸೆರಗಿನ ಇಲಕಲ್ ಸೀರೆ ಉಟ್ಟುಕೊಂಡಳು. ಎಣ್ಣೆ ಗೆಂಪಿನ ಕುಬಸಾ ತೊಟ್ಟಳು"[೧೯] ಎನ್ನುವ ಲೇಖಕರ ಈ ಮಾತುಗಳು ತಮ್ಮ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಧರಿಸುವಂತಹ ಉಡುಗೆ ತೊಡುಗೆಗಳ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಇವರ ಭಾಷೆಯು ಪಕ್ಕಾ ಹಳ್ಳಿ ಸೊಗಡಿನ ಜವಾರಿ ಭಾಷೆ ಎಂಬುದಕ್ಕೆ ಅವರ ಐಬು ಕತೆಯಲ್ಲಿ ಬರುವ ನೀಲಗಂಗಾ ಹಾಗೂ ಅವಳ ಮಗ ಬಾಬು ಮಾತನಾಡುವ ಕೆಲವು ಸಂಭಾಷಣೆಗಳನ್ನು ಗುರುತಿಸಬಹುದು. ಉದಾಹರಣೆಗೆ : ಬಾಬು ತನ್ನವ್ವ – ನೀಲಗಂಗವ್ವಗೆ ಹೇಳುವ ಮಾತು,

"ಯವ್ವ ಹಿಂಗ್ಯಾಕ ನಿಂತೇ ನಿನ್ನವ್ವನಾ .... ಗರಬಡದವರಂಗ ? ಇಲ್ಲೇ ನಳಾ ಅದಾ, ಮಾರಿ ತೊಳ್ಕೊಂಡು ಬಾ ದುಕಾನದಾಗ ಎದ್ದು ಡಬ್ಬಲರೋಟಿ ತಿಂದು ಪೆಶಲ್ ಚಾ ಕುಡ್ದು ಹೋಗ್ಯಾಮೆಂತ ನಡಿ ನಿಮ್ಮೂರಿಗಿ ಆ ಹಳ್ಳೀಗಿ ಮುಟ್ಟಲಕ್ಕ ಏಟೊತ್ತಾಗ್ತದೋ ಏನೋ ...... ಇಮಾನಿಲ್ಲೇನು ನಿಮ್ಮೂರಿಗಿ ಹೋಗಲಿಕ್ಕ? ಇಮಾನದಾಗ ಕುಂತು ಹ್ವಾದ್ರ ಪಾಂಚ್ ಮಿನಿಟದಾಗೇ ಮುಟ್ತೀವಲ್ಲ. ನಡಿ .... ಏನು ನಿಮ್ಮಪ್ಪನ ಗಂಟ ಇಟ್ಟಿದೆಂತ ಕರ್ಕೊಂಡು ಬಂದ್ಯೋ ಇಲ್ಲೀಗಿ, ನಿಮ್ಮ ಜಿಲ್ಲಾ ನೋಡಿದ್ರೇ ಖೇಂಡೆಗಾಂವ (ಹಳ್ಳಿ) ಇದ್ದಂಗದಾ .... ಇನ್ನ ನಿನ್ನ ಆ ಖೇಡೆಗಾಂವ ಹ್ಯಾಂಗದಾನೋ ಆ ಭಗಮಾನಗೇ ಗೊತ್ತು ಬಿಡು."[೨೦]

ಬಾಬು ತನ್ನ ತಾಯಿಯನ್ನು ಕರೆದುಕೊಂಡು ಹಳ್ಳಿಗೆ ಬರುವ ಸಂದರ್ಭದಲ್ಲಿ ಅವರಿಬ್ಬರ ನಡುವೆ ನಡೆದ ಸಂಭಾಷಣೆಯಾಗಿದೆ. ಇಲ್ಲಿ ಪಾಂಚ್ ಮತ್ತು ಮಿನಿಟ್ ಎಂಬ ಎರಡು ಅನ್ಯಭಾಷೆಯ ಶಬ್ಧಗಳನ್ನು ಹೊರತುಪಡಿಸಿ ಉಳಿದೆಲ್ಲಾ ಶಬ್ದಗಳು ಜನಪದ ಭಾಷೆ ದೇಸೀಯತೆಯ ಭಾಷೆಯಾಗಿಯೇ ಮೂಡಿಬಂದಿವೆ. ಬಾಬು ಮುಂಬೈಯೊಳಗ ಇದ್ದರೂ ಸಹ ಇಲ್ಲಿ ನೀಲಗಂಗಾ ಹಳ್ಳಿಯವಳಾಗಿದ್ದರಿಂದ ತನ್ನ ಮಗನಿಗೂ ಕೂಡ ತನ್ನ ಜವಾರಿ ಭಾಷೆಯನ್ನು ಕಲಿಸಿದ್ದಾಳೆ.

"ಕಟಗೊಂಡಂವಾ ನಡುಮಧ್ಯಾಣದಾಗೇ ಕೈ ಬಿಟ್ಟು ಕಣ್ಮುಚ್ಚಿದ, ಇದ್ದೊಂದು ಮಗನ ಮ್ಯಾಲ ತಪಾಗಳಿದಿನೇ ನಾನು ಶಿವಮ್ಮಕ್ಕಾ .... ಒಂದಕ್ಕ ಹತ್ತಾಗ್ತಾವ.... ನಮ್ಮ ಮನಿತನಾ

ಹೊಳಿ ದಂಡ್ಯಾಗಿನ ಕರಕಿ ಬೇರಿನ್ನಾಂಗ ಹಬ್ಬತಾದ. ಅಂತ ತಿಳ್ಕೊಂಡ್ರ ಹಿಂಗಾಯ್ತು ನೋಡು. ಮಗನ ಮದ್ವಿ ಆಗಿ ನಾಕೊರ್ಸಾದ್ರೂ ಮನ್ಯಾಗ ಒಂದು ಕೂಸಿನ ಅಳು ಕೇಳಲಿಲ್ಲ. ನನಗ ಹಿಂತಾಗೊಡ್ಡು ಸೊಸಿ ಗಂಟು ಬಿತ್ತು."[೨೧]

ಬಂಜೆಂಬ ಶಬುದ ಹೊರಲಾರೆ ಕತೆಯ ಈ ಸಂಭಾಷಣೆಯಲ್ಲಿ ಲೇಖಕಿ ಎಂತಹ ಅದ್ಭುತವಾದ ಉಪಮೆಗಳನ್ನು ಬಳಸಿದ್ದಾರೆನ್ನುವುದು ಗೋಚರವಾಗುತ್ತದೆ. ಗಂಡ ಪರ್ಯಾಯವಾಗಿ ಕಟಗೊಂಡವ, ಅಕಾಲಿಕ ಎನ್ನುವುದಕ್ಕೆ ನಡು ಮಧ್ಯಾಣ, ಭರವಸೆಗೆ ತಪಾಗಳದೀನಿ, ಮನೆ ತುಂಬ ಮಕ್ಕಳು ಅನುವುದಕ್ಕೆ ಕರಕಿ ಬೇರಿನ್ನಂಗ ಹಬ್ಬತಾದ. ಬಂಜೆ ಅನ್ನುವಲ್ಲಿ ಗೊಡ್ಡು ಸೊಸೆ ಹೀಗೆ ಈ ಎಲ್ಲ ಸಾಲುಗಳು ಒಬ್ಬ ಓದುಗ ಓದುವಾಗ ನಮ್ಮ ಹಳ್ಳಿಯ ಪಾತ್ರಗಳೇ ಜೀವ ತಳೆದು ಓದುಗರೆದುರು ಅನಾವರಣಗೊಂಡಂತೆ ಭಾಸವಾಗುತ್ತವೆ.

ಒಂದು ಕತೆಯ ವಸ್ತು, ಪರಿಸರ, ಭೌಗೋಳಿಕ, ಸಾಮಾಜಿಕ ಚಿತ್ರಣ, ಊಟ, ಉಡುಗೆ-ತೊಡುಗೆ ಎಲ್ಲವೂ ಒಂದು ನಿಖರವಾದ ಪ್ರದೇಶವನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಪಾತ್ರಗಳು ಸಹ ಅತ್ಯಂತ ಮಹತ್ವ ಪಡೆದುಕೊಳ್ಳುವುದರಿಂದ ಲೇಖಕಿಯು ಕತೆಗಳಲ್ಲಿ ಪ್ರಾದೇಶಿಕ ಭಾಷೆಯು ತಾನೇ ತಾನಾಗಿ ತೆರೆದುಕೊಳ್ಳುತ್ತವೆ. ಬರಹಗಾರರು ತಮ್ಮ ಕತೆ ಕಾದಂಬರಿಗಳಲ್ಲಿ ಬರುವ ಪಾತ್ರಗಳು ಮಿಂಚಲಿ, ಮೆರೆಯಲಿ ಎಂದು ಭಾವಿಸುವುದು ಬಹಳ ಅಪರೂಪದ ವಿಷಯವಾಗಿದೆ. ನೊಂದ ಶೋಷಿತ, ಅಸಹಾಯಕ ಪಾತ್ರಗಳು ಹಾಗೂ ಅವುಗಳ ದನಿ ತಾನೇ ಹೊರಡುತ್ತದೆ. ಇಲ್ಲಿ ಶೀಲ-ಅಶ್ಲೀಲ ಅನ್ನುವುದೇ ಗೌಣವಾಗಿರುತ್ತದೆ.

ಇವರ ಹಲವಾರು ಕತೆಗಳಲ್ಲಿ ಈ ರೀತಿಯ ದನಿಯು ಕಾಣಬಹುದು. ಉದಾಹರಣೆಗೆ 'ಐಬು' ಕತೆಯಲ್ಲಿ ಬರುವ ನೀಲಗಂಗಾ ತನ್ನತನದ ಬಗ್ಗೆ ತನಗೆ ತಿಳಿದಿದ್ದು ಸಾವ್ಕಾರ ಅಪ್ಪಾರಾಯನ ಕುರಿತು ತನ್ನ ಮನಸ್ಸಿನಲ್ಲಿಯೇ ತಾನು ಅಂದುಕೊಳ್ಳುತ್ತಾಳೆ. "ಒಣಗಿದ ಕಟಗಿಯಂತಾ ನಿನ್ ಮೈಯ್ಯಾಗೇನಾದಾನೋ ಸಾವ್ಕಾರಾ? ಹರೇದ ಹೆಣ್ಣೇಗಿ ಹಿಂಡಿ ಹಿಪ್ಪಿಮಾಡಿ ಅಕಿ ಸುಕದಲಿಂದ ನೆಳ್ಕೋಹಂಗ ಮಾಡಾ ತಾಕತ್ತಿಲ್ಲ ನಿನಗ ಹೆಣ್ಣಿನ ನೊಡಿ ಕಂಡರೇ ತತ್ತರ ಬತ್ತರಾಗಿ ನಡಕ್ಕೋತ ಪುಗ್ಗಾದಾಗಿಂದ ಗಾಳಿ ಹ್ವಾದಂಗ ಪುಸ್ಸಂತ ಕುಂದರ ಬೀಳ್ತೆಲ್ಲ. ನಿನ್ ಬಲ್ಲಿ ಐಬು ಇಟಕೊಂಡು ನನಗ ಗೊಡ್ಡಿಬಂಜಿ ಅಂತ ಸಾಬೀತು ಪಡಸಲಿಕ್ಕ ಹೊಂಟಿದೆಲ್ಲ. ನೀ ಯಾಕ್ ನನಗ ಮದಿ ಮಾಡ್ಕೊಂಡಿ ಹೇಳು?"[೨೨] ನೀಲಗಂಗಾನ ಬಾಯಿಲಿಂದ ನೇರವಾಗಿ ಪುರುಷನಾದವನಿಗೆ ಅನ್ನಿಸಲಿಕ್ಕೆ ಆಗದಿದ್ದರೂ ಸಹ ಪುರುಷನ ಪೌರುಷ ಗಂಡಸುತನದ ಕುರಿತು ಪ್ರಶ್ನಿಸುವ ಮನೋಭೂಮಿಕೆಯನ್ನು ಲೇಖಕಿಯು ಕಟ್ಟಿಕೊಟ್ಟಿದ್ದಾಳೆ.

ಇದೇ ಸಂದರ್ಭದಲ್ಲಿ ದೇವನೂರ ಮಹಾದೇವರ ಒಡಲಾಳದ ಒಂದು ಸಂಭಾಷಣೆಯನ್ನು ನಾನಿಲ್ಲಿ ಉಲ್ಲೇಖಿಸಲು ಇಷ್ಟಪಡುತ್ತೇನೆ. ಶಾಲೆಯಿಂದ ಮನೆಗೆ ಬಂದ ಮೊಮ್ಮಗಳು ಪುಟಗೌರಿ, ತಾನು ಬರೆದ ನವಿಲಿನ ಚಿತ್ರ ಹೇಗಿದೆ ನೋಡು ಎಂದು ತನ್ನ ಅಜ್ಜಿಯಲ್ಲಿ ಕೇಳಿಕೊಂಡಾಗ ಸಾಕವ್ವ ಹಿಂದು-ಮುಂದೂ ನೋಡದೇ ಅತ್ಯಂತ ಸಹಜವಾಗಿಯೇ ಮೊಮ್ಮಗಳನ್ನು ಕುರಿತು ಈ ರೀತಿ ಹೇಳುತ್ತಾಳೆ. "ತಗಾ ಆದ್ಯರೋ ಒಬ್ಬಳು, ಕುಟ್ಟೋ ಭತ್ತ ಬುಟ್ಟು ಹುಟ್ಟೋ ಶ್ಯಾಟ ನೋಡ್ಕಂತಿಡ್ಲಂತೆ"[೨೩] ಎನ್ನುತ್ತಾಳೆ. ಈ ರೀತಿಯ ಮಾತುಗಳು ಅಥವಾ ಸಂಭಾಷಣೆಗಳು ಮಡಿವಂತ ಸಂಪ್ರದಾಯಸ್ತ ಓದುಗ ಪರಿಸರದಲ್ಲಿ ಮುಜುಗರ ಉಂಟು ಮಾಡಬಹುದು. ಬೇಸರವೂ ತರಿಸಬಹುದು. ಲೇಖಕಿ ಅಥವಾ ಲೇಖಕ ಎಂತಹ ಪರಿಸರದಲ್ಲಿ ಯಾವ ವ್ಯಕ್ತಿ ಈ ಮಾತು ಹೇಳುತ್ತಿದ್ದಾನೆ/ಳೆ ಎನ್ನುವ ಪ್ರಸ್ತುತತೆ ಅರಿವಾದಾಗ ಎಲ್ಲವೂ ಸಹಜವೆನಿಸುತ್ತವೆ. ಮನೆಯಲ್ಲಿ ರಾಶಿ ಕೆಲಸವಿರುವಾಗ ಮೊಮ್ಮಗಳ ನವಿಲಿನ ಚಿತ್ರ ಸಾಕವ್ವನಿಗೆ ಮುಖ್ಯವೇ ಅಲ್ಲ. ಅಂತೆಯೇ ಸಹಜವಾಗಿ ಈ ಮಾತು ಹೇಳುತ್ತಾಳೆ. ಲೇಖಕಿಯು ಐಬು ಕತೆಯಲ್ಲಿಯೇ ಸಹ ನೀಲಗಂಗಾಳ ದೃಷ್ಟಿಯಲ್ಲಿ ನಾನು ನಿಜವಾದ ಹೆಣ್ಣು ಮಕ್ಕಳನ್ನು ಹೇರಲು ಯೋಗ್ಯಳಾದವಳು ಬಂಜೆಯಲ್ಲ, ಗೊಡ್ಡಿಯಲ್ಲ, ಎನ್ನುವ ಮೂಲಕ ತನ್ನ ಕಟ್ಟಿಕೊಂಡ ಗಂಡನೇ ಕೈಲಾಗದವನು ಎನ್ನುವ ತಾತ್ಸಾರ ನೀಲಗಂಗಾಳದು.

ಇವರು ಬರೆದಿರುವ 'ಇದು ಎಂಥಾ ಲೋಕವಯ್ಯ' ಕತೆಯಲ್ಲಿ ಹಗಲು ರಾತ್ರಿಗಳ ವೈಯ್ಯಾರಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇದೇ ಕತೆಯಲ್ಲಿ "ಬೆಳಗಿನ ಜಾವವನ್ನು ಕುರಿತು ಹೊತ್ತು ಮೂಡುವ ಸಮಯ ಹತ್ತಿರವಾಗುತ್ತಿತ್ತು. ಬೆಳ್ಳಿ ಚಿಕ್ಕಿ ಯಾವಾಗಲೋ ಮೂಡಿ ನಿಂತಿತ್ತು. ಊರ ಮುಂದಿನ ತಿಪ್ಪೆವ್ವಾಯಿಯ ಹುಂಜ ಕೂಗಿತು. ನಾಯಿ ಬೊಗಳಿತು ರಾತರಿಯೆಲ್ಲಾ ತನ್ನ ಮೈಗೆ ಮೆತ್ತಿದ ಕತ್ತಲೆಯ ಮನಿಯನ್ನು ತೊಳೆದುಕೊಳ್ಳುತ್ತ ಆಕಾಸ ಕೆಂಪಗಾಗುವುದರಲ್ಲಿತ್ತು."[೨೪] ಎಂದು ಹೇಳುತ್ತಾರೆ.

ಇವರು ತಮ್ಮ ಕತೆಗಳಲ್ಲಿ ಜೀವನವನ್ನು ಒಂದೊಂದು ಇಂಚು ಬಿಡದ ಹಾಗೆ ಚಿತ್ರಿಸಿದ್ದಾರೆ. ಬೆಳಗ್ಗೆ ಹೇಳುವುದರಿಂದ ಹಿಡಿದು ರಾತ್ರಿ ಮಲಗುವ ತನಕ ದಿನ ನಿತ್ಯದಲ್ಲಿ ನಡೆಯುವ ಸಂಗತಿಗಳನ್ನೆಲ್ಲಾ ಬರೆದಿದ್ದಾರೆ. ಮುಂಜಾನೆ ಕೋಳಿ ಕೂಗುವುದರಿಂದ ಹಾಸಿಗೆಯಿಂದ ಎದ್ದು ಮಾರಿ ಮೇಲೆ ನೀರೆರೆದುಕೊಂಡು ಮುಂಜಾನೆ ಮಾಡುವ ಕೆಲಸಗಳನ್ನು ಚಾಚು ಬಿಡದೇ ಬರೆದಿದ್ದಾರೆ. ಅವರು ಬಳಸುವ ಮಾತುಗಳು, ಹೈದರಾಬಾದ್ ಕರ್ನಾಟಕದ ಪ್ರಭಾವದಿಂದ ಹಿಂದಿ-ಉರ್ದುವಿನ ಭಾಷೆಯ ಬಳಕೆ ಜೊತೆಗೆ ನುಡಿಗಟ್ಟುಗಳು ನಮ್ಮವೇ ಅನ್ನುವಷ್ಟು ನಮ್ಮೆಲ್ಲರ ದೈನಂದಿನ ಕಲಾಪಗಳಲ್ಲಿ ಕಲೆತು, ಬೆರೆತು ಒಂದಾಗಿ

ಸೇರಿಕೊಂಡಿವೆ. ಉದಾಹರಣೆಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಕನ್ನಡದಲ್ಲಿ ಹಾಸುಹೊಕ್ಕಾಗಿರುವ ಉರ್ದು ಮತ್ತು ಮರಾಠಿ ಪದಗಳು. ಯಾರೋ ಟೈಂ ಎಷ್ಟು? ಅಂತ ಕೇಳಿದರೆ ಥಟ್ಟನೆ ಬರುವ ಉತ್ತರ ಸಾಡೇಗ್ಯಾರ ಎಂದು ಜೊತೆಗೆ ಹನ್ನೊಂದುವರೆ ಎಂದು ಹೇಳುವವರಿದ್ದಾರೆ. ತುಮ್ ಕಾಲಿ ಹೈ ತೋ ಕ್ಯಾ ಹುವಾ ದಿಲ್‌ವಾಲೀ ಹೋ... ಹೋರಗಿ ಫಸಲಿಗ... ಫಸಲೀ... ಅನ್ನುವ ಅವರ ಈ ಹಿಂದಿ, ಉರ್ದು, ಬೀದರ ಭಾಷೆ ಮಿಶ್ರಿತ ಸಂಭಾಷಣೆ ಅವರ ಮೂಡಿ ಬರ್‍ತಾನ ಚಂದ್ರಾಯ ನೋಡ... ಕತೆಯಲ್ಲಿ ಓದುತ್ತೇವೆ. ಇದೇ ಕತೆಯಲ್ಲಿ ಬರುವ ಕೆಲವು ಪದಗಳು ನಮ್ಮ ಕನ್ನಡದ ಪದಗಳೇ ಆಗಿವೆ. ಲಾವಾರಿಸ್, ಬಿಲ್‌ಕುಲ್, ಜಬರದಸ್ತಿ, ಭರೋಸಾ, ದವಾಖಾನಿ, ಲಫಂಗ್ ಮತ್ತು ಇಜ್ಜತ್ ಇತ್ಯಾದಿ ಉರ್ದು ಪದಗಳಿಗೆ ನಾವ್ಯಾರೂ ನಿಘಂಟು ತೆರೆದು ಅರ್ಥ ಹುಡುಕುವುದಿಲ್ಲ. ಅನಾಥ, ಖಂಡಿತ, ಒತ್ತಾಯ, ನಂಬಿಕೆ, ಆಸ್ಪತ್ರೆ, ಅಯೋಗ್ಯ ಮತ್ತು ಮರ್ಯಾದೆ ಅನ್ನುವ ಅಚ್ಚಕನ್ನಡದ ಪದಗಳಿಗೆ ಸಮಾನ ಶಬ್ಧಗಳಾಗಿ ನಾವೆಲ್ಲರೂ ಬಳಸುತ್ತಿದ್ದೇವೆ. ಹೀಗೆ ಅತ್ಯಂತ ಸಮರ್ಥ ರೀತಿಯ ಪ್ರಾದೇಶಿಕ ಭಾಷೆಯ ಬಳಕೆ ಇವರ ಬಹುತೇಕ ಕತೆಗಳಲ್ಲಿ ಓದಬಹುದಾಗಿದೆ.

ಇವರು ಕಲಬುರ್ಗಿ ಪ್ರಾಂತ್ಯದ ಹಳ್ಳಿಗಳನ್ನು ಹತ್ತಿರದಿಂದ ಕಂಡಿದ್ದಾರೆ. ಹಳ್ಳಿ ಮಂದಿಯ ಜೊತೆಗೆ ಪ್ರೀತಿಯಿಂದ ಬೆರೆತು ಬದುಕಿದ್ದಾರೆ. ಬದುಕು–ಬವಣೆ, ನೋವು–ನಲಿವು, ಆಚಾರ–ವಿಚಾರ, ಪ್ರೀತಿ–ಹಾದರ, ಶಾಂತಿ–ಕಲಹ ಎಲ್ಲವನ್ನು ತಮ್ಮ ಲೇಖಕನಿಗೆ ವಸ್ತುವಾಗಿಸಿದ್ದಾರೆ. ಇವರು ಪ್ರಾದೇಶಿಕ ಭಾಷೆಯಿಂದ ಸ್ವಲ್ಪವೂ ದೂರ ಹೋದವರಲ್ಲ. ಎಲ್ಲ ಪರಿಸರ, ಪಾತ್ರ, ಮಾತುಕತೆ, ಹಾಡು, ಘೋಷಣೆಗಳೆಲ್ಲವೂ ಪ್ರಾದೇಶಿಕ ಭಾಷೆಯಲ್ಲಿಯೇ ಇರುವುದು ನಾವು ನೋಡಬಹುದಾಗಿದೆ. ಐತಿಹಾಸ ಅಥವಾ ಚಾರಿತ್ರಿಕ ದಾಖಲೆಯಾಗುವ ಪ್ರದೇಶವನ್ನು ಪ್ರತಿನಿಧಿಸುವ ಸ್ಥಳಗಳನ್ನು ಯಥೇಚ್ಚವಾಗಿ ಲೇಖಕಿ ಅನೇಕ ಕತೆಗಳಲ್ಲಿ ಬಳಸಿಕೊಂಡಿದ್ದಾರೆ. ಉದಾಹರಣೆಗೆ ಬ್ರಹ್ಮಪರ, ಮಕ್ತಂಪೂರ, ಲಾಲಗೇರಿ, ಧನಗರ ಗಲ್ಲಿ, ಶಹಾಬಜಾರ್, ಗಂಜ್ ಮಿಲ್, ರೈಲ್ವೇ ಝೋಪಡಿಪಟ್ಟಿ, ಇತ್ಯಾದಿಗಳನ್ನು ಅವರ ಕತೆಗಳಲ್ಲಿ ತಂದಿದ್ದಾರೆ. ಲೇಖಕಿಯ ಕತೆಗಳನ್ನು ಓದುತ್ತಾ ಇರುವಾಗ ನಮಗೆ ಬಂಡಾಯದ ಧೋರಣೆಗಳು ಗೋಚರವಾಗುತ್ತವೆ. ಗೀತ ನಾಗಭೂಷಣ ಅವರು ರಚಿಸಿರುವ ಜ್ವಲಂತ ಕತೆಯಲ್ಲಿ ರಾಘವೇಂದ್ರ ಮನೆಯ ಆಳುಮಗ ಮಾಳಪ್ಪ ಸೀನಿಂಗಿ ಅಳುವುದನ್ನು ಕಂಡು ಈ ರೀತಿ ಹೇಳುತ್ತಾನೆ.

"ಯಾಕಳ್ತಿ ಸುಮ್ಕಿರೇ ಯಕ್ಕಾ.. ನೋಡಾನಂತ ಇವರೇನು ಕಿತ್ಗೊ ತಾರೋ ಕಿತ್ಕೊಳ್ಳಿ ನನ್ ಮಕ್ಳು... ಹೆಣಾ ಕೊಳ್ತು ನಾರ್‍ಲಕ್ಕತ್ತರ ಯಾರೂ ಈ ಕಾಡಿ ಮಾರಿ ಮಾಡ್ಲಿಲ್ಲ. ಪಂಚಾತಿ ಹಾಕ್ತಾರಂತ, ಹಾಕ್ಲಿ... ಇವರವ್ವನ ರಂಡಿ ಮಕ್ಳು...."[೨೫] ಎಂದು ಮಾಳಪ್ಪ ಅಬ್ಬರಿಸುತ್ತಾನೆ.

ಅಂದರೆ ಲೇಖಕಿಯ ಜೀವನದುದ್ದಕ್ಕೂ ಅನುಭವಿಸಿಕೊಂಡು ಬಂದಂತಹ ಮೇಲ್ವರ್ಗದವರ ಪ್ರಭುತ್ವವನ್ನು ತಿರಸ್ಕರಿಸುವ ಮನೋಭಾವವನ್ನು ಮಾಳಪ್ಪನ ಮಾತುಗಳಿಂದ ತಿಳಿದುಬರುತ್ತದೆ. ಇದೇ ಕತೆಯಲ್ಲಿ ಮುಂದುವರೆದಂತೆ ಕೊನೆಯ ಸನ್ನಿವೇಶಗಳನ್ನು ಗಮನಿಸಿದಾಗ ಇವರು ನಿಜವಾಗಲೂ ಬಂಡಾಯಗಾರ್ತಿಯೇ ಅಥವಾ ಅದಕ್ಕಿಂತಲೂ ಮುಂದವರೆದ ಮತ್ತೊಂದು ಖಡ್ಗಕ್ಕಿಂತಲೂ ಹರಿತವಾದ ಬಂಡಾಯದ ಧೋರಣೆಯೇ ಅನಿಸುತ್ತದೆ. ಸೀನಿಂಗಿ ರಾಘವೇಂದ್ರ ಕುಲಕರ್ಣಿಯು ಸಾವನ್ನಪ್ಪಿದಾಗ ಅವರ ಮನೆಯವರಿಗೆ, ಅವರ ಜಾತಿ-ಮತದವರಿಗೆಲ್ಲಾ ತಿಳಿಸಿದಾಗಲೂ ಯಾರೊಬ್ಬರೂ ಬಾರದ ಸಂದರ್ಭದಲ್ಲಿ ತಾನೇ ರಾಘವೇಂದ್ರ ಕುಲಕರ್ಣಿಯ ಹೆಣವನ್ನು ಸುಟ್ಟುಬರುತ್ತಾಳೆ. ಆಗ ರಾಘವೇಂದ್ರ ಕುಲಕರ್ಣಿಯವರ ಜಾತಿ-ಮತಧರ್ಮದವರು ಜೊತೆಗೆ ಊರಿನ ಮುಖಂಡರು ಪಂಚಾಯಿತಿ ಸೇರಿಸಿ, ಬ್ರಾಹ್ಮಣರ ಸ್ಮಶಾನದಲ್ಲಿ ರಾಘವೇಂದ್ರ ಕುಲಕರ್ಣಿಯನ್ನು ಸುಟ್ಟಿದ್ದರಿಂದ ಸಾವಿರದಾ ಒಂದು ರೂಪೈ (೧೦೧) ತಪ್ಪು ದಂಡ ಕೊಡ್ಬೇಕು. ಎಲ್ಲಾ ಬ್ರಾಹ್ಮಣರಿಗೆ ಲಾಡು ಊಟ ಹಾಕಿಸಿ ತಪ್ಪಿಗೆ ಕ್ಷಮೆ ಕೇಳಬೇಕು ಎಂದು ಪಂಚಾಯಿತಿಯಲ್ಲಿ ತೀರ್ಮಾನವಾಯಿತು.

ಆಗ ಸೀನಿಂಗಿ ಬಿರಬಿರನೆ ಸ್ಮಶಾನಕ್ಕೆ ಬಂದಳು. ಕುಲಕರ್ಣಿಯ ಹೆಣ ಸುಟ್ಟು ಬೂದಿಯಾಗಿ ತಣ್ಣಗಾಗಿತ್ತು. ಅವಳು ಸರ್‍ರನೆ ತನ್ನ ಸೆರಗು ಹರಿದಳು. ಎಲ್ಲ ಬೂದಿ, ಎಲುಬುಗಳ ರಾಶಿಯನ್ನು ಬಳಿದು ಅದರಲ್ಲಿ ಹಾಕಿ ಗಂಟು ಕಟ್ಟಿಕೊಂಡವಳೇ ರಾಯರ ಮಠದೆಡೆಗೆ ದಾಪುಗಾಲು ಹಾಕಿದಳು. ಅವಳ ಕಣ್ಣುಗಳಲ್ಲಿ ರಕ್ತ ನುಗ್ಗಿತ್ತು. ರೋಷದಿಂದ ಇಡೀ ಮೈ ನಡುಗುತ್ತಿತ್ತು. ಬಂದವಳೇ ದಡದಡನೆ ಮಠದ ಮೆಟ್ಟಿಲುಗಳನ್ನು ಹತ್ತಿ ಮೇಲೆ ಬಂದು ನಿಂತಳು. ಎಲ್ಲರೂ ಕುಳಿತಲ್ಲಿಯೇ ಕುಳಿತಿದ್ದರು. ಇವತ್ತಿಗೂ ಯಾವ ಶೂದ್ರರೂ ಆ ಮಠದ ಮೆಟ್ಟಿಲು ಹತ್ತಿರಲಿಲ್ಲ. ಸೀನಿಂಗಿ ಬಂದವಳೇ ಸ್ವಾಮಿಯೆಡೆಗೆ ತನ್ನ ಕೈಯಲ್ಲಿಯ ಗಂಟನ್ನು ಬೀಸಿ ಎಸೆದಳು. ಹಾಗೆ ಎಸೆದ ರಭಸಕ್ಕೆ ಗಂಟು ಬಿಚ್ಚಿಕೊಂಡು ಒಳಗಿದ್ದ ಕುಕ್ಕಣಿಯ ಎಲುಬು, ಬೂದಿಯೆಲ್ಲ ಸಾಮಿಯ ಮುಂದೆ, ಮೈ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿತು. ಇಲ್ಲಿ ಲೇಖಕಿಯು ಸೀನಿಂಗಿಯ ರೋಷವನ್ನಷ್ಟೇ ಪ್ರತಿನಿಧಿಸುತ್ತಿಲ್ಲ. ಇದರೊಂದಿಗೆ ಇಡೀ ದಲಿತ ಕುಲದ ಮೇಲಾದ ದೌರ್ಜನ್ಯ ಅವಮಾನಗಳ ಬಂಡಾಯದ ಕಹಳೆಯನ್ನು ಊದುತ್ತಿದ್ದಾಳೆ ಎಂದೆನಿಸುತ್ತದೆ. ಅವಮಾನಕ್ಕೆ ಒಳಗಾದ ಯಾವೊಬ್ಬ ವ್ಯಕ್ತಿಯು ಸಹ ಸಮಾಜದಲ್ಲಿನ ಒಳಿತನ್ನು ಅಸ್ವಾಧಿಸುವುದಿಲ್ಲ ಒಪ್ಪಿಗೊಳ್ಳುವುದಿಲ್ಲ. ಏಕೆಂದರೆ ಆ ಅಸ್ವಾಧನೆಯ ಜಳ ಅವಳ/ನ ಮೈ ತಾಕಿರುವುದಿಲ್ಲ. ಲೇಖಕರೇ ಸೃಷ್ಟಿಸಿರುವಂತ ಸೀನಿಂಗಿಯ ತರದಲ್ಲಿ ಆರ್ಭಟಿಸಬೇಕಾಗುತ್ತದೆ. ತನ್ನತನಕ್ಕೆ ಕುತ್ತು ಬಂದಾಗ ಯಾವೊಬ್ಬ ಹೆಣ್ಣು ಕೂಡ ಸುಧಾರಿಸಿ ಸಹಿಸಿಕೊಳ್ಳಲಾರಳು ಎಂಬುದನ್ನು ಸೀನಿಂಗಿಯ ಮಾತುಗಳನ್ನು ನೋಡಬಹುದು.

"ತಗೋರಿ ತಪ್ಪು ದಂಡಾ... ದಂಡಾ ಅಂತ ದಂಡಾ... ಅದುನಾ ಸಾವಿರ ರುಪೈ ನಿಮ್ ಹೆಣದ ಎಲುಬು, ಬೂದಿ ಎಲ್ಲಾ ಒಯ್ದು, ನಿಮ್ಮ ಎಲ್ಲೊರ್ದು ಹುಳಕ ನಾನ್ ಬಲ್ಲಿ ಅದಾರ್ಯೋ ಹಾರ್‍ರು ಗೋಳ್ರೋ... ಏನ್ಮಾಡ್ತೀರಿ ಮಾಡ್ರೀ.... ಕರಸ್ರಿ ಯಾಪೋಲಿಸಗ ಫೋಜುದಾರಗ, ಕರಸ್ತೀರಿ, ದಂಡಾ ಹಾಕ್ತಾರಂತ ದಂಡಾ.... ಹುಂ....."[೨೬]

ಲೇಖಕರ ವಿರೋಧಕ್ಕೆ ಬಂಡಾಯದ ಧೋರಣೆಗಳಿಗೆ ಇದಕ್ಕಿಂತ ಮಿಗಿಲಾದ ಉದಾಹರಣೆ ಮತ್ತೊಂದಿಲ್ಲ ಎನ್ನಬಹುದಾಗಿದೆ. ಪ್ರಾದೇಶಿಕವಾಗಿ ಆಯಾ ಭಾಗದ ಬ್ರಾಹ್ಮಣ ಜಾತಿಯವರ ಹಕ್ಕೊತ್ತಾಯಗಳು ಹೇಗಿದ್ದವು ಎಂಬುದನ್ನು ತಿಳಿಯುವುದು. ಜೊತೆಗೆ ಇವರ ರೋಷ ಎಂತಾದ್ದು ಎಂಬುದನ್ನು ಹಾಗೆಯೇ ಒಬ್ಬ ದಲಿತ ಹೆಣ್ಣು ಮೇಲ್ವರ್ಗದವರ ರಾಯರ ಕಟ್ಟೆಯನ್ನು ಪ್ರವೇಶಿಸುವುದು. ಇದೊಂದು ಕ್ರಾಂತಿಕಾರಕವಾದ ಸ್ತ್ರೀ ಸಂವೇದನೆಗಳ ಬದಲಾವಣೆಯಾಗಿವೆ. ಇವರು ವಾಸಿಸಿದಂತಹ ಕಡೆಯಲ್ಲಿ ಸವರ್ಣೀಯರು ಮತ್ತು ದಲಿತರ ಮಧ್ಯ ಸಂಘರ್ಷ, ಹೋರಾಟ ನಡೆಯುತ್ತದೆ. ಬಂಡಾಯ ಈ ಕತೆಯಲ್ಲೂ ಮೆರೆಯುತ್ತದೆ.

ಸೂಕ್ಷ್ಮ ಸಂವೇದನೆಯುಳ್ಳವರು ಹಿತ-ಮಿತ ಭಾಷಿಗಳು, ಶಾಂತಚಿತ್ತ ಕತೆಗಾರ್ತಿ ಆದ ಇವರು ತಮ್ಮ ಕಡೆಯ ಬೈಗಳನ್ನು ತಮ್ಮ ಅನೇಕ ಕತೆಗಳಲ್ಲಿ ಪ್ರಾದೇಶಿಕ ಭಾಷೆಯ ಹಳ್ಳಿ ಬೈಗಳನ್ನು ತಂದಿದ್ದಾರೆ. ಉದಾಹರಣೆಗೆ ಜ್ವಲಂತ ಕತೆಯಲ್ಲಿ ರಾಘವೇಂದ್ರ ಕುಲಕರ್ಣಿಯ ಆಳುಮಗನಾದ ಮಾಳಪ್ಪ ಬ್ರಾಹ್ಮಣರನ್ನು ಕುರಿತು ಈ ನನ್ ಮಕ್ಳು, ಇವರವ್ವನ ರಂಡಿ ಮಕ್ಳು ಎಂದು ಬೈಯುತ್ತಾನೆ. ನಂತರ ಈ ಲೋಕವೆಲ್ಲ ಘೋರ ಕತೆಯಲ್ಲಿ ಏಯ್ ಸುವ್ವರಕೆ ಬಚ್ಚೇ ..... ಕಲ್‌ಸೆ ತೇರಾ ಧಂದಾ ಇಧರ ಮೇರೆ ಪಾಸ್ ನಹೀ. ನಾಳಿಗಿ ಇಲ್ಲಿಗಿ ಬಂದಿ ಅಂದ್ರ ನಿನಗ ಒದ್ದು ಓಡಸ್ತೀನಿ, ತಿಳಿತೇನ್ಲೇ ಭಾಂಚೋದ್ ಈ ರೀತಿಯ ಬೈಗಳು ಜೊತೆಗೆ ಕಮರಿ ಹೋಗುವ ಕೆಳ ಜನರು ಕತೆಯಲ್ಲಿ, ಚೆಂಬಸಪ್ಪ ಗೌಡನ ಮಗಳಾದ ಗಂಗಾ ತೋಟದಲ್ಲಿ ಗೋರಿಗಳಿಗೆ ದ್ವೀಪ ಹಚ್ಚಲು ಹೋದಾಗ ಅದು ಅತ್ತದೇ ಆರಿ ಹೋದಾಗ ಅವಳು ಇದರ ಬಾಯಾಗ ಮಣ್ಣ ಹಾಕ್ಲೇ ಯವ್ವಾ ಎಂದು ಬೈಯುತ್ತಾಳೆ. ಇದೇ ಕತೆಯಲ್ಲಿ ಗೌಡನ ಮಗಳಾದ ಗಂಗೆಯನ್ನು ಶಿವು ಪ್ರೀತಿ ಮಾಡುತ್ತಾನೆ. ಈ ವಿಷಯ ತಿಳಿದ ಗೌಡ ಹಾದರಕುಟ್ಟಿದ ರಂಡಿ ಮಗಾ ಎಂದು ಶಿವುನನ್ನು ಬೈಯುತ್ತಾನೆ. ಈ ರೀತಿಯ ಬೈಗುಳೊಂದಿಗೆ ಇವರು ಹಳ್ಳಿಯ ಬಡವರ ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತಾರೆ.

"ಕತ್ತಲು ಸತ್ತು ಬೆಳಗಾಯಿತು, ಲವಂಗಿ ಎದ್ದವಳೆ ಮಾರಿ ತೊಳ್ಕೊಂಡು, ಮನೆ ಕಸ ಹೊಡೆದಳು. ರಾತ್ರಿ ಉಂಡು ಖಾಲಿ ಮಾಡಿದ್ದ ಸಿಲಾವಾರಿನ ನೆಗ್ಗಿದ ಎರಡು

ಬಗೋಣಿ, ಒಂದು ಗಿಂಡಿ ತುಟಿ ಹರಕು ತೆಂಬಿಗಿ ಮತ್ತು ಎರಡು ನೆಗ್ಗಿ ಸೊಟ್ಟಗಾಗಿದ್ದ ತಾಟುಗಳನ್ನು ಬೂದಿ ಹಚ್ಚಿ ತಿಕ್ಕಿ ತೊಳೆದಳು, ಆಟ್ಟೊತ್ತಿಗೆ ಎದ್ದು ಮಾರಿ ತೊಳ್ಕೊಂಡು ಬಂದ ಸಿದ್ದು, ಯವ್ವಾ ..... ಡಬಲ್ ರೊಟ್ಟಿ ತರ್ತೀನಂತ ಚಾ ಕಾಸಲಿಕ್ಕಿಡೆ"[೨೭] ಅಂತಂದು ಹೊರಗೋಡಿದನು. ಇಲ್ಲಿ ಒಬ್ಬ ಬಡವನ ನೈಜ ಚಿತ್ರಣ ಕಣ್ಣಿಗೆ ಕಟ್ಟುವಂತಿದೆ. ಲೇಖಕರು ಬಡವನ ಜೀವನ ಶೈಲಿಯನ್ನು ತುಂಬಾ ಹತ್ತಿರದಿಂದ ನೋಡಿದ್ದು ಸ್ವತಃ ಅನುಭವಿಸಿದ್ದರಿಂದ ಒಬ್ಬ ಬಡವನ ಬಗ್ಗೆ ನೈಜವಾದ ಚಿತ್ರಣವನ್ನು ಕಟ್ಟಿಕೊಡಲು ಸಾಧ್ಯವಾಗಿದೆ.

ಲೇಖಕಿಯ ಕೆಲವು ಕತೆಗಳನ್ನು ಪ್ರಾದೇಶಿಕ ಹಿನ್ನೆಲೆಯನ್ನು ಅಧ್ಯಯನಿಸಿದಾಗ ತಲಾ ತಲಾಂತರದಿಂದ ನಡೆಸಿಕೊಂಡು ಬಂದಂತಹ ಅಥವಾ ಮುಂದುವರೆಸಿಕೊಂಡು ಬಂದ ಕೆಲವು ಸಂಪ್ರದಾಯಗಳು ಆಚಾರ–ವಿಚಾರ ನಂಬಿಕೆಗಳನ್ನು ಮುರಿದು ಹಾಕುವಂತಹ ನಿರ್ಧಾರಗಳು ಕಂಡುಬರುತ್ತದೆ. ಇವರ 'ಕುಮರಿ ಹೋಗುವ ಕೆಳ ಜನರು' ಕತೆಯಲ್ಲಿ ಚೆಂಬಸಪ್ಪ ಗೌಡ ತನ್ನ ಮಗಳಾದ ಗಂಗಾಗೆ ತನ್ನ ಹೊಲದ ಹುತ್ತದಲ್ಲಿರುವ ಹಾವು ಕಚ್ಚಿದ್ದರಿಂದ ತೋಟದಲ್ಲಿರುವ ಹುತ್ತ ಕೇದರಿಸಿ ಹಾವನ್ನು ಹೊಡೆದು ಹಾಕಿಸಿದ. ಮುದ್ದಿನ ಮಗಳ ಜೀವಕ್ಕೆ ಕುತ್ತಾದ ನಾಗರ ಪಂಚಮಿ ಹಬ್ಬದ ಆಚರಣೆ ಆ ಮನೆಯಲ್ಲಿ ಅಂದಿನಿಂದ ನಿಂತೇ ಹೋಯಿತು. ಇಂದಿಗೂ ಆ ಗೋಡನ ಮನೆತನದಲ್ಲಿ ನಾಗರ ಪಂಚಮಿ ಹಬ್ಬದ ನಡತಿ ಇಲ್ಲ. ಇದು ಕೆಲವೊಬ್ಬರಿಗೆ ಸರಿ ಅನ್ನಿಸಬಹುದು ಅಥವಾ ನಾಗರಹಾವು ಕಡಿದಾಕ್ಷಣ ನಾಗರ ಪಂಚಮಿ ಹಬ್ಬವನ್ನೇ ಮಾಡದಿರುವುದು ಕೆಲವು ಸಂಪ್ರದಾಯಸ್ತ ಕುಟುಂಬದವರಿಗೆ ತಪ್ಪು ಎನಿಸಬಹುದು. ಅದು ಅವರವರ ವ್ಯಕ್ತಿತ್ವದ ಮೇಲೆ ನಿರ್ಧಾರವಾಗುತ್ತದೆ. ಮತ್ತೊಂದು ಮಹತ್ವದ ವಿಷಯವೆನೆಂದರೆ ಹಿಂದೆ ಇದ್ದಂತಹ ಕೆಲವು ಪ್ರೀತಿ – ಪ್ರೇಮದ ವಿಚಾರಗಳು ಬದಲಾವಣೆಯನ್ನು ಕಂಡುಕೊಂಡಿವೆ.

ಇವರ 'ಕಮರಿ ಹೋಗುವ ಕೆಳ ಜನರು' ಕತೆಯ ಒಂದು ಕಡೆ ಗೀತಾರವರೇ ಹೇಳುವಂತೆ ಮೇಲ್ವರ್ಗದ ಗಂಗಾಳು ಕುರುಬ ಜಾತಿಯ ಶಿವನನ್ನು ಪ್ರೀತಿಯ ಬಲೆಗೆಳೆದುಕೊಳ್ಳುತ್ತಾಳೆ. ಆದರೆ ಶಿವು ಅದನ್ನು ಮೊದಮೊದಲು ಸ್ವೀಕರಿಸುವುದಿಲ್ಲ. ನಾನು ಕೆಳಜಾತಿಯವನು ನಾಳೆ ನಿಮ್ಮನ್ಯಾಗ ಗೊತ್ತಾಯ್ತಂದ್ರ ನಮ್ಮಿಬ್ಬರಿಗಿ ಕೊಡ್ಲಿ ತಗೊಂಡು ಕಡ್ದು ಬಿಡ್ತಾರ ನಿಮ್ಮಣ್ಣದೇರು ಎಂದು ಶಿವು ಗಂಗೆಗೆ ಹೇಳುತ್ತಾನೆ. ಅದಕ್ಕೆ ಅವಳು ಹಂಗಾರ ನೀ ಅಂಜಿ ದೂರ ಸರೀತಿಯೇನೋ ಶಿವು? ನಮ್ ಪಿರೀತಕ್ಕಿಂತ ನಿನಗ ನಿನ್ ಜೀಂವದ ಅಂಜಕಿನೇ ಜಾಸ್ತಿ ಅದಾ ಅಲ್ಲ. ಎಂದು ಶಿವೂನ ಪ್ರಶ್ನಿಸಿದಾಗ ಅವ ಅವಳತ್ತಿರಾಗುತ್ತಾನೆ.

ಶತಮಾನಗಳಿಂದ ಗೌಡರು ಶೂದ್ರ ಹೆಣ್ಣುಗಳನ್ನು ಅನುಭವಿಸುತ್ತ ಬಂದವರು. ಈಗ ಮೇಲು ಜಾತಿಯ ಹೆಣ್ಣುಗಳೇ ಕೆಳಜಾತಿಯ ಗಂಡುಗಳನ್ನು ಬಯಸುತ್ತವೆ, ಪ್ರೇಮಿಸುತ್ತವೆ, ಕಾಮಿಸುತ್ತವೆ ಎಂಬುದಕ್ಕೆ ಗಂಗಾ ನಿದರ್ಶನವಾದಳು. ಪ್ರೇಮ ಜಾತಿ ಅಂತಸ್ತು ಸಂಪತ್ತುಗಳನ್ನು ನೋಡುತ್ತದೆಯೇ? ಗಂಗಾ ಮತ್ತು ಶಿವು ಅವರ ಕತೆಯನ್ನು ಕೇಳಿದಾಗ ಪ್ರೇಮಕ್ಕೆ ಕಣ್ಣಿಲ್ಲ, ರೂಪವಿಲ್ಲ. ಮನಸ್ಸಿನ ಪ್ರಾಮಾಣಿಕತೆಯೇ ಪ್ರೇಮದ ಮೊದಲ ಹೆಜ್ಜೆಯಾಗಿರುತ್ತದೆ. ಇವರ ಹಲವಾರು ಕತೆಗಳಲ್ಲಿ ಈ ರೀತಿಯ ಪ್ರೀತಿ–ಪ್ರೇಮ–ಪ್ರಣಯಗಳು ಮೂಡಿಬಂದಿವೆ.

ಲೇಖಕಿ ಬರೆದಿರುವ ಬದುಕು ನುಂಗುವ ಮಂದಿ, ಹುಲಿಗ್ಯಾ, ವಾಸ್ತವ, ಚಕ್ಕರ್ ಕಟ್ಟಾ ಚೌಕ, ಐಬು, ಕಮರಿ ಹೋಗುವ ಕೆಳಜನರು, ಜಲ್ವಂತ, ಗೌಡನ ಗೋರಿ, ಪುಂಡಿ ಪೂಜಾರಿಯಾದಾಗ ಮೊದಲಾದ ಅನೇಕ ಕತೆಗಳಲ್ಲಿ ಗುಲಬರ್ಗಾ ಜಿಲ್ಲೆಯ ಹೈದರಾಬಾದ್ ಕರ್ನಾಟಕದ ಪ್ರಾದೇಶಿಕ ಭಾಷೆಯ ಪ್ರಭಾವವಾಗಿರುವುದನ್ನು ಕಾಣಬಹುದಾಗಿದೆ.

ಇವರು ಬರೆದಿರುವ ಇಲ್ಲಿವರೆಗಿನ ಕತೆಗಳಲ್ಲಿ ಹಳ್ಳಿಗಳನ್ನು ನೋಡಿಕೊಳ್ಳುವಂತಹ ಗೌಡ, ಶಾನುಭೋಗ, ಕುಲಕರ್ಣಿ, ಸಾಹುಕಾರ, ಜಮೀನ್ದಾರಿ, ಮುಂತಾದವರ ಮುಂದಾಳತ್ವ ಮುಂದುವರೆದಿದೆ. ಆದರೆ ಗೀತಾ ನಾಗಭೂಷಣ ಅವರ ಮಿತಿಯೇನೆಂದರೆ ಇತ್ತೀಚಿನ ದಿನಮಾನಗಳಲ್ಲಿ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕವಾಗಿ ಆಗುವ ಸೂಕ್ಷ್ಮ ಬದಲಾವಣೆಗಳನ್ನು ಗುರುತಿಸದೇ ಇರುವುದು. ಜೊತೆಗೆ ಜಾಗತೀಕರಣ, ಖಾಸಗೀಕರಣ, ಕೈಗಾರೀಕರಣ, ಆಧುನೀಕರಣ, ತಂತ್ರಜ್ಞಾನ ಇವು ಅತ್ಯಂತ ವೇಗವಾಗಿ ಬೆಳೆಯುತ್ತಿರುವುದನ್ನು ಇವರು ಗುರುತಿಸದೇ ಇರುವುದು. ಇನ್ನು ಮುಂದೆಯಾದರೂ ಖಾಸಗಿ ಕಂಪನಿಗಳಲ್ಲಿ ನಮ್ಮವರಿಗೆ ಆಗುತ್ತಿರುವ ಅನ್ಯಾಯದ ಕುರಿತು ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿ ಕುರಿತು ಸ್ಥಳೀಯ, ರಾಜ್ಯ, ಕೇಂದ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿರುವ ಅನ್ಯಾಯ, ಅವಮಾನ, ಕೊಲೆ, ದರೋಡೆ, ಸುಲಿಗೆ, ಇನ್ನೂ ಮುಂತಾದವುಗಳ ಬಗ್ಗೆ ಗಮನಹರಿಸುತ್ತಾರೆಂಬ ನಂಬಿಕೆ ಇದೆ. ಇದರ ಜೊತೆಗೆ ಆಧುನಿಕ ವಿದ್ಯಾವಂತ ನಿರುದ್ಯೋಗ / ಉದ್ಯೋಗಸ್ಥ ಹೆಣ್ಣು ಮಕ್ಕಳ ನಡೆ–ನುಡಿ ಅವರ ಊಟ–ಉಡುಪು, ಶಿಕ್ಷಣ ಅವರ ಮೇಲಾಗುತ್ತಿರುವ ದೌರ್ಜನ್ಯಗಳು ದರ್ಪಗಳ ಕುರಿತು ಗಮನಿಸಬಹುದು.

ಇವರು ತಮ್ಮ ಪ್ರಾದೇಶಿಕ ಅನುಭವಗಳನ್ನು ಅತ್ಯಂತ ನಿರರ್ಗಳವಾಗಿ ತಮ್ಮ ಕತೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಇತ್ತೀಚಿಗೆ ಬದಲಾಗುತ್ತಿರುವ ಹಳ್ಳಿ ಸಂಸ್ಕೃತಿಯನ್ನು

ಕುರಿತು ವಿದ್ಯಾವಂತ ಗ್ರಾಮೀಣ ಹೆಣ್ಣು ಮಕ್ಕಳ ಸಮಸ್ಯೆಗಳ ಜೊತೆಗೆ ಅವರ ಸಾಧನೆಗಳನ್ನು ಕುರಿತು ಚರ್ಚಿಸುವುದು ಸೂಕ್ಷ್ಮವೆನಿಸುತ್ತದೆ. ಅದೇ ರೀತಿಯಲ್ಲಿ ಆಧುನೀಕರಣದ ಪ್ರಭಾವ, ತಂತ್ರಜ್ಞಾನದ ಪ್ರಭಾವದಿಂದ ಹಳ್ಳಿಗಳ ಮೇಲೆ ಯಾವ ರೀತಿಯ ಪರಿಣಾಮವಾಗುತ್ತದೆ. ಹಳ್ಳಿಯ ಜನತೆಯ ಬದುಕು ಯಾವ ರೀತಿಯಾಗಿದೆ ಎಂಬುದನ್ನು ತಿಳಿಸುವುದು. ಕಮ್ಮಾರ, ಕುಂಬಾರ, ಬಡಗಿ, ಹಗ್ಗ ಎಣೆಯುವವ, ಮೀನು ಹಿಡಿಯುವವ, ಬಟ್ಟೆ ತೊಳೆಯುವವ, ಪುಟ್ಟಿ ಎಣೆಯುವವ, ನೇಕಾರರು, ಮುಂತಾದವರ ಬದುಕಿನ ಬವಣೆಗಳನ್ನು ಗೀತಾ ನಾಗಭೂಷಣ ಅವರು ಗಮನಿಸಿ ಅದೇ ಹಳ್ಳಿ ಜವಾರಿ ಭಾಷೆಯಲ್ಲಿಯೇ ಕಟ್ಟಿಕೊಡುತ್ತಾರೆಂಬ ಆಶಾಭಾವನೆಯಿದೆ.

ಕೊನೆ ಟಿಪ್ಪಣಿಗಳು

೧. ಗಿರಡ್ಡಿ ಗೋವಿಂದರಾಜು, ಸಣ್ಣಕಥೆಯ ಹೊಸ ಒಲವುಗಳು, ಪು.ಸಂ.೩೩

೨. ವೀಣಾ ಶಾಂತೇಶ್ವರ, ನಡೆದದ್ದೇ ದಾರಿ, ಪು.ಸಂ.೧೧

೩. ಪೂರ್ವೋಕ್ತ. ಪು, ಸಂ. ೭೫

೪. ಪೂರ್ವೋಕ್ತ. ಪು, ಸಂ. ೧೭೧

೫. ಪೂರ್ವೋಕ್ತ. ಪು, ಸಂ. ೨೧೩

೬. ವೈದೇಹಿ, ಅಲೆಗಳಲ್ಲಿ ಅಂತರಂಗ, ಪು,ಸಂ.೩೮೯

೭. ಪುಷ್ಪ. ಹೆಚ್. ಎಲ್. ಸ್ತ್ರೀ ಎಂದರೆ ಅಷ್ಟೇ ಸಾಕೆ, ಪು,ಸಂ. ೬೭

೮. ವೈದೇಹಿ, ಅಲೆಗಳಲ್ಲಿ ಅಂತರಂಗ, ಪು,ಸಂ.೩೮೭

೯. ಪೂರ್ವೋಕ್ತ. ಪು,ಸಂ.೩೮೪

೧೦. ಪೂರ್ವೋಕ್ತ. ಪು,ಸಂ.೧೮೧

೧೧. ಪೂರ್ವೋಕ್ತ. ಪು,ಸಂ.೧೬

೧೨. ಪೂರ್ವೋಕ್ತ. ಪು,ಸಂ.೬೫೮

೧೩. ಮಹಾದೇವಯ್ಯ, ಪಿ. ಸಂ. ದಲಿತರು ಭಾಷೆ ಮತ್ತು ಸಮಾಜ, ಪು,ಸಂ.೨೮

೧೪. ಷರಿಫಾ. ಕೆ. ಬಸವರಾಜ ಸೂಳಿಭಾವಿ, ಸಂ. ಗೀತಾನಾಗಭೂಷಣ: ಮಹಿಳಾ ಮಾರ್ಗ ಪು,ಸಂ.೨೭

೧೫. ಪೂರ್ವೋಕ್ತ. ಪು,ಸಂ.೯೫

೧೬. ಪೂರ್ವೋಕ್ತ. ಪು,ಸಂ.೪೧

೧೭. ಪ್ರಧಾನ್ ಗುರುದತ್ತ, ಸಂ: ಗೀತಾ ನಾಗಭೂಷಣ, ಪು,ಸಂ.೧೬

೧೮. ಸರಸ್ವತಿ ಚಿಮ್ಮಲಗಿ, ಸಂ. ಗೀತಾ ನಾಗಭೂಷಣ ಕಲಬುರ್ಗಿಯ ಸ್ಪಂದನ, ಪು,ಸಂ. ೭೨

೧೯. ಗೀತಾ ನಾಗಭೂಷಣ ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, ಪು,ಸಂ. ೧೪೨

೨೦. ಪೂರ್ವೋಕ್ತ. ಪು,ಸಂ.೧೩೬

೨೧. ಪೂರ್ವೋಕ್ತ. ಪು,ಸಂ.೨೦೩

೨೨. ಪೂರ್ವೋಕ್ತ. ಪು,ಸಂ.೧೪೨

೨೩. ದೇವನೂರ ಮಹಾದೇವ, ಒಡಲಾಳ, ಪು, ಸಂ. ೧೭

೨೪. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, ಪು,ಸಂ.೬೦

೨೫. ಪೂರ್ವೋಕ್ತ. ಪು,ಸಂ.೫೧೪

೨೬. ಪೂರ್ವೋಕ್ತ. ಪು,ಸಂ.೫೧೫

೨೭. ಪೂರ್ವೋಕ್ತ. ಪು,ಸಂ.೬೦

ಅಧ್ಯಾಯ : ನಾಲ್ಕು

ವೀಣಾ ಶಾಂತೇಶ್ವರ ಕಥೆಗಳ : ಅಭಿವ್ಯಕ್ತಿ ಮತ್ತು ತಾತ್ವಿಕತೆ

ಅಧ್ಯಾಯ : ನಾಲ್ಕು

ವೀಣಾ ಶಾಂತೇಶ್ವರ ಅವರ ಕಥೆಗಳ ಅಭಿವ್ಯಕ್ತಿ ಮತ್ತು ತಾತ್ವಿಕತೆ

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕಿಯಾಗಿ ಪ್ರಾಂಶುಪಾಲರಾಗಿ ನಿವೃತ್ತರಾದ ವೀಣಾ ಶಾಂತೇಶ್ವರ ಅವರು ಮುಳ್ಳುಗಳು, ಕೊನೆಯ ದಾರಿ, ಕವಲು, ಬಿಡುಗಡೆ ಎಂಬ ಐದು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ವೀಣಾ ಶಾಂತೇಶ್ವರ ಅವರ ಮೊದಲ ಒಲವು ಸಣ್ಣಕತೆಯೇ. ಹೀಗಾಗಿ 'ಮಹಿಳೆಯರ ಸಣ್ಣಕತೆಗಳು', 'ಮಹಿಳಾ ಅಧ್ಯಯನ', 'ಸ್ವಾತಂತ್ರ್ಯೋತ್ತರ ಕಾಲದಲ್ಲಿ ಲೇಖಕಿಯರ ಸಣ್ಣಕತೆಗಳು' ಎಂಬ ಪ್ರಾತಿನಿಧಿಕ ಸಂಕಲನಗಳನ್ನು ಸಂಪಾದಿಸಿದ್ದಾರೆ. ಅವರ ಕತೆಗಳ ಕೇಂದ್ರವಸ್ತು ಮಹಿಳೆ ಮತ್ತು ಅವಳ ಶೋಷಣೆ. ಅವರ ಇತರೆ ಕೃತಿಗಳಲ್ಲಿ 'ಮಹಿಳಾ ಸಾಹಿತ್ಯದಲ್ಲಿ ವೈಚಾರಿಕತೆ', 'ಕನ್ನಡ ಸಣ್ಣಕತೆಗೆ ಮಹಿಳೆಯರ ಕೊಡುಗೆ', 'ಕನ್ನಡ ಲೇಖಕಿಯರ ಸಾಧನೆ–ಸಾಧ್ಯತೆಗಳು', 'ಮಹಿಳಾ ಜಾಗೃತಿ', 'ಮಹಿಳೆಯರು ಮತ್ತು ಪೋಲಿಸರು ಮತ್ತು ಮಹಿಳಾ ಸಾಮಾಜಿಕ ಕಾರ್ಯಕರ್ತೆಯರು' ಇವು ಸೇರುತ್ತವೆ. ಇವಲ್ಲದೆ ಅವರು 'ಅಭಿವ್ಯಕ್ತಿ' 'ಹೊಸಹೆಜ್ಜೆ' ಎಂಬ ಪುಸ್ತಕಗಳನ್ನು ಸಂಪಾದಿಸಿ, ಆಕಾಶವಾಣಿಗಾಗಿ ಹದಿನೈದು ನಾಟಕಗಳನ್ನು ಬರೆದಿದ್ದಾರೆ. 'ಅದೃಷ್ಟ' ಎಂಬ ಹೆಸರಿನಲ್ಲಿ ಅಮೆರಿಕನ್ ಇಂಗ್ಲೀಷ್ ಕತೆಗಳನ್ನು 'ನದಿದ್ವೀಪಗಳು' ಎಂಬ ಹೆಸರಿನಲ್ಲಿ ಆಜ್ಞೆಯರ ಹಿಂದಿ ಗ್ರಂಥವನ್ನು ಅನುವಾದಿಸಿದ್ದಾರೆ. ಜೊತೆಗೆ 'ಗಂಡಸರು' 'ಶೋಷಣೆ ಬಂಡಾಯ ಇತ್ಯಾದಿ....' ಎಂಬ ಎರಡು ಕಾದಂಬರಿಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ಸೇರಿಸಿದ್ದಾರೆ.

ವೀಣಾ ಶಾಂತೇಶ್ವರ ಅವರು ಆಧುನಿಕ ಸಂವೇದನೆಯ ಬಹುಮುಖ್ಯ ಕಥೆಗಾರ್ತಿ. ಮಹಿಳೆಯರ ಬರೆಹ ತನ್ನ ಆಯಾಮಗಳನ್ನು ಅಥವಾ ಮಗ್ಗುಲನ್ನು ಬದಲಿಸಿ ಹಳೆತನದಿಂದ ಮೈಕೊಡವಿಕೊಂಡು ಹೊಸ ಸಂವೇದನೆಗಳತ್ತ ಕಣ್ಣು ಚಾಚುತ್ತಿರುವ ಪ್ರಯತ್ನದಲ್ಲಿದ್ದಾಗ ವೀಣಾ ಶಾಂತೇಶ್ವರ ಅವರು ಕಾಣಿಸಿಕೊಳ್ಳುತ್ತಾರೆ. ಅರವತ್ತರ ದಶಕದ ಕೊನೆಯ

ಭಾಗದಲ್ಲಿ ನವ್ಯ ಚಳುವಳಿ ತನ್ನ ಉತ್ಕರ್ಷದ ಸಂದರ್ಭದಲ್ಲಿದ್ದಾಗ ವೀಣಾ ಶಾಂತೇಶ್ವರವರು 'ಮುಳ್ಳುಗಳು' ಕಥಾ ಸಂಕಲನದ ಮೂಲಕ ಸಾಹಿತ್ಯ ಜಗತ್ತನ್ನು ಪ್ರವೇಶಿಸಿದರು. ಆಧುನಿಕ ದೃಷ್ಟಿಕೋನ ಅವರಿಗೆ ಪ್ರಾಪ್ತವಾಗಿರುವುದು ಇಂಗ್ಲಿಷ್ ಸಾಹಿತ್ಯದ ಆಳವಾದ ಅಧ್ಯಯನದಿಂದ ಮತ್ತು ಅನುಭವ ಜನ್ಮಮೂಲದಿಂದಾಗಿ ಇದರ ಜೊತೆಗೆ ವೀಣಾ ಶಾಂತೇಶ್ವರ ಅವರಿಗಿದ್ದ ಪಾಶ್ಚಾತ್ಯ ಸಾಹಿತ್ಯದ ಹಿನ್ನಲೆ ಹೊಸ ಓದಿನ ಎಚ್ಚರ ಹಾಗೂ ಅವರ ಇಂಗ್ಲಿಷ್ ಉಪನ್ಯಾಸಕ ಹುದ್ದೆ, ಇವುಗಳೆಲ್ಲವು ಅವರಿಗೆ ಬೆಂಬಲವಾಗಿ ನಿಂತವು. ಇವರು ಬರೆದ ಆರಂಭದ ಕಥೆಗಳಲ್ಲಿ ನವ್ಯ ಲೇಖಕರ ಬಣ್ಣದ ಗಾಜಿನ ಮೂಲಕ ಹೆಣ್ಣನ್ನು ಚಿತ್ರಿಸುವ ಪ್ರಯತ್ನ ಮಾಡುತ್ತಾರೆ.

ವೀಣಾ ಶಾಂತೇಶ್ವರ ಅವರ ಚಿಂತನೆ ಸಮಕಾಲೀನ ಲೇಖಕಿಯರಿಗಿಂತ ಭಿನ್ನವಾಗಿರುವುದು ಗಮನೀಯ. ಅವರ ಲೇಖನಿ ಹರಿತವಾಗಿದ್ದು ಅವರ ಬಂಧ ಅವರು ಆ ಕಾಲದಲ್ಲಿ ಆಯ್ಕೆ ಮಾಡಿಕೊಂಡಿದ್ದ ಹೊಸ ವಸ್ತುವಿಗೆ ಸವಾಲನ್ನು ಒಡ್ಡುತ್ತಿದ್ದುದರಿಂದಲೇ ಅವರ ಅಭಿವ್ಯಕ್ತಿ ಹೊಸನೆಲೆಯನ್ನು ಕಂಡುಕೊಂಡಿತು. ವೀಣಾಶಾಂತೇಶ್ವರ ಅವರ ಕಥೆಗಳಲ್ಲಿ ಅವರ ಸಮಕಾಲೀನ ನವ್ಯ ಲೇಖಕರಾದ ಅನಂತಮೂರ್ತಿ, ಲಂಕೇಶ್, ಕೃಷ್ಣ ಅವರು ಹೆಣ್ಣನ್ನು ಅರ್ಥೈಸಿಕೊಳ್ಳುತ್ತಿದ್ದ ರೀತಿಗಿಂತ ವ್ಯತಿರಿಕ್ತವಾಗಿ ಚಿತ್ರಿಸಬೇಕೆಂಬ ಹಠ ಕೆಲಸ ಮಾಡುತ್ತಿರುವುದನ್ನು ತಳ್ಳಿ ಹಾಕುವಂತಿಲ್ಲ. ಕಥನಕಲೆ ಹೆಣ್ಣಿನ ಜನ್ಮಜಾತವಲ್ಲ ಕಥೆ ಬರೆಯದವರೂ ಕಥನಗಾರ್ತಿಯರೇ ಜನಪದ ಕಥೆಗಳನ್ನು ಹೇಳುವುದರಲ್ಲಿ ಸ್ತ್ರೀಯರೇ ಸಿದ್ಧಹಸ್ತರು.

ಹೆಣ್ಣಿನ ಅಭಿವ್ಯಕ್ತಿಯಾಗಿದ್ದ ಸಾಮಾಜಿಕ ಅಡೆತಡೆಗಳನ್ನು ಆಕೆಯನ್ನು ಕಥೆಗಾರ್ತಿಯಾಗಿ ರೂಪಿಸಿರಬಹುದೇನೋ ಅವಳು ಹೇಳದೇ ವ್ಯಕ್ತಪಡಿಸದೇ ನುಂಗಿಕೊಂಡ ಅನುಭವಗಳೆಲ್ಲ ಅವಳ ಮನಸ್ಸಿನಲ್ಲಿ ಹರಳುಗಟ್ಟಿರುತ್ತವೆ. ಆದ್ದರಿಂದ ಹೆಣ್ಣು ಹೃದಯವೂ ಕಥೆಯ ಆಗರವೆನ್ನಬಹುದು. ಇದೇ ರೀತಿ ಹೊಸಲು ದಾಟಿ ಹೊರಬಾರದ ಎಷ್ಟೋ ಹೆಣ್ಣುಮಕ್ಕಳ ಮಾತುಕತೆಯೆಲ್ಲಾ ಅಡುಗೆ ಮನೆಯೊಳಗೇ ನಡೆಯುವುದರಿಂದ ಅಡುಗೆಮನೆಯೂ ಕೂಡ ಕಥೆಗಳ ಕಣಜ. ಇದೇ ಕಾರಣಕ್ಕಿರಬೇಕು ನಮ್ಮ ಲೇಖಕಿಯರಿಗೆ ಕಥೆ ಹೆಣೆಯುವ ಕಲೆ ಸುಲಭವಾಗಿ ಸಿದ್ಧಿಸಿದೆ.

ವೀಣಾ ಶಾಂತೇಶ್ವರವರ ಕಥೆಗಳುದ್ದಕ್ಕೂ ಕಾಣಿಸಿಕೊಳ್ಳುವಂತಹ ಹೆಣ್ಣುಗಳು ಅಕ್ಷರಸ್ಥ ಸಮಾಜದವರು, ಉದ್ಯೋಗಸ್ಥರು ಮುಂಬಯಿಯಂತಹ ನವನಾಗರಿಕ ಜಗತ್ತಿನಲ್ಲಿ ಬದುಕುತ್ತಿರುವವರು. ಹೀಗಾಗಿ ಸಹಜವಾಗಿ ಇವರ ಆಲೋಚನೆ, ನಡವಳಿಕೆಯ ಮೇಲೆ

ಪಾಶ್ಚಾತ್ಯ ಪ್ರಭಾವ ಬಿದ್ದಿರುವಂತಹದ್ದೇ. ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಇವರು ಅರ್ಥ ಮಾಡಿಕೊಳ್ಳಬಲ್ಲರು. ತಮಗೆ ಸಂವಿಧಾನದಲ್ಲಿ ನೀಡಲ್ಪಟ್ಟಿರುವ ಹಕ್ಕುಗಳ ಬಗೆಗೆ ಯೋಚಿಸಬಲ್ಲರು. ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದಿದ್ದಾರೆ. ಸ್ವಾವಲಂಬಿಗಳಾಗಿದ್ದಾರೆ.

ಒಟ್ಟು ಸ್ತ್ರೀ ಪುರುಷ ಸಂಬಂಧಗಳಲ್ಲಿ ವೀಣಾ ಶಾಂತೇಶ್ವರ ಒಂದು ರೀತಿಯ ಅನುಮಾನಗಳನ್ನು ವ್ಯಕ್ತಪಡಿಸುತ್ತಾರೆ. ಅವರ ಪಾತ್ರಗಳ ವಿವಾಹದ ಬಗ್ಗೆ ಉದ್ದಕ್ಕೂ ಶಂಕೆಯನ್ನು ವ್ಯಕ್ತಪಡಿಸುತ್ತವೆ. ಆದರೆ ತಾಯ್ತನವನ್ನು ನಿರಾಕರಿಸುವುದಿಲ್ಲ. ಕೆಲವೊಮ್ಮೆ ತಾಯ್ತನಕ್ಕೆ ಹಪಹಪಿಸುವ ಕೆಲವು ಪಾತ್ರಗಳ ಮಾದರಿಗಳೂ ಕಾಣಸಿಗುತ್ತವೆ. ಅವರ ಹೆಣ್ಣುಗಳಿಗೆ ಏಳುವ ದ್ವಂದ್ವವೆಂದರೆ ಗಂಡನ ದಬ್ಬಾಳಿಕೆ, ದೌರ್ಜನ್ಯ, ಶೋಷಣೆಗಳಿಂದ ವಿಮೋಚನೆ ಪಡೆಯುತ್ತ ಜನ್ಮಸಿದ್ಧ ಹಕ್ಕಾದ ತಾಯ್ತನವನ್ನು ಆಯ್ಕೆ ಮಾಡಿಕೊಳ್ಳುವುದು ಸ್ಥಾಪಿಸಿಕೊಳ್ಳುವುದು ವೀಣಾ ಸಮಕಾಲೀನ ಸಾಹಿತ್ಯದ ಧೋರಣೆ, ವೈಚಾರಿಕ ಚಿಂತನೆಗಳಿಗೆ ತಮ್ಮನ್ನು ತಾವು ತೆರೆದುಕೊಂಡರೂ, ಹೆಣ್ಣಿನ ಸಂವೇದನೆ ಅನುಭವ ಪುರುಷ ಚಿಂತನೆಯ ಮನೆಯೊಳಗೆ ಮೂಡಿಸುವ ಮಹಿಳಾ ಸಂವೇದನೆ, ಅನುಭವ ವ್ಯಾಖ್ಯಾನಗಳಿಗೆ ವೀಣಾ ತೀವ್ರ ವಿರೋಧ ವ್ಯಕ್ತಪಡಿಸುತ್ತಾರೆ. ಈ ಎಲ್ಲವನ್ನು ಹೆಣ್ಣಿನ ಅನುಭವ ಸೂಕ್ಷ್ಮತೆಗಳ ಮಣೆಯೊಳಗೆ ಎರಕ ಹೊಯ್ಯುವ ಪ್ರಯತ್ನ ಮಾಡಿದರು. ವೀಣಾಶಾಂತೇಶ್ವರ ಅವರ ಸೋಲು ಗೆಲುವುಗಳೇನೇ ಇದ್ದರೂ ಸೃಜನಶೀಲತೆಯ ಹೊಸ ಪರಿಭಾಷೆಯನ್ನು ಆಧುನಿಕ ಮಹಿಳಾ ಚರಿತ್ರೆಯಲ್ಲಿ ಮೂಡಿಸುವ ಪ್ರಯತ್ನ ಇದೆ. ಅವರ ಬರವಣಿಗೆಯಲ್ಲಿ ಹೆಣ್ಣಿನ ಸಿದ್ಧಮಾದರಿಗಳನ್ನು ಮುರಿದು ಹೊಸ ಹೆಣ್ಣನ್ನು ಕಟ್ಟುವ ಸಾಹಸ, ಧೈರ್ಯಗಳಿವೆ. ವೀಣಾಶಾಂತೇಶ್ವರ ಅವರು ಕಟ್ಟಿಕೊಟ್ಟಂತಹ ಕಥಾಲೋಕದ ಹೊಸ ಪರಿಭಾಷೆ ಯಾವುದು? ಅವರು ಕಟ್ಟಿಕೊಟ್ಟ ಹೊಸ ಸಮಾಜದ ಹೆಣ್ಣು ಹೇಗೆ ನಿರೂಪಿತಗೊಂಡಿದ್ದಾಳೆ ಎನ್ನುವುದನ್ನು ಅವರ ಅಭಿವ್ಯಕ್ತಿಯಿಂದ ತಿಳಿಯುವ ಪ್ರಯತ್ನ ಈ ಅಧ್ಯಯದ್ದಾಗಿದೆ. ಇದರ ಜೊತೆಗೆ ವೀಣಾ ಶಾಂತೇಶ್ವರವರ ಸಾಂಸ್ಕೃತಿಕ ಲೋಕ ಹೇಗೆ ಅನಾವರಣಗೊಂಡಿದೆ. ಬರವಣಿಗೆಯಲ್ಲಿ ನಿರೂಪಣೆಯ ಶೈಲಿ ಎಂತಾದ್ದು ಎಂದು ಗುರುತಿಸುವುದು ಬಹುಮುಖ್ಯವಾದ ವಿಷಯವಾಗಿದೆ. ವೀಣಾ ಶಾಂತೇಶ್ವರ ಅವರ ನಿರೂಪಣಾ ಶೈಲಿ ಅಥವಾ ಅಭಿವ್ಯಕ್ತಿಯ ತಾತ್ವಿಕತೆಯನ್ನು ನಿರೂಪಿಸುವ ಮುನ್ನ ಸಂಕ್ಷಿಪ್ತವಾಗಿ ಅಭಿವ್ಯಕ್ತಿಯನ್ನು ಕುರಿತು ಚರ್ಚಿಸುವುದು ಸೂಕ್ತವೆನಿಸುತ್ತದೆ.

೪.೧ ಕಥೆಗಳ ವಸ್ತು

ಅ. ಮೊದಲನೆಯ ಹಂತ (ಪ್ರಾರಂಭದಿಂದ– ೧೯೬೮)

"ಸ್ತ್ರೀ ಶಿಕ್ಷಣದ ಬಗ್ಗೆ ಬಹಳ ಆದರ್ಶನಗಳನ್ನಿರಿಸಿಕೊಂಡಿದ್ದ ನನ್ನ ತಾಯಿ ನನಗೆ ಮೂರನೆಯ ವರ್ಷಕ್ಕೆ ಅಕ್ಷರಾಭ್ಯಾಸ ಮಾಡಿಸಿದರು, ನಾಲ್ಕನೆಯ ವರ್ಷದಿಂದಲೇ ನಾನು ಓದುವುದರೊಂದಿಗೆ ಕತೆಬರೆಯುವುದನ್ನು ಸುರುಮಾಡಿಕೊಂಡೆ"[೧] ಎಂದು 'ನಿರ್ದಿಗಂತ' ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಅವರು ಐದನೇ ವರ್ಷದವರಿರುವಾಗಲೇ ಸಂಪೂರ್ಣ ವಸ್ತುವನ್ನುಳ್ಳ ಮೊದಲ ಕತೆಯನ್ನು ಬರೆದಾಗ ಅವರಿಗೆ ಐದನೆಯ ವರ್ಷದಿಂದ ತುಂಬಿ ಆರನೆಯ ವರ್ಷಕ್ಕೆ ನಡೆಯುತ್ತಿತ್ತು ಎಂದಿದ್ದಾರೆ. 'ಸಾಹಸಿಯಾದ ರಾಜಕುಮಾರಿಯೊಬ್ಬಳು ರಾಕ್ಷಸನೊಬ್ಬನು ಬಂಧಿಯಾಗಿರಿಸಿದ್ದ ರಾಜಕುಮಾರನನ್ನು ಬಿಡಿಸಿಕೊಂಡು ಬಂದ ರೋಮ್ಯಾಂಟಿಕ್ ಕತೆಯಾಗಿತ್ತು'. ವೀಣಾ ಶಾಂತೇಶ್ವರ ಅವರು ತಮ್ಮ ಹೈಸ್ಕೂಲಿನ ಭಾಗದಲ್ಲಿ ತಮ್ಮ ಕತೆಗಳಿಗೆ ಇಳಿಸಿದ ಕಥಾವಸ್ತುಗಳು ವಿಶಿಷ್ಟ ಹಾಗೂ ಸ್ತ್ರೀಪರವಾದದ್ದು ಅನನ್ಯವಾದದ್ದು. ಹೆಣ್ಣಿನ ವಿಚಾರಗಳನ್ನು ಪ್ರಕಟಪಡಿಸಲು, ಅವಳ ಭಾವನೆಗಳಿಗೆ ಸ್ಪಂದಿಸಲು, ಹೆಣ್ಣಿಗೆ ಇಷ್ಟ ಬಂದ ಹಾಗೆ ಜೀವನವನ್ನು ರೂಪಿಸಿಕೊಳ್ಳಲು ಪೂರ್ಣ ಅಧಿಕಾರವಿರಬೇಕು. ಹೆಣ್ಣನ್ನು ಹತ್ತಿಕ್ಕಬಯಸುವ ಯಾವುದೇ ಅನಿಷ್ಟ ಸಾಮಾಜಿಕ ಸಂಪ್ರದಾಯಗಳನ್ನು ಧಿಕ್ಕರಿಸಲು ಆಕೆ ಹಿಂದೆಗೆಯಬಾರದು. ತಲ–ತಲಾಂತರದಿಂದ ಹೆಣ್ಣಿನ ಮೇಲೆ ದಬ್ಬಾಳಿಕೆ ನಡೆಸುತ್ತಾ ಬಂದಿರುವ ಗಂಡಸರನ್ನು ಹೆಣ್ಣು ಮುಲಾಜಿಲ್ಲದೆ ಬಗ್ಗುಬಡಿಯಬೇಕು. ಎಂಬಂತಹ ವಿಷಯ ವಸ್ತುಗಳ ಆಧಾರದಲ್ಲಿ ತಮ್ಮ ಕಥಾಹಂದರವನ್ನು ಅಥವಾ ಕಥಾಸಂವಿಧಾನವನ್ನು ನಿರೂಪಿಸಿದ್ದಾರೆ.

ಆ. ಎರಡನೆಯ ಹಂತ (೧೯೬೮–೧೯೭೨)

ಮುಂದಿನ ದಿನಗಳ ಕಾಲೇಜು ಹಂತದಲ್ಲಿ ವೀಣಾ ಶಾಂತೇಶ್ವರವರು ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಈ ಸಂದರ್ಭದಲ್ಲಿ ಅವರ ಸಾಹಿತ್ಯದ ಮೇಲೆ ಬರೆಹ, ತಂತ್ರ, ಸಂವಿಧಾನ ವಸ್ತು ನಿರೂಪಣಾ ಶೈಲಿ ಮುಂತಾದವುಗಳನ್ನು ವಿಭಿನ್ನವಾಗಿ ಅಳವಡಿಸಿಕೊಳ್ಳಲು ಗುರುಗಳಾದ ಶಾಂತಿನಾಥ ದೇಸಾಯಿಯವರು ಪ್ರಭಾವ ಬೀರಿದರು. "ಗುರುಗಳಾದ ದೇಸಾಯಿಯವರ 'ಮುಕ್ತಿ' ಕಾದಂಬರಿ ಈ ಘಟ್ಟದಲ್ಲಿ ನನ್ನ ಮೇಲೆ ವಿಶೇಷ ಪ್ರಭಾವ ಬೀರಿತ್ತು. ವಸ್ತುವಿನ ನಿರೂಪಣಾ ವಿಧಾನ, ತಂತ್ರ, ರಚನೆ, ಪಾತ್ರಸೃಷ್ಠಿ, ವಿಚಾರ ಪ್ರತಿಪಾದನೆ ಇದನ್ನೆಲ್ಲ ಹೀಗೆ ಕಲಾತ್ಮಕವಾಗಿ ದುಡಿಸಿಕೊಳ್ಳಬಹುದು ಎಂಬುದನ್ನು ನಾನು ಅವರಿಂದ ಕಲಿತೆ"[೨] ಎಂದು ವೀಣಾ ಶಾಂತೇಶ್ವರರು ಹೇಳಿಕೊಂಡಿದ್ದಾರೆ.

ಶಾಂತಿನಾಥ ದೇಸಾಯಿಯವರಿಂದ ಪ್ರೇರಿತರಾಗಿ ತಾವು ರಚಿಸಿದಂತಹ ಕಥೆಗಳ ವಸ್ತುಗಳ ತುಂಬಾ ವಿಶಿಷ್ಟವಾದವುಗಳು. ಸಾಮಾಜಿಕ ಅನಿಷ್ಟಗಳ ಪದ್ಧತಿಗಳ ಬಗ್ಗೆ ಪ್ರತಿಭಟನೆ, ಹೆಂಗಸಿನ ಮೇಲಾಗುವ ದೌರ್ಜನ್ಯದ ವಿವಿಧ ರೂಪಗಳು, ಅನ್ಯಾಯವನ್ನು ವಿರೋಧಿಸುವ ಕಥಾನಾಯಕಿಗೆ ಸೋಲು, ಅಪನಿಂದೆ, ಅಪವಮಾನಗಳು ಇನ್ನೂ ಮುಂತಾದ ವಸ್ತುಗಳನ್ನಿರಿಸಿಕೊಂಡು ಮೊದಲ ಎರಡು ಕಥಾಸಂಕಲನಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಕೊಡುಗೆ ನೀಡಿದ್ದಾರೆ. ಜೊತೆಗೆ ವಿಭಿನ್ನ ಕಥಾಹಂದರದ ಮೂಲಕ ಹೆಣ್ಣಿನ ಮನೋಪಠಲದ ಭಾವನೆಗಳನ್ನು ಉಣಬಡಿಸಿದ್ದಾರೆ.

ಇ. ಮೂರನೆಯ ಹಂತ (೧೯೭೨-೧೯೭೬)

ವೀಣಾ ಶಾಂತೇಶ್ವರರು ತಮ್ಮ ಬೌದ್ಧಿಕ ಪ್ರಾವೀಣ್ಯತೆಯನ್ನು ಬರೆಹದ ಶೈಲಿಯನ್ನು ಈ ಹಂತದಲ್ಲಿ ಮತ್ತೋಷ್ಟು ಶಕ್ತಿ/ಗಟ್ಟಿಯಾಗಿಸಿಕೊಂಡಿದ್ದಾರೆ. ಕನ್ನಡ, ಇಂಗ್ಲೀಷ್ ಹಾಗೂ ಇತರ ಭಾಷೆಗಳ ಎಲ್ಲಾ ಶ್ರೇಷ್ಠ ಲೇಖಕರ ಕೃತಿಗಳನ್ನು ಪರಿಚಯಿಸಿಕೊಂಡಿದ್ದಾರೆ. ಈ ಅವಧಿಯ ಕತೆಗಳ ನಾಯಕಿಯರು ಸ್ವಾವಲಂಬಿಗಳು, ಸಂಪ್ರದಾಯ ವಿರೋಧಿಗಳೂ ಆಗಿದ್ದು, ಹೆಣ್ಣುಮಕ್ಕಳು ಎದುರಿಸಬೇಕಾದ ಸಾಮಾಜಿಕ, ವೈಯಕ್ತಿಕ, ವೈಚಾರಿಕ ಹಾಗೂ ಮಾನಸಿಕ ಸಮಸ್ಯೆಗಳು ಈ ಹಂತದ ಕಥೆಗಳ ವಸ್ತುಗಳಾಗಿವೆ. ಈ ವಿಶಿಷ್ಟ ರೀತಿಯ ವಸ್ತುಗಳನ್ನಿಟ್ಟುಕೊಂಡು ಮತ್ತೆರಡು ಕಥಾಸಂಕಲನಗಳು ಹಾಗೂ ಎರಡು (ಗಂಡಸರು-ಶೋಷಣೆ ಬಂಡಾಯ ಇತ್ಯಾದಿ...) ಕಾದಂಬರಿಗಳನ್ನು ಕನ್ನಡ ಸಾಹಿತ್ಯಕ್ಕೆ ಸೇರಿಸುವುದರ ಮೂಲಕ ನವ್ಯಸಾಹಿತ್ಯ ಕಾಲಾವಧಿಯಲ್ಲಿ ತನ್ನದೇ ಹೊಸ ರೀತಿಯ ಕಥಾ ಸಂವಿಧಾನವನ್ನು ಸಾಹಿತ್ಯ ಲೋಕಕ್ಕೆ ಅನಾವರಣಗೊಳಿಸಿದ್ದಾರೆ.

ಈ. ನಾಲ್ಕನೆಯ ಹಂತ (೧೯೭೬-೧೯೯೪)

ಈ ಅವಧಿಯಲ್ಲಿ ವೀಣಾ ಶಾಂತೇಶ್ವರವರು ಬರೆದ ಕೆಲವು ಕಥೆಗಳಲ್ಲಿ ಮಹಿಳೆ ಧೈರ್ಯವಂತಗಳಾಗಲಿ, ಗಂಡನನ್ನು ಧಿಕ್ಕರಿಸುವವಳಾಗಿರಲಿ, ಸಂಪ್ರದಾಯ ವಿರೋಧಿಯಾಗಿರಲಿ, ಪ್ರಸ್ತುತ ಸಮಾಜ ಆಕೆಯನ್ನು ಸುಖನಿದ್ರೆ ಮಾಡಲು ಬಿಡುವುದಿಲ್ಲ, ಎಂಬ ನೋವಿನ ಅರಿವು ಇದೆ. ಏಕಾಏಕಿಯಾಗಿ ಗಂಡಸಿನ ಹಾಗೂ ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡುವ ಮಹಿಳೆಯ ದಾರಿ ಇನ್ನು ಸುಗಮವಾಗಿಲ್ಲ. ಪರಿಪೂರ್ಣ ಮಹಿಳಾಸ್ವಾತಂತ್ರ್ಯಕ್ಕೆ ಕಾಲವಿನ್ನೂ ಪಕ್ವವಾಗಿಲ್ಲ. ಆಕೆ ಹೊಂದಾಣಿಕೆ ಮಾಡಿಕೊಳ್ಳಬೇಕು, ತನ್ನ ತತ್ವಗಳಿಗಾಗಿ ನೋವು ಅನುಭವಿಸುತ್ತ ಬದುಕಿರಬೇಕು, ಹೋರಾಡಿ ಜಯಗಳಸಿಯೂ ಸುಖವಾಗಿರುವ ಭಾಗ್ಯ ತೀರಾ ಕಡಿಮೆ ಸಂಖ್ಯೆಯ ಮಹಿಳೆಯರಿಗಿದೆ.

ಉಳಿದವರನ್ನು ಈ ಸಮಾಜ ಒತ್ತಾಯದಿಂದ ಹೊಂದಾಣಿಕೆ ಮಾಡಲು ಹಚ್ಚುತ್ತದೆ. ಈ ಮಹಿಳೆಯರು ಅಂಜುಬುರುಕರಲ್ಲ. ಹೇಡಿಗಳಲ್ಲ, ಕಟುವಾಸ್ತವದ ಅರಿವುಳ್ಳವರು. ಇವರು ಸೋತವರಲ್ಲ ಪಕ್ವತೆ ಹೊಂದಿದವರು ಸುಖ ಜೀವನ ನಡೆಸಲು ಹೊರಟವರು. ಈ ರೀತಿಯ ವಸ್ತುಗಳನ್ನಾಧರಿಸಿ ವೀಣಾ ಶಾಂತೇಶ್ವರವರು ಮೂವತ್ತೆಂಟು ಕಥೆಗಳು ಜೊತೆಗೆ ಎರಡು ಕಾದಂಬರಿಗಳನ್ನು ರಚಿಸಿ ನವ್ಯಸಾಹಿತ್ಯ ಕಾಲಘಟ್ಟದಲ್ಲಿ ಮಿಂಚಿದಂತಹ ಹಲವಾರು ಕವಿಗಳು, ಕವಿಯತ್ರಿಯರಲ್ಲಿ ವಿಭಿನ್ನ ವಸ್ತು, ಶೈಲಿಯನ್ನು ಅಳವಡಿಸಿಕೊಂಡು ತನ್ನದೇ ಆದ ಹೊಸಸಾಹಿತ್ಯ ಲೋಕವನ್ನು ಕಟ್ಟಿಕೊಟ್ಟು ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

೪.೨ ಕಥೆಗಳ ತಂತ್ರ ಮತ್ತು ಸಂವಿಧಾನ

ನವ್ಯದ ಪ್ರಮುಖ ಬರೆಹಗಾರ್ತಿಯಾದ ವೀಣಾ ಶಾಂತೇಶ್ವರ ಕಥಾನಿರೂಪಣೆಯಲ್ಲಿ, ನಿರೂಪಣಾ ತಂತ್ರದಲ್ಲಿ ಬಳಸಿದ ಭಾಷೆಯ ವಿಚಾರದಲ್ಲಿ ನವೀನ ಛಾಪನ್ನೇ ಮೂಡಿಸಿದ್ದಾರೆ. ಸೂಕ್ಷ್ಮ ಪರಿಗ್ರಹಿಕೆಗಳು, ಆತ್ಮಪ್ರಜ್ಞೆ ಮತ್ತು ದಮನಿತಗೊಂಡ ಸ್ತ್ರೀಸಂಕುಲದ ಬಗ್ಗೆ ಕಕ್ಕುಲಾತಿ ಇಟ್ಟುಕೊಂಡ ಒಬ್ಬ ಸೃಜನಶೀಲ ಕಥೆಗಾರ್ತಿ ಇವರಾಗಿರುವರು. ಇವರ ಸಣ್ಣಕಥೆಗಳಲ್ಲಿ ಸ್ತ್ರೀಕೇಂದ್ರಿತ ಪಾತ್ರಗಳ ಚಿತ್ರಣವಿದೆ. ಆ ಸ್ತ್ರೀಪಾತ್ರಗಳ ಅಂತರಂಗ ಮತ್ತು ಅವರುಗಳ ಬಹಿರಂಗ ವ್ಯವಹಾರವನ್ನು ಚಿತ್ರಿಸುತ್ತಲೇ ಅವರಿಗೆ ಮುಖಾಮುಖಿಯಾಗಿ ನಿಲ್ಲುವ ಪುರುಷಪ್ರಧಾನ ಸಮಾಜದ ದರ್ಶನ ಮಾಡಿಸುತ್ತ ಸ್ತ್ರೀಮನ ಮತ್ತು ಆವರಣವನ್ನು ಅನಾವರಣಗೊಳಿಸುತ್ತಾರೆ. ಈ ಪಾತ್ರಗಳ ಅಂತರ್ಮುಖತೆ ಮತ್ತು ಬಹಿರಂಗ ಚಹರೆಗಳ ಮುಖೇನ ಈ ಸ್ತ್ರೀಪಾತ್ರಗಳ ಒಳತೋಟಿ, ಒಳನೋಟ ಮತ್ತು ದ್ವಂದ್ವಗಳನ್ನು ಮತ್ತು ದುಗುಡಗಳನ್ನು ಯತ್ತುವತ್ತಾಗಿ ಕಟ್ಟಿಕೊಡುತ್ತಾರೆ. ಇಲ್ಲಿನ ಹಲವು ಸ್ತ್ರೀಯರು ಸುಶಿಕ್ಷಿತರಾಗಿದ್ದು, ಉದ್ಯೋಗಸ್ಥ ಮಹಿಳೆಯರಾಗಿದ್ದರೂ ತಲ್ಲಣದಿಂದ ದೂರವಾಗಿಲ್ಲ. ಅವರ ಮನಸ್ಸುಗಳ ತಲ್ಲಣದ ಅನಾವರಣವನ್ನು ಸೂಕ್ಷ್ಮ ಭಾಷಾಭಿವ್ಯಕ್ತಿಯ ಮೂಲಕ ತಂದು ಕೊಡುವಲ್ಲಿ ವೀಣಾ ಶಾಂತೇಶ್ವರ ಯಶಸ್ವಿಯಾಗುತ್ತಾರೆ.

'ಮುಳ್ಳುಗಳು' ಕಥೆಯ 'ಶಾಂತಿ' ಇನ್ನು ಮದುವೆಯಾಗದ ಅವಿವಾಹಿತ ಮಹಿಳೆ. ಪುರುಷಪ್ರಧಾನ ಸಮಾಜದ ಬಗ್ಗೆ ಅಸಹನೆ ಬೆಳೆಸಿಕೊಂಡ ಶಾಂತಿ ಅಲ್ಲೆಲ್ಲಾ ಮುಳ್ಳುಗಳನ್ನೆ ಕಾಣುತ್ತಾಳೆ. ಕಥೆಯುದ್ಧಕ್ಕೂ ಪ್ರಸ್ತಾಪಗೊಳ್ಳುವ ಮುಳ್ಳುಗಳು ಒಂದು ಮೂರ್ತ ಪ್ರತಿಮೆಯಾಗಿ, ರೂಪಕವಾಗಿ ಮತ್ತು ಸಂಕೇತಾರ್ಥವನ್ನು ಪಡೆಯುತ್ತದೆ. ಹೆಣ್ಣಿನ ಲೈಂಗಿಕ ಇಷ್ಟಾರ್ಥಗಳು ಕೈಗೂಡದೇ ಇದ್ದಾಗ, ಮನೋಇಚ್ಚೆಗೆ ತಕ್ಕಂತೆ ಪುರುಷ ವರ್ತಿಸದೆ ಹೋದಾಗ,

ಅವಳ ನವಿರು ಭಾವನೆಗಳನ್ನು ಅರ್ಥೈಸಿಕೊಳ್ಳದೇ ಪುರುಷ ಹೊಸಕಿ ಹಾಕಿದಾಗ ಶಾಂತಿಯಂತಹ ಭಾವನೆಗಳು ಹೊರ ಹೊಮ್ಮುವಿಕೆ ಸಾಧ್ಯವಾಗಲಿಕ್ಕೆ ಸಾಕು. ಕಥೆಯ ನಿರೂಪಣೆಯಲ್ಲಿ ಸೂಕ್ತ ಭಾಷಾಬಳಕೆ ಸಾಂಕೇತಿಕತೆ, ರೂಪಕಗಳು, ಮತ್ತು ನವ್ಯಮಾರ್ಗದ ನಿರೂಪಣಾ ಶೈಲಿ ಕಥೆಯನ್ನು ಕಲಾತ್ಮಕವಾಗಿಸುತ್ತದೆ.

ಅತಿಥಿ ಕಥೆಯ ಲೀಲಾವತಿ ಮದುವೆಯಾಗದ ಉದ್ಯೋಗಸ್ಥ ಸ್ತ್ರೀ ಮದುವೆಯನ್ನು ನಿರಾಕರಿಸಿದ ಈ ಮಹಿಳೆಗೆ ಮದುವೆಯ ವಯಸ್ಸು ಮೀರಿದರೂ ಮನದಾಳದ ಗುಪ್ತಬಯಕೆ ಈಡೇರದ ಮಾನಸಿಕ ಇಬ್ಬಂದಿತನದಲ್ಲಿ ನರಳುವ ಮಹಿಳೆಯಾಗಿ ಕಾಣಿಸುತ್ತಾಳೆ. ಹಾಸ್ಟಲ್ ವಾರ್ಡನ್ ಆದ ಲೀಲಾವತಿ ತನ್ನ ವಿದ್ಯಾರ್ಥಿನಿಲಯದ ಹುಡುಗ-ಹುಡುಗಿಯರ ಸಲುಗೆ, ಸ್ವಚ್ಛಂದ ಓಡಾಟ, ಸರಸ ಸಲ್ಲಾಪವನ್ನು ಸಹಿಸಳು. ಕಣ್ಣೇದುರಿಗೆ ಕಂಡುಬರುವ ಇಂತದಕ್ಕೆಲ್ಲ ಕಠೋರವಾಗಿ ಪ್ರತಿಕ್ರಿಯಿಸುವವಳು. ಅವಳ ವರ್ತನೆಯನ್ನು ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ ಶೋಧಿಸಬೇಕಾದ ಅಗತ್ಯವಿದೆ. ವೀಣಾ ಶಾಂತೇಶ್ವರರ ಕಥೆಗಳಲ್ಲಿ ಹೆಣ್ಣು-ಗಂಡಿನ ಸಂಬಂಧ, ಆ ಸಂಬಂಧದೊಳಗೆ ಉಂಟಾಗುವ ಸಂಘರ್ಷದ ನಿರೂಪಣೆಯನ್ನು ನವ್ಯಮಾರ್ಗದಲ್ಲೆ, ಅಭಿವ್ಯಕ್ತಿಸುವ ವೀಣಾ ಶಾಂತೇಶ್ವರರ ಕಥನಕ್ರಮಕ್ಕೆ ಹೊಸ ರೂಪವನ್ನು, ಹೊಸ ಆಯಾಮವನ್ನು ಒದಗಿಸುತ್ತಾರೆ.

ನಿರೂಪಣಾ ತಂತ್ರ, ಅಭಿವ್ಯಕ್ತಿ ಶೈಲಿ, ವಸ್ತು ಮತ್ತು ಸಂವಿಧಾನ ರಚನೆ ದೃಷ್ಟಿಯಿಂದ 'ನೆನಪು... ಬರಿನೆನಪು' ಒಂದು ವಿಶಿಷ್ಟ ಕಥೆಯಾಗಿದೆ. ಗತದೊಂದಿಗೆ ಸದಾ ಸಂಪರ್ಕ ಸಂಬಂಧ ಇರಿಸಿಕೊಳ್ಳುವ ವೀಣಾ ಶಾಂತೇಶ್ವರರ ನೆನಪು ಕಥೆಯ 'ಪಾವನಾ' ವರ್ತಮಾನದ ಸಂಭ್ರಮಕ್ಕೆ ತಾನೇ ಅಪ್ಪಿಯಾಗುವವಳು. ಬಾಲ್ಯ ಸ್ನೇಹಿತನಾದ ತನಗಿಂತಲೂ ಹತ್ತು ವರ್ಷ ದೊಡ್ಡವನಾದ ಎಲಿಜನ್ ಪಿಂಟೋ ಬಗ್ಗೆ ಹಲವು ವರ್ಷಗಳ ತರುವಾಯ ಈರ್ವರ ಸಮಾಗಮದಲ್ಲಿ 'ಪಾವನಾ' ಹಳೆಯ ನೆನಪುಗಳ ಮಾಡಿಕೊಳ್ಳುತ್ತಾಳೆ. ಒಂದು ರೀತಿಯಲ್ಲಿ ನಾಸ್ಟಾಲಿಜಿಕ್ (ಹಂಬಲ) ಆಗುವುದು ಮತ್ತು ಪ್ರಬುದ್ಧಳಾದ 'ಪಾವನಾ' ಬಾಲ್ಯದ ಜೀವನದಲ್ಲಿ ಆತ್ಮೀಯನಾಗಿದ್ದ ಎಲಿಜನ್ ಪಿಂಟೋ ಬಗ್ಗೆ ಆಸ್ಥೆಯಿಂದ (ಪ್ರೀತಿ) ವರ್ತಮಾನದಲ್ಲಿ ಪ್ರತಿಕ್ರಿಯಿಸುವುದು ಕಥೆಯ ಜೀವಾಳ. ಭೂತಕಾಲ-ಮತ್ತು ಮರ್ತಮಾನಗಳ ತಾಕಲಾಟದ (ಸಂಘರ್ಷ)ಲ್ಲಿ ಕಳೆದುಹೋಗುವ 'ಪಾವನಾ'ಳ ಬದುಕಿನ ಪರಿಯನ್ನು ಕಟ್ಟಿಕೊಡುವ ಕಥಾ ಸಂವಿಧಾನವಿದೆ.

ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಅಂತರಾಳ, ಆಶೋತ್ತರ ಮತ್ತು ಸಹಜ ಮಾನವ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲ ಪುರುಷ ವರ್ಗವಿಲ್ಲ. ವಿದ್ಯಾವಂತಳಾದ, ಉದ್ಯೋಗಸ್ಥ ಮಹಿಳೆಯಾದ ಸರೋಜಾಳ ಪಾಲಿಗೆ ವಿವಾಹವೆಂಬುದು

ಅವಳ ಸ್ವಾತಂತ್ರ್ಯಕ್ಕೆ ಹಾಕಿದ ಸಂಕೋಲೆಯಾಗಿದೆ. ಹೆಣ್ಣು-ಗಂಡಿನ ಮಧ್ಯೆ ಇರಬೇಕಾದ ಪರಸ್ಪರ ಸೌಹಾರ್ದಯುತವಾದ ಕೊಡು-ಕೊಳ್ಳುವಿಕೆ ಸರೋಜಾಳ ವೈವಾಹಿಕ ಜೀವನದಲ್ಲಿ ಇಲ್ಲವಾಗಿದೆ. ಸ್ತ್ರೀಯ ಮಧುರ ಭಾವನೆಗಳು ಕಟ್ಟಿಕೊಂಡ ಕನಸುಗಳು ಕ್ರೌರ್ಯಯುತ ಗಂಡನ ಕಾರಣದಿಂದ ಕಮರಿ ಹೋಗಿವೆ. ಗಂಡನ ಸಾವು ಅವಳ ಮನೋವಲಯದಲ್ಲಿ ಯಾವ ಕಂಪನವನ್ನುಂಟು ಮಾಡಿಲ್ಲ. ನಿರ್ಲಿಪ್ತತೆಯಿಂದ ಗಂಡನ ಸಾವನ್ನು ಪರಿಗಣಿಸುವ ಸರೋಜಾ ಕಟ್ಟಕಡೆಯಲ್ಲಿ ಒಳಮನೆಯಲ್ಲಿ ಹಾಲನ್ನು ಕುಡಿಯುವುದರ ಮುಖಾಂತರ ನಿರುಮ್ಮಳ ಭಾವ ತಾಳುವುದು. ಸಂಕೋಲೆಯನ್ನು ಕಳಚಿ ಬಿಡುಗಡೆ ಹೊಂದಿದ ಧನ್ಯತಾಭಾವಕ್ಕೆ ಒಳಗಾಗುವುದು ಕಥಾತಿರುಳು. ಕಥಾನಿರೂಪಣೆಯಲ್ಲಿ ಕುಶಲಮತಿಯಾದ ವೀಣಾ ಶಾಂತೇಶ್ವರರ ಸರೋಜಾಳ ಪಾತ್ರದ ಮನದಾಳದ ಗತದ ನೆನಪಿನ ಸುರುಳಿಯಲ್ಲಿ ಗಂಡನಡಿಯಲ್ಲಿ ತನ್ನ ಗತಿ-ಸ್ಥಿತಿಯ ನೆನಪು ತಂದು ಕೊಳ್ಳುವಿಕೆಯಲ್ಲಿ ಎಫ್.ಬಿ.ಟಿ. ಅತ್ಯಂತ (ಹಿನ್ನೋಟ ತಂತ್ರ) ಪರಿಣಾಮಕಾರಿಯಾಗಿ ಬಳಸಿರುವುದು ಅತ್ಯಂತ ಗಮನಾರ್ಹವಾದುದು.

ಪುರಾಣದ ವಸ್ತುವನ್ನು ಬಳಸಿಕೊಂಡು ಹೆಣೆದ ಕಥೆಯೇ 'ನಿರಾಕರಣೆ'. ಶಕುಂತಲ ದುಶ್ಯಂತನಿಂದ ನಿರಾಕರಿಸಲ್ಪಟ್ಟ ಅಬಲೆಯಾಗಿ ಆರಂಭದಲ್ಲಿ ಕಾಣಿಸಿಕೊಂಡರೂ ಕಡೆಯ ಹಂತ್ಯದಲ್ಲಿ ಜೀವನಾನುಭವ ಮತ್ತು ಲೋಕಾನುಭವಗಳಿಂದ ಅರಳುಗಟ್ಟಿದ ಅವಳ ಬದುಕು ಹೊಸ ಆಲೋಚನೆ ಮತ್ತು ದಿಟ್ಟ ಮಾರ್ಗಕ್ಕೆಡೆ ಮಾಡಿಕೊಡುತ್ತದೆ. ಹೊಸ ಪ್ರತಿಭಟನಾ ಮಾರ್ಗವಿಡಿಯುವ ಸಬಲೆಯಾಗಿ ಅವಳ ಪಾತ್ರ ಚಿತ್ರಿಸುವ ಕಥೆಗಾರ್ತಿ ಶಕುಂತಲ ಪಾತ್ರವನ್ನು ಚಲನಶೀಲ ಪಾತ್ರವಾಗಿಸುತ್ತಾರೆ. ಬೌದ್ಧಿಕವಾಗಿ ಪಕ್ವವಾಗಿರುವ ಶಕುಂತಲೆ ಮರಳಿ ಬಂದಿರುವುದು ದುಶ್ಯಂತನ ಲೌಕಿಕ ಲೈಂಗಿಕ ತೃಷೆಗಳನ್ನು ತೀರಿಸುವುದಕ್ಕಲ್ಲ. ಅದನ್ನವಳು ಅಷ್ಟೇ ದಿಬ್ಬತನದಿಂದ ನಿರಾಕರಿಸುವವಳು. ಮಗನ ಭರತನ ಶ್ರೇಯೋಭಿವೃದ್ಧಿಗಾಗಿ ಅರಮನೆಗೆ ಹಿಂತಿರುಗಿರುವುದು ಎಂಬ ದಿಬ್ಬತನದ ಉತ್ತರ ನೀಡಬಲ್ಲ ಸ್ವಾಭಿಮಾನದ ಹೆಣ್ಣಾಗಿ ಪಾತ್ರವನ್ನು ಕಡೆದಿರುವುದು ವೀಣಾ ಶಾಂತೇಶ್ವರರರ ಸ್ತ್ರೀಪರವಾದದ ಉತ್ತಮ ಉದಾಹರಣೆಯಾಗುತ್ತದೆ.

ಸಾಮಾಜಿಕ ವ್ಯವಸ್ಥೆಯ ಭಾಗವಾದ ಸ್ಥರವಿನ್ಯಾಸವನ್ನು ನಿರೂಪಿಸುತ್ತಲೇ ಆ ಶ್ರೇಣೀಕೃತ ವ್ಯವಸ್ಥೆಯೊಳಗೆರುವ, ಜಾತಿಪದ್ಧತಿಯ ಅನಿಷ್ಟ ವ್ಯವಸ್ಥೆಯನ್ನು ವ್ಯಂಗ್ಯ ಧ್ವನಿಯಲ್ಲಿ ಅಭಿವ್ಯಕ್ತಿಸುವ ಕಥೆಯೇ 'ಹನುಮಾಪುರದಲ್ಲಿ ಹನುಮಜಯಂತಿ'. ಧರ್ಮಶೀಲ ಮತ್ತು ನೈತಿಕಶೀಲವಿಲ್ಲದ ಸವರ್ಣಿಯರು ಅಥವಾ ಉಚ್ಚಜಾತಿಯವರ ವಿಷಯಲಂಪಟತನ,

ನೈತಿಕ ಅಧಃಪತನ ಮತ್ತು ಭ್ರಷ್ಟಗೊಂಡ ಮನಸ್ಸುಗಳ ಅನಾವರಣ ಮಾಡಿಸುವಿಕೆಯಲ್ಲಿ ಕಥೆಗಾರ್ತಿಯ ನಾಟಕೀಯ ನಿರೂಪಣೆ ಕೊನೆಯಲ್ಲಿ ಕುತೂಹಲಕಾರಿ ತಿರುವು ಕಥೆಗೆ ವ್ಯಂಗ್ಯಾರ್ಥವನ್ನು ಸ್ಫುರಿಸುತ್ತದೆ. ಕಥೆಯನ್ನು ಧ್ವನಿಪೂರ್ಣ ಮಾಡುತ್ತದೆ.

ಮಾನವೀಯ ನೆಲೆಯಲ್ಲಿ 'ಮರ್ಯಾದೆ' ಕಥೆಯಲ್ಲಿ ಬರುವ ಕಮಲಾಳ ತಂದೆಯ ಪಾತ್ರದ ಚಿತ್ರಣ ಮಾಡುವ ಲೇಖಕಿ ಹೃದಯದ ಭಾಷೆಯನ್ನು ಅರ್ಥ ಮಾಡಿಕೊಂಡ ಸುಮಧುರ ಮನಸ್ಸುಗಳ ಸೌಹಾರ್ದತೆಯನ್ನು ನಿರೂಪಿಸುತ್ತಾ ಹೋಗುತ್ತಾರೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ರಚನೆಯಲ್ಲಿ ಹುಟ್ಟಿಕೊಂಡ ಕಟ್ಟುಪಾಡುಗಳು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ ಕಮಲಾಳ ಅಪ್ಪ ಕೆಳಸ್ಥರದ ವಿಧವೆಯಾದ ಕೆಲಸದಾಳು ಸರಸವ್ವಳನ್ನು ವಿವಾಹವಾಗುವ ತೀರ್ಮಾನ ಕೈಗೊಳ್ಳುತ್ತಾನೆ. ಅದು ಮನೆತನಕ್ಕೆ 'ಮರ್ಯಾದೆ' ತರುವಂತಾದ್ದಲ್ಲವೆಂದು ವಿರೋಧಿಸುವ ಮನೆಯ ಸದಸ್ಯರು ಮತ್ತು ತಂದೆಯ ದಿಟ್ಟ ತೀರ್ಮಾನವನ್ನು ಅನುಮೋದಿಸಿ ಬೆಂಬಲಿಸುವ ಮಗಳು ಕಮಲಾಳ ಪಾತ್ರದ ವರ್ಣನೆಯಿದೆ. ಸ್ತ್ರೀವಾದಿಯಾದರೂ ವೀಣಾ ಶಾಂತೇಶ್ವರ ನೊಂದ ಗಂಡಿನ ಪರ ಸಹಾನುಭೂತಿಯಿಂದ ನೋಡುವುದು, ಅಸಹಾಯಕ ಅಬಲೆ ಹೆಣ್ಣಿನ ಪರವಾಲುವುದು ಸೂಕ್ಷ್ಮ ಸಂಗತಿಗಳಾಗುತ್ತವೆ. ಕಥೆಯ ಸಾಂದ್ರತೆಯ ತಿರುಳಾಗುತ್ತವೆ. ನವ್ಯ ಮಾರ್ಗವನ್ನಿಡಿದು ಕಥೆ ಸೃಷ್ಟಿ ಮಾಡಿದ ವೀಣಾ ಶಾಂತೇಶ್ವರ ಅವರ ಕಥೆಗಳಲ್ಲಿ ವಾಸ್ತವಿಕತೆಯ ಚಿತ್ರಣವಿದೆ. ಕುಟುಂಬದ ಸಾಮಾಜಿಕ ಜೀವನದ ಪರಧಿಯಲ್ಲಿ ಶೋಷಿತಳಾಗುವ ಹೆಣ್ಣಿನ ಬಾಳಿನ ಚಿತ್ರಣವಿದೆ. ಸ್ತ್ರೀಸಂವೇದನೆಯನ್ನು ಒಳಗೊಂಡ ಕಥಾಸರಣಿಯಲ್ಲಿ ಹಾದು ಹೋಗುವ ಹಲವು ಭಾವಜೀವಿ ಸ್ತ್ರೀಯರಿದ್ದಾರೆ.

ಸ್ತ್ರೀಕೇಂದಿತ ಕಥೆಗಳಲ್ಲಿ ಹೆಣ್ಣು ಪುರುಷಜಗತ್ತನ್ನು ಪರಿಭಾವಿಸುವಿಕೆ, ಪಿತೃಪ್ರಧಾನ ಸಂಸ್ಕೃತಿಯ ಅಂತರಂಗದ ಪರಾಮರ್ಶೆ ಮತ್ತು ಅದನ್ನು ಎದುರಿಸುವಿಕೆಯ ಎದೆಗಾರಿಕೆಯ ಕುರಿತು ಅನನ್ಯ ಚಿತ್ರಣವಿದೆ. ಸೂಕ್ಷ್ಮ ಭಾಷಾಬಳಕೆಯ ಮುಖೇನ ಪಾತ್ರದ ಒಳನೋಟಗಳನ್ನು ಮತ್ತು ಬಹಿರಂಗದ ಎಲ್ಲಾ ಕಲಸುಮೇಲೋಗರವನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತಾರೆ. ಇದಕ್ಕಾಗಿ ಬಳಸುವ ರೂಪಕದ ಭಾಷೆ, ಸಾಂಕೇತಿಕತೆ, ಮೂರ್ತ, ಮತ್ತು ಅಮೂರ್ತ ಪತ್ರಿಮೆಗಳು ಒಟ್ಟಂದದಲ್ಲಿ ಕಥಾಶಿಲ್ಪವನ್ನು ಶಿಥಿಲಗೊಳಿಸುವುದಿಲ್ಲ. ಭಾವತೀವ್ರತೆಯಲ್ಲಿ ತೊಳಲಾಡುವ ಸ್ತ್ರೀಯರಲ್ಲದೆ ಹೊರ ಬಂದು ವಾಸ್ತವಿಕ ಬದುಕಿಗೆ ಮುಖಾಮುಖಿಯಾಗುವ ಮಹಿಳೆಯರು ಇವರ ಕಥೆಗಳ ಹಂದರದಲ್ಲಿ ಕಾಣಿಸಿಕೊಳ್ಳುವ ಸ್ತ್ರೀಪಾತ್ರಗಳಾಗಿವೆ. ಕಥಾ ನಿರೂಪಣೆಯಲ್ಲಿ ಲೇಖಕಿ ಬಳಸುವ ಹಿನ್ನೋಟ ತಂತ್ರ, ಸೀಮಿತ ಅವಧಿಯಲ್ಲಿ ಘಟಿಸುವ ಘಟನೆಗಳ ಪರಿಣಾಮಕಾರಿ ನಿರೂಪಣೆ, ಗಟ್ಟಿಯಾದ ಚಲನಶೀಲ ಪಾತ್ರಗಳ ಸೃಷ್ಟಿ,

ಪೂರಕವಾದ ಸಂದರ್ಭಗಳ ಸೃಷ್ಟಿ, ಇಂಥ ಕಡೆಯಲ್ಲಾ ನಿರೂಪಣೆಯ ಕಲಾತ್ಮಕತೆ ಮತ್ತು ಪ್ರಬುದ್ಧತೆ ಎದ್ದು ಕಾಣುತ್ತದೆ. ಲೇಖಕಿಯ ನಿರೂಪಣೆಯಲ್ಲಿ ಸಹಜತೆಯಿದೆ. ಅವರ ಪಾತ್ರಗಳ ಸೃಷ್ಟಿಯಲ್ಲಿ ಜೀವಂತಿಕೆಯಿದೆ. ವಾಸ್ತವಿಕೆ ಜಗತ್ತಿನ ವಾಸ್ತವ ಸತ್ಯಗಳ ಅನಾವರಣವಿದೆ. ಇದು ವೀಣಾ ಶಾಂತೇಶ್ವರ ಅವರ ಕಥಾಶಕ್ತಿ ಮತ್ತು ಶಿಲ್ಪ ಸೌಂದರ್ಯ.

೪.೩ ಕಥೆಗಳ ಅಭಿವ್ಯಕ್ತಿ ವಿಧಾನ

ಶೋಷಣೆ ಸ್ತ್ರೀ ಮೇಲಿನ ದೌರ್ಜನ್ಯ, ದಮನಿತ ಸಮುದಾಯದ ಅಂಚಿಗೆ ತಳ್ಳಲ್ಪಟ್ಟ ಸ್ತ್ರೀಯ ಎಲ್ಲಾ ನೋವುಗಳನ್ನು, ಅಂತರಂಗದಲ್ಲಿ ಮೂಡುವ ಆಶೋತ್ತರಗಳನ್ನು ಹಾಗಾಗ್ಗೆ ಅಂತರಂಗದಲ್ಲಿ ಮಿನುಗುವ ಆಶಯಗಳನ್ನು ಸಂಕೀರ್ಣತೆಯಲ್ಲಿ ಒದಗಿಸಿ ಓದುಗರಿಗೆ ವಿವೇಚನಾ ಶಕ್ತಿಗೆ ತೆರೆದಿಡುವ ಕ್ರಮ ಅನನ್ಯವಾದದ್ದು. ಹೇಳಬೇಕಾದ್ದನ್ನು ಅಥವಾ ಅಭಿವ್ಯಕ್ತಿಸಬೇಕಾದದ್ದನ್ನು ಘೋಷಣಾ ರೂಪದಲ್ಲಿ ಆವೇಷಭರಿತವಾಗಿ ಉಪನ್ಯಾಸ ನೀಡುವ ಧರ್ಮ ಭೋದಕಳೂ ಆಗದೆ ಭಾಷಣ (RHETORIC)ದ ರೀತಿಯಲ್ಲಿ ಕಥೆಯ ಲತೆಯನ್ನು ಸುಂದರವಾಗಿ ಹುಟ್ಟಿಸುವ ಕ್ರಮ ಪ್ರಶಂಸನಾರ್ಹ.

ವೀಣಾ ಶಾಂತೇಶ್ವರವರ ಸಣ್ಣಕತೆಗಳಲ್ಲಿ ನಾಟಕೀಯತೆಯಾಗಲಿ, ಅತೀ ಭಾವುಕತೆಯಾಗಲಿ ಕಾಣುವುದಿಲ್ಲ. ಕಥಾ ಓದುವಿಕೆಯಲ್ಲಿ ಓದುಗನಿಗೆ ಆಲೋಚಿಸುವಂತೆ ಮಾಡುವ ನಿಟ್ಟಿನಲ್ಲಿ ಕಥಾ ವಸ್ತುವನ್ನು ಅಡಕ ಮಾಡುವ ವೀಣಾ ಶಾಂತೇಶ್ವರವರ ಕಥಾನಿರೂಪಣೆ ಕನ್ನಡ ಸಾಹಿತ್ಯದ ಸಣ್ಣಕತೆಗಳ ನಿಟ್ಟಿನಲ್ಲಿ ಒಂದು ಮೈಲಿಗಲ್ಲು ಸರಿ. ಪುರುಷ ಯಜಮಾನ್ಯ ಕೇಂದ್ರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯ ಅಸ್ತಿತ್ವ ಮತ್ತು ಅಸ್ಮಿತೆಗೆ ಅವಕಾಶವೇ ಇಲ್ಲದಂತಾಗಿದೆ. ಈ ಪಿತೃಪ್ರಧಾನ ಸಮಾಜದಲ್ಲಿ ಸ್ತ್ರೀ ಅಸ್ತಿತ್ವವನ್ನು ಕಟ್ಟಿಕೊಳ್ಳುವ ತದನಂತರ ಅಸ್ಮಿತೆಯನ್ನು ಸ್ಥಾಪಿಸುವ ದುಸ್ಥರ ಕಾರ್ಯವನ್ನು ಕತೆಗಾರ್ತಿ ಮಾಡಬಯಸಿರುವುದು ವೇದ್ಯ.

ಇವರ ಸಣ್ಣಕತೆಗಳಲ್ಲಿ ಕಥಾನಾಯಕಿ ಅಥವ ಪ್ರಮುಖ ಸ್ತ್ರೀ ಪಾತ್ರಧಾರಿ ಸುಶಿಕ್ಷಿತಳಾಗಿದ್ದು ಉದ್ಯೋಗಸ್ಥಳೇ ಆಗಿರುತ್ತಾಳೆ. ಶಿಕ್ಷಣ ಪಡೆದ ಮಹಿಳೆಗೆ ಅರಿವಿನ ಅಭಾವವಿಲ್ಲದೆ ಎಲ್ಲವನ್ನು ಪ್ರಶ್ನಿಸುವ ಎದೆಗಾರಿಕೆ ಅಥವ ಪ್ರಶ್ನೆ ಸದಾ ಜೀವಂತವಾಗಿರುತ್ತದೆ. ಇಂತಹ ಅರಿವಿನ ಹೆಣ್ಣಾಗಿ ತನ್ನ ಕಾಲ ಮೇಲೆ ತಾನು ನಿಲ್ಲುವ ಸ್ವ ಸಾಮರ್ಥ್ಯವನ್ನು ಗಳಿಸಿಕೊಂಡ ಆರ್ಥಿಕವಾಗಿ ಸಬಲೀಕರಣಗೊಂಡ ಹೆಣ್ಣಾಗಿ ಸ್ತ್ರೀಪಾತ್ರವನ್ನು ಕಡೆದಿಡುತ್ತಾಳೆ. ವೀಣಾ ಶಾಂತೇಶ್ವರ ಕಥೆಗಳಲ್ಲಿ ಸಿದ್ಧಮಾದರಿಯ ಅಡಿಯಲ್ಲಿ ಬದುಕಬೇಕಾದ ಹಂಗಿಲ್ಲವೆಂತಲೂ ಭಾವಿಸುವ, ಹೆಣ್ಣಾಗಿ ಗಂಡಿಗೆ ಪ್ರತಿಸ್ಪರ್ಧಿಯಾಗಿ ಬದುಕುವ

ಸಾಮಾಜಿಕಳಾಗಬೇಕೆಂಬ ಅವಳ ಉತ್ಕಟತೆಯನ್ನು ಅಭಿವ್ಯಕ್ತಿಸಿರುವುದು ಸುಸ್ಪಷ್ಟ. ಸ್ಥಾಪಿತ ಪುರುಷಮೌಲ್ಯಗಳನ್ನು ದಿಟ್ಟತನದಿಂದ ಎದುರಿಸಬೇಕೆನ್ನುವ ಹೋರಾಟದ ಕೆಚ್ಚು ಮನನೀಯ. ಆಧುನಿಕ ಕಾಲದ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ವ್ಯಕ್ತಿಯ ಪೂರ್ಣ ವ್ಯಕ್ತಿತ್ವ ಅರಳಲು ಅತ್ಯಾವಶ್ಯಕವಾದ ಸಮಾನತೆ, ಸ್ವಾತಂತ್ರ್ಯ ಮತ್ತು ಬ್ರಾತೃತ್ವವನ್ನು ಕುರಿತು ಕತೆಗಾರ್ತಿ ಹೇಳಬಯಸಿರುವುದು ಆಕೆ ಮಹಿಳಾವಾದಿಯೆಂಬುದು ಹಾಗೆಯೇ ಸ್ತ್ರೀವಾದದ ಮುಂಚೂಣಿಯಲ್ಲಿ ನಿಲ್ಲುವುದು ಸುಸಂಗತ.

ಈ ಎಲ್ಲಾ ಅಂಶಗಳು ಸ್ತ್ರೀಗೆ ದೊರೆತರೆ ಸ್ವಾಭಿಮಾನದ ಹೆಣ್ಣಾಗಿ ಸಂಸ್ಕೃತಿಯ ರಕ್ಷಕಿಯಾಗಿ ಸಮಾಜದ ಕಣ್ಣಾಗಿ ಹೊರಹೊಮ್ಮಲು ಸಾಧ್ಯವಾಗುವ ವಿಶಿಷ್ಟಾಂಶಗಳೆಂಬುದನ್ನು ಕಥೆಗಾರ್ತಿ ಸೂಕ್ಷ್ಮವಾಗಿ ಸಹೃದಯ ಓದುಗರಿಗೆ ಪರಿಚಯಿಸುತ್ತಾಳೆ. ವೀಣಾ ಶಾಂತೇಶ್ವರವರ ಕಥಾನಾಯಕಿಯರ ಮನದಾಳದ ಹೋರಾಟಗಳು ತುಮುಲಗಳು, ತಲ್ಲಣಗಳು, ಸಂಘರ್ಷಗಳು, ಬಿಕ್ಕಟ್ಟುಗಳು, ಹಲವು ರೀತಿಯಲ್ಲಿ ಅಭಿವ್ಯಕ್ತವಾಗುತ್ತವೆ. ಒಂದೆಡೆ ಸಂಪ್ರದಾಯ ಮತ್ತೊಂದೆಡೆ ಸಂಪ್ರದಾಯಕ್ಕೆ ಶರಣಾಗದೆ ಆಧುನಿಕತೆಯ ಸ್ಪರ್ಶಕ್ಕೆ ಪಕ್ಕಾಗಿ 'ತನ್ನತನವನ್ನು' ಕಾಪಾಡಿಕೊಳ್ಳ ಬಯುಸುವ ಹೆಣ್ಣಿನ ದಿಟ್ಟತನ ಮತ್ತು ಅಸೀಮ ಮನೋಸ್ಥೈರ್ಯವನ್ನು ಅನಾವರಣಗೊಳಿಸುವ ಕ್ರಮ ಅನನ್ಯವಾದದ್ದು. ವೀಣಾ ಶಾಂತೇಶ್ವರ ಕತೆಗಳಲ್ಲಿ ಸೂಚ್ಯ ಮನೋವೈಜ್ಞಾನಿಕ ಸಂಗತಿಗಳಿವೆ. ಈ ಮನೋವಿಶ್ಲೇಷಣಾತ್ಮಕ ಸಂಗತಿಗಳು ಮತ್ತು ವೈಚಾರಿಕ ನಿಲುವುಗಳು ಕಥೆಗೆ ಸುಂದರ ಚೌಕಟ್ಟನ್ನು ಮತ್ತು ವಸ್ತುವಿನ ಹೊಳಪನ್ನು ಒದಗಿಸುವ ಅಂಶಗಳಾಗುತ್ತವೆ. ಲೈಂಗಿಕತೆ ಮತ್ತು ವಾಸ್ತವಿಕತೆಗಳೆರಡರ ಅಡಿಯಲ್ಲಿ ನರಳುವ, ನಲುಗುವ ಹೆಣ್ಣಾಗಿಯೂ ಕಾಣಿಸುತ್ತವೆ.

'ಅತಿಥಿ' ಕಥೆಯಲ್ಲಿ ವಿವಾಹದ ಹೆಣ್ಣಿನ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವ ಸರಪಳಿಯಂತೆ ಎಂಬ ಧೋರಣೆಯ ಹೆಣ್ಣು ವಿವಾಹವನ್ನೇ ತಿರಸ್ಕರಿಸುವ ತನ್ಮೂಲಕ ತನ್ನ ವ್ಯಕ್ತಿಸ್ವಾತಂತ್ರ್ಯಕ್ಕೆ ಭಂಗ ಬಾರದಂತೆ ಕಾಪಾಡಿಕೊಳ್ಳುವ ಅವಳ ಮಾನಸಿಕ ಸ್ಥಿತಿಯು ಮೆಚ್ಚುವಂತಹದ್ದು. ಪುರುಷ ಜಗತ್ತಿನ ಹುನ್ನಾರಗಳು, ಮಸಲತ್ತುಗಳು, ಮೋಸದಾಟಗಳು, ಕ್ರೌರ್ಯ ಹಿಂಸೆ ದಗಲ್‌ಬಾಜಿತನ ಗೋಮುಖವ್ಯಾಘ್ರತನ ಇವೆಲ್ಲದರ ವಿರುದ್ಧ ಬಂಡಾಯ ಸಾರುವ ದಿಟ್ಟಹೆಣ್ಣಾಗಿ ಚಿತ್ರಿಸಿರುವ ಹಲವು ಕತೆಗಳನ್ನು ಕಾಣಬಹುದು. ಅತಿಥಿ ಕತೆಯಲ್ಲಿ ಕಾಣಿಸಿಕೊಳ್ಳುವ ಲೀಲಾಬಾಯಿ ಉನ್ನತ ಶಿಕ್ಷಣ ಪಡೆದು ಹಾಸ್ಟಲ್ ವಾರ್ಡನ್ ಆಗಿಯೂ ಕಾರ್ಯ ನಿರ್ವಹಿಸುವವಳು. ಹಾಸ್ಟಲ್ ಸರಹದ್ದಿನಲ್ಲಿ ನಡೆಯುವ ಎಲ್ಲಾ ಕ್ರಿಯೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ ತನ್ನದೇ ಪ್ರತಿಕ್ರಿಯೆ ನೀಡುವ ಹೆಣ್ಣು ಅವಳು.

“ಹಾಸ್ಟಲ್‌ನಲ್ಲಿ ವಾಸಿಸುವ ಸರೋಜಿನಿಯ ಪ್ರೇಮ ಪ್ರಸಂಗದ ಸಂಗತಿ ನೆನೆಸಿಕೊಂಡಾಗೆಲ್ಲಾ ಅವಳಿಗೆ ಮನಸೆಲ್ಲೆಲ್ಲಾ ‘ಇರಿಸು-ಮುರಿಸು ಎದೆಯಲ್ಲೇನೊ ವಿಚಿತ್ರ ನೋವು ಉಂಟಾದ ಅನುಭವ ತನಗೆ....”[೩] ಪರಿಣಾಮ ಅವಳಿಗೆ ನಿದ್ರಾಭಂಗವಾಗಿ ಮನಸ್ಸು ಅಸ್ತವ್ಯಸ್ತವಾಗುತ್ತದೆ. ತೆಳ್ಳನೆಯ ಬಳುಕುವ ಹುಡುಗಿಯರು ಕಣ್ಮುಂದೆ ಹಾದುಹೋದಾಗ ಅವಳಿಗೆ ತನ್ನ ಮೈತೂಕದ ಹೆಚ್ಚಳದ ಅರಿವಾಗುತ್ತದೆ. ತನ್ನ ದೇಹವನ್ನು ಜಾಗರೂಕತೆಯಿಂದ ಜೋಪಾನ ಮಾಡಿಕೊಳ್ಳಬೇಕೆನ್ನುವ ಅವಳ ಕಾಳಜಿಯು ಇಲ್ಲಿ ವ್ಯಕ್ತವಾಗುತ್ತದೆ. ವಿವಾಹ ಹೆಣ್ಣಿನ ದೈಹಿಕ ಸೌಂದರ್ಯಕ್ಕೆ ಕುಂದು ತರುವ ಅಂಗವೆಂದು ಭಾವಿಸುವ ಲೀಲಾವತಿ ತನಗೆ ವಿವಾಹವೇ ಬೇಡವೆಂದು ವಿವಾಹ ಸಂಸ್ಥೆಯನ್ನೇ ದೂರ ಮಾಡಿಕೊಂಡವಳು. ಗಂಡಸರೆಂದರೆ ಹೂವಿನಿಂದ ಹೂವಿಗೆ ಹಾರುವ ದುಂಬಿಯಂತೆ ಎಂದು ಭಾವಿಸುವ ಲೀಲಾವತಿ ಹಾಸ್ಟಲ್ ಹುಡುಗಿಯರ ಚೆಲು-ಚೆಲುವಾದ ಜೀವನವನ್ನು ಕಂಡು ಎಚ್ಚರಿಸುವಂತೆ ಕಂಡರೂ ಎಲ್ಲೋ ಒಂದು ಕಡೆ ಅವಳ ಸುಪ್ತಪ್ರಜ್ಞೆಯಲ್ಲಿ ತನಗೂ ಜೀವನ ಸಂಗಾತಿ ಬೇಕಾಗಿತ್ತು ಎನ್ನುವ ಬಯಕೆ ಕವಲೊಡೆದದ್ದು ಕಥೆಯಲ್ಲಿ ಕಾಣುವ ಅಂಶ.

ಈ ಹಿಂದೆ ತನ್ನ ಸಹಪಾಠಿಯಾಗಿದ್ದ ಸದಾನಂದ ತದನಂತರ ಕಾಲೇಜಿನ ಪ್ರಾಧ್ಯಾಪಕರಾಗಿ ಆರು ಮಕ್ಕಳ ತಂದೆಯಾಗಿರುವುದು ಕಂಡು ಮನಸ್ಸು ಕಸಿವಿಸಿಗೊಳ್ಳುತ್ತದೆ. ಎಲ್ಲಿ ಹೋದರೂ ತಾನು ಮಾತ್ರ ಒಂಟಿ...... ಒಂಟಿ...... ಒಂಟಿ. ತಾನೊಬ್ಬ ಅತಿಥಿಯಾಗಷ್ಟೇ ಸ್ವೀಕಾರ ಮಾಡುವ ಹಲವು ಸಾಮಾಜಿಕ ವಲಯಗಳು (ಕಾಲೇಜು, ಸಂಘಟನೆಗಳು, ಹಾಸ್ಟೆಲ್, ಶಾಲೆಗಳು) ಕಟ್ಟಕಡೆಗೆ ತಾನು ಹುಟ್ಟಿ ಬೆಳೆದ ತನ್ನ ಸ್ವಂತ ಮನೆಗೆ ಹೋದಾಗಲೂ ತನಗಲ್ಲಿ ಸ್ಥಾನವಿಲ್ಲ ತಾನೊಬ್ಬ ಅತಿಥಿಯಷ್ಟೆ ಎಂಬ ಅರಿವು ಜಾಗೃತವಾಗುತ್ತಲೇ ಮನಸ್ಸು ವಿಲವಿಲ ಒದ್ದಾಡುತ್ತದೆ. ಸ್ತ್ರೀಯ ಒಂಟಿತನ, ಅಸಹಾಯಕತೆ, ಮನಸ್ಸಿನ ತುಮುಲಗಳನ್ನು ‘ಅತಿಥಿ’ ಸುಂದರವಾಗಿ ಚಿತ್ರಸುತ್ತದೆ. ಹೆಣ್ಣು ಕೂಡ ಮನುಷ್ಯಳೇ ಮನುಷ್ಯ ಸಹಜ ಪ್ರೀತಿ, ವಿಶ್ವಾಸ, ಅನುರಾಗ, ಅಂತಃಕರಣ ಬಯಸುವ ಸಾವಯವ ಜೀವಿಯೆಂಬುದನ್ನು ಸಂಕೀರ್ಣವಾಗಿ ಚಿತ್ರಿಸುತ್ತದೆ.

ವೀಣಾ ಶಾಂತೇಶ್ವರರು ಬರೆಯಲು ತೊಡಗಿದ್ದು ನವ್ಯದ ಉಚ್ಛ್ರಾಯ ಸ್ಥಿತಿಯಲ್ಲಿ. ಅವರ ‘ಬಿಡುಗಡೆ’ ಕಥಾಸಂಕಲನವು ಬರುವುದಕ್ಕೆ ಮೊದಲು ಅವರ ಕಥಾ ಸಂಕಲನಗಳು, ಕಾದಂಬರಿಗಳು ಬಂದಿದ್ದವು. ಅವರಿಗೆ ‘ಮುಳ್ಳುಗಳು’ ‘ಗಂಡಸರು’ ಹಾಗೂ ‘ಶೋಷಣೆ ಬಂಡಾಯ ಇತ್ಯಾದಿ’ ಹೆಸರು ತಂದ ಕೃತಿಗಳು. ಅವರ ಮೊದಲ ಕೃತಿಯಿಂದ ಪ್ರಾರಂಭಿಸಿದರೆ ಅಲ್ಲಿಂದಲೇ ಅವರ ಕತೆಗಳಲ್ಲಿ ಸ್ತ್ರೀಪರವಾದ ದೃಷ್ಟಿಕೋನವು ಕೆಲಸ

ಮಾಡುತ್ತದೆಯೆಂದು ವಿಮರ್ಶಕರು ಗುರುತಿಸಿದ್ದರು. ವೀಣಾ ಶಾಂತೇಶ್ವರ 'ಬಿಡುಗಡೆ' (೧೯೯೪) ಪ್ರಕಟವಾದಾಗ ಕನ್ನಡದಲ್ಲಿ ಅನೇಕ ಸ್ಥಿತ್ಯಾಂತರಗಳಾಗಿದ್ದವು. ನವ್ಯಸಾಹಿತ್ಯ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು, ಸಾಂಸ್ಕೃತಿಕವಾಗಿಯೂ ವ್ಯಕ್ತವಾದವು ಮುಂಚೂಣಿಗೆ ಬಂದಿತ್ತು. ನವ್ಯಸಾಹಿತ್ಯ ಸಂದರ್ಭದಲ್ಲಿ ಬರೆದು ಅನನ್ಯತೆಯನ್ನು ಉಳಿಸಿಕೊಂಡವರು ವೀಣಾ ಶಾಂತೇಶ್ವರ ಒಬ್ಬರೇ. ಕನ್ನಡದ ನವ್ಯ ಕತೆಗಾರ್ತಿ ಎಂದು ಬೇರೆ ಯಾವ ಲೇಖಕಿಯರನ್ನು ಗುರುತಿಸಲು ಬರುವುದಿಲ್ಲ. ಕತೆಗಳಲ್ಲಿ ಒಂದು ಮಾದರಿಯನ್ನು ಅವರು ರೂಪಿಸಿಕೊಂಡಿದ್ದರು. ಬರವಣಿಗೆಯಲ್ಲಿ ತಮ್ಮದೇ ಆದ ಚಹರೆಯನ್ನು ಕೂಡ ನಿರೂಪಿಸಿದ್ದಾರೆ.

ಸ್ತ್ರೀ ಸಂವೇದನೆಯ ಫಲಿತ

'ಬಿಡುಗಡೆ' ಕಥಾಸಂಕಲನದ ಬಿಡುಗಡೆ ಕಥೆಯು ಗಂಡನ ಸಾವು ನಾಯಕಿ ಸರೋಜಾಳ ಅಂತರಂಗದ ವಿವಿಧ ಭಾವನೆಗಳ ಮೂಲಕ ತೆರೆದುಕೊಳ್ಳುತ್ತದೆ. ಗಂಡನ ಸಾವು ಸರೋಜಗೆ ಒಂದು ರೀತಿಯ ಶಾಕ್ ಹುಟ್ಟಿಸಿರಬೇಕೆಂದು ಮಕ್ಕಳು ಯೋಚಿಸಿರುತ್ತಾರೆ. ಬಂದ ಹಿರಿಯರು ಅದನ್ನೇ ಯೋಚಿಸಿರುತ್ತಾರೆ. ಆದರೆ ವಾಸ್ತವದ ಪರಿಸ್ಥಿತಿಯು ಬೇರೆಯಿದೆ. ಕತೆಯ ಕೊನೆಯ ಭಾಗದಲ್ಲಿ ಅದು ವ್ಯಕ್ತವಾಗುತ್ತದೆ. "ಮೈಮನಸ್ಸು ಹಗುರವಾದಂತಹ ಭಾವ. ಅದೆಂಥದೋ ಬಿಡುಗಡೆಯ ಸುಖದ ಭಾವ. ಎಲ್ಲ ನೋವುಗಳಿಂದ, ಅಪಮಾನಗಳಿಂದ, ಹಿಂಸೆಯಿಂದ, ನಿರಾಸೆಯಿಂದ, ಅನ್ಯಾಯದಿಂದ, ದಬ್ಬಾಳಿಕೆಯಿಂದ ಕಳಚಿಕೊಂಡಂತಹ ಭಾವ. ಕಸಿವಿಸಿಯಾಗುತ್ತಿಲ್ಲ."[೪] ದು:ಖವಾಗುತ್ತಿದ್ದರೆ ಕಸಿವಿಸಿಯಾಗುತ್ತಿದ್ದರೆ ಸಂತಾಪವಾಗುತ್ತಿದ್ದರೆ ಅದು ಈ ಗಂಡ ಸತ್ತು ಹೋದದಕ್ಕಾಗಿ ಅಲ್ಲ ಆತ ಸಾಯಿಸಿದ ತನ್ನ ಅಸಂಖ್ಯ ಕನಸುಗಳಿಗಾಗಿ ಗಂಡ ಸತ್ತದ್ದು ಸರೋಜಗೆ ಬಿಡುಗಡೆಯ ಭಾವವನ್ನು ಸೂಚಿಸುತ್ತದೆ. ಕತೆಯ ಮುಖ್ಯವಾದ ಅಂಶವಿದು. ಈ ಕತೆಯಲ್ಲಿ ಬರುವ ಕೊನೆಯ ಸಾಲುಗಳು ಅವಳ ನಿರ್ಧಾರವನ್ನು ಸೂಚಿಸುತ್ತದೆ. "ನಂತರ ಮಗ ತನ್ನನ್ನು ಕರೆಯಲು ಬರುವ ಮೊದಲೇ ಹಗುರವಾದ ದಿಟ್ಟವಾದ ಹೆಜ್ಜೆಗಳನ್ನಿಡುತ್ತ ಪಡಸಾಲೆಗೆ ಬಂದಳು."[೫] ಪಡಸಾಲೆಗೆ ಬರುವುದು ಅವಳು ಪಡೆದುಕೊಂಡಿರುವ ಬಿಡುಗಡೆಯ ಭಾವದ ಸೂಚನೆಯಾಗಿದೆ. ಹೀಗಾಗಿ ಈ ಕತೆಯ ಮುಕ್ತಾಯ ತುಂಬಾ ಮಹತ್ವದ್ದಾಗಿದೆ. ಗಂಡನ ಸಾವು ಸರೋಜಳ ಜೀವನದಲ್ಲಿ ಬಿಡುಗಡೆಯಾಗುತ್ತದೆ. ಈ ಬಿಡುಗಡೆ ಅವಳ ಜೀವನದಲ್ಲಿ ಮಹತ್ವಪೂರ್ಣವಾದುದು ಎಂಬುದು ಕತೆಯ ಸೂಚ್ಯಾರ್ಥ.

ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹ ಸಂಸ್ಥೆ ಅತ್ಯಂತ ಮಹತ್ವದ್ದು ಮತ್ತು ಪವಿತ್ರವಾದದ್ದು ಎಂಬ ಭಾವದಲ್ಲಿ ಸಾಮಾಜಿಕ ಸಹಜ ಚಿಂತನೆಯಿರುತ್ತದೆ. ಆದರೆ ಸಹನಶೀಲ ಹೆಣ್ಣೊರ್ವಳಿಗೆ ಒಲ್ಲದ ಗಂಡ ಪ್ರಾಪ್ತವಾದಾಗ ಅವಳ ಬದುಕು ಅನುದಿನವೂ ಅನುಭವಿಸಲಾಗದ ನರಕ ಯಾತನೆಯಾಗಿ ಪರಿಣಮಿಸುತ್ತದೆ. ಅದರಿಂದ ಹೊರಬರುವ ಹೆಣ್ಣಿಗೆ ಗಂಡನ ಸಾವು ವೇದನೆಯಾಗದೆ 'ಬಿಡುಗಡೆ'ಯ ಮಾರ್ಗವಾಗುತ್ತದೆ ಎಂಬುದು ಬಿಡುಗಡೆ ಕತೆಯ ಆಶಯ.

ತನ್ನಿನಿಯ ತನಗೆ ಮೃದು ಮಧುರವಾಗುತ್ತಾನೆ, ಅಪ್ಯಾಯಮಾನವಾಗುತ್ತಾನೆ ಮತ್ತು ಅಂತರಂಗಕ್ಕೆ ಹತ್ತಿರವಾಗುತ್ತಾನೆ ಎಂಬ ಭಾವನೆ ಬರಿ ಭಾವನೆಯಾಗಿಯೇ 'ಬಿಡುಗಡೆ' ಕತೆಯ ಪ್ರಧಾನ ಪಾತ್ರಳಾದ ಸರೋಜಳ ಬಾಳಲ್ಲಿ ಉಳಿದುಬಿಡುತ್ತದೆ. ಸುಖದ ಭ್ರಮೆ ಬೆನ್ನಟ್ಟಿ ಹೋದ ಕನಸುಗಳು ಅವು ನನಸಾಗದೇ ಹೋದ ವಾಸ್ತವ ಕಟುಸತ್ಯಗಳು ಸರೋಜಳ ಬಾಳಲ್ಲಿ ನಡೆದುಹೋದ ಕಹಿಸಂಗತಿಗಳು. ಮನೆಯವರೆಲ್ಲರ ಪಾಲಿಗೂ ತನ್ನ ಗಂಡ ಬಹುದೊಡ್ಡ ಮನುಷ್ಯ. ಸದಾ ಶಾಂತಸ್ವಭಾವದವನು, ಅನ್ಯಾಯಗೈಯ್ಯದವನು. ಅಂತಹ ವ್ಯಕ್ತಿಯ ಅಂತರಂಗದ ಸಮಸ್ತವನ್ನು ಬಲ್ಲ ಸರೋಜಳಿಗೆ ಅದೆಲ್ಲ ವ್ಯಂಗ್ಯವಾಗಿ ಧ್ವನಿಸುತ್ತದಲ್ಲದೆ, ಗಂಡನ ಬಗ್ಗೆ ಧನಾತ್ಮಕ ಪ್ರತಿಮೆಯನ್ನು ಕಟ್ಟಿ ಕೊಡುವಂತಾದ್ದಲ್ಲ.

ವಾಸ್ತವ ಸ್ಥಿತಿಗೂ ಕನಸಿನ ಲೋಕಕ್ಕೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಕಥೆಯ ಆರಂಭಿಕ ಮೂರು ಪುಟಗಳಲ್ಲಿ ಬಯಲು ಮಾಡುತ್ತಾ ಹೋಗುವ ಕತೆಗಾರ್ತಿ ವಾಸ್ತವ ಬದುಕಿನ ಕಟುಸತ್ಯಗಳನ್ನೆ ತೆರೆದಿಡುವ ಬಗೆ ವಿಶಿಷ್ಟವಾದದ್ದು. ಹೆಣ್ಣಿನ ಜೀವನದ ಕನಸುಗಳನ್ನು ಅಲ್ಪಮಟ್ಟಿಗಾದರೂ ನನಸು ಮಾಡಬೇಕಾದ ಬಾಳಸಂಗಾತಿ ಕನಸುಗಳನ್ನು ಒಸಕಿ ಹಾಕಿದವನು. ತನ್ನಿಂದ ಲೈಂಗಿಕ ತೃಷೆ ತೀರಿಸಿಕೊಂಡು ಲೈಂಗಿಕವಾಗಿ ಶೋಷಿಸಿದಾತ. ತನ್ನನ್ನು ಜೀವವಿರುವ ಒಬ್ಬ ವ್ಯಕ್ತಿಯೆಂದು ಭಾವಿಸದೇ ದುಡಿಯುವ ಯಂತ್ರವಾಗಿ ಬಗೆಯುವ ಅವನ ಆರ್ಥಿಕ ಸಂಪನ್ಮೂಲ ಹೆಚ್ಚಳಕ್ಕೆ ಒಂದು ವಾಹಕವಾಗಿ ಬಳಸಿಕೊಂಡವನು. ಅವನ ಅಸೂಯೆಗೆ ಬಲಿಯಾಗಿ ತನ್ನ ಕಛೇರಿ ಸಹದ್ಯೋಗಿಗಳೊಂದಿಗೆ ಕೆಲಸ ನಿರ್ವಹಿಸಬೇಕಾದ ಸಂದರ್ಭದಲ್ಲಿ ಗಂಡನ ಅಸೂಯೆ, ಅನುಮಾನ ಅವನ ಕಣ್ಣುಗಳಿಗೆ, ದುಷ್ಟಬುದ್ಧಿಗೆ ಬಲಿಯಾದ ಸರೋಜಳ ಪಾಲಿಗೆ ನಿತ್ಯವೂ ದಳ್ಳುರಿಯೇ.

ಊಟೋಪಚಾರ ಉಡುಪು ವಿಷಯಗಳಲ್ಲಿ ಗಂಡ ತನ್ನ ಬಗ್ಗೆ ತಳೆಯುವ ತಾರತಮ್ಯ ಗಂಡನ ರೋಷ ಕೋಪತಾಪ ಲಂಗು-ಲಗಾಮಿಲ್ಲದ ಜೀವನ ಇವುಗಳ ಬಗ್ಗೆ ಹತಾಶಳಾಗಿರುವ ಸರೋಜಳ ಬದುಕು ಅದರಲ್ಲೆ ಮೂವತ್ತೈದು ವರ್ಷಗಳು

ಕಳೆದುಹೋಗಿದೆ. ಪುರುಷನ ಯಾಜಮಾನ್ಯ ದರ್ಪ, ಕ್ರೌರ್ಯ, ಪ್ರತೀಕವಾಗಿ ಕತೆಯಲ್ಲಿ ಬರುವ ಸರೋಜಾಳ ಗಂಡನ ಮಾತುಗಳನ್ನು ಉದಾಹರಿಸಬಹುದಾಗಿದೆ. "ನೀ ಹೀಂಗ ಬರ್ಥಡೇ ಬಂತು ಅದು ಬಂತು ಅಂತ ಹೊಸಾಸೀರಿ ತಗೊಳ್ಳೊದು ಸ್ವೀಟ್ ಮಾಡೂದು, ಮಂದಿನ ಕರಿದು ಪಾರ್ಟಿ ಕೊಡೂದು ವಗೈರೆ ಎಲ್ಲಾ ಹುಚ್ಚುಚ್ಚಾರ ಬಿಟ್ಟುಬಿಡು. ಮನ್ಯಾಗ ರಗಡ ಸೀರಿ ಅವ. ಸುಮ್ಸುಮ್ನ ಖರ್ಚು ಮಾಡಬಾರದು..... ಮನ್ಯಾಗ ಎರಡು ಸೀರಿ ಹೊರಗ ಹೋಗ್ಲಿಕ್ಕೆ ಎರಡು ಸೀರಿ, ಒಟ್ಟು ನಾಲ್ಕು ಸೀರಿ ಇದ್ದರ ಸಾಕು. ಎಂಥಾ ಸೀರಿ ಉಟ್ಟರೇನು, ಬರಬರತ ಹರೇದಾಕಿ ಆಗ್ತಿಯೇನು? ಕನ್ನಡ್ಯಾಗ ಮಾರಿ ನೋಡಿಕೋ....... ಕಣ್ಣು ಗಲ್ಲ ಎಲ್ಲಾ ಹ್ಯಾಂಗ ಒಳಸೇರ್ಯಾವ ಗೊತ್ತಾಗ್ತದ ..... ಏನು. ನನ್ನ ಸಿಗರೇಟು – ಬಿಯರ್ ಖರ್ಚಿನ ಸಲುವಾಗಿ ಮಾತಾಡ್ತೀಯಾ? ನಾ ಗಂಡಸು, ನಾ ಬೇಕಾದ್ದು ಮಾಡ್ತೀನಿ. ನಾ ಇಡೀ ದಿನಾ ದುಡದು ದಣದಿರ್ತೀನಿ, ನನ್ನ (ರಿಕ್ರಿಯೇಶನ್) ಮರುಸೃಷ್ಠಿ ಸಲುವಾಗಿ ಏನಾದ್ರೂ ಮಾಡ್ತೀನಿ, ನೀ ನನ್ನ ಸುದ್ದಿಗೆ ಬರಬ್ಯಾಡ."[೬]

ಈ ಸಾಮಾಜಿಕ ಪರಿಸರದಲ್ಲಿ ಲಿಂಗ ತಾರತಮ್ಯ, ಲಿಂಗಬೇಧ, ಅವ್ಯಾಹತವಾಗಿ ನಡೆದು ಬರುತ್ತದೆ ಎಂಬುದಕ್ಕೆ ಬಿಡುಗಡೆ ಕತೆಯು ಸಾಕ್ಷಿಯಂತಿದೆ. ಬಾಳಸಂಗಾತಿಯಾಗಿ ಮೂವತ್ತೈದು ವರ್ಷಗಳ ಸುಧೀರ್ಘ ಸಂಸಾರ ನಡೆಸಿದ ಸರೋಜಳಿಗೆ ಪೌಷ್ಠಿಕಾಂಶಯುಕ್ತ ಹಾಲುಸೇವನೆಯ ನಿಷೇಧವಿದೆ. ಕಥೆಯಲ್ಲಿ 'ಮಗಳಿಗೆ ಹಾಲು ಕೊಡೋ ಜರೋರಿಲ್ಲ. ದಪ್ಪ ಆಗಿ ಕೂತರ ಲಗ್ನಾ ಯಾರು ಮಾಡಿಕೊಳ್ಳುವ್ರು? ನೀ ಅಂತೂ ಹಾಲು ಕುಡಿಯಲೇಬಾರದು. ಮೂವತ್ತು ವರ್ಷ ದಾಟಿದ ಮ್ಯಾಲೆ ಹೆಂಗಸ್ಸು ಹಾಲು ಕುಡದರ ಡಯಾಬಿಟಿಸ್ ಬರತದ ತಿಳೀತೇನು?' ಈ ರೀತಿಯಾಗಿ ನಿಷೇದ ಒಡ್ಡುವ ಗಂಡನ ದರ್ಪ, ಲೆಕ್ಕಾಚಾರ, ಇತ್ಯಾದಿ ನಕರಾತ್ಮಕ ಅಂಶಗಳು ಅವಳ ಅಸೌಖ್ಯತೆಯ ಕಡೆ ಅಸಡ್ಡೆ ಹಾಗೂ ಮಡದಿಯೆಂದರೆ ಅಡುಗೆ ಮಾಡುವವಳು ಹತ್ತುಹಲವು ಭೌತಿಕ ಕೆಲಸ ನಿರ್ವಹಿಸುವವಳು ಸದಾ ಕಾರ್ಯವೆಸಗುತ್ತಿರಬೇಕೆಂಬ ಭಾವದ ಗಂಡು ಜಾತಿಯ ಪ್ರತೀಕವಾಗುತ್ತಾನೆ. ಸರೋಜಳ ಗಂಡ "ಹಳ್ಳಿಯೊಳಗಿನ ಹೆಂಗಸರನ್ನ ನೋಡು, ಹ್ಯಾಂಗ ಹೊಲದಾಗ ಕೆಲಸಾ ಮಾಡತಾರ, ಜ್ವರಾ–ಗಿರಾ ಬಂದರ ಕೇರ್ ಮಾಡೂದೇ ಇಲ್ಲ ಅವ್ರು. ನೀ ಹಿಂಗ ವೀಕ್‌ನೆಸ್ ಅಂತ ಮಲಗೇ ಇದ್ದರ ನಿನಗೆ ನೆಟ್ಟಗ ಆಗೋದಿಲ್ಲ. ಎದ್ದು ನೀ ಅಡಗಿ ಪಡಗಿ ಮಾಡ್ಲಿಕ್ಕೆ ಸುರು ಮಾಡು. ನನ್ನವು ಒಂದ್ನಾಲ್ಕು ಶರ್ಟು– ಪ್ಯಾಂಟು ಇಟ್ಟೀನಿ ನೋಡು ಒಗದು ಇಸ್ತ್ರೀ ಮಾಡು ಗುಳಗಿ ಔಷಧ ಅಂತೆಲ್ಲಾ ತಗೋಬ್ಯಾಡ. ಅದರಿಂದ ಕೆಟ್ಟ ಸೈಡ್ ಇಫೆಕ್ಟ್ ಆಗ್ತಾವ. ನಾ ಒಂದಿಷ್ಟು ನನ್ನ ಫ್ರೆಂಡ್ಸ್ ಕೂಡ ನಾಲ್ಕದಿನಾ ಜೋಗ ಮುರಡೇಶ್ವರ ಗೋಕರ್ಣ ಕಡೆ ಟ್ರಿಪ್ ಹೋಗಿ ಬರ್ತೀನಿ. ಮನಿಕಡೆ ಜೋಪಾನ"[೭] ಎಂದು ಹೇಳುತ್ತಾನೆ.

ಮನರಂಜನೆ ಮತ್ತು ಭೋಗದ ಭಾಗವಾಗಿ ಗಂಡ ಜೋಗ–ಮುರಡೇಶ್ವರ– ಗೋಕರ್ಣ ಕಡೆ ಹೊರ ಸಂಚಾರ ಹೋಗುವ ಗಂಡನ ಮನೋಧರ್ಮ ಹೆಂಡತಿಗೆ ಅವ್ಯಾವೂ ಕೂಡದೆಂಬ ಮನೋವಿಕೃತಿವಿರುವುದು ಪುರುಷ ಜಗತ್ತಿನ ಕರಾಳ ರೂಪವನ್ನು ಪರಿಚಯಿಸುತ್ತದೆ. ಇಂತೆಲ್ಲಾ ಆಕ್ರಮಣಶೀಲತೆ ಕ್ರೌರ್ಯ, ದಬ್ಬಾಳಿಕೆ, ಅಪಮಾನ, ಅವಮಾನಗಳಿಂದ ಜರ್ಜರಿತವಾದ ಸರೋಜಳಿಗೆ ಗಂಡನ ಸಾವು ವಾಸ್ತವ ಬದುಕಿಗೆ ಶಾಪವಾಗುವುದರ ಬದಲು ವರವಾಗಿದೆ. ಗಂಡನ ಎಲ್ಲಾ ಹಿಂಸೆಗಳಿಂದ 'ಬಿಡುಗಡೆ'ಗೊಂಡ ಧನ್ಯತಾಭಾವ ದಿಟ್ಟವಾದ ಹೆಜ್ಜೆಗಳನ್ನಿಡುತ್ತಾ ಪಡಸಾಲೆಗೆ ಬರುವ ಚಹರೆಗಳಲ್ಲಿ 'ಬಿಡುಗಡೆ'ಯ ಅಂಶವನ್ನು ಸ್ಪಷ್ಟೀಕರಿಸುವಂತಿದೆ. 'ತಲೆ ಕೊಡವಿಕೊಂಡು ಸರೋಜಾ ಎದ್ದಳು. ಕೂದಲನ್ನು ಸೀರೆಯನ್ನು ಸರಿಪಡಿಸಿಕೊಂಡಳು. ಒಳಗಿನ ಬಾಗಿಲಿನಿಂದ ಒಬ್ಬಳೇ ಅಡಿಗೆ ಮನೆಗೆ ಹೋಗಿ ಕಾಯಿಸಿಟ್ಟಿದ್ದ ಹಾಲನ್ನು ಗ್ಲಾಸಿಗೆ ಬಗ್ಗಿಸಿಕೊಂಡು ಸಕ್ಕರೆ ಬೆರೆಸಿ ಗಟಗಟ ಕುಡಿದಳು. ನಂತರ ಮಗ ತನ್ನನ್ನು ಕರೆಯಲು ಬರುವ ಮೊದಲೇ, ಹಗುರವಾದ ದಿಟ್ಟವಾದ ಹೆಜ್ಜೆಗಳನ್ನಿಡುತ್ತ ಪಡಸಾಲೆಗೆ ಬಂದಳು.' ಈ ಎಲ್ಲಾ ಚಹರೆಗಳು ಸರೋಜಳ ಮುಕ್ತಸ್ಥಿತಿಯನ್ನೋ ಅವಳ ಬಾಳು ಗಂಡನ ಎಲ್ಲಾ ಕ್ರೌರ್ಯಗಳಿಂದ 'ಬಿಡುಗಡೆ'ಗೊಂಡ ನಿರುಮ್ಮಳ ಜೀವನದ ಪ್ರತೀಕವಾಗುತ್ತವೆ.

'ಬಿಡುಗಡೆ' ಕಥಾಸಂಕಲನದ ಒಂದೆರಡು ಕತೆಗಳನ್ನು ಬಿಟ್ಟರೆ ಉಳಿದೆಲ್ಲಾ ಕತೆಗಳು ಸ್ತ್ರೀ ಜೀವನದ ಸುತ್ತ ಹರಡಿಕೊಂಡಿವೆ. ಸ್ತ್ರೀಯರ ಅದರಲ್ಲಿಯೂ ಆಧುನಿಕ ಮಹಿಳೆಯರ ಅಂತರಂಗ ಮತ್ತು ಅನುಭವಗಳನ್ನು ವೀಣಾ ಶಾಂತೇಶ್ವರ ಅವರು ಯಶಸ್ವಿಯಾಗಿ ತೆರೆದಿಡುತ್ತಾರೆ. ವೀಣಾಶಾಂತೇಶ್ವರ ಅವರಿಗೆ ಮುಖ್ಯವಾಗುವುದು ಮಹಿಳೆಯ ಬಹಿರಂಗದ ವ್ಯಾಪಾರದಲ್ಲಿ ಅಂತರಂಗದ ಚಿತ್ತದ/ಮನಸ್ಸಿನ ಸ್ಥಿತಿ. ಈ ಮನಸ್ಸಿನ ಸ್ಥಿತಿಯು ಮಹಿಳಾಅಸ್ತಿತ್ವದ ಬೇರೆ–ಬೇರೆ ಮುಖಗಳನ್ನು ಪರಿಚಯಿಸುತ್ತದೆ. ವೀಣಾಶಾಂತೇಶ್ವರ ಅವರು ಬರೆಯುವುದಕ್ಕಿಂತ ಮೊದಲು ಕನ್ನಡದ ಕಥನ ಪರಂಪರೆಯಲ್ಲಿ ಮಹಿಳೆಯ ಅಂತರಂಗ, ಅವಳ ಅಸ್ತಿತ್ವದ ಪ್ರಶ್ನೆ ಸ್ವತಂತ್ರ ನಿರ್ಧಾರದ ಪ್ರಶ್ನೆ ಇವು ಯಾವುವು ಮುಖ್ಯವಾಗಿರಲಿಲ್ಲ. ಅದುದರಿಂದಲೇ ಅವರ ಕತೆಗಳಿಗೆ ವಿಶಿಷ್ಟ ಸ್ಥಾನವಿದೆ.

ವೀಣಾ ಶಾಂತೇಶ್ವರ ಅವರ ಕತೆಗಳಲ್ಲಿ ಬರುವ ಮಹಿಳೆಯರು ಸಾಮಾನ್ಯ ವರ್ಗಕ್ಕೆ ಸೇರಿದವರ ಸಮಸ್ಯೆಗಳನ್ನು ವಿಶ್ವಾತ್ಮಕವೆಂದೇ ಕರೆಯುವ ಹಾಗಿಲ್ಲ. ಅಂದರೆ 'ಬಿಡುಗಡೆ' ಕಥಾಸಂಕಲನದಲ್ಲಿ ಬರುವ ಪ್ರತಿಯೊಂದು ಮಹಿಳಾ ಪಾತ್ರಕ್ಕೂ ಪ್ರತ್ಯೇಕವಾದ ಅನನ್ಯತೆ ಇದೆ. ಹೆಚ್ಚಿನ ಕತೆಗಳಲ್ಲಿ ಮಹಿಳೆಯರು ಸಂಪ್ರದಾಯವನ್ನು ಬೇರೆ–ಬೇರೆ ಕಾರಣಗಳಿಂದಾಗಿ ಮುರಿಯುತ್ತಾರೆ. ತಮ್ಮದೇ ಹೊಸ ಹಾದಿಯನ್ನು ಕಟ್ಟಿಕೊಳ್ಳುತ್ತಾರೆ. ಬಿಡುಗಡೆ

ಕಥಾಸಂಕಲನದಲ್ಲಿ ಕಾಣುವ ಮತ್ತೊಂದು ಮುಖ್ಯ ಅಂಶವೆಂದರೆ ಹೆಣ್ಣಿನ ಸ್ವಾತಂತ್ರ್ಯ ಮತ್ತು ಘನತೆಯ ಪ್ರಶ್ನೆ. ವೀಣಾ ಶಾಂತೇಶ್ವರ ಅವರು ಈ ಪ್ರಶ್ನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಬಿಡಿಸುತ್ತಾರೆ. ಹೆಣ್ಣಿನ ಸ್ವಾತಂತ್ರ್ಯ ಮತ್ತು ಘನತೆ ಎರಡೂ ಕತೆಗಳಲ್ಲಿ ವೈಯಕ್ತಿಕ ಹಂತದಲ್ಲಿ ರೂಪುಗೊಳ್ಳುವ ಪ್ರಶ್ನೆಯೂ ಹೌದು.

'ಬಿಡುಗಡೆ' ಕಥಾಸಂಕಲನದಲ್ಲಿ ಗಂಡನ ಸಾವಿಗೆ, (ಬಿಡುಗಡೆ) ತನ್ನನ್ನು ಗರ್ಭಿಣಿಮಾಡಿ ಹೋದ ಗಂಡಸಿಗೆ(ನಿರಾಕರಣೆ) ಯಾವತ್ತೋ ಭೇಟಿಯಾಗುವ ದುಶ್ಯಂತನಿಗೆ ಹೀಗೆ ವಿವಿಧ ಕಾರಣಗಳಿಗೆ ಪರಿತಪಿಸುವ ದುಃಖಿಸುವ ಮಹಿಳೆಯರ ಚಿತ್ರಣವು ಕಂಡುಬರುವುದಿಲ್ಲ. ಪರೋಕ್ಷವಾಗಿ ಮಹಿಳೆ ಅಸಹಾಯಕಲ್ಲ ಎಂಬುದನ್ನು ಇಲ್ಲಿಯ ಕತೆಗಳು ಸೂಚಿಸುತ್ತವೆ. ಇದು 'ಬಿಡುಗಡೆ' ಕಥಾಸಂಕಲನದ ಧನಾತ್ಮಕ ಅಂಶವಾಗಿದೆ. ಇಲ್ಲಿಯ ಕತೆಗಳಲ್ಲಿ ಬರುವ ಮಹಿಳೆಯರು ಸ್ವತಂತ್ರ ನಿರ್ಧಾರವನ್ನು ಕೈಗೊಳ್ಳುವಷ್ಟು ಸಶಕ್ತರಾಗಿದ್ದಾರೆ. ಅವರಿಗೆ ಅವರದೇ ಆದ ಆಯ್ಕೆಗಳಿವೆ, ಸ್ವಂತದ ಗೊತ್ತುಗುರಿಗಳಿವೆ. ಜೀವನದ ಅರಿವಿದೆ. ಅಸ್ತಿತ್ವವಾದಿಗಳ ಪರಿಭಾಷೆಯನ್ನೇ ಬಳಸಿ ಹೇಳುವುದಾದರೆ ಈ ಮಹಿಳೆಯರು ನಿರ್ದಿಷ್ಟವಾದ ಸ್ವಂತಿಕೆಯ ಗುಣ ಹೊಂದಿರುವವರು. ಹಾಗಾಗಿಯೇ ಯಾವುದೇ ಗೊಂದಲಗಳಿಲ್ಲ. ಆಯ್ಕೆಗಾಗಿ ಯಾರನ್ನೋ ಆಶ್ರಯಿಸಬೇಕಾದ ಅಗತ್ಯ ಇವರಿಗಿಲ್ಲ. ಈ ದೃಷ್ಟಿಯಿಂದ ವೀಣಾ ಶಾಂತೇಶ್ವರ ಅವರು ಕೊಡುವುದು ಹೊಸಕಾಲದ ಹೊಸ ಮಹಿಳೆಯ ಚಿತ್ರಣ. ಹಳೆಯಕಾಲದ ಸಾಂಪ್ರದಾಯಿಕ ಕುಟುಂಬದ ಹಳೆಯಮೌಲ್ಯಕ್ಕೆ ಜೋತು ಬಿದ್ದಿರುವ ಪಾತ್ರಚಿತ್ರಣ ಈ ಕೃತಿಗಳಲಿಲ್ಲ. ಪರೋಕ್ಷವಾಗಿಯಾದರೂ ಹೊಸ ರೀತಿಯ ಸಾಮಾಜಿಕ ಪರಿವರ್ತನೆಗಳ ಪ್ರಶ್ನೆಯನ್ನು ಎತ್ತಿಕೊಳ್ಳುತ್ತದೆ. ಇದೇ ಕಾರಣದಿಂದ ವೀಣಾ ಶಾಂತೇಶ್ವರ ಅವರ ಬರವಣಿಗೆಗಳು ಮಹತ್ವದ್ದಾಗಿವೆ.

ಕನ್ನಡದ ಇತರ ಲೇಖಕಿಯರಿಗಿಂತ ವೀಣಾ ಶಾಂತೇಶ್ವರ ಅವರು ಬೇರೆಯದೇ ಸ್ಥಾನವನ್ನು ಪಡೆದುಕೊಂಡಿರುವುದು ಅವರ ಆಧುನಿಕವಾದಿ ಚಿಂತನಾಕ್ರಮದಿಂದ. ಈ ವಿಷಯದಲ್ಲಿ ಅವರದು ಮುಕ್ತವಾದ ಮನಸ್ಸು. ವ್ಯಕ್ತಿಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ವೀಣಾ ಶಾಂತೇಶ್ವರ ಅವರು ಹೆಣ್ಣಿನ ಘನತೆಯ ಪ್ರಶ್ನೆಯನ್ನು ಬೇರೆ-ಬೇರೆ ದೃಷ್ಟಿಕೋನಗಳಿಂದ ಅನಾವರಣಗೊಳಿಸಲು ಪ್ರಯತ್ನಿಸುತ್ತಾರೆ. ಅವರ ಈ ನಿರ್ವಚನವು ಕೆಲವು ಸಂಪ್ರದಾಯವಾದಿಗಳಿಗೆ ಇರುಸುಮುರಸನ್ನುಂಟು ಮಾಡಬಹುದು. ಅದೇ ರೀತಿಯಲ್ಲಿ ಅವರು ತಳೆಯುವ ನಿಲುವು ವ್ಯಕ್ತಿಮಟ್ಟದ್ದು ಎಂದೂ ಅನಿಸಬಹುದು. ಇದು ವೀಣಾ ಶಾಂತೇಶ್ವರ ಅವರ ಮಿತಿಯೂ ಕೂಡ ಹೌದು. ಆದರೆ ನಂಬಿದ ಚಿಂತನಾ ಕ್ರಮದಲ್ಲಿ ಕತೆಯನ್ನು ಹೇಳುವ ವಿಧಾನದಲ್ಲಿ ಅಚ್ಚುಕಟ್ಟುತನವಿದೆ. ಮಹಿಳಾ ಕತೆಗಳ ಪರಂಪರೆಯನ್ನು

ಪರಿಶೀಲಿಸಿದರೆ ವೀಣಾ ಶಾಂತೇಶ್ವರ ಅವರ ಕತೆಗಳಿಗೆ ನಿರ್ದಿಷ್ಟವಾದಂತಹ ದಿಕ್ಕು ಮತ್ತು ಗುರಿ ಉದ್ದೇಶಗಳಿವೆ. ಹಾಗಾಗಿ ನವ್ಯಸಾಹಿತ್ಯದಲ್ಲಿಯೇ ಅತ್ಯಂತ ವಿಶಿಷ್ಟವಾದ ಕತೆಗಾರ್ತಿಯಾಗಿ ಕಂಡುಬರುತ್ತಾರೆ. ವೀಣಾ ಶಾಂತೇಶ್ವರ ಅವರ ನಿಲುವುಗಳು ಹೆಣ್ಣಿನ ಮನೋಪಟಲಗಳಿಗೆ ಹೊಂದಾಣಿಕೆಯಾಗುವಂತಹ ಸಂವೇದನೆಗಳಾಗಿವೆ.

ವೀಣಾ ಶಾಂತೇಶ್ವರ ತನ್ನ ಸಮಾಜದ ವಿವಿಧ ಮುಖಗಳ ದರ್ಶನಗೈಯುತ್ತಾ, ಅನುಭವ ಹೊಂದುತ್ತಾ ಅದೆಲ್ಲವನ್ನು ಕಥೆಯಲ್ಲಿ ಕಟ್ಟಿಕೊಡುವ ವೀಣಾ ಶಾಂತೇಶ್ವರ ನಿರೂಪಣಾ ತಂತ್ರ ಅನನ್ಯವಾದದ್ದು. ವಿವಿಧ ಸಮುದಾಯಗಳ ವಾಸಿಸುತ್ತಿರುವ ಈ ಸಮಾಜದೊಳಗಿನ ಭಿನ್ನ-ಭಿನ್ನ ಎಳೆಗಳನ್ನು ಒಟ್ಟುಗೂಡಿಸಿ ಅದಕ್ಕೆ ತನ್ನದೇ ಆದ ವರ್ಣಪತಲ ಮೂಡಿಸುವ ಶಾಂತೇಶ್ವರರ ಕಾಣಿಕೆ ನಿಜಕ್ಕೂ ಸೋಜಿಗ ಮೂಡಿಸುವಂತಾದ್ದು. 'ತಿರುಗಿ ಹೋದಳು' ಎಂಬ ಸಣ್ಣಕತೆಯಲ್ಲಿ ಸ್ತ್ರೀಶೋಷಣೆ, ಸ್ತ್ರೀಯರ ಮೇಲಾಗುತ್ತಿರುವ ದೌರ್ಜನ್ಯ ಮಾನವ ಹಕ್ಕುಗಳ ಹರಣ ಇತ್ಯಾದಿ ಅಂಶಗಳನ್ನು ಹೃದಯಂಗಮವಾಗಿ ಚಿತ್ರಿಸುವ ಪರಿ ವಿಶಿಷ್ಟವಾದುದು.

ಮುಸ್ಲಿಂ ಸಮುದಾಯಕ್ಕೆ ಸೇರಿದ ಇಮಾಮ್‌ಬೀ ಎಂಬ ಮನೆಕೆಲಸದವಳ ಪಾತ್ರಸೃಷ್ಟಿ ಅವಳ ಮಗಳಾದ ಹಮೀದಾಬಾನು ಮತ್ತು ಅವಳ ತೊಳಲಾಟ ಇವುಗಳನ್ನು ನಿರೂಪಿಸುವ ಬಗ್ಗೆ ಅಷ್ಟೊಂದು ಸಹಜವಾಗಿ ಮೂಡಿಬಂದಿದೆ ಎಂಬುದು 'ತಿರುಗಿ ಹೋದಳು' ಕತೆಯ ಒಂದು ಗಮನಾರ್ಹ ಸಂಗತಿ. ಹಿಂದೂ ಕುಟುಂಬವೊಂದರ ಭಾಗವಾದ ಲಕ್ಷ್ಮಿಯು ತಂದೆ-ತಾಯಿಯರ ಮನೆಯಲ್ಲಿ ಸೇವೆಗೈಯುವ ಇಮಾಮ್‌ಬೀ ನಿಷ್ಕಲ್ಮಶ ಸೇವಾತಾತ್ಪರತೆಯಿಂದ ಮನೆಮಂದಿಗೆಲ್ಲ ಕಣ್ಮಣಿಯಾಗಿದ್ದಾಳೆ. ಬಾಲ್ಯವಿವಾಹಕ್ಕೆ ಒಳಗಾದ ಇಮಾಮ್‌ಬೀ ತನ್ನ ಹದಿನೈದನೆಯ ವರ್ಷಕ್ಕೆ ಜನ್ಮನೀಡಿ ತಾಯಿಯ ಸ್ಥಾನ ಗಳಿಸಿಕೊಂಡವಳು. A Little boy is a Little boy but,A Little girl is a Little Mother ಎಂಬ ನಾಣ್ನುಡಿ ಅವಳಿಗೂ ಅವಳ ಮೊಮ್ಮಗಳ ಹಮೀದಾಬಾನುಗೂ ಸಮಾನವಾಗಿ ಅನ್ವಯಿಸುತ್ತದೆ.

ಲೈಂಗಿಕ ತೃಷೆಯನ್ನು ತೀರಿಸಿಕೊಳ್ಳುವ ತೆವಲಿಗೆ ಒಳಗಾದ ಕೆಲವು ಮುಸ್ಲಿಂ ಸಮುದಾಯದ ಪುರುಷರು ಆಚರಿಸುತ್ತಿದ್ದ 'ಬಹುಪತ್ನಿತ್ವ ಪದ್ಧತಿಯನ್ನು' ಕಥೆ ಕಟ್ಟಿಕೊಡುತ್ತದೆ. ವ್ಯಕ್ತಿಯ ವೈಯಕ್ತಿಕ ಖಾಸಾ ಸಂಗತಿಯಾದ ವಿವಾಹದ ವಿಷಯದಲ್ಲಿ ಸ್ತ್ರೀಯ ಸಮ್ಮತಿಯನ್ನು ಪಡೆಯದೇ ಅವಳಿಗೆ ವಿವಾಹ ಜರುಗಿಸುವ ಅನಿಷ್ಟ ಪದ್ಧತಿಯನ್ನು ಕತೆಗಾರ್ತಿ ನಿರೂಪಿಸುತ್ತಾ ಹೋಗುತ್ತಾರೆ. ಹೆಣ್ಣು ತನ್ನ ದೇಹದ ಮೇಲೆ ಸ್ವಾಯತ್ತತೆಯನ್ನು ಸ್ಥಾಪಿಸಿಕೊಳ್ಳಲಾಗದ ಅಸಾಯಕ ಹೆಣ್ಣು ಗಂಡಿನ ಹುನ್ನಾರಕ್ಕೆ ಬಲಿಯಾಗಿ ದೇಹವನ್ನು ಒಪ್ಪಿಸಿಕೊಳ್ಳುವಂತಹ ಧಾರುಣ ಚಿತ್ರಣವು ನಿರೂಪಿತವಾಗುತ್ತದೆ.

ಇಮಾಮ್‌ಬೀಯ ತಮ್ಮ ಹುಸೇನ್‌ಸಾಬ್ ಮತ್ತು ಮಹ್ಮದ್‌ಗೌಸ್ ನಡುವೆ ನಡೆದ ವ್ಯಾಪಾರಿ ಸಂಬಂಧ ವಿವಾಹವೆಂಬ ಪವಿತ್ರ ಸಂಬಂಧಕ್ಕೆ ತಳುಕು ಹಾಕಿಕೊಳ್ಳುವುದು. ತದನಂತರ ಆ ವಿವಾಹ ಸಂಸ್ಥೆಯನ್ನೇ ಅಲ್ಲೋಲಕಲ್ಲೋಲ ಮಾಡುವಂತಾದ್ದು. ಬಡತನದ ಕಾರಣಕ್ಕಾಗಿ ಅಸಹಾಯಕ ಸ್ಥಿತಿಯಿಂದ ಮಹ್ಮದ್‌ಗೌಸ್‌ನ ಬಹುಪತ್ನಿಯರಲ್ಲಿ 'ಒಬ್ಬಳಾಗುವ ಹಮೀದಾಬಾನುವಿನ ಗತಿ' ಸ್ಥಿತಿಯ ಬಗ್ಗೆಯೇ ಕಥೆ ತೆರೆದಿಡುತ್ತಾ ಹೋಗುತ್ತದೆ. ಅಜ್ಜಿ ಇಮಾಮ್‌ಬೀ ಮೊಮ್ಮಗಳ ಮದುವೆ ಕುರಿತು ಹಾಡುವ ಮಾತು. "ಗಿಳಿ ಸಾಕಿ ಗಿಡುಗನಿಗೆ ಕೊಟ್ಟಂತಾಯಿತಲ್ಲ......."[೮] ಎಂದು ಹಲುಬುವ ಅವಳ ಮಾತಿನಲ್ಲಿ ಪುರುಷನ ಆಕ್ರಮಣಶೀಲ, ಹಿಂಸಾತ್ಮಕ ಕ್ರೂರ ಪ್ರವೃತ್ತಿಯ ಗುಣ ಆಲೋಚಿಸುವಂತಾದ್ದು. ಏನೂ ಅರಿಯದ ಗಿಡುಗನ ಪಾಲಿಗೆ ಬಲಿಪಶುವಾಗುವ ಗಿಳಿಯಂತಾಗಿ ಬಿಡುತ್ತಾಳೆ ಹಮೀದಾಬಾನು. ಈ ಸಂಕ್ಷಿಪ್ತ ಮಾತುಗಳಲ್ಲೆ ಪುರುಷ ಜಗತ್ತಿನ ಕ್ರೌರ್ಯ ಮತ್ತು ಸ್ತ್ರೀಯ ಅಸಾಯಕತೆಯನ್ನು ರೂಪಕದ ಮುಖೇನ ವೀಣಾ ಶಾಂತೇಶ್ವರ ಕಟ್ಟಿಕೊಡುವ ಕಥನಕ್ರಮ ಅನನ್ಯವಾದುದು.

ಆಡುವ ವಯಸ್ಸಿನ ಹಮೀದಾಬಾನು ನಡುವಯಸ್ಸಿನ 'ಮಹ್ಮದ್ ಗೌಸ್'ನಿಗೆ ಪತ್ನಿಯಾಗಿ ಹೋಗುವಂತಾದ್ದು ತದನಂತರ ಚಿಕ್ಕಹುಡುಗಿ 'ಹಮೀದಾಳ'ನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಲೈಂಗಿಕವಾಗಿ ಅನುಭವಿಸುತ್ತಾ ಹೋಗುವಂತಾದ್ದು, ಸರಣಿ ಗರ್ಭದಾನ ಮಾಡುವಂತಾದ್ದು..... ಇತ್ಯಾದಿ ಹೆಣ್ಣಿನ ಮೇಲಾಗುತ್ತಿರುವ ಕ್ರೌರ್ಯದ ಪರಮಾವಧಿಯ ಪರಿಚಯವನ್ನೇ ಓದುಗರಿಗೆ ಮಾಡಿಸುತ್ತದೆ. ಮತ್ತೆ-ಮತ್ತೆ ತಿರುಗಿ ಬರುವ ಮಹ್ಮದ್ ಗೌಸ್‌ಗೆ ಊಟೋಪಚಾರ ಮತ್ತೆ ರಾತ್ರಿಯಾದರೆ ಮಹ್ಮದ್‌ಗೌಸ್‌ನ ರಾಕ್ಷಸಿ ಪ್ರವೃತ್ತಿಯ ಬಗ್ಗೆಯು ಕಥೆಯಲ್ಲಿ ನಿರೂಪಿತವಾಗುತ್ತಾ ಹೋಗುತ್ತದೆ.

ಇದೆಲ್ಲವನ್ನು ಸಾಕ್ಷಿಪ್ರಜ್ಞೆಯಿಂದ ನೋಡುತ್ತಾ ಹೋಗುವ ಮನೆಯೊಡತಿ ಮಗಳು ಲಕ್ಷ್ಮಿಗೆ ಸರಿಬೀಳದು. ಇದ್ಯಾವುದೂ ಸರಿಬೀಳದ ಲಕ್ಷ್ಮಿ ಹಮೀದಾಬಾನುವಿಗೆ ನೀಡುವ ಸಲಹೆ. "ನೀನ್ಯಾಕೆ ಆತನನ್ನು ಸೇರಿಸಿಕೊಳ್ಳುತ್ತೀ ಹಮೀದಾ? ಹೆಂಡತಿ ಮಕ್ಕಳ ಬಗ್ಗೆ ತನ್ನ ಕರ್ತವ್ಯ ತಿಳಿಯದ ಗಂಡನನ್ನು ಬೆಂಕಿ ಹಾಕಿ ಸುಡಬಾರದೇ? ಆತ ಬಂದಾಗ ಒದ್ದು ಕಳಿಸಬಾರದೊ? ಅವನಿಂದ ನಿನಗೇನು ಸಹಾಯವಿಲ್ಲ, ಲಾಭವಿಲ್ಲ ಮತ್ತೇಕೆ ಅವನು ಬಂದಾಗ ಇಷ್ಟು ಸಡಗರ ಪಡುವುದು? ಮುಖಕ್ಕೆ ಉಗಿದು ಆಚೆ ನೂಕಬಾರದೆ ಅವನನ್ನು?"[೯] ಹೀಗೆಂದು ಕಠೋರವಾಗಿ ಸಲಹೆ ನೀಡುತ್ತಾಳೆ. ಅಸಹಾಯಕ ಅವಿದ್ಯಾವಂತ ಅಲ್ಪಸಂಖ್ಯಾತ ಸಮುದಾಯಕ್ಕೆ ನೊಂದ ದಮನಿತ ಹಮೀದಾಬಾನು ಅವಳ ಮಾತುಗಳಿಗೆ ಸುಮ್ಮನೆ ತಲೆ ತಗ್ಗಿಸುತ್ತಾಳೆ.

ಈ ಮಧ್ಯೆ ಲಕ್ಷ್ಮಿ ಉನ್ನತಶಿಕ್ಷಣದ ಭಾಗವಾದ ಎಂ.ಕಾಂ(M.Com) ಮುಗಿಸಿ ಮುಂಬಯಿಯ ಸ್ಟೇಟ್‌ಬ್ಯಾಂಕ್ (State bank) ಮುಖ್ಯ ಕಛೇರಿಯಲ್ಲಿ ಪ್ರೋಪೋಷನರಿ ಆಫೀಸರ್ ಆಗಿ ಕೆಲಸ ನಿರ್ವಹಣೆ ಮಾಡುವ ಅವಕಾಶ ನೀಡುತ್ತದೆ. ಬ್ಯಾಂಕ್‌ಗೆ ಸೇರಿದ ಒಂದೇ ವರ್ಷದಲ್ಲಿ ಸಹೋದ್ಯೋಗಿಯಾದ 'ಸುರೇಶ ಕುಲಕರ್ಣಿ'ಯೊಂದಿಗೆ ಪ್ರೀತಿ ಬೆಳೆದು ಮದುವೆಯೂ ಆಗಿ ಬಿಡುತ್ತದೆ. ಹಣಕಾಸಿನ ವಿಷಯದಲ್ಲಿ ಚತುರಮತಿಯಾದ ಲಕ್ಷ್ಮಿ ತನ್ನ ಗಂಡ ಮನೆಗೆ ಖರ್ಚುಮಾಡದೆ ತನ್ನಕ್ಕನ ಮನೆಗೆ ಪ್ರತಿ ತಿಂಗಳ ಪಗಾರವನ್ನು ವ್ಯಯಿಸುವುದು ಮನಸ್ಸಿಗೆ ಕಸಿವಿಸಿವುಂಟು ಮಾಡುವ ಕಹಿ ಸಂಗತಿಯಾಗುತ್ತದೆ. ತವರು ತೊರೆದು ತನ್ನಿನಿಯನ ಮಡದಿಯಾಗಿ ಅವನ ಬೇಕು-ಬೇಡಗಳೆಲ್ಲವನ್ನು ಗಮನಿಸುತ್ತಾ, ಅವನ ಸುಖದುಃಖಗಳಲ್ಲಿ ಪಾಲ್ಗೋಳ್ಳುತ್ತಾ ಬರುವ ಯಾವ ಹೆಣ್ಣಿಗಾದರೂ ಅನುಭೂತಿಯ ನಾಲ್ಕು ಮಾತುಗಳು ಅವಳಿಗೆ ಅಪ್ಯಾಯಮಾನವಾಗುತ್ತವೆ. ಲಕ್ಷ್ಮಿ ತನ್ನ ಗಂಡ ತನ್ನ ಹುಟ್ಟುಹಬ್ಬದ ಬಗ್ಗೆ ಅಸ್ಥೆ ವಹಿಸದೆ ತನ್ನಕ್ಕನ ಮಗಳ ಹುಟ್ಟುಹಬ್ಬದ ಬಗ್ಗೆ ಎಲ್ಲಿಲ್ಲದ ಆಸಕ್ತಿ ತೋರಿಸುವುದು ಲಕ್ಷ್ಮಿಗೆ ಮಾನಸಿಕವಾದ ವೇದನೆಯನ್ನು ತಂದೊಡ್ಡುವಂತಾಗುತ್ತದೆ. ಗಂಡ 'ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ' ಎಂಬ ಬೇದಭಾವ ನೀತಿಯನ್ನೆ ಅನುಸರಿಸುವ ಅವನ ಮನೋಸ್ಥಿತಿಯ ಬಗ್ಗೆ ಉರಿದು ಬೀಳುತ್ತಾಳೆ. ತಾನು ಒಂದು ಹೆಣ್ಣು, ತನಗೂ ಮನಸ್ಸಿದೆ, ತನಗೂ ತನ್ನದೇ ಭಾವನೆಗಳಿವೆ. ಆ ಭಾವನೆಗಳಿಗೆ ಸಕಾರಾತ್ಮಕ ಸ್ಪಂದನೆಗಾಗಿ ಹೆಣ್ಣು ನಿರೀಕ್ಷೆಯಲ್ಲಿರುತ್ತಾಳೆ. ಆದರೆ ಗಂಡ ಸುರೇಶ ಕುಲಕರ್ಣಿ ಸಕಾರಾತ್ಮಕ ಸ್ಪಂದನೆಯನ್ನೆ ಮಾಡದೆ ಅನುತಾಪ ಅನುಕಂಪ ತೋರದೆ ಅವಳ ಇಚ್ಛೆಗೆ ವಿರುದ್ಧವಾಗಿ ಕುಡಿತದ ಅಮಲಿನಲ್ಲಿಯೇ ಸಂಭೋಗಿಸುತ್ತಿದ್ದ. "ಲಕ್ಷ್ಮಿ ಅದಕ್ಕೆ ಪ್ರತಿಭಟಿಸಿದಾಗ ಬಲತ್ಕರಿಸುತ್ತಿದ್ದ ಅಥವಾ ಸಿಟ್ಟಾಗಿ ಎರಡೆರಡು ದಿನ ಮನೆಗೆ ಬರುತ್ತಿರಲಿಲ್ಲ."[೧೦] ಸುಳ್ಳು ಹೇಳುವ, ನೆಪ ಕಂಡುಕೊಳ್ಳುವ ಹವ್ಯಾಸಕ್ಕೂ ಬಿದಿದ್ದ ಗಂಡನ ಬೈಗುಳಕ್ಕೆ ಈಡಾದ ಲಕ್ಷ್ಮಿ ಮನದಲ್ಲಿಯೇ ಪರಿತಪಿಸುತ್ತಾ ಹೋಗುತ್ತಾಳೆ. ಗಂಡುಮಗುವಿಗೆ ಜನ್ಮನೀಡಿದ ತಾಯಿ ಲಕ್ಷ್ಮಿ ಮೂರು ತಿಂಗಳಲ್ಲೆ, ಮನದಲ್ಲಿ ಗಟ್ಟಿ ನಿರ್ಧಾರಕ್ಕೆ ಬಂದು ಗಂಡನ ಮನೆಗೆ ತೆರಳುತ್ತಾಳೆ. ಒಂದಾನೊಂದು ಕಾಲದಲ್ಲಿ ಅತ್ಯಂತ ರೋಮ್ಯಾಂಟಿಕ್ ಆಗಿದ್ದ ಗಂಡ ಇಂದು ತನ್ನ ಬಯಕೆಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ನಿರುತ್ಸಾಹಿಯಾಗಿರುವುದು ಅವಳಿಗೆ ನೋವುಂಟು ಮಾಡುತ್ತದೆ.

ತನ್ನ ಖಾಸಗಿತನ, ಸ್ವಾಭಿಮಾನ, ಸಶಕ್ತೀಕರಣವನ್ನು ಅಮಾನವೀಯ ಗಂಡನಿಗೆ ಮುಡುಪಾಗಿಡಬಾರದೆಂಬ ಗಟ್ಟಿ ನಿಲುವನ್ನು ಲಕ್ಷ್ಮಿ ತಾಳುತ್ತಾಳೆ. ಅದಕ್ಕಾಗಿ ತನ್ನದೇ ಸ್ವಾಯತ್ತ ಬದುಕನ್ನು ರೂಪಿಸಿಕೊಳ್ಳಬೇಕೆಂಬ ಹೆಬ್ಬಯಕೆಯ ಕಾರಣದಿಂದ, ಗಂಡನಿಂದ

ದೂರವಾಗಿ ಬೇರೆಯಾಗಿರಬೇಕೆಂಬ ದೃಢನಿರ್ಧಾರ ಮಾಡುತ್ತಾಳೆ. ಕೊನೆಯ ಹಂತದಲ್ಲಿ ಕಥೆ ಹೊಸತಿರುವನ್ನೆ ಪಡೆಯುತ್ತದೆ. 'ಏನು ವಿಚಾರ ಮಾಡ್ತೀ ಲಕ್ಷ್ಮೀ? ಯಾಕೋ ಒಂಥರಾ ಕಾಣಿಸ್ತಿಯಲ್ಲ?' ಅಂತ ಕೇಳಿದ ತಾಯಿಯನ್ನೇ ಒಂದು ಕ್ಷಣ ದಿಟ್ಟಿಸಿದಳು ಲಕ್ಷ್ಮೀ. ತನ್ನ ಗಂಡ- ಮಕ್ಕಳು ಸಂಸಾರಕ್ಕಾಗಿ ಜೀವತೇಯ್ದು ಹಣ್ಣಾಗಿದ್ದಳು ಆ ತಾಯಿ. ಆಕೆಯ ಕಣ್ಣಲ್ಲಿ, ಮುಖದಲ್ಲಿ ವ್ಯಕ್ತಿತ್ವದಲ್ಲಿ ಒಂದು ಬಗೆಯ ಸಾರ್ಥಕ ಭಾವ. ನೋಡುತ್ತಿದ್ದಂತೆ ಓಲಾಡುತ್ತಿದ್ದ ಲಕ್ಷ್ಮಿಯ ಮನಸ್ಸು ಗಟ್ಟಿಯಾಯಿತು. ಸೋತು ಹೋದ, ಆದರೂ ನಿರ್ಧಾರ ತುಂಬಿದ ಧ್ವನಿಯಲ್ಲಿ ಆಕೆ ಅಂದಳು. "ಏನಿಲ್ಲ ಅಮ್ಮ, ನಾ ಬಂದು ಭಾಳ ದಿವಸಾತು. ನಾಳಿನ ಶನಿವಾರ ಮುಂಬೈಗೆ ಹೋಗ್ಬಿಡ್ತೀನಿ. ರಿಝರ್ವೇಶನ್ ಮಾಡ್ಸು ಅಂತ ತಮ್ಮಗ ಹೇಳಿಬಿಡು."[೧೧] ಈ ಬಾರಿ ಲಕ್ಷ್ಮೀ ಹಮೀದಾಳಿಗೆ ನಿನ್ಯಾಕೆ ಆತನನ್ನು ಒದ್ದು ಓಡಿಸುವಂತಿಲ್ಲ ಹಮೀದಾ ಎಂಬ ಮಾತು ಆಡಲಿಲ್ಲ. ತಿರುಗಿ ಹೋದ ಲಕ್ಷ್ಮೀ ತನ್ನ ಬದುಕು ಕಟ್ಟಿಕೊಳ್ಳುವುದರ ಬಗ್ಗೆ ತನ್ನದೇ ಮಾರ್ಗ ಕಂಡುಕೊಂಡಿದ್ದಾಳೇನೋ? ಅಥವಾ ಹಮೀದಾಬಾನುವಿನ ಬಾಳಿಗೆ ಹೋಲಿಸಿದರೆ ತನ್ನ ಬಾಳು ಅವಳಿಗಿಂತ ಎಷ್ಟೋ ಮೇಲು ಎಂದೆನಿಸಿರಬಹುದೆನೋ? ಅಥವಾ ತನ್ನ ತಾಯಿ ತನ್ನೆಲ್ಲಾ ಜೀವನವನ್ನು ತನ್ನ ಸಂಸಾರದ ಭಾಗವಾದ ಗಂಡಮಕ್ಕಳಿಗಾಗಿ ಸಮರ್ಪಣೆ ಮಾಡಿಕೊಂಡು ಸಾರ್ಥಕ ಭಾವ ಅನುಭವಿಸುತ್ತಿರುವುದು. ಅವಳು ತಿರುಗಿ ಹೋಗಿಸುವಂತೆ ಮಾಡಿರಬಹುದು.

ವೀಣಾ ಶಾಂತೇಶ್ವರ ಕಥೆಗಳಲ್ಲಿ ಪುರುಷಕೇಂದ್ರಿತ ಅಭಿವ್ಯಕ್ತಿ

ಮಹಿಳೆಗೆ ಪುರುಷನಷ್ಟೇ ಸಮಾನವಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ಸ್ಥಾನಮಾನಬೇಕೆಂಬ ಕಳಕಳಿವುಳ್ಳವಳು. 'ಮರ್ಯಾದೆ' ಎನ್ನುವ ಸಣ್ಣಕಥೆಯಲ್ಲಿ 'ಮರ್ಯಾದೆ' ಎಂಬ ಪರಿಕಲ್ಪನೆಯನ್ನು ಹಲವು ನಿಟ್ಟಿನಲ್ಲಿ, ಹಲವು ತೆರನಾಗಿ ನಿರೂಪಿಸಿರುವುದು ಗಮನಾರ್ಹ. ವಿಧುರ ತಂದೆ ಕೆಲಸದಾಕೆ 'ಸರಸವ್ವ'ನ ಮೇಲೆ ಒಲವು ಬೆಳೆದು ಆಕೆಯನ್ನು ಬಾಳಸಂಗಾತಿಯನ್ನಾಗಿ ಮಾಡಿಕೊಳ್ಳುವ ಸಂಗತಿ ಮನೆಯ ಮಕ್ಕಳು ಮತ್ತು ಸೊಸೆಯಂದಿರಿಗೆ ಕಿರಿಕಿರಿಯುಂಟು ಮಾಡುತ್ತದೆ. ಅದು ಮನೆತನದ 'ಮರ್ಯಾದೆ'ಗೆ ಕೂಡದು ಎನ್ನುವ ಭಾವ ಅವರದು. ಪ್ರೀತಿಯಿಂದ ವಂಚಿತನಾದ ಕುಟುಂಬದ ಯಜಮಾನ ಅರ್ಥಾತ್ ತಂದೆ ತನ್ನ ಯೋಗಕ್ಷೇಮದ ಬಗ್ಗೆ ವಿಚಾರಿಸುವ, ಹೊತ್ತು ಹೊತ್ತಿಗೆ ಊಟ-ಉಪಚಾರ ನೀಡುವ ಕೆಲಸದಾಕೆ ಸರಸವ್ವನ ಬಗ್ಗೆ ಮೃದುಧೋರಣೆ ತಳೆಯುವುದಲ್ಲದೆ, ಅವಳನ್ನು ವಿವಾಹವಾಗುವ ಇಚ್ಛೆಯನ್ನು ಅಭಿವ್ಯಕ್ತಿಸುತ್ತಾನೆ.

ಸಮಕಾಲೀನ ಸಮಾಜದ ಶ್ರೇಣಿಕೃತ ವ್ಯವಸ್ಥೆಯಲ್ಲಿ ಕೆಳಸ್ಥರದ ಹೆಣ್ಣನ್ನು ಮದುವೆಯಾಗುವುದು ಮನೆತನದ 'ಮರ್ಯಾದೆ'ಗೆ ಕುಂದಾದಂತೆಯೇ ಸರಿ ಎಂಬ

ನಿಲುವಿನ ಕುಟುಂಬದ ಸದಸ್ಯರ ಅಭಿಪ್ರಾಯ. ಕಥೆಯಲ್ಲಿ ಸ್ತ್ರೀಪರವಾದಿಯಾಗಿಯೂ, ಮಾನವತಾಪರವಾದಿಯೂ, ಕಥಾ(ಹಂದರ) ನಿರೂಪಣೆಯನ್ನು ಮಾಡಿರುವುದರ ಜೊತೆಗೆ ಕಥೆಯ ಪಾತ್ರಗಳನ್ನು ಆ ನಿಟ್ಟಿನಲ್ಲಿಯೇ ಚಿತ್ರಿಸುತ್ತಾರೆ. ಇಲ್ಲಿ ಕೆಳಹಂತದ ಕೆಲಸದಾಕೆ 'ಸರಸವ್ವ'ನ ಪರವಾಗಿಯು, ಹಾಗೆಯೇ ಅಸಹಾಯಕನೂ, ಒಂಟಿತನವನ್ನು, ಅನುಭವಿಸುತ್ತಿರುವವನೂ ಆದ ಪುರುಷನ ಪರವಾಗಿಯೂ ಆಕೆ ವಾಲಿರುವುದನ್ನು ಈ ಕಥೆ ಪ್ರತಿಬಿಂಬಿಸುತ್ತದೆ.

ತನ್ನ ಭಾವನೆಗೆ ಪೂರಕವಾಗಿ ಪ್ರತಿಸ್ಪಂದಿಸುವ ಮಗಳು ಕಮಲ ಮತ್ತು ತಾನು ಮದುವೆಯಾಗಲಿರುವ ಕೆಲಸದಾಕೆ 'ಸರಸವ್ವ'ನ ಬಗ್ಗೆ ಸಕರಾತ್ಮಕ ಒಪ್ಪಿಗೆ ನೀಡುವ ಅಂಶವು ನಿರೂಪಣೆಯಲ್ಲಿ ಹೃದಯಾಂಗಮವಾಗಿ ಮೂಡಿಬಂದಿದೆ. ಮಗಳು ಕಮಲ ಅಪ್ಪನಿಗೆ "ಅಪ್ಪ ನೀವು ಬರೋ ಶುಕ್ರವಾರ ಲಗ್ನಾ ಮಾಡಿಕೋತೀರಲ್ಲ ಮಾಡಿಕೊಳ್ರಿ, ಆದರ ಇಲ್ಲೆಬ್ಯಾಡ ತುಳಜಾಪುರಕ್ಕೆ ಹೋಗಿ ಮಾಡಿಕೊಂಡು ಬರ್ರಿ. ನನಗ ಬಹುಶಃ ಬರ್ಲಿಕ್ಕಾಗ್ಲಿಕ್ಕಿಲ್ಲ, ಆದ್ರೂ ಪ್ರಯತ್ನ ಮಾಡ್ತೀನಿ. ಬರದಿದ್ರ ಕೆಟ್ಟನಿಸಿಕೋಬ್ಯಾಡ್ರಿ ಹ್ಞಾ, ಉಳದವರದು ಯಾವ್ದೂ ಮನಸ್ಸಿಗೆ ಹಚಿಗೋಬ್ಯಾಡ್ರಿ"[೧೨] ತುಳುಜಾಪುರಕ್ಕೆ ಹೋಗಿ ಮದವೆಯಾಗು ಎನ್ನುವ ಅವಳ ಮಾತು ಅಪ್ಪನ ಪಾಲಿಗೆ ತಂಗಾಳಿಯಂತೆ. ಈ ಸಣ್ಣ ಕಥೆಯಲ್ಲಿ 'ಮರ್ಯಾದೆ'ಯ ಹಲವು ಮಜಲುಗಳನ್ನು ಸಮಾಜ ಅದನ್ನು ಪರಿಭಾವಿಸುವ ಬಗೆಯನ್ನು ಕತೆ(ಸುಂದರವಾಗಿ)ಯ ಸಂಕಿರಣತೆಯಲ್ಲಿ ನಿರೂಪಣೆಗೊಂಡಿದೆ.

'ಮರ್ಯಾದೆ' ಕಥೆಯಲ್ಲಿ ಬರುವ ಕುಟುಂಬದ ಸದಸ್ಯರಾದ ಸುರೇಶ, ಶೀಲ, ವಿಮಲ, ರಮಾ, ಸತೀಶ, ಇವರ ಪಾಲಿಗೆ ಕೆಲಸದಾಕೆ ಸರಸವ್ವ ವಿಧವೆ. ಕೆಳಸ್ಥರದವಳಾಗಿದ್ದು ತಮ್ಮಂತೆ ಉಡುಪು ಧರಿಸುವುದಾಗಲಿ ಅಲಂಕಾರ ಮಾಡಿಕೊಳ್ಳುವುದಾಗಲಿ ಸಲ್ಲದು ಸುರೇಶ ಗಂಭೀರವಾಗಿ ಅಂದ. 'ಈ ಹೆಂಗಸಿನ ಮ್ಯಾಲ ನಾವು ಮೊದ್ಲಿನಿಂದ ಒಂದು ಕಣ್ಣು ಇಡ್ಬೇಕಾಗಿತ್ತು. ಆಕಿನ್ನ ನೋಡಿದರ ಕೆಲಸದಾಕಿ ಅಂತ ಯಾರಂತಾರ? ಆಕೀ ಸೀರೇನು, ಕುಬಸೇನು, ಪೌಡರೇನು, ಡೌಲೇನು! ನಮ್ಮಪ್ಪನಂಥಾ ಮಳ್ಳ ಗಂಡಸನ್ನ ಬಲ್ಯಾಗ ಹಾಕ್ಕೊಳ್ಳೊದು ಆಕೀಗೆ ಅಗದೀ ಸಸಾರ ಸಾಧಿಸಿರಬೇಕು.'[೧೩] ಮೇಲಸ್ಥರದ ಜನ ಕೆಳಸ್ಥರದ ಜನರ ಹಿತಾಂಕ್ಷೆಯನ್ನಾಗಲಿ, ಅಥವಾ ಸಾಮಾಜಿಕ ಕಲ್ಯಾಣವನ್ನಾಗಲಿ ಆಶಿಸದೇ ಅವರ ಬಗ್ಗೆ ತಾತ್ಸಾರ ಮನೋಭಾವನೆ, ಅಸೂಯೆಯಿಂದ ಪ್ರತಿಕ್ರಿಯಿಸುವುದು ಈ ಮೇಲಿನ ಮಾತಲ್ಲಿ ಸ್ಪಷ್ಟವಾಗಿ ನಿರೂಪಿತಗೊಂಡಿದೆ. ಇಲ್ಲಿ ಕೆಲಸದಾಕೆ ಸರಸವ್ವನ

ಉಡುಪು, ಅಲಂಕಾರದ ಬಗ್ಗೆ ಮೇಲುಸ್ಥರದ ಕುಟುಂಬದ ಸದಸ್ಯರು ಮಾನಸಿಕವಾಗಿ ಅಸ್ಥವ್ಯಸ್ಥಗೊಳ್ಳುವುದು ಅದನ್ನು ಹೀಗಾಗ್ಗೆ ಅಭಿವ್ಯಕ್ತಿಸುವುದು ಕುಟುಂಬ ಸದಸ್ಯರ ಋಣಾತ್ಮಕ ಸಾಂಪ್ರದಾಯಿಕ ಮನೋಭಾವನೆಯನ್ನು ಅಭಿವ್ಯಕ್ತಿಸುತ್ತದೆ.

ವಿಧುರನು ವಿಧವೆಯನ್ನು ಮದುವೆಯಾಗುವುದು ಮನೆತನದ 'ಮರ್ಯಾದೆ'ಗೆ ಕೇಡಲ್ಲ ಎಂಬುದನ್ನು, ಕೆಲಸದಾಕೆ ಸರಸವ್ವನನ್ನು ವಿವಾಹವಾಗುವುದೂ ಸಹ ಮನೆತನದ ಮರ್ಯಾದೆಗೆ ದಕ್ಕೆ ಬರುವುದಿಲ್ಲವೆಂಬುದನ್ನು ಕತೆಯ ನಿರೂಪಣೆಯ ಮುಖೇನ ಅಭಿವ್ಯಕ್ತಗೊಳಿಸುವುದು ಕಥೆಯ ಧನಾತ್ಮಕ ಅಂಶ. ಇಲ್ಲಿ 'ವಿಧವಾವಿವಾಹ'ದ ಪರವಾಗಿ ದಮನಿತ ಹೆಣ್ಣಾದ ಸರಸವ್ವನ ಪರವಾಗಿಯೂ ಕಥೆಗಾರ್ತಿಯ ಮನೋಧರ್ಮ ಕಾರ್ಯೋನ್ಮುಕವಾಗಿರುವುದು ಮನ ಸೆಳೆಯುವ ಅಂಶ. ಹಿರಿಯ ಮಗಳು ಕಮಲ ಮನೆಗೆ ಆಗಮಿಸಿ ಅಪ್ಪ ಮರುಮದುವೆಯಾಗದಿರದಂತೆ ಮನವೊಲಿಸುವಲ್ಲಿ ಯಶಸ್ವಿಯಾದಾಳು ಎಂದು ಕುಟುಂಬದವರು ನಿರೀಕ್ಷಿಸಿರುತ್ತಾರೆ. ಆದರೆ ಕುಟುಂಬ ಸದಸ್ಯರ ನಿರೀಕ್ಷೆಗೆ ವಿರುದ್ಧವಾಗಿ ಕಮಲ ನಡೆದುಕೊಳ್ಳುತ್ತಾಳೆ. ಮನೆಯ ವಾತಾವರಣದ ಬಗ್ಗೆ ಅಲ್ಲಿನ ಎಲ್ಲರ ಮನೋಭಾವದ ಬಗ್ಗೆ ಸಾಕ್ಷಿಪ್ರಜ್ಞೆಯಂತೆ ಮೂಡಿಬರುವ ಕಮಲ ಕುಟುಂಬದ ಸದಸ್ಯರಿಗೆ ತನ್ನ ನಿಲುವಿನಿಂದ ಆಘಾತವನ್ನು ನೀಡುತ್ತಾಳೆ ಮತ್ತು ಅಪ್ಪನಿಗೆ ಅತ್ಯಂತ ಅಪಾಯಮಾನವಾಗಿ ಪರಿಣಮಿಸುವುದು ಕಥೆಯ ಜೀವಾಳ.

ಬಾಲ್ಯವಿವಾಹದ ಅನಾವರಣ

ಕತೆಯ ಆರಂಭದಲ್ಲಿ "ಪುಟ್ಟಹುಡುಗ ಪುಟ್ಟಹುಡುಗನಾಗಿರುತ್ತಾನೆ. ಆದರೆ ಪುಟ್ಟಹುಡುಗಿ ಪುಟ್ಟತಾಯಿಯಾಗಿರುತ್ತಾಳೆ"[೧೪] ಎಂಬ ಉದ್ಧರಣೆಯೊಂದಿಗೆ ಆರಂಭವಾಗುವ 'ಸೋನಿಯಾ' ಸಣ್ಣಕತೆ, ಸೋನಿಯಾ ಎಂಬ ಪ್ರೌಢಶಾಲಾ ವಿದ್ಯಾರ್ಥಿನಿಯ ಕ್ರಿಯಾಶೀಲತೆ, ನಾಯಕತ್ವದ ಗುಣ, ಸಾಂಸ್ಕೃತಿಕ, ಕ್ರೀಡಾತ್ಮಕ ಮತ್ತು ಶೈಕ್ಷಣಿಕಾತ್ಮಕ ರಂಗಗಳಲ್ಲೂ ಅದ್ವಿತೀಯಳಾದ ಬಾಲಕಿಯ ಬದುಕು ವಿವಾಹ ಎಂಬ ಅಗ್ನಿಪರೀಕ್ಷೆಯಲ್ಲಿ ಕಮರಿ ಹೋಗುವಂತಾದ್ದು ಕತೆಯ ಜೀವಾಳ. ತನ್ನ ಆತ್ಮೀಯ ಗೆಳತಿ 'ಮಿಲಿ'ಯಗಳೊಂದಿಗೆ ಬೆಸೆದುಕೊಂಡ ಸೋನಿಯಾಳ ಸ್ನೇಹಪರತೆ ಮತ್ತು ಆತ್ಮೀಯತೆಯ ಹಂದರದಲ್ಲಿ ಓದುಗರಿಗೆ ಕಾಣಿಸಲ್ಪಡುವ ಸೋನಿಯಾಳ ಕನಸಿನಲೋಕ ಭಗ್ನವಾಗುವಂತಾದ್ದು. ಕೌಟುಂಬಿಕ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಚೌಕಟ್ಟಿನ ಮನೆತನದ ಹಿರಿಯರ ಒತ್ತಾಯಕ್ಕೆ ಬಲಿಯಾಗಿ ವಿವಾಹವೆಂಬ ಬಂದನಕ್ಕೆ ಒಳಗಾಗುವಂತಾದ್ದನ್ನು ಕತೆಗಾರ್ತಿ ವೀಣಾ ಶಾಂತೇಶ್ವರರ ನಿರೂಪಣೆಯ ಚಿತ್ರಿಸಿದ ಪರಿ ಮನಸ್ಸನ್ನು ತಟ್ಟುತ್ತದೆ.

ತನ್ನ ಅನುಮತಿಯನ್ನು ಕೇಳದೇ ಅಷ್ಟೇನು ಓದಿಲ್ಲದ ಸಿರಿವಂತರ ಮಗನಿಗೆ ಮದುವೆ ಮಾಡಿಕೊಡುವ ಧಾರುಣ ಸ್ಥಿತಿಯನ್ನು ಈ ಕತೆ ಕಟ್ಟಿಕೊಡುತ್ತದೆ. ಚೈತನ್ಯದ ಚಿಲುಮೆಯಾಗಿ ಸದಾ ಒಂದಲ್ಲ ಒಂದು ಸೃಜನಶೀಲ ಕ್ರಿಯೆಯಲ್ಲಿ ಸದಾ ನಿರತಳಾಗಿರುತ್ತಿದ್ದ ಸೋನಿಯಾ ಎಂಬ ಬಾಲಕಿ ಒಂದು ವರ್ಷ ಕಳೆಯುತ್ತಲೇ ತಾನೇ ಮಗುವಿನ ತಾಯಿಯಾಗುವಂತಾದ್ದು ಭಾರತೀಯ ಸಮಾಜದ ಕ್ರೂರತೆಯ ಪರಮಾವಧಿ. ಈ ಕತೆಯ ಹುರುಣದೊಳಗೆ ವೀಣಾ ಶಾಂತೇಶ್ವರವರು ಬಾಲ್ಯವಿವಾಹ ಪದ್ಧತಿಯ ಅನಿಷ್ಟತೆಯನ್ನು ಅದು ಉಂಟು ಮಾಡುವ ತಳಮಳಗಳು ಮತ್ತು ಕೋಲಾಹಲಗಳನ್ನು ತೆರೆದಿಡುತ್ತಾ ಹೋಗುತ್ತದೆ. ಸಿದ್ಧಮಾದರಿಯ ತಾಯಿಯ ಪಾತ್ರಧಾರಿಯಾಗಿ ಅದರ ಹೊಣೆಗಾರಿಕೆಯನ್ನರಿತ ಸೋನಿಯಾ ಅದರಲ್ಲಿ ಕಳೆದುಹೋಗುವ ಚಿತ್ರಣವು ಸಹಜವಾಗಿಯೇ ಮೂಡಿಬಂದಿದೆ. 'ಕನಸುಗಳು ಕಮರಿ' ಕರಿಯರ್ ವ್ಯರ್ಥವಾಗಿ ಹೋಗುವ ಒಬ್ಬ ಅಭೂತಪೂರ್ವ ವ್ಯಕ್ತಿಯಾಗಿ ಮಾರ್ಪಡಬೇಕಾದ ಶಕ್ತಿಯೊಂದು ನಿಶ್ಯಕ್ತವಾಗುವ, ವ್ಯಕ್ತಿತ್ವ ಹರಣವಾಗುವ, ಸೃಜನಶೀಲತೆ ಭತ್ತಿಹೋಗುವ, ಭವಿಷ್ಯದ ಆಶಾಕಿರಣ ನಂದಿಹೋಗುವ ಬಗ್ಗೆ ನಿರೂಪಿತವಾದ ಈ ಕಥಾಚಿತ್ರಣ ಹೃದಯಂಗಮ.

ಬಾಹ್ಯಲೋಕದಲ್ಲಿ ಚೈತನ್ಯದ ಚಿಲುಮೆಯಾಗಿ ಹೊಳೆಯುವ ಸೂರ್ಯ ಕಾಂತಿಯಂತೆ ಅರಳಿ ಬೆಳೆಯಬೇಕಾದ ಹುಡುಗಿಯೋರ್ವಳ ಬಾಳು ನಾಲ್ಕು ಗೋಡೆಗಳ ಮಧ್ಯೆ ಕಳೆದು ಹೋಗುವ ಸೀಮಿತ ಬದುಕಿನ ಸ್ತ್ರೀಯಾಗಿ ಮಾರ್ಪಾಟಾಗುವಂತಾದ್ದು 'ವಿವಾಹವೆಂಬ ಪರಧಿಯಲ್ಲೆ' ಎಂಬುದನ್ನು ಕತೆಗಾರ್ತಿ ಕಥಾಹಂದರದಲ್ಲಿ ತೆರೆದಿಡುತ್ತಾ ಹೋಗುತ್ತಾರೆ.

ಸ್ತ್ರೀ ಬಂಡಾಯದ ಅಭಿವ್ಯಕ್ತಿ

ಪುರಾಣ ವಸ್ತುವನ್ನು ಬಳಕೆ ಮಾಡಿಕೊಂಡು ಸಾಂದರ್ಭಿಕ ಸಮಕಾಲೀನ ಸ್ತ್ರೀಲೋಕಕ್ಕೆ ಅನ್ವಯವಾಗುವಂತೆ ರಚಿಸಲ್ಪಟ್ಟ ಕಥಾಚಿತ್ರವೇ 'ನಿರಾಕರಣೆ'. ಕಥೆಯಲ್ಲಿ ಮುಖ್ಯ ಪಾತ್ರಧಾರಿಯಾದ ಶಕುಂತಲೆಯ ಒಳತೋಟಿ ಅದರ ಕುದಿತ ಮತ್ತು ಮಥನದ ಹಲವು ಮಗ್ಗಲುಗಳನ್ನೆ ಒಳಗೊಂಡ ಸುಂದರ ಕಥಾಚಿತ್ರಣ. ಕಥೆಯುದ್ದಕ್ಕೂ ಶಕುಂತಲೆಯ ಮನೋಜಗತ್ತಿನಲ್ಲಿ ಆಗುವ ಸ್ಥಿತ್ಯಂತರಗಳು ಅಥವಾ ಭಾವಪಲ್ಲಟಗಳು ಆತ್ಮಸಮ್ಮೋನ್ನದ ಬಗ್ಗೆಯ ಆಕೆಯ ಅಂತರಂಗದ ಆತ್ಮಪ್ರಜ್ಞೆ, ದೃಢಚಿತ್ತ ಹಾಗೂ ಚಿತ್ತಚಾಂಚಲ್ಯವುಳ್ಳ 'ದುಶ್ಯಂತನ'ಂತಹ ಪುರುಷನ ಮಣಿಸುವ ಮನೋಸಂಕಲ್ಪ ಮತ್ತು ಮನೋಬಲವನ್ನು ತೆರೆದಿಡುತ್ತದೆ.

ದುಶ್ಯಂತನ ಆಗಮನಕ್ಕಾಗಿ ಹಗಲು ಇರುಳು ಜಾತಕಪಕ್ಷಿಯಂತೆ ಕಾಯುತ್ತಿದ್ದ ಅದರ ನಿರೀಕ್ಷೆಯಲ್ಲೇ ದೇಹ ಮತ್ತು ಮನಸ್ಸುಗಳನ್ನು ಸವೆಸಿಕೊಂಡ ಶಕುಂತಲೆಯ

ಪಾಡು ಗೋಳಿನ ಹಾಡು, ಗಾಂಧರ್ವ ವಿವಾಹಗೊಂಡು, ದುಶ್ಯಂತನ ಪತ್ನಿಯಾಗಿ ಅರಮನೆಯ ಮೆತ್ತನೆ ಹಾಸಿಗೆಯಲ್ಲಿ ಪವಡಿಸಬೇಕಾದ ಶಕುಂತಲೆಯನ್ನು ದುಶ್ಯಂತ ತನ್ನ ಪತ್ನಿಯೆಂದು ಒಪ್ಪಕೊಳ್ಳಲು 'ನಿರಾಕರಣೆ' ಮಾಡುತ್ತಾನೆ. ಅದು ಅವಳ ಪಾಲಿಗೆ ಸಹಿಸಲಾಗದ ದುಃಖದುಮ್ಮಾನವನ್ನು ತಂದೊಡ್ಡಿದೆ. ಕಥೆಯ ಒಂದು ಹಂತದಲ್ಲಿ ದುಶ್ಯಂತ ತನ್ನ 'ನಿರಾಕರಣೆ'ಗೆ ದುರ್ವಾಸನ ಶಾಪವೇ ಕಾರಣವೆಂದು ಬಾಹ್ಯ ವ್ಯಕ್ತಿಯ ಹೆಸರನ್ನು ಹೆಸರಿಸುವುದು ಅಂದು ಉಂಗುರವಿಲ್ಲದಿದುದ್ದು ಎಂಬ ಹಾರಿಕೆಯ ನೆನಪುವೊಡ್ಡುವುದು ಶಕುಂತಲೆಯ ಪಾಲಿಗೆ ಸಹಿಸಲಾಗದ ಸಂಗತಿ. ಸ್ಮೃತಿ–ವಿಸ್ಮೃತಿಗಳ ಸುಳಿಯಲ್ಲಿ ಸಿಲುಕಿಕೊಂಡು ಚಿತ್ತಚಾಂಚಲ್ಯದಿಂದ ಹೆಣ್ಣಿನ ಬದುಕನ್ನೆ ಭಗ್ನ ಮಾಡುವ ಅವಳ ಆಶೋತ್ತರಗಳಿಗೆ ತಿಲಾಂಜಲಿ ಇಡುವ ಪುರುಷ ಪ್ರಂಪಚದ ಪ್ರತಿನಿಧಿಯಾಗುವ ದುಶ್ಯಂತ ಒಂದೆಡೆಯಿದ್ದಾನೆ. ತನ್ನೆಲ್ಲಾ ಅಳಲುಗಳನ್ನು, ಅಂತರಂಗದ ಕೋಲಾಹಲಗಳನ್ನು, ಆಹಾಕಾರವನ್ನು, ತಲ್ಲಣ, ಕಳವಳವಳನ್ನು ತನ್ನೆದೆಯಲ್ಲಿ ಅಡಗಿಸಿಕೊಂಡು ದೃಢನಿರ್ಧಾರಕ್ಕೆ ಬರುವ ಪುರುಷ ವರ್ಗಕ್ಕೆ ಸವಾಲೆಸೆಯುವಂತೆ ಅಸೀಮ ಮನೋಬಲದ ಶಕುಂತಲೆ ಸ್ತ್ರೀ ಜಗತ್ತಿನ ಮಾದರಿಯಾಗುತ್ತಾಳೆ.

ಕಣ್ವರ ಆಶ್ರಮದಲ್ಲಿ ಬೆಳೆಯುತ್ತಿರುವ ಶಕುಂತಲೆಯ ಮೈಮನಗಳಲ್ಲಿ ಕಾಮಪ್ರೇಮದ ಬಗ್ಗೆ ಅರಿವು ಮೂಡಿಸುವ ದುಶ್ಯಂತ, ತದನಂತರ ಅವಳ ಗರ್ಭದಲ್ಲಿ ವಂಶದ ಕುಡಿ ಬೆಳೆಯುವಿಕೆಗೂ ಕಾರಣನಾಗಿದ್ದಾಗಿಯೂ ತುಂಬುಗರ್ಭಿಣಿ ಶಕುಂತಲೆಯ ಬಗ್ಗೆ ತನಗೇನು ತಿಳಿಯದು "ಈಕೆ ಯಾರೋ ಗೊತ್ತಿಲ್ಲ........."[೧೫] ಎಂಬ ಬಿರು ನುಡಿಯುತ್ತಾನೆ. ಅವಳ ಒಡಲಲ್ಲಿ ದುಶ್ಯಂತರ ಬಗ್ಗೆ ಮೂಡಿದ ನಕರಾತ್ಮಕತೆಯ ಬಗ್ಗೆಯು ಕಥೆ ಸೂಚ್ಯವಾಗಿ ನಿರೂಪಿತವಾಗಿದೆ. ಪುರುಷ ಜಗತ್ತು ಸ್ತ್ರೀಯನ್ನು ಲೈಂಗಿಕ ಸುಖಕ್ಕಾಗಿ ಬಳಸಿಕೊಂಡು ಯಾವುದೋ ನೆಪದ ಮೇಲೆ ಅವಳನ್ನು ನಿರಾಕರಣೆ ಮಾಡುವುದು, ಇಂತೆಲ್ಲಾ ಅಪಮಾನ, ಅವಮಾನಗಳಿಂದ ಜರ್ಜರಿತವಾದ ಶಕುಂತಲೆಯಂತಹ ಮಹಿಳೆಯರು ಬಂಡಾಯ ಹೂಡುವ ನಿಟ್ಟಿನಲ್ಲಿ ಶಕುಂತಲೆಯ ಪಾತ್ರ ಮುಖ್ಯವಾಗುತ್ತದೆ.

ಗಂಡ ಆಡುವ "ನಮಗಿದು ಅಭ್ಯುದಯದ ಕಾಲ ಮಹಾಸುದಿನ"[೧೬] ಎಂಬ ಮಾತು ಅವಳಿಗೆ ವ್ಯಂಗ್ಯಾರ್ಥವಾಗಿ ಅನಿಸಿರಬೇಕು. ನನ್ನ ಮಾನಾಪಮಾನ ಏನೇ ಆಗಿರಲಿ ತನ್ನ ಸುಪುತ್ರ ಭರತಕುಮಾರನ ಲಾಲನೆ–ಪಾಲನೆ, ಶಿಕ್ಷಣ ಮತ್ತು ಭವಿಷ್ಯತ್ತಿನ ಅವನ ರಾಜ್ಯಾಡಳಿತದ ನಿಟ್ಟಿನಲ್ಲಿ ಅವನಿಗೆ ತನ್ನಿಂದ ಆಗಬೇಕಾದ ಮಾತೆಯ ಕಾರ್ಯಗಳು ಹೊಣೆಗಾರಿಕೆಯನ್ನು ಅವಳೆಂದೂ ಮರೆತಿಲ್ಲ. ವೀಣಾ ಶಾಂತೇಶ್ವರ ಸಂಕ್ಷಿಪ್ತವಾಗಿ

ನಿರೂಪಿಸಿರುವ ಶಕುಂತಲೆಯ ತಾಯಿ ಮೇನಕೆಯ ಪ್ರಸ್ತಾಪ ಅತ್ಯಂತ ಸಮಯೋಚಿತ ಮತ್ತು ಸಾಂದರ್ಭಿಕ. ಈ ಸಾಂದರ್ಭಿಕ ಪ್ರಸ್ತಾಪ ಶಕುಂತಲೆ ತನ್ನ ಮಗನ ಬಗ್ಗೆ ತಳೆದಿರುವ ಧನಾತ್ಮಕ ಉತ್ತರದಾಯಿತ್ವ ವಿಷಯದಲ್ಲಿ ವೈದೃಶ್ಯವಾಗುತ್ತದೆ. ತನ್ನ ತಾಯಿ ತನ್ನ ಹೊಣೆಗಾರಿಕೆಯನ್ನು ಹೊರದೆ ತನ್ನನ್ನು ತ್ಯಜಿಸಿಹೋದಂತೆ, ತಾನೆಂದೂ ಪುತ್ರ ಭರತನನ್ನು ಅಗಲಬಾರದೆಂಬ ದಿಟ್ಟನಿಲುವು ಮತ್ತು ಭವಿಷ್ಯದ ಉತ್ತಮ ಸಾಮ್ರಾಟನ ನಿರ್ಮಾಣದಲ್ಲಿ ತನ್ನ ಪಾತ್ರದ ಮಹತ್ವವನ್ನು ಅರ್ಥ ಮಾಡಿಕೊಂಡ ಶಕುಂತಲೆ ಅತ್ಯಂತ ಭವ್ಯವಾಗುತ್ತಾಳೆ.

ಅರಮನೆಗೆ ಬಂದು ಅರಸ ದುಶ್ಯಂತನ ಮನಕ್ಕೆ ಹತ್ತಿರ ಬರದ ಶಕುಂತಲೆಯು ದುಶ್ಯಂತನ ಪಾಲಿಗೆ ಒಗಟಾಗಿಯೇ ಉಳಿಯುತ್ತಾಳೆ. 'ಮನೆಗೆ ಬಂದರೂ ಮನಕ್ಕೆ ಸಿಕ್ಕದ ಶಕುಂತಲೆ ಅಂತಃಪುರಕ್ಕೆ ಬಂದರೂ ಅಂತರಂಗ ಪ್ರವೇಶಿಸದ ಅವಳ ದಿಟ್ಟ ನಿರ್ಧಾರ ಅವಳು ಅವನನ್ನು ಸ್ತ್ರೀ ಅರಮನೆಯಲ್ಲಿ ಕೂಡಬೇಕಾದ ಪ್ರಥಮ ರಾತ್ರಿಯ 'ನಿರಾಕರಣೆ' ಮಾಡುವುದು ಮತ್ತು ಎಂತದ್ದೊ ಸಂದರ್ಭದಲ್ಲಿ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕೆಂಬ ಶಕುಂತಲೆಯ ಉದಾತ್ತವಾದ ನಿಲುವುಗಳು ಕಥೆಯ ನಿಜವಾದ ಅರ್ಥದ ಮೈಲುಗಲ್ಲುಗಳಾಗುತ್ತದೆ. ಅವಳ ನಿರಾಕರಣೆ ದುಶ್ಯಂತನಿಗೆ ಅಘಾತವನ್ನು ಉಂಟುಮಾಡುತ್ತದೆ. ಅವಳು ಅರಮನೆಗೆ ಬಂದಿರುವ ಉದ್ದೇಶ "ಮಹಾರಾಜ ವರ್ಷಗಳ ಕಾಲ ಪರಿತಪಿಸಿರುವ ನಿನ್ನ ಮೈ-ಮನಸ್ಸುಗಳು ಒಂದು ಅಪ್ಪುಗೆಯಿಂದ ಶಾಂತವಾಗಬಹುದು. ಹಳೆಯದನ್ನೆಲ್ಲಾ ಮರೆತು ನೀನು ಮತ್ತೆ ತುಂಬು ಉತ್ಸಾಹದಿಂದ ಹೊಸಜೀವನ ಶುರು ಮಾಡಬಹುದು. ಆದರೆ ನೀನು ಗಾಸಿಗೊಳಿಸಿದ ನನ್ನ ಒಳಗು ಮತ್ತೆ ಚೇತರಿಸಲಾರದು. ನೀನು ಹೊಸಕಿ ಹಾಕಿದ ನನ್ನ ಭಾವನೆಗಳು ಮತ್ತೆ ಜೀವವ ತಳೆಯಲಾರವು. ಈ ಶಕುಂತಲೆಯ ಆತ್ಮ ಸಮ್ಮಾನಕ್ಕೆ ಮಯಲಾರದ ಗಾಯವಾಗಿದೆ. ಆಕೆಯಿನ್ನೆಂದೂ ಮೊದಲಿನಂತಾಗಲಾರಳು."[೧೭]

ಅವನಿಗಾಗಿ ತಾನು ಕಾತರಿಸುತ್ತಿದ್ದ ದಿನಗಳ ನಿರೀಕ್ಷೆಗಳು, ಕನಸುಗಳು ಅವಳ ಮನೋಪರದೆಯ ಮೇಲೆ ಹಾದುಹೋಗುತ್ತವೆ. ಕನಸುಗಳು ಕಮರಿ, ನಿರೀಕ್ಷೆಗಳು ಹುಸಿಯಾಗಿ ಎದೆಯ ದಾವಾಗ್ನಿ ಸುಡುತ್ತಿರಲು ಈಗವಳು ಅಂದಿನ ಶಕುಂತಲೆಯಲ್ಲ. ದೃಢಚಿತ್ತದ ಹೆಣ್ಣಾಗಿ ಮಾರ್ಪಾಟ್ಟಾಗಿದ್ದಾಳೆ. ಶಕುಂತಲೆ ಕಥೆಯ ಕಟ್ಟಕಡೆಗೆ ಪುರುಷಜಗತ್ತನ್ನು ತನ್ನದೇ ರೀತಿಯಲ್ಲಿ ಬಣ್ಣಿಸುವ ಅವಳ ಪರಿ ಪಿತೃಪ್ರಧಾನ ಸಮಾಜದ ಸ್ವರೂಪವನ್ನೇ ಬಯಲಿಗೆಳೆಯುವಂತಾದ್ದಾಗಿದೆ. "ತಾನು ಮಾಡಿದ ತಪ್ಪಿನಿಂದ ಸುಲಭವಾಗಿ ಪಾರಾಗಲು ಪುರುಷನಿಗೆ ನೂರು ದಾರಿಗಳಿವೆ. ತನ್ನ ಅನುಚಿತ ವರ್ತನೆಯಿಂದ ಬೇರೆಯವರಿಗೆ ಆಗುವ ನೋವಿನ ಹೊಣೆಯಿಂದ ತಪ್ಪಿಸಿಕೊಳ್ಳಲೂ ಆತನಿಗೆ ಹಲವು ಮಾರ್ಗಗಳಿವೆ.

ಪುರುಷ ತಪ್ಪು ಮಾಡಿದನೆಂದರೆ ನಮ್ಮ ಸಮಾಜ ಗಂಭೀರವಾಗಿ ಪರಿಗಣಿಸುವುದೂ ಇಲ್ಲ. ಆದ್ದರಿಂದ ಆತನೂ ಲಜ್ಜಿತನಾಗುವುದಿಲ್ಲ......... ಮತ್ತು ಇದನ್ನೆಲ್ಲ ನಾನೀಗ ಚರ್ಚೆ ಮಾಡಬಯಸುವುದೂ ಇಲ್ಲ."[೧೮] ಪೌರಾಣಿಕ ಸಂದರ್ಭವೊಂದನ್ನು ವೀಣಾ ಶಾಂತೇಶ್ವರ ನವ್ಯಕಥೆಯ ಭಾಗವಾದ 'ನಿರಾಕರಣೆ'ಯಲ್ಲಿ ಬಳಸಿರುವುದು ಸ್ತ್ರೀಸಂಕುಲಕ್ಕೆ ಅಪ್ರತ್ಯಕ್ಷವಾಗಿ ಸೂಚ್ಯವಾಗಿ ಪುರುಷಪ್ರಧಾನ ಸಂಸ್ಕೃತಿಯ ಪರಿಚಯ ಮಾಡಿಸುತ್ತಾರೆ. ಪಿತೃಪ್ರಧಾನ ಸಮಾಜದ ಭಾಗವಾದ ದುಶ್ಯಂತನ ಮುಖವಾಡವನ್ನು ಕಳಚುತ್ತಾ ಬೆಳೆಯುವ ದೃಢಸಂಕಲ್ಪದ ಆತ್ಮವಿಶ್ವಾಸದ ಪ್ರತೀಕವಾದ ಶಕುಂತಲೆಯ ಪಾತ್ರವನ್ನು ಕಟ್ಟಿಕೊಡುವುದು ವೀಣಾ ಶಾಂತೇಶ್ವರ ಕಥನಕ್ರಮದ ತಂತ್ರವೂ ಆಗಿದೆ.

ಪುರುಷನೊಳಗಿನ ತಾಯ್ತನದ ಅಭಿವ್ಯಕ್ತಿ

ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಪರಿಚಯ ಮಾಡಿಸುತ್ತಲೇ ಅದರ ಒಂದು ಭಾಗವಾದ ಊಳಿಗಮಾನ್ಯ ಪದ್ಧತಿಯ ಪರಿಚಯ ಮಾಡಿಸುವ 'ಕಾಯುತ್ತಲಿದ್ದ ಕರಿಯ' ಒಂದು ಅಪರೂಪದ ಹೃದಯಸ್ಪರ್ಶಿ ಕಥೆಯಾಗಿದೆ. ಕೆಳಜಾತಿಯ ಪ್ರತಿನಿಧಿಯಾದ ಕರಿಯ 'ತಿಮ್ಮಾಪುರ' ಗ್ರಾಮದ ಹಿರಿಯರಾದ 'ಸಂಗನಗೌಡ'ರ ಜೀತದಾಳು. ಕುಗ್ರಾಮದ ಜನತೆಗೆ ಹುಸಿ ಅಶ್ವಾಸನೆ ನೀಡುತ್ತಾ ವಂಚಿಸುವ ಹುಸಿ ರಾಜಕೀಯ ನೇತಾರರ ಬಣ್ಣವನ್ನು ಬಯಲು ಮಾಡುವ ಸೂಚ್ಯತೆ ಕಥೆಯಲ್ಲಿದೆ. ಅವಿವಾಹಿತ ವಿಧೇಯ ಕಾರ್ಯನಿಷ್ಠ, ದಷ್ಟಪುಷ್ಟ ಕರಿಯನ ಬಾಳಲ್ಲಿ ನಡೆದುಹೋಗುವ ಆಕಸ್ಮಿಕ ಘಟನೆ ಮುಂದಿನ ಆಗುಹೋಗುಗಳಿಗೆ ನಾಂದಿಯಾಗಿ ಬಿಡುತ್ತದೆ.

ರಾಮನಗೌಡರ ಮಗಳು ಮತ್ತು ಕರಿಯರ ಮಧ್ಯದ ಸಮಾಗಮವನ್ನು ಅತ್ಯಂತ ಸಂಕ್ಷಿಪ್ತವಾಗಿ ಸೂಚ್ಯವಾಗಿ ನಿರೂಪಿಸುವ ಕತೆಗಾರ್ತಿಯ ಕಥನತಂತ್ರ ಅದ್ಭುತವಾದುದು. ರಾಮನಗೌಡರ ಮಗಳು ಮತ್ತು ಕರಿಯರ ಮಧ್ಯೆ ನಡೆದ ಲೈಂಗಿಕ ಸಂಬಂಧದ ಬಗ್ಗೆ ನೇರವಾಗಿ ನಿರೂಪಿಸದ ಕಥೆಗಾರ್ತಿ ಹರೆಯದ ಗಂಡು ಮತ್ತು ಯುವತಿಯೋರ್ವಳು ಏಕಾಂತದಲ್ಲಿ ನಿಸರ್ಗದ ಮಡಿಲಲ್ಲಿ ಕೂಡಿಕೊಂಡಾಗ ತಮ್ಮನ್ನೇ ತಾವು ಮೈಮರೆಯುವ ಭಾವಸ್ಥಿತಿಯನ್ನು ರಾಮನಗೌಡರ ಮಗಳು ಬಸುರಿಯಾದ ಪ್ರಸಂಗದಿಂದಲೇ ಊಹಿಸಿಕೊಳ್ಳಬಹುದು. ಈ ಸಂದರ್ಭದಲ್ಲಿ ಓದುಗನ ಮುಂದೆ ತಟ್ಟನೆ ಎದರಾಗುವ ಹಲವು ಪ್ರಶ್ನೆಗಳಿಗೆ ಸ್ಪಷ್ಟ ಉತ್ತರಗಳಿಲ್ಲ; ಅಸ್ಪಷ್ಟತೆ, ಸಂಕಿರಣತೆ, ಸೂಕ್ಷ್ಮತೆ, ಸೂಚ್ಯತೆ ನವ್ಯ ಕಥನತಂತ್ರದ ಭಾಗವಷ್ಟೇ.

ಹುಡುಗಿಯೇ ಕರಿಯನಿಗಾಗಿ ಅರಸಿಹೋದಳೋ? ಅವನಿಗಾಗಿ ಅವಳು ಮಬ್ಬುಗತ್ತಲಲ್ಲಿ ಗುಡ್ಡದ ಬದಿಯಲ್ಲಿ ಕಾಯುತ್ತಿದ್ದಳೋ? ವಿಧೇಯ ಕಾರ್ಯನಿಷ್ಠ ಕರಿಯ ಎಂದೂ

ತೋರಗೊಡದ ಅಂತರಂಗದ ಸುಪ್ತಕಾಮ ಭಾವನೆಗೆ ಈಡಾದದ್ದಾದರೂ ಹೇಗೆ? ಎಂಬ ಈ ಪ್ರಶ್ನೆಗಳಿಗೆ ಓದುಗನೇ ಉತ್ತರ ಕಂಡುಕೊಳ್ಳಬೇಕು. ಅಸ್ಪಷ್ಟತೆಯಲ್ಲೇ ಹಲವು ಸ್ಪಷ್ಟ ಉತ್ತರಗಳ ಸುಳಿವು ಸಿಕ್ಕಿತು. ಕಥನ ನಿರೂಪಣೆಯಲ್ಲಿ ಬಳಸಲ್ಪಟ್ಟ "ಅಳುಕುತ್ತ ಆತ ಹಳ್ಳಿಗೆ ಹಿಂದಿರುಗಿದಾಗ ಗೌಡರ ಅತಿಥಿಗಳು ಹೊರಟು ಹೋಗಿತ್ತು. ಉಸ್ಸೆಂದು ಉಸಿರು ಬಿಟ್ಟು ಇತ್ತಲಲ್ಲಿ ಕುಸಿದ ಕರಿಯನನ್ನು ಕಂಡು, ಅದೇನಲಾ ಕರಿಯ. ಆಕಳಾ ಹುಡುಕಾಕಂತ ಹೋದಾವ ಅತ್ಲಾಗೇ ಸತ್ಯಲ್ಲೋ? ಅಂತ ಗೌಡತಿ ಗದರಿಸಿದಳು"[೧೯] ಈ ಮಾತುಗಳನ್ನು ಕೇಳಿದ ಕರಿಯನಿಗೆ ತನಗರಿವಿಲ್ಲದಂತೆಯೆ ನಡೆದುಹೋದ ಕೃತ್ಯದ ಬಗ್ಗೆ ತಳೆದ ಪಾಪಪ್ರಜ್ಞೆಯ ದರ್ಶನ ಮಾಡಿಸುತ್ತವೆ.

ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆಯಲ್ಲಿ ವಿವಾಹಪೂರ್ವ ಲೈಂಗಿಕ ಸಂಪರ್ಕ, ವಿವಾಹೇತರ ವ್ಯಕ್ತಿಗಳಿಂದ ಪ್ರಾಪ್ತವಾದ ಗರ್ಭದಾನವನ್ನು ನಿಷಿದ್ಧ ಎಂದು ಭಾವಿಸಲಾಗಿದೆ. ಅದನ್ನು ಸಾಮಾಜಿಕ ಕಳಂಕವೆಂದು ಭಾವಿಸುವ ಸಾಂಪ್ರದಾಯಿಕ ಸಾಮಾಜಿಕ ಕ್ರಿಯೆ-ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತ ಬಂದವರು ಸಂಗನಗೌಡರು ಮತ್ತು ಅವರ ಸಂಬಂಧಿ ರಾಮನಗೌಡರು. ಕದ್ದುಮುಚ್ಚಿ ದೂರದ ಪೇಟೆಯಾದ ವಿಜಾಪುರದ ಖಾಸಗಿ ದಾವಾಖಾನೆಯಲ್ಲಿ ಹೆರಿಗೆ ಮಾಡಿಸುವುದು, ಮಗುವನ್ನು ಅನಾಥಾಲಯಕ್ಕೆ ಕೊಡಬೇಕೆಂದು ನಿರ್ಧರಿಸುವುದು ಇತ್ಯಾದಿ ಸಾಮಾಜಿಕವಾಗಿ, ನಕರಾತ್ಮಕ ಅಂಶಗಳಿಂದ ಕಥಾನಿರೂಪಣೆ ಹಳ್ಳಕವಾಗದೆ ಸಬಲವಾಗುತ್ತದೆ.

ಮಗುವನ್ನು ತನಗೆ ನೀಡಬೇಕೆಂದು ದೀನನಾಗಿ ಬೇಡಿಕೊಂಡ ಕರಿಯನ ಬೇಡಿಕೆಗೆ ಸಂಗನಗೌಡರು ಸಕರಾತ್ಮಕವಾಗಿಯೇ ಸ್ಪಂದಿಸಿದರು. ಒಂಟಿಯಾದ ತನ್ನ ಮನೆ ಮತ್ತು ಮನದಲ್ಲಿ ಮಗಳು ತುಂಬಿಕೊಂಡಾಗ ಹೆಂಗರುಳಿನ ಕರಿಯನಿಗೆ ಎಲ್ಲಿಲ್ಲದ ಹಿಗ್ಗು. ತನ್ನ ಭಾಗ್ಯದ ಬಾಗಿಲು ತೆರೆಯುತ್ತೆಂದೇ ಭಾವಿಸಿದ ಕರಿಯ ತನ್ನ ಮಗುವಿಗೆ 'ಭಾಗ್ಯಲಕ್ಷ್ಮಿ' ಎಂದೇ ನಾಮಕರಣ ಮಾಡಿದ. ತಾಯಿಯ ಪ್ರೀತಿ, ವಾತ್ಸಲ್ಯಗಳಿಂದ ವಂಚಿತವಾದ ಮಗು ಅನಾಥಪ್ರಜ್ಞೆಯಲ್ಲಿ ಕಳೆದು ಹೋಗದಂತೆ ತಂದೆಯ ಸ್ಥಾನದಲ್ಲೂ ತಾಯಿಯ ಸ್ಥಾನವನ್ನು ಹೊತ್ತು ಕರಿಯ ಮಗುವಿನ ಹಾರೈಕೆ ಮಾಡಿದ.

ಕಥನಾ ನಿರೂಪಣೆಯಲ್ಲಿ ಕತೆಗಾರ್ತಿ ಹಲವು ಮನಃಶಾಸ್ತ್ರೀಯ ಅಂಶಗಳ ಬಳಕೆ ಮಾಡಿಕೊಂಡಿರುವುದು ಅಥವಾ ಅಂತಹ ಅಂಶಗಳು ಪಾತ್ರ ಚಿತ್ರಣಕ್ಕೆ ಪೂರಕವಾಗಿ ಬಂದಿರುವುದು ಓದುಗರಿಗೆ ವೇದ್ಯವಾಗುತ್ತದೆ. ಆರ್ಥಿಕವಾಗಿ ಸಬಲೀಕರಣಗೊಂಡ ಸಂಗನಗೌಡರ ಕುಟುಂಬದ ಮಕ್ಕಳೊಂದಿಗೆ ಬೆಳೆಯುತ್ತಾ ಹೋಗುವ ಲಕ್ಷ್ಮಿ ಕ್ರಮೇಣವಾಗಿ

ಅಪ್ಪನೊಂದಿಗಿನ ಲಕ್ಷ್ಮಿಯ ಬಾಂಧವ್ಯ, ಪ್ರೀತಿ ಕ್ರಮೇಣವಾಗಿ ಕಡಿಮೆಯಾಗುತ್ತಾ ಹೋಗುತ್ತದೆ. ಮೇಲರಿಮೆ ಬೆಳಸಿಕೊಳ್ಳುತ್ತಾ ಹೋಗುವ ಲಕ್ಷ್ಮಿ ತನ್ನ ತಂದೆ ಕರಿಯನ ಬಗ್ಗೆ ಕೀಳರಿಮೆ ತಾಳುತ್ತಾಳೆ. ಅವನನ್ನು ತಾತ್ಸಾರದಿಂದ ನೋಡುವ ಅವಳಿಗೆ ಅವನು ಕಂಡಾಗ ಮುಜುಗರವೆನಿಸುತ್ತದೆ. ಮುಂದುವರಿದಂತೆ, ಮನೆಗೆ ಬಂದಾಗ ಅಸಹನೆಯಿಂದ ಚಡಪಡಿಸುವುದು ಲಕ್ಷ್ಮಿಯ ವರ್ತನೆಯಲ್ಲಾದ ಬಾಹ್ಯ ಚಹರೆಗಳು.

ಭಾವನಾತ್ಮಕವಾಗಿ ಕರಿಯ ಲಕ್ಷ್ಮಿಗೆ ಹೆಚ್ಚು ಹೆಚ್ಚು ಹತ್ತಿರವಾಗುತ್ತಾ ಹೋದ ಹಾಗೆ ಲಕ್ಷ್ಮಿ ಅಪ್ಪನಿಗೆ ಅಷ್ಟೇ ದೂರವಾಗುತ್ತಾಳೆ. ಕಡುಬಡತನದಲ್ಲೂ ಶ್ರಮವಹಿಸಿ ದುಡಿದ ದುಡ್ಡನ್ನು ಮಗಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುವ ಮತ್ತು ಗೌಡರು ಉಡುಗೊರೆಯಾಗಿ ಕೊಟ್ಟ ಕಿವಿಯಲ್ಲಿನ ಮುರುವುಗಳನ್ನು ಮಗಳ ಪ್ರವಾಸದ ಕರ್ಚಿಗಾಗಿ ಕರಿಯ ಮಾರಿದ್ದು ಹೃದಯವನ್ನು ತಟ್ಟುತ್ತದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ವರ್ತಿಸುವ ಲಕ್ಷ್ಮಿ ಅಪ್ಪನನ್ನು ಕಂಡಾಗ "ಛೀ ಹೊಲಸು; ಥೂ ಅಸಹ್ಯ"[೨೦] ಎಂದು ಮುಖ ಸಿಂಡರಿಸಿ ಓಡಾಡುವುದು ಕರಿಯನ ಪಾಲಿಗೆ ಕಳವಳದ ಸಂಗತಿಯಾಗಿದೆ. ಉನ್ನತಶಿಕ್ಷಣದ ಸಾಮಾಜಿಕ ಪ್ರತಿಷ್ಠಿತ ಮುಂಬಯಿ ಮೆಡಿಕಲ್ ಕಾಲೇಜಿನಲ್ಲಿ ಲಕ್ಷ್ಮಿ ಓದುವ ಅವಕಾಶ ಪಡೆದುಕೊಳ್ಳುತ್ತಾಳೆ. ವಿದ್ಯಾಭ್ಯಾಸ ಮಾಡಿದರೂ ಸಂಸ್ಕಾರದ ವಿಷಯದಲ್ಲಿ ಉತ್ತಮ ವರ್ತನೆಯಲ್ಲಿ ಸಾಕ್ಷರಳಾಗಬೇಕಾದ ಲಕ್ಷ್ಮಿ ಆಗದೇ ಹೋದದ್ದು ಕಥೆಯ ವ್ಯಂಗ್ಯವೂ ಆಗಿಬಿಡುತ್ತದೆ. ಇತ್ತ ಹಳ್ಳಿಗಮಾರನಾದ ಕರಿಯ ಅನಕ್ಷರಸ್ಥನಾದರೂ ಕರುಣೆ, ವಾರ್ಧವತೆ, ಹೃದಯವಂತಿಕೆಯ ಸಂಪನ್ನತೆಯನ್ನು ತೋರಿಸುತ್ತಾನೆ. ಯಾರು ವಿದ್ಯಾವಂತರು ಯಾರು ಅವಿದ್ಯಾವಂತರು ಎಂಬ ಬಗ್ಗೆ ಕಥೆಯಲ್ಲಿಯೇ ಸ್ಪಷ್ಟಸಾಕ್ಷಿ ಸಿಗುತ್ತದೆ.

ವಿದ್ಯಾವಂತೆಯೂ, ಬುದ್ಧಿವಂತೆಯೂ ಆದ ಮಗಳಿಗೆ ಅಪ್ಪನನ್ನು ಆಧರಿಸುವ ಪ್ರೀತಿ ತೋರಿಸುವ ವಿಷಯದಲ್ಲಿ ಕಡುಬಡತನವಿದೆ. ಅವನ ಬಗ್ಗೆ ಅನಾಥರ ಔದಾಸಿನ್ಯ ಮತ್ತು ಅಲಕ್ಷ್ಯ ಲಕ್ಷ್ಮಿಗೆ ಅಪ್ಪನನ್ನು ಕಂಡು 'ಛೀ. ಧೋತ್ರಾ ಸ್ವಚ್ಛ ಒಗದು ಉಟ್ಕೋಬಾರದ? ಎಷ್ಟು ಹೊಲಸಾಗೇದ!' ಅಂದಳು. 'ಇದೇನು, ಕುಡಿಯೋ ನೀರು ಗಡಿಗ್ಯಾಗ ತುಂಬಿಡೋದು ಇನ್ನೂ ಬಿಟ್ಟಿಲ್ಲ? ಅಸಹ್ಯ! ಅಂದಳು. "ಇದೆಂಥಾ ಖೋಲೋಯೊಳಗ ಇಷ್ಟ ದಿನಾ ಆದ್ರೂ ಹಂಗ ಇದ್ದೀ ಒಳ್ಳೆ ಡಂಜನ್ ಇದ್ದಾಂಗದ, ಗಾಳಿಲ್ಲ, ಬೆಳಕಿಲ್ಲ, ಉಸಿರು ಕಟ್ಟಿಧಾಂಗ ಆಗತದ ಅಂದಳು. ಅಂದವಳು ಎದ್ದೇ ಬಿಟ್ಟಳು. ಸುಟ್ಯಾಗ ಮುಂದಿನ ಅಭ್ಯಾಸ ಮಾಡೂದದ. ನಾಳೇ ಹೋಗ್ಬೇಕು; ಅಂದಳು."[೨೧] ಅವಳು ಆಡುವ ಮಾತು, ಅಪ್ಪನ ವಿಷಯದಲ್ಲಿ ತಾರತಮ್ಯವೆಸಗುವುದು ನಿಕೃಷ್ಟವಾಗಿ ಕಾಣುವುದು, ಉದಾಸೀನವಾಗಿ ವರ್ತಿಸುವುದು ಕಂಡುಬರುತ್ತದೆ. ಮಗಳಾಗಿ ಮಮತೆ ಮತ್ತು ಅನುಕಂಪ ತೋರಿಸಬೇಕಾದ

ಲಕ್ಷ್ಮಿ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾಳೆ. ಅಪ್ಪನನ್ನು ವಿನಾಃಕಾರಣ ತಾತ್ಸಾರ ಮಾಡುವುದು, ಬಿರುಸಾಗಿ ನುಡಿಯುವುದು, ಕಡೆಗಣಿಸುವುದು ಅಪ್ಪನ ಪಾಲಿಗೆ ದುರಂತವಾಗಿ ಪರಿಣಮಿಸುತ್ತದೆ.

ಕತೆಗಾರ್ತಿ ಸ್ತ್ರೀಪರವಾದಿಯಾಗಿದ್ದರೂ ಪುರುಷದ್ವೇಷಿಯಲ್ಲ ಮತ್ತು ಅವಳು ದಮನಿತರ ಪರವಾದಿ, ಮಾನವತಾಪರವಾದಿ ಕರಿಯ ಪುರುಷನಾಗಿದ್ದಾಗ್ಯೂ ಅವನಲ್ಲಿ ಹೆಂಗರುಳಿದೆ. ಹೇಳಲಾರದಷ್ಟು ಅಕ್ಕರೆಯಿದೆ. ಗಂಡಸನಾಗಿದ್ದೂ ಹೆಣ್ಣಿನ ಮಾರ್ಧವತೆಯಿದೆ. ಸಕೋಮಲ ಮನಸ್ಸಿದೆ. ಕರುಳಕುಡಿಯ ಮೇಲೆ ಅತ್ಯಂತ ಆತ್ಮೀಯ ಮಾತೃತ್ವದ ಭಾವವಿದೆ. ಸ್ತ್ರೀಯಾದ ಲಕ್ಷ್ಮಿಯು ತಂದೆಯ ಬಗ್ಗೆ ಉದಾಸೀನ ನಿಲುವು ತಾಳುವುದರ ಮುಖೇನ ಕಠೋರ ಪ್ರವೃತ್ತಿಯನ್ನು ತೋರುವುದು ಪುರುಷ ಸಂಸ್ಕೃತಿಯ ಆವಾಹನೆ ಮಾಡಿಕೊಂಡ ಅಥವಾ ಮಾಡಿಸಿಕೊಂಡ ವರ್ಗಕ್ಕೆ ಸೇರಿದವಳೇನೋ ಎಂಬ ಭಾವ ಬರಲಿಕ್ಕು ಸಾಕು. ಕಥೆಯ ಕೊನೆ ಹೃದಯ ಸ್ಪರ್ಶಿಯಾದುದು. ಕರಿಯನ ಕಟ್ಟಕಡೆಯ ಜೀವನ ಕರುಣಾಜನಕವಾಗುತ್ತದೆ. ಅಸ್ಮಿತೆಯು ಮತ್ತು ಅಸ್ತಿತ್ವ ಭಾವ ಕಳೆದುಕೊಂಡ ಕರಿಯ ಬಾರದೇ ಇರುವ ಮಗಳಿಗಾಗಿ ಬರುತ್ತಾಳೆಂದು ಕಾಯುತ್ತಾ ಕುಳಿತಿರುವುದು. ಕರಿಯನ ಪಾಲಿನ ಅನುದಿನದ ಕ್ರಿಯೆ ಪ್ರಕ್ರಿಯೆಯಾಗುತ್ತದೆ.

ಸಾಮಾಜಿಕ ಅಭಿವ್ಯಕ್ತಿ

ಕಾಲಾಂತರದಲ್ಲಿ ಮನುಷ್ಯನ ಮನಃಸ್ಥಿತಿಯಲ್ಲಾಗುವ ಬದಲಾವಣೆಯನ್ನು ಅನುಸರಿಸಿ ಅವನು ವಾಸಿಸುವ ಮಾನವ ಸಮಾಜದ ಮೇಲೆ ಆಗುತ್ತಿರುವ ಬದಲಾವಣೆಗಳು, ತನ್ನ ಸುತ್ತಲಿನ ಪರಿಸರದಲ್ಲಿ ಸ್ಥಿತ್ಯಂತರಗಳನ್ನು 'ಒಂದು ಗಿಡ–ಒಂದು ಬಾವಿ' ಕಥೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಆಧುನಿಕ ಜಗತ್ತಿನೊಂದಿಗೆ ಬೇಸೆದುಕೊಂಡ ನಗರಿಕರಣ ಮನುಷ್ಯರ ಮತ್ತು ನಿಸರ್ಗದ ಸೌಹಾರ್ದ ಸಂಬಂಧವನ್ನು ಸಾಮರಸ್ಯವನ್ನು ಅಳ್ಳಕ ಮಾಡುತ್ತಿರುವುದು ಮನುಷ್ಯನ ಕೊಳ್ಳುಬಾಕ ಸಂಸ್ಕೃತಿಗೆ ನಗರೀಕರಣ ಒಂದು ಸಾಧನವಾಗಿಯೋ, ಗುರಿಯಾಗಿಯೋ ಅಥವಾ ಅಸ್ಥಿಭಾರವಾಗಿಯೋ, ಕಾಣಿಸುವುದು ಮನುಷ್ಯನ ದೌರ್ಭಾಗ್ಯದ ಸಂಗತಿ. 'ಒಂದು ಗಿಡ–ಒಂದು ಬಾವಿ' ಕತೆಯು ಎರಡು ಮೂರ್ತ ಪ್ರತಿಮೆಗಳ ಜಾಡು ಹಿಡಿದು ಅವುಗಳನ್ನು ಸಂಕೇತಗಳಾಗಿಯೂ ಬಳಸಿ ರೂಪಕದ ನೆಲೆಯಲ್ಲಿ ಅರ್ಥ ಬಿಂಬಿಸುತ್ತದೆ. ಇಂದು ವಿಶ್ವವೇ ಪರಿಸರ ಮಾಲಿನ್ಯ, ಪರಿಸರ ನಾಶ, ಜಾಗತಿಕ ತಾಪಮಾನ ಎಂಬ ಜಲ್ವಂತ ಸಮಸ್ಯೆಗಳ ದಳ್ಳುರಿಯಲ್ಲಿ ಬೆಯುತ್ತಿರುವಾಗ ಪ್ರಸ್ತುತ ಸಣ್ಣಕಥೆ ಅಂತದ್ದೇ ಸಮಸ್ಯೆಗಳನ್ನು ಬಿಂಬಿಸಲು

ಉದ್ವಿಕ್ತವಾಗಿರುವುದು. ಮನುಜ ಲೋಕದ ಬಹಿರಂಗ ವ್ಯಾಪಾರದ ಪರಿಣಾಮವಾಗಿ ಅಂತರಂಗದಲ್ಲಿ ಆಗಿರುವ ಋಣಾತ್ಮಕ ಬದಲಾವಣೆಗಳನ್ನು ಕಥೆ ಸೂಚ್ಯವಾಗಿ ನಿರೂಪಿಸುತ್ತದೆ.

ಕಥೆಯ ಆರಂಭ ಕುತೂಹಲಕಾರಿಯಾಗಿದೆ. ಜೀವವಿಲ್ಲದ ಬಾವಿಯೊಂದು ಕಥೆಯುದ್ದಕ್ಕೂ ಮಾನವಜೀವಿಯಂತೆ ಆಲೋಚನೆ, ಲೋಕದ ಪರಾಮರ್ಶೆ ಮಾಡುವ ಪ್ರಕ್ರಿಯೆಗಿಳಿಯುವುದು. ಆ ಮುಖೇನ ವೀಣಾಶಾಂತೇಶ್ವರವರು ಬಾವಿಯನ್ನು ಮಾನವೀಕರಣ ಮಾಡಿರುವುದು ಕಥೆಯ ವಿಶಿಷ್ಟವಾಗಿದೆ. ಉದ್ದಕ್ಕೂ ಬಾವಿ ಸ್ವಗತೋಪಾದಿಯಾಗಿ ತನ್ನ ಪರಿಸರದಲ್ಲಿ ಕಂಡುಂಡ ಸಂಗತಿಗಳ ನಿವೇದನೆ ಮಾಡುತ್ತಾ ಹೋಗುತ್ತದೆ. ಭೂತ–ವರ್ತಮಾನಗಳ ತಾಕಲಾಟಗಳೊಂದಿಗೆ ಪರಿಸರದಲ್ಲಾದ ಬದಲಾವಣೆಗಳನ್ನು ಕುರಿತು ಅಭಿವ್ಯಕ್ತಿಸುತ್ತಾ ಹೋಗುವುದು ಬಾವಿಯ ಅಭಿವ್ಯಕ್ತಿ ಕ್ರಮ ಕಥೆಯ ನಿರೂಪಣಾ ತಂತ್ರ.

ಎಲ್ಲಾ ಕಾಲಕ್ಕೂ ಸಲ್ಲುವ ಸಂದೇಶವೊಂದನ್ನು ಹೊತ್ತು ಸೂಚ್ಯವಾಗಿ ಮನುಕುಲಕ್ಕೆ ಎಚ್ಚರಿಕೆಯ ಪಾಠದಂತೆಯೂ ಪರಿಸರ ಕಾಳಜಿಯ ಕಥೆ 'ಒಂದು ಗಿಡ–ಒಂದು ಬಾವಿ' ಸಮಕಾಲೀನ ಸಮಾಜಕ್ಕೆ ಪ್ರಸ್ತುತವಾದುದು. ಎಲ್ಲವನ್ನು ಮೌನವಾಗಿ, ಅಷ್ಟೇ ಚೈತನ್ಯಭರಿತವಾಗಿ ಸಾಕ್ಷಿಪ್ರಜ್ಞೆಯಿಂದ ಅವಲೋಕಿಸುವ 'ಬಾವಿ' ಮನುಷ್ಯ ಜಗತ್ತಿನ ಆಕ್ರಮಣಶೀಲತೆ, ಆಹಾಕಾರ, ಅಸ್ತವ್ಯಸ್ತ ಮನೋಸ್ಥಿತಿ, ವಿದ್ವಾಂಸಕತೆ, ಶುಷ್ಕ ನಗರೀಕರಣ ಮತ್ತದರ ಋಣಾತ್ಮಕ ಪರಿಣಾಮಗಳನ್ನು ನಿವೇದಿಸುತ್ತಾ ಹೋಗುತ್ತದೆ. ಪರಸ್ಪರಾವಲಂಬಿತವಾದ ಗಿಡ ಮತ್ತು ಬಾವಿ ಪರಸ್ಪರ ಆತ್ಮೀಯತೆಯ ಬೆಸುಗೆಯನ್ನು ಕಾಪಾಡಿಕೊಂಡದ್ದು. ಕಾಲಾಂತರದಲ್ಲಿ ಮನುಷ್ಯನ ದುರಾಸೆಯ ಪರಿಣಾಮವಾಗಿ ನಿಸರ್ಗದ ಭಾಗವಾದ 'ಸಸ್ಯ ಶ್ಯಾಮಲೆಯ' ಅಂಶವಾದ ಗಿಡದ ಬುಡಕ್ಕೆ ಕೊಡಲಿ ಹಾಕಿ ಧ್ವಂಸ ಮಾಡುವ ಕಾರಣದಿಂದಾಗಿ ಗಿಡದ ಸ್ನೇಹ ಕಳೆದುಕೊಂಡ ಬಾವಿಗೆ ಅನಾಥಪ್ರಜ್ಞೆ ಕಾಡುವುದು.

ಪರಿಸರದ ಸಹಜೀವಿಯಾದ ಗಿಡವನ್ನೆ ಕಳೆದುಕೊಂಡ ಬಾವಿ ಹೇಳಲಾಗದ ಅತೀವ ವೇದನೆಯನ್ನು ಅನುಭವಿಸುತ್ತದೆ. ಕಳೆದುಕೊಂಡ ದುಃಖದ ಬಾರದಲ್ಲಿ ಗಿಡಕ್ಕಾಗಿ ಪ್ರಲಾಪಿಸುತ್ತದೆ. "ನನ್ನಲ್ಲಿ ಏನೋ ಒಳಗುದಿ ಸುರುವಾಗಿತ್ತು. ಏನೋ ತಳಮಳ, ಆತಂಕ, ಹಲವಾರು ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ. ತುಂಬ ಬಳಲಿಕೆ, ಅಸ್ವಸ್ಥತೆ, ಅಮಾವಾಸ್ಯೆಯ ಒಂದು ರಾತ್ರಿ ನಾನು ದಣಿದು ಒಣಗಿ ಒಂದು ಥರಾ ಎಚ್ಚರ ತಪ್ಪಿದಂತಹ ನಿದ್ರೆಗೊಳಗಾದೆ. ಏನೇನೋ ಕೆಟ್ಟಕನಸುಗಳು, ಹಳವಂಡ, ಮಂಪರು ಹೀಗೆ ಎಂಥದೋ ಕಸಿವಿಸಿ

ಅನುಭವಿಸುತ್ತಾ ಅದೆಷ್ಟು ಹೊತ್ತು ಕಳೆಯಿತೋ... ಎಚ್ಚರಾಗಿ ಕಣ್ಣುಬಿಟ್ಟಾಗ, ಅಯ್ಯೋ ನೀನಿರಲಿಲ್ಲ, ನನ್ನ ವರುಷಗಳ ಸಂಗಾತಿ ನೀನು ಬುಡ ಕಡಿಸಿಕೊಂಡು ಧೂಳು ತುಂಬಿದ ಮಣ್ಣಿನಲ್ಲಿ ಜೀವವಿಲ್ಲದೆ ಬಿದ್ದಿದ್ದೆ. ಏನು ನಡೆಯುತ್ತಿದೆ ಎಂದು ತಿಳಿಯದೆ ದಿಗ್ಭ್ರಮೆಯಲ್ಲಿದ್ದ ನಾನು ನೋಡುತ್ತಿದ್ದಂತೆಯೇ ನಿನ್ನ ಅವಶೇಷಗಳನ್ನು ಹೇರಿಕೊಂಡು ಬೃಹದಾಕಾರದ ಲಾರಿಯೊಂದು ಅದೆತ್ತಲೋ ಹೊರಟು ಹೋಯಿತು."[೨೨] ಸಹಜ ನಿಸರ್ಗ ಸ್ವರೂಪವನ್ನೂ ದುಷ್ಟಮಾನವರು ವಿರೂಪಗೊಳಿಸದಿರುವುದು ಕಥಾ ಸಂವಿಧಾನದ ಹೂರಣ.

ನಿಸರ್ಗದ ಮೇಲೆ ನಿರಂತರವಾಗಿ ನಡೆಯುತ್ತಿರುವ ಆಕ್ರಮಣವನ್ನು ದಿನ ದಿನಕ್ಕೂ ವೃದ್ಧಿಸುತ್ತಿರುವ ಮನುಷ್ಯನ ದುರಾಸೆಯನ್ನು ಕಥೆಗಾರ್ತಿ ಸಾಂಕೇತಿಕವಾಗಿ ನಿರೂಪಿಸುತ್ತಾರೆ. ನಿಸರ್ಗವೂ ಒಂದು ಹೆಣ್ಣಾಗಿ, ನಿಸರ್ಗದ ಅವಿಭಾಜ್ಯ ಅಂಗವಾದ ಗಿಡವೂ ಒಂದು ಸ್ತ್ರೀಯಾಗಿ, ಬಾವಿಯನ್ನು ಸ್ತ್ರೀಯಾಗಿ ಪರಿಭಾವಿಸಿ ಸಂರಕ್ಷಿಸಬೇಕೆಂಬ ಜ್ಞಾನದ ಸೂಚ್ಯವಿದೆ. ಮಾನವ ಸಮಾಜ ಕ್ರಮೇಣವಾಗಿ ಎಲ್ಲಾ ಪರಿಜ್ಞಾನದ ಪರಂಪರೆಯನ್ನು ಗಾಳಿಗೆ ತೂರಿ ಅಂಕೆಯಿಲ್ಲದಂತೆ ನಿಸರ್ಗದ ಸುಂದರ ತಾಣಗಳನ್ನು ನಗರೀಕರಣದ ನೆಪದಲ್ಲಿ ಧ್ವಂಸ ಮಾಡುತ್ತಿರುವುದು ಕಥೆಯ ನಿರೂಪಣೆಯಲ್ಲಿ ಕಟ್ಟಿಕೊಟ್ಟಿರುವುದನ್ನು ಮನಗಾಣಬಹುದು.

ಜನರು ಹೃದಯಹೀನರಾಗುತ್ತಿರುವುದು ತನ್ಮೂಲಕ ನಿಸರ್ಗದೊಂದಿಗೆ ಅವಿನಾಭಾವ ಸಂಬಂಧವನ್ನು ಕಳೆದುಕೊಳ್ಳುತ್ತಿರುವುದು, ಮನುಷ್ಯನ ಮನೋವಮೌಲ್ಯಗಳು ಶಿಥಿಲವಾಗುತ್ತಿರುವುದು, ಆಧುನಿಕ ಸಮಾಜ ಸೃಷ್ಟಿಸುತ್ತಿರುವ ತಳಮಳಗಳು ಕಳವಳಗಳನ್ನು 'ಒಂದು ಗಿಡ ಒಂದು ಬಾವಿ' ಅನಾವರಣ ಮಾಡುತ್ತಾ ಹೋಗುತ್ತದೆ. ಯಂತ್ರ ಜಗತ್ತು ಸೃಷ್ಟಿಸಿರುವ ಸಮಸ್ಯೆಗಳ ದರ್ಶನವನ್ನು ಕಥೆ ಸೂಚ್ಯವಾಗಿಯೇ ಮಾಡಿಸುತ್ತದೆ. ನಿರ್ಮಲವಾದ ಬಾವಿಯಲ್ಲಿ ಈಗ ನಿರ್ಮಲತೆ ಕಳೆದು ಮಾಲಿನ್ಯಗೊಂಡಿದೆ. ಬಾವಿಯೇ ನಿವೇದಿಸುವಂತೆ "ನಿಜವಾಗಿ ಹೇಳಬೇಕೆಂದರೆ ನಾನೂ ಈಗ ಬದುಕಿಲ್ಲ. ನನ್ನೊಳಗೆ ಒಂದು ಕಾಲದಲ್ಲಿ ತುಂಬಿಕೊಂಡಿದ್ದ ಅಮೃತ ಸಮಾನವಾದ ಸಿಹಿನೀರು ಅದೆಂದೋ ಬತ್ತಿಹೋಗಿದೆ. ಸುತ್ತೆಲ್ಲ ತಲೆಯೆತ್ತಿ ನಿಂತ ಬೋರ್‌ವೆಲ್ಲುಗಳಿಂದ ನನ್ನ ಸೆಲೆಗಳು ಜೀವ ಕಳೆದುಕೊಂಡಿವೆ. ನನ್ನ ಸುತ್ತ ತಿಪ್ಪೆ, ಕಸ, ನನ್ನೊಳಗೂ ಅದೇ. ಗಣೇಶ ಚವತಿ ಬಂತೆಂದರೆ ಸಾಕು, ಸಾವಿರಾರು ಗಣಪತಿಗಳನ್ನು ತಂದು ನನ್ನಲ್ಲಿ ವಿಸರ್ಜಿಸುತ್ತಾರೆ. ಬಾಡಿದ ಹೂಗಳು, ಎಲೆಗಳು, ಕಾಗದದ ಚೂರುಗಳು, ಒಣಗಿದ ಕಸಕಡ್ಡಿ, ಮಣ್ಣು ಎಲ್ಲವನ್ನೂ ನನ್ನಲ್ಲಿ ಸುರಿಯುತ್ತಾರೆ. ಎಲ್ಲ ಸೇರಿ ದುರ್ನಾತ ಬೀರುತ್ತಿರುವ ಕೊಳಚೆ ಗುಂಡಿಯಾಗಿದ್ದೇನೆ, ನಾನು."[೨೩]

ಒಟ್ಟಾರೆ 'ಒಂದು ಗಿಡ ಒಂದು ಬಾವಿ' ಕಥೆಯು ಕಥೆಗಾರ್ತಿಯ ಪರಿಸರಾತ್ಮಕವಾದ ನಿಲುವು, ಒಲವು, ಕಾಳಜಿ ಮತ್ತು ಕಳಕಳಿಯನ್ನು ಅಭಿವ್ಯಕ್ತಿಸುತ್ತದೆ. ಕಥಾ ನಿರೂಪಣಾ ತಂತ್ರವೂ ಮನಃ ಸೆಳೆಯುತ್ತದೆ. ಓದುಗನ ಮನಸ್ಸಿನಲ್ಲಿ ಪರಿಸರ ಕಾಳಜಿಯ ಬೀಜ ಬಿತ್ತುವಿಕೆಯಲ್ಲಿ ಯಶಸ್ವಿಯಾಗುತ್ತದೆ. ಕಥಾ ನಿರೂಪಣಾ ತಂತ್ರ ಬಾವಿಯ 'ಸ್ವಗತ' ಮತ್ತು ಕಥೆಗಾರ್ತಿಯ ಅಭಿವ್ಯಕ್ತಿ ಅಂಶಗಳು ಕಥೆಯ ವಸ್ತುವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ.

೪.೪ ಕಥೆಗಳ ಭಾಷೆ

ಭಾಷೆಯ ಬಳಕೆಯ ಬಗ್ಗೆ ವಿಶೇಷವಾದ ಪ್ರಜ್ಞೆಯೊಂದು ಈಚೆಗೆ ಬೆಳೆಯ ತೊಡಗಿರುವುದನ್ನು ಗಮನಿಸಬಹುದಾಗಿದೆ. ಹೊಸ ಅವಶ್ಯಕತೆಗಾಗಿ ಭಾಷೆಯನ್ನು ಕಾಲಕಾಲಕ್ಕೆ ಪುನರ್ನಿರ್ಮಿಸಿಕೊಳ್ಳುವ ಪ್ರಯತ್ನ ಕನ್ನಡ ಸಾಹಿತ್ಯ ಪರಂಪರೆಗೂ ಹೊಸದಲ್ಲ. ಪಂಪ, ಬಸವಣ್ಣ, ಹರಿಹರ, ರಾಘವಾಂಕ, ಕುಮಾರವ್ಯಾಸ, ರತ್ನಾಕರವರ್ಣಿ, ಬಿ.ಎಂ.ಶ್ರೀ, ಬೇಂದ್ರೆ ಮೊದಲಾದವರಲ್ಲಿ ಇಂಥಹ ಪ್ರಯತ್ನಗಳನ್ನು ಕಾಣುತ್ತೇವೆ. ಹಾಗೆಯೇ ನವ್ಯಸಾಹಿತಿಗಳು ತಮ್ಮ ಕಾಲದಲ್ಲಿ ಬಹು ಬಳಕೆಯಿಂದ ನಿಸ್ತೇಜವಾದ ಭಾಷೆಯನ್ನು ಬಿಟ್ಟು ಹೊಸದನ್ನು ಕಟ್ಟಿಕೊಳ್ಳುತ್ತಿದ್ದಾರೆ. ಸಾಹಿತ್ಯವೆನ್ನುವುದು ಭಾಷೆಯ ಜೊತೆಗೆ ನಡೆಸುವ ಗುದುಮುರಿಗೆ, ಅನುಭವವನ್ನು ಶಬ್ದಗಳ ತೆಕ್ಕೆಗೊಗ್ಗಿಸುವ ಸಾಹಸ ಎಂಬ ಅರಿವು ವಿಶೇಷವಾಗಿ ಇಂದು ಕಾಣುತ್ತಿದೆ. ಅದರಲ್ಲೂ ಕನ್ನಡವನ್ನು ಸೂಕ್ಷ್ಮವಾದ ಹಾಗೂ ಪ್ರೌಢವಾದ ಸಮಸ್ಯೆಗಳ ಚಿಂತನೆಗೆ ಯೋಗ್ಯವಾದ ಭಾಷೆಯನ್ನಾಗಿ ಮಾಡುವಲ್ಲಿ ನವ್ಯ ಲೇಖಕರ ತಳಪಾಯ ಹಾಕುವ ಕೆಲಸ ಅತ್ಯಂತ ಮಹತ್ವದ್ದಾಗಿದೆ. ಭಾಷೆಯೆನ್ನುವುದು ಕೇವಲ ಸಲೀಸಾಗಿ ಹರಿದು ಓದುಗನನ್ನು ಜಾರಿಸಿಕೊಂಡು ಹೋಗುವ ಮಂತ್ರಶಕ್ತಿಯಾಗಿ ಮಾತ್ರ ಈಗ ಉಳಿದಿಲ್ಲ. ಅನುಭವದ ತೀಕ್ಷ್ಣಶೋಧವನ್ನು ಭಾಷೆಯ ಮೂಲಕ ಪ್ರಕಟಿಸುವ ಒದ್ದಾಟ, ಅದರ ಎಲ್ಲಾ ಸ್ತರಗಳನ್ನೂ ಒಂದಿಷ್ಟು ಕಾವು ಆರದಂತೆ ಶಬ್ದಗಳಲ್ಲಿ ಹಿಡಿದು ನಿಲ್ಲಿಸುವ ಹಠ ಇಂದಿನ ಸಾಹಿತ್ಯದ ಭಾಷೆಗೆ ಹೊಸದೊಂದು ತೇಜಸ್ಸನ್ನೇ ತಂದುಕೊಟ್ಟಿದೆ.

ನವ್ಯಪಂಥದ ಪ್ರಮುಖ ಬರಹಗಾರ್ತಿಯಾದ ವೀಣಾ ಶಾಂತೇಶ್ವರವರ ಕಥಾದೇಣಿಗೆಯಲ್ಲಿ ಒದಗಿ ಬರುವ ಭಾಷೆ ಅತ್ಯಂತ ಪ್ರಮುಖವಾದದು. ಉತ್ತರಕರ್ನಾಟಕದ ಧಾರವಾಡ ದೇಸೀ ಶೈಲಿಯನ್ನು ಸಂಭಾಷಣೆಯಲ್ಲಿ ಮಿಳಿತಗೊಳಿಸಿ ಕಥಾಹಂದರವನ್ನು ಬೆಳೆಸುವ ವೀಣಾ ಶಾಂತೇಶ್ವರವರ ಕಥನಕ್ರಮ ವಿಶಿಷ್ಟವಾದದ್ದು ಮತ್ತು ಅನನ್ಯವಾದದ್ದು. ಪ್ರಥಮಪುರುಷ ಅಭಿವ್ಯಕ್ತಿಯಲ್ಲಿ ಅನಾವರಣಗೊಳ್ಳುವ ಕಥೆ ಉತ್ತಮಪುರುಷ ಅಭಿವ್ಯಕ್ತಿಯೊಂದಿಗೆ ಸಮಾಗಮಗೊಂಡು ಕಥೆಗೆ ಸಮರಸವನ್ನೊದಗಿಸುವ ಒಂದು ವಿಶಿಷ್ಟ ಅಭಿವ್ಯಕ್ತಿ ಸಾಧನವೂ ಆಗುತ್ತದೆ.

ಕಥಾ ಸಂವಿಧಾನದಲ್ಲಿ ಕತೆಗಾರ್ತಿ ಬಳಸಿಕೊಳ್ಳುವ ಹಲವು ಹತ್ತು ಭಾಷಾಲಂಕಾರಗಳು ಪ್ರತಿಮೆಗಳು, ಸಂಕೇತಗಳು ಕತೆಯ ಸಂಕೀರ್ಣತೆಯನ್ನು ಬೆಳೆಸುವುದರ ಜೊತೆಗೆ ಕತೆಗೊಂದು ಸುಂದರ ಆವರಣವನ್ನು ಸೃಷ್ಟಿಸುತ್ತವೆ. ಮುಳ್ಳುಗಳು ಕಥಾಸಂಕಲನದ 'ಮುಳ್ಳುಗಳು' ಎಂಬ ಶೀರ್ಷಿಕೆಯ ಸಣ್ಣಕತೆಯ ಕಥಾ ಸಂವಿಧಾನದಲ್ಲಿ ಮುಳ್ಳುಗಳನ್ನು ಕತೆಗಾರ್ತಿ ಹಲವಾರು ಬಾರಿ ಹಲವಾರು ಸಂದರ್ಭಗಳಲ್ಲಿ ಬಳಸಿಕೊಳ್ಳುತ್ತಾರೆ. ಇಲ್ಲಿ ಮುಳ್ಳುಗಳು ಬಹಿರಂಗವಾಗಿಯು ಮತ್ತು ಅಂತರಂಗದಲ್ಲಿಯೂ ಚುಚ್ಚುವ, ಕಾಡುವ, ನೋಯಿಸುವ, ಸಂಕೇತಗಳಾಗಿವೆ. ಬಾಹ್ಯದಲ್ಲಿ ಕಾಣುವ ಪುರುಷ ಎಂಬ ಮುಳ್ಳು ಸ್ತ್ರೀಕುಲ ಮತ್ತು ಸ್ತ್ರೀತ್ವಕ್ಕೆ ಸದಾ ಕಾಡುವ ವಿಷದ ಮುಳ್ಳಾಗಿ ಪರಿಣಮಿಸುತ್ತದೆ. ತನ್ನ ಸುತ್ತಲಿನ ಪುರುಷ ಜಗತ್ತು ನೋಡುವ ನೋಟದಲ್ಲಿ ಮುಳ್ಳಿನ ತೀವ್ರತೆಯೇ ಅನುಭವಿಸುವಂತಾಗುತ್ತಿದೆ. ಮುಳ್ಳುಗಳು ಕಥಾನಾಯಕಿ 'ಪ್ರೊ, ಶಾಂತಿಗೆ' ಜೊತೆಗೆ ತನ್ನ ದೇಹವೇ ತನಗೆ ಮುಳ್ಳಾಗಿ ಕಾಡುವ ಪ್ರಸಂಗವು ಕತೆಯಲ್ಲಿ ಕಂಡುಬರುವ ವಿಶಿಷ್ಟಾಂತ. ಇಲ್ಲಿ ಮುಳ್ಳುಗಳು ಸಂಕೇತವಾಗಿಯೂ ಮೂರ್ತ ಪ್ರತಿಮೆಯಾಗಿಯೂ ಕಂಡುಬರುತ್ತದೆ. ಒಬ್ಬ ಸುಶಿಕ್ಷಿತ ಮಹಿಳೆಯಾಗಿ ಅಧ್ಯಾಪಕಿಯಾಗಿ ಸೃಜನಶೀಲ ಬರಹಗಾರ್ತಿಯಾಗಿ ಲೋಕದ ಹಲವು ಹತ್ತು ಅನುಭವಗಳನ್ನು ತನ್ನದಾಗಿಸಿಕೊಂಡ ವೀಣಾ ಶಾಂತೇಶ್ವರರ ತಾತ್ವಿಕ ದರ್ಶನ ವಿಶಾಲವಾದದ್ದು.

ಕೊನೆ ಟಿಪ್ಪಣಿಗಳು

೧. ಶಾಂತಾ ಇಮ್ರಾಪುರ. ಸಂ. ನಿರ್ದಿಂಗತ, ಪು.ಸಂ.೮೨

೨. ಪೂರ್ವೋಕ್ತ. ಪು.ಸಂ.೮೩

೩. ವೀಣಾಶಾಂತೇಶ್ವರ, ನಡದದ್ದೇ ದಾರಿ. ಪು.ಸಂ.೨೩

೪. ಪೂರ್ವೋಕ್ತ. ಪು.ಸಂ.೨೪೯

೫. ಪೂರ್ವೋಕ್ತ. ಪು.ಸಂ.೨೪೯

೬. ಪೂರ್ವೋಕ್ತ. ಪು.ಸಂ.೨೪೬–೨೪೭

೭. ಪೂರ್ವೋಕ್ತ. ಪು.ಸಂ.೨೪೭

೮. ಪೂರ್ವೋಕ್ತ. ಪು.ಸಂ.೨೩೧

೯. ಪೂರ್ವೋಕ್ತ. ಪು.ಸಂ.೨೨೫

೧೦. ಪೂರ್ವೋಕ್ತ. ಪು.ಸಂ.೨೩೧

೧೧. ಪೂರ್ವೋಕ್ತ. ಪು.ಸಂ.೨೩೫–೨೩೬

೧೨. ಪೂರ್ವೋಕ್ತ. ಪು.ಸಂ.೨೦೩

೧೩. ಪೂರ್ವೋಕ್ತ. ಪು.ಸಂ.೧೯೮

೧೪. ಪೂರ್ವೋಕ್ತ. ಪು.ಸಂ.೪೮೯

೧೫. ಪೂರ್ವೋಕ್ತ. ಪು.ಸಂ.೨೬೯

೧೬. ಪೂರ್ವೋಕ್ತ. ಪು.ಸಂ.೨೭೦

೧೭. ಪೂರ್ವೋಕ್ತ. ಪು.ಸಂ.೨೭೩

೧೮. ಪೂರ್ವೋಕ್ತ. ಪು.ಸಂ.೨೭೪

೧೯. ಪೂರ್ವೋಕ್ತ. ಪು.ಸಂ.೨೦೯

೨೦. ಪೂರ್ವೋಕ್ತ. ಪು.ಸಂ.೨೧೪

೨೧. ಪೂರ್ವೋಕ್ತ. ಪು.ಸಂ.೨೧೭

೨೨. ಪೂರ್ವೋಕ್ತ. ಪು.ಸಂ.೫೨೦

೨೩. ಪೂರ್ವೋಕ್ತ. ಪು.ಸಂ.೫೨೧

ಅಧ್ಯಾಯ : ಐದು

ವೈದೇಹಿ ಕಥೆಗಳ : ಅಭಿವ್ಯಕ್ತಿ ಮತ್ತು ತಾತ್ವಿಕತೆ

ಅಧ್ಯಾಯ : ಐದು

ವೈದೇಹಿ ಅವರ ಕಥೆಗಳ ಅಭಿವ್ಯಕ್ತಿ ಮತ್ತು ತಾತ್ವಿಕತೆ

ವೈದೇಹಿಯವರು ಕರ್ನಾಟಕದ ಸೃಜನಶೀಲ ಕತೆಗಾರರಲ್ಲಿ ಒಬ್ಬರು. ಸಮಕಾಲೀನ ಭಾರತೀಯ ಸಣ್ಣಕತೆಯ ಪರಂಪರೆಯಲ್ಲಿ ಅವರಿಗೊಂದು ವಿಶಿಷ್ಟವಾದ ಸ್ಥಾನವಿದೆ. ಅವರ ಕತೆಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅನುವಾದದ ಮೂಲಕ ಪ್ರವೇಶ ಪಡೆದಿವೆ. ಸೃಜನಶೀಲ ಬರಹಗಾರ್ತಿಯಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಪರಂಪರೆಯೊಂದನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಕಳೆದ ಐದು ದಶಕಗಳಿಂದ ಸಾಹಿತ್ಯ ರಚನೆಯಲ್ಲಿ ನಿರಂತರವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವೈದೇಹಿಯವರು ಸಾಹಿತ್ಯದ ಕೆಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಸಣ್ಣಕತೆ, ಕಾದಂಬರಿ, ಕಾವ್ಯ, ಪ್ರಬಂಧ, ಅನುವಾದ ಮಕ್ಕಳ ನಾಟಕಗಳು ಕಂಡುಬರುತ್ತವೆ. ಅವರ ಬರಹದ ವೈಶಿಷ್ಟ್ಯವೇನೆಂದರೆ ವೈಯಕ್ತಿಕ ತೀವ್ರತೆ, ಸೃಜನಶೀಲತೆ, ಅಂತರ್ಮುಖತೆ, ಸ್ತ್ರೀಕುಲದ ಭಾವೋದ್ವೇಗಗಳು. ಇದಕ್ಕೆ ಅವರ ಕಾಲದ ಒತ್ತಡವು ಸಹ ಕಾರಣವಾಗಿರಬಹುದು.

ವೈದೇಹಿಯವರು ೨೦ನೇ ಶತಮಾನದ ಉತ್ತರಾರ್ಧದಲ್ಲಿ ಬರೆಹಕ್ಕಿಳಿದರು. ಅವರು ಬರಹಕ್ಕಿಳಿದ ಆ ಹೊತ್ತಿನಲ್ಲಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಭಿನ್ನವಾದ ಸೈದ್ಧಾಂತಿಕ ನಿಲುವುಗಳು, ತಾತ್ವಿಕ ಆಯಾಮಗಳು ಮತ್ತು ವಾಗ್ವಾದಗಳು ಕಾಣಿಸಿಕೊಂಡಿದ್ದವು. ಅಲ್ಲದೆ ಇವುಗಳು ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ಮಹಿಳಾ ಸಾಹಿತ್ಯ, ಮುಸ್ಲಿಂ ಸಾಹಿತ್ಯಗಳೆಂದು ಪಂಥ ಆಧಾರಿತವಾಗಿ ಕವಲೊಡೆದುಕೊಂಡಿದ್ದವು. ಸಾಹಿತ್ಯವನ್ನು ರಾಜಕೀಯ ಚಳುವಳಿಗಳ ಮೂಲಕ ಪ್ರತಿಪಾದಿಸುವ ಧೋರಣೆಗಳು ಬೆಳೆಯುತ್ತಿದ್ದಂತಹ ಕಾಲವು ಸಹ ಆಗಿತ್ತು. ಆದರೆ ವೈದೇಹಿಯವರು ಇಂತಹ ಯಾವುದೇ ಒಂದು ಸಿದ್ಧಾಂತಕ್ಕೆ ಒಳಗಾಗಲು ಪ್ರಯತ್ನಿಸಿರುವುದು ಅವರ ಸಾಹಿತ್ಯದಲ್ಲಿ ಗಮನಾರ್ಹವಾಗಿ ಕಂಡುಬರುವುದಿಲ್ಲ. ಅವರಿಗೆ ತಮ್ಮ ಬಾಲ್ಯದ ಅನುಭವಗಳ ನೆನಪಿನ ಸಂಗ್ರಹಣೆಯೊಂದಿತ್ತು.

ಅದನ್ನು ತಮ್ಮದೇ ಆದ ಶೈಲಿಯಲ್ಲಿ ಹಾಗೂ ತಮ್ಮದೇ ಆದ ಭಾಷೆಯ ಮೂಲಕ ಸಾಹಿತ್ಯದ ರಚನೆ ಸಾಧ್ಯವಾಯಿತು. ಅವರು ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದರೂ ವಿಶೇಷವಾಗಿ ಸಣ್ಣಕತೆಗಳನ್ನು ಕುರಿತು ಅವರ ಸೃಜನಶೀಲ ತತ್ವ ಕೆಲಸ ಮಾಡಿರುವುದು ಕಂಡುಬರುತ್ತದೆ.

ಕನ್ನಡ ಕಥನಸಾಹಿತ್ಯ ಪರಂಪರೆಯಲ್ಲಿ ಮಹಿಳಾ ಲೇಖಕಿಯರು ತಮ್ಮ ಇರುವಿಕೆಯನ್ನು ನೆಲೆಗೊಳಿಸಿಕೊಂಡಿದ್ದಾರೆ. ಅಂತಹ ಲೇಖಕಿಯರಲ್ಲಿ ವೈದೇಹಿಯವರು ಒಬ್ಬರಾಗಿದ್ದಾರೆ. ಅವರು ತಮ್ಮ ಕಥೆಗಳಲ್ಲಿ ಸ್ತ್ರೀಯರ ಶೋಷಣೆ ಪುರುಷ ಸಮಾಜದ ದಬ್ಬಾಳಿಕೆ ಹಾಗೂ ಸ್ತ್ರೀ ಸಂವೇದನೆಗಳನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸುತ್ತಾರೆ. ಅವರು ಬರೆದ ಕಥೆಗಳಲ್ಲಿ ಬಹುತೇಕ ಸ್ತ್ರೀಯರ ಸಮಸ್ಯೆಗಳು ಮತ್ತು ಆ ಸ್ತ್ರೀಯರ ಅಭಿವ್ಯಕ್ತಿ ಕುರಿತು ಕಥೆಯಲ್ಲಿಯೇ ಪರಿಹಾರವನ್ನು ಹುಡುಕಲೆತ್ನಿಸುತ್ತಾರೆ. ಹಾಗಾಗಿ ಅವರ ಕಥೆಗಳ ಅಧ್ಯಯನ ಮಾಡುವ ಮೂಲಕ ಅವರ ಅಭಿವ್ಯಕ್ತಿ ಮತ್ತು ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅವರು ಸ್ತ್ರೀಯನ್ನು ಹಾಗೂ ಸ್ತ್ರೀಪರ ಕಾಳಜಿಯುಳ್ಳ ಕಥೆ–ಕಾವ್ಯಗಳನ್ನು ಬರೆಯುತ್ತಾರೆ. ಸ್ತ್ರೀಯರು ಪುರುಷ ಸಮಾಜದಿಂದ ಎಚ್ಚರ ಮತ್ತು ಜಾಗೃತವಾಗಿರಬೇಕೆಂಬ ನಿಲುವನ್ನು ತಮ್ಮ ಕಥೆಗಳಲ್ಲಿ ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಅವರ ಕಥೆಗಳಲ್ಲಿ ಶೋಷಣೆಗೆ ಒಳಗಾದ ಸ್ತ್ರೀಯನ್ನು ವಿದ್ಯಾವಂತಳನ್ನಾಗಿ ಮಾಡುವುದು. ಆ ಮೂಲಕ ಆಧುನಿಕತೆಗೆ ಮುಖಾಮುಖಿ ಆಗುವ ಮತ್ತು ನಗರೀಕರಣಕ್ಕೆ ಪ್ರವೇಶವನ್ನು ಮಾಡುವ ಆಯಾಮಗಳನ್ನು ಕಾಣಬಹುದು. ಅದನ್ನು ಅವರ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಮತ್ತು 'ಅಮ್ಮಚ್ಚಿಯೆಂಬ ನೆನಪು' ಈ ಕಥೆಗಳ ಮೂಲಕ ನೋಡಬಹುದಾಗಿದೆ.

ಅವರ ಸರಳ ಬರವಣಿಗೆ ಸಾಮಾನ್ಯ ಓದುಗರಿಗೆ, ಸಹೃದಯರಿಗೆ, ವಿಮರ್ಶಕರಿಗೆ ಇಷ್ಟವಾಗುತ್ತದೆ. ಮಹಿಳಾ ಪರವಾದ ನಿಲುವು, ಅವಳಿಗೆ ಬೇಕಾದ ಸ್ವಾತಂತ್ರ್ಯ, ಅವಳನ್ನು ಎರಡನೆಯ ದರ್ಜೆಯವಳಾಗಿ ನೋಡುವ ಪುರುಷಾಹಂಕಾರ ವಿರುದ್ಧ ಸಂಘರ್ಷ ಹಾಗೂ ಇತ್ಯಾದಿಗಳ ಬಗ್ಗೆ ಸೂಕ್ತವಾಗಿ ಅಭಿವ್ಯಕ್ತಿಸಲು ಅವರು ಕಥಾ ಮಾಧ್ಯಮವನ್ನು ಆಯ್ದುಕೊಂಡಿದ್ದಾರೆ. ಅವರ ಈ ರೀತಿಯ ಆಲೋಚನೆಗಳು ಇತ್ತೀಚಿನ ಲೇಖಕಿಯರಲ್ಲಿಯೂ ಕಂಡುಬರುತ್ತವೆ. ಗಂಡು ಹೆಣ್ಣಿನ ಸಂಬಂಧದ ಅನೇಕ ಮಜಲುಗಳನ್ನು ಮಾನವ ಸಂಬಂಧದ ಭಾಗವಾಗಿ ಅವರು ಗುರುತಿಸುತ್ತಾರೆ. ಆ ಮಾನವ ಸಂಬಂಧಗಳು ಮತ್ತು ಸಾಮಾಜಿಕ ಸ್ಥಾನಮಾನಗಳು ಅವರ ಕಥೆಗಳಲ್ಲಿ ಹೇಗೆ ಮೂಡಿವೆ ಎಂದು ನೋಡುವುದು. ವೈದೇಹಿ ಅವರ ಕಥೆಗಳಲ್ಲಿ ಬರುವ ಹೆಣ್ಣು ವಿವಿಧ ಜಾತಿ, ಧರ್ಮ, ವಯಸ್ಸು,

ಅಂತಸ್ತು, ಅಧಿಕಾರ ಮುಂತಾದ ಮುಖ್ಯಧಾರೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಈಗಾಗಲೇ ಅವರ ಕಥೆಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಅವರ ಕಥೆಗಳ ವೈವಿಧ್ಯತೆಯಿಂದ ಅಭಿವ್ಯಕ್ತಿ ಮತ್ತು ತಾತ್ವಿಕತೆಯ ದೃಷ್ಟಿಕೋನದಿಂದ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಅವರ ಕಥೆಗಳಲ್ಲಿ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಂಡು ಅವಳ ಮುಂದಿರುವ ಸಂಘರ್ಷವನ್ನು ಸಮಕಾಲೀನ ಸಂದರ್ಭಕ್ಕೆ ಅನ್ವಯಿಸಿ ನೋಡುವುದು ಮುಖ್ಯವಾದ ಸಂಗತಿಯಾಗಿದೆ. ಇದರ ಜೊತೆಗೆ ವೈದೇಹಿಯವರು ವಿಭಿನ್ನವಾದ ಸಮಾಜದ ಹೆಣ್ಣು ಮಕ್ಕಳ ಸಂವೇದನೆಗಳಿಗೆ ಕಥೆಗಳ ಮೂಲಕ ಯಾವ ರೀತಿಯಾಗಿ ಸ್ಪಂದಿಸಿದ್ದಾರೆ ಎಂಬುದನ್ನು ಶೋಧಿಸಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅವರ ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಬಹುಮುಖ್ಯವಾದ ಕೆಲಸವಾಗಿದೆ.

ವೈದೇಹಿ ಅವರು ಕಳೆದ ಐದು ದಶಕಗಳಲ್ಲಿ ಏಳು ಕಥಾಸಂಕಲನಗಳನ್ನು ಹೊರತಂದಿದ್ದಾರೆ. ೧. ಮರಗಿಡ ಬಳ್ಳಿ, (೧೯೭೯), ೨. ಅಂತರಂಗದ ಪುಟಗಳು (೧೯೮೪), ೩. ಗೋಲ (೧೯೮೬), ೪. ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ (೧೯೯೧), ೫. ಅಮ್ಮಚ್ಚಿಯೆಂಬ ನೆನಪು (೨೦೦೦), ೬. ಕ್ರೌಂಚಪಕ್ಷಿಗಳು (೨೦೦೫), ೭. ಕತೆಕತೆ ಕಾರಣ (೨೦೧೬) ಈ ಏಳು ಕಥಾಸಂಕಲನಗಳನ್ನು 'ಅಲೆಗಳಲ್ಲಿ ಅಂತರಂಗ' ಎಂಬ ಶೀರ್ಷಿಕೆಯಡಿಯಲ್ಲಿ ಒಟ್ಟು ಸಂಪುಟವಾಗಿ ಹೊರತಂದಿದ್ದಾರೆ. ಇವರ ಎಲ್ಲಾ ಕತೆಗಳನ್ನು ಅಧ್ಯಯನಕ್ಕೆ ಒಳಪಡಿಸಿ ಕತೆಗಳಲ್ಲಿನ ತಾತ್ವಿಕತೆ ಹಾಗೂ ಕತೆಗಳ ಅಭಿವ್ಯಕ್ತಿ ಕ್ರಮವನ್ನು ಗುರುತಿಸುವುದು ಈ ಅಧ್ಯಾಯದ ಬಹುಮುಖ್ಯವಾದ ಉದ್ದೇಶವಾಗಿದೆ. ವೈದೇಹಿಯವರ ಕಥೆಗಳ ಅಭಿವ್ಯಕ್ತಿ ಮತ್ತು ತಾತ್ವಿಕತೆಯನ್ನು ಕತೆಗಳ ಭಾಷೆ, ಕಥಾವಸ್ತು, ತಂತ್ರ ಮತ್ತು ಸಂವಿಧಾನ ಹಾಗೂ ಸ್ತ್ರೀ ಕೇಂದ್ರಿತ ಅಭಿವ್ಯಕ್ತಿಯೆಂಬ ಅಂಶಗಳನ್ನು ವಿವರಿಸಿ ವಿಸ್ತರಿಸುವ ಮೂಲಕ ಗುರುತಿಸಿಕೊಳ್ಳಲಾಗಿದೆ.

೫.೧ ಕಥೆಗಳ ವಸ್ತು

ವೈದೇಹಿಯವರ ಬಹುತೇಕ ಕಥೆಗಳಿಗೆ ವಸ್ತು ಹೆಣ್ಣು. ಗ್ರಾಮೀಣ ಬದುಕು, ಕೌಟುಂಬಿಕ ಜೀವನ, ಹೆಣ್ಣು ಗಂಡುಗಳ, ಸಂಬಂಧದ ತಾಕಲಾಟಗಳು ಆಧುನಿಕ ಬದುಕು ತಂದೊಡ್ಡುವ ಸ್ಥಿತ್ಯಂತರಗಳು ಹೀಗೆ ಯಾವುದೇ ವಿಷಯವನ್ನು ತೆಗೆದುಕೊಂಡರೂ ಸಮರ್ಥವಾಗಿ ನಿರ್ವಹಿಸುವ ಮೂಲಕ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ವೈದೇಹಿಯವರ 'ಗೋಲ' ಕಥಾಸಂಕಲನದ ಕಥೆಗಳನ್ನು ಗಮನಿಸಿದಾಗ ನಮ್ಮ ಸಿದ್ಧ ಮಾದರಿಗಳನ್ನೇ ಬದಲಾಯಿಸುತ್ತವೆ. ವೈದೇಹಿಯವರ ವೈಶಿಷ್ಟ್ಯವಿರುವುದು

ವಿಭಿನ್ನ ವರ್ಗ–ಸ್ತರಗಳ ಹೆಣ್ಣು ಮಕ್ಕಳ ಅಂತರಂಗದ ಬದುಕನ್ನು ಚಿತ್ರಿಸುವಲ್ಲಿ ಅವರು ಗಂಡು ಹೆಣ್ಣುಗಳನ್ನು ಮುಖಾಮುಖಿಯಾಗಿಸುವುದಕ್ಕಿಂತ ಹೆಚ್ಚಾಗಿ ಒಟ್ಟು, ಸಾಮಾಜಿಕ, ಕೌಟುಂಬಿಕ ನೆಲೆಯಲ್ಲಿ ಸ್ತ್ರೀಯ ಶೋಷಣೆಗಳತ್ತ ಗಮನ ಹರಿಸುತ್ತಾರೆ. ಈ ದೃಷ್ಟಿಯಿಂದ ಅವರ 'ಅಕ್ಕು' 'ಒಂದು ಅಪರಾಧ ತನಿಖೆ' 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' 'ಗೂಡಿನೊಳಗಿನ ಒಂದು ಹಕ್ಕಿ' 'ಶೋಧ' ಮೊದಲಾದ ಕಥೆಗಳು ಮಹತ್ವವಾದವುಗಳಾಗಿವೆ.

ಅವರ ಕಥೆಗಳಲ್ಲಿ ಸ್ತ್ರೀಯರ ಅನುಭವ ಲೋಕವನ್ನು ಸಮಾಜದ ಗಮನಕ್ಕೆ ತರುವ ಆಶಯವಿದೆಯೇ ಹೊರತು ಸ್ತ್ರೀಯರ ಮುಖವಾಣಿಯಾಗಿ ಮಾತಾಡುವ ಧೋರಣೆಯಲ್ಲಿ ವೈದೇಹಿಯವರು ಆಯ್ದುಕೊಳ್ಳುವ ವಸ್ತುವಿನಲ್ಲಿಯೇ ಸ್ತ್ರೀಪರ ಧೋರಣೆಗಳಿವೆ. ಈ ಸಂದರ್ಭಕ್ಕೆ ಟಿ.ಪಿ. ಅಶೋಕರವರ ಮಾತುಗಳು ನೆನಪಿಗೆ ಬರುತ್ತವೆ. "ಹೆಣ್ಣಿನ ಮೇಲೆ ನಡೆಯುವ ಹಿಂಸೆ ವೈದೇಹಿ ಅವರ ಸಾಹಿತ್ಯದ ಒಂದು ಪ್ರಧಾನ ವಸ್ತು, ಹೆಣ್ಣಿನ ಮೇಲೆ ದೌರ್ಜನ್ಯವೆಸಗುವವರು ಕೇವಲ ಗಂಡಸರಲ್ಲ ಎಂಬುದೂ ಗಮನಾರ್ಹ. ಆದರೆ ಹೆಣ್ಣು ಹಿಂಸೆಗೊಳಗಾಗುವುದು ಆಕೆ ಕಾರಣಗಳು ಗಂಡಸರನ್ನು ದಂಡಿಸಲು ವಿಶೇಷ ಪ್ರೇರಣೆಯಾಗುವುದಿಲ್ಲ ಎಂಬುದನ್ನು ಗಮನಿಸಿದರೆ ವೈದೇಹಿ ಸೃಷ್ಟಿಸುವ ಪ್ರಪಂಚದ ಲಿಂಗಸ್ವರೂಪ ಅರಿವಿಗೆ ಬರುತ್ತದೆ. ಹಾಗೆ ಪ್ರಪಂಚವನ್ನು ಗಂಡು–ಹೆಣ್ಣು ಎಂದು ಸೀಳಿ ಆ ದ್ವಿದಳ ವಿಭಜನೆಯಲ್ಲಿ ವೈದೇಹಿಯವರು ಮನುಷ್ಯ ಸಂಬಂಧ ಮತ್ತು ಸಮಸ್ಯೆಗಳನ್ನು ಪರಿ ಭಾವಿಸುತ್ತಾರೆ ಎಂದೇನೂ ಅಲ್ಲ ಆದರೆ ಹೆಣ್ಣು ತಾನು ಹೆಣ್ಣಾದ್ದರಿಂದಲೇ ಯಾಕೆ ಕೆಲವು ರೀತಿಯ ಮುಜುಗರಗಳನ್ನು ಅನುಭವಿಸಬೇಕು. ಕೆಲವು ರೀತಿಯ ನಿರ್ಬಂಧಗಳಿಗೆ ಒಳಗಾಗಬೇಕು ಕೆಲವು ಬಗೆಯ ಶಿಕ್ಷೆಗಳನ್ನು ಪಡೆಯಬೇಕು ಎಂದು ಅವರ ಕತೆಗಳು ಕೇಳುವಂತಿದೆ. ಮೇಲುನೋಟಕ್ಕೆ ಕೌಟುಂಬಿಕ ಹಿಂಸೆ ಎಂದು ತೋರುತ್ತಿದ್ದರೂ ಆ ಆವರಣದಲ್ಲಿ ಲೈಂಗಿಕ ಹಿಂಸೆ, ಲೈಂಗಿಕ ಆಕ್ರಮಣಗಳೇ ಅಂತಸ್ಥವಾಗಿರುವ ಪರಿ ಲೇಖಕಿಯ ಕಣ್ಣು ತಪ್ಪಿಸಿಲ್ಲ"[೧] ಎಂಬುದಂತೂ ಅಕ್ಷರಶಃ ಸತ್ಯವಾದದ್ದು.

ವೈದೇಹಿಯವರನ್ನು ಕುರಿತು ಸುಮಿತ್ರಾಬಾಯಿಯವರು ಹೇಳುವಂತೆ ಹೆಣ್ಣಿನ ಅನುಭವದ ನೆಲೆಯಿಂದ ಬದುಕಿನತ್ತ ಪರಿಶೀಲನಾತ್ಮಕವಾಗಿ ನೋಡುವ ಕಾಳಜಿಯೊಂದು ಈ ಲೇಖಕಿಯ ಒಂದು ಪ್ರಮುಖ ಆಸಕ್ತಿಯಾಗಿ ಕಾಣಿಸಿಕೊಂಡಿದೆ. ಈ ಸ್ತ್ರೀ ವಿಶಿಷ್ಟ ದೃಷ್ಟಿಕೋನದಿಂದ ಒಂದು ರೀತಿಯ ಅನನ್ಯತೆಯೂ ಅವರ ಕಥೆಗೆ ಉಂಟಾಗಿದೆ. ಹೆಣ್ಣಿನ ಬಗೆಗಿನ ರೂಢಿಗತ ನಂಬಿಕೆ, ಕಲ್ಪನೆ, ಗ್ರಹಿಕೆಗಳನ್ನು ವೈದೇಹಿ ನಿರಾಯಾಸವಾದ ರೀತಿಯಲ್ಲಿ ತೀರಾ ಸಹಜವಾಗಿದೆ ಎಂಬಂತೆ ಬುಡಮೇಲು ಮಾಡಿಬಿಡಬಲ್ಲರು. ವೈದೇಹಿಯವರಿಗೆ

ಹೆಣ್ಣಿನ ವ್ಯಕ್ತಿತ್ವ ಸಾಮರ್ಥ್ಯದ ಬಗ್ಗೆ ತುಂಬಾ ವಿಶ್ವಾಸವಿದೆ. ಅವರು ತಮ್ಮ ಕಥೆಗಳಲ್ಲಿ ಹೆಂಗಸರನ್ನು ವ್ಯಂಗ್ಯ, ಹಾಸ್ಯ ಧೋರಣೆಯಿಂದ ನೋಡುವಂತೆ ಕಂಡರೂ ಅದು ಪುರುಷ ದೃಷ್ಟಿಕೋನವನ್ನು ಬಿಂಬಿಸುವ ಉದ್ದೇಶದ್ದೇ ಹೊರತು ಹೆಂಗಸರನ್ನು ಹೀಗಳೆಯುವಂಥದ್ದಲ್ಲ. ಸಂದರ್ಶನವೊಂದರಲ್ಲಿ ಅವರು ಹೇಳಿದಂತೆ ನಮ್ಮ ಅನನ್ಯತೆ ನಮಗಿದೆ, ನಾವು ಅದನ್ನು ಉಳಿಸಿಕೊಳ್ಳಬೇಕು. ನಮ್ಮ ಪ್ರಪಂಚದ ಬಗ್ಗೆ ಕೀಳರಿಮೆ ಅಗತ್ಯವಿಲ್ಲ. ಅವರು ನಮ್ಮಂತಾಗಲಿ ನಾವು ಅವರಂತಾಗುವ ಮಿತಿಯಂತೆ ಬದುಕಲು ಸಾಧ್ಯವಾದರೆ ಸಾಕು ಎಂದಿದ್ದಾರೆ. ವೈದೇಹಿಯವರ 'ಒಂದು ಅಪರಾಧ ತನಿಖೆ' ಎಂಬ ಕಥೆಯಲ್ಲಿ ಸ್ಥಿತಿವಂತರ ಮನೆಯ ಕುಸುಮಾ, ಪರಂಪರಾಗತ ಸಂಕೋಚ, ಅಸಹಾಯಕತೆ, ಕಟ್ಟುಪಾಡುಗಳನ್ನು ದಾಟಿ ಬರಲಾಗದ ಹೆಣ್ಣಿನ ಪ್ರತೀಕವಾಗಿದ್ದರೆ; ಕುಸುಮಾಳಂಥ ಸಮಸ್ಯೆಯನ್ನೇ ಎದುರಿಸುತ್ತಿರುವ ಕೆಲಸದ ಹೆಣ್ಣು ಬಾಬಿ, ಬಡವಳಾದರೂ ಸಮಸ್ಯೆಗಳನ್ನು ತನ್ನದೇ ಆದ ರೀತಿಯಲ್ಲಿ ಪರಿಹರಿಸಿಕೊಳ್ಳುತ್ತಾ ಮುನ್ನುಗುವ ಹೆಣ್ಣಾಗಿದ್ದಾಳೆ. ಕುಸುಮ ಮತ್ತು ಬಾಬಿಯನ್ನು ಮುಖಾಮುಖಿಯಾಗಿಸುವ ಮೂಲಕ ಸ್ತ್ರೀಯ ಬದುಕಿನ ಸುಖ, ಅವರ ಧೈರ್ಯ ನಿರ್ಧಾರಗಳನ್ನೇ, ಅವಲಂಬಿಸಿರುತ್ತದೆ ಎಂದು ಸೂಚಿಸುತ್ತದೆ.

ವೈದೇಹಿಯವರು ಸಮಕಾಲೀನ ಲೇಖಕಿಯರಲ್ಲಿ ಅತ್ಯಂತ ಪ್ರಮುಖ ಹಾಗೂ ಮಿಶ್ರ ಲೇಖಕಿಯಾಗಿ ರೂಪುಗೊಂಡಿದ್ದು ಗಮನಾರ್ಹ, ಮಹಿಳಾ ಕಥಾಸಾಹಿತ್ಯಕ್ಕೆ ನಿಜವಾಗಿಯೂ ಒಂದು ಹೊಸ ತಿರುವು ಬಂದಿದ್ದು ಈ ಕಾಲದಲ್ಲಿ ಉಗಮಿಸಿದ ಹೊಸ ಲೇಖಕಿಯರಿಂದಲೇ ಇಂದು ಬರೆಯುತ್ತಿರುವ ಹೆಚ್ಚಿನ ಲೇಖಕಿಯರು ಹೆಣ್ಣಿನ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವು ಹೊಂದಿರುವಂಥವರು ಕಥೆ ಹೇಳುವ ತುಡಿತಕ್ಕಿಂತ ಅವರ ಮೂಲಕ ಪ್ರತಿಪಾದಿಸಿಬೇಕೆಂದಿರುವ ಧೋರಣೆಯೇ ಇವರಿಗೆ ಮುಖ್ಯ. ಶೋಷಣೆಯ ಮೂಲವನ್ನು ಅರಿಯುವ ಪ್ರಯತ್ನ ಇವರ ಬರವಣಿಗೆಯಲ್ಲಿದೆ. ಹಿಂದಿನ ಲೇಖಕಿಯರು ಇವರು ಪ್ರತಿಯೊಂದು ಸಮಸ್ಯೆಗೂ ಸುಲಭ ಪರಿಹಾರಗಳನ್ನು ಸೂಚಿಸುವ ತಪ್ಪನ್ನು ಮಾಡುವುದಿಲ್ಲ. ಆದರೆ ಹಿಂದಿನವರಲ್ಲಿದ್ದ ರಮ್ಯ ಮನೋಭಾವದಿಂದ ಇವರು ದೂರವಾಗಿದ್ದಾರೆ. ಸಾಹಿತ್ಯದ ವಸ್ತು ಹಾಗೂ ಅಭಿವ್ಯಕ್ತಿ ಎರಡರ ಬಗ್ಗೆಯೂ ಗಂಭೀರ ದೃಷ್ಟಿಕೋನವಿರುವುದನ್ನು ಇಲ್ಲಿ ಕಾಣಬಹುದಾಗಿದೆ.

೫.೨ ಕಥೆಗಳ ಅಭಿವ್ಯಕ್ತಿ ವಿಧಾನ

ಹದವರಿತ ಬರವಣಿಗೆಯ ಮೂಲಕ ಕಥಾರಚನೆ ಮಾಡುತ್ತಿರುವ ವೈದೇಹಿ ನಮ್ಮ ನಡುವಿನ ಕೌಶಲಯುಕ್ತ ಸೃಜನಶೀಲ ಕಥೆಗಾರ್ತಿ, ಪ್ರಾದೇಶಿಕ ನೆಲೆ–ಬೆಲೆ ಅರಿತುಕೊಂಡ

ಈ ಲೇಖಕಿ ತನ್ನ ಕಥಾವಸ್ತುವಿಗೆ ಬಳಕೆ ಮಾಡಿಕೊಳ್ಳುವ ಪ್ರಾದೇಶಿಕತೆ ಕಥೆಗೆ ಹೊಸ ಮೆರುಗನ್ನು ಮತ್ತು ಅರ್ಥವಂತಿಕೆಯನ್ನು ತಂದುಕೊಡುತ್ತದೆ. ತಾನು ಬೆಳೆದ ಕುಂದಾಪುರ ಭಾಗದ ಜನಜೀವನ ಮತ್ತು ಆಡುನುಡಿಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಬರಹಗಾರ್ತಿ. ಕುಂದಾಪುರ ಭಾಗದ ಪ್ರಾದೇಶಿಕ ನುಡಿಗಟ್ಟುಗಳು ಮತ್ತು ಪದಮುಂಜಗಳನ್ನು ಕಥೆಯ ಸೊಬಗತೆಗೆ ಭಂಗಬಾರದಂತೆ ಬಳಸಿಕೊಳ್ಳಬಲ್ಲ ಚತುರೆ, ಇವರ ನಿರೂಪಣಾ ತಂತ್ರವಂತೂ ಅತ್ಯಂತ ಪರಿಣಾಮಕಾರಿಯಾದುದು. ಇವರ ಒಂದು ಕಥೆಯಾದ 'ಕ್ರೌಂಚಪಕ್ಷಿಗಳು' ಕಥಾಸಂಕಲನದಲ್ಲಿ ತಮ್ಮ ನಿರೂಪಣಾ ಕೌಶಲ್ಯವನ್ನು ಮೆರೆದಿದ್ದಾರೆ. ಕಥೆಯೊಳಗೆ ಕಥೆಯನ್ನು ಬಿಂಬಿಸುತ್ತಾ ಸಾಗುವ ಕ್ರೌಂಚಪಕ್ಷಿಗಳು ಗಂಭೀರವಾದ ರಾಷ್ಟ್ರದ ವಿಭಜನೆಯ ವಸ್ತುವನ್ನು ನಿರೂಪಿಸುತ್ತಲೇ ಕುಟುಂಬವೊಂದರ ವಿಘಟನೆಯನ್ನು ಚಿತ್ರಿಸುತ್ತಾ ಹೋಗುವ ಕಥನಕೌಶಲ ಅದ್ಭುತವಾದುದು. ಪುರಾಣ ಪ್ರತಿಮೆಯಾದ ಕ್ರೌಂಚಪಕ್ಷಿಗಳು ರೂಪಕವಾಗಿ ಹರಳುವುದು ಮತ್ತು ಒಟ್ಟು ಕಥೆಗೆ ಹೊಸ ರೂಪ ನೀಡುವುದು ಕಥೆಯ ವಿಶೇಷ, ಇಡೀ ಕಥೆಯ ನಿರೂಪಣಾ ತಂತ್ರ ಮತ್ತು ಭಾಷಾ ಶೈಲಿ ಅನನ್ಯವಾದುದು.

ಇವರ 'ಅಕ್ಕು' ಕಥೆಯಲ್ಲಿ 'ಅಕ್ಕು' ಎಂಬ ಸ್ತ್ರೀಪಾತ್ರ ಕಥೆಯ ಉದ್ದಕ್ಕೂ ವ್ಯಾಪಿಸಿಕೊಂಡ ಪ್ರಧಾನ ಪಾತ್ರ. 'ಅಕ್ಕು' ಕಥೆಯೊಳಗೆ ಸೂಕ್ಷ್ಮವಾಗಿ ಬಿಂಬಿತಗೊಳ್ಳುವ ಲೈಂಗಿಕತೆಯ ಅಂಶವನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತಾರೆ. ವಿವಾಹಗೊಂಡ ಪತಿಯಿಂದ ಲೈಂಗಿಕ ತೃಪ್ತಿಸಿಗದ ಲೋಕದೆಲ್ಲರ ಕಣ್ಣಿಗೆ 'ಹುಚ್ಚಿ' ಎಂದೆನಿಸಿಕೊಂಡ 'ಅಕ್ಕು' ಪಿತೃಪ್ರಧಾನ ಸಮಾಜದ ಟೊಳ್ಳುತನವನ್ನು ಮತ್ತು ಹುಸಿಯನ್ನು ಟೀಕೆ ಮಾಡುವ ಟೀಕಾಕಾರಳಂತೆ ಗೋಚರಿಸುತ್ತಾಳೆ. 'ಅಕ್ಕು'ವಿನ ಹುಚ್ಚು ಸಮಾಜದ ನಿಷ್ಕರುಣೆಯ ಫಲ. ವೈದೇಹಿ ನಿರೂಪಣೆಯಲ್ಲಿ 'ಅಕ್ಕು' ಪಾತ್ರ ದಟ್ಟವಾಗಿ, ಪರಿಣಾಮಕಾರಿಯಾಗಿ ಮೂಡಿಬರುತ್ತವೆ. 'ಅಕ್ಕು'ವಿಗೆ ಹೊಡೆತ ಬಿದ್ದರೂ ಅವಳ ನಿರ್ಬಿಢೆಯ ಅಭಿವ್ಯಕ್ತಿಯನ್ನು ಹತ್ತಿಕ್ಕಲಾಗುವುದಿಲ್ಲ. ಪುರುಷಪ್ರಧಾನ ಸಂಸ್ಕೃತಿಯ ಅವಮಾನವೀಯತೆಗೆ ಸೆಡ್ಡು ಹೊಡೆಯುವ ಬಂಡಾಯಗಾರ್ತಿಯಾಗಿ ಅಕ್ಕುವನ್ನು ಚಿತ್ರಿಸುವಲ್ಲಿ ವೈದೇಹಿ ಸಮರ್ಥರಾಗುತ್ತಾರೆ.

ವೈದೇಹಿಯವರ ಕಥಾಗುಚ್ಛದ ಮತ್ತೊಂದು ಪ್ರಧಾನ ಕಥೆ 'ಅಮ್ಮಚ್ಚಿಯೆಂಬ ನೆನಪು'. 'ಅಮ್ಮಚ್ಚಿ' ಸ್ವತಂತ್ರ್ಯ ಮನೋಭಾವದ ಸ್ವಾಭಿಮಾನಿ ಹೆಣ್ಣಾಗಿ ಕಾಣಿಸಿಕೊಳ್ಳುವುದಿದೆ. ಈ ಕಥೆಯಲ್ಲಿ ವೈದೇಹಿ ಪಿತೃಪ್ರಧಾನ ಸಂಸ್ಕೃತಿಯ ಕ್ರೌರ್ಯವನ್ನು ಮತ್ತು ಅಮಾನುಷತೆಯನ್ನು ಚಿತ್ರಿಸುತ್ತಾ ಅದಕ್ಕೆ ಎದುರಾಗಿ ನಿಲ್ಲುವ ಅಮ್ಮಚ್ಚಿಯ ಪಾತ್ರವನ್ನು ಕಟ್ಟಿಕೊಡುತ್ತಾರೆ. ವೈದೇಹಿ ಸ್ತ್ರೀಪರವಾದಿಯಾದರೂ ಸ್ತ್ರೀಯೊಳಗೆ ಇದ್ದಿರಬಹುದಾದ ಪುರುಷ ಪ್ರಾಧಾನ್ಯತೆಯನ್ನು ಪ್ರಶ್ನಿಸುತ್ತಾರೆ. ಅಮ್ಮಚ್ಚಿಯ ತಾಯಿ ವೆಂಕಪ್ಪಯ್ಯ ಎಂಬ ಶೀಲಹೀನ

ವ್ಯಕ್ತಿಯ ಪರವಹಿಸುವುದು. ಪುರುಷಪ್ರಾಧಾನ್ಯ ಸಂಸ್ಕೃತಿಯ ಬೆಂಬಲಿಗಳಂತೆ ಕಂಡುಬರುತ್ತಾಳೆ. ಈ ಕಥೆಯೊಳಗೆ ಹೊಸ ತಲೆಮಾರಿನ ಪ್ರತಿನಿಧಿಯಂತೆ ಕಂಡುಬರುವ ಅಮ್ಮಚ್ಚಿ ಹೊಸ ಬದಲಾವಣೆಯನ್ನು ಬಯಸುವ, ಹೊಸತನ ಬಯಸುವ ಹೆಂಗಳೆಯಾಗಿ ಕಾಣಿಸುತ್ತಾಳೆ. ನಿರ್ಬಿಢೆಯ ಸ್ವತಂತ್ರ್ಯ ಮನೋಭಾವದ ತನ್ನದೇ ಅಸ್ಮಿತೆಯ ಅಮ್ಮಚ್ಚಿಯ ಮೇಲೆ ದೈಹಿಕವಾಗಿ ಮತ್ತು ಲೈಂಗಿಕವಾಗಿ ದಾಳಿ ಮಾಡುವ ವೆಂಕಪ್ಪಯ್ಯ ಲೈಂಗಿಕ ಹಿಂಸೆ ಮತ್ತು ಕ್ರೌರ್ಯದ ಸಂಕೇತವಾಗುತ್ತಾನೆ.

'ಅವಲಂಬಿತರು' ಕಥೆಯಲ್ಲಿ ಅಸಹಾಯಕ ಹುಡುಗಿಯಾದ 'ಅಹಲ್ಯೆ'ಯ ಅವಲಂಬಿತ ಬದುಕಿನ ಚಿತ್ರಣವಿದೆ. ಮೇಲುವರ್ಗದವರ ಯಜಮಾನಿಕೆ ಮತ್ತು ಕೆಳವರ್ಗದವರ ಅಸಹಾಯಕತೆಯನ್ನು ಕಥೆ ಸಾಧರಪಡಿಸುತ್ತಲೇ ಉಳ್ಳವರ ನಕಾರಾತ್ಮಕ ಮನೋಧರ್ಮವನ್ನು ಭಾಷೆಯ ಪರಿಯಲ್ಲೆ ಪ್ರಸ್ತುತಪಡಿಸುತ್ತದೆ. ಅಸಹಾಯಕ ಬಡವರ ಮೇಲಾಗುವ ದಬ್ಬಾಳಿಕೆಯನ್ನು ಕಂಡು ಮೌನವಾಗುವ ಸುತ್ತಲ ಪರಿಸರದ ಬಗ್ಗೆಯು ವೈದೇಹಿ ಕಥೆಯ ನೇಯ್ಗೆಯಲ್ಲೆ, ಸೂಚ್ಯವಾಗಿ ನಿರೂಪಿಸಿಬಿಡುತ್ತಾರೆ.

ಪುರುಷಪ್ರಧಾನ ವ್ಯವಸ್ಥೆಯ ನಿರ್ಬಂಧತೆಯೊಳಗೆ ಬಂಧಿಯಾಗಿ ಕಳೆದು ಕೊಳೆತುಹೋಗುವ ಸ್ತ್ರೀಮನಸ್ಸುಗಳು ಹೊಸ ಬದಲಾವಣೆಗೆ ಮನಸೋತು ಹೊಸತನ್ನು ಸೃಷ್ಟಿಸುವ ಪರಿವರ್ತನೆಯ ಅಲೆಗಳಾಗಿ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳಲ್ಲಿ' ಕಾಣಿಸಿಕೊಳ್ಳುವ ಚಿತ್ರಣವಿದೆ. ಕಥೆಗಾರ್ತಿಯ ಪೂರಕ ಸಾಂದರ್ಭಿಕ ಆವರಣ ಸೃಷ್ಟಿ, ಪರಿಣಾಮಕಾರಿಯಾದ ಭಾಷೆಯ ಬಳಕೆ ಕಥೆಯ ಓಘಕ್ಕೆ ಹೊಸ ಶಕ್ತಿ/ಚೈತನ್ಯ ತುಂಬುತ್ತದೆ. ತನ್ನೂರು ತೊರೆದು ದೂರದ ಬೊಂಬಾಯಿ ಸೇರಿದ ಗುಲಾಬಿ ಎಂಬ ಹೆಣ್ಣು ಆರ್ಥಿಕವಾಗಿ ಸಶಕ್ತಳಾಗಿ ತನ್ನೂರಿನಲ್ಲಿ ಸಿನಿಮಾ ಟಾಕೀಸ್ ಕಟ್ಟಿಸುವುದು, 'ಲಿಲ್ಲಿಬಾಯಿಯೆಂಬ ಸೂಲಗಿತ್ತಿ ಟಾಕೀಸಿನ ಗೇಟ್‌ಕೀಪರ್ ಆಗುವುದು'. ಗಂಡಸರ ಮರ್ಜಿಯಲ್ಲಿದ್ದ ಕುಲೀನ ಸಿರಿವಂತರ ಹೆಣ್ಣು ಮಕ್ಕಳು ಕ್ರಮೇಣವಾಗಿ ಧೈರ್ಯ ತಂದುಕೊಂಡು 'ಸಂಜೆ ಸಿನಿಮಾಕ್ಕೆ ಹೋಗುತ್ತೇವೆ ಎಂದು ದೃಢವಾಗಿ ಹೇಳಿ ಹೋಗುವಷ್ಟು ಧೈರ್ಯ ಕಲಿಯುವುದು' ಇತ್ಯಾದಿ ನಿರೂಪಣೆ ಮುಖೇನ ಸ್ತ್ರೀಜಗತ್ತಿನಲ್ಲಿ ಆದ ಬದಲಾವಣೆಯ ಹೊಸ ಸಂಚಲನವನ್ನು, ಸಂವೇದನೆಯನ್ನು ಸಾರುವುದಾಗುತ್ತದೆ.

ವೈದೇಹಿ ಕತೆಗಳ ನೇಯ್ಗೆಯಲ್ಲಿ ಹಾಸುಹೊಕ್ಕಾದ ಸ್ತ್ರೀಪಾತ್ರಗಳು ತಮ್ಮ ಅಸ್ಮಿತೆಯನ್ನು, ಅಸ್ತಿತ್ವವನ್ನು ಮತ್ತು ತಮ್ಮ ಸ್ವಾಭಿಮಾನವನ್ನು ಪುರುಷ ನಿಯಂತ್ರಿತ ಸಾಮಾಜಿಕ ವ್ಯವಸ್ಥೆಯಲ್ಲೆ, ಸಾದರಪಡಿಸುವ ಅನನ್ಯ ನಿರೂಪಣೆಯನ್ನು ಸೂಕ್ಷ್ಮಮತಿಯೂ, ಸ್ತ್ರೀಪರವಾದಿಯು ಆದ

ಕಥೆಗಾರ್ತಿ ಮಾಡುತ್ತಾ ಹೋಗುತ್ತಾರೆ. ತುಳಿಯಲ್ಪಟ್ಟ, ಅಂಚಿಗೆ ತಳ್ಳಲ್ಪಟ್ಟ, ಶೋಷಿತಳಾದ, ದಮನಿತವರ್ಗಕ್ಕೆ ಸೇರುವ ಸ್ತ್ರೀಸಂಕುಲದ ಅಶಯಗಳನ್ನು, ಆಶೋತ್ತರಗಳನ್ನು ಮತ್ತು ಕಾಣ್ಕೆಗಳನ್ನು ಸೂಚ್ಯವಾಗಿ ಭಾಷಾಸೂಕ್ಷ್ಮತೆಯೊಂದಿಗೆ ಕಟ್ಟಿಕೊಡುವ ನಿರೂಪಣಾ ಕೌಶಲ್ಯವಿದೆ; ಅನನ್ಯ ಅಭಿವ್ಯಕ್ತಿ ಶೈಲಿಯಿದೆ.

ಅಲೆಗಳಲ್ಲಿ ಒಂದು ಅಂತರಂಗವನ್ನು ಕಾಣುವ ಅಸ್ಥಿರತೆಯ ಅಲೆಗಳಿಗೂ ಒಂದು ಅಸ್ತಿತ್ವದ ಇರುವಿಕೆಯನ್ನು ಗುರುತಿಸುವ ವೈದೇಹಿ ಅವರು ಅದೇ ಸೂಕ್ಷ್ಮತೆಯಿಂದಲೇ ಕನ್ನಡ ಕಥಾ ಸಾಹಿತ್ಯದಲ್ಲಿ ವಿಶಿಷ್ಟ ಲೇಖಕಿಯಾಗಿ ಗುರುತಿಸಿಕೊಂಡಿದ್ದಾರೆ. ಬದುಕಿನ ತೀರಾ ಸೂಕ್ಷ್ಮವಾಗಿ ಹಾಗೂ ಅಲೆಗಳಂತೆ ತೀರಾ ಅಲ್ಪಾವಧಿಯ ಆಯುಷ್ಯದ ಮುಖ್ಯವಲ್ಲದ ಸಂಗತಿಗಳನ್ನು ದಾಖಲಿಸುವುದು ಆ ಮೂಲಕ ಅವುಗಳಿಗೆ ಅಭಿವ್ಯಕ್ತಿಯನ್ನು ಕೊಡುವುದು ವೈದೇಹಿಯವರ ಕೌಶಲ್ಯ. ವೈದೇಹಿ ಬರೆಹಗಳ ಕೇಂದ್ರ ಹೆಣ್ಣು. ಈ ಹೆಣ್ಣು ವಿವಿಧ ಜಾತಿ, ವಯಸ್ಸು, ಅಂತಸ್ತು ಸಂವೇದನೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ವೈದೇಹಿ, ಹೆಣ್ಣಿನ ಸಿದ್ಧಮಾದರಿಯೊಂದನ್ನು ನಮ್ಮ ಮುಂದೆ ಇಡುತ್ತಿಲ್ಲ. ತೀರಾ ಸಂಪ್ರದಾಯಸ್ಥರಿಂದ ಆಧುನಿಕರವರೆಗೆ, ಅವಿವಾಹಿತೆಯರಿಂದ ವಿಧವೆಯರವರೆಗೆ, ಗೃಹಿಣಿಯರಿಂದ ವೇಶ್ಯೆಯರವರೆಗೆ ಈ ಪ್ರಪಂಚ ಹರಡಿಕೊಳ್ಳುತ್ತದೆ. ಇಲ್ಲಿ ವಿದ್ಯಾವಂತರು, ಅವಿದ್ಯಾವಂತರು, ಕಳ್ಳರು, ಹುಚ್ಚರು ಇದ್ದಾರೆ. ಶೋಷಿಸುವವರು, ಶೋಷಣೆಗೆ ಒಳಗಾದವರು ಇದ್ದಾರೆ. ಅಂದರೆ ವೈದೇಹಿ ಕತೆಗಳಲ್ಲಿ ಹೆಣ್ಣು ವಿವಿಧ ಆಕೃತಿಗಳಲ್ಲಿ, ಭಾವಸ್ಥಿತಿಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ ವೈವಿಧ್ಯತೆ ಬಹುರೂಪತೆ ಬಹುಧ್ವನಿಗಳು ಬಹುಮುಖ್ಯ ಬರಹಗಾರ್ತಿಯರಲ್ಲಿ ಒಬ್ಬರನ್ನಾಗಿ ಮಾಡಿವೆ.

ಕನ್ನಡ ಸಾಹಿತ್ಯದಲ್ಲಿ ನವ್ಯದ ನಂತರದಲ್ಲಿ ಬರೆಯತೊಡಗಿದ ಲೇಖಕಿಯರಲ್ಲಿ ಪ್ರಮುಖರಾದ ವೈದೇಹಿಯವರ ಕತೆಗಳು ಹೊರಡುವುದೇ ಕುಟುಂಬ ಕೇಂದ್ರಿತ ಚಿಂತನೆಗಳಿಂದ ಹೆಣ್ಣುಮಕ್ಕಳು ಬರೆದದ್ದೆಲ್ಲ ಅಡುಗೆಮನೆ ಸಾಹಿತ್ಯ ಏನೂ ಘನವಾದದ್ದನ್ನು ಹೇಳಲಾರರೆಂಬ ವಿಮರ್ಶೆಗೆ ಅಡುಗೆ ಮನೆಯ ಹುಡುಗಿಯೂ, ಅಡುಗೆ ಮನೆಯಲ್ಲಿದ್ದುಕೊಂಡು ಪ್ರಪಂಚವನ್ನು ತಿಳಿದಿರಬಲ್ಲಳು ಎಂದು ಸಾಧಿಸಿದವರು. ಅಡುಗೆ ಮಾಡುವುದು ನನಗಿಷ್ಟ ಎಂದು ಹೇಳುವ ಮೂಲಕವೇ ಅಡುಗೆಮನೆಯ ಹುಡುಗಿಗೆ/ ಹೆಣ್ಣುಮಕ್ಕಳಿಗೆ ಅಭಿವ್ಯಕ್ತಿಯನ್ನು ಕೊಡುತ್ತಾರೆ. ಯಾವುದೇ ಸ್ತ್ರೀವಾದದ ಚಳವಳಿಯ ರೀತಿಯ ಪ್ರಭಾವಕ್ಕೆ ಒಳಗಾದರೂ ನಿರ್ದಿಷ್ಟ ಸಾಹಿತ್ಯ ಪಂಥಗಳ ಪ್ರಭಾವವನ್ನು ಆಶ್ರಯಿಸದೇ ತಮ್ಮದೇ ಮಾರ್ಗದಲ್ಲಿ ಬರೆಯುತ್ತಾ ಹೋಗುತ್ತಾರೆ. ಕುಟುಂಬದಲ್ಲಿನ ವ್ಯಕ್ತಿಗೆ ಇರುವ ಮಹತ್ವವನ್ನು, ಸಂಬಂಧಗಳ ಸೂಕ್ಷ್ಮತೆಯನ್ನು ಹೇಳುತ್ತಾ ಹೋಗುತ್ತಾರೆ. ಕುಟುಂಬ

ಕೇಂದ್ರಿತವೆಂದರೆ, ಅವರು ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾರೆಂದಲ್ಲ. ನವಿರಾದ ಆದರೆ ಅಷ್ಟೇ ಖಚಿತವಾದ ರೀತಿಯಲ್ಲಿ ಇವರ ಕಥೆಗಳ ಪಾತ್ರಗಳು ಸಂಪ್ರದಾಯಕ್ಕೆ ಅರ್ಥವಿಲ್ಲದ ಮೌಲ್ಯಗಳಿಗೆ ವಿರೋಧ ಸೂಚಿಸುತ್ತವೆ.

ವೈದೇಹಿಯವರ ತಂತ್ರಗಾರಿಕೆಯ ವಿಶೇಷತೆಯೆಂದರೆ, ಅವರ ಕಥೆಗಳಲ್ಲಿ ಪ್ರಧಾನಸೆಲೆಯ ಸಂಗತಿಗಳಾವುದು ಪ್ರಾಮುಖ್ಯ ಪಡೆಯುವುದಿಲ್ಲ. ಜೀವನದ ಚಿಕ್ಕ – ಚಿಕ್ಕ ಘಟಕಗಳು ಒಂದು ದಿನದ ಮಟ್ಟಿಗೆ ಬಂದು ಹೋಗುವ ಇತರರಿಗೆ ಮುಖ್ಯವಲ್ಲದ ಸಂಗತಿಗಳನ್ನು ಕತೆಯಾಗಿಸುವದೇ ಇವರ ಬಹುಮುಖ್ಯವಾದಂತಹ ತಂತ್ರಗಾರಿಕೆಯೆನ್ನಬಹುದು. ಹಾಗೂ ಮತ್ತೊಂದು ಬಹುಮುಖ್ಯವಾದ ತಂತ್ರಗಾರಿಕೆಯ ಅಂಶವೆಂದರೆ ಸಣ್ಣ–ಸಣ್ಣ ಸಂಗತಿಗಳೇ ಬದುಕನ್ನು ನಿಯಂತ್ರಿಸುವ ಬಗೆಯನ್ನು ವೈದೇಹಿಯವರ ಕಥೆಗಳು ಸೂಕ್ಷ್ಮವಾಗಿ ಪ್ರತಿಬಿಂಬಿಸುತ್ತವೆ.

೫.೩ ವೈದೇಹಿಯವರ ಕತೆಗಳಲ್ಲಿ ಸ್ತ್ರೀಕೇಂದ್ರಿತ ಅಭಿವ್ಯಕ್ತಿ

ವೈದೇಹಿಯವರ ಮೊದಲ ಕಥಾಸಂಕಲನ 'ಮರ–ಗಿಡ–ಬಳ್ಳಿ' ಪ್ರಕಟವಾದದ್ದು ೧೯೭೯ರಲ್ಲಿ. ಮೊದಲ ಕಥಾಸಂಕಲನದಲ್ಲಿ ಹದಿನಾಲ್ಕು ಕಥೆಗಳಿವೆ. ಬಡವರು ಮತ್ತು ಬಲ್ಲಿದವರ (ಉಳ್ಳವರು) ಪ್ರಪಂಚದ ಮಧ್ಯೆ ಇರುವ ಕಂದರ ವೈದೇಹಿಯವರ ಕಥೆಗಳಲ್ಲಿ ಯಾವಾಗಲೂ ಅನಾವರಣಗೊಳ್ಳುವುದನ್ನು ಅರಿಯಬಹುದುದಾಗಿದೆ. 'ಮದುವೆ–ಹೆಣ್ಣು–ಸೀರೆ; ಮತ್ತು 'ಓ ಜಗತ್ತೇ' ಎಂಬ ಕಥೆಗಳಲ್ಲಿ ಈ ಅಂಶವು ಕಂಡುಬರುತ್ತದೆ. ಮದುವೆ–ಹೆಣ್ಣು–ಸೀರೆಯ ಕಥೆಯಲ್ಲಿ ಬರುವ ಸುಮಾ ತನ್ನ ದೊಡ್ಡಮ್ಮ ಮತ್ತು ಆಕೆಯ ಮಗ ರಾಮಣ್ಣ ತನ್ನ ಬಗ್ಗೆ ತೋರಿಸುವ ಅಸಲಿ ಪ್ರೀತಿ ಚಿನ್ನ–ಸೀರೆಗಳ ವೈಭವದಲ್ಲಿ ಕರಗಿಹೋಗಿರುವುದನ್ನು ಅನುಭವಿಸಿ ಅರಿತುಕೊಳ್ಳುತ್ತಾಳೆ. ಪ್ರೀತಿಪೂರ್ಣ ಸ್ವಭಾವದ ಜೀವವೊಂದು ತನ್ನವರೇ ಆಗಿದ್ದವರ ನಿರ್ಲಕ್ಷ್ಯಕ್ಕೊಳಗಾದ ಸ್ತ್ರೀಯರ ನೋವುಗಳಿಗೆ ವೈದೇಹಿಯವರು ಅಭಿವ್ಯಕ್ತಿ ನೀಡಿದ್ದಾರೆ.

ವಿವಾಹ ಮತ್ತು ಕುಟುಂಬ ವ್ಯವಸ್ಥೆ ಇವೆರಡೂ ವೈದೇಹಿಯವರ ಕಥೆಗಳ ಎರಡು ಮುಖ್ಯ ವಿಷಯಗಳು. 'ಚಿಪ್ಪು' ಕಥೆಯಲ್ಲಿ 'ಯಶೀ' ಎಂಬ ಹುಡುಗಿಯ ವಿವಾಹದ ಬಗ್ಗೆ ಅವಳು ತಾನೂ ಅಂದುಕೊಂಡದ್ದು ವಿಚಾರಗಳು ಭಿನ್ನವಾಗಿವೆ. 'ಯಶೀ'ಯ ಆಕಾಂಕ್ಷೆಯೇನೆಂದರೆ ಅವಳಿಗೆ ಹೊಸ ರೀತಿಯ ಬಾಳುವೆ ಬೇಕು ಎಂಬುದು ಅವಳ ಬಯಕೆಯಾಗಿದೆ. ಪುರುಷಪ್ರಧಾನ ಜೊತೆಗೆ ತಂದೆ–ತಾಯಿಗಳ ಪ್ರಧಾನ ಪಾತ್ರವು ಯಶೀಯ ಮದುವೆ ವಿಷಯಕ್ಕೆ ಬಂದಾಗ ಅವಳು ತನ್ನಲ್ಲಿರುವ ಎಲ್ಲಾ ಬಂಡಾಯದ

ನೆಲೆಗಳನ್ನು ಹತ್ತಿಕ್ಕಿ ತನ್ನ ತಂದೆ-ತಾಯಿಗಳು ಮಾಡಿದ ಮದುವೆಯ ಪ್ರಸ್ತಾಪವನ್ನು ಒಪ್ಪಿಕೊಳ್ಳುತ್ತಾಳೆ. ಇಲ್ಲಿ ಮುಖ್ಯವಾಗಿ ಪುರುಷ ಪ್ರಧಾನವಾದಂತಹ ಅಧಿಕಾರವೇ ಜಾರಿಯಲ್ಲಿ ಬಂದಿತೇ ವಿನಃ ಸ್ತ್ರೀಯ ಅಂದರೆ 'ಯಶೀ'ಯ ಯಾವೊಂದು ಮನಸ್ಸಿನ ತುಮುಲುಗಳು ಈಡೇರುವುದಿಲ್ಲ. ಇಲ್ಲಿ ತಂದೆಯ ಜೊತೆಯಲ್ಲಿ ತಾಯಿಯೂ ಪುರುಷನಂತೆ ತೋರ್ಪಡೆಯಾಗುವುದು ಸಮಾಜದ ಸಹಜ ಸಂಗತಿಯೆನ್ನಬಹುದು. ಏಕೆಂದರೆ ಅನಾದಿಕಾಲದಿಂದಲೂ ಹೆಣ್ಣು ಪುರುಷನ ನೆರಳಲ್ಲೇ ಬೆಳೆದುಕೊಂಡು ಬಂದಿದ್ದಾಳೆ. ಇಂದಿನ ಆಧುನಿಕರಣ, ಜಾಗತಿಕರಣ, ವೈಜ್ಞಾನಿಕ, ತಂತ್ರಜ್ಞಾನದ ಯುಗದಲ್ಲಿಯು ಹೆಣ್ಣು ಸಬಲೆಯಾಗಿದ್ದರೂ ಆಕೆಯನ್ನು ಅಬಲೆಯೆಂದೇ ಹೇಳುವ ಪರಿಪಾಠ ಇಂದಿಗೂ ಕಾಣಬಹುದಾಗಿದೆ.

'ಮರ-ಗಿಡ-ಬಳ್ಳಿ' ಕತೆಯಲ್ಲಿ ವಯಸ್ಕ ಮಹಿಳೆಯ ಅಂತರಂಗದ ತಳಮಳಗಳ ಚಿತ್ರಣವಿದೆ. ಮರ-ಗಿಡ-ಬಳ್ಳಿಯ ತಾಯಿ ಅನಾರೋಗ್ಯದಿಂದ ನೆಲ ಕಚ್ಚಿ ಮಾತನಾಡಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾಳೆ. ಅವಳಿಗೆ ತನ್ನ ಸಂಬಂಧಗಳೆಲ್ಲ ಹೊಸ ಬೆಳಕಿನಲ್ಲಿ ಕಾಣತೊಡಗುತ್ತವೆ. ಅವಳಿಗೆ ತಿಳಿದಿದೆ ತಾನು ಮಕ್ಕಳ ಯೋಚನೆಯಂತೆ ಆಸ್ಪತ್ರೆಗೆ ಸೇರಿದರೆ ಆ ಬಿಳಿಯುಡುಗೆಯ ನರ್ಸ್‌ಗಳೊಡನೆ ತನ್ನ ಶರಶಯನದ ಬದುಕು ಇನ್ನೆಷ್ಟು ಘೋರವಾಗುತ್ತದೆ ಎಂದು ಆದರೂ ತಾನೊಂದು ಜಿಗುಪ್ಸೆಯ ವಸ್ತುವಾಗಿ ಅವರ ನಡುವಿರಲು ತನಗೆ ಹಕ್ಕಿದೆಯೇ ಎಂದು ಯೋಚಿಸಿ ಮಕ್ಕಳ ತೀರ್ಮಾನವನ್ನು ತಾಯಿ ಒಪ್ಪಿಕೊಳ್ಳುತ್ತಾಳೆ. ಈ ಕಥೆಯನ್ನು ಮತ್ತೊಂದು ರೀತಿಯಲ್ಲಿ ಅರ್ಥೈಸಿಕೊಳ್ಳುವುದೆಂದರೆ 'ಮರ-ಗಿಡ-ಬಳ್ಳಿ' ಸಂಕಲನದ ಹೆಸರು ಸೂಚಿಸುವಂತೆ ಜೀವನದ ಮೂರುಘಟ್ಟಗಳಲ್ಲಿ ಹೆಣ್ಣಿನ ಅನುಭವಗಳನ್ನು ಪರೀಕ್ಷಿಸುವ ಮೊದಲ ಯತ್ನಗಳು ಇದರಲ್ಲಿರುತ್ತವೆ. ಬಳ್ಳಿಯ ನೆಲೆಯಲ್ಲಿ ಅದೇ ತಾನೆ ಮದುವೆಗೆ ಸಿದ್ಧವಾದ ಹೆಣ್ಣುಗಳ ತೊಳಲಾಟ, ಆತಂಕಗಳಿದ್ದರೆ ಗಿಡದ ನೆಲೆಯಲ್ಲಿ ಸಂಸಾರಸ್ಥ ಗೃಹಿಣಿಯ ಅನುಭವಗಳ ಶೋಧನೆಯಿದೆ. 'ಮರ'ವಾಗಿ ಬದುಕಿಡೀ ಇತರರಿಗೆ ಬದುಕನ್ನು ಕಾಯ್ದು ಪೋಷಿಸುವ ಹೆಣ್ಣಿನ ವೃದ್ಧಾಪ್ಯದ ಅನುಭವಗಳೂ ಇಲ್ಲಿ ತೆರೆದುಕೊಂಡಿರುತ್ತವೆ. ಆದರೆ ವಿಮರ್ಶೆಯ ಅನುಕೂಲಕ್ಕಾಗಿ 'ಮದುವೆ' ಎಂಬ ಸಂಸ್ಥೆಗೆ ಒಳಹೋಗಲಿರುವ ಹೆಣ್ಣಿನ ಸಂಸ್ಥೆಯನ್ನು ವೈದೇಹಿಯವರು ನಿರೂಪಿಸುವ ಬಗೆಯನ್ನು ಮಾತ್ರ ಗಮನಿಸಬಹುದಾಗಿದೆ.

'ಅಂತರಂಗದ ಪುಟಗಳು' ಎಂಬ ವೈದೇಹಿಯವರ ಎರಡನೆಯ ಕಥಾಸಂಕಲನ ೧೯೮೪ರಲ್ಲಿ ಪ್ರಕಟಣೆಯಾಗಿದೆ. ಈ ಕಥಾಸಂಕಲನವು ವೈದೇಹಿಯವರ ತಂತ್ರ ಮತ್ತು ಭಾಷೆಯ ದೃಷ್ಟಿಯಿಂದ ಬಹುಮುಖ್ಯವಾದುದ್ದಾಗಿದೆ. 'ಅಂತರಂಗದ ಪುಟಗಳು'

ಸಂಕೀರ್ಣವಾದ ಸಮಸ್ಯೆಗಳನ್ನು ಬೆಳಕಿಗಿಟ್ಟು, ಯಾವ ಪಕ್ಷವನ್ನೂ ವಹಿಸದೆ ಆ ಸಮಸ್ಯೆಗಳೇ ಮಾತನಾಡುವಂತೆ ಮಾಡುವ ವೈದೇಹಿಯವರ ಕಥನಕಲೆಯ ಪ್ರಥಮ ಹೆಜ್ಜೆಯಾಗಿ ಮೂಡಿಬಂದಿದೆ. ವೈದೇಹಿಯವರು ತಮ್ಮ ಕಥೆಗಳಲ್ಲಿ ಪಾತ್ರಗಳನ್ನು ಮುಖಾಮುಖಿ–ಯಾಗಿಸುವುದರ ಮೂಲಕ ಬದುಕನ್ನು ಸೂಕ್ಷ್ಮ ಪರೀಕ್ಷೆಗೊಳಪಡಿಸುತ್ತಾರೆ. 'ಒಂದು ಅಪರಾಧ ತನಿಖೆ' ಎಂಬ ಕಥೆಯಲ್ಲಿ ಬರುವ ವಿದ್ಯಾವಂತೆ ಪದವೀಧರೆ ಕುಸುಮ ಮತ್ತು ಬಾಬಿ ಇಬ್ಬರೂ ಮದುವೆಯ ಚೌಕಟ್ಟಿನಲ್ಲಿರುವವರು. ಮದುವೆಯಿಂದ ತಾನು ಸ್ವತಃ ಹೆಚ್ಚೇನೂ ಸುಖ ನೆಮ್ಮದಿಗಳನ್ನು ಪಡೆಯದಿದ್ದರೂ ಬಾಬಿ, ಮಗಳಿಗೆ ಮದುವೆಯ ಎಲ್ಲಾ ಸುಖ ನೆಮ್ಮದಿಗಳನ್ನು ಸುರಕ್ಷತೆಗಳನ್ನು ಒದಗಿಸುವ ಆಸೆ, ಕುಸುಮಳ ದಾಂಪತ್ಯ ಕುರಿತ ಹಲವು ಪ್ರಶ್ನೆಗಳನ್ನವಳು ಎತ್ತುತ್ತಾಳೆ. "ಹೌದ ನೀವೀಗ ಇಲ್ಲಿಯೇ ಇರುವುದಂತೆ? ಗಂಡನನ್ನು ಬಿಟ್ಟಿರಂತೆ!"[೨] ಎಂಬ ಪ್ರಶ್ನೆಯನ್ನು ಕೇಳುತ್ತಲೇ ಕುಸುಮ ಎಂಬ ಕಥಾನಾಯಕಿ ಮನೆಯ ಒಳಕ್ಕೆ ಕಾಲಿಡುತ್ತಾಳೆ ಬಾಬಿ ಎಂಬ ಮನೆಗೆಲಸದ ಹೆಣ್ಣು, ಈ ನಾಟಕೀಯ ಪ್ರವೇಶ ಕುಸುಮಳ ಮನೆಗೆ ಸೀಮಿತವಾಗದೆ, ಅವಳ ಮನಸ್ಸಿಗೆ ಇಡುವ ದಾಳಿಯಾಗಿ ಕಥೆಯು ಬೆಳೆಯುತ್ತಾ ಹೋಗುತ್ತದೆ. ಕಥೆಗೆ ಮುಖ್ಯವಾಗುವುದು ಕುಸುಮಳ ದಾಂಪತ್ಯದ ಪ್ರಾತ್ಯಕ್ಷಿಕತೆ ಏನು ಎಂಬುದಲ್ಲ; ಬದಲಾಗಿ ಅಡುಗೆ ಮಾಡುವ ನಾಗಮ್ಮ ಅವಳ ಐದನೆಯ ತಾನೂ ಮನೆಗೆಲಸದ ವೃತ್ತಿಯವಳಾಗಿರುವ ಬಾಬಿ ಇವರಿಬ್ಬರೂ ಸಾಂಸಾರಿಕ ಬದುಕುಗಳ ತುಂಬ ಎದುರಿಸಿದ ಸಂಕಟಗಳು, ಅವುಗಳನ್ನು ಆ ಅವಿದ್ಯಾವಂತ ಹೆಣ್ಣುಮಕ್ಕಳಿಬ್ಬರೂ ಎದುರಿಸುವ, ದಿಟ್ಟವಾಗಿ ಬದುಕಿದ ಬಗೆಗಳು ಕಥೆಯು ಬಹುಭಾಗವನ್ನು ಆಕ್ರಮಿಸಿರುತ್ತದೆ. ಇವರಿಬ್ಬರು, ಅದರಲ್ಲೂ ಬಾಬಿಯು ತನ್ನ ಬದುಕನ್ನು ಒಂದು ಹದಕ್ಕೆ ತಂದುಕೊಂಡು ದಿಗ್ವಿಜಯ ಸಾಧಿಸಿದ ಆತ್ಮವಿಶ್ವಾಸದಲ್ಲಿ ಆ ತನ್ನ ಕಷ್ಟಕರ ಜೀವನಗಾಥೆಯನ್ನೆ ವೈಭವೀಕರಿಸಿ ಬಣ್ಣಿಸಿಕೊಳ್ಳುವುದು ಕುಸುಮಳ ಕಲಿತ ಮನದ ಸೂಕ್ಷ್ಮತೆಗೂ ಅವಳ ತಾಯಿ ಗೌರಕ್ಕನ ಸಂಪ್ರದಾಯಸ್ಥ ಸಾತ್ವಿಕತನಕ್ಕೂ ಸವಾಲಾಗತೊಡಗುತ್ತದೆ. ಈ ಸಂದಿಗ್ಧ ಸ್ಥಿತಿಯಲ್ಲಿ ಸೂಕ್ಷ್ಮ ಮನಸ್ಸಿನ ಕುಸುಮಾ ಮಾನಸಿಕ ಒಳತೋಟಿಗೆ ಒಳಗಾಗಿ ಹಳವಂಡವನ್ನು ಕಾಣುವಂತಾಗುತ್ತದೆ.

ಗೌರಕ್ಕನ ಕಣ್ಣ ಮುಂದೆ ಹುಟ್ಟಿ ಬೆಳೆದಿದ್ದ ಬಾಬಿ, ಕಿರಿ ವಯಸ್ಸಿನಲ್ಲೇ ತನ್ನ ಮಗಳಿಗೆ ಮದುವೆ ಮಾಡಲು ಉತ್ಸುಕಳಾಗಿರುವುದಕ್ಕೆ ಅವಳದೇ ಕಾರಣಗಳಿವೆ. 'ಹೂ ಈಗಲೇ ಸಮ. ನಿಮಗೆ ಗೊತ್ತಿಲ್ಲ, ಆಮೇಲೆ ಅಂಥವ ಬೇಡ ಇಂಥವ ಬೇಕು ಎಂತ ಕೂತುಕೊಳ್ಳುವುದು, ಕಡೆಗೆ ಯಾರನ್ನಾದರೂ ಕಟ್ಟಿಕೊಂಡು ಓಡಿಹೋಗುವುದು. ಇಲ್ಲವೆ ಗಂಡನಮನೆಯಲ್ಲಿ ಬೇಯಲಿಕ್ಕಾಗದೆ ಅರ್ಧ ಆಟಕ್ಕೆ ವಾಪಸ್ಸು ಬರುವಂತೆ ಬರುವುದು..

ಮುಂತಾದ ಮಾತುಗಳಲ್ಲಿ ಬಾಬಿ ಅರಿವಿಲ್ಲದೆಯೇ ಕುಸುಮ ಮತ್ತು ಅವಳ ತಾಯಿ ಇಬ್ಬರಿಗೂ ಮನಸ್ಸಿನಲ್ಲಿ ಅಳುಕು ಹುಟ್ಟಿಸುತ್ತಿದ್ದಾಳೆ. ಇದಕ್ಕೆ ವಿರುದ್ದವಾಗಿ ತನ್ನ ಬಗ್ಗೆ ಅವಳು ಕೊಚ್ಚಿಕೊಳ್ಳುವುದೆಲ್ಲ ಕುಸುಮಳು ಸೋಲಿನ ಭಾವವನ್ನು ಹುಟ್ಟಿಸುವಷ್ಟು ಬಲಿಷ್ಠವಾಗಿರುತ್ತವೆ.

ಕೊನೆಗೆ ಕುಸುಮಾ ಕಾಣುವ ಹಳವಂಡದಲ್ಲಿ ತಾನು ಕಟಕಟೆಯಲ್ಲಿ ನಿಂತ ಒಬ್ಬ ಅಪರಾಧಿಯಂತೆಯು, ಬಾಬಿ ತನ್ನ ಅಪರಾಧದ ತನಿಖೆ ಮಾಡುವ ನ್ಯಾಯಾಧೀಶಳ ಹಾಗೆಯೂ ಕಾಣತೊಡಗುತ್ತಾಳೆ. ಗಂಡನನ್ನು ತೊರೆದಿರುವುದು ಒಂದು ಮಹಾಪರಾಧ ಎಂಬಂತೆ ಬಾಬಿ ಬಗೆ ಬಗೆಯಾಗಿ ಅದೇ ಪ್ರಶ್ನೆಯನ್ನೇ ಕೇಳುತ್ತಿರುವ ಅನುಭವವಾಗುತ್ತದೆ. "ಅಲ್ಲ ಗಂಡನ್ನ ಬಿಟ್ಟು ಬಂದದ್ದು ಯಾಕೆ ಎಂತ? ಕುಡುಕನ, ಸೂಳೆಗಾರನ ಅಥವಾ ನಿಮಗೆ ಹೊಡೆಯುತ್ತಿದ್ದನ? ... ಕೇವಲ ಗಂಡನ್ನ ಬಿಟ್ಟು ಬಂದದ್ದಕ್ಕೆ ಇಷ್ಟು ಮಕಾದವ್ವ?..... ಇಷ್ಟಕ್ಕೂ ಗಂಡನ ಮನೆಯಿಂದ ಓಡಿ ಬಂದದ್ದು ಯಾಕೆ ಅಂತ? .... ಕೊನೆಯ ಪ್ರಶ್ನೆ ನೀವೇ ಗಂಡನ್ನ ಬಿಟ್ಟು ಬಂದಿರ?.... ಅಥವಾ ನಿಮ್ಮ ಗಂಡನೇ ನಿಮ್ಮನ್ನು ಬಿಟ್ಟನಾ?... ಕುಸುಮಾಳ ಈ ನ್ಯಾಯಾಲಯ ಅವಳ ಮನಸ್ಸೇ ಕಲ್ಪಿಸಿದ ಫ್ಯಾಂಟಸಿಯೇ ಆದರೂ ಇಡೀ ಸಮಾಜ ಗಂಡ ಬಿಟ್ಟ ಅಥವಾ ಗಂಡನ್ನ ಬಿಟ್ಟ ಹೆಣ್ಣಿನ ಮೇಲೆ ಪ್ರೇರಿಸುವ ಪ್ರಶ್ನೆಗಳೆಲ್ಲದರ ಪ್ರತೀಕ ಅದು. ಕಥೆಯ ಕೊನೆಯಲ್ಲಿ ಈ ಭ್ರಮೆಯ ಚಿತ್ರ ಕಳಚಿದ ಮೇಲೆ ಅಲ್ಲಿ ಖಾಲಿ ಪೀಠ ಮಾತ್ರವಿತ್ತು. ಅದೂ ಗೆದ್ದಲು ಹಿಡಿದು ಬೀಳುವುದರಲ್ಲಿತ್ತು"[೩] ಎಂಬುದು ಆ ಸಾಂಸ್ಥಿಕ ನ್ಯಾಯವ್ಯವಸ್ಥೆಯ ಅರ್ಥಹೀನತೆಯನ್ನು ಧ್ವನಿಯಾಗಿಸುವ ಲೇಖಕಿ ಗಂಡಸಿನ ಸ್ವಾಮ್ಯದ ಪರಿಧಿಯನ್ನು ಮೀರದಂತೆ ಹೆಣ್ಣಿನ ಮೂಲಕವೇ ಹೆಣ್ಣನ್ನು ನಿಯಂತ್ರಿಸುವ ರೀತಿಯನ್ನೂ ಸೂಚಿಸುತ್ತಾರೆ.

ವೈದೇಹಿಯವರ ವಿಶೇಷತೆಯೆಂದರೆ ಅವರ ಕತೆಗಳಲ್ಲಿ ಪ್ರಧಾನಸೆಲೆಯ ಸಂಗತಿಗಳಾವುವು ಪ್ರಾಮುಖ್ಯ ಪಡೆಯುವುದಿಲ್ಲ, ಜೀವನದ ಅತೀ ಚಿಕ್ಕ ಚಿಕ್ಕ ಘಟಕಗಳು ಒಂದು ದಿನದ ಮಟ್ಟಿಗೆ ಬಂದು ಹೋಗುವ, ಇತರರಿಗೆ ಮುಖ್ಯವಲ್ಲದ ಸಂಗತಿಗಳನ್ನು ಕತೆಯಾಗಿಸುತ್ತಾರೆ ಹಾಗೂ ಸಣ್ಣ ಸಂಗತಿಗಳೇ ಬದುಕನ್ನು ನಿಯಂತ್ರಿಸುವ ಬಗೆಯನ್ನು ವೈದೇಹಿಯ ಕತೆಗಳು ಸೂಕ್ಷ್ಮವಾಗಿ ಗ್ರಹಿಸುತ್ತವೆ. ಈ ಸೂಕ್ಷ್ಮ ಗ್ರಹಿಕೆಗೆ ಹೊಂದಿಕೆಯಾಗುವ ಕತೆಯೆಂದರೆ 'ಧರ್ಮಸೂಕ್ಷ್ಮ ಪುರಾಣ'. ವೈದೇಹಿಯವರ ಎಲ್ಲಾ ಕತೆಗಳಿಗಿಂತ ಈ ಕತೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪ್ರತಿಯೊಂದು ಕ್ಷೇತ್ರಗಳೊಂದಿಗೆ ಮುಖಾಮುಖಿ-ಯಾಗುತ್ತದೆಂಬುದನ್ನು ಕಥಾಹಂದರವನ್ನು ತಿಳಿದವರು ಗ್ರಹಿಸಬಲ್ಲರಷ್ಟೇ. ಈ ಕತೆಯೂ ನರಹರಿ, ಹೆಂಡತಿ ಸುಮಂಗಲ, ತಂದೆ ಕೃಷ್ಣಪ್ಪ, ತಮ್ಮ ಮನೆಯವರಂತೆ ಭಾವಿಸಿಕೊಳ್ಳುವ ರತ್ನಕ್ಕ ಮಾಬಲರಾಯ ಸ್ನೇಹಿತ ಕೇಶವರೆಂಬ ಪಾತ್ರಗಳಿಂದ ಕೂಡಿದೆ.

ಕತೆಯ ಪಾತ್ರಗಳಿಗೂ, ಈ ಕತೆಗೆ ಇಟ್ಟ ಶೀರ್ಷಿಕೆಗೂ ಎಲ್ಲೋ ಒಂದು ಕಡೆ ಅವಿನಾಭಾವ ಸಂಬಂಧವಿದೆ ಎನಿಸುತ್ತದೆ. ಅಂದರೆ, ಕತೆಯ ಶೀರ್ಷಿಕೆಯನ್ನು ಬಿಡಿಬಿಡಿಯಾಗಿ ಅರ್ಥೈಸಿಕೊಂಡಾಗ ಕತೆಯ ಹಂದರದಲ್ಲಿರುವ ವಿಷಯದ ಜೊತೆ ಹೆಣೆದುಕೊಳ್ಳುತ್ತದೆ. ಅದು ಹೇಗೆಂದರೆ ಕತೆಯ ಶೀರ್ಷಿಕೆ 'ಧರ್ಮಸೂಕ್ಷ್ಮ ಪುರಾಣ' ಎಂದು. ಹಾಗಾದರೆ 'ಧರ್ಮ' ಎನ್ನುವುದನ್ನು ಅರ್ಥೈಸುವುದಾದರೆ 'ಧರ್ಮ' ಎಂಬ ಪದದ ಅನುವಾದದ ಸರಣಿಯು ಯಾವುದು ಬದುಕನ್ನು ಎತ್ತಿ ಹಿಡಿಯುತ್ತದೆಯೋ ಅಥವಾ ಬೆಂಬಲಿಸುತ್ತದೆಯೋ ಅದೇ ಮಾನವನ ಆಚರಣೀಯ ಮತ್ತು ಆದರಣೀಯ ಧರ್ಮವಾಗಿದೆ. ಇದು ಸಾಮಾನ್ಯವಾಗಿ ಇಂಗ್ಲೀಷ್‌ನಲ್ಲಿ ಅನುವಾದಿಸಿದಾಗ ಕಾನೂನು, ನಿಯಮಾವಳಿ ಎಂಬ ಧ್ವನಿ ಹೊರಡುತ್ತದೆ. 'ಸೂಕ್ಷ್ಮ' ಎನ್ನುವುದು ವ್ಯಾಕರಣದಲ್ಲಿ ಒಂದು ನಾಮಪದವಾಗಿ ಕಾಣಿಸಿಕೊಳ್ಳುತ್ತದೆ. ಇದರ ಅರ್ಥವೆಂದರೆ ಅತ್ಯಂತ ಚಿಕ್ಕದಾಗಿರುವಂಥದು, ಚಿಕ್ಕಕಣ, ಅಣು, ಕ್ಷುದ್ರವಾದುದು, ಕ್ಷುಲ್ಲಕವಾದುದು, ಕೋಮಲ, ನಾಜೂಕು, ಚತುರತೆ, ಜಾಣ್ಮೆ, ಪರಮಾತ್ಮ, ಎಂಬರ್ಥಗಳನ್ನು ಅಡಗಿಸಿಕೊಂಡಿದೆ.

'ಪುರಾಣ'ವು ಆಂಗ್ಲಭಾಷೆಯ 'myth'ನ ಜೊತೆ ಸಮೀಕರಣಗೊಂಡಿದೆ. ಪುರಾಣವನ್ನು ಪುರಾ–ನವ–ಪುರಾಣ ಎಂಬುದಾಗಿ ವಿಭಜಿಸಿ ಅರ್ಥೈಸಲಾಗಿದೆ. 'ಪುರಾ' ಎಂದರೆ ಪುರಾತನವಾದುದು ಎಂತಲೂ 'ನವ' ಎಂದರೆ ನಿತ್ಯನೂತನವಾದುದು ಎಂತಲೂ ಹೇಳಲಾಗಿದೆ. ಹಾಗಾಗಿ ಪುರಾಣ ಎಂಬುದು ಭಾಷಿಕ ಅಭಿವ್ಯಕ್ತಿಗೆ ಒಳಪಟ್ಟ ಒಂದು ದೀರ್ಘ ನಿರೂಪಣೆ ಪ್ರಾಚೀನ ಮಾನವ ತನ್ನ ಸುತ್ತಮುತ್ತಲಿನ ಪ್ರಾಣಿ, ಪಕ್ಷಿ, ಸಸ್ಯಸಂಕುಲಗಳ ಹಾಗೂ ಒಟ್ಟಾರೆ ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳ ಬಗೆಗೆ ಕಟ್ಟಿಕೊಂಡ ಕಾಲ್ಪನಿಕ ಕಥೆಗಳು ಇಲ್ಲಿವೆ. ಜೊತೆಗೆ ಪೂಜ್ಯ, ಗೌರವಯುತ ವ್ಯಕ್ತಿಗಳ, ದೈವಗಳ, ಸಾಂಸ್ಕೃತಿಕ ನಾಯಕರ ಜೀವನ ವಿವರಗಳು ಹಾಗೂ ಜನಸಮುದಾಯಗಳ ನಡುವೆ ಬದುಕಿರುವ ಧಾರ್ಮಿಕ ನಂಬಿಕೆಗಳು, ಆಚರಣೆ ಸಂಪ್ರದಾಯಗಳು ಪ್ರಧಾನವಾಗಿವೆ. ಇಂಥ ಸಂಗತಿಗಳನ್ನು ಅದ್ಭುತ ಶೈಲಿಯಲ್ಲಿ ವಿವರಿಸುವ ಮತ್ತು ಸಮರ್ಥಿಸುವ ಕಥನಗಳಾಗಿಯೂ ಪುರಾಣಗಳು ಕಾರ್ಯನಿರ್ವಹಿಸುತ್ತವೆ. ಒಂದು ದೃಷ್ಟಿಯಲ್ಲಿ ವಿಜ್ಞಾನ ಪೂರ್ವಯುಗದ ವಿಜ್ಞಾನಗಳು. ಪುರಾಣಗಳು ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಊಹಾತ್ಮಕ ನೆಲೆಯಿಂದ ವಿವರಿಸುವಂತಹವು ಈ ದೃಷ್ಟಿಯಿಂದ ನೋಡಿದಾಗ ಪುರಾಣಗಳ ವಸ್ತು ಏನೆಂಬುದು ಸ್ಪಷ್ಟವಾಗುತ್ತವೆ. ಪ್ರಸ್ತುತ ವಿಚಾರದಲ್ಲಿ 'ಅಮರಕೋಶ'ದಲ್ಲಿ ದಾಖಲಾದ ಸಾಲು ಗಮನಾರ್ಹ. 'ಸರ್ಗಶ್ಚ ಪ್ರತಿಸರ್ಗಶ್ಚವಂಶೋ ಮನ್ವಂತರಾಣಿಚ ವಂಶಾನು। ಚರಿತಂ ಚಾಪಿ ಪುರಾಣಂ ಪಂಚಲಕ್ಷಣಂ' ಅಂದರೆ ಪುರಾಣವೆಂಬುದು ಸ್ವರ್ಗ, ಪ್ರತಿಸ್ವರ್ಗ, ವಂಶ, ಮನ್ವಂತರ ಮತ್ತು ವಂಶಾನುಚರಿತೆ ಎಂದು ಐದು ಲಕ್ಷಣಗಳುಳ್ಳದ್ದು.

ಮೇಲೆ ತಿಳಿಸಿದ 'ಧರ್ಮಸೂಕ್ಷ್ಮ ಪುರಾಣ' ಎಂಬರ್ಥಗಳ ಪರಿಭಾಷೆಯಲ್ಲಿ ಅಡಗಿರುವ ಸಾಮಾಜಿಕ ಸ್ತರವಿನ್ಯಾಸಗಳ ಅಡಿಯಲ್ಲಿ ವೈದೇಹಿಯವರ ಈ ಕತೆ (ಧರ್ಮಸೂಕ್ಷ್ಮ ಪುರಾಣ)ಯನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗುವುದು. ಈ ಕತೆಯಲ್ಲಿ ಬರುವ ಪಾತ್ರಗಳು ಅತ್ಯಂತ ಮಹತ್ವಪೂರ್ಣವಾದ ಅರ್ಥವನ್ನು ಒಳಗೊಂಡಿರುವಂತವುಗಳು. ಕತೆಯು ಪ್ರಾರಂಭವಾಗುವುದು ಪುರುಷವರ್ಗದಿಂದ. ನರಹರಿ ಎನ್ನುವ ವ್ಯಕ್ತಿಯಿಂದ ನರ– ಅಂದರೆ ಮನುಷ್ಯ ಎಂದು ಹರಿ–ಕೃಷ್ಣ ಎಂದರ್ಥ. ಈ ಎರಡು ಶಬ್ದಾರ್ಥಗಳು ಕೂಡ ಪುರುಷವರ್ಗವನ್ನು ಸೂಚಿಸುತ್ತವೆ. ಕತೆಯ ಪ್ರಮುಖ ನಾಯಕ 'ನರಹರಿ' ಈ ನರಹರಿಯ ಒಳಕೋಟೆಗಳ ಪದಪುಂಜಗಳೇ ವೈದೇಹಿಯವರು ಬರೆದ ಧರ್ಮಸೂಕ್ಷ್ಮ ಪುರಾಣ ಎಂಬ ಕತೆ ಇದು ಪುರುಷವರ್ಗದ ಒಳ ತುಮುಲಗಳನ್ನು ಪ್ರದರ್ಶಿಸುವ ಬಹುಮುಖ್ಯವಾದ ಕತೆಯಾಗಿದೆ. ಒಬ್ಬ ಸ್ತ್ರೀವಾದಿ ಲೇಖಕಿಯಾದ ವೈದೇಹಿಯವರು ಪುರುಷನನ್ನು ಕೇಂದ್ರಬಿಂದುವನ್ನಾಗಿಟ್ಟುಕೊಂಡು ಪುರುಷನಾಳದ ಆರ್ಥಿಕ ಅಂಶಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. 'ನರಹರಿಗೆ' ಬಂದ ಮೊದಲ ದಿನದ ಪೋನ್ ಅವನ ಇಡೀ ಪುರುಷತ್ವವನ್ನೇ ಸ್ವಾರ್ಥಗೊಳಿಸಲಾರಂಭಿಸಿತು.

ಮಾಬಲರಾಯ 'ನರಹರಿ'ಗೆ ಸಂಬಂಧಿಕನಲ್ಲ ಗೆಳೆಯನಲ್ಲ, ಆದರೆ ಯಾರು? ಎಂಬ ಪ್ರಶ್ನೆ ಈ ಕತೆಯಲ್ಲಿ ಪ್ರಶ್ನೆಯಾಗಿಯೇ ಉಳಿದಿದೆ. ಮಾಬಲರಾಯ ನರಹರಿಗೆ ನನಗೆ ಸಹಾಯ ಮಾಡು ನಾನು ಕಷ್ಟದಲ್ಲಿದ್ದೇನೆ ನನ್ನ ಕಡೆ ಇರುವ ಅರವತ್ತು ಸೈಟುಗಳಲ್ಲಿ ಒಂದನ್ನು ನೀನು ತೆಗೆದುಕೊಳ್ಳಬೇಕು ನಾನೇ ನಿನಗೆ ಒಂದು ಲಕ್ಷ ರೂಪಾಯಿಯನ್ನು ಕೊಡುತ್ತೇನೆ ಎಂದು ಫೋನ್‌ನಲ್ಲಿ ಹೇಳಿದಾಗ ನರಹರಿಯಲ್ಲಿ ಗೊಂದಲ ಉಂಟಾಗುತ್ತದೆ. ಮಾಬಲರಾಯನ ಆ ಒಂದು ಫೋನಿನ ಮಾತುಗಳು ನರಹರಿಯ ಮನಸ್ಸನ್ನೂ ಕಲಕಿತು. ವೈದೇಹಿಯವರು ಮಾಬಲರಾಯ ಮತ್ತು ನರಹರಿಯ ಪಾತ್ರಗಳ ಮೂಲಕ ಪುರುಷ ವ್ಯವಸ್ಥೆಯನ್ನು ಪ್ರಶ್ನಿಸುವುದರ ಜೊತೆಗೆ ಅವರಲ್ಲಿರುವ ಅಂಧಾನುಕರಣೆಯನ್ನು ಗುರುತಿಸುತ್ತಾ ಹೋಗುತ್ತಾರೆ. ಆದರೆ ಸ್ತ್ರೀವಾದಿ ಹಿನ್ನೆಲೆಯಲ್ಲಿ ಈ ಕತೆಯಿಲ್ಲ ಎಂದಲ್ಲ; ಇದೆ ಆದರೆ ಅದು ಕತೆಯಲ್ಲಿ ಗೌಣವಾಗಿದೆ. ಇಲ್ಲಿ ಪುರುಷವರ್ಗದಲ್ಲಿಯೇ ಭ್ರಷ್ಟಾಚಾರ ಹೆಚ್ಚಾಗಿರುವುದನ್ನು ಸೂಚ್ಯವಾಗಿ ತಿಳಿಸಲು ಪ್ರಯತ್ನಿಸಿದ್ದಾರೆ. ಕತೆಯು ಪ್ರಾರಂಭವಾಗುವುದು ಮಾತ್ರ ಪುರುಷನಿಂದರೂ ಕೊನೆಗೊಳ್ಳುವುದು ಸ್ತ್ರೀಯಿಂದಲೇ ಎಂಬುದನ್ನು ಮರೆಯುವಂತಿಲ್ಲ. ವೈದೇಹಿಯವರ ಆಯ್ಕೆಯ ಕಥಾವಸ್ತು ಚಿಕ್ಕದಾದರೂ ಅದೇ ಕತೆಯ ಮುಖ್ಯಭೂಮಿಕೆಯಾಗುತ್ತದೆ.

ಚಿಕ್ಕವಸ್ತುವನ್ನಿಟ್ಟುಕೊಂಡು ಕಥೆ ಹೆಣೆದರೂ, ಅಲ್ಪವಾದದ್ದೂ ಕೂಡ ಸಮಾಜದಲ್ಲಿ ಹೇಗೆ ಮುಖ್ಯವಾಗುತ್ತದೆ ಎಂಬುದನ್ನು ತಿಳಿಸುವುದು ವೈದೇಹಿಯುವರ ಕತೆಗಳ ವೈಶಿಷ್ಟ್ಯಗಳಲ್ಲೊಂದಾಗಿದೆ.

ಪುರುಷನಾದವನು ಸ್ತ್ರೀಯಿಂದ ಮುಚ್ಚಿಟ್ಟ ವಿಷಯ ಆ ವ್ಯಕ್ತಿಯನ್ನು ಸುಮ್ಮನಿರಲು ಬಿಡುವುದಿಲ್ಲ ಇದು ನಿಜ ಕೂಡ. ಜೀವನದ ಸಂಗಾತಿಗೆ ಪ್ರತಿದಿನ ನಡೆದ ಪ್ರತಿಯೊಂದು ಘಟನೆಗಳನ್ನು ತಿಳಿಸುತ್ತಿದ್ದ ಒಬ್ಬ ವ್ಯಕ್ತಿ ಎಂದಾದರೊಂದು ದಿನ ಭ್ರಷ್ಟಾಚಾರದ ಸಂಗತಿಯನ್ನು ಹೇಳದ ವ್ಯಕ್ತಿಗೆ ಮನಸ್ಸು ಸುಮ್ಮನಿರುವುದಿಲ್ಲ, ನರಹರಿಗೆ ಮಾಬಲರಾಯ ಕೊಟ್ಟಂತಹ ಎಪ್ಪತ್ತೈದು ಸಾವಿರದ ಹಣದ ವಿಷಯವನ್ನು ತಿಳಿಸಿರುವುದಿಲ್ಲ. ತಿಳಿಸಲೋ–ಬೇಡವೋ ಎಂಬ ಜಿಜ್ಞಾಸೆಯಲ್ಲೇ ನರಹರಿ ತೊಳಲಾಡುತ್ತಿರುತ್ತಾನೆ. ಆದರೆ ಒಂದು ದಿನ ಅವರ ಮನೆಗೆ ಬಂದಂತಹ 'ರತ್ನಕ್ಕ'ನ ಹತ್ತಿರ ಎಲ್ಲವನ್ನು ತಿಳಿ ಹೇಳುತ್ತಾನೆ. ಇದಕ್ಕೆ ಸೂಕ್ಷ್ಮಮತಿಯಾದ 'ರತ್ನಕ್ಕ' ಹೇಳುವ ಮಾತುಗಳೇ ಕತೆಯ ಕೊನೆಯ ಸಾಲುಗಳು. "ಪುಣ್ಯಾತ್ಮಾ, ಸದ್ಯ ಮೊದಲು ಒಂದು ಕೆಲಸ ಮಾಡು. ನೋಡವಳನ್ನು ಅಯ್ಯಮ್ಮ ಹೇಗಾಗಿದ್ದಾಳೆ. ಅವಳಿಗೆ ಎಲ್ಲ ಹೇಳು. ಹೇಳಿಕೊಂಡು ಬಿಡು. ನಿನಗೂ ತುಸು ಹಗುರ. ಅವಳ ಆ ಕೆಟ್ಟ ದುಗುಡವೂ ಅಷ್ಟರಮಟ್ಟಿಗೆ ಕಳೆದು ಒಮ್ಮೆ ಬೆಳಕಾಗಲಿ"[೪] ಎನ್ನುತ್ತಾಳೆ.

ಮೇಲುನೋಟಕ್ಕೆ ವೈದೇಹಿಯವರು ಕತೆಗೆ ಆಯ್ದುಕೊಂಡ ವಸ್ತು ಪುರುಷನನ್ನಾದರೂ ಒಳನೋಟದಲ್ಲಿ ಸಂಪೂರ್ಣವಾಗಿ ಸ್ತ್ರೀಯನ್ನೇ ಕೇಂದ್ರೀಕರಿಸಿದ್ದಾರೆ. ಕತೆಯು ಬೆಳಕಿನಲ್ಲಿ ಪ್ರಾರಂಭವಾಗಿ ಕತ್ತಲಲ್ಲಿ ಪೂರ್ಣಗೊಳ್ಳುತ್ತದೆ. ಸೂರ್ಯನಿರುವ ಸಮಯದಲ್ಲಿ ಮಾಬಲರಾಯ ನರಹರಿಗೆ ಫೋನ್ ಮಾಡುತ್ತಾನೆ. ಕತ್ತಲಾದ ಸಮಯದಲ್ಲಿ ಇಬ್ಬರೂ ಕೂಡಿ ಚರ್ಚಿಸಿ ಆರ್ಥಿಕ ವ್ಯವಹಾರವನ್ನು ಮುಗಿಸುತ್ತಾರೆ. ಅಂದರೆ ಇಲ್ಲಿ ಕತ್ತಲು ಬೆಳಕುಗಳ ಪ್ರತಿಬಿಂಬಗಳನ್ನು ಕೊಡುವುದರ ಮುಖಾಂತರ ವೈದೇಹಿಯವರು ಜೀವನದ ಏಳುಬೀಳುಗಳ ಜೀವನಶೈಲಿಯನ್ನು ಸೂಚ್ಯವಾಗಿ ತಿಳಿಸಲು ಪ್ರಯತ್ನಿಸುತ್ತಾರೆ. ಪುರುಷನಾದವನಿಗೆ ಕತ್ತಲಲ್ಲಿ ಸುಖ ಕಂಡರೆ ಅದೇ ಕತ್ತಲಲ್ಲಿ ಹೆಣ್ಣು ಕಷ್ಟವನ್ನು ಅನುಭವಿಸಿರುತ್ತಾಳೆಂಬುದನ್ನು ಅಲ್ಲಗಳೆಯುವಂತಿಲ್ಲ. ರತ್ನಕ್ಕನು ನರಹರಿಗೆ ಕೊನೆಯದಾಗಿ ಹೇಳುವ ಮಾತುಗಳಲ್ಲಿ ಸುಮಂಗಲಾಳ ನೋವು ಕಾಣುತ್ತದೆ. ಸಮಾಜದಲ್ಲಿ ಬದುಕುತ್ತಿರುವ ಹೆಣ್ಣು ನಂಬಿರುವುದು ಸಮಾಜವನ್ನಲ್ಲ. ಬದಲಾಗಿ ತನ್ನನ್ನು ವಿವಾಹವಾದ ಗಂಡನನ್ನು. ಸಮಾಜದಿಂದ ತನಗಾಗಬೇಕಾದದ್ದು ಆಗದಿದ್ದರೆ, ಸಿಗಬಾರದ್ದು ಸಿಗದಿದ್ದರೆ ಪ್ರಸ್ತುತ ಸಂದರ್ಭದಲ್ಲಿಯೇ ಅದಕ್ಕೆ ಪ್ರತಿಕ್ರಿಯೆ ನೀಡುತ್ತಾಳೆ. ಆದರೆ ತನ್ನನ್ನು ನಂಬಿ ವಿವಾಹವಾದ ಪತಿದೇವನಿಂದ ತಾನು ಬಯಸಿದ್ದು ಸಿಗದಿದ್ದಾಗ ಅದರ ನೋವುಗಳನ್ನು ತನ್ನಂತರಾಳದಲ್ಲಿರಿಸಿಕೊಂಡು

ಕೊರಗುತ್ತಿರುತ್ತಾಳೆ. ಭಾರತದ ಮಹಾಕಾವ್ಯಗಳಲ್ಲಿ ಬರುವ ಸೀತೆ, ಊರ್ಮಿಳೆ, ದ್ರೌಪದಿ, ಚಂದ್ರಮತಿ, ಜನಪದ ಕಥನಗಳ ಭಾಗೀರಥಿ, ಕೊಂಡದ ಕಾಟವ್ವ, ಮದಗದ ಕೆಂಚವ್ವ, ಮುಂತಾದವರು ತಮ್ಮ ಪ್ರಾಣ ತೆತ್ತದ್ದು ಸ್ವಂತಕ್ಕಲ್ಲ. ಬದಲಾಗಿ ಪುರುಷ ನಿರ್ಮಿತ ಮೌಲ್ಯಗಳಿಗೆ ಎಂಬುದು ಮಹಾಕಾವ್ಯಗಳನ್ನು ಅಧ್ಯಯನಿಸಿದಾಗ ತಿಳಿದುಬರುತ್ತದೆ.

ವೈದೇಹಿ 'ಧರ್ಮಸೂಕ್ಷ್ಮ ಪುರಾಣ' ಕತೆಯ ಮೂಲಕ ಆರ್ಥಿಕ ಮೀಮಾಂಸೆಯೊಂದನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆನಿಸುತ್ತದೆ. ಹಣದ ವಿಚಾರವನ್ನು ಕತೆಯ ವಸ್ತುವನ್ನಾಗಿಟ್ಟುಕೊಂಡು ಇದರ ಮೂಲಕವಾಗಿ ಕಾಣದೇ ಇರುವಂತಹ ವ್ಯಕ್ತಿಯಿಂದ ಪರಿಚಯವಿಲ್ಲದಿರುವ ವ್ಯಕ್ತಿಯಿಂದ ಕವಯಿತ್ರಿ ಫೋನ್ ಮಾಡಿಸುವುದರ ಮೂಲಕ ಆರ್ಥಿಕ ವ್ಯವಸ್ಥೆಯಿಂದಾಗುವ ಪುರುಷನ ಮಾನಸಿಕ ತುಮುಲಗಳನ್ನು ಸೂಚ್ಯವಾಗಿ ಹೇಳಹೊರಟಿದ್ದಾರೆ. ಹಣದ ಆಮಿಷದಿಂದ ವ್ಯಕ್ತಿಯನ್ನು ಹೇಗೆ ಬೇಕಾದರೂ ಅಸಹಾಯಕನನ್ನಾಗಿ ಮಾಡಬಹುದು ಎಂಬುದನ್ನು ಕಥೆ ಧ್ವನಿಸುತ್ತದೆ.

ಕಥೆಗಾರ್ತಿ ಸೃಷ್ಟಿಸಿಕೊಂಡಿರುವ ಆರ್ಥಿಕ ಮೀಮಾಂಸೆಯು ಭೂತ–ವರ್ತಮಾನ–ಭವಿಷ್ಯತ್ತಿಗೆ ಹೊಂದಾಣಿಕೆಯಾಗುತ್ತದೆ. ಮಾಬಲರಾಯನ ಆರ್ಥಿಕಸ್ಥಿತಿಯ ಬಗ್ಗೆಯೂ ಚಿಂತಿಸಬೇಕಾಗಿದೆ. ಏಕೆಂದರೆ ಮಾಬಲರಾಯ ಸೈಟು ಕೊಡುವುದರ ಮುಖಾಂತರ ಅದರ ಜೊತೆಗೆ ತಲಾ ಒಂದೊಂದು ಲಕ್ಷ ಹಣವನ್ನು ನೀಡುತ್ತಾನೆ. ಆದರೆ ಅದು ದುಡಿದ ಹಣವೆ? ಅಥವಾ ಮತ್ತೊಬ್ಬರಿಂದ ಭ್ರಷ್ಟಾಚಾರದ ಮೂಲಕ ಪಡೆದ ಹಣವೇ? ಎಂಬ ಪ್ರಶ್ನೆಗಳು ಕಾಡುತ್ತವೆ. ಅವನಲ್ಲಿರುವ ಅರವತ್ತು ಸೈಟುಗಳೂ ಅವನವೇ ಎಂಬುದಕ್ಕೆ ಏನು ಕಾತರಿ? ಅವನು ಹೇಳಿದ ಹಾಗೆ ಅಗ್ರಿಮೆಂಟ್‌ಗೆ ಸಹಿ ಹಾಕಿ ಹಣ ಪಡೆದುಕೊಳ್ಳಬೇಕು ಅಷ್ಟೇ. ಅದರಿಂದ ಮಾಬಲರಾಯನ ಮರ್ಯಾದೆ ಉಳಿಯುತ್ತದೆ. ಮಾಬಲರಾಯ ಮರ್ಯಾದೆಹತ್ಯೆ ಮಾಡುತ್ತಿದ್ದಾನಲ್ಲವೇ?. ವ್ಯಕ್ತಿಗೆ ಮರ್ಯಾದೆ ಎಷ್ಟು ಮುಖ್ಯವೋ, ಮತ್ತೊಬ್ಬ ವ್ಯಕ್ತಿಗೂ ಕೂಡ ಅದು ಅಷ್ಟೇ ಮುಖ್ಯ ಎಂಬುದನ್ನು ಮಾಬಲರಾಯ ತಿಳಿದುಕೊಳ್ಳುತ್ತಿಲ್ಲ ಏಕೆ? ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ನರಹರಿ ಹಾಗೂ ಮಾಬಲರಾಯರ ನಡುವೆ ಹೆಣ್ಣು ಕೂಡ ಆತಂಕಕ್ಕೆ ಒಳಗಾಗಿದ್ದಾಳೆ ಎಂಬುದು ವಾಸ್ತವದ ಸಂಗತಿ. ತನ್ನ ಗಂಡನಾದವನು ವೇಳೆಯಲ್ಲದ ವೇಳೆಯಲ್ಲಿ ಹೊರಹೊರಟನೆಂದರೆ ಗಂಡ ಮತ್ತೆ ಮನೆಗೆ ಬರುವವರೆಗೂ ಆತಂಕದಲ್ಲಿ ಕಾಯುತ್ತಿರುತ್ತಾಳೆ. 'ಧರ್ಮಸೂಕ್ಷ್ಮ ಪುರಾಣ' ಕತೆಯಲ್ಲಿಯು 'ಸುಮಂಗಲಾ' ತನ್ನ ಗಂಡ ನರಹರಿಯ ದಾರಿಯನ್ನೇ ಕಾಯುತ್ತಿರುತ್ತಾಳೆ.

ಒಟ್ಟಾರೆಯಾಗಿ ಈ ಕತೆಯು ಸಂಕೀರ್ಣ ಹಾಗೂ ನಿಗೂಢವಾದ ಅಂಶಗಳನ್ನು ತನ್ನ ಹಂದರದಲ್ಲಿಟ್ಟುಕೊಂಡಿದೆ. ಜೀವನವಿಧಾನದ ಪರಿವರ್ತನೆಗಳು ಜಾಗತೀಕರಣ-ದಿಂದಾಗುವ ದುಷ್ಪರಿಣಾಮಗಳು, ಹೆಣ್ಣು ಗಂಡಿನ ನಡುವಿನ ಆಂತರಿಕ ಸಂಬಂಧಗಳ ಅನಾವರಣ, ಭ್ರಷ್ಟಾಚಾರದ ತೋರ್ಪಡಿಕೆಯ ಜೊತೆಗೆ ಅದರಿಂದಾಗುವ ಮನುಷ್ಯನ ಅಶಾಂತಿಯ ಅತೃಪ್ತಿತನ, ಆಶಾವಾದದ ಪರಾಕಾಷ್ಠತೆ, ಹೇಳಿಕೊಳ್ಳದ ಭಾವನೆಗಳಿಂದಾಗುವ ಪರಿಣಾಮಗಳು, ದಾಂಪತ್ಯದ ನಡುವಿನ ವೈರುಧ್ಯಗಳು, ಹಗಲು-ಕತ್ತಲುಗಳ ವಿಶೇಷತೆಗಳು- ಹೀಗೆ ಹತ್ತು ಹಲವು ಅಂಶಗಳ ಜೊತೆಗೆ ಸಾಂಸ್ಕೃತಿಕ ರಾಜಕಾರಣ ಹಾಗೂ ಆರ್ಥಿಕ ರಾಜಕಾರಣದ ಬಹುಬಗೆಗಳನ್ನು ಅನಾವರಣಗೊಳಿಸುತ್ತದೆ.

ದೇಹಮೀಮಾಂಸೆಯ ಅಭಿವ್ಯಕ್ತಿ ಮತ್ತು ತಾತ್ವಿಕತೆ

ಸೃಜನಶೀಲ ಮನಸ್ಸಿನ ಸಮಕಾಲೀನ ಸಮಾಜದ ಸಾಹಿತ್ಯದ ಮುಖವಾಣಿಯಂತಿರುವ ವೈದೇಹಿಯವರು ಅನುಭವ ಜಗತ್ತನ್ನು ಅನಾವರಣಗೊಳಿಸುವ ಕ್ರಿಯಾಶೀಲ ಕಥೆಗಾರ್ತಿಯಾಗಿ ಹದಗೊಳ್ಳುತ್ತಾ ಕಥಾಜಗತ್ತಿನಲ್ಲಿ ಮುನ್ನಡೆಯುತ್ತಿದ್ದಾರೆ. ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ ಅಕ್ಷರವಂತರ ಒಡನಾಟವಿರಿಸಿಕೊಂಡು ಅಕ್ಷರದ ಸಾಕ್ಷಾತ್ಕಾರವನ್ನು ಬರೆಹದ ಮುಖೇನ ಪ್ರಕಟಪಡಿಸುತ್ತಿರುವ ಕತೆಗಾರ್ತಿ. ಕರಾವಳಿ ಸನಿಹದ ಕುಂದಾಪುರದ ನೆಲಭಾಷೆ, ಸಾಂಸ್ಕೃತಿಕ, ಸಾಮಾಜಿಕ ಬಹುವಿನ್ಯಾಸಗಳನ್ನು ಬರೆಹದಲ್ಲಿ ನಿರ್ಭಿಡೆಯಿಂದ ದಾಖಲಿಸಿದವರು. ಊರಿನ ಭೌಗೋಳಿಕ ನೆಲೆಯನ್ನು ಸಾಹಿತ್ಯಲೋಕದ ಬರವಣಿಗೆಗೆ ಪೂರಕವಾಗಿ ಬಳಸಿಕೊಳ್ಳುವ ಕಥೆಗಾರ್ತಿಯ ತಂತ್ರಗಾರಿಕೆ, ಭಾಷಾಪ್ರಯೋಗ ಮತ್ತು ನಿರೂಪಣಾಶೈಲಿ ಇತರರಿಂದ ಅವರನ್ನು ಪ್ರತ್ಯೇಕವಾಗಿಸುತ್ತವೆ. ಸ್ತ್ರೀವಾದಿ ನಿಲುವುಗಳ ಲೋಕಾನುಭವ ಸತ್ಯಗಳಿಗೆ ಮುಖಾಮುಖಿಯಾಗುತ್ತಾ 'ಸ್ತ್ರೀತ್ವ', 'ಮಾತೃತ್ವ' ಮತ್ತು 'ಮಾನವತ್ವ' ಪರಿಕಲ್ಪನೆಗಳಿಗೆ ವಿಶೇಷ ಅರ್ಥವನ್ನು ದೊರಕಿಸಿಕೊಡುತ್ತಾರೆ.

ವೈದೇಹಿಯವರ ಕಥಾಜಗತ್ತಿನಲ್ಲಿ ಸ್ತ್ರೀಪಾತ್ರಗಳು ಮುಖ್ಯವಾಹಿಯಲ್ಲಿ ನಿಲ್ಲುವಂತೆ ಕಡೆದಿಡುವ ಕೌಶಲ್ಯ ಪ್ರಶಂಸನೀಯವಾದದ್ದು. ಪಾತ್ರಗಳ ಸೃಷ್ಟಿ, ಬೆಳವಣಿಗೆ, ಸಂಭಾಷಣೆ ಮುಂತಾದ ವಿಷಯಗಳಲ್ಲಿ ಅನುಭವದ್ರವ್ಯ, ಕಲ್ಪನಾವಿಲಾಸ ಮತ್ತು ಸಾಕ್ಷಿಪ್ರಜ್ಞೆ ಢಾಳಾಗಿ ಬಳಕೆಯಾಗುತ್ತದೆ. ಕಥಾ ನಿರೂಪಣೆಯಲ್ಲಿ ಅಭಿವ್ಯಕ್ತಗೊಳ್ಳುವ ನೆಲಭಾಷೆ ಸಹಜವಾಗಿದ್ದು ನೆಲಮೂಲ ಸಾಂಸ್ಕೃತಿಕ ಅರಿವಿನ ಕ್ಷಿತಿಜವನ್ನು ವಿಸ್ತರಿಸುವಂತಾದ್ದು ಆಗಿದೆ. ಕಥೆಗಳಲ್ಲಿ ಸ್ತ್ರೀಸಂಕುಲದ ಸಂವೇದನೆಯ ಭಾಗಗಳಾಗಿರುವ ಮಹಿಳಾ ಸಮಸ್ಯೆಗಳು, ಸಾಂದರ್ಭಿಕ

ಬಿಕ್ಕಟ್ಟುಗಳು ಪ್ರಧಾನನೆಲೆಯಲ್ಲಿ ಚಿತ್ರಿಸಲ್ಪಟ್ಟಿವೆ. ಅಷ್ಟಲ್ಲದೆ ಅವುಗಳಿಂದ ಮುಕ್ತವಾಗಲು ಸಮಾಜ ಬಳಸಬಹುದಾದ ಮಾಪನಗಳು ಮೌಲ್ಯಮಾಪನದ ನಿಷ್ಕರ್ಷೆಯನ್ನು ಸಾದರಪಡಿಸುವ ಸೂಕ್ಷ್ಮತೆ ಕಥೆಗಾರ್ತಿಗಿದೆ.

'ಅವಲಂಬಿತರು' ಕಥೆಯಲ್ಲಿ ಹದಿನೈದು ವರ್ಷದ ಅಪ್ರಾಪ್ತ ಹುಡುಗಿಯಾದ 'ಅಹಲ್ಯೆ'ಳ ಸ್ಥಿತಿಗತಿಗಳನ್ನು ಪರಿಚಯಿಸುತ್ತ ಅವಳೊಡನೆ 'ಶಾರದೆ'ಯ ಯಜಮಾನಿಕೆಯ ದಾರ್ಷ್ಟ್ಯ ಮತ್ತು ನವಿರು ಕೌರ್ಯವನ್ನು ಅನಾವರಣಗೊಳಿಸುತ್ತದೆ. ಅಹಲ್ಯೆಯು ಶಾರದಾಳ ಪುಟ್ಟಮಗುವನ್ನು ನೋಡಿಕೊಳ್ಳಲು ನೇಮಕವಾದ ಬಾಲಕಿ. 'ಅಹಲ್ಯೆ' ಮಗುವನ್ನು ಜಾಗರೂಕತೆಯಿಂದ ಮತ್ತು ಅಕ್ಕರೆಯಿಂದ ನೋಡಿಕೊಳ್ಳುವ ಕೆಲಸದಾಕಿಯಾಗಿ ಕಾರ್ಯನಿರ್ವಹಣೆ ಮಾಡುತ್ತಾಳೆ. ತಾಯಿಯಾಗಿರದಿದ್ದರೂ ಹಿರಿಯಳಾಗಿರದಿದ್ದಾಗ್ಯೂ ಅಹಲ್ಯೆಗೆ ಮಗುವಿನ ಲಾಲನೆ ಪೋಷಣೆ, ಹೇಗೆ ಮಾಡಬೇಕೆಂಬುದು ಚೆನ್ನಾಗಿ ತಿಳಿದ ವಿಷಯವೇ ಆಗಿದೆ. ಬಹುಶಃ ಬಡತನದಲ್ಲಿ ಬೆಳೆದವರಿಗೆ ಬದುಕಿನ ವಿವಿಧ ಮಗ್ಗುಲುಗಳ ಅನುಭವವಾಗಿರಲಿಕ್ಕೂ ಸಾಕು.

ಕಥೆಯಲ್ಲಿ ಬಾಲಕಾರ್ಮಿಕ ಶೋಷಣೆಯ ವಸ್ತುವಿದ್ದು, ಶ್ರೇಣೀಕೃತ ಸಮಾಜದ ಸ್ತರವಿನ್ಯಾಸಗಳು ಮುಖಾಮುಖಿಯಾದಾಗ ಉಂಟಾಗುವ ಬಿಕ್ಕಟ್ಟು, ಸಂಘರ್ಷ ಮುಂತಾದ ವಿಷಯಗಳು ದಾಖಲಿಸಲ್ಪಟ್ಟಿವೆ. ಅವಲಂಬನೆಯು ಸಾಮಾಜಿಕ ಸಹಜಕ್ರಿಯೆಯಾಗಿ, ಸಾಮಾಜಿಕ ಘಟಕವಾಗಿ ಪರಿಗಣಿಸುವ ಸಂದರ್ಭಗಳನ್ನು ಕಥೆ ಸಹಜವಾಗಿ ನಿರೂಪಿಸುತ್ತದೆ. ಉದ್ಯೋಗಸ್ಥ ಮಹಿಳೆಯಾದ ಶಾರದೆಯು ಅಹಲ್ಯೆಯ ಮೇಲೆ ಅವಲಂಬಿತಳು. ಅವಳಲ್ಲಿ ಹಣವಿದೆಯಾದರೂ ಮಗುವನ್ನು ಅಕ್ಕರೆಯಿಂದ ನೋಡಿಕೊಳ್ಳಲು ಸಮಯವಿಲ್ಲ. ಆರ್ಥಿಕ ದುಃಸ್ಥಿತಿಯ ಪರಿಣಾಮವೊ ಅಥವಾ ಕೌಟುಂಬಿಕ ಸಮಸ್ಯೆಯ ಕಾರಣವೊ, ಅಹಲ್ಯೆ ಅನಿವಾರ್ಯವಾಗಿ ಶಾರದೆಯ ಮಗುವನ್ನು ನೋಡಿಕೊಳ್ಳುವ ಕೆಲಸದಾಕೆಯಾಗಿ ನೇಮಕಗೊಂಡಿದ್ದಾಳೆ. 'ಬಡವರ ಬೆವರಿಗೆ ಬೆಲೆಯಿರುವುದಿಲ್ಲ', ಬಡವರ ಶ್ರಮಕ್ಕೆ ಮಾನ್ಯತೆಯಿರುವುದಿಲ್ಲ. ಬಡವರ ದೈಹಿಕಶ್ರಮವನ್ನು ಪರಿಗಣನೆಗೆ ತೆಗೆದುಕೊಳ್ಳದ ಆರ್ಥಿಕ ಸಬಲರು ಬಡವರ ಶೋಷಣೆ ಮಾಡುವುದು ಕಥಾಹಂದರದೊಳಗಿನ ಸಾಮಾಜಿಕ ವಾಸ್ತವ ಸತ್ಯವಾಗಿದೆ.

ಹೆಣ್ಣನ್ನು ಹೆಣ್ಣೇ ಶೋಷಿಸುವ, ಸ್ಪಂಧಿಸುವ, ಅನುಕಂಪ ತೋರುವ ಹಲವು ಮಜಲುಗಳನ್ನು 'ಅವಲಂಬಿತರು' ಕಥೆಯು ಪ್ರಸ್ತುತಪಡಿಸುತ್ತದೆ. ಪಟಪಟ ಮಾತಾಡುವ ದಿಟ್ಟಹುಡುಗಿ ಅಹಲ್ಯೆ ಯಾವ ಬಿಢೆ ಇಲ್ಲದಂತೆ ಮಾತಾಡಿಬಿಡುವ ಚುರುಕಿನ ಹುಡುಗಿ.

ಅವಳ ಭಾವನೆಗಳು, ಮನೋಬಿಕ್ಕಟ್ಟುಗಳಿಗೆ ಅನುಕಂಪದಿಂದ ಸ್ಪಂಧಿಸುವ ಎದುರುಮನೆಯ ಸುಶೀಲ. ಅಂತಿಮವಾಗಿ ಅಹಲ್ಯೆಯು ಶಾರದಾಳ ಮನೆಯನ್ನು ತೊರೆದು ಹೋಗುವಾಗ ಏನೂ ಮಾಡಲಿಕ್ಕಾಗದೇ ಮೌನವಾಗಿ ಬಿಡುವುದು ಮತ್ತು ಅಹಲ್ಯೆ ತೆರಳಿದ ಮೇಲೂ ಒಂದೂ ಪತ್ರವನ್ನು ಬರೆಯದಿದ್ದುದು ಸಮಾಜದ ಸ್ಥಿತಿಗತಿಯನ್ನು ಇರುವಂತೆಯೆ ದಾಖಲಿಸಿದೆ. ತಾಯಿ ಸೂಚಮ್ಮ ಮೈನೆರೆಯದ 'ಅಹಲ್ಯೆ'ಯನ್ನು ಶಾರದೆ ಕೈಗೆ ಒಪ್ಪಿಸಿದರೆ ಡಿ.ಅಂಡ್.ಸಿ. ಮಾಡಿಸಿ ಮಗಳ ಋತುಚಕ್ರ ಸರಿಪಡಿಸುತ್ತಾರೇನೋ ಎಂಬ ಭಾವದಲ್ಲಿ, ಶಾರದೆಯ ಮಗುವಿನ ಲಾಲನೆ ಪಾಲನೆಯ ಕಾರ್ಯಕ್ಕೆ ಒಪ್ಪಿಸಿ ಹೋಗಿದ್ದಳು. ದಿನಕಳೆದಂತೆ ಮನೆಯೊಡತಿಯು ಮಗುವಿನ ಲಾಲನೆ ಪಾಲನೆಯ ಜೊತೆಗೆ ಅಡುಗೆ ಕೆಲಸವಲ್ಲದೆ ಮನೆಯ ಸ್ವಚ್ಚತೆಯ ಕಾರ್ಯಗಳನ್ನೂ ಅಹಲ್ಯೆ ಕೈಯಿಂದ ಮಾಡಿಸುವುದು ಯಜಮಾನಿಕೆಯ ಪ್ರತೀಕವೂ ಆಗುತ್ತದೆ.

ಬಾಲಕಿ ಅಹಲ್ಯೆಯು ಮನುಷ್ಯಳೇ, ಮನುಷ್ಯ ಸಹಜ ಆಸೆ ಆಕಾಂಕ್ಷೆಗಳು ಆಕೆಗೂ ಉಂಟು. ಮನೆಯೊಡತಿ ಬಳಸುವ ಪೌಡರನ್ನು ಮುಖಕ್ಕೆ ಬಳಿದುಕೊಳ್ಳುವ ಅಹಲ್ಯೆ ಕೂದಲಿಗೆ ಹೇರ್‌ಬ್ಯಾಂಡ್ ಹಾಕಿಕೊಂಡು, ತಲೆಗೆ ಅಬ್ಬಲಿ ಹೂ ಮುಡಿದುಕೊಳ್ಳುವ ಮನೋಗತ ಬಯಕೆಯನ್ನು ಈಡೇರಿಸಿಕೊಳ್ಳುತ್ತಾಳೆ. ಮನೆಯೊಡತಿ ಶಾರದೆಗೆ ಮನೆಕೆಲಸದಾಕೆ ಅಹಲ್ಯೆಯ ಈ ಅಂದಚಂದ ಸರಿಕಾಣದು. ಕೆಲಸದುಡುಗಿ ಹೊಟ್ಟೆ ತುಂಬಾ ಉಂಡರೂ ಹೊಟ್ಟೆ ಉರಿ ಶಾರದೆಗೆ. "ಆಫೀಸಿಗೆ ಹೋಗುವಾಗ ಎಣ್ಣೆ ತುಪ್ಪ ಹಾಲು ಬೆಣ್ಣೆ ತಿಂಡಿ ಎಲ್ಲ ಬೀಗದಲ್ಲಿ ಇಟ್ಟು ಹೋಗುತ್ತಾರೆ ಎಂತ ಹೇಳಿದ್ದಳು ಅಹಲ್ಯೆ ಒಮ್ಮೆ. ಗಂಟಲು ಕಟ್ಟಿ ಬಂದಿತ್ತು ಅವಳಿಗೆ. 'ನಂಗೆ ಅದನ್ನೆಲ್ಲ ಉಂಡು ಗೊತ್ತಿಲ್ಲ ಹೌದು. ಆದರೆ ಬೀಗದಲ್ಲಿಟ್ಟು ಬಂದೋಬಸ್ತು ಮಾಡುವಷ್ಟು ನಾನು ಕಳ್ಳಿಯಲ್ಲ. ಒಂದು ವೇಳೆ ಉಂಡರೂ ಏನಾಯಿತೀಗ ಸುಸಿಲಕ್ಕ? ನಾನಿವರ ಮನೆಯಲ್ಲಿ ರಟ್ಟೆ ಜಪ್ಪುವುದಿಲ್ಲವ? ತಿನ್ನಲು ಆಸೆಪಟ್ಟರೆ ಏನೀಗ ಮನುಷ್ಯಳಲ್ಲವ ನಾನು? ಬಂದು ಇಷ್ಟು ತಿಂಗಳಾಯಿತು. ಸಂಬಳ ಎಲ್ಲಿದೆ ನನಗೆ? ಕೇಳಿದರೆ 'ಅದು ನನ್ನ ಮತ್ತು ನಿನ್ನಮ್ಮನ ನಡುವೆಯ ವಿಷಯ. ನಿಂಗೆ ಬೇಡ' ಎನ್ನುತ್ತಾರೆ. ನಂಗೊಂದು ಹೇರ್‌ಬ್ಯಾಂಡ್ ಬೇಕು. ಪೌಡರು, ಕಾಡಿಗೆ, ಹಣೆಗೆ ಎಲ್ಲ ಬೇಕು. ಇವರದನ್ನು ಮುಟ್ಟಿದರೆ ಗಲಾಟೆ. ನಂಗೆ ತೆಗೆದುಕೊಳ್ಳಲು ದುಡ್ಡಿಲ್ಲ. ನನ್ನನ್ನು ಇಂಥಲ್ಲಿಗೆ ಕಳಿಸಿದಳಲ್ಲ ಅಮ್ಮ! ಅವಳನ್ನು ಮೊದಲು ಕಡಿದು ಹುಗಿಯಬೇಕು. "ಹಲ್ಲು ಕಡಿದಳು ಅಹಲ್ಯ."[೫೫]

ಹೀಗೊಂದು ದಿನ ಅಹಲ್ಯೆ ಇದ್ದಕ್ಕಿದ್ದ ಹಾಗೆಯೇ ಋತುಸ್ರಾವವಾದ ಪ್ರಸಂಗವನ್ನು ಎದುರು ಮನೆ ಸುಶೀಲ ಗಮನಿಸಿ ಸ್ತ್ರೀಸಹಜ ಸಂವೇದನೆಯಿಂದ ಅಹಲ್ಯೆಳಿಗೆ ಸಹಕರಿಸಿ

ಸ್ಪಂದಿಸುವ ಸಹಜ ಸ್ತ್ರೀಗುಣವನ್ನು ಮರೆಯುತ್ತಾಳೆ. ಆದರೆ ಮನೆಯೊಡತಿ ಶಾರದೆ ಮುಟ್ಟಾದ ಹುಡುಗಿ ಅಹಲ್ಯೆ ಇನ್ನು ತನ್ನ ಮನೆಯಲ್ಲಿರಕೂಡದೆಂಬ, ಭಾವನೆಯಿಂದ ಅವಳನ್ನು ಕಳಿಸಿಬಿಡಬೇಕೆಂಬ ನಿಲುವಿಗೆ ಬರುತ್ತಾಳೆ. ಅದಕ್ಕೆ ಕೊಡುವ ಕಾರಣವೆಂದರೆ ಋತುಮತಿಯಾದ ಹುಡುಗಿಯನ್ನು ಮನೆಯಲ್ಲಿಟ್ಟುಕೊಂಡರೆ ಸಾಮಾಜಿಕ ನಿಂದನೆಯ ಮಾತಿಗೆ ಒಳಗಾಗಿಬಿಡುತ್ತೇನೆಂಬುವ ಆತಂಕ ಅವಳದು. ಅವಳೇ ಹೇಳುವ ಹಾಗೆ ಅಹಲ್ಯೆಯನ್ನು ಕೆಲಸಕ್ಕಿಟ್ಟುಕೊಳ್ಳುವುದೆಂದರೆ ಸೆರಗಲ್ಲಿ ಬೆಂಕಿ ಕಟ್ಟಿಕೊಂಡಾಗಲ್ಲವ ಇನ್ನು ಬಡವರ ಮೇಲೆ ಅನುಕಂಪವಿಲ್ಲದ ಶಾರದೆಯಂತಹ ಮಹಿಳೆಯರು ನಿಷ್ಠೆಯಿಂದ ಕೆಲಸಮಾಡುವ ಕೆಲಸದಾಳುಗಳನ್ನು ನಡೆಸಿಕೊಳ್ಳುವ ರೀತಿಯು ಅಮಾನವೀಯವಾದದು. ಸಂಶಯದಿಂದ ನೋಡುವ ಅವರ ಮನೋಧರ್ಮ ಕಂಡನಾರ್ಹವು. ಅಹಲ್ಯೆ ತನಗೆ ತಿಳಿಯದಂತೆ ತನ್ನ ಮನೆಯ ಏನಾದರೂ ವಸ್ತುಗಳನ್ನು ತುಂಬಿಕೊಂಡಿರುವಳೋ, ಎಂಬ ಸಂಶಯ ದೃಷ್ಟಿ ತಾಳುವ ಶಾರದೆ ಸಣ್ಣ ಹೃದಯದವಳಾಗುತ್ತಾಳೆ. "ಇನ್ನು ಅದರ ಚೀಲದೊಳಗೆ ಏನೇನು ಸರಕು ತುಂಬಿಕೊಂಡಿದೆಯೋ. ಯಾವಾಗ ನೋಡಿದರೂ ಚೀಲದೊಳಗೆ ಕೈ ಹಾಕಿ ಗುರುಟುತ್ತಿರುತ್ತದೆ. ಏನೇ ಹೇಳು, ಕೆಲಸದವರನ್ನು ಹೆಚ್ಚು ನಂಬಬಾರದು."[೬]

ಮುಗ್ಧ ಹೃದಯದ ಅಹಲ್ಯೆ ಪುಟ್ಟಕಂದನ ಮೇಲಿನ ಕಕ್ಕುಲಾತಿಯನ್ನು ಪ್ರಕಟಪಡಿಸುವುದು ಹೀಗೆ. 'ಸುಸಿಲಕ್ಕ, ನಂಗೆ ಮಾಣಿಯದೇ ಯೋಚನೆ. ಅದನ್ನಿನ್ನು ಈಕೆ ಹೇಗೆ ನೋಡಿಕೊಳ್ಳುತ್ತಾರೋ. ಯಾರು ಬರುತ್ತಾರೋ ನನ್ನನ್ನ ಎಷ್ಟು ಹಚ್ಚಿಕೊಂಡಿತ್ತದು' ಎನ್ನುವಾಗ ಅವಳ ಕಣ್ಣಿಂದ ಬುಳಕ್ಕೆಂತ ಹನಿಯುದುರಿತು. ತನ್ನದಲ್ಲದ ಮಗುವಾದರೂ ತನ್ನದು ಎನ್ನುವ ಐಕ್ಯಭಾವನೆಯಿಂದ ಮಗುವನ್ನು ನೋಡಿಕೊಳ್ಳುತ್ತಿದ್ದ ಅಹಲ್ಯೆಯ ಮಮತೆಯ ಭಾವಜಗತ್ತು ತುಂಬಾ ವಿಸ್ತಾರವಾದದ್ದು. ಅಲ್ಲಿ ಕಪಟತನವಿಲ್ಲ ಕೃತಕತೆಯಿಲ್ಲ ಸಹಜಭಾವನೆಗಳ ಮನೋಲೀಲೆಯಷ್ಟೇ. ಯಾವ ಹಂಗಿಗೂ, ಒಳಗಾಗದ ಸ್ವಾಭಿಮಾನಿ ಹುಡುಗಿ ಅಹಲ್ಯೆ. ಮನೆಯೊಡತಿಯ ಬಗ್ಗೆ ಸುಶೀಲಳ ಬಳಿ ಅವಳಾಡುವ ಮಾತು. "ಬಾಯಿಗೆ ಬಂದದ್ದು ಎನ್ನುತ್ತೀರ ನೀವೂ? ನಿಮಗೇನು ಗೊತ್ತು ಸುಸಿಲಕ್ಕ? ನನ್ನ ಚೀಲ ಕೂಡ ಜಪ್ತಿ ಮಾಡಿದರು. ಅಲ್ಲಿ ಸಿಕ್ಕಿತು ಮಣ್ಣು. ನೋಡಿ ಇಲ್ಲಿ. ಬಸ್ ಛಾರ್ಜ್ ಮಾತ್ರ ಕೊಟ್ಟಿದ್ದಾರೆ. ಬೇಗ ಹೋಗಲಿ ಎಂತ. ಹೆಚ್ಚಿಗೆ ಒಂದು ಕಾಸು ನನ್ನ ಕೈ ಮೇಲೆ! ಎರಡು ಹಳಿ ಹಪ್ಪಟೆ ಸೀರೆ ಕೊಟ್ಟಿದ್ದಾರೆ."[೭] ಕಟ್ಟೆಯೊಡೆದ ಅಳು, ಎಷ್ಟು ಜೋರಾಗಿ ಅತ್ತಳು ಅಹಲ್ಯೆ. ಹರಿದುಹೋಗುವಂತೆ ಇದು ಅಹಲ್ಯೆಯ ಭಾವಜಗತ್ತಿನ ಮೇಲೆ ಶಾರದೆಯಂತಹ ದರ್ಪದ ಹೆಣ್ಣಿನ ಆಕ್ರಮಣಶೀಲತೆ, ಶೋಷಣೆ, ಅಮಾನವೀಯತೆ ಅರಹುವ 'ಅವಲಂಬಿತರು' ಕಥೆ ಅಹಲ್ಯೆಳ ಭಾವಕೋಶದ ಮೇಲೆ ಉಂಟಾದ ಪರಿಣಾಮಕಾರಿಯಾಗಿಯೇ ಬಿತ್ತರಿಸುತ್ತದೆ.

ಕಟ್ಟಕಡೆಗೆ ಅಹಲ್ಯೆಯು ಸುಶೀಲಳಿಗೆ ಹೇಳುವ ಮಾತು 'ಬಾಬಣ್ಣ ಹೇಗಿದ್ದಾನೆಂತ ನನಗೆ ಬರೆಯಿರಿ' ಈ ಮಾತಿನಲ್ಲಿ ಪುಟ್ಟಹುಡುಗಿ ಅಹಲ್ಯೆಯ ಮಮತೆಯ ಆಳವನ್ನು ಅರ್ಥ ಮಾಡಿಕೊಳ್ಳಬಹುದು. ಮನೆಯೊಡತಿ ಮಗು ನೋಡಿಕೊಳ್ಳುವ ಕೆಲಸಕ್ಕೆ ಮತ್ತೊಬ್ಬ ಪುಟ್ಟಹುಡುಗಿಯ ನೇಮಕ ಮಾಡಿಕೊಳ್ಳುವುದು, ನಂತರ ಹೊಸಹುಡುಗಿಯ ಕಾರ್ಯವನ್ನು ಅಹಲ್ಯೆಯ ಕಾರ್ಯದೊಂದಿಗೆ ಹೋಲಿಕೆ ಮಾಡಿ ಅಹಲ್ಯೆಯ ಕೆಲಸದ ಭವ್ಯತೆಯನ್ನು ಮನಗಾಣುತ್ತಾಳೆ. ಕಥೆ ಮೂರು ಸ್ತ್ರಿಪಾತ್ರಗಳಾದ ಶಾರದೆ, ಅಹಲ್ಯೆ, ಸುಶೀಲರಿಂದ ಆವೃತ್ತವಾಗಿದ್ದು ಸ್ತ್ರೀಸಹಜ ಭಾವನೆಗಳು ಆಸೆ–ಆಕಾಂಕ್ಷೆಗಳು, ಈರ್ಷೆ, ಕ್ಷುಲ್ಲಕತನ ಮುಂತಾದವುಗಳನ್ನು ಪರಿಚಯಿಸುತ್ತ ಸ್ತ್ರೀಲೋಕವನ್ನು ಅನಾವರಣಗೊಳಿಸುತ್ತದೆ.

ಮಹಿಳಾ ಪರಿವರ್ತನೆಗಳ ಅಭಿವ್ಯಕ್ತಿ

ಪ್ರಸ್ತುತ ಈ ಭಾಗದಲ್ಲಿ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯನ್ನು ಪ್ರಧಾನವಾಗಿ ಚರ್ಚಿಸಲಾಗುತ್ತದೆ. ಸಣ್ಣಕಥೆ ಪ್ರಕಾರದಲ್ಲಿ ವೈಶಿಷ್ಟ್ಯತೆ ಮತ್ತು ಅನನ್ಯತೆಯನ್ನು ಒಳಗೊಂಡ ಸಣ್ಣಕಥೆ ಇದಾಗಿದೆ. ವೈದೇಹಿಯವರ ಕಥನಕ್ರಮದ ನೆಲೆಯಲ್ಲಿ ಮೂಡಿಬಂದ ಕಥೆಯಾಗಿದೆ. ಕಥೆಯು ಆರಂಭದಲ್ಲಿ ಕಥೆಗಾರ್ತಿಯ ಊರನ್ನು ಪರಿಚಯಿಸುವ ಕ್ರಮವು ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ಊರಿಗೆ ಯಾವುದೇ ಅಂಕಿತನಾಮವನ್ನಾಡದೇ ಊರು ಎಂದಷ್ಟೇ ಹೇಳುವ ಮುಖೇನ ಬದಲಾವಣೆಗೆ ಒಡ್ಡಿಕೊಳ್ಳುವ ಯಾವೂರು ಆದೀತು ಅಥವಾ ಅಂತಹ ಊರುಗಳೆಲ್ಲವನ್ನು ಪ್ರತಿನಿಧಿಸುವ ಒಂದು ಪ್ರಾತಿನಿಧಿಕ ಊರೆಂದು ಪರಿಭಾವಿಸಬಹುದು.

ಪುರುಷಪ್ರಧಾನ ಸಾಮಾಜಿಕ ಕೌಟುಂಬಿಕ ವ್ಯವಸ್ಥೆಯಲ್ಲಿ ಪುರುಷನದೇ ಪಾರುಪತ್ಯೆ. ಅವನು ರೂಪಿಸುವ ಸಾಮಾಜಿಕ ಕಟ್ಟಳೆಗಳ, ಸಂಪ್ರದಾಯಗಳು, ರೀತಿ ರಿವಾಜುಗಳು ಹೆಣ್ಣಿನ ಸ್ವಾತಂತ್ರ್ಯವನ್ನು ಹರಣ ಮಾಡುವ ಕ್ರೂರ ಸಂಕೋಲೆಗಳಾಗುವವು. ಸುಸ್ಥಿತಿಯ ಭೂಮಾಲಿಕರ ಮನೆಯ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯವಿಲ್ಲ. ಸದಾ ಮನೆಯೊಳಗೆ ದುಡಿಯುವ ಹೆಣ್ಣುಮಕ್ಕಳ ಕೈಯಲ್ಲಿ ಕಾಸಿಲ್ಲದೇ ಚಿಕ್ಕ ಬಿಡಿಗಾಸಿಗೂ ಪುರುಷನ ಮುಂದೆ ಕೈಚಾಚುವ ದೈನಸೀ ಸ್ಥಿತಿ. ಊರಲ್ಲಿಯ ಗುಲಾಬಿ ಟಾಕೀಸಿನ ಸಿನಿಮಾ ನೋಡಲು ಆಶಿಸುವ ಹೆಂಗಳೆಯರ ಕೈಯಲ್ಲಿ ದುಡ್ಡಿಲ್ಲದೇ ಪುರುಷರ ಮೇಲೆ ಅವಲಂಬಿತವಾಗಿರುವುದು ಅವರ ಆರ್ಥಿಕ ಪರಾವಲಂಬನೆಯನ್ನು ಮತ್ತು ಅಸಹಾಯಕತೆಯನ್ನು ಕಥೆಯ ಭಿತ್ತಿಯಲ್ಲಿ ಸೂಕ್ಷ್ಮವಾಗಿ ನಿರೂಪಿಸುತ್ತಾರೆ. ನಿರೂಪಣಾಶೈಲಿ ಎಲ್ಲಿಯೂ ಓದುಗನ ಓದಿನ ಓಘಕ್ಕೆ ಭಂಗ ತರುವುದಿಲ್ಲ.

ಕಥಾಶೀರ್ಷಿಕೆ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಮೂರ್ತ ಪ್ರತಿಮೆಯಾಗಿದುತ್ ಎಂದು ಓದುಗನ ಮನಸ್ಸಿನ ಮುಂದೆ ಬಂದು ನಿಲ್ಲುವಂತಾದ್ದು. ಆಧುನಿಕ ಜಗತ್ತಿನ ಅವಿಷ್ಕಾರವಾದ ಸಿನಿಮಾ ಟಾಕೀಸು ದೃಶ್ಯಮಾಧ್ಯಮದ ಅತ್ಯಂತ ಪರಿಣಾಮಕಾರಿಯಾದ ಸಮೂಹ ಮಾಧ್ಯಮ. ಈ ಸಮೂಹ ಮಾಧ್ಯಮವಾದ ಸಿನಿಮಾ ಟಾಕೀಸು ಊರ ಜನರ ಮನಸ್ಸಿನ ಮೇಲೆ ಉಂಟು ಮಾಡುವ ಪ್ರಭಾವ ಮತ್ತು ಅದರಿಂದುಂಟಾದ ಭಿನ್ನ ಭಿನ್ನ ಸಮಾಜೋ-ಕೌಟುಂಬಿಕ ತರಂಗಗಳನ್ನು ಸೀಮಿತ ಕಥಾಸಂವಿಧಾನದಲ್ಲಿ ಮನಗಾಣಿಸುತ್ತಾರೆ. ಮತ್ತೊಂದು ದೃಶ್ಯಮಾಧ್ಯಮ ನಾಟಕದ ಬಗೆಗಿನ ಉಲ್ಲೇಖವನ್ನು ಕಥಾಹಂದರದಲ್ಲಿ ಕಾಣಬಹುದು. ನಾಟಕ ನೋಡಿದ ಸ್ತ್ರೀಯರು ಅಲ್ಪಸಂಖ್ಯಾತರಿದ್ದಾರೆ. ಆದರೆ ಈ ಹಿಂದೆ ಊರಿಗೆ ಸರ್ಕಸ್ ಬಂದಿದ್ದಾಗ ಅಲ್ಲಿ ಸ್ತ್ರೀಯರ ಉಪಸ್ಥಿತಿ ಇಲ್ಲವೇ ಇಲ್ಲ. "ಒಂದು ನಾಟಕ ಕಂಪೆನಿಯೂ ಬಂದಿತ್ತೆನ್ನುತ್ತಾರೆ. ಅದನ್ನೆಲ್ಲ ಎಷ್ಟು ಜನ ಹೆಂಗಸರು ನೋಡಿದ್ದಾರೆ ಅಂತ ಮಾತ್ರ ಯಾರೂ ಹೇಳುವವರಿಲ್ಲ. ನಾಟಕವನ್ನಾದರೂ ನೋಡಿದ್ದಾರು. ಸರ್ಕಸ್ಸು ಗಿರ್ಕಸ್ಸು ಹೆಂಗಸರಿಗೆ ಹೇಳಿಸಿದ್ದೇ? ಎಂದು ಗದರಿಸಿಬಿಟ್ಟರೆ ಹಾಗೆ ಗದರಿಸಿದ ಗಂಡಸಿನ ದನಿಯಡಿ ಮುದುರಿ ಕುಳಿತುಕೊಳ್ಳುವವರಲ್ಲವೇ ಅವರೆಲ್ಲ?"[೮] ಮನೆಯೊಳಗಿನ ಮಹಿಳೆಗೆ ಮನೆಯೇ ಸರ್ವಸ್ವ, ಅವಳು ನಾಲ್ಕು ಗೋಡೆಗಳ ನಡುವೆ ಬಂದಿಯಾಗಿ ಮುಂಜಾನೆಯಿಂದ ರಾತ್ರಿಯವರೆಗೂ ಒಂದೇ ಸಮನೆ ದುಡಿಯುವ ವ್ಯಕ್ತಿ. ಅವಳಿಗೂ ಮನಸ್ಸಿದೆ ಅವಳಿಗೂ ಆಸೆ ಆಕಾಂಕ್ಷೆಗಳಿವೆ, ಬೇಸರಗೊಂಡ ಮನಸ್ಸಿಗೆ ಮನರಂಜನೆ ಅವಶ್ಯಕತೆ ಇದ್ದಾಗ್ಯೂ ಪಿತೃಪ್ರಧಾನ ಸಮಾಜ ಅವುಗಳನ್ನು ಪರಿಗಣನಗೆ ತೆಗೆದುಕೊಳ್ಳುವುದಿಲ್ಲ. ಇಂತಹ ಜಡ್ಡುಗಟ್ಟಿದ ಸಮಾಜೋ-ಕೌಟುಂಬಿಕ ವ್ಯವಸ್ಥೆಯಲ್ಲಿ ಗುಲಾಬಿ ಟಾಕೀಸು ಆಗಮನದೊಂದಿಗೆ ಬದಲಾವಣೆಯ ಅಲೆಗಳು ಅಪ್ಪಳಿಸತೊಡಗಿದಂತೆ ಊರಿನ ಜನರ ಜೀವನಕ್ರಮದಲ್ಲಿ ಬದಲಾವಣೆಯಾಗುತ್ತದೆ.

ಗುಲಾಬಿ ಟಾಕೀಸ್ ಆಗಮನ ಊರಿನಲ್ಲಿ ಸಂಚಲನ ಮೂಡಿಸುತ್ತದೆ. ಲಿಲ್ಲೀಬಾಯಿ ಬದುಕಿನಲ್ಲೂ ಮಹತ್ತರ ಬದಲಾವಣೆಯಾಗುತ್ತದೆ. ಸೂಲಗಿತ್ತಿ ಕೆಲಸದಿಂದ ದೊರೆಯುವ ಹಣಕ್ಕಿಂತಲೂ ಹೆಚ್ಚು ಹಣ ದೊರೆಯುವ ಗುಲಾಬಿ ಟಾಕೀಸಿನ ಗೇಟುಕೀಪರ್ ಕೆಲಸ ದೊರಕಿಸಿಕೊಂಡು, ಸೂಲಗಿತ್ತಿ ಕೆಲಸದ ಬಗ್ಗೆ ಹೆಚ್ಚು ಉದಾಸೀನಳಾಗುತ್ತಾಳೆ. ಪರಿಣಾಮವಾಗಿ ಊರಿನ ದವಾಖಾನೆಗೆ ಪ್ರಾಮುಖ್ಯತೆ ದೊರೆಯುವುದು, ಬಳೆ ಅಂಗಡಿಯಲ್ಲಿ ತರತರನಾದ ಪ್ರಸಾದನ ವಸ್ತುಗಳ ಮಾರಾಟದಿಂದ ವ್ಯಾಪಾರ ಹೆಚ್ಚಾಗುವುದು, ಹೆಂಗಸರ ಉಡುಗೆ ತೊಡುಗೆಗಳಲ್ಲೂ ಸ್ವಲ್ಪ ಬದಲಾವಣೆಯಾದದ್ದು, ಅವರಿಗೆ ತಕ್ಕಂತೆ ದರ್ಜಿ ಹೆಂಗಸು ಬಟ್ಟೆ ಹೊಲೆದು ಕೊಡುವಂತಾದ್ದು ಇತ್ಯಾದಿಗಳ ಮೇಲೆ ಗುಲಾಬಿ

ಟಾಕೀಸಿನ ಪ್ರಭಾವವಿದೆ. ಊರಿನ ಬಹುಕ್ಷೇತ್ರದಲ್ಲಿ ಗುಲಾಬಿ ಟಾಕೀಸು ಮೂಡಿಸಿದ ಛಾಪು ಅವರ್ಣನೀಯ. ಪುರುಷಪ್ರಧಾನ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷರ ಹಿಡಿತ ಸ್ವಲ್ಪ ಸಡಿಲವಾದಂತೆ ಕಾಣಿಸುತ್ತದೆ. ಟಾಕೀಸಿನ ಪರಿಣಾಮವಾಗಿ ಮಹಿಳೆಯರು ಸಿನಿಮಾದ ಹೆಸರೇಳಿ ಹೊರಗೆ ಹೋಗುವ ಮತ್ತು ತಮ್ಮದೇ ಆದ ನಿಲುವು ತಾಳುವುದು ಇತ್ಯಾದಿ ಗಮನಾರ್ಹ ಬದಲಾವಣೆಗಳು.

ಮುಚ್ಚುಮರೆ ಇಲ್ಲದೆ ಸಲೀಸಾಗಿ ಎಲ್ಲವನ್ನು ಒದರಿಬಿಡುವ ಲಿಲ್ಲೀಬಾಯಿ ಟಾಕೀಸಿನ ಮ್ಯಾನೇಜರ್ ಅಪ್ರಾಪ್ತ ಹುಡುಗಿಯೊಂದಿಗೆ ಅನೈತಿಕ ಲೈಂಗಿಕ ಸಂಪರ್ಕ ಸಾಧಿಸುವುದು, ಪಾಯಖಾನೆ ತೊಳೆಯುವ ಕೊರಾತಿಯನ್ನು ಲೈಂಗಿಕ ಹಸಿವನ್ನು ಈಡೇರಿಸಿಕೊಳ್ಳಲು ಬಳಸಿಕೊಳ್ಳುವುದನ್ನು ವಿವರಿಸುತ್ತಾಳೆ. 'ತಾನು ದುರ್ಬಲಳಾಗಿದ್ದರೆ ತನ್ನನ್ನು ಟಾಕೀಸಿನ ಮ್ಯಾನೇಜರ್ ಲೈಂಗಿಕವಾಗಿ ಶೋಷಣೆ ಮಾಡುತ್ತಿದ್ದ' ಎಂಬ ಅವಳ ಮಾತು ಗುಲಾಬಿ ಟಾಕೀಸ್ ಉಂಟು ಮಾಡಿದ ನಿಷೇದಾತ್ಮಕ ಪರಿಣಾಮವನ್ನು ಗುರುತಿಸುತ್ತದೆ. ಸುಲಭವಾಗಿ ಹಣ ಸಂಪಾದಿಸುವುದರ ಕಲೆಯನ್ನು ಲಿಲ್ಲೀಬಾಯಿ ಕಲಿತದ್ದು ಅವಳು ಗುಲಾಬಿ ಟಾಕೀಸ್ ಸೇರಿದ ಮೇಲೆ. ಪ್ರೇಕ್ಷಕಿಯಾಗಿ ಬರುವ ಹೆಣ್ಣು ಮಕ್ಕಳಿಗೆ ತನ್ನ ಮಾತಿನ ಮೋಡಿಯ ಮೂಲಕ ಅವರನ್ನು ತನ್ನ ಪ್ರಭಾವಲಯಕ್ಕೆ ಸೇರಿಸಿಕೋಳ್ಳುತ್ತಾಳೆ. "ಪ್ರೇಕ್ಷಕಿಯರ ಸಂಖ್ಯೆಯನ್ನು ಅವಳಿಗರಿವಿಲ್ಲದಂತೆಯೇ ಜಾಸ್ತಿ ಮಾಡಿದ ಲಿಲ್ಲೀಬಾಯಿ ಅರಿವಿಲ್ಲದಂತೆಯೇ ಇನ್ನೊಂದು ವಿದ್ಯೆಯನ್ನೂ ಮಾಡಿದಳು. ಎರಡು ಟಿಕೆಟಿಗೆ ನಾಲ್ಕು ಜನರನ್ನು ಬಿಡಲು ಹಾಗೂ ಒಬ್ಬರ ನಂತರ ಒಬ್ಬರನ್ನು ಬೇಗ ಬೇಗ ನೂಕಿ ಬಿಡುವುದನ್ನು. ಅಷ್ಟೇ ಅಲ್ಲ ಆ ಇಬ್ಬರಿಗೆ ಕೊಡಬೇಕಾದ ಟಿಕೆಟಿನ ಅರ್ಧ ಹಣವನ್ನು ಸಿನಿಮಾ ಸುರುವಾದ ಮೇಲೆ ಅವರು ಕುಳಿತಲ್ಲಿಗೇ ಬಂದು ಕತ್ತಲಲ್ಲಿ ಬಳಚಿ ಕೀಸಿಕೊಂಡು ಸೀರೆ ನೆರಿಗೆಯ ಅಂಬಡೆಯೊಳಗೆ ಸಿಕ್ಕಿಸಿಕೊಳ್ಳುವುದನ್ನು"[7] ಕಲಿಯುವ ಮೂಲಕ ತನ್ನ ಚಾಣಾಕ್ಷ್ಯತನದಿಂದ ಬೇಗ ಮುಖ್ಯವಾಹಿನಿಗೆ ಬರುತ್ತಾಳೆ.

ಕಾಸು ಆಡುತ್ತಿದ್ದಂತೆ ಲಿಲ್ಲೀಬಾಯಿಯ ಜೀವನಕ್ರಮದಲ್ಲೂ ಬದಲಾವಣೆಯಾಗುತ್ತದೆ. ಅಗ್ಗದ ಮಗ್ಗದ ಸೀರೆ ಬಿಟ್ಟು ಮೆತ್ತಗಿನ ವಾಯಿಲ್ ಸೀರೆ ಖರೀದಿಸುವ ಕಲಾಯಿ ಅವಶ್ಯಕತೆಯಿಲ್ಲದ ಸ್ಟೀಲ್‌ನ ಎರಡು ಪಾತ್ರೆ ಖರೀದಿ ಮಾಡುವ, ಕಿವಿಗೆ ಹೊಸ ಓಲೆ ಖರೀದಿಸುವ ಲಿಲ್ಲೀಬಾಯಿ ನಾಜುಕು ಹೆಂಗಸಾಗಿ ಮಾರ್ಪಾಡಾಗುತ್ತಾಳೆ. ಬಟ್ಟೆ ಹೊಗೆಯುವ ಎತ್ತರದ ಕಲ್ಲನ್ನು ಹಾಕಿಸಿಕೊಳ್ಳುವ ಲಿಲ್ಲೀಬಾಯಿ ತನ್ನ ಶ್ರಮದ ಪ್ರಮಾಣ ತಗ್ಗುವಂತೆ ಮಾಡಿಕೊಳ್ಳುತ್ತಾಳೆ. ಈ ಬದಲಾವಣೆಗೆ ಊರಿನ ವ್ಯಕ್ತಿ 'ವಾಟಮಾರೆ' ವ್ಯಂಗ್ಯವಾಗಿ

ಮಾತಾಡಿದಾಗ ಅದಕ್ಕೆ ತಕ್ಕನಾಗಿ ಪ್ರತಿಮಾತಿನ ಬಾಣವನ್ನು ಬಿಡುತ್ತಾಳೆ "ಹೋಗ, ನೀನು ಹೇಗೆ ದುಡ್ಡು ಮಾಡಿದೆ ಅಂತ ನನಗೆ ಗೊತ್ತಿಲ್ಲವೆ? ಈಗ ಜವಳಿ ಅಂಗಡಿ ಇಟ್ಟು ಮೆರೆಯುತ್ತಾನೆ. ನನ್ನಂಥ ಬಡವೆ ಎರಡು ಬಾಳೆ ಕುರಲಿ ನೆಟ್ಟು ಸುಖ ಪಡುವುದನ್ನೂ ಕಾಣಲಿಕ್ಕಾಗುವುದಿಲ್ಲ ನಿನ್ನ ಕೈಯಿಂದ, ಸುಳ್ಳ?"[೧೦] ಅವಳ ತೀಕ್ಷ್ಣ ಮಾತಿನಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿನ ಲಿಂಗತಾರತಮ್ಯವನ್ನು ಹೇಳದೆ ಬಿಡುವುದಿಲ್ಲ. 'ಇವನ ಹಾಗೆ ಯಾರ ಯಾರದೋ ಮನೆ ಪೂರ್ತಿ ಬರಿಗುಡಿ ಮಾಡಲು ನನ್ನಿಂದ ಆದೀತೇ! ಆದರೂ ಅವನನ್ನು ಕೇಳುವವರಿಲ್ಲ. ನನ್ನನ್ನು ಕೇಳುವವರಿದ್ದಾರೆ ಎಂದರೆ' ಎಂದು ದಬಾಯಿಸುವ ಆಕೆಯ ನುಡಿಯಲ್ಲಿ ಹೆಣ್ಣು ಮಾರ್ಗದ ಹೊಸಹೊಳಹುಗಳ ಪ್ರಸ್ತಾಪವಿದೆ. ಮತ್ತು ಪುರುಷನನ್ನು ಮುಖತಃ ಎದುರಿಸಲೇಬೇಕಾದ ಅನಿವಾರ್ಯತೆಯ ಪ್ರತಿಭಟನಾ ಗುಣವಿದೆ. ಸಣ್ಣಕಥೆಯ ಕಥಾಸಂವಿಧಾನದಲ್ಲಿ ಲೈಂಗಿಕತೆ ವಸ್ತುವನ್ನು ಸೂಚ್ಯವಾಗಿ ಸಂದರ್ಭೋಚಿತವಾಗಿ ಮತ್ತು ಪರಿಣಾಮಕಾರಿಯಾಗಿ ವೈದೇಹಿ ತರುತ್ತಾರೆ. ಲಿಲ್ಲೀಬಾಯಿಯ ನಡೆಯಲ್ಲಿಯೇ ಗಮನಿಸುವುದಾದರೆ ಪುರುಷ ಲೈಂಗಿಕ ರಾಜಕಾರಣವನ್ನು ಮೆಟ್ಟುವ ಮೂಲಕ ಸ್ತ್ರೀಲೈಂಗಿಕ ರಾಜಕಾರಣವನ್ನು ಲಿಂಗಬೇಧದ ಮೂಲಕ ನಿರ್ವಚಿಸಬೇಕಾದ ಅನಿವಾರ್ಯತೆಯನ್ನೂ ಲೇಖಕಿ ಮನಗಾಣಿಸುತ್ತಾಳೆ.

ಪುರುಷ ಪ್ರತಿನಿಧಿಯಾದ ಟಾಕೀಸಿನ ಮ್ಯಾನೇಜರ್‌ನ ಹಾದರದ ಪ್ರಸಂಗಗಳನ್ನು ಲಿಲ್ಲೀಬಾಯಿ ಬಿತ್ತರಿಸುತ್ತಾ ಹೋದಂತೆ, ಮ್ಯಾನೇಜರ್ ತನ್ನ ಹೂರಣ ಹೊರಬಿತ್ತೆಂದು ಪರಿತಪಿಸುವ ಅವನು ಅದಕ್ಕೆ ಪ್ರತಿಯಾಗಿ ಬೆದರಿಕೆಯ (Threating) ಅಸ್ತ್ರವನ್ನು ಲಿಲ್ಲೀಬಾಯಿ ಮೇಲೆ ಪ್ರಯೋಗಿಸುತ್ತಾನೆ. 'ಮ್ಯಾನೇಜರ ಲಿಲ್ಲಿಯನ್ನು ಕಂಡರೆ ವಿಷ ಕಾರತೊಡಗಿದ. ಒಂದು ದಿನ ಅವಳನ್ನು ಕರೆದು, ನೋಡು ಲಿಲ್ಲಿ, ನೀನು ಮೂರಕ್ಕೆ ಆರು ಜನರನ್ನು ಒಳಗೆ ಬಿಡುವುದು ನನಗೆ ಗೊತ್ತಿಲ್ಲವೆಂದು ತಿಳಿಯಬೇಡ. ಇಲ್ಲಿ ಇರಬೇಕೆಂದು ಆಸೆ ಇದ್ದರೆ ಬಾಯಿಗೆ ಹೊಲಿಗೆ ಹಾಕಿಕೋ'. ಎಂದಿದ್ದಕ್ಕೆ "ನಾ ಕಂಡನೆಲ್ಲ ಈಗ. ನನ್ನ ಕಂಡರೆ ಆಗುವುದಿಲ್ಲ. ನಾನು ಪುಗ್ಸಟೆ ಬಿಡುತ್ತೇನೆ ಅನ್ನುತ್ತಾನೆ. ಹೌದೇ ಅಮ್ಮ, ಗಂಡಸರು ಭುಜ ಹಾರಿಸಿದರೆ ನಾವು ಕಣ್ಣು ಹಾರಿಸಬೇಕು. ಆಗ ಎಲ್ಲ ಸಮ. ಅದು ನನ್ನಿಂದ ಆಗಲಿಲ್ಲ ಕಾಣಿ. ಹೀಗೆ! ಒಟ್ಟಾರೆ ಸತ್ಯ ಧರ್ಮ ನ್ಯಾಯ ಎಂಬವರಿಗೆ ಇದು ಕಾಲ ಅಲ್ಲ. ನೀವೇ ಹೇಳಿ, ದೇವರ ಸಾಕ್ಷಿಯಾಗಿ, ನಾನು ಎಂದಾದರೂ ಟಿಕೆಟಿಲ್ಲದೆ ಒಳಗೆ ಬಿಟ್ಟದ್ದುಂಟೆ"[೧೧] ಎನ್ನುವ ಲಿಲ್ಲೀಬಾಯಿಯ ಮಾರುತ್ತರ ಬಹುಮುಖ್ಯವಾದುದು. ಆರ್ಥಿಕವಾಗಿ ಅತಂತ್ರಸ್ಥಿತಿಯಲ್ಲಿರುವ ಹೆಣ್ಣುಮಕ್ಕಳ ಮನೋನೆಲೆಯು ಸಿಡಿದಾಗ ಸಾಮಾಜಿಕ ಆರ್ಥಿಕ ಪ್ರತಿಭಟನೆಗಳು ಉದಯಿಸುತ್ತವೆ. ಹಣದ ಮೇಲಿನ

ಒಡೆತನ ಸಾದಿಸುವ ಪಿತೃಪ್ರಧಾನ ಸಮಾಜದ ಮುಂದೆ ಸ್ತ್ರೀಯು ಆರ್ಥಿಕವಾಗಿ ಸಬಲರಾಗಬೇಕಾದ ಜರೂರತ್ತಿನ ಕುರಿತು ಲಿಲ್ಲೀಬಾಯಿಯ ಮೂಲಕ ಲೇಖಕಿ ದಾಖಲಿಸುತ್ತಾಳೆ.

ಬೊಂಬಾಯಿಯಲ್ಲಿದ್ದ ಗುಲಾಬಿ ತೀರಿಕೊಂಡ ನಂತರ ಅವಳ ದತ್ತುಮಗ 'ಚಂದ್ರಪ್ಪ' ಯಾವುದೋ ಕಾರಣ ಕೊಟ್ಟು ಗಲಾಬಿ ಟಾಕೀಸನ್ನು ಪರ ಊರಿನವರಿಗೆ ಮಾರುತ್ತಾನೆ. ಆ ಊರಿನಲ್ಲಿ ನರ್ಸಿಂಗ್‌ಹೋಂ ಕಟ್ಟಿಸುತ್ತಿದ ವೈದ್ಯನಿಗೆ 'ಗುಲಾಬಿ ಹೆಸರಿನಲ್ಲಿ ಒಂದು ಸ್ಪೆಷಲ್‌ರೂಂ ಇರಲಿ ಅವಳ ಸೇವೆಯಾಗಿ' ಎಂದು ಅದಕ್ಕೆ ಬೇಕಾಗುವಷ್ಟು ಹಣ ನೀಡಿ ಉಳಿದದ್ದನ್ನು ಕಟ್ಟಿಕೊಂಡು ಹೊರಟು ಹೋಗುತ್ತಾನೆ. ಪುರುಷನ ಸಮಯ ಸಾಧಕತನವನ್ನು ಕೆಲವೇ ಕೆಲವು ಮಾತುಗಳಲ್ಲಿ ಹೇಳಬಹುದಾದ ಕಥೆಗಾರ್ತಿಯ ಕಥನಕೌಶಲ್ಯವನ್ನು ಕಾಣಬಹುದು. ಕಥಾಗರ್ಭದಲ್ಲಿ ಆಗುತ್ತಿರುವ ಸ್ಥಿತ್ಯಂತರಗಳು ಕಾಲಮಾನಕ್ಕೆ ಅನುಗುಣವಾಗಿ ಆಗುತ್ತಿರುವ ಬದಲಾವಣೆಗಳು ಹೊಸ ರೂಪಾಂತರಗಳನ್ನು ಗುಲಾಬಿ ಟಾಕೀಸ್ ಸಂಕೀರ್ಣವಾಗಿ ಕಟ್ಟಿಕೊಡುತ್ತದೆ. ಮುಂಚಿನಷ್ಟು ಅಂಜಿಕೆಯಿಲ್ಲದ ಹೆಣ್ಣುಮಕ್ಕಳು ಸಿನಿಮಾಕ್ಕೆ ಹೋಗುವ ಧೈರ್ಯ ತಳೆಯುವುದು, ಗಂಡಸರೇನಾದರೂ ಅವರನ್ನು ಗದರಿಸದರೆ "ಅದೇನು ಒಂದು ಸಿನೆಮಾ ನೋಡಲು ನಾಲಾಯಕಾದೆವೇ? ಒಳ್ಳೇ ಕತೆ! ನೀವು ಹೇಳಿದ ಹಾಗೆ ಕೇಳುತ್ತಿದ್ದರೆ ಹೇಗೂ ಕುಣಿಸೀರಿ ಎಂದು ತುರುಬಿಗೆ ಮುಳ್ಳು ಕುತ್ತುತ್ತಾ ಉತ್ತರ ಕೊಡಲು ತಯಾರಾಗಿದ್ದಾರೆ. ದುಡ್ಡು? ಪೂರಾ ಸತ್ಯಂಭಟ್ಟರಾದರೆ ಸತ್ತು ನಿಗರಿಹೋದೆವು ಎನ್ನುತ್ತ ಮೂರುಜನ ಹೊರಟರೆ ನಾಲ್ಕುಜನ ಹೋಗುತ್ತೇವೆಂದು ಜಾಸ್ತಿ ವಸೂಲಿ ಮಾಡುವುದನ್ನು ಮತ್ತು ಹೆಚ್ಚಿಗಿರುವುದನ್ನು ಕೂಡಿಟ್ಟು ಮತ್ತೆ ಯಾವತ್ತಾದರೂ ಉಪಯೋಗಿಸುವುದನ್ನು ಕಲಿತಿದ್ದಾರೆ"[೧೨] ಗುಲಾಬಿಟಾಕೀಸ್ ಈ ಕಾರಣಕ್ಕೆ ಅನ್ಯತೆಯ ರೂಪಕವಾಗಿಯೂ ಮುಖ್ಯವಾಗುತ್ತದೆ. ಕೇವಲ 'ಅನ್ಯ'ದ ನೆಲೆಯಲ್ಲಿ ಎರಡನೆದರ್ಜೆಯ ಪ್ರಜೆಯಾದ ಮಹಿಳಾಜಗತ್ತನ್ನು ಒಳಗೊಳಿಸುವ ಪ್ರಕ್ರಿಯೆಯಾಗಿ ಟಾಕೀಸ್ ಒಂದು ಅಳತೆಗೋಲಾಗುತ್ತದೆ. ಈ ಎರಡನೆದರ್ಜೆಯ ಅನ್ಯದ ಪರಿಕಲ್ಪನೆಯನ್ನು ನೀಗಿಸುವ ಮೂಲಕ 'ಅಸ್ತಿತ್ವ'ದ ದಾಖಲಾತಿಗೆ ಟಾಕೀಸ್ ಒಂದು ಪರಿಕರದ ರೂಪಕದಂತೆಯೂ ಮುಖ್ಯವಾಗುತ್ತದೆ.

ಗುಲಾಬಿ ಹಳಿದು ಹೋದರೂ ಅವಳು ಕಟ್ಟಿಸಿದ ಟಾಕೀಸ್ ಬೇರೆಯವರಿಗೆ ಮಾರಾಟವಾದರೂ, ಅದೊಂದು ಊರಿನಲ್ಲಿ ಅಲೆಯೊಂದನ್ನೆಬ್ಬಿಸಿ ಹೊಸ ಬದಲಾವಣೆಗಳಿಗೆ ನಾಂದಿಹಾಡಿದೆ. ಕಥೆಗಾರ್ತಿಯ ಮಾತಿನಲ್ಲಿ ಹೇಳುವುದಾದರೆ 'ಒಮ್ಮೆ ಎದ್ದ ಅಲೆ...... ಮರಳುವುದಿಲ್ಲವಷ್ಟೇ? 'ಗುಲಾಬಿ ಟಾಕೀಸ್ ಮತ್ತು ಸಣ್ಣ ಅಲೆಗಳು' ಈ ಕಥೆಯಲ್ಲಿ

ಸ್ಥಾವರದಂತಿದ್ದ ಊರಿನಲ್ಲಿ ಬದಲಾವಣೆಯ ಅಲೆ ಬೀಸುವುದು. ಲಿಲ್ಲೀಬಾಯಿಯ ಜೀವನಕ್ರಮದಲ್ಲಿ ಆಗುವ ಬದಲಾವಣೆಗಳು ಟಾಕೀಸಿನ ಮ್ಯಾನೇಜರ್‌ನ ಲೈಂಗಿಕ ಸ್ವೇಚ್ಛಾಚಾರ ಹಾಗೂ ಸಂಪ್ರದಾಯಿಕ, ಕೌಟುಂಬಿಕ ವ್ಯವಸ್ಥೆಯಲ್ಲಿನ ಸಂಪ್ರದಾಯಸ್ಥ ಮಹಿಳೆಯರು ಕ್ರಮೇಣವಾಗಿ ಧೈರ್ಯ ತಂದುಕೊಂಡು ಪುರುಷರೆದುರಿಗೆ ಗಟ್ಟಿಯಾಗಿ ಮಾತನಾಡುವ ಎದೆಗಾರಿಕೆಯನ್ನು ಬೆಳೆಸಿಕೊಂಡ ಪರಿಯನ್ನು ಕಥೆ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಮಹಿಳಾ ಅಸ್ಪೃಶ್ಯತೆಯ ಅಭಿವ್ಯಕ್ತಿ

ವೈದೇಹಿಯವರ 'ಅಮ್ಮಚ್ಚಿಯೆಂಬ ನೆನಪು' ಕಥೆಗಾರ್ತಿಯ ಕಥನಕೌಶಲ್ಯತೆ, ಭಾಷಾ ಪ್ರಬುದ್ಧತೆ, ಗಾಢವಾದ ಅನುಭವ ಸಾಂದ್ರತೆ ಮತ್ತು ಅನನ್ಯ ನಿರೂಪಣಾ ತಂತ್ರಗಾರಿಕೆಯ ಕಥಾನಕ. ಪುರುಷಪ್ರಧಾನ ಯಾಜಮಾನ್ಯ ಸಾಮಾಜೋ-ಕೌಟುಂಬಿಕ ವ್ಯವಸ್ಥೆಯಲ್ಲಿ 'ಅಮ್ಮಚ್ಚಿ'ಯೆಂಬ ತಂದೆಯಿಲ್ಲದ ಹುಡುಗಿ ತಾಯಿ ಸೀತಮ್ಮನ ನೆಲೆಯಲ್ಲಿದ್ದು, ತನ್ನ ವಾಕ್‌ಸ್ವಾತಂತ್ರ್ಯವನ್ನು ನಿರ್ಭಿಡೆಯ ಮನೋಸ್ಥಿತಿಯನ್ನು ತನಗನಿಸಿದ್ದನ್ನು ಹೇಳಿಬಿಡುವ ಮಾಡಿಬಿಡುವ ಗಟ್ಟಿಗಿತ್ತಿ. ಆದರೂ ಅಂತಿಮವಾಗಿ ಸ್ವಾಭಿಮಾನಿ ಹುಡುಗಿ ಅಮ್ಮಚ್ಚಿಯ ಎಲ್ಲಾ ಲವಲವಿಕೆ ಮತ್ತು ಜೀವಂತಿಕೆಯನ್ನು ಹೊಸಕಿ ಹಾಕಿ ಬಿಡುವ ಅಮಾನವೀಯವಾದ ಪಿತೃಪ್ರಧಾನ ವ್ಯವಸ್ಥೆಯನ್ನು ಅದರ ಇಬ್ಬಗೆ ನೀತಿಯನ್ನು ಸ್ವಾರ್ಥಪರತೆಯನ್ನು ಲೈಂಗಿಕ ಸ್ವೇಚ್ಛಾಚಾರವನ್ನು ಅಷ್ಟೇ ಕಟುವಾಗಿ ಚಿತ್ರಿಸುತ್ತದೆ.

ಕಥೆ ಆರಂಭಗೊಳ್ಳುವುದು ಅಮ್ಮಚ್ಚಿಯ ಗೆಳತಿಯ ಬಾಯಿಂದ. ಗೆಳತಿ ಬಳಸುವ ಉತ್ತಮ ಪುರುಷವಾಚಕ ಕಥನಕ್ರಮ ವೈಶಿಷ್ಟ್ಯತೆಯನ್ನುಳ್ಳದ್ದಾಗಿದೆ. ಅಮ್ಮಚ್ಚಿಯ ಬದುಕು ಅವಳು ಗೆಳತಿಯೊಂದಿಗಿನ ಸುಮಧುರ ಭಾಂದವ್ಯ ಕುಟುಂಬದ ಒತ್ತಾಸೆಯಾದ ತಾಯಿ ಸೀತಮ್ಮ ಮತ್ತು ಕುಟುಂಬದ ರಕ್ಷಕನಂತೆ ಹುಸಿ ಅನಾಥರಕ್ಷಕ ವೆಂಕಪ್ಪ ಇವೆಲ್ಲವುಗಳನ್ನು ಗೆಳತಿ ತನ್ನ ನೀರಾನುಭವಕ್ಕೆ ಬಂದಂತೆ ನೀವೇದಿಸುತ್ತಾ ಹೋಗುತ್ತದೆ. ಸಾಂದರ್ಭಿಕವಾಗಿ ವೆಂಕಪ್ಪಯ್ಯ ಮತ್ತು ಅಮ್ಮಚ್ಚಿ, ಅಮ್ಮಚ್ಚಿ-ಸೀತಮ್ಮ, ಅಮ್ಮಚ್ಚಿ ಗೆಳತಿಯ ನಡುವಿನ ಮುಖಾಮುಖಿ ಅಂತರ್ ಕ್ರಿಯೆಗಳ ಮುಖೇನ ಪ್ರಾದೇಶಿಕ ಭಾಷೆಯಾದ ಕುಂದಾಪುರದ ಕನ್ನಡದಲ್ಲಿ ಬಣ್ಣಿಸುವ ಕ್ರಿಯೆಯಲ್ಲಿ ಅಮ್ಮಚ್ಚಿಯ ವ್ಯಕ್ತಿತ್ವದ ಅನಾವರಣ ಮಾಡುತ್ತಾಳೆ.

ಸದಾ ಲವಲವಿಕೆಯಿಂದ ಪುಟಿದೇಳುವ ಜೀವನೋತ್ಸಾಹದ ಸ್ವಾಭಿಮಾನಿ ಹುಡುಗಿಯಾದ ಅಮ್ಮಚ್ಚಿ ಸಮಾಜದ ಹೊಸತನಕ್ಕೆ ಸದಾ ತೆರೆದಿಟ್ಟುಕೊಳ್ಳವವಳಾಗುತ್ತಾಳೆ. ಹಾಗಾಗಿಯೇ ಶಂಭಟ್ಟರ ಮನೆಯ ಸಂಪರ್ಕಕ್ಕೆ ಬರುವ ಅಮ್ಮಚ್ಚಿ ಅಲ್ಲಿನ ಪ್ರಭಾವಕ್ಕೆ ಒಳಗಾಗಿ ವಾರೆ ಬೈತಲೆ ತೆಗೆದು ಎರಡು ಜಡೆ ಹಾಕಿಕೊಳ್ಳುವುದು ಹಿಂದು ಗುಬ್ಬಿಯ

ರವಕೆ ಒಲಿಸಿಕೊಳ್ಳುವುದು ಇತ್ಯಾದಿ ಆಧುನಿಕ ಜಗತ್ತಿನ ಹೊಸ ಫ್ಯಾಷನ್‌ಗೆ ಆಕರ್ಷಿತಳಾಗುವುದು ಮತ್ತು ಅಂತಹ ಬದಲಾವಣೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವುದು ಅವಳ ಬದುಕಿನ ಮಹತ್ವಪೂರ್ಣ ಬೆಳವಣಿಗೆ. ಪಿತೃಪ್ರಧಾನ ವ್ಯವಸ್ಥೆ ಬದಲಾವಣೆ ಬಯಸದ ಸ್ಥಾವರ ಸಮಾಜದ ರಕ್ಷಣೆಗೆ ಕಟಿಬದ್ಧವಾದುದು. ಹಾಗಾಗಿ ಅಂಥ ಸ್ಥಗಿತ ಸಮಾಜದ ನಿಶ್ಚಲಸ್ಥಿತಿಗೆ ಹೆಣ್ಣಿನ ಮೇಲೆ ಹತ್ತು ಹಲವು ಕಟ್ಟಳೆಗಳನ್ನು ರೂಪಿಸುತ್ತದೆ. ಮಹಿಳೆ ಸಂಪ್ರದಾಯ ಶರಣೆಯಾಗಿರಬೇಕು, ಯಾವ ಕಟ್ಟಳೆಯನ್ನು ಉಲ್ಲಂಘಿಸಬಾರದು, ಮತ್ತು ತಾವು ರೂಪಿಸುವ ರೀತಿ ರಿವಾಜುಗಳನ್ನು ಪ್ರಶ್ನಿಸಬಾರದು ಎಂಬ ಸರ್ವಾಧಿಕಾರಿ ಧೋರಣೆಯದು. ಈ ಕಾರಣದಿಂದಾಗಿಯೇ ವಾರೆ ಬೈತಲೆ ಬಾಚಿಕೊಂಡು ಎರಡು ಜಡೆ ಬಿಟ್ಟುಕೊಂಡು ಅಮ್ಮಚ್ಚಿ ಶಂಭಟ್ಟರ ಸತ್ಯನಾರಾಯಣ ಪೂಜೆಗೆ ಹೊರಟಾಗ ಹಾದಿಯಲ್ಲಿ ಅವಳನನ್ನು ಎದುರಾಗುವ ವೆಂಕಪ್ಪಯ್ಯ ವ್ಯಂಗ್ಯಮಿಶ್ರಿತ ಕಟಕಿಯ ಮಾತುಗಳನ್ನಾಡುವುದು.

'ವೆಂಕಪ್ಪಯ್ಯ ದಾರಿಯಲ್ಲಿ ಸಿಕ್ಕಿದ. 'ಏನಿಯ? ಇದೇನಿಯ ಯೇಸ. ಬೊಂಬಾಯಿ ಲೇಡಿಯ ಹಂಗೆ, ವಾರೆ ಬಕ್ತಲೆ! ಶಿ.... ಶಿ....ನಡೆ ಮನೆಗೆ. ಸರಿಯಾಯಿ ಬಾಚೆಂಡು ಹೋವು' ಎಂದ. ಅಮ್ಮಚ್ಚಿ ಅದಕ್ಕೆ ವಿರುದ್ಧವಾಗಿ ಪ್ರತ್ಯುತ್ತರ ನೀಡುವ ಅಮ್ಮಚ್ಚಿ ನಿರ್ಭಿಡೆಯವಳು ಸ್ವತಂತ್ರ ಮನೋಪ್ರವೃತ್ತಿಯವಳು ಮತ್ತು ಸ್ವಾಭಿಮಾನದವಳು. ಅಮ್ಮಚ್ಚಿ "ಹೋವುಯ, ನೀ ಮನೆಗೆ ಹೋವು. ಹೋಯಿದ್ದ್ ಗಡದ್ದು ಒಂದು ಲೋಟೆ ಚಾಯ ಕುಡಿ. ಅಮ್ಮನ ಹಕ್ಕೈ ಹೇಳ್, ಹೆಂಗೂ ಮಾಡಿ ಕೊಡ್‌ತ್ಲ್... ನನ್ನ ಸುದ್ದಿಗೆ ಮಿನಿ ಬರಳೆ. ಬೋಳುಮಂಡೆ ಕಾಕ. ನಿಂಗೆ ವಾರೆ ಬಿಡು, ಯಾವ ಬಕ್ತಲೆಯೂ ತೆಗೆಯಗಾಗದ ಸಂಕಟಕ್ಕೆ ನಂಗೆ ಯಾಕೆ ಹೇಳ್ತೆ?"[೧೩] ಗಂಡಸರಿಲ್ಲದ ಅಮ್ಮಚ್ಚಿಯ ಮನೆಯಲ್ಲಿ ಅಮ್ಮಚ್ಚಿಗಿನ್ನೂ ಆಗ ಆರುತಿಂಗಳು ವಯಸ್ಸು. ಇಂಥ ಸನ್ನಿವೇಶದಲ್ಲಿ ಆ ಕುಟುಂಬದ ರಕ್ಷಕನಂತೆ ಬಂದು ಸೇರುವ ೧೨ ವರ್ಷದ ವೆಂಕಪ್ಪ ಬೆಳೆಯುತ್ತಾ ವೆಂಕಪ್ಪಯ್ಯನೆಂದು ಕರೆಯಲ್ಪಡುತ್ತಾನೆ. ಜೊತೆಗೆ ಪುರುಷನ ಯಾಜಮಾನ್ಯತೆಯ ಕಠೋರತನವನ್ನು ಪ್ರದರ್ಶಿಸುವ ಪ್ರತೀಕವಾಗುತ್ತಾನೆ. ಬೆಳೆದ ಮಗಳು ಸ್ವತಂತ್ರವಾಗಿ ಪೇಟೆಗೆ ಹೋಗಿ ಮನೆಗೆ ಬೇಕಾದ ಸಾಮಾನು ಖರೀದಿ ಮಾಡಿಕೊಂಡು ಬರಲು ಸೀತಮ್ಮ ಸುತಾರಾಂ ಒಪ್ಪುವುದಿಲ್ಲ. ಹೆಣ್ಣು ಹಾಗೆಲ್ಲ ಸ್ವೇಚ್ಛೆಯಾಗಿ ಓಡಾಡಬಾರದು ಎಂಬ ಕೊಂಕು ತೆಗೆಯುವ ಸೀತಮ್ಮ ಪಿತೃಪ್ರಾಧಾನ್ಯತೆಯನ್ನು ಮುಂದುವರೆಸಿಕೊಂಡು ಹೋಗುವ ಭಾಗವಾಗುತ್ತಾಳೆ. ಪಿತೃಪ್ರಧಾನ ಸಮಾಜದ ಉಳಿಗಮಾನ್ಯ ವ್ಯವಸ್ಥೆಗೆ ಪರೋಕ್ಷವಾಗಿ ಬೆಂಬಲ ನೀಡುವವರಾಗುತ್ತಾರೆ.

ಯಾವ ನೆಪವನ್ನು ಒಡ್ಡಿಯಾದರೂ ಸರಿಯೇ ಅಮ್ಮಚ್ಚಿಯ ಜೀವಂತಿಕೆಗೆ ಗರಬಡಿಯುವಂತೆ ಮಾತಾಡುವುದು ವೆಂಕಪ್ಪಯ್ಯನ ನಡಾವಳಿಯಾಗಿದೆ. ಅವಳ ಉಡುಗೆ ತೊಡುಗೆಯಲ್ಲಿ ತಪ್ಪು ಎಣಿಸುವುದು, ಹೊರಗೆ ಹೋಗುವುದು ಸರಿಬರದು ಎಂದು ಅದರಲ್ಲೂ ಕುಂದು ಕಾಣವುದು ಸಾಮಾನ್ಯವಾಗುತ್ತದೆ. ವೆಂಕಪ್ಪನ ಈ ನಡೆ ಪುರುಷಪ್ರಧಾನ ಸಮಾಜದ ಸ್ತ್ರೀಯ ಸ್ವತಂತ್ರಹರಣದ ಸಂಗತಿಯಾಗುತ್ತದೆ. ಆತ ದಾರಿ ಬಿಡದೆ 'ಏನು ಯೇಸ ತಕಂಡು ಹೋತ ಪೇಟೆಯವ್ವ ಹಂಗೆ! ಶ್ಯೇಕ್ಕ್ .....ಎದೆ ಎರಡೂ ಕಾಣ್ತಹಂಗೆ ಪಟ್ಟಿಸೆರಗು ಹಾಸಿಂಡ್ ಹೊರಟೆಯಲ್ಲ! ಯಾರ ಮಾರ್ಯಾದೆ ತೆಗೆಗೆ?' ಎಂದ. 'ಹಿಂಗೆಲ್ಲ ಮಾಡಿಂಡ್ ಇವಳು ಪೇಟೆಗೆ ಹೊರಡ್ತ್‌ದ್, ಬಾಸಾಯಿ ತಿಂತ್‌ದ್, ಯಾಕೆ ಬೇಕಾಯಿ ಈಗ! ಪೇಟೆ ಸಾಮಾನು ಬೇಕಾರೆ ನಾನು ಕೊಣಂದ್ ಕೊಡ್ತಿಲ್ಲಯ?' ಮುಂತಾಗಿ ಹೇಳುತ್ತ ಹೇಳುತ್ತ ಕಡೆಯ ಬಾಣವಾಗಿ "ನಿಮಗೆ ಗೊತ್ತಿಲ್ಲೆ, ಇವಳು ಪೇಟೆ ಅಂದ್ ಹೋತ್‌ದ್ ಆ ಶಂಭಟ್ಟರ ಮನೆಗಲ್ದ? ಅವರ ಮನೆ ಜಗಲಿ ಕಾಸ್‌ತ್‌ದ್, ಬಾಯಿ ಕಳ್ದ್ ನಗಾಡ್‌ತ್‌ದ್. ಅವು ಇವಳ ಹಲ್ಲೆಲ್ಲ ಲೆಕ್ಕ ಮಾಡಿಂತೋ."[೧೪] ಮಹಿಳೆಯನ್ನು ತೇಜೋವಧೆ ಮಾಡಲು ಪುರುಷಸಮಾಜ ರೂಪಿಸಿಕೊಂಡ ತಂತ್ರವೆಂದರೆ ಭದ್ರತೆ. ಭದ್ರತೆಯ ಹೆಸರಿನಲ್ಲಿ, ಕಾಪಾಡುವ ಕರ್ತವ್ಯದ ರೂಪದಲ್ಲಿ ಆಕೆ ಹೊರಜಗತ್ತಿನ ಆಲೋಚನೆಗಳಿಗೆ ತೆರೆದುಕೊಳ್ಳದಂತೆ ಎಚ್ಚರ ವಹಿಸುವುದು. ಸ್ವತಂತ್ರ ಉಡುಗೆಯ ಕಲ್ಪನೆಯ ಮೇಲೆಯೂ ನಿಷೇಧ ಹೇರುವ ಮೂಲಕವೂ ಆಕೆಯನ್ನು ಬಚ್ಚಿಟ್ಟು ನೋಡುವ ವಸ್ತುವೆಂಬಂತೆ ಬಿಂಬಿಸಲು ಸುಲಭವಾಗುತ್ತದೆ. ಇದೇ ಮನಸ್ಥಿತಿಯನ್ನು ವೆಂಕಯ್ಯನಲ್ಲಿಯು ಕಾಣಬಹುದು. ಪುರುಷ ಮನಸ್ಥಿಯನ್ನು ಆಳದಿಂದ ಅರ್ಥ ಮಾಡಿಕೊಳ್ಳುವ ಸ್ತ್ರೀಪ್ರಜ್ಞೆಯು ಇಂಥ ಸಣ್ಣ ಸಂಗತಿಗಳು ಮಹಿಳೆಯನ್ನು ಯಾವ ನೆಲೆಯಿಂದ ಶೋಷಿಸುತ್ತವೆಯೆಂಬುದನ್ನು ಗುರುತಿಸುತ್ತದೆ. ಕಥೆಗಾರ್ತಿಯು ಬಹುಸೂಕ್ಷ್ಮವಾಗಿ ಇಂಥ ಸಂಗತಿಗಳನ್ನು ಅಭಿವ್ಯಕ್ತಿಸುತ್ತಾಳೆ.

ಎಂಟು ದಿನ ತಿರುಪತಿಗೆ ಹೋಗಿ ಮರಳಿ ಬಂದ ವೆಂಕಪ್ಪಯ್ಯನ ಶರಟಿಗೆ ತನ್ನದೇ ಆದ ರೀತಿಯಲ್ಲಿ ಕತ್ತರಿ ಪ್ರಯೋಗ ಮಾಡುವ ಅಮ್ಮಚ್ಚಿ ಅದಕ್ಕೊಂದು ಹೊಸ ರೂಪಾಂತರ ನೀಡುವುದರ ಮುಖೇನ ತನ್ನ ಹಿಂದೂಗುಬ್ಬಿ ರವಿಕೆಗೆ ವೆಂಕಪ್ಪಯ್ಯ ಮಾಡಿದ ಕಟಕಿಯ ಮಾತಿಗೆ ಪ್ರತ್ಯುತ್ತರವಾಗಿ ಬಳಸಿಕೊಂಡವಳು. 'ರವಿಕೆಗೆ ರಮಾಟೀಚರ್ ಹತ್ರ ಹೋಗಿ ಮಸಲತ್ತು ಮಾಡ್ತ್‌ದ್ ಅಂದ್ರೆ ಅಷ್ಟು ಸುಲಭ ಅಂದ್ ಮಾಡಿಯಾ ಯಂಕಪ್ಪಯ್ಯ ನೀನು?' ಎಂದು ಹಲ್ಲುಕಡಿದು ನನ್ನತ್ರ ತಿರುಗಿ "ಅಮ್ಮಂಗೆ ಹೇಳಡ. ಹೇಳಿರೆ ಕಾಣ್. ತನ್ನಂತೆ ಗೊತ್ತಾರೆ ಆಗಡ್. ನಾ ಹೆದರ್ತಿಲ್ಲೇ ಎಂದಳು. ತನ್ನ ಶರಟಿಗಾದ ಗತಿಯನ್ನು ನೋಡಿ ಕೋಪಗೊಂಡ ವೆಂಕಪ್ಪಯ್ಯ ಅದಕ್ಕೆ ಅಮ್ಮಚ್ಚಿ ಕಾರಣ

ಎಂದು ಬಗೆದು ಅವಳ ಸೊಲ್ಲಡಗಿಸಬೇಕೆಂದು ಅಮ್ಮಚ್ಚಿಯ ಜಡೆಬುಡಕ್ಕೆ ಕೈಹಾಕಿ ದರದರನೆ ಎಳೆಯುತ್ತಾ ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಳ್ಳುವುದು."[೧೫] ನಂತರ ಅಮ್ಮಚ್ಚಿ ಹೊರಗೆ ಬರುವಾಗ ಅವಳ ತುಟಿ ಹೊಡೆದು ರಕ್ತ ವಸರುವುದು ಇತ್ಯಾದಿಗಳ ಸಂಕ್ಷಿಪ್ತ ವರ್ಣನೆಯೊಂದಿಗೆ ವೆಂಕಪ್ಪಯ್ಯನ ಲೈಂಗಿಕ ಹಿಂಸೆ, ಲೈಂಗಿಕ ದೌರ್ಜನ್ಯ ಅಟ್ಟಹಾಸವನ್ನು ಸಣ್ಣ ಮಾತುಗಳ ಸಾಂದ್ರತೆಯಲ್ಲಿ ಕಥೆಗಾರ್ತಿ ಬಣ್ಣಿಸುತ್ತಾರೆ. ಸ್ತ್ರೀಯ ಮೇಲೆ ಎಸಗುವ ಪುರುಷನ ಆಕ್ರಮಣಶೀಲತೆ ಅತ್ಯಾಚಾರ ಮತ್ತು ಲೈಂಗಿಕ ಶೋಷಣೆಯನ್ನು ಕಥೆಗರ್ಭದಲ್ಲಿ ಸೂಚ್ಯವಾಗಿ ಭಾಷೆಯ ಮುಖೇನ ಕಡೆದಿರುವ ವೈದೇಹಿ ಅಮ್ಮಚ್ಚಿಯಂತಹ ದಿಟ್ಟ ಚಿಕ್ಕ ಹುಡುಗಿಯ ಆತ್ಮಸ್ಥೈರ್ಯವನ್ನು ಕುಗ್ಗಿಸುವ ವೆಂಕಪ್ಪಯ್ಯನಂತಹ ಹುಸಿ ರಕ್ಷಕರ ಮುಖವಾಡದ ಹಿಂದಿನ ನಿಜ ಮುಖದರ್ಶನ ಮಾಡಿಸುತ್ತಾರೆ. ಅಮಾನವೀಯ ವೆಂಕಪ್ಪಯ್ಯನ ಕೈಯಲ್ಲಿ ಲೈಂಗಿಕ ಕ್ರೌರ್ಯಕ್ಕೆ ಬಲಿಯಾದ ಅಮ್ಮಚ್ಚಿ ಅನಿವಾರ್ಯವಾಗಿ ತನ್ನ ಮನಸ್ಸಿನ ಸಮ್ಮತಿಯಿಲ್ಲದೆ ವೆಂಕಪ್ಪಯ್ಯನನ್ನು ಮದುವೆಯಾಗುವುದು ಸ್ತ್ರೀಯ ಅತಂತ್ರ ಸ್ಥಿತಿಯನ್ನು ಅಸಹಾಯಕತೆಯನ್ನು ಅರಹುದಾಗುತ್ತದೆ.

ಒಲ್ಲದ ಗಂಡನನ್ನು ಕಟ್ಟಿಕೊಂಡ ಅಮ್ಮಚ್ಚಿ ತಿರುಪತಿಗೆ ತೆರಳುವ ಮುನ್ನ ಜೀವದ ಗೆಳತಿಗೆ ಹಾರೈಸುವ ನುಡಿಗಳಲ್ಲಿ ಅವಳ ವಿಶಾಲ ಹೃದಯವಂತಿಕೆ ಗೋಚರಿಸುತ್ತದೆ. "ಜೀವ ಇದ್ರೆ ಮತ್ತೆ ಕಾಣ್‌ತೆ ನಿನ್ನ. ಬೇಜಾರು ಮಾಡಿಣ್ಣಳೆ. ಶಾಲೆಗೆ ಹೋಯಿದ್ ಪಾಠ ಓದಿ ಹುಸಾ...... ರಾಗ್ಗು. ದೊಡ್ಡ ಜನ ಆಗ್ಗು ನೀನು. ತೆಳಿತಾ?' ಎನ್ನುತ್ತ ತಲೆ ನೇವರಿಸಿ ಹೊರಟೇ ಹೋದಳು."[೧೬] ತಾನು ಸುಶಿಕ್ಷಿತಳಾಗದೇ ಹೋದರೂ ತನ್ನ ಗೆಳತಿಗೆ ಸುಶಿಕ್ಷಿತಳಾಗುವ ಸೌಭಾಗ್ಯ ಲಭಿಸಲೆಂಬ ಅವಳ ವಿಶಾಲ ಬಯಕೆ ವ್ಯಕ್ತವಾಗುತ್ತದೆ. 'ಹೆಣ್ಣಿಗೆ ಹೆಣ್ಣೇ ಗೆಳತಿ'ಯೆಂಬ ಆಧುನಿಕ ಸ್ತ್ರೀವಾದದ ಮೂಲಮಂತ್ರ ಇಂಥ ಮಾತುಗಳಲ್ಲಿ ದಾಖಲಾಗುತ್ತದೆ. ವೆಂಕಪ್ಪಯ್ಯನ ಲೈಂಗಿಕತೃಷೆಗೆ ಬಲಿಯಾದ ಅಮ್ಮಚ್ಚಿಗೆ ವೆಂಕಪ್ಪಯ್ಯನ ಆತ್ಮಹತ್ಯೆ ಪ್ರಕರಣ ಯಾವುದೇ ಕಳವಳವನ್ನು ಮೂಡಿಸದೇ ಹೆಗಲ ಮೇಲಿನ ದೊಡ್ಡಬಾರ ಇಳಿದಂತಹ ನಿರುಮ್ಮಳ ಭಾವ ಸ್ಫುರಿಸುತ್ತದೆ. 'ಅಂತೂ ಮನೆ ಬಂತು. ಸೀತತ್ತೆ ಓ ಅಷ್ಟು ದೂರದಿಂದಲೇ ಅವಳನ್ನು ಕಂಡವರೇ ಬೆನ್ನಿಗೆ ಕೈಕೊಟ್ಟು ಹಿಮ್ಮುಖ ಬಾಗಿ ಬಾಯಿಕಳೆದು ನಿಂತೇಬಿಟ್ಟರು. ಹತ್ತಿರ ಬರುತ್ತಲೇ 'ಏನು ರಂಡೆ ಒಬ್ಬಳೇ! ಯಂತ ಕತೆ ಮಾಡಿಂಡೆ?' ಎಂದರು ಗುಮಾನಿ ಬಂದಂತೆ. "ಒಬ್ಬಳೇ ಬರದೆ ಮತ್ತೆಂತ ಮಾಡ್ತ್‌ದ್ ಅಲ್ಲಿದ್ದ್? ನಿನ್ನ ಯಂಕಪ್ಪಯ್ಯ ನೇಣು ಹಾಕಿಂಡ' ಎಂದಳು ಅಮ್ಮಚ್ಚಿ. ಸೀದ ಕಲ್ಲುಮರಿಗೆ ಇದ್ದಲ್ಲಿಗೆ ಹೋಗಿ ನೀರನ್ನು ಮುಖಕ್ಕೆ ಬೀಸಿ ಬಡಿದುಕೊಳ್ಳುತ್ತ ತಿರುಗಿ ತಾಯಿಯನ್ನು ನೋಡಿದಳು. ಸೆರಗಿಂದ ಮುಖವರೆಸಿಕೊಳ್ಳುತ್ತ ಎಡೆಯಲ್ಲಿ ನನ್ನನ್ನು ನೋಡಿ ನಕ್ಕಳು."[೧೭]

ಅಮ್ಮಚ್ಚಿಗೆ ಸ್ತ್ರೀ ಬಿಡುಗಡೆಯ ಸ್ವತಂತ್ರದ ಅನುಭವವನ್ನು ಈ ಸಂದರ್ಭ ಕಟ್ಟಿಕೊಡುತ್ತದೆ. ಸ್ತ್ರೀ ಬಿಡುಗಡೆಯೆಂದರೆ ಕೇವಲ ಪುರುಷ ಹಿಡಿತದಿಂದ ಬಿಡುಗಡೆ ಮಾತ್ರವಾಗಿರದೆ ಮತ್ತೆಂದೂ ಕಟ್ಟಳೆಯ ಒಳಗೆ ಬಂಧಿಯಾಗದ ನಿರುಮ್ಮಳಭಾವವಾಗಿದೆ. ತನ್ನದೆ ಬದುಕನ್ನು ತನ್ನದೆನ್ನುವ ಚಿಂತನೆಯ ಮೂಲಕ ಕಟ್ಟಿಕೊಳ್ಳುವ ಭರವಸೆಯದೂ ಆಗಿದೆಯೆಂಬುದನ್ನು ಅಮ್ಮಚ್ಚಿಯ ಮೂಲಕ ಲೇಖಕಿ ಸಾದಿಸುತ್ತಾಳೆ.

ಕಥೆಗಾರ್ತಿ ವೈದೇಹಿಯವರ ಸಣ್ಣಕಥೆಗಳ ಕಥಾಸರಣಿಯಲ್ಲಿ 'ಅಮ್ಮಚ್ಚಿಯೆಂಬ ನೆನಪು' ಕಥೆಯಲ್ಲಿ ಭಾಷೆಯ ಹದದಲ್ಲಿ ಸ್ತ್ರೀಪುರುಷ ಭಾವಸ್ಥಿತಿಗಳ ಸ್ವರೂಪವನ್ನು ಪರಿಣಾಮಕಾರಿಯಾಗಿಯೇ ಎಲ್ಲೂ ಅಳ್ಳಕವಾಗದಂತೆ ಭಾಷೆ, ಭಾವಸಾಂದ್ರತೆಯಲ್ಲಿ ತೆರದಿಟ್ಟಿರುವುದನ್ನು ಮನಗಾಣಬಹುದು.

ಅಕ್ಕುವಿನ ಅಂತರಂಗದ ಅನುಭವಗಳ ಅನಾವರಣ

ಪಿತೃಪ್ರಧಾನ ಸಂಸ್ಕೃತಿಯ ಆವಾಹನೆ ಮಾಡಿಕೊಂಡ ಮೇಲುಸ್ತರದ ಬ್ರಾಹ್ಮಣ ಕುಟುಂಬದೊಳಗಿನ ಸ್ತ್ರೀಪ್ರಪಂಚವನ್ನು ಅದರ ಆಯಾಮಗಳನ್ನು ತೆರೆದಿಡುವ ಪ್ರಯತ್ನದ ಫಲವಾಗಿ ಅಕ್ಕು ಕಥೆ ಮುಖ್ಯವಾಗುತ್ತದೆ. ಪುರುಷನ ಯಾಜಮಾನ್ಯತೆಯ ಚಕ್ರದಡಿಯಲ್ಲಿ ಸಿಕ್ಕಿ ನರಳುವ ಹೆಂಗಳೆಯರ ಪರಾವಲಂಬಿತ ಬದುಕಿನ ಪಾರ್ಶ್ವ ದರ್ಶನ ಮಾಡಿಸುತ್ತ 'ಅಕ್ಕು' ಎಂಬ ಹೆಣ್ಣಿನ ನಿರ್ಬಿಢತೆಯನ್ನು ಚಿತ್ರಿಸುತ್ತದೆ. ಯಾವ ಮೂಲಾಜಿಗೂ ಒಳಗಾಗದ ಸ್ವತಂತ್ರ್ಯ ಪ್ರವೃತ್ತಿಯ ಮಾತು ವರ್ತನೆಗಳ ಮುಖೇನ ಓದುಗರ ಮನದಾಳದಲ್ಲಿ ಅಚ್ಚಳಿಯದೇ ಉಳಿಯುವ ಪ್ರಭಾವಶೀಲ ಸ್ತ್ರೀ ಪಾತ್ರದ ವಿಶ್ವರೂಪವನ್ನು ಕಥೆ ಅನಾವರಣ ಮಾಡಿಸುತ್ತದೆ. ವಿವಾಹಿತಳಾಗಿದಾಗ್ಯೂ ಅಕ್ಕು ದಾಂಪತ್ಯ ಸುಖದಿಂದ ವಂಚಿತಳಾದವಳು. ಕೊರಳಲ್ಲಿ ಕರಿಮಣಿಯ ಮಂಗಲಸೂತ್ರವಿದ್ದರೂ ಅದಕ್ಕೇನೂ ಬೆಲೆ ಕೊಡದ ಅಕ್ಕು ಅದನ್ನು ನಾಗಂದಿಗೆ ಮೂಲೆಯಲ್ಲಿಟ್ಟು ಸವಾರಿ ಹೊರಡುವವಳು. ಪತಿ ಸಂಕಪ್ಪ ಅಕ್ಕುವಿಗೆ ದೈಹಿಕ ಸುಖವನ್ನಾಗಲಿ, ಮಾನಸಿಕ ನೆಮ್ಮದಿಯನ್ನಾಗಲಿ ನೀಡದ, ನೈತಿಕವಾಗಿ ಭ್ರಷ್ಟನಾದ ಪುರುಷ ರೂಪದೇಹಿ. ತನ್ನ ಪುರುಷತ್ವದ ಎಲ್ಲಾ ಅಂಶಗಳನ್ನು ಅಳ್ಳಕ ಮಾಡಿಕೊಂಡ ನಪುಂಸಕ.

'ಅಕ್ಕು' ಕಥೆಯನ್ನು ಓದುವಾಗ ಮನಃಶಾಸ್ತ್ರೀಯ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಲೈಂಗಿಕ ಸುಖದಿಂದ ವಂಚಿತಳಾದ ಅಕ್ಕು ವಿವಾಹಿತ ಸ್ತ್ರೀಯ ಸಹಜ ಬಯಕೆಯಾದ ತಾಯ್ತನವನ್ನು ಹೊಂದಬೇಕೆಂಬ ಬಯಕೆಯ ಮುರುಟಿ ಹೋದುದರ ಫಲವಾಗಿಯೋ ಅಥವಾ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಆಕ್ರಮಣಶೀಲತೆಗೆ

ಬಲಿಪಶುವಾದುದುರ ಪರಿಣಾಮವಾಗಿಯೋ ಅವಳಿಗೆ ಪುರುಷಜಗತ್ತಿನ ಮೇಲಿನ ಜಿಗುಪ್ಸೆಯ ಪರಿಣಾಮವಾಗಿಯೋ ಅಥವಾ ಒಂಟಿಯಾಗಿ ಗಂಡನಿಂದ ದೂರವಾದ ಪರಿಣಾಮವೋ, ಮಾನಸಿಕವಾಗಿ ಕನಲಿ ಹೋದ ಅಕ್ಕುವಿನ ಚಿತ್ತಸ್ವಾಸ್ಥ್ಯ ಹದಗೆಟ್ಟಿರಲಿಕ್ಕೆ ಸಾಕು. ತತ್ಪರಿಣಾಮವಾಗಿ ಅವಳಾಡುವ ಮಾತು ಮತ್ತು ಅವಳು ವರ್ತಿಸುವ ರೀತಿಯಲ್ಲಿ ಸಾಮಾಜಿಕರು ವಿಲಕ್ಷಣೆಯತೆ ಕಂಡು ಅವಳಿಗೆ ಹುಚ್ಚಿಯ ಪಟ್ಟವನ್ನು ಕಟ್ಟಿದ್ದಾರೆ. ಸಾಂಪ್ರದಾಯಿಕ ಕುಟುಂಬಗಳಲ್ಲಿ ಹೆಣ್ಣಿಗೆ ಹಲವು ನಿರ್ಬಂಧಗಳು ಮತ್ತು ಸಾಮಾಜಿಕ ಕಟ್ಟಳೆಗಳು, ಅಕ್ಕು ಹುಚ್ಚಿಯಾದರ ಪರಿಣಾಮವಾಗಿ ಅವಳೀಗ ಅನಿಯಂತ್ರತಳು. ಅವಳ ಸ್ವಾತಂತ್ರ್ಯವನ್ನು ಯಾರೂ ಹರಣ ಮಾಡಲಾರರು. ಮಾಡಿದಲೋ ಅದು ತಾತ್ಕಾಲಿಕವಷ್ಟೇ ತನಗೆ ಕಂಡದ್ದು ತನ್ನ ಮನಸ್ಸಿಗೆ ಹೊಳೆದದ್ದು ಎಲ್ಲವನ್ನು ಅಕ್ಕು ಯಾವ ಬಿಡೆಯಿಲ್ಲದೇ ಎಲ್ಲವನ್ನು ರಾಜಾರೋಷವಾಗಿ ತೆರೆದಿಟ್ಟುಬಿಡುವ ಸ್ವತಂತ್ರ್ಯ ಪ್ರವೃತ್ತಿಯವಳು. ಅವಳ ಮನೆಯಲ್ಲಿ ಅಜ್ಜಯ್ಯ ಮತ್ತು ವಾಸುಚಿಕ್ಕಪ್ಪ ಪುರುಷ ಪ್ರಾಧಾನ್ಯತೆಯನ್ನು ಪ್ರತಿಬಿಂಬಿಸುವ ಕ್ರೌರ್ಯದ ಸಂಕೇತವಾಗುತ್ತಾರೆ. ಮನೆಯ ಹಿರಿಯನಾದ ಅಜ್ಜಯ್ಯ ಅಕ್ಕುವಿನ ಅನಿಯಂತ್ರಿತ ವಾಗ್ದಾಳಿಗೆ ದೈಹಿಕಶಿಕ್ಷೆ ವಿಧಿಸುವುದು ವಾಸುಚಿಕ್ಕಪ್ಪ ಅಜ್ಜಯ್ಯ ನೀಡಿದ ದೈಹಿಕಶಿಕ್ಷೆಯ ಆಣತೆಯನ್ನು ಅಕ್ಷರಶಃ ಕಾರ್ಯಗತಗೊಳಿಸುವ ಮೂಲಕ ಇಬ್ಬರೂ ಅಕ್ಕುವನ್ನು ದೈಹಿಕವಾಗಿ ನಿರ್ಬಂಧಿಸಬಲ್ಲವರಾದರೂ ಅವಳ ಅಂತಃಸತ್ವ ಮತ್ತು ಸ್ಥೈರ್ಯವನ್ನು ಉಡುಗಿಸಲಾಗದೇ ಹೋಗುತ್ತಾರೆ. ಅವರು ಹೊಡೆಯುವ ಕ್ರಿಯೆ ಕ್ರೌರ್ಯದ ಪರಮಾವಧಿಯಾಗುತ್ತದೆ. ಮಾತೃತ್ವವಿಲ್ಲದ ಅಮಾನವೀಯ ಪುರುಷಪ್ರಧಾನ ಸಮಾಜದ ಸಾಂಕೇತಿಕ ಕ್ರಿಯೆಯಾಗುತ್ತದೆ.

ಕಥೆಯ ಹಂದರದೊಳಗೆ ಅಕ್ಕುವಿನ ಹುಚ್ಚಿನ ಮೂಲವನ್ನು ಹುಡುಕುತ್ತಾ ಹೋದಲ್ಲಿ ಆ ಹುಚ್ಚು ಅಕ್ಕುವಿನ ಸ್ವಯಾರ್ಜಿತವಲ್ಲ. ಅವಳಿಗೆ ಪುರುಷ ಜಗತ್ತಿನ ಕೊಡುಗೆಯೆಂದೆಣಿಸಬಹುದು. ಸ್ತ್ರೀಗೂ ಪುರುಷನಷ್ಟೇ ಸಹಜವಾದ ಬಯಕೆಗಳು ಆಕಾಂಕ್ಷೆಗಳು ಇವೆಯೆಂಬ ಪರಿಗ್ರಹಿಕೆ ಇದ್ದಾಗ ಸ್ತ್ರೀಯ ಬಾಳಿನಲ್ಲಿ ಹೊಸತನ ಮೂಡೀತು. ಅಂಥ ಯಾವ ಆಸೆ ಅಕಾಂಕ್ಷೆಗಳ ಪೂರೈಸದ ಸಂಕಪ್ಪ ಅಕ್ಕುವಿನ ಪಾಲಿಗೆ ಕೊರಡು. ಹೀಗಾಗಿ ಅಕ್ಕು ತಾಯ್ತನದಿಂದ ವಂಚಿತಳಾದವಳು. ಇದನ್ನೇ ಸಿಗ್ಮಂಡ್ ಫ್ರಾಯ್ಡ್ 'ಲಿಬಿಡೋ' ಎಂಬ ಪರಿಕಲ್ಪನೆಯಲ್ಲಿ ವಿವರಿಸುತ್ತಾನೆ. ಸುಪ್ತಮನಸ್ಸಿನೊಳಗೆ ಹುದುಗಿಸಲ್ಪಟ್ಟ ಲೈಂಗಿಕ ಬಯಕೆ ಮತ್ತು ತಾಯ್ತನದ ಬಯಕೆಯನ್ನು ಹುಚ್ಚಿಯೆಂದು ಕರೆಯಲ್ಪಡುವ ಅಕ್ಕು ಅದನ್ನು ಆಗಾಗ್ಗೆ ಬಹಿರಂಗವಾಗಿ ತನ್ನದೇ ಆದ ರೀತಿಯಲ್ಲಿ ಅಭಿವ್ಯಕ್ತಿಸುತ್ತಾ ಹೋಗುತ್ತಾಳೆ. ಅಜ್ಜಯ್ಯ ಮತ್ತು ವಾಸು ಚಿಕ್ಕಪ್ಪಯ್ಯ ಮನೆಯಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದರೂ ನಿರ್ಭಯದ ಅಕ್ಕು ಮೌನವಾಗಿರದೇ ಪಟಪಟನೋ ಮಾತಾಡುವ ಎಲ್ಲರ ಹೂರಣ

ಬಯಲು ಮಾಡುವ ವಾಚಾಳಿಯಾಗಿ ಕಾಣಿಸಿಕೊಳ್ಳುತ್ತಾಳೆ. ಪುರುಷರ ಲೈಂಗಿಕ ಸ್ವೇಚ್ಛಾಚಾರ ವಿಷಯ ಲಂಪಟತನ ಕ್ಷುದ್ರತೆಯನ್ನು ವಾಚಾಮಘೋಚರವಾಗಿಯೇ ಬಯಲು ಮಾಡುತ್ತಾಳೆ. ಸಂಪ್ರದಾಯ ಸಾಮಾಜಿಕ ವ್ಯವಸ್ಥೆಯಲ್ಲಿ ಹುಸಿ ಮಡಿವಂತಿಕೆಯ ಕ್ಷುಲ್ಲಕ ಪುರುಷರ ಅನೈತಿಕ ಸಂಬಂಧಗಳನ್ನು ಅಕ್ಕು ತನ್ನ ವಾಕ್‌ಸ್ವಾತಂತ್ರ್ಯದ ಮುಖೇನ ಬಯಲು ಮಾಡುವ ಪರಿ ಪುರುಷ ಸ್ಥಾಪಿತ ಮೌಲ್ಯಗಳನ್ನು ಬುಡಮೇಲು ಮಾಡುವ ಒಂದು ಸಮರ್ಥ ಅಸ್ತ್ರವೇ ಆಗುತ್ತದೆ. ಆ ಮುಖೇನ ಅಕ್ಕು ಪಿತೃಪ್ರಧಾನ ಸಂಸ್ಕೃತಿಯು ಎಲ್ಲಾ ಲೋಪದೋಷಗಳ ಕುರಿತು ಪ್ರತಿಭಟನೆ ಮಾಡುವ ಪ್ರವೃತ್ತಿಯವಳಾಗಿ ಕಾಣಿಸುವುದು ಕಥೆಯೊಳಗಿನ ಆಶಯವಾಗಿಯೂ ಕಾಣಿಸುತ್ತದೆ.

ಗಂಡನಿದ್ದು ಗಂಡನಿಲ್ಲದಂತಾದ ಅಕ್ಕುವಿನ ಭಾವೋಸ್ಥಿತಿಯಲ್ಲಿ ಗಂಡನ ಬಗ್ಗೆ ಅನಾಧರ ಮತ್ತು ತಿರಸ್ಕಾರಯುತ ಮಾತು ಸಹಜವೇ. ಅಂತಣ್ಣ ಎಂಬುವವನು 'ಕಡೆಗೆ ಎಂತದ ಅಕ್ಕು? ನಿನ್ ಗಂಡ ಸಿಕ್ಕಿದ್ನ ಎಂತ ಕತೆ?' ಎನ್ನಲು 'ಅವನ್ನ ಹೂಳಿ ಬಂದೆ' ಎಂದಳು ಅಕ್ಕು. ಮುಖದಲ್ಲಿ ನಿದ್ದೆಗೇಡಿತನದ ವಿಕಾರವಿತ್ತು. ದೊಡ್ಡಜ್ಜಯ್ಯ ಕಾದು 'ನಡಿ ನೀನೇ' ಎಂದು ಸಂಕಪ್ಪನ್ನ ಅಕ್ಕುವಿನ ಗಂಡನ್ನ ಕರೆದುಕೊಂಡು ಒಳಗೆ ಬಂದರು, 'ಅಕ್ಕು.....' ಎಂದರು ಅಜ್ಜಯ್ಯ.

'ಅಕ್ಕು ಸತ್ ಮೂರ್ ಹಗಲು ಮೂರ್ ರಾತ್ರಿ ಆಯಾಯ್ತ್. ಈ ನಾರಟೆ ಕ್ರಿಯೆ ಹಿಡಿಯಕೆ ಬಂದದ್ದಾ ಕೇಣಿ!' ಭಗ ಭಗ ಬೆಂಕಿ ಉರಿಯುವಂತಹ ಸ್ವರದಲ್ಲಿ ನುಡಿದಳು ಅಕ್ಕು, 'ಕೇಂಡ್ಯಲೆ! ನಿನ್ನಂಥ ಘಟಿಂಗ್ನಿಗೆ ಮಾಣಿಕ್ಯ ಕೊಟ್ಟದ್ದಕ್ಕೆ' ಲೈಂಗಿಕ ಶೀಲವನ್ನುಳಿಸಿಕೊಳ್ಳದ ಸಂಕಪ್ಪನ ಕುರಿತು ದೊಡ್ಡತ್ತೆ ಆಡುವ ಮಾತು ಸಂಕಪ್ಪನ ಅನೈತಿಕ ವ್ಯವಹಾರದ ಮೇಲೆ ಬೆಳಕು ಚೆಲ್ಲಬಲ್ಲ ಬಿಸಿ ಮಾತಾಗುತ್ತದೆ. "ದೊಡ್ಡತ್ತೆ ಹೇಳಿದರು...... ಹೆಣ್ಣಕ್ಕೆಲ್ಲ ಖರ್ಚಾದ್ವ? ದೊಡ್ಡತ್ತೆ ಹೇಳಿದ್ದು ಸಮನೆಂಬಂತೆ ಅಜ್ಜಯ್ಯ ಅವನನ್ನೊಮ್ಮೆ ಸದರದಿಂದ ನೋಡಿದರು."[೧೮] ಜಗತ್ತು ತನ್ನ ನಿಯಂತ್ರಣದಲ್ಲಿರಬೇಕೆಂದು ಬಯಸುವ ಪಿತೃಪ್ರಧಾನ ಸಮಾಜ ಸೃಷ್ಟಿಸಿದ ಶೀಲವೆಂಬ ಪರಿಕಲ್ಪನೆಯಲ್ಲಿ ಪುರುಷನಿಗೊಂದು ನೀತಿ, ಸ್ತ್ರೀಗೊಂದು ನೀತಿ ಎಂಬ ಅಸಮಾನತೆಯನ್ನು ಬಿತ್ತುವ ಸಮಾಜ ರಚನೆಯಿದೆ. ನೈತಿಕಶೀಲ ಮತ್ತು ಲೈಂಗಿಕಶೀಲ ಸ್ತ್ರೀಯರಿಗಿರುವಷ್ಟೇ ಪುರುಷರಿಗೂ ಇರಬೇಕು. ಶೋಷಕಪ್ರವೃತ್ತಿಯ ವಿಷಯ ಲಂಪಟ ಪುರುಷ ತನ್ನ ಹಾದರದ ಅನೈತಿಕ ಲೈಂಗಿಕ ಕಾರ್ಯವನ್ನು ಮುಚ್ಚಿಟ್ಟುಕೊಂಡು ಸ್ತ್ರೀಮಾತ್ರ ಪರಿಶುದ್ಧಳಾಗಿ, ಸಂಪ್ರದಾಯಶೀಲಳಾಗಿ, ಸುಶೀಲೆಯಾಗಿಯೂ ಇರಬೇಕೆಂದು ಬಯಸುತ್ತಾನೆ.

ಇಂತಹ ದ್ವಂದ್ವದ ಇಬ್ಬಂಧಿ ನೀತಿಯ ಪುರುಷನಿಗೆ ಸವಾಲೊಡ್ಡುವಂತೆ ಅಕ್ಕು ನುಡಿಯುವ ಬಿರುನುಡಿ ಪಿತೃಪ್ರಧಾನ ಸಮಾಜದ ಅರಗಿಸಿಕೊಳ್ಳಲಾಗದಂತದ್ದು. "ಅಕ್ಕುವಿನ

ಮಾತು ನಾನೇನ್ ಬಿಟ್ಟಿದ್ನ? ಈ ಊರೊಳ್ಗೆ ಯಾವ ಗಂಡ್ಸನ್ನ ನಾನ್ ಬಿಟ್ಟಿದ್ದೆ ಅಂಬ್ರ! ಹೇಳೂ ಗಂಡ್ಸ್ ಯೆದ್ರ್ ಬರ್‍ಲಿ ಕಾಂಬ! ಇಂಥಾ ಕಳ್ಳನ್ನ ಕಟ್ಕಂಡ್ರೆ ಹೌದ ಮತ್ತೆ?. ಥೂ ನಾಯಿ ಜಾತಿಯವ್ನೆ, ತೆವ್‌ಡ್ಕೋ ಆಚೆ. ಮುಟ್ಬೇಡ. ನಾ ಬಸ್ರಿ ಎಂದೆ. ಯಾರ್ ಮಾಡಿದ್ದ್? ಎಂದ. ಅಡ್ಡದ್ ಮನೆ ತಿಮ್ಮಪ್ಪಯ್ಯ ಎಂದೆ. ನೀವೆಂತದೇ ಹೇಳಿ ದೊಡ್ಡತ್ತೆ. ಇದ್ರ್‌ಕಿಂತ ಆ ಅಡ್ಡದ್ಮನೆ ತಿಮ್ಮಪ್ಪಯ್ಯ ಅಡ್ಡಿಲ್ಲೆ. ಅವ್ನ್ ಯೆದಿಯೇನ್ ತುಟಿಯೇನ್!...."[೧೯] ಅಕ್ಕುವಿನ ಈ ಮಾತುಗಳು ಪುರುಷ ಪ್ರತಿನಿಧಿಗಳಾದ ಅಜ್ಜಯ್ಯ ಮತ್ತು ವಾಸು ಚಿಕ್ಕಪ್ಪಯ್ಯ ಸಹಿಸಿಕೊಳ್ಳಲಾಗದ ಮಾತುಗಳಾಗಿ ಅವರದೆಗೆ ಅಪ್ಪಳಿ ಬಿಡುತ್ತವೆ. ಅವಳ ಮಾತುಗಳನ್ನು ಮೌನವಾಗಿಸಲೆಂಬಂತೆ ವಾಸು ಚಿಕ್ಕಪ್ಪಯ್ಯ ಅವಳ ಬಾಯಿ ಒತ್ತಿಹಿಡಿದು ವಿಶೇಷದಡಿಗೆ ಕೋಣೆಗೆ ದರದರ ಎಳೆದುಕೊಂಡು ಹೋಗುತ್ತಾನೆ. ಅಲ್ಲಿದ್ದ ಕೋಲು ಎಳೆದು ಒಗೆಯುವ ಕಲ್ಲಿಗೆ ವಸ್ತ್ರ ಜಪ್ಪಿದಂತೆ ಜಪ್ಪುವ ಕ್ರಿಯೆಗಳೆಲ್ಲವೂ ಪುರುಷ ಕ್ರೌರ್ಯ ಅಮಾನವೀಯತೆಯ ದರ್ಶನ ಮಾಡಿಸುವ ಸಾಂಕೇತಿಕ ಕ್ರಿಯೆಗಳಾಗುತ್ತವೆ. ಪುರುಷ ಪ್ರತಿನಿಧಿಗಳ ಇಂಥ ಕ್ರೌರ್ಯಗಳಿಗೆ ಪ್ರತಿಭಟನೆ ಒಡ್ಡದೇ ಮೌನ ಸಮ್ಮತಿಯನಿತ್ತದ್ದು ಸಾಮಾಜಿಕ ದುರಂತವಾಗುತ್ತದೆ. 'ಯಾರು ತಡೆಯಲಿಲ್ಲ. ಬಿಡು ಎನ್ನಲಿಲ್ಲ. ಅಕ್ಕುವನ್ನು ಈಚೆಗೆಳೆದುಕೊಳ್ಳಲಿಲ್ಲ. ಕ್ಷಣಕ್ಷಣಕ್ಕೂ ನೋಡುವ ಜನಸಂಖ್ಯೆ ಬೆಳೆಯುತ್ತಾ ಇತ್ತು. ಈ ದೃಶ್ಯ ನಿರಂತರವಾಗಿರಬೇಕು ಎಂಬ ಬಯಕೆಯಿಂದ ನಿಂತಂತಿತ್ತು' ಎನ್ನುವ ಲೇಖಕಿಯ ಮಾತಿನಲ್ಲಿ ಸಮಾಜದ ಒಪ್ಪಿತ ಸಂಪ್ರದಾಯಿಕ ಕಾನೂನನ್ನು ತಿರಸ್ಕರಿಸಬೇಕೆಂಬ ಬಯಕೆಯಿದೆ. ಪುರುಷನೇ ನಿರ್ಮಿಸಿಕೊಂಡಿರುವ ಕಾನೂನು ಸೌಧವನ್ನು ಮಹಿಳಾ ಸಾಮಾಜಿಕ ಚಳವಳಿಯ ಮೂಲಕವಲ್ಲದೆ ಪುರುಷ ಸಮ್ಮತದಿಂದಲೂ ಸಾಧ್ಯವಾಗಿಸುವ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯ ಸಾಮಾಜಿಕ ಲೋಪದೋಷಗಳನ್ನು ಕಾಣಿಸುವಲ್ಲಿ ಮಾತಿನ ಕ್ರಿಯೆಯನ್ನು ಹುಚ್ಚಿ ಹಕ್ಕು ಬಿಡಲಾರಳು. ದನಿಯಡಗಿದ ಯಾವುದೇ ಶೋಷಿತನಿಗೆ ಕೆಲವೊಮ್ಮೆ ಮಾತು ಆಯುಧವಾಗುತ್ತದೆ. ಅಕ್ಕುವಿನ ಬದುಕಿನಲ್ಲಿ ಎಲ್ಲದರಿಂದಲೂ ಪರಿತ್ಯಕಳಾದಾಗ ಪುರುಷದ್ವೇಷಕ್ಕೆ ಆಕೆಗೆ ಮಾತು ಆಯುಧವಾಗುತ್ತದೆ. ಕಥೆಯ ಅಂತ್ಯದಲ್ಲೂ ಅದನ್ನು ಕಾಣಬಹುದು ಅಕ್ಕುವಿಗೆ ಸಾಮಾಜಿಕ ಸಾಂಪ್ರದಾಯ ಅಥವಾ ಕಟ್ಟಳೆಗಳಾಗಲಿ ಸಾಮಾಜಿಕ ಸತ್ಯಗಳೆಲ್ಲವನ್ನು ಅನಾವರಣ ಮಾಡಿಸುವ ಅವಳ ಸತ್ಯದ ಮಾತುಗಳಿಗೆ ತಡೆಯೊಡ್ಡಲಾರವು. ಪುರುಷಪ್ರಧಾನ ಸಮಾಜದ ಬಲಿಪೀಠಕ್ಕೆ ಬಲಿಪಶುವಾಗಲು ಇಚ್ಛಿಸದೆ ಆತ್ಮವಿಶ್ವಾಸ ಕಳೆದುಕೊಳ್ಳದೆ ಅನಿಸಿದ್ದನ್ನು ಆಡಿಬಿಡುವ ಬಂಡಾಯಿಗಾರ್ತಿಯಾಗಿ ಹೊರಹೊಮ್ಮುವುದು ಅಕ್ಕುವಿನ ಮತ್ತು ಅಕ್ಕು ಕಥೆಯ ಗಟ್ಟಿತನ.

ಮಹಿಳಾ ಸಾಮಾಜಿಕ ಅಭಿವ್ಯಕ್ತಿ

'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆಯಲ್ಲಿ ಸ್ತ್ರೀಜಗತ್ತನ್ನು ಮತ್ತು ಆ ಸ್ತ್ರೀಜಗತ್ತಿನ ಸ್ಥರ ವಿನ್ಯಾಸದಲ್ಲಿರುವ ಹೆಂಗಳೆಯರ ಸ್ಥಿತಿಗತಿಗಳನ್ನು ಅವರ ಸ್ವಭಾವ ವರ್ತನೆಗಳನ್ನು ಪರಿಚಯಿಸುತ್ತ ವೈದೇಹಿಯವರು ಕುಶಲತೆಯಿಂದ ಹಲವು ಸ್ತ್ರೀಯರ ಹಲವು ಮುಖಗಳನ್ನು ಅನಾವರಣ ಮಾಡುತ್ತಾರೆ. ಅವರ ವಾದ ಸಂವಾದಗಳಲ್ಲಿ ಪುರುಷ ಜಗತ್ತಿನ ಶೋಷಕ ಪ್ರವೃತ್ತಿ ಅಸಹಾಯಕ ಸ್ಥಿತಿಯ ಬಡಕುಟುಂಬದ ಹೆಣ್ಣುಗಳ ಅತಂತ್ರ ಸ್ಥಿತಿ, ಸಂಪ್ರದಾಯಶೀಲತೆ, ಮಡಿವಂತಿಕೆ ಸಮಾಜದ ಬ್ರಾಹ್ಮಣ ಸಮುದಾಯದಲ್ಲಿ ಸ್ತ್ರೀ–ಪುರುಷ ಜಾತಕ ಪರಿಶೀಲನೆ ಇತ್ಯಾದಿಗಳನ್ನು ನಿರೂಪಿಸುವ ಕಥೆಗಾರ್ತಿ ತಮ್ಮ ಕಥನಕ್ರಮದಿಂದ ಕಥೆಯನ್ನು ಬೆಳೆಸುತ್ತಾರೆ.

ಕಥೆಯಲ್ಲಿ ಬರುವ ಬಹುಪಾಲು ಪಾತ್ರಗಳ ಸಂವಾದ ಕ್ರಿಯೆ ನಡೆಯುವುದು ಮದುವೆ ಮನೆಯಲ್ಲಿ. ಸಾಂಪ್ರದಾಯಿಕ ಮದುವೆ ಮನೆಯ ಎಲ್ಲಾ ಅಬ್ಬರ, ಸಂಭ್ರಮ ಮತ್ತು ಕೋಲಾಹಲಗಳೊಂದಿಗೆ ಕಥಾನಿರೂಪಣೆ ಸಾಗುತ್ತದೆ. 'ವಾಗತ್ತೆ'ಯೆಂಬ ಹಿರಿಯ ಹೆಂಗಸಿನ ಮಾತಿನೊಂದಿಗೆ ಆರಂಭಗೊಳ್ಳುವ ಕಥೆಯಲ್ಲಿ ವಾಗತ್ತೆಯ ಭೂತ–ವರ್ತಮಾನದ ವಿಶ್ಲೇಷಣೆ ಸಂಪ್ರದಾಯ ಆಧುನಿಕತೆಯ ಬಗ್ಗೆ ಮಾತು ಮುಂತಾದವು ಒಡಗೂಡಿ ಕಥೆ ಮುಂದುವರೆಯುತ್ತದೆ. ವಾಗತ್ತೆಯ ಮೊಮ್ಮಗಳ ಮದುವೆಯಾದ ಕಾರಣ ವಾಗತ್ತೆಗೆ ಮದುವೆಮನೆಯಲ್ಲಿ ವಿಶೇಷ ಸ್ಥಾನ. ಸಂಭ್ರಮದ ವಿವಾಹಮಹೋತ್ಸವದ ವಿವರಣೆಯಲ್ಲೆ ಅಲ್ಲಿಗೆ ಆಗಮಿಸಿದ ವೈಧವ್ಯದ ಉರುಳಿನಲ್ಲಿ ಸಿಲುಕಿಕೊಂಡ ಹಲವಾರು ಬ್ರಾಹ್ಮಣ ವಿಧವೆಯರ ಬಣ್ಣನೆಯೂ ಇದೆ. ಮದುವೆಗೆ ಆಗಮಿಸಿದ ಮುತ್ತತ್ತೆ, ಕಾಟಜ್ಜಿ, ಹೆಬ್ಬಾಗಿಲಜ್ಜಿ, ಸರಸಜ್ಜಿ ಮುಂತಾದವರು. ಮಡಿವಂತಿಕೆ ಸಮಾಜದ ಭಾಗವಾದ ಬ್ರಾಹ್ಮಣ ಕುಟುಂಬಗಳಲ್ಲಿ ತೆರೆಮರೆಗೆ ಸರಿದವರು.

ಮಂಗಳಕಾರ್ಯಕ್ಕೆ ಬಂದರೂ ಮಂಗಳಕಾರ್ಯದಲ್ಲಿ ಕೈಗೂಡಿಸುವಂತಿಲ್ಲ. ವಿಧವಾ ಮಹಿಳೆಯರು ಇಂಥ ವಿರೋದಾಭಾಸವನ್ನು ಕಥೆಗಾರ್ತಿ ಕಟ್ಟಿಕೊಡುವುದು ಹೀಗೆ; "ಅವಳ ಆಚೆ ಈಚೆ ಹಿಂದೆ ಅವಳಂತೆಯೇ ಹಣೆಗೆ ಬೊಟ್ಟಿಲ್ಲದ, ಕರಿಮಣಿಯಿಲ್ಲದ, ಬೋಳುತಲೆಯ ಮೇಲೆ ಹಾಸಿದ ಕೆಂಪುಸೆರಗಿನ, ಯಾವ ಉಪಚಾರವಿಲ್ಲದೆ ಸುಕ್ಕುಗಟ್ಟಿ ನಿವೃತ್ತರಾದ, ಮಂಟಪಕ್ಕೆ ಇನ್ನು ಅಜೀವಪರ್ಯಂತ ರಂಗೋಲಿ ಬರೆಯಬಾರದ, ಮಂಟಪದ ಬಳಿ ಸುಳಿಯಲೂ ಕೂಡದ, ಗಂಡಸರ ಕಣ್ಣಿಗೆ ಬೀಳದ ಜಾಗದಲ್ಲಿ ಕುಳಿತು ಮದುವೆ ಕಾಣಬೇಕಾದ ಮುತ್ತತ್ತೆ, ಕಾಟಜ್ಜಿ, ಹೆಬ್ಬಾಗಿಲಜ್ಜಿ, ಸರಸಜ್ಜಿ ಮುಂತಾದವರು

ಕುಳಿತಿದ್ದಾರೆ."[೨೦] ಆ ವಿಧವೆಯರು ಉಟ್ಟಿರುವ ಸೀರೆಗಳಲ್ಲಿ ವ್ಯತ್ಯಾಸ ಕಾಣಬಹುದಾದಲ್ಲಿ ಅದಕ್ಕೆ ಅವರ ಕುಟುಂಬಗಳ ಆರ್ಥಿಕ ಸ್ಥಿತಿಗತಿಯೇ ಕಾರಣ. ಈ ಮುಖೇನ ವೈದೇಹಿ ಬ್ರಾಹ್ಮಣ ಕುಟುಂಬಗಳಲ್ಲಿನ ಉಳಿದವರು ಮತ್ತು ಇಲ್ಲದವರ ಮಧ್ಯದ ಅಂತರವನ್ನು ಕಾಣಿಸುತ್ತಲೇ ಆರ್ಥಿಕ ದುಃಸ್ಥಿತಿಯಲ್ಲಿರುವ ಅಸಹಾಯಕ ವಿಧವೆ ಕಾಟಜ್ಜಿಯ ಅಂತರಾಳದ ನೋವನ್ನು ಬಯಲಿಗಳೆಯುತ್ತಾರೆ. ಹೆಣ್ಣು ಎಂದರೆ ಮನೆಗೆ ಬಾರ ಆ ಬಾರ ಕಳಚಿಕೊಳ್ಳಬೇಕೆಂದರೆ ಹೆಣ್ಣಿಗೆ ಬೇಗ ಮದುವೆ ಮಾಡಬಿಡಬೇಕೆಂಬ ಭಾವನೆಯ ಹಿರಿಯ ತಲೆಮಾರಿನ ಸಂಪ್ರದಾಯ ದಿಕ್ಕರಿಸಿದ ಪರೋಕ್ಷವಾಗಿ ಪಿತೃಪ್ರಾಧಾನ್ಯತೆಯನ್ನು ಒಪ್ಪಿಕೊಳ್ಳುವ 'ವಾಗತ್ತೆ' ಸಂಬಂಧಿ ವಾಸುದೇವನ ಮಗನಿಗೆ ಸಲಹೆ ಕೊಡುವುದು 'ಸೈಯಲೇ, ಹೆಣ್ಣು ಮದುವೆಗೆ ಬಂದಾಯಿತು. ಆಗಲಿ. ನನ್ನ ಮಾತು ತಕೋ. ನೀನೂ ಈಗಿನವರ ಹಾಗೆ ಇಪ್ಪತ್ತೈದು ಮೂವತ್ತು ವರ್ಷ ಮದುವೆ ಮಾಡದೆ ಮನೆಯಲ್ಲಿ ಕೂಡಿಸಬೇಡ. ಎಷ್ಟು ಬೇಗ ಮದುವೆ ಮಾಡಿದೇ ಅಷ್ಟು ಬೇಗ ಗೆದ್ದೆ ಅಂತಿಟ್ಟುಕೋ' ಎಂದು ಹೇಳುವಲ್ಲಿನ ಸಾಮಾಜಿಕ ಹೊಣೆಗಾರಿಕೆಯಲ್ಲಿ ಸ್ತ್ರೀಸ್ವತಂತ್ರ ಹರಣ ನಡೆಯುವುದರ ಕಡೆಗೂ ಗಮನ ಹರಿಸಲು ಯತ್ನಿಸಬಹುದು.

ತಮ್ಮ ಒಪ್ಪಿಗೆ ಕೇಳದೆಯೇ ಜಾತಕ ಕೂಡಿಬಂದರಾಯಿತು ಎಂಬ ಹಿರಿಯರ ಮಾತಿಗೆ ಕಟ್ಟು ಬಿದ್ದು ವಿವಾಹವಾದ ಹೆಬ್ಬಾಗಿಲಜ್ಜಿ ವಿವಾಹಿತ ಜೀವನದಲ್ಲಿ ಸುಖವನ್ನು ಅನುಭವಿಸದೆ ತನ್ನ ಹದಿನಾಲ್ಕು ವರ್ಷದಿಂದಲೇ ವೈಧವ್ಯವನ್ನು ಅನುಭವಿಸುತ್ತಿರುವುದು ದುರಂತ. ಆದರೂ ಅವಳು ನುಡಿಯುವುದು ಹೀಗೆ 'ಅದು ಬಿಡು ಈಗೆಲ್ಲ ಮದುವೆಯಾಗಲು ಜಾತಕ ಸಹ ಬೇಡವಂತಪ್ಪ. ನನಗೆ ಮದುವೆ ಮಾಡಬೇಕಾದರೆ ಅಪ್ಪಯ್ಯ ಒಳ್ಳೆಯ ಜಾತಕಕ್ಕೇ ಸೈ ಕೊಡುವುದು ಎಂದು ತಿರುಗಿದ್ದು ಸ್ವಲ್ಪವೇನಲ್ಲವಂತೆ, ಎಂದಳು. ಹೆಬ್ಬಾಗಿಲಜ್ಜಿ ತಲೆಯ ಸೆರಗನ್ನು ಬಿಗಿಯಾಗಿ ಎಳೆದು ಕಿವಿಯ ಹಿಂಗಡೆ ಸಿಗಿಸಿಕೊಳ್ಳುತ್ತ "ಹದಿನಾಲ್ಕೇ ವರ್ಷಕ್ಕೆ ನನಗೆ ಹೀಗಾಯಿತು ಹೌದು. ಆದರೆ ಅದು ನಾವು ನಾವು ಪಡೆದುಕೊಂಡು ಬಂದದ್ದಲ್ಲವೆ? ಅನುಭವಿಸಬೇಕು"[೨೧] ಎಂದಳು. ಮೇಲುಸ್ತರದ ಬ್ರಾಹ್ಮಣ ಸಮಾಜದ ಹೆಣ್ಣುಮಕ್ಕಳಿಗೆ ತಮ್ಮ ವಿವಾಹದ ವಿಷಯದಲ್ಲಿ ಸ್ವಾತಂತ್ರ್ಯವಿಲ್ಲ ಅಥವಾ ಅಂತಹ ವಿಷಯಗಳಲ್ಲಿ ತಮ್ಮದೇ ಆದ ದಿಟ್ಟ ನಿಲುವುಗಳನ್ನು ತಿಳಿಸುವಂತಿರಲಿಲ್ಲ.

ವಾಗತ್ತೆಯ ದೂರದ ಸಂಬಂಧಿ ಸುಬ್ಬಕ್ಕ ಮದುವೆಮನೆಯಲ್ಲಿ ಸಿಂಗಾರ ಮಾಡಿಕೊಳ್ಳುವುದು, ತಾನು ತಂದ ವಿಧವಿಧದ ಒಡವೆಗಳನ್ನು ಹಾಕಿಕೊಳ್ಳುವುದು ಮುಂತಾದ ವಿವರಣೆಯಿದೆ. ತನ್ನ ಶ್ರೀಮಂತಿಕೆಯನ್ನು ಇತರರ ಮುಂದೆ ಪ್ರದರ್ಶನಕ್ಕೊಡ್ಡುವ ಸುಬ್ಬಕ್ಕನ

ದಾಂಪತ್ಯದ ಬದುಕು ಹಸನಾಗಿಲ್ಲ. ಮಾಡಿಕೊಂಡ ಗಂಡ ತಮ್ಮಣ್ಣಯ್ಯನ ಚಾರಿತ್ರ್ಯ ಸರಿಯಿಲ್ಲದೆ ಹೋದರೂ ಶ್ರೀಮಂತಿಕೆಯ ಒಂದೇ ಒಂದು ಕಾರಣಕ್ಕೆ ಸುಬ್ಬಕ್ಕನ ತಂದೆ ಮಗಳನ್ನು ತಮ್ಮಣ್ಣಯ್ಯನಿಗೆ ಕೊಟ್ಟದ್ದು. 'ತಮ್ಮಣ್ಣಯ್ಯನ ಪ್ರಾಯದ ಕಾಲದಲ್ಲಿ ಬೇವರ್ಸಿಗಳ ಸಹವಾಸ ಮಾಡಿ ಕಾಯಿಲೆ ಹತ್ತಿಸಿಕೊಂಡದ್ದು, ಮಂತ್ರಬಳ್ಳಿ ಕಟ್ಟಿ, ಮದುವೆ ಮಾಡಿದರೆ ಸರಿ ಹೋಗಬಲ್ಲ ಎಂಬ ಜ್ಯೋತಿಷ್ಯ ನುಡಿದದ್ದು, ಮದುವೆಗಾಗಿ ಅಲೆದಾಟ, ಊರಲ್ಲಿಲ್ಲದ ಕಾಯಿಲೆಗಳೆಲ್ಲ ಇರುವ ಅವನಿಗೆ ಹೆಣ್ಣು ಕೊಡುವ ಬದಲು ಅವಳನ್ನು ಕೆರೆ, ಬಾವಿ, ಗಂಗೊಳ್ಳಿ ಹೊಳೆಗೆ ದೂಡಿ ಹಾಕಿಯೇವು ಎಂಬ ಉತ್ತರವೇ ಸಿಕ್ಕಿದ್ದು. ಸುಬ್ಬಕ್ಕನ ಅಜ್ಜಿ ಸಾಯುತ್ತಿದ್ದವಳು ಸಾಯುವ ಮುಂಚೆ ಅವಳ ಮದುವೆ ನೋಡಬೇಕಂತ ಆಸೆ ಪಟ್ಟದ್ದರಿಂದಲೂ, ಶ್ರೀಮಂತರ ಮನೆಗೆ ಕೊಡುವ ಹಂಬಲವಿದ್ದದ್ದರಿಂದಲೂ ಸುಬ್ಬಕ್ಕನ ತಂದೆ ಮಗಳನ್ನು ತಮ್ಮಣ್ಣಯ್ಯನಿಗೆ ಕೊಟ್ಟದ್ದು'. ಈ ಮಾತುಗಳಲ್ಲಿ ಪುರುಷಪ್ರಧಾನ ಸಮಾಜ ಶೋಷಕ ಪ್ರವೃತ್ತಿಯನ್ನು ಹೆಣ್ಣಿನ ಮನೆಯವರ ಅಸಹಾಯಕ ಸ್ಥಿತಿಯನ್ನು ತಮ್ಮ ಸ್ವಾರ್ಥ ಸಾಧನೆಗೆ ಅನುವಾಗುವ ಒಂದು ಸುವರ್ಣಾವಕಾಶವೆಂದು ಪರಿಭಾವಿಸುವ ಅದರ ಅಧಮ ಸ್ಥಿತಿಯನ್ನು ಕಥೆಯ ಎಳೆಯಲ್ಲಿಯೇ ಕಥೆಗಾರ್ತಿ ತರುತ್ತಾಳೆ.

'ಕ್ರೌಂಚಪಕ್ಷಿಗಳು' ಆಧುನಿಕತೆ ಮತ್ತು ಪುರಾಣ ಅಭಿವ್ಯಕ್ತಿ

ವೈದೇಹಿಯವರ ಸಣ್ಣಕಥೆಗಳಲ್ಲಿ ಅನನ್ಯ ಕಥನಕ್ರಮದಿಂದ ಗಮನಾರ್ಹವಾಗುವ ಕಥೆಯೆಂದರೆ ಕ್ರೌಂಚ ಪಕ್ಷಿಗಳು. ಈ ಕಥೆಯಲ್ಲಿ ಕಥೆಗಾರ್ತಿ ಆಯ್ದುಕೊಂಡ ಕಥನಕ್ರಮ ತುಂಬಾ ವಿಶಿಷ್ಟವಾದುದು. ಕಥಾನಿರೂಪಣೆಯಲ್ಲಿ ನಿರೂಪಕರಾಗಿ ಬರುವವರು ಹಲವಾರು ಮಂದಿ ಇದರಲ್ಲಿ ದೆಹಲಿಯಲ್ಲಿರುವ 'ಅರುಂಧತಿ' ಸಂಶೋಧನೆಯಲ್ಲಿ ತೊಡಗಿಸಿಕೊಂಡ ವಿದ್ಯಾರ್ಥಿನಿ. ಲಕ್ಷ್ಮೀನಾರಾಯಣಭಟ್ಟ ಮತ್ತು ಲಕ್ಷ್ಮಮ್ಮರ ವ್ಯಕ್ತಿಚಿತ್ರಣಗಳನ್ನು ಮಾಡುತ್ತಾ ಸಾಗುವ ನಿರೂಪಣೆ. ಸಾಂದರ್ಭಿಕವಾಗಿ ಅಲ್ಲಲ್ಲಿ ತಮ್ಮ ಆತ್ಮವೃತ್ತಾಂತವನ್ನು ನಿರೂಪಿಸುವಲ್ಲಿ ತಮ್ಮ ಮನೋಗತವನ್ನು ಮತ್ತು ಮನೋಸ್ಥಿತಿಯನ್ನು ಅನಾವರಣಗೊಳಿಸಿಕೊಳ್ಳುವ 'ಲಕ್ಷ್ಮೀನಾರಾಯಣಭಟ್ಟ' ಪಾತ್ರ ಮತ್ತು ಲಕ್ಷ್ಮಮ್ಮರ ಪಾತ್ರ ಪ್ರಮುಖವಾದುವುಗಳು. ಇದರೊಂದಿಗೆ 'ಅರುಂಧತಿ' ಭೇಟಿಯಾಗುವ ಗಾಂಧಿವಾದಿ ವಿಶಾಖಾಬೇನ್‌ರವರ ಪ್ರಸ್ತಾವನೆ ಮತ್ತು ಅವರ ವ್ಯಕ್ತಿಚಿತ್ರಣದ ನಿರೂಪಣೆಯು ಗಾಢವಾಗಿ ಮನದಲ್ಲಿ ಉಳಿಯುವಂತಾದ್ದು. ನಿರೂಪಕ ಅರುಂಧತಿಯೊಂದಿಗೆ ಅವಳ ಗೆಳತಿಯಾದ ಅನೀತ ಕೂಡ ವಿಶಾಖಾಬೇನ್ ಸಂದರ್ಶನಕ್ಕೆ ಹೋದವಳು. ಇವರಲ್ಲದೇ ಲಕ್ಷ್ಮೀನಾರಾಯಣಭಟ್ಟರ ಪರಿಚಿತರ ಮನೆಗಳವರ ಕಿರು ನಿರೂಪಣೆಯು ಸೇರಿಕೊಳ್ಳುತ್ತದೆ. ಕಥೆಯೊಳಗಿನ ಕಥೆಯಲ್ಲಿ ನಿರೂಪಕರು ಮತ್ತು ಕೇಳುಗರು ಓದುಗರ ಆಸಕ್ತಿಗೆ ಭಂಗ ತಾರದೇ ಲಕ್ಷ್ಮಮ್ಮ – ಲಕ್ಷ್ಮೀನಾರಾಯಣಭಟ್ಟರ

ಬದುಕಿನ ಬಗ್ಗೆ ಕುತೂಹಲ ತಳೆಯುವಂತಾಗುತ್ತದೆ. ಬಹು ನಿರೂಪಕರ ನಿರೂಪಣಾ ಮಾಧ್ಯಮವನ್ನು ಹೊಂದಿದ ಕಥಾಸಂವಿಧಾನ ತನ್ನ ಕಥನಕ್ರಮದಿಂದ ವೈದೇಹಿಯವರ ಇತರೆಲ್ಲಾ ಸಣ್ಣಕಥೆಗಳಿಗಿಂತ ಭಿನ್ನವಾಗುತ್ತದೆ! ಓದುಗರಿಗೆ ಆಪ್ತವಾಗುತ್ತದೆ ಮತ್ತು ಸಹೃದಯದ ಭಾವವಿಚಾರ ಸಂಕೀರ್ಣತೆಯನ್ನು ಉಂಟುಮಾಡುವ ನಿಟ್ಟಿನದಾಗುತ್ತದೆ.

ಪುರಾಣ ಪ್ರತಿಮೆಯಾದ 'ಕ್ರೌಂಚಪಕ್ಷಿಗಳು' ಉಲ್ಲೇಖನ ಶ್ರೀವಾಲ್ಮೀಕಿ ವಿರಚಿತ ರಾಮಾಯಣದಲ್ಲಿ ಬರುವಂತಾದ್ದು. ಪ್ರೇಮದಲ್ಲಿ ಒಂದಾಗಿ ಪ್ರೇಮವನ್ನೇ ಜೀವಾಳ ಮಾಡಿಕೊಂಡು ಎಂದೂ ಅಗಲದ ಪ್ರಣಯಪಕ್ಷಿಗಳೆಂದರೆ 'ಕ್ರೌಂಚಪಕ್ಷಿಗಳು'. ಒಂದರ ಅಗಲಿಕೆ ಸಹಿಸಲಾಗದೆ ಮತ್ತೊಂದು ಕ್ರೌಂಚಪಕ್ಷಿಯು ವಿರಹವೇದನೆಯಲ್ಲಿ ನರಳಿ ತಾನು ಭೌತಿಕ ಜಗತ್ತಿನಿಂದ ಅಗಲುವ ಪಕ್ಷಿಯಾಗಿ ಬಿಡುತ್ತದೆ. ಈ ಮುಖೇನ ಕ್ರೌಂಚಪಕ್ಷಿಗಳ ಅನನ್ಯ ಪ್ರೇಮ ಮತ್ತು ವಿರಹವೇದನೆಯ ಸಂಕೇತವಾಗಿ ಬಿಡುತ್ತದೆ. ಕಥೆಯಲ್ಲಿ ವೈದೇಹಿಯವರು ಕ್ರೌಂಚಪಕ್ಷಿಗಳ ಪುರಾಣ ಪ್ರತಿಮೆ ಬಳಕೆ ಮಾಡಿಕೊಂಡಿರುವುದು ರೂಪಕವೂ ಆಗಿ ಬಿಡುತ್ತದೆ.

ಭಾರತೀಯ ಇತಿಹಾಸದಲ್ಲಿ ದಾಖಲಾದ ದುರುಂತ ಪ್ರಸಂಗವನ್ನಿಟ್ಟುಕೊಂಡು ಅದಕ್ಕೆ ವರ್ತಮಾನದ ವ್ಯಕ್ತಿಗತ ಸ್ಥಿತಿಗತಿಗಳನ್ನು ತಳುಕು ಹಾಕುತ್ತಾ ಇತಿಹಾಸ ಮತ್ತು ವರ್ತಮಾನದ ಪ್ರಸಂಗಗಳಲ್ಲಿ ಪ್ರಧಾನಪಾತ್ರಗಳಾದ ಭಟ್ಟರು ಮತ್ತು ಅವರ ಪತ್ನಿ ಲಕ್ಷ್ಮಮ್ಮರ ಜೀವನದ ಏಳು ಬೀಳುಗಳ ಜೋಕಾಲಿಯೋಪಾದಿ ಕಥೆ ನಿರೂಪಣೆ ಮಾಡುತ್ತದೆ. ರಾಷ್ಟ್ರದ ಸ್ವಾತಂತ್ರ್ಯೋತ್ಸವದ ಸಂಭ್ರಮದೊಂದಿಗೆ ದೇಶ ವಿಭಜನೆಯ ದುರಂತದ ಕಹಿ ಪ್ರಸಂಗವೂ ಸೇರಿಕೊಳ್ಳುತ್ತದೆ. ಸ್ವಾತಂತ್ರ್ಯ ಸಿಕ್ಕ ಕೆಲವೇ ದಿನಗಳ ನಂತರ ನಡೆದ ದೇಶ ವಿಭಜನೆಯ ದುರಂತದ ದಳ್ಳುರಿ ಸಮಾಜವನ್ನು ಸಮುದಾಯವನ್ನು, ಕುಟುಂಬಗಳನ್ನು ಆಹುತಿ ತೆಗೆದುಕೊಂಡದ್ದನ್ನು ಹಿನ್ನಲೆಯಾಗಿಟ್ಟುಕೊಂಡು ಸಮುದಾಯದ ಭಾಗವಾದ ಲಕ್ಷ್ಮೀನಾರಾಯಣಭಟ್ಟ ಮತ್ತು ಲಕ್ಷ್ಮಮ್ಮರ ದುರಂತದ ಕಥನವನ್ನು ಹೆಣೆಯುತ್ತ ವರ್ತಮಾನದ ಸ್ಥಿತಿಗಳಲ್ಲಾದ ಮಾರ್ಪಾಡುಗಳು ಮನೋಸ್ತರದಲ್ಲಾದ ಕಹಿಭಾವಗಳು ಮತ್ತು ಅವರ ಮನೋಧರ್ಮದ ಆಯಾಮಗಳನ್ನು ಕಥಾನಕ ಮೂರ್ತ ಸ್ವರೂಪದಲ್ಲಿ ಚಿತ್ರಿಸುತ್ತದೆ. ನಿರೂಪಿಸಲ್ಪಟ್ಟ ವ್ಯಕ್ತಿಚಿತ್ರಣಗಳು ಮತ್ತು ಪ್ರಧಾನಪಾತ್ರಗಳ ಮಾತುಗಳು ಓದುಗರ ಪಾಲಿಗೆ ಸಂಕೀರ್ಣವಾಗಿ ಬಿಡುತ್ತವೆ. ಈ ಸಂಕೀರ್ಣತೆಯಲ್ಲೇ ಕಥೆಗಾರ್ತಿಯ ಕಥಾನಕದ ಉತ್ಕೃಷ್ಟತೆ ಅಡಗಿರುವುದು. ಯಾವುದರ ಪರವಹಿಸದೆ, ಯಾವುದೇ ಇಸಮ್ ಮುಂದಿಟ್ಟುಕೊಳ್ಳದೆ ಮಾನವೀಯತೆಯ ನೆಲೆಯಲ್ಲಿ ಕಥಾನಿರೂಪಣೆ ಮಾಡಲೆತ್ನಿಸಿರುವುದು ಮುಖ್ಯ ಲಕ್ಷಣವಾಗಿದೆ.

ಕರಾವಳಿಭಾಗದ ಲಕ್ಷ್ಮೀನಾರಾಯಣಭಟ್ಟರು ಪೌರೋಹಿತ್ಯ ಮತ್ತು ಅಡುಗೆ ಕಾರ್ಯಕ್ಕಾಗಿ ಉತ್ತರ ಭಾರತಕ್ಕೆ ಹೋದವರು. ದಿಲ್ಲಿಯಲ್ಲಿಯೇ ಉಳಿದುಬಿಟ್ಟರು. ತಮ್ಮೂರು ಮತ್ತು ದೆಹಲಿಗೆ ಓಡಾಡುತ್ತಲೇ ಇದ್ದವರು. ಕ್ರಮೇಣವಾಗಿ ದಿಲ್ಲಿಯಲ್ಲಿ ಹೋಟೆಲೊಂದನ್ನು ಮಾಡಿಕೊಂಡು ಊರ ಕಡೆಯ ಮಂಜಯ್ಯನವರ ಮಗಳು ಲಕ್ಷ್ಮಮ್ಮನ ಮದುವೆಯಾಗಿ ದಿಲ್ಲಿಯಲ್ಲಿ ಸೌಖ್ಯದ ನೆಲೆ ಕಂಡುಕೊಂಡವರು. ೧೯೪೭ರ ನಂತರದ ದಿನಗಳಲ್ಲಿ ನಡೆದ ಕೋಮುಗಲಭೆಗೆ ಬಲಿಯಾದ ಹಲವಾರು ಕುಟುಂಬಗಳಲ್ಲಿ ಲಕ್ಷ್ಮೀನಾರಾಯಣಭಟ್ಟ ಕುಟುಂಬವೂ ಒಂದು. ಕೋಮುದಳ್ಳುರಿಗೆ ಬಲಿಯಾದ ಲಕ್ಷ್ಮಮ್ಮ ಅಪಹರಣಕಾರರಿಂದ ಅತ್ಯಾಚಾರಕ್ಕಿಡಾಗುವುದು ಮತ್ತು ತನ್ನ ಪ್ರೀತಿಯ ಪತಿಯಿಂದ ದೂರವಾಗುವುದು ಕಥೆಯ ನಿರೂಪಣೆಯಲ್ಲಿಯೇ ಅಭಿವ್ಯಕ್ತವಾಗುತ್ತದೆ. ಸ್ತ್ರೀವಾದಿ ನೆಲೆಯಿಂದ ನೋಡುವುದಾದಲ್ಲಿ ದೇಶವಿಭಜನೆಯ ದುರಂತದಲ್ಲಿ ಹೆಚ್ಚು ನೋವು ಅನುಭವಿಸಿದವಳು ಸ್ತ್ರೀಯೇ ಆಗಿದ್ದಾಳೆ. ತನ್ನ ಮುದ್ದಿನ ಮಡದಿಯ ಅಪಹೃತ ಸುದ್ಧಿ ಮತ್ತು ಅವಳ ಅಗಲಿಕೆಯಿಂದ ಅಪಾರ ವೇದನೆಯನ್ನು ಅನುಭವಿಸುವ ಲಕ್ಷ್ಮೀನಾರಾಯಣಭಟ್ಟರು ಕ್ರೌಂಚಪಕ್ಷಿಯಂತೆ ವಿರಹ ವೇದನೆಯಲ್ಲಿ ಒದ್ದಾಡುತ್ತಾರೆ. ಊರಿಗೆ ಮರಳಿದ ಭಟ್ಟರು ಅನ್ನಪೂರ್ಣಮ್ಮನವರನ್ನು ವಿವಾಹವಾಗಿ ನಾಲ್ಕುಮಕ್ಕಳ ತಂದೆಯೂ ಆಗುತ್ತಾರೆ. ಇಷ್ಟೆಲ್ಲಾ ಬದಲಾವಣೆಗಳು ಆದಾಗ್ಯೂ ಭಟ್ಟರಿಗೆ ತಮ್ಮ ಮೊದಲ ಪತ್ನಿ ಲಕ್ಷ್ಮಮ್ಮನ ನೆನಪು ಸುರುಳಿ-ಸುರುಳಿಯಾಗಿ ಮೂಡಿಬರುತ್ತದೆ. ಅದನ್ನವರು ಎರಡನೇ ಪತ್ನಿ ಅನ್ನಪೂರ್ಣಮ್ಮನವರ ಮುಂದೆಯೇ ತಮ್ಮದೇ ದಾಟಿಯಲ್ಲಿ ಬಿತ್ತರಿಸುತ್ತಾರೆ. ಹಾಗಾಗ್ಗೆ ಅವರಿಗೆ ಕಾಡುವ ವಿರಹವೇದನೆ ಜೊತೆಗೆ ದೈಹಿಕವಾಗಿ ಬಾದಿಸುವ ಉದರಶೂಲೆಯನ್ನು ಪ್ರತ್ಯಕ್ಷವಾಗಿ ಕಾಣುವ ಭಟ್ಟರ ಕಣ್ಣೆದುರಿಗೆ ಬೆಳೆದ ಮಕ್ಕಳು ಭಟ್ಟರನ್ನು ನಿತ್ಯವಿರಹಿ ಎಂದು ಪರಿಭಾವಿಸುತ್ತಾರೆ.

ಮಡದಿ ಲಕ್ಷ್ಮಮ್ಮ ಅಪಹೃತವಾದ ಮೇಲೆ ಅವಳಿಗಾಗಿ ಹಲವು ಕಾಲ ಹುಡುಕಾಡಿದ ಭಟ್ಟರು ಸಿಗದಾದಾಗ ನಿರಾಶರಾದದ್ದು ಮನೋಕ್ಲೇಶಕ್ಕೆ ಒಳಗಾದದ್ದು ಇತ್ಯಾದಿಯನ್ನು ಭಟ್ಟರ ಎರಡನೆ ಹೆಂಡತಿ ಅನ್ನಪೂರ್ಣಮ್ಮ ವರ್ಣಿಸುವುದು ಹೀಗೆ "ಅಲ್ಲ ಎದುರೆದೂರಿಗೆ ಹೆಂಡತಿಯನ್ನು ಎಳೆದುಕೊಂಡು ಹೋದರೆ ಎಂಥ ಗಂಡಸಿಗೇ ಇರಲಿ, ಹೇಗಾಗಬೇಕು! ಇವರು ಹುಡುಕಿದ್ದಂತೂ ಅಷ್ಟಿಷ್ಟಲ್ಲವಂತೆ. ಬರೀ ದಿಲ್ಲಿ ಮಾತ್ರವಲ್ಲ ಸುತ್ತಮುತ್ತ ಊರುಕೇರಿ ಹೋಗಿ ಹೋಗಿ ಕಾಶಿಯಲ್ಲಿಯೂ!.. ಊರಿಗೆ ಬರುವಾಗ ಹುಚ್ಚನ ಹಾಗಿದ್ದರು."[೨೨]

ಕಥಾಹಂದರದೊಳಗೆ ದೇಶ ವಿಭಜನೆಯ ಸಂದರ್ಭದಲ್ಲಿ ಉಂಟಾದ ಕೋಮುಗಲಭೆಯ ಘರ್ಷಣೆಯಲ್ಲಿ ಬಲಿಪಶುವಾದ ಹಲವು ಹೆಂಗಳೆಯರ ದುರಂತದ ಬದುಕನ್ನು 'ಕ್ರೌಂಚಪಕ್ಷಿಗಳು' ಕಥೆಗಾರ್ತಿ ಸೂಕ್ಷ್ಮವಾಗಿ ಮತ್ತು ಸಾಂದ್ರವಾಗಿ ಗಾಂಧಿವಾದಿ

ವಿಶಾಖಾಬೇನ್ ಮೂಲಕ ನಿರೂಪಿಸುತ್ತಾರೆ. ಗಂಡಂದಿರು ಮಕ್ಕಳನ್ನು ಕಳೆದಕೊಂಡ ಅವರ ಸ್ಥಿತಿ, ಅತಂತ್ರಸ್ಥಿತಿಯ ಅನಾಥಪ್ರಜ್ಞೆ ಆ ಹೆಂಗಳೆಯರು ಅತ್ಯಾಚಾರಕ್ಕೊಳಗಾಗಿ ನಿರಾಶ್ರಿತರಾದವರು. ವಿಶಾಖಾಬೇನ್‌ರವರ ನೇತೃತ್ವದಲ್ಲಿ ಹಲವಾರು ಮಹಿಳೆಯರಿಗೆ ಪುರ್ನವಸತಿ ಕಲ್ಪಿಸಲಾಗಿರುವಂತಾದ್ದು ಮತ್ತು ಕೆಲವರಿಗೆ ಮೂಲ ಮನೆಗೆ ಹಿಂತಿರುಗಲು ಅವಕಾಶ ನೀಡುವಂತಾದ್ದು ಕೆಲವು ಹೆಂಗಳೆಯರು ತಾವು ಶಾಪಗ್ರಸ್ಥರೆಂದು ಪರಿಭಾವಿಸಿ ಹಿಂತಿರುಗಿ ಮನೆಗೆ ಮರಳಲು ಒಪ್ಪದವರು ಇಂತೆಲ್ಲಾ ಬಣ್ಣನೆಯೊಂದಿಗೆ ವಿಶಾಖಾಬೇನ್ ಕೋಮುಗಲಭೆಯ ಪರಿಣಾಮವಾಗಿ ಅಸಂಖ್ಯಾತ ಮಹಿಳೆಯರ ಪಾಡು ಅತಂತ್ರವಾದುದ್ದರ ಬಗ್ಗೆ ಅವರೇ ಕುದ್ದಾಗಿ ಹೇಳುವುದು ಕೇಳುಗರ ಮತ್ತು ಓದುಗರ ಮನಸ್ಸಿನಲ್ಲಿ ಗಾಢವಾಗಿ ನಾಟಿ ನೋವನ್ನುಂಟು ಮಾಡುತ್ತದೆ. ನಿರೂಪಕರ ಮಾತಿನಲ್ಲಿ ವಿಶಾಖಾಬೇನ್ ವಿವರಣೆಯನ್ನು ನಿರೂಪಿತವಾದದ್ದು ಹೀಗೆ "ದೇಶ ವಿಭಜನೆ ಗಲಭೆ ಮಾರಾಮಾರಿ ರಕ್ತದೋಕುಳಿ ಎಲ್ಲವನ್ನೂ ಸ್ವತಃ ಕಂಡ ಕುದಿಯಲ್ಲಿ ವಿವರಿಸುತ್ತ ಕೋಮು ಕೋಮುಗಳ ಜಗಳದಲ್ಲಿ ಜೀವ ಕಳೆದುಕೊಂಡ, ನರಕಹಿಂಸೆ ಅನುಭವಿಸಿದ ಬೆಂದು ಮುದ್ದೆಯಾದ, ಕದ್ದುಹೋದ, ಕ್ಷಣಮಾತ್ರದಲ್ಲಿ ಬದುಕಿನ ಗತಿಯೇ ತಿರುಗಿಹೋದ, ಹಗಲುರಾತ್ರಿಗಳ ಬಣ್ಣವೇ ಬಯಲಾದ, ಗಂಡಂದಿರು ಮಕ್ಕಳೂ ಇಲ್ಲವಾದ ಬದಲಾದ ಅಥವಾ ಹೊಸದಾದ ಮಹಿಳೆಯರ ನಾನಾ ಸ್ಥಿತಿಗತಿಗಳನ್ನು ತೇವದನಿಯಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದರು ವಿಶಾಖಾಬೇನ್."[೨೩]

ನಿರೂಪಣೆಯೊಳಗೆ ಮೂಡಿಬರುವ ಅಪಹೃತ ಮಹಿಳೆಯರ ಪಾಡು ಮರಳಿ ಬಂದ ಅವರ ಸ್ಥಿತಿಗತಿಗಳು ಅತಂತ್ರದ ಅಸಹಾಯಕ ಪರಿಸ್ಥಿತಿಗಳೆಲ್ಲವನ್ನು ಸಾಂದ್ರಿತವಾಗಿ ಓದುಗರ ಮನಸ್ಸನ್ನು ತಟ್ಟುತ್ತದೆ. "ಸರಕಾರದ ಪ್ರತಿನಿಧಿಯಾಗಿ ಎರಡೂ ಕಡೆಯ ಅಂಥ ಮಹಿಳೆಯರ ವಿನಿಮಯ ಪ್ರಕ್ರಿಯೆಯೆಲ್ಲ ನಡೆದು ಮುಗಿವಾಗ ವರ್ಷವೇ ಉರುಳಿತು. ಯಾರು ಯಾರೆಲ್ಲಾ ಯಾರ್‍ಯಾರ ಮನೆ ಸೇರಿದ್ದರು. ಯಾವ ಯಾವ ಶಿಬಿರದಲ್ಲಿದ್ದರು ಕರೆದೊಯ್ಯಲು ಬಂದ ನಮ್ಮನ್ನು ಕಂಡು ಆತಂಕಗೊಂಡರು. ಅತ್ಯಾಚಾರಕ್ಕೊಳಗಾದವರು, ಹೊಟ್ಟೆಪಾಡಿಗಾಗಿ ವೈಶ್ಯೆಯರಾದವರು, ಆಗಲೇ ಕೆಲವರು ಬಸಿರಿಯರು, ಬಾಣಂತಿಯರು...ಎರಡೂ ಕಡೆಯಲ್ಲಿಯೂ. ಅಂದರೆ ನಮ್ಮಲ್ಲಿಯೂ. ಬನ್ನಿ ಎಂದರೆ ಕೆಲವರಿಗೆ ಇಲ್ಲಿ ಮತ್ತೆ ಮನೆ ಸೇರಿಸದಿದ್ದರೆ ಎಂಬ ಭಯ. ಈಗಿರುವಲ್ಲಿಯೇ ತಮಗೆ ಪ್ರೀತಿ ಸಿಗುತ್ತಿದೆ. ಹೊಟ್ಟೆಬಟ್ಟೆಗೂ ಪರವಾಗಿಲ್ಲ ಅಂತ ಅದನ್ನೇ ಆಯ್ದುಕೊಂಡವರು; ಆಗಿದ್ದು ಆಯ್ತು. ಈಗ ಯಾವ ಮುಖವಿಟ್ಟುಕೊಂಡು ಮರಳಲಿ? ಶಾಪಗ್ರಸ್ಥರು ತಾವು ಅಂತ ಅತಂತ್ರದಾದರು ಮರಳಲು ಒಪ್ಪದವರು."[೨೪] ಬಹು ನಿರೂಪಕ ನಿರೂಪಣೆಯೊಂದಿಗೆ

ಕಥೆಯ ಪರಧಿ ವಿಸ್ತಾರಗೊಳ್ಳುತ್ತದೆ. ಆ ವಿಸ್ತಾರಗೊಂಡ ಕಥಾಪರಧಿಯಲ್ಲಿ ಲಕ್ಷ್ಮಮ್ಮ ತನ್ನ ನಿಜವಾದ ಕಥೆಯನ್ನು ನಿರೂಪಿಸುತ್ತಿದ್ದಂತೆ ಅರುಂಧತಿ ಮತ್ತು ಇತರೆ ಕೇಳುಗರಿಗೆ ತಬ್ಬಿಬ್ಬುಂಟಾಗುವ ಸ್ಥಿತಿ ಏರ್ಪಡುತ್ತದೆ. ಲಕ್ಷ್ಮಮ್ಮನ ಮಾತಿನಲ್ಲಿ ಹೇಳುವುದಾದಲ್ಲಿ ಲಕ್ಷ್ಮೀನಾರಾಯಣಭಟ್ಟರು ಪತ್ನಿಯನ್ನು ಗುರುತಿಸಲು ಬಂದಿದ್ದರೂ ಗುರುತಿಸಲಾರದೇ ಹೋದದ್ದು; ಪತಿಗಾಗಿ ಲಕ್ಷ್ಮಮ್ಮ ಅತ್ತೂ ಕರೆಯುವುದು; ಪತಿಯ ಕರೆಯ ನಿರೀಕ್ಷೆಯಲ್ಲಿದ್ದ ಲಕ್ಷ್ಮಮ್ಮನಿಗೆ ಆ ನಿರೀಕ್ಷೆ ಹುಸಿಯಾದದ್ದು; ಇತ್ಯಾದಿಗಳು ಲಕ್ಷ್ಮೀನಾರಾಯಣಭಟ್ಟರ ವ್ಯಕ್ತಿತ್ವಕ್ಕೆ ನಕಾರಾತ್ಮಕ ಭಾವ ಮೂಡಿಸುವಂತಾದ್ದಾಗುತ್ತದೆ. ಅರುಂಧತಿ ಮತ್ತು ಇನ್ನಿತರ ಕೇಳುಗರ ಮನದಾಳದ ಲಕ್ಷ್ಮೀನಾರಾಯಣಭಟ್ಟರ ಬಗೆಗಿನ ಭಾವ ಪ್ರಪಂಚದ ಪ್ರತಿಮೆ ಭಗ್ನವಾದಂತೆನಿಸಿ ನಂಬಲಾರದವರಾಗಿಯೂ ಮತ್ತು ನಂಬುವಂತಾಗಿಯೂ ಇರುವ ಮನೋಸ್ಥಿತಿಗೆ ಒಳಗಾಗಿ ಬಿಡುತ್ತಾರೆ. ಲಕ್ಷ್ಮೀನಾರಾಯಣಭಟ್ಟರ ವ್ಯಕ್ತಿತ್ವದ ಪ್ರತಿಮೆ ಅರುಂಧತಿ ಮತ್ತು ಇತರ ಸಾಮಾಜಿಕ ಮನದಲ್ಲಿ ಒಂದು ಆದರ್ಶಪ್ರೇಮದ ಸಂಕೇತವಾಗಿಯು ಪ್ರಭಾವ ಮೂಡಿಸುತ್ತದೆ. ಕಾರಣ ಲಕ್ಷ್ಮೀನಾರಾಯಣಭಟ್ಟರನ್ನು ಅವರು ಕ್ರೌಂಚಪಕ್ಷಿಯಂತೆ ಒದ್ದಾಡುವ ನಿತ್ಯ ವಿರಹಿಯಾಗಿ ಕಾಣುವವರು. ಆದರೆ ವಿಶಾಖಾಬೆನ್ ಸಂದರ್ಶನದ ವೇಳೆಯಲ್ಲಿ ಲಕ್ಷ್ಮಮ್ಮ-ಲಕ್ಷ್ಮೀ ನಾರಾಯಣಭಟ್ಟರ ಅಸಲಿ ಮುಖವನ್ನು ಅನಾವರಣ ಮಾಡಿಸುವಂತಾದ್ದು ಕಥೆ ಮತ್ತೊಂದು ಆಯಾಮವನ್ನು ಪಡೆಯುತ್ತದೆ. ಗಂಡನಿಂದ ಪರಿತಕ್ತಳಾದ ಲಕ್ಷ್ಮಮ್ಮ ನಿಜವಾಗಿಯು ನಿತ್ಯ ವಿರಹಿಯಂತೆ ಅರುಂಧತಿ ಮತ್ತು ಇತರ ಕೇಳುಗರಿಗೆ ಅನಿಸಿಬಿಡುತ್ತದೆ.

ಯಾರ ಮಾತು ಸತ್ಯ ಎನ್ನುವುದು ಅಥವಾ ಯಾರ ಮಾತನ್ನು ನಂಬಬಹುದು ಎಂಬ ಜಿಜ್ಞಾಸೆಗೆ ಓದುಗರ ಒಳಗೂ ಮಾಡುವಂತೆ ನಿರೂಪಣೆ ಮುಂದುವರೆಯುತ್ತದೆ. ಯಾರ ಮಾತು ಸತ್ಯ ಯಾರದು ಅಸತ್ಯ ಎನ್ನುವ ಖಚಿತಭಾವ ತಾಳಲಾಗದ ಮನೋಸ್ಥಿತಿಯನ್ನುಳಿಸಿ ಬಿಡುತ್ತದೆ. ಯಾವ ಸ್ಪಷ್ಟ ನಿಷ್ಕರ್ಷೆಗೆ ಬಾರದಂತೆ ಓದುಗರ ಮನದಾಳದಲ್ಲಿ ಪ್ರಶ್ನಾರ್ಥಕ ಚಿಹ್ನೆ ಉಳಿದು ಬಿಡುತ್ತದೆ. ಆದಾಗ್ಯೂ ಕಟ್ಟಕಡೆಗೆ ದಮನಿತರ ಪರವಾದ ಮಾನವೀಯ ನೆಲೆಯಡೆಗೆ ಸಾಗಬೇಕಾದ ಅವಶ್ಯಕತೆಯನ್ನು ಕಥೆ ಸಾರುತ್ತದೆ. "ಸತ್ಯವ ಮಣ್ಣ ಅದನ್ನಾದರೂ ತಿಳಕೊಂಡು ಏನು ಮಾಡುತ್ತೀರಿ -ನಡೆಯಿರಿ ನಡೆಯಿರಿ ಊಟವಾಗಲಿ ಮೊದಲು ಎಷ್ಟು ಸತ್ಯ ಬೇಕು ಏನು, ಕಡೆಗೆ ನೋಡುವ ಹಿರಿಯರೊಬ್ಬರು ದನಿ ತೆಗೆದರು."[೨೫]

ಕಥಾಹಂದರದೊಳಗೆ ಸಾಂದರ್ಭಿಕ ನಿರೂಪಕಿಯಾಗಿ ಬರುವ ಗಾಂಧಿವಾದಿ ವಿಶಾಖಾಬೆನ್- ಅರುಂಧತಿಯ ಕಣ್ಣಿಗೆ ಒಂದು ಕ್ರೌಂಚಪಕ್ಷಿಯಂತೆ ಭಾಸವಾಗುತ್ತಾರೆ.

ಸೂಚ್ಯವಾಗಿ ನಿರೂಪಿತವಾದ ಅವರ ವ್ಯಕ್ತಿ ಚಿತ್ರಣದಲ್ಲಿ ಅವರೂ ಜೀವನದಲ್ಲಿ ನೊಂದವರು ಎಂಬಂಶ ಓದುಗರ ಮನಸ್ಸನ್ನು ತಾಕುತ್ತದೆ. ಹೀಗೆ ಕಥೆಯೊಳಗೆ ಹಲವರ ಕಥೆಗಳು ಅನಾವರಣಗೊಳ್ಳುತ್ತಾ ಹೋಗುವ ಕಥೆಯ ಕಥಾನಕದ ಬಹುನಿರೂಪಣಾ ಮಾಧ್ಯಮ ಮತ್ತು ಭಾಷಾಕೌಶಲ್ಯ ಪರಿಣಾಮಕಾರಿಯಾದುದು.

ಸ್ತ್ರೀ ಅಭಿವ್ಯಕ್ತಿ ಸ್ವತಂತ್ರ

ವೈದೇಹಿಯವರ ಕಥನಕ್ರಮದಲ್ಲಿ ಹೊಸತನ ಬೆರೆತ ಸ್ತ್ರೀವಾದಿ ನಿಲುವಿನ ಮಹತ್ವಪೂರ್ಣ ಕಥೆ 'ಸೌಗಂಧಿಯ ಸ್ವಗತಗಳು' ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಗೆ ಹೇರುವ ನಿಬಂಧನೆಗಳು ಸಂಪ್ರದಾಯಸ್ಥ ಸಾಮಾಜಿಕ ವ್ಯವಸ್ಥೆಯೊಳಗೆ ಪುರುಷ ವಿಧಿಸುವ ಕಟ್ಟಳೆಗಳಿಗೆ ಅನುಗುಣವಾಗಿ ಸ್ತ್ರೀಯು ಇರಬೇಕೆಂಬ ಕಟ್ಟುಪಾಡುಗಳು ಪುರುಷನೇ ರೂಪಿಸುವ, ನಿಯಂತ್ರಿಸುವ ಸಾಮಾಜಿಕ ವ್ಯವಸ್ಥೆಯಾಗಿಯು ಸ್ತ್ರೀ ಸ್ವಾತಂತ್ರ್ಯ ಹರಣದ ಸಂಗತಿಯಾಗಿಯು ಪರಿಣಮಿಸುತ್ತದೆ. 'ಸೌಗಂಧಿ' ಎನ್ನುವ ಪ್ರಧಾನಪಾತ್ರದ 'ಸೌಗಂಧಿಯ ಸ್ವಗತಗಳು' ಎಂಬ ಕಥೆಯಲ್ಲಿ ಸೌಗಂಧಿಯ ಸ್ವತಂತ್ರ್ಯಾಪೇಕ್ಷೆಯ ಉತ್ಕಟತೆ ಬಹಿರಂಗಗೊಳ್ಳುತ್ತದೆ. ಆದರೆ ಪಿತೃಪ್ರಧಾನ ಸಮಾಜೋ-ಕೌಟುಂಬಿಕ ವ್ಯವಸ್ಥೆಯಲ್ಲಿ ತನ್ನ ಅಸ್ಮಿತೆಯನ್ನು ಕಳೆದುಕೊಂಡ 'ಸೌಗಂಧಿ 'ಸ್ವತಂತ್ರ್ಯ ರಹಿತಳಾಗಿ ತನ್ನಿಚ್ಚೆಗನುಗುಣವಾಗಿ ತಾನು ಬಾಳಬಯದೆಂಬುದರ ಕಲ್ಪನೆಯ ಸೌದದಡಿಯಲ್ಲಿ ಸಿಕ್ಕು ಜರ್ಜರಿತವಾದ ಹೆಣ್ಣೋರ್ವಳ ತಳಮಳದ ನಿವೇದನೆಯು ಆಗಿ ಬಿಡುತ್ತದೆ.

ಸುಶಿಕ್ಷಿತಳೂ ಉದ್ಯೋಗಸ್ಥಳು ಆದ ಸೌಗಂಧಿಯ ಕುಟುಂಬ ಸೌಗಂಧಿಗೆ ಸುರಕ್ಷಿತೆಯ ಹೆಸರಿನಲ್ಲಿ ಸೌಗಂಧಿಯ ವ್ಯಕ್ತಿಗತವಾದ ಸ್ವಾತಂತ್ರ್ಯವನ್ನು ಹರಣ ಮಾಡಿದೆ. ಉದ್ಯೋಗಿಯಾದರೂ ಸುಶಿಕ್ಷಿತಳಾದರೂ 'ಸೌಗಂಧಿ' ಪಂಜರದ ಪಕ್ಷಿಯಂತೆ. ಆಧುನಿಕ ಶಿಕ್ಷಣವಾಗಲಿ ಅಥವಾ ಆರ್ಥಿಕ ಸಬಲೀಕರಣವಾಗಲಿ ಸೌಗಂಧಿಯ ಸ್ವಂತಿಕೆ ಹಾಗೂ ಅಸ್ಮೀತೆಯನ್ನು ಈ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯೊಳಗೆ ಖಾತರಿಪಡಿಸುವುದಿಲ್ಲ. ತಾನು ಹೆಣೆದ ಸಾಮಾಜಿಕ ಬಲೆಯೊಳಗೆ ಹೆಣ್ಣಿರಬೇಕೆಂಬ ಪುರುಷನೀತಿ ಮಹಿಳಾ ಸ್ವಾತಂತ್ರ್ಯದ ಹರಣಕ್ಕೆ ಮೂಲಕಾರಣ. ಎಲ್ಲಿಯವರೆಗೆ ಮಹಿಳೆ ಆ ಸಾಮಾಜಿಕ ಬಲೆಯೊಳಗಿರುತ್ತಾಳೋ ಅಲ್ಲಿಯವರೆಗೆ ಅವಳು ತನ್ನ ನಿಯಂತ್ರಣದಲ್ಲಿರುತ್ತಾಳೆಂಬ ಹುನ್ನಾರ ಪುರುಷನದು. ಇಂತಹ ಲಿಂಗರಾಜಕಾರಣದ ಹಿನ್ನಲೆಯಲ್ಲಿ ಸೌಗಂಧಿಯ ಸ್ವಗತಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಮಗಳ ಬಗ್ಗೆ ಅತೀ ಕಾಳಜಿ ವಹಿಸುವ ತಂದೆ ಸೌಗಂಧಿಯ

ಅಂತರಂಗದ ಅಭಿಪ್ಸೆಗಳನ್ನು ಅರ್ಥ ಮಾಡಿಕೊಳ್ಳಲಾರದವನಾಗಿದ್ದಾನೆ. ಪರಊರಿಗೆ ವರ್ಗವಾದ ಸೌಗಂಧಿಯನ್ನು ಬಿಳ್ಕೋಡುವ ಸಂದರ್ಭದಲ್ಲಿ ತಂದೆ ಬಸ್ಸು ಕಂಡಕ್ಟರ್‌ನೊಂದಿಗೆ ಆಡುವ ಮಾತುಗಳನ್ನು ತನ್ನ ಸ್ವಗತಗಳಲ್ಲಿ ವ್ಯಾಖ್ಯಾನಿಸಿಕೊಳ್ಳುತ್ತಾಳೆ ಸೌಗಂಧಿ.

ಅವಿವಾಹಿತೆಯಾದ ಸೌಗಂಧಿ ವಿಧವೆಯ ಮನೆಯಲ್ಲಿ ಬಾಡಿಗೆ ಹುಡುವುದು ಹೆಚ್ಚು ಕ್ಷೇಮಕರ ಮತ್ತು ಹೆಚ್ಚು ಸುರಕ್ಷಕರ ಎಂದು ಭಾವಿಸುವ ತಂದೆ; ತಂದೆಯ ದೃಷ್ಟಿಕೋನಕ್ಕೆ ಅನುಗುಣವಾಗಿ ಸಾಗುವ ಸೌಗಂಧಿ ತಾಯಿ ಈರ್ವರು ಸೌಗಂಧಿಯ ಭಾವಕೋಶವನ್ನೆಂದೂ ತಲುಪಲಾರರು. ಮಗಳ ಒಳ್ಳೆಯತನವನ್ನೇ ಪದೇ ಪದೇ ಒಡತಿಯ ಮುಂದೆ ಪ್ರಸ್ತಾಪ ಮಾಡುವ ತಂದೆ ಮಗಳ ಪ್ರತಿಭಟನಾ ಶಕ್ತಿಯನ್ನು ಹತ್ತಿಕ್ಕುತ್ತಾನೆ. "ಅಷ್ಟು ನುಡಿಯುವ ಮತ್ತು ನಮ್ಮ ಮಗಳು ಹಸುಗೂಸು....ಬಾಯಿಗೆ ಕೈಯಿಟ್ಟರೆ ಕಚ್ಚಲು ತಿಳಿಯದವಳು......."[೨೬] ಈ ಮುಖೇನ ಸ್ತ್ರೀ ಮುಗ್ದೆಯಾಗಿರಬೇಕು, ಅಹಿಂಸಾತ್ಮಕವಾಗಿರಬೇಕು ಮತ್ತು ಮೌನಿಯಾಗಿರಬೇಕೆಂಬ ಪುರುಷನ ಸ್ತ್ರೀ ಪರಿಕಲ್ಪನೆ ಲಿಂಗರಾಜಕಾರಣವನ್ನು ಅನಾವರಣಗೊಳಿಸುತ್ತದೆ.

ಸೌಗಂಧಿಯ ಸ್ವಗತಗಳ ಮುಖೇನ ವೈದೇಹಿ ಸೂಕ್ಷ್ಮ ಲಿಂಗರಾಜಕಾರಣವನ್ನು ಬಯಲು ಮಾಡುವ ಕ್ರಮ ನೂತನವಾದುದು. ಸಾಮಾಜಿಕ ಸಂಸ್ಥೆಯಾದ ವಿವಾಹದ ಬಗ್ಗೆಯು ಕಥೆಗಾರ್ತಿ ಅವಿವಾಹಿತ ಹೆಣ್ಣು ಸಮಾಜ ನಡೆಸಿಕೊಳ್ಳುವ ಪರಿಯನ್ನು 'ಸೌಗಂಧಿಯ ಸ್ವಗತಗಳ'ಲ್ಲಿ ಭಾಷೆಯ ಸೂಕ್ಷ್ಮತೆಯೊಂದಿಗೆ ತರುತ್ತಾರೆ. ತಂದೆಯ ಮಾತಿನಲ್ಲಿ ಸೌಗಂಧಿ ಎಂದರೆ 'ಛೆ ಛೆ ನಮ್ಮ ಸೌಗಂಧಿಯೇ! ಗಂಡಸರ ನೆರಳನ್ನು ಹತ್ತಿರ ಸೇರಿಸದವಳು. ಅಷ್ಟು ನಿಯತ್ತಿನ ಹುಡುಗಿಯಾಗಿದ್ದರಿಂದ ನನಗೆ ಇಷ್ಟು ಧೈರ್ಯ. ಇಲ್ಲವಾದರೆ ನಾನೆಲ್ಲಿ ಕಳಿಸುತ್ತಿದ್ದೆ?' ಎನ್ನುವ ಮಾತು ಹೆಣ್ಣಿನ ಶೀಲಕ್ಕೆ ಅಪಾರ ಮೌಲ್ಯನೀಡುವ ಪುರುಷ ಪ್ರಧಾನ ಸಮಾಜ; ಆ ಶೀಲವನ್ನು ಹೆಣ್ಣಿನ ಸುತ್ತ ಹೆಣೆಯುವ ಬೇಲಿಯಾಗಿ ಮಾಡಿ ಅವಳ ಸ್ವಾತಂತ್ರ್ಯವನ್ನು ಅವಳ ಅಸ್ಮಿತೆಯುನ್ನು ಹರಣಮಾಡುವಂತಾದ್ದಾಗಿದೆ. ಮಗಳ ಸುರಕ್ಷತೆಯನ್ನೇ ಪ್ರಧಾನವಾಗಿಟ್ಟುಕೊಂಡ ಅತೀ ಕಾಳಜಿಯ ತಂದೆ ಸೌಗಂಧಿಯ ಸ್ವಗತದಲ್ಲಿ ಹೇಗೆ ಕಾಣಿಸುತ್ತಾರೆಂಬುದನ್ನು ಕಥೆಗಾರ್ತಿಯ ನಿರೂಪಣೆ "ಸೌಗಂಧಿ ಕಕ್ಕಾಬಿಕ್ಕಿಯಾಗಿ ತಂದೆಯನ್ನು ನೋಡಿದಳು. ಕ್ರೌರ್ಯದ ಸ್ವರೂಪ ಕೋರೆದಾಡೆ ಉರುಟುಗಣ್ಣು ಅಂತೆಲ್ಲ ಎಣಿಸಿಕೊಂಡಿದ್ದಳು ಸೌಗಂಧಿ; ಆದರೆ ತಂದೆ ನೋಡಲು ಎಷ್ಟು ಸಾಧುವಿದ್ದರು! ಸೌಗಂಧಿಗೆ ಜ್ವರ ಬಂದಹಾಗಾಯಿತು."[೨೭]

ಪರಸ್ಥಳಕ್ಕೆ ಬಂದರೂ ಪರತಂತ್ರ ವ್ಯವಸ್ಥೆಯಲ್ಲಿರಬೇಕಾದ ಅಸಹಾಯಕ ಸ್ಥಿತಿ ಸೌಗಂಧಿಯದು. ತನ್ನೂರು ತನ್ನ ಮನೆ, ಮತ್ತು ತನ್ನ ಕಾರ್ಯಸ್ಥಾನದಿಂದ ದೂರವಾಗಿ

ಪರ ಊರಿಗೆ ಬಂದು ಒಡತಿಯ ಮನೆಯಲ್ಲಿ ಬಾಡಿಗೆ ಹಿಡಿದ 'ಸೌಗಂಧಿ'ಗೆ ಅನಿಸತೊಡಗುತ್ತದೆ; ತಾನೀಗ ಏಳು ಕೋಟೆಯಾಚೆಗಿನ ಅರಮನೆಯಿಂದ ತಪ್ಪಿ ಹಾರಿಬಂದ ಹಕ್ಕಿ...... ಆದರೆ ಕ್ರಮೇಣ ಅವಳಿಗೆ ಅನಿಸತೊಡಗುತ್ತದೆ; ಎಲ್ಲಿ ಹೋದರೂ ಹೆಣ್ಣಿಗೆ ಸ್ವಾತಂತ್ರ್ಯವಿಲ್ಲವೆನ್ನುವ ಭಾವ. ಹುಟ್ಟಿದ ಮನೆಯಲ್ಲಿ ಹೆಣ್ಣು ಸ್ವಾತಂತ್ರ್ಯಳಿಲ್ಲ. ವ್ಯಕ್ತಿಗತವಾದ ಭಾವನೆಗಳ ಅನಾವರಣಕ್ಕೆ ಅವಕಾಶವಿಲ್ಲ. ಅದಕ್ಕೆ ಸಾಕ್ಷಿಯೇ ಸೌಗಂಧಿ ಮತ್ತು ಅವಳ ಅಂತರಾಳದ ಸ್ವಗತಗಳೇ ಅವಳ ವರ್ತಮಾನ ಸ್ಥಿತಿಯ ಋಜುವಾತಗಳು. ಒಂಟಿಯಾಗಿರಬೇಕೆಂದು ಹೆಣ್ಣಿನ ಒಂಟಿತನವನ್ನು ಆಕ್ಷೇಪಿಸುವ ಸಾಮಾಜಿಕ ವ್ಯವಸ್ಥೆಯಲ್ಲಿ ನರಳಬೇಕಾದ ಸ್ಥಿತಿ ಸೌಗಂಧಿಯದು. ಆಕೆಯ ತಾಯಿಯೂ ಮಗಳ ಸೌಗಂಧಿಯ ವಿವಾಹವನ್ನು ತುಂಬಾ ಹಚ್ಚಿಕೊಂಡಿರುವಂತೆ ಕಾಣುತ್ತದೆ. 'ತಾಯಿಯಂತೂ....... ಹಲುಬುತ್ತಿರುತ್ತಾಳೆ. ಒಬ್ಬಳೇ ಎಷ್ಟುದಿನ ಇರುತ್ತೀ? ನಾವು ಸತ್ತ ಮೇಲೆ ನಿನಗೆ ಯಾರು?....' ಈ ಮುಖೇನ ಸೌಗಂಧಿ ಪಿತೃಪ್ರಧಾನ ಸಮಾಜವನ್ನು ಅದರ ಸಂಪ್ರದಾಯಶೀಲತೆಯನ್ನು ಅದಕ್ಕೆ ಕೈಗೂಡಿಸುವ ಸಂಪ್ರದಾಯನಿಷ್ಟ ಸ್ತ್ರೀ ಸಮಾಜವನ್ನು ಅದರೊಳಗೆ ಬಂಧಿಯಾದ ತನ್ನಂತ ಮಹಿಳೆಯರ ಎದೆಯ ಸಂಕಟವನ್ನು ಸೌಗಂಧಿ ಸ್ವಗತಗಳ ಮುಖೇನವೇ ವ್ಯಾಖ್ಯಾನಿಸುತಿದ್ದಾಳೆ ಎಂದೆನಿಸುತ್ತದೆ.

ಸೂಕ್ಷ್ಮಮನಸ್ಸಿನ ಸೌಗಂಧಿಯ ಮನೋ ತಾಕಲಾಟವನ್ನು ಕಥೆಗಾರ್ತಿ ತೆರೆದಿಡುವ ಬಗೆ; ಸೌಗಂಧಿಯ ಸ್ವಗತಗಳಲ್ಲಿನ ಅಂತರಂಗದ ಅನಾವರಣ; ನಿಯಂತ್ರಿಸಲಾಗದ ಸುಪ್ತಮನಸ್ಸಿನ ಸೌಗಂಧಿಯ ಅವ್ಯಕ್ತ ಹಂಬಲ ಇತ್ಯಾದಿಗಳಲ್ಲಿ ಹದವರಿತ ನಿರೂಪಣಾ ಕೌಶಲದೊಂದಿಗೆ ಕಥೆಗಾರ್ತಿ ವೈದೇಹಿ ಸೌಗಂಧಿಯ ಸ್ವಗತಗಳನ್ನು ಹೆಚ್ಚು ಸಂಕೀರ್ಣಗೊಳಿಸುತ್ತಾರೆ.

ಸ್ತ್ರೀ ಪ್ರತಿಭಟನೆಯಲ್ಲಿ ಅಭಿವ್ಯಕ್ತಿಯ ಸ್ವರೂಪ

ವೈದೇಹಿಯವರ 'ಮನೆಯವರೆಗಿನ ಹಾದಿ' ಕಾಲಾಂತರದಲ್ಲಾಗುವ ಪರಿವರ್ತನೆಯಲ್ಲಿ ಸ್ತ್ರೀ-ಪುರುಷ ಸ್ಥಿತಿಗತಿಗಳ ಕುರಿತ ಕಥನವಾಗಿದೆ. ಕಣ್ಮುಂದೆಯೇ ನಡೆಯುತ್ತಿರುವ ನಡೆದ ಆಗು-ಹೋಗುಗಳೆಲ್ಲಾ ಸಾಕ್ಷಿಯಾಗಿ ನಿಲ್ಲುವ ನಿರೂಪಕಿ 'ಹಾದಿ' ಎಂಬ ಪತ್ರಿಮೆಯನ್ನು ರೂಪಕವಾಗಿಯೇ ಕಥೆಯ ಮುಖ್ಯ ಜೀವಾಳವಾಗಿಯೂ ಪರಿಗಣಿಸಿರುವುದು ಕಥೆಯ ವೈಶಿಷ್ಟ್ಯ. ಘಟ್ಟದ ಮೇಲಿನ ಪ್ರದೇಶದ ಪರಿಸರದಲ್ಲಿರುವ ಹಲವು ಹತ್ತು ಊರಿನ ಕುಟುಂಬಗಳನ್ನು ಪರಿಚಯಿಸುತ್ತ ಆ ಗುಡ್ಡಗಾಡಿನ ಏರು ತಗ್ಗಿನ ಮಣ್ಣಿನ ರಸ್ತೆಯಲ್ಲಿ ಸಾಗಬೇಕಾದ ಆ ಸಾಮಾಜಿಕರ ಗತಿಸ್ಥಿತಿಯನ್ನು ಅನುಭವಿಸಿದ ಉಪಟಳವನ್ನು, ಅದರಿಂದ ಉಂಟಾದ ಕೌಟುಂಬಿಕ ವೈವಾಹಿಕ ಬದುಕಿನ ಮೇಲೆ ಉಂಟಾದ ಋಣಾತ್ಮಕ ಪರಿಣಾಮಗಳನ್ನು ಕಥೆ ಬಣ್ಣಿಸುತ್ತದೆ.

ಕಗ್ಗಾಡಿನ ಬೆಟ್ಟದ ಮೇಲಿನ ಏರು ತಗ್ಗುಗಳೆಲ್ಲವನ್ನು ಹತ್ತಿ ಇಳಿದು ಮಣ್ಣಿನ ರಸ್ತೆಯಲ್ಲಿ ಸಂಚರಿಸಬೇಕಾದ ಊರಿನವರ ಕಡುಕಷ್ಟವನ್ನು ವರ್ಣಿಸುವ ನಿರೂಪಕಿ ಅದರಿಂದ ವಿಮುಕ್ತವಾಗುವ ಬಗೆಯನ್ನು ಅತ್ಯಂತ ಸ್ವಾರಸ್ಯಕರವಾಗಿ ಹೇಳುತ್ತಾರೆ. ನಿರೂಪಕಿ ಬಳಸಿಕೊಳ್ಳುವ ಕುಂದಾಪುರದ ದೇಸಿ ಭಾಷೆ ಪ್ರಾದೇಶಿಕ ಚೌಕಟ್ಟನ್ನು ಪ್ರಾದೇಶಿಕ ಸಂಸ್ಕೃತಿಯನ್ನು ಮತ್ತು ಪ್ರಾದೇಶಿಕ ಬಣ್ಣವನ್ನು ಕಟ್ಟಿಕೊಡುತ್ತದೆ. ಕಥೆಯಲ್ಲಿ ಬರುವ ಪುರುಷಪಾತ್ರವಾದ ವಾಸುದೇವ ಊರಿನ ತಮ್ಮನೆಗೆ ರಸ್ತೆ ಮಾಡಿಸಲು ಪಟ್ಟ ಶ್ರಮವನ್ನು ದೊಡ್ಡ ಸಾಧನೆಯೆಂಬಂತೆ ಬಿಂಬಿಸುತ್ತಾನೆ. ರಸ್ತೆ ನಿರ್ಮಾಣ ಕಾರ್ಯದಲ್ಲಿ ಮೂಲಸೌಕರ್ಯಕ್ಕೆ ಅತ್ಯಗತ್ಯವಾಗಿ ಬೇಕಾದ ಭೂಮಿಯ ಸ್ವಾಧೀನ ಸಂದರ್ಭದಲ್ಲಿ ಮಹಿಳಾ ಪಾತ್ರವಾದ ರಾಜಮ್ಮ ತನ್ನ ಗದ್ದೆಯ ಬಳಿಯ ಒಂದು ಇಂಚು ನೆಲವನ್ನು ಬಿಟ್ಟುಕೊಡುವುದಿಲ್ಲ ಎಂದು ಪ್ರತಿಭಟನಾ ಧ್ವನಿಯನ್ನೆತ್ತುವುದು ಇಲ್ಲಿ ಗಮನಾರ್ಹ. ಅಂತೂ ಪಕ್ಕದ ಗದ್ದೆ ರಾಜಮ್ಮನನ್ನು ಒಪ್ಪಿಸಿ ರಸ್ತೆ ನಿರ್ಮಾಣ ಮಾಡಲಾಯಿತು.

ರಸ್ತೆಯಿಲ್ಲದ ತಗ್ಗುದಿನ್ನೆಯ ಮಣ್ಣಿನ ರಸ್ತೆಯಲ್ಲಿಯ ರುಕ್ಮಿಣಮ್ಮನ ಮನೆಯ ಸಂಕಷ್ಟವನ್ನು ಕಥೆಗಾರ್ತಿ ಸೂಚ್ಯವಾಗಿಯೇ ನಿರೂಪಿಸುತ್ತಾರೆ. ರುಕ್ಮಿಣಮ್ಮನ ಮಗಳು ಸುಗುಣಳಿಗೆ ಬಂದ ವರ ಮನೆಗೆ ರಸ್ತೆಯಿಲ್ಲದ ಕಾರಣಕ್ಕಾಗಿ ನೆಂಟಸ್ಥಿಕೆ ಬೆಳಸದೇ ಹೋದದ್ದು ರಸ್ತೆಯ ಪ್ರಭಾವವನ್ನು ಮತ್ತು ಮಹತ್ವವನ್ನು ವರ್ಣಿಸುತ್ತದೆ. 'ಕೈಗೆ ಬಂದ ತುತ್ತು ಬಾಯಿಗಿಲ್ಲದಂತಾಯಿತು' ಎಂಬ ನಾಣ್ನುಡಿಯಂತೆ ಸುಗುಣಳ ವಿವಾಹ ಪ್ರಸ್ತಾಪ ರಸ್ತೆರಹಿತ ಮನಸ್ಥಿತಿಯ ಕಾರಣದಿಂದ ನಿಂತು ಹೋಗುವುದು ಕಥೆಯಲ್ಲಿ ಧ್ವನಿತವಾಗುವ ವ್ಯಂಗ್ಯವಾಗುತ್ತದೆ. ಇದರ ಋಣಾತ್ಮಕ ಪರಿಣಾಮಗಳನ್ನರಿತ ವಾಸುದೇವ ಮೂಲಸೌಕಾರ್ಯದ ಭಾಗವಾದ ರಸ್ತೆ ನಿರ್ಮಾಣದ ಅಗತ್ಯತೆಯನ್ನು ಮನಗಂಡು ರಸ್ತೆ ನಿರ್ಮಾಣವನ್ನು ಮಾಡಿಸಿಯೇ ಬಿಡುತ್ತಾನೆ. ಪರಿಣಾಮ ಮನೆಯ ಸತ್ಯವತಿಗೆ ಕಂಕಣಬಲ ಕೂಡಿಬರುತ್ತದೆ. ಬಂದವರ ರಸ್ತೆಯಲ್ಲಿ ಸುಗುಮವಾಗಿ ಸಂಚರಿಸಬಹುದಾದ ಕಾರಣವನ್ನಿಡಿದು ಸತ್ಯವತಿಗೊಂದಿಗಿನ ವಿವಾಹಕ್ಕೆ ಸಮ್ಮತಿ ನೀಡುತ್ತಾನೆ.

ರಸ್ತೆನಿರ್ಮಾಣ ಪ್ರಸ್ತಾಪಕ್ಕೆ ಹಿರಿಯ ತಲೆಮಾರಿನ ಅಜ್ಜಯ್ಯ ಪ್ರತಿರೋಧ ತೋರಿಸುವುದು ಕಂಡುಬರುತ್ತದೆ. ಹಳೆಯ ತಲೆಮಾರಿನ ಪಿತೃಪ್ರಧಾನ ಸಾಮಾಜಿಕರಿಗೆ ಹಳೆಯ ಯತಾಸ್ಥಿತಿಯನ್ನು ಸ್ಥಾವರತ್ವವನ್ನು ಕಾಪಾಡಿಕೊಳ್ಳಬೇಕೆನ್ನುವ ತಹತಹಿಕೆ. ಆದರೆ ವಾಸುದೇವ ಹೊಸ ಬದಲಾವಣೆಗೆ ತೆರೆದುಕೊಳ್ಳಬಯಸುವ ವ್ಯಕ್ತಿಯಾಗಿದ್ದಾನೆ. ಅವನೇ ಹೇಳುವಂತೆ "ಈಗ ಸತ್ಯವತಿಗಾದರೂ ಅಷ್ಟೆ. ರಸ್ತೆ ಇಲ್ಲ ಅಂತ ಹುಡುಗ ತಪ್ಪಿ ಹೋಗುವುದರಲ್ಲಿದ್ದ. ಸುಳುವು ಸಿಕ್ಕಿದ್ದೇ ರಸ್ತೆ ಮಾಡಿಸಿಯೇ ಬಿಟ್ಟೆ. ಅಜ್ಜಯ್ಯ ಇದ್ದಿದ್ದರೆ ಬಿಡುತ್ತಿರಲಿಲ್ಲ. ಈ

ನೆಂಟಸ್ತಿಕೆ ಹೋದರೆ ಇನ್ನೊಂದು ಬರುತ್ತದೆ ಅಂತಿದ್ದರು. ಅವರ ಕಾಲ ಹಾಗೆಯೇ ಕಳೆಯಿತು ಕೂಡ. ಆದರೆ ಈಗೆಲ್ಲ ಹಾಗೆ ಆಗುತ್ತದ? ಅಪ್ಪಯ್ಯನ ಮುಖ ನೋಡಿದೆ. ಯಾವತ್ತಿನ ಹಾಗೇ ಅವರು ಬಿಡು, ಹುಳಿಗೂ ಇಲ್ಲ ಪಾಯಸಕ್ಕೂ ಇಲ್ಲ. ಇನ್ನು ರಾಮಣ್ಣ. ... ಹೇಳಿ ಸುಖವಿಲ್ಲ ಅದನ್ನೆಲ್ಲ. ನಾನೇ ಧೈರ್ಯ ತೆಗೆದುಕೊಂಡೆ, ಅಂತೂ ಕೆಲಸ ಪೂರೈಸಿದೆ. ಮದುವೆಯೂ ನಿಶ್ಚಯವಾಯ್ತು."[೨೮] ಪರಿವರ್ತನಾಶೀಲ ಸಮಾಜದ ಮುಖ್ಯ ಅಂಗವಾದ ಭೌತಿಕ ಸೌಕರ್ಯದ ನಿರ್ಮಾಣಕಾರ್ಯದಲ್ಲಿ ಪ್ರಾಕೃತಿಕ ಪರಿಸರದ ಉಪಸ್ಥಿತಿಯನ್ನು ಹಾಳುಗೆಡವಂತಾದ್ದು ಕಥಾಹಂದರದಲ್ಲಿ ಕಾಣಿಸಿಕೊಳ್ಳುವ ಮುಖ್ಯ ಎಳೆಯಾಗಿದೆ. ರಸ್ತೆನಿರ್ಮಾಣಕ್ಕಾಗಿ ಹಸಿರಾದ ಸುಂದರ ಹಲಸಿನ ಮರವನ್ನು ಕಡಿದುರುಳಿಸಿದ್ದು ನಿರೂಪಕಿಯ ಮನಸ್ಸಿಗೆ ತಾಕುತ್ತದೆ. ಭೌತಿಕ ಸೌಕಾರ್ಯಕ್ಕಾಗಿ ಜೀವಂತ ಸುಂದರ ಮರವನ್ನು ಕಡಿದುರುಳಿಸಿದ ಸಂಗತಿಯನ್ನು ನಿರೂಪಕಿ ಹೇಳುವುದು ಹೀಗೆ 'ವಂದ್ ಬ್ಯೇಕಾರ್ ವಂದ್ ಹ್ವಾಯ್ಕೇ ಅಲೆ... ಹ್ವಾಯ್ಲಿಯತ್ತ್ ... ಆರೆ, ಅಂಥಾ ಸ್ವೊಳಿ ಮಾತ್ರೆ ಇನ್ನ್ ಮೂರ್ ಲೋಕೊ ಹಯ್ದಿರೂ ಸಿಕ್ಕ'.

ನಿರೂಪಕಿಯ ರುಕ್ಮಿಣಿತ್ತೆಯೊಂದಿಗಿನ ಸಮಾಗಮದಲ್ಲಿ ರುಕ್ಮಿಣಮ್ಮ ರಸ್ತೆ ಕಾರಣದಿಂದಾಗಿ ಆದ ಆರ್ಥಿಕ ಬದಲಾವಣೆಗಳನ್ನು ಸವಿವರವಾಗಿ ವಿವರಿಸುತ್ತಾರೆ. ಮೊದಲೆಲ್ಲಾ ಹಾಲು ಉಳಿದು ಮನೆಮಂದಿಯಲ್ಲಾ ಹಾಲನ್ನು ಪೂರ್ಣ ಖರ್ಚು ಮಾಡುತ್ತಿದ್ದರು. ರಸ್ತೆಯಾದ ಮೇಲೆ ರುಕ್ಮಿಣಮ್ಮನು ಆರ್ಥಿಕವಾಗಿ ಜಾಣೆಯಾಗಿರಬೇಕು. ಈಗವಳು ಕರೆದ ಹಾಲಿನಲ್ಲಿ ಸ್ವಲ್ಪ ಭಾಗವನ್ನು ಪೇಟೆಗೆ ಶೇಷಮಣಿಯ ಸೈಕಲ್‌ನಲ್ಲಿ ಕಳಿಸಿಕೊಡಹತ್ತಿದಳು. ಚಿಕ್ಕ ಪುಟ್ಟ ಕಾರಣಕ್ಕೆ ಗಂಡಸರ ಮುಂದೆ ಖಾಸಿಗಾಗಿ ಕೈಚಾಚುವ ಅಸಹಾಯಕ ಸ್ಥಿತಿ ತಪ್ಪಿದ್ದು ರುಕ್ಮಿಣಮ್ಮನಂತವರ ಸ್ತ್ರೀಯರ ಕಿಂಚಿತ್ತು ಆರ್ಥಿಕ ಚೈತನ್ಯ ಬೆಳವಣಿಗೆಯಾದದ್ದು ಕಥೆ ದಾಖಲಿಸುವ ಮುಖ್ಯ ಸಂಗತಿಯಾಗುತ್ತದೆ. ರಸ್ತೆಯ ಕಾರಣದಿಂದ ವಯಸ್ಸಾದ ನಿರೂಪಕಿಯ ಮಾವಯ್ಯ ಡಾಕ್ಟರರ ಚಿಕಿತ್ಸೆಯ ಪರಿಣಾಮವಾಗಿ ಬದುಕುಳಿದದ್ದು ರಸ್ತೆಯ ಸಕರಾತ್ಮಕ ಪರಿಣಾಮವನ್ನು ಬೀರುತ್ತದೆ. ಹಿರಿಯರಾದ ಮಾವಯ್ಯ 'ಇವ್ನ್ ಬೇರೆ ಕಸುಬಿಲ್ಲೆ. ರಸ್ತೆ ಇಲ್ಲೆ ಅಂತೆಳಿ ಮುಂಚೆಯೆಲ್ಲ ಏನ್ ಬೇಗ ಸಾಯ್ತಿದ್ರ? ಆಯುಷ್ಯ ಇದ್ದಿತ್ ಬದ್ಕಂಡೆ. ಇವ್ನೊಂದ್ ಭ್ರಮೆ' ಎಂದು ತದ್ವಿರುದ್ಧವಾಗಿ ಉತ್ತರಿಸುವುದು ತನ್ನ ಆಯಸ್ಸು ಇರುವ ಕಾರಣಕ್ಕಾಗಿ ತಾನು ಬದುಕುಳಿದೆ ಎಂಬ ಭಾವವನ್ನು ವ್ಯಕ್ತಪರಿಸುವಂತಾದ್ದು ಕಥನಕ್ರಮದಲೇ ನಿರೂಪಕಿ ಅಭಿವ್ಯಕ್ತಗೊಳಿಸುತ್ತಾರೆ.

ರಸ್ತೆ ಸುಗಮವಾಗಿದ್ದದರ ಕಾರಣದಿಂದಾಗಿ ಮನೆಯವರು ಮನೆಯ ಆಜುಬಾಜುನವರು ಒಟ್ಟಾಗಿ ಚಾವಡಿಯಲ್ಲಿ ಟಿವಿಲಿ ಸಿನಿಮಾ ನೋಡುವಂತಾದ್ದು, ಟಿ.ವಿಯಲ್ಲಿ ಪ್ರಸರಗೊಳ್ಳುವ

ನಿಷೇದಾತ್ಮಕ ಹಿಂಸೆ, ಅತ್ಯಾಚಾರ, ಗೌಜುಗದ್ದಲಕ್ಕೂ ತೆರೆದುಕೊಳ್ಳುವುದು ಕಥೆ ದಾಖಲಿಸುವ ಮತ್ತೊಂದು ಮಜಲು. ರಸ್ತೆ ನಿರ್ಮಾಣವಾದ ಮೇಲೆ ಉಂಟಾದ ಎರಡು ತೆರನಾದ ಬದಲಾವಣೆಗಳನ್ನೂ ನಿರೂಪಕಿ ಕಟ್ಟಿಕೊಡುತ್ತಾಳೆ. ಒಂದು ಸಕರಾತ್ಮಕ ಮತ್ತೊಂದು ಋಣಾತ್ಮಕ. ಪುರುಷರೂಪನ ರಾಮಣ್ಣ ಪೇಟೆಗೆ ಹಾಲು ಸಾಗಿಸಿ ಹಾಲಿನ ದುಡ್ಡಿನಲ್ಲಿ ಹಾಲ್ಕೋಹಾಲು ಸೇವಿಸುವುದು; ಬರ್ರನೆ ಬರುವ ಲಾರಿಯಲ್ಲಿ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದ ಎರಡು ಮೂಟೆ ಅಡಿಕೆಯನ್ನು ರಾಮಣ್ಣ ಲಾರಿಗೆ ಹಾಕಿಸಿ ಮಾರಿದ ದುಡ್ಡಿನಲ್ಲಿ ಭೋಗಾಪೇಕ್ಷೆಗೆ ಸಾಗುವುದನ್ನೂ ಕಥೆಗಾರ್ತಿ ಸ್ವಾರಸ್ಯಕರವಾಗಿ ನಿರೂಪಿಸುತ್ತಾರೆ.

ರಾಮಣ್ಣನಲ್ಲಾದ ನಕಾರಾತ್ಮಕ ಬದಲಾವಣೆ ನಕಾರಾತ್ಮಕ ಮನೋಭಾವವನ್ನು ಖಂಡಿಸಲು ಯತ್ನಿಸುವ ರುಕ್ಮಿಣತ್ತೆ ಮತ್ತು ಅವಳನ್ನು ಸಮಾಧಾನಗೈಯುವ ವಾಸುದೇವ ಚಿತ್ರಣವನ್ನು ಕಥೆಗಾರ್ತಿ ಕಥೆಯ ಅಂತ್ಯದಲ್ಲಿ ಕಟ್ಟಿಕೊಡುತ್ತಾರೆ. 'ಅಯ್ಯೋ, ಮಣೀ ಮಣಿಯಾ ನಿಂಗೇನಾತ್ತ ಹಂಗರೇ.... ಯಂತದಾ...ಎಲ್ಲಿಗಾ?...' ಅಂತ ರುಕ್ಮಿಣತ್ತೆ ಹೊಸಿಲು ಹಾರಿ ಹಾರಿ ಬರುವಾಗ ಲಾರಿ ಎಲ್ಲಿತ್ತು? ಗಂಟಲು ಕಟ್ಟಿ ನೋಡುತ್ತ ನಿಂತ ಅವರನ್ನು ಮೆಲ್ಲ ಹೆಗಲು ತಟ್ಟಿ ವಾಸ್ತೇವ "ಆಯ್ತಲೆ... ಹೋಯಾಯ್ತಲೆ... ಹೋಯ್ಲಿ ಬಿಡ್...' ಎಂದು ಚಿಂತೆ ಕಪ್ಪಿಟ್ಟ ಮುಖದಲ್ಲಿ ಸಮಾಧಾನ ಮಾಡುತ್ತಿದ್ದೆ."[೨೯] ಕಥೆಯ ಹಂದರದೊಳಗೆ ಸುಳಿಯುವ ಪಿತೃಪ್ರಧಾನತೆ ಸೂಚ್ಯ ಸ್ತ್ರೀ ಪರವಾದ ಮತ್ತು ಲೋಕದೆಲ್ಲೆಡೆ ಕಾಣಿಸುವ ಸಾಮಾಜಿಕ ಬದಲಾವಣೆಗಳು ಮತ್ತದರ ಫಲೋತ್ಪನ್ನಗಳನ್ನು ಕಥೆಗಾರ್ತಿ 'ಮನೆಯವರೆಗಿನ ಹಾದಿ' ಕಥನದಲ್ಲಿ ಬಿಂಬಿಸುತ್ತಾರೆ.

ತನ್ನ ಪ್ರತಿಭೆಯಿಂದ ಕನ್ನಡಸಾಹಿತ್ಯದಲ್ಲಿ ಅಸ್ಮಿತೆಯ ಅಚ್ಚೊತ್ತಿರುವ ವೈದೇಹಿ ಸೂಕ್ಷ್ಮ ಗ್ರಹಿಕೆಯವರು. ಸಂವೇದನಾಶೀಲರು ಮತ್ತು ಕಥನಕ್ರಮದಲ್ಲಿ ಅನನ್ಯ ಕುಶಲಮತಿಯಾಗಿಯೂ ಕಾಣಿಸಿಕೊಳ್ಳುವ ಪರಿ ಗಮನಾರ್ಹವಾದುದು. ಅನುಭವ ಸಾಂದ್ರತೆ, ಸೂಕ್ಷ್ಮ ಭಾಷಾಬಳಕೆ ಮತ್ತು ಸ್ತ್ರೀ ಕೇಂದ್ರಿತ ಆಶಯಗಳನ್ನೊಳಗೊಂಡ ವೈದೇಹಿಯವರ ಕಥನಜಗತ್ತು ಸಹೃದಯನ ಅರಿವಿನ ಕಣ್ತೆರೆಸುವಂತಾದ್ದು. ತಾನು ಬೆಳೆದ ಕುಂದಾಪುರ ಪ್ರದೇಶ ಪರಿಸರದ ಸರಹದ್ದನ್ನು ಕಥನಜಗತ್ತಿನ ಮುಖ್ಯ ಭೂಮಿಕೆಯಾಗಿಟ್ಟುಕೊಂಡು ಪ್ರಾದೇಶಿಕ ಭಾಷಾಸೊಗಡನ್ನು ಕಥನಕ್ರಮದೊಳಗೆ ಮಿಳಿತಗೊಳಿಸಿಕೊಂಡು ಕಥಾನಿರೂಪಣೆಯೊಂದಿಗೆ ಕಥನಕ್ಕೆ ವಿಶಿಷ್ಟ ಆವರಣವನ್ನು ರೂಪಿಸುತ್ತಾರೆ. ಒಂದು ಪ್ರದೇಶದ ಸಮುದಾಯವನ್ನು ಕಥನದಲ್ಲಿ ಚಿತ್ರಿಸುತ್ತಿರುವಂತೆಯೇ ಆ ಸಮುದಾಯದ ಅಂತರಾಳದ ಪರಿಶೋಧನೆಯನ್ನು ಮಾಡಬಯಸುವ ವೈದೇಹಿ ಸಾಹಿತ್ಯಿಕ ಪಾತಾಳಗರಡಿಯನ್ನಿಡಿದು ಆ ಪ್ರಾದೇಶಿಕತೆಯ ಆ ಸಮುದಾಯದ ಓರೆಕೋರೆಗಳನ್ನು, ತಪ್ಪು ಒಪ್ಪುಗಳನ್ನು, ಸಂಪ್ರದಾಯ ಆಧುನಿಕತೆ ಮುಂತಾದವುಗಳನ್ನು ಶೋಧಿಸ ಹೊರಟಿದ್ದಾರೆ ಎನಿಸುತ್ತದೆ.

ಕುವೆಂಪುರವರು ಮಲೆನಾಡನ್ನು, ತಮ್ಮ ಸಾಹಿತ್ಯಕ್ಕೆ ಸ್ಫೂರ್ತಿಯಾಗಿಯೂ, ಹಿನ್ನೆಲೆಯಾಗಿಯೂ, ದ.ರಾ. ಬೇಂದ್ರೆಯವರು ಧಾರವಾಡದ ಪರಿಸರವನ್ನು ತಮ್ಮ ಬರವಣಿಗೆಯ ಮೂಲಧಾತುವಾಗಿ ಭಾವಿಸಿ ಬರವಣಿಗೆಯಲ್ಲಿ ಆ ಪರಿಸರದ ಬಳಕೆಯ ಆಡುಮಾತನ್ನು ಕಾವ್ಯಕ್ಕೆ ಬಳಸಿಕೊಳ್ಳುತ್ತಾರೆ. ಶಿವರಾಮಕಾರಂತರು ತಮ್ಮ ಕಾದಂಬರಿ ಜಗತ್ತಿನ ಪರಿಸರವನ್ನು ಆಯ್ದುಕೊಂಡದ್ದು ಕೋಟಾ ಮತ್ತು ಕಡಲು. ಚಂದ್ರಶೇಖರ ಕಂಬಾರರ ನಾಟಕಗಳ ಅವತರಣಿಕೆ ರೂಪುಗೊಳ್ಳುವುದೇ ಶಿವಪುರವೆಂಬ ಸಣ್ಣ ಗ್ರಾಮದ ಪರಿಸರದಲ್ಲಿ. ಒಂದು ಪ್ರದೇಶವನ್ನು ಮುಖ್ಯ ಭೂಮಿಕೆಯಾಗಿಟ್ಟುಕೊಂಡು ಪ್ರಾದೇಶಿಕ ಬಣ್ಣವನ್ನು ಮೇಲ್ಕಂಡವರೆಲ್ಲರೂ ನೀಡಿದರೂ ಅದರೊಳಗೆ ಇದ್ದುಕೊಂಡು ಅದರ ಅನುಭವ; ಅದರಾಚೆಗಿನ ಮಾನವ ಜಗತ್ತಿನ ಸಾರ್ವತ್ರಿಕ ಸತ್ಯಗಳನ್ನು ಸಾರುವವರಾಗಿರುತ್ತಾರೆ. ಪರಿಣಾಮವಾಗಿ ಕಾಲದೇಶವನ್ನು ಮೀರುವ ಚಿರಸ್ಮರಣೀಯ ಲೇಖಕರಾಗಿ ಬಿಡುತ್ತಾರೆ. (ಅಂತರಾಷ್ಟ್ರೀಯ ಖ್ಯಾತಿಯ ಇಂಗ್ಲೀಷ್ ಕಾದಂಬರಿಕಾರನಾದ ಕನ್ನಡಿಗ ಆರ್.ಕೆ. ನಾರಾಯಣ್ ಮಾಲ್ಗುಡಿಯನ್ನು ತನ್ನ ಬಹುಪಾಲು ಕಾದಂಬರಿಗಳ ಒಂದು ಸೀಮಿತ ಪ್ರದೇಶವಾಗಿ ತೆಗೆದುಕೊಂಡು ಅದಕ್ಕೆ ಅದರದೇ ಆದ ಭಾರತೀಯ ದೇಸಿಯತೆಯ ಬಣ್ಣವನ್ನು ನೀಡುತ್ತಾರೆ. ತನ್ಮೂಲಕ ವಿಶಾಲ ಭಾರತೀಯತೆ, ಭಾರತತ್ವ ಮತ್ತು ಸಾರ್ವತ್ರಿಕತೆಯನ್ನು ತರುತ್ತಾರೆ. ಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರ ಥಾಮಸ್ ಹಾರ್ಡಿ ತನ್ನ ಕಾದಂಬರಿಗಳ ಪರಿಸರಕ್ಕೆ ತನ್ನ ವ್ಯಕೇಕ್ಸ್ ಪ್ರಾಂತ್ಯವನ್ನೇ ಆಯ್ದುಕೊಳ್ಳುವುದರ ಮುಖೇನ ಆವ್ಯಜೇಕ್ಸ್ ಪ್ರಾಂತ್ಯವನ್ನು ಕಥಾ ಆವರಣವಾಗಿ ಬಳಸಿಕೊಳ್ಳುವುದು ಮತ್ತು ಆ ಆವರಣದೊಳಗಿದ್ದುಕೊಂಡೇ ಆವರಣವನ್ನು ಮೀರುವ ಅನಂತತೆಯತ್ತ ನಡೆಯುವ ಅನನ್ಯ ಕಾದಂಬರಿಕಾರ.)

ವೈದೇಹಿಯವರ ಸಣ್ಣಕಥೆಗಳ ಅಧ್ಯಯನ ಮಾಡಿದಾಗ ಕಥಾಭೂಮಿಕೆ ಪ್ರಾದೇಶಿಕತೆಯ ಸುತ್ತ ಸುತ್ತುತ್ತಾ ಕುಂದಾಪುರ ಪ್ರಾಂತ್ಯದ ಎಲ್ಲಾ ಸೊಗಡು, ಸೊಬಗು ಬಳಸಿಕೊಂಡು ಮೈದಾಳಿಸುವುದು ಸುಸ್ಪಷ್ಟ. ಯಾವುದೇ ಸೃಜನಶೀಲ ಲೇಖಕನಾದರೂ ತನ್ನ ಸ್ಥಳೀಯತ್ವವನ್ನು ಬಲಿಗೊಡದೇ ಸ್ಥಳೀಯತ್ವದಲ್ಲೆ ಸಾರ್ವತ್ರಿಕ, ಸರ್ವಕಾಲಿಕ ಚಿರಂತನ ಮೌಲ್ಯಗಳನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ತನ್ನ ಸಾಹಿತ್ಯಾಭಿವ್ಯಕ್ತಿಯನ್ನು ಪ್ರಕಟಪಡಿಸುವನು. ಸ್ಥಳೀಯತ್ವದ ಕಾಂತೀಯತೆಯ ಗುರುತ್ವಾಕರ್ಷಣೆಯಲ್ಲಿ ಮೈಮರೆಯದೆ ಅತೀ ಭಾವಾತಿರೇಕಕ್ಕೆ ಒಳಗಾಗದೆ ಮಾನವ ಮನಸ್ಸಿನ ಅಂತರಾಳದ ತುಮುಲ ತುಡಿತಗಳನ್ನು, ಒಲವು ನಿಲುವುಗಳನ್ನು, ಆಶಯ ಮತ್ತು ಆಸೆಗಳನ್ನು ಮಾನವಕುಲಕ್ಕೆ ಅನ್ವಯಿಸುವ ರೀತಿಯಲ್ಲಿ ಸಾಹಿತ್ಯದ ಚೌಕಟ್ಟಿನಲ್ಲಿ ಸೊಬಗತೆಗೆ ಲೋಪವಾಗದಂತೆ ತರುವ ಪ್ರಯತ್ನಶೀಲನಾಗಿರುತ್ತಾನೆ.

ಈ ಹಿನ್ನೆಲೆಯಲ್ಲಿ ಕಥೆಗಾರ್ತಿ ವೈದೇಹಿಯವರ ಕಥನ ಕ್ರಿಯೆಯನ್ನು, ಕಥನಕ್ರಮವನ್ನು ಅವಲೋಕಿಸುವಾಗ ಸ್ಥಳೀಯ ಸತ್ವವನ್ನು ಹೀರಿಕೊಂಡು ಅದರ ಫಲವತ್ತತೆಯಲ್ಲೇ ಹದಗೊಂಡು ಅವೆಲ್ಲವನ್ನು ಅವಾಹನೆಗೊಂಡವರಂತೆ ಕಂಡುಬರುತ್ತಾರೆ.

ಕಥಾ ಭಿತ್ತಿಯಲ್ಲಿ ಮಿಳಿತಗೊಂಡ ಮಾನವನ ಕಾಳಜಿ, ಕಳವಳ, ನೋವು, ನಲಿವು, ಆಕಾಂಕ್ಷೆ, ದುಃಖದುಮ್ಮಾನ, ಅಳಲು, ಅರಿವು, ಪ್ರೇಮ, ಕಾಮ ಇತ್ಯಾದಿ ಸಾರ್ವತ್ರಿಕೆ ವಸ್ತುಗಳನ್ನು ಬಿಂಬಿಸುವುದರ ಮುಖೇನ ಸ್ಥಳೀಯತ್ವದಲ್ಲಿ ಸಾರ್ವತ್ರಿಕ ಸತ್ಯ ಸಾರುವ ಲೇಖಕಿ. ಉದಾಹರಣೆಯಾಗಿ ಅವರ ಕಥೆಗಳಲ್ಲಿ ಪ್ರಮುಖವಾದ ಅಕ್ಕು ಪ್ರತಿಫಲಿಸುವ ಹೆಣ್ತನ, ಹೆಂಗರುಳು, ವಿವಾಹಿತ ಸ್ತ್ರೀಯ ಸುಪ್ತ ಮನಸ್ಸಿನ ಬಯಕೆಗಳು ಇತ್ಯಾದಿ ಸ್ತ್ರೀ ಚಿಂತನೆಗಳು ಜೊತೆಜೊತೆಗೆ ಹೆಣ್ತನವನ್ನು ಕಮರಿಸಿ, ಕುಗ್ಗಿಸಿಬಿಡುವ ಯಾಜಮಾನ್ಯ ಪುರುಷ ಪ್ರಾಧಾನ್ಯತೆ ಮುಖ್ಯವಾಗುತ್ತವೆ. ಈ ಕಥೆಯ ವಿಶೇಷವೆಂದರೆ 'ಅಕ್ಕು' ಎಂಬ ಸ್ತ್ರೀಯ ಸ್ವಚ್ಛಂದ ಮನಸ್ಸನ್ನು ಕಥೆಯ ಪುರುಷ ಪಾತ್ರಗಳಾದ ಅಜ್ಜಯ್ಯ ಮತ್ತು ವಾಸು ಚಿಕ್ಕಪ್ಪಯ್ಯ ಅಕ್ಕುಗೆ ದೈಹಿಕವಾಗಿ ಹಿಂಸೆ ನೀಡಿದರೂ, ಏನೆಲ್ಲಾ ಭಯವೊಡ್ಡಿದರೂ ಅಕ್ಕುವಿನ ಸ್ವಾಯತ್ತತೆಯನ್ನು ನಿರ್ಭಿಡೆತನವನ್ನು ಮತ್ತು ಸಾಮಾಜಿಕ ವಿಮರ್ಶೆಯನ್ನು ಭಗ್ನ ಮಾಡಲಾಗುವುದಿಲ್ಲ.

ಅಕ್ಕುವಿನ ಹುಚ್ಚು ಸ್ವಾಯಾರ್ಜಿತವಾದುದಲ್ಲ, ಅದು ಕೌಟುಂಬಿಕ ಪರಿಸರ ಮತ್ತು ಸಾಮಾಜಿಕ ಪರಿಸರದಿಂದ ಸೃಷ್ಟಿಯಾಗಿ ಅಕ್ಕುವಿಗೆ ಬಳುವಳಿಯಾಗಿ ಬಂದುದು. ಮಾಡಿಕೊಂಡ ಗಂಡ ದಾಂಪತ್ಯ ಸುಖವನೀಯದೆ ದೇಶಾಂತರಿಯಾದದ್ದು; ದಾಂಪತ್ಯದ ಸಾಂಗತ್ಯದಲ್ಲಿ ಸೌಹಾರ್ದತೆಯ ಸುಖ ಅನುಭವಿಸಬೇಕಾದ 'ಅಕ್ಕು' ಅದರಿಂದ ವಂಚಿತಳಾದವಳು. ಎಲ್ಲಾ ವಿವಾಹಿತ ಸ್ತ್ರೀಯರಂತೆ ತಾನು ಗರ್ಭಧರಿಸಿ ಮಕ್ಕಳನ್ನು ಹೆರಬೇಕೆಂಬ ಅವಳ ಬಯಕೆ ಕೈಗೂಡದೇ ಮರೀಚಿಕೆಯಾಗಿ ಬಿಟ್ಟಿತು. ಈ ಮಧ್ಯೆ ಅವಳ ಎಲ್ಲಾ ವರ್ತನೆಗಳು ಅತೀರೇಕದವೆಂದು ಭಾವಿಸುವ ಮನೆಯ ಗಂಡಸರು ಅವಳ ಮೇಲೆ ಮಾಡುವ ಹಿಂಸೆ ಪರಮಾವಧಿಯದು. ಹೀಗೆ ಸೂಕ್ಷ್ಮಮತಿ ವೈದೇಹಿ ಅಕ್ಕುವಿನ ಪಾತ್ರದ ಮೂಲಕ ಪುರುಷಪ್ರಧಾನ ಸಂಸ್ಕೃತಿ, ಶೋಷಿತ ಸ್ತ್ರೀಸಮಾಜ ಮತ್ತು ಸಾಮಾಜಿಕರು ಇತ್ಯಾದಿಗಳನ್ನು ಬಯಲಿಗೆಳೆಯುತ್ತಾರೆ.

'ಅವಲಂಬಿತರು' ಕಥೆಯು ಶ್ರೇಣಿಕೃತ ಸಾಮಾಜಿಕ ಸ್ಥರವಿನ್ಯಾಸವನ್ನು ಪರಿಚಯಿಸುತ್ತ, ಆ ಸಾಮಾಜಿಕ ಸ್ಥರವಿನ್ಯಾಸದ ಮೇಲುವರ್ಗ ಮತ್ತು ಕೆಳವರ್ಗದ ಮುಖಗಳನ್ನು ಅನಾವರಣಗೊಳಿಸುತ್ತದೆ. ಅಸಹಾಯಕಳಾದ ಅಹಲ್ಯೆಯು ಆರ್ಥಿಕವಾಗಿ ಮತ್ತು

ಸಾಮಾಜಿಕವಾಗಿ ದುರ್ಬಲಳು. ಅವಳೊಡತಿ ಮನೆಗೆಲಸ ನಿರ್ವಹಣೆಗೆ ಮತ್ತು ತನ್ನ ಕೂಸಿನ ಆರೈಕೆಗೆ ಇನ್ನೂ ರಜಸ್ವಲೆಯಾಗಿಲ್ಲದ ಅಹಲ್ಯೆಗಳನ್ನು ನೇಮಕ ಮಾಡಿಕೊಳ್ಳುವುದು ಅಹಲ್ಯೆಳ ಅಸಹಾಯಕತೆಯನ್ನು ಯಜಮಾನಿಕೆಯ ದರ್ಪದಲ್ಲಿ ತನ್ನ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುವ ಒಡತಿ ಕಾರುಣ್ಯ ರಹಿತಳಾಗುತ್ತಾಳೆ. ಮಾನವೀಯತೆಯ ಪ್ರತೀಕವಾಗಬೇಕಿದ್ದ ಒಡತಿಯೆಂಬ ಮಹಿಳೆ ಅಮಾನವೀಯಳು, ಸ್ವಾರ್ಥಪರಳು ಆಗಿಬಿಡುವಲ್ಲಿ ಅವಳೊಳಗಿನ ಪುರುಷಪ್ರಧಾನ ಸಂಸ್ಕೃತಿ ಕಣ್ಣಿಗೆ ರಾಚುತ್ತದೆ. ಸ್ತ್ರೀಯಾಗಿ ಸ್ತ್ರೀತ್ವದ ಕೋಮಲ ಭಾವನೆ, ಆರ್ದ್ರಭಾವ, ಮಾತೃತ್ವ ಇರಬೇಕಾದ ಒಡತಿಯಲ್ಲಿ ಅಮಾನವೀಯತೆ ಮೈದಾಳಿದಿರುವುದನ್ನು ಕಥೆಯ ಹಂದರದಲ್ಲಿ ಕಾಣುತ್ತೇವೆ.

ಪಿತೃಪ್ರಧಾನ ಸಂಸ್ಕೃತಿ ಮಹಿಳೆಯನ್ನು ಎಂದೆಂದಿನಿಂದಲೂ ಶೋಷಿಸುತ್ತಾ ಬರುತ್ತಿದೆ. ಮಹಿಳೆಯನ್ನು ಸೀಮಿತ ಚೌಕಟ್ಟಿನಲ್ಲಿ ಇರುವಂತೆ ಮಾಡಿ ಸ್ವಚ್ಛಂದತೆಯನ್ನು, ಸ್ವಾಯತ್ತತೆಯನ್ನು, ಸೌಂದರ್ಯೋಪಾಸನೆಯನ್ನು ಲಯ ಮಾಡುವ ಪಿತೃಪ್ರಧಾನ ಸಂಸ್ಕತಿ ಮಹಿಳೆಯ ಸಮಾನತೆಯನ್ನು ಸಮಾಧಿ ಮಾಡಿಬಿಟ್ಟಿದೆ. ಸಮಾನ ಸಾಮಾಜಿಕ ಅವಕಾಶಗಳಿಲ್ಲದೆ ಮಹಿಳೆ ಆರ್ಥಿಕವಾಗಿ ಪುರುಷನಿಗೆ ಅವಲಂಬಿತಳಾದವಳು. ಸಾಮಾಜಿಕವಾಗಿ ಸಣ್ಣ ಬದಲಾವಣೆ ಮಹಿಳೆಯ ಬದುಕಿನ ಕ್ರಮದಲ್ಲಿ ಹೊಸ ದಾರಿ ತೋರಿಸಬಹುದಾದರೆ ಅದಕ್ಕವಳು ಸದಾ ಧನ್ಯಳು. ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು ಎಂಬ ಕಥೆಯಲ್ಲಿ ಸೂಲಗಿತ್ತಿ ಲಿಲ್ಲಿಬಾಯಿ ಅವರಿವರ ಮನೆಗಳ ತಾಯಿ ಮಗುವಿನ ಚಾಕರಿ ಮಾಡಿಕೊಂಡಿರುವವಳು ಊರಿಗೆ ಗುಲಾಬಿ ಟಾಕೀಸು ಆಗಮನವಾಗುತ್ತಿದ್ದಂತೆ ಅವಳಲ್ಲಿ ಹೊಸತನದ ಬದಲಾವಣೆ ಅಪೇಕ್ಷೆಯನ್ನು ಬೆಳೆಸುತ್ತಿದೆ. ಜೊತೆಗೆ ಊರಿನ ಕುಲೀನ ವರ್ಗದ ಗೃಹಬಂಧಿತರಾದ ಸ್ತ್ರೀಯರ ಮೇಲೂ ಹೊಸ ಬದಲಾವಣೆಯ ಸಂಚಲನವನ್ನು ಉಂಟುಮಾಡುತ್ತದೆ. ಲಿಲ್ಲಿಬಾಯಿ ಗುಲಾಬಿ ಟಾಕೀಸಿನ ಗೇಟ್‌ಕೀಫರ್ ಆಗಿ ನವೀರಾದ ವಾಯ್ಲ್‌ಸೀರೆ ಕೊಂಡುಕೊಳ್ಳುವುದು ಇತ್ಯಾದಿ ಅವಳ ಬದುಕಿನಲ್ಲಿ ಆಧುನಿಕತೆಯ ಹೊಸತನದ ಬದಲಾವಣೆ ಕಂಡುಬರುವುದು. ಇತ್ತ ಮೇಲುವರ್ಗದ ಹೆಣ್ಣುಮಕ್ಕಳು ಧೈರ್ಯವಾಗಿ ಗಂಡಸರಿಗೆ ತಾವು ಸಿನಿಮಾಕ್ಕೆ ಹೋಗುತ್ತೇವೆಂದು ಧೃಡವಾಗಿ ಹೇಳುವಷ್ಟು ಮನೋಸ್ಥೈರ್ಯ ರೂಪಿಸಿಕೊಳ್ಳುವುದು, ಸಿನಿಮಾಕ್ಕೆ ಹೋಗಲು ಕಾಸಿಗಾಗಿ ಗಂಡಸರ ಬಳಿ ಅಷ್ಟಿಷ್ಟು ಸುಳ್ಳುಹೇಳುವ ಕೌಶಲವನ್ನು ಕಲಿತ ಹೊಸ ಬದಲಾವಣೆಗೆ ಅಣಿಯಾಗುತ್ತಾರೆ. ಹೀಗೆ ಗುಲಾಬಿ ಟಾಕೀಸಿನ ಮೂಲಕ ಉಂಟಾದ ಬದಲಾವಣೆ ಸಣ್ಣ ಅಲೆಗಳ ರೀತಿಯಲ್ಲಿದ್ದರೂ ಅದು ಉಂಟು ಮಾಡಿದ

ಕೌಟುಂಬಿಕ ಮತ್ತು ಸಾಮಾಜಿಕ ಸಂಚಲನ ಅತ್ಯಂತ ಪ್ರಮುಖವಾದದು. ಹೀಗೆ ವೈದೇಹಿ ಸಮೂಹ ಮಾಧ್ಯಮವಾದ ಸಿನೆಮಾ ಉಂಟುಮಾಡುವ ಬದಲಾವಣೆ ಮತ್ತು ಸ್ತ್ರೀಜಾಗೃತಿ ಕಾಲೋಜಿತವಾದದು ಮತ್ತು ಸಹಜವೂ ಆದದು.

'ಸೌಗಂಧಿಯ ಸ್ವಗತಗಳು' ಉದ್ಯೋಗಸ್ಥ ಅವಿವಾಹಿತ ಮಹಿಳೆ ಎದುರಿಸುವ, ಬಿಕ್ಕಟ್ಟುಗಳು, ಅವಳ ಮನದಾಳದಲ್ಲಿ ನಡೆಯುವ ತುಡಿತಗಳು ತುಮುಲಗಳು ಮತ್ತು ಅವಳ ಸ್ವಾತಂತ್ರ್ಯಾಪೇಕ್ಷೆಯನ್ನು ಸಾರುವ ಕಥೆ. ಶೀರ್ಷಿಕೆಯೇ ಅಭಿವ್ಯಕ್ತಿಸುವಂತೆ ಅವು 'ಸೌಗಂಧಿಯ ಸ್ವಗತಗಳು'. ಸ್ವಾರ್ಥ ಪುರುಷಪ್ರಧಾನ ಸಮಾಜದ ಬಗ್ಗೆ ಸೌಗಂಧಿಯ ಒಳನೋಟ, ಅಸ್ಥಿತ್ವ ಮತ್ತು ಅಸ್ಮಿತೆಗಾಗಿ ಸದಾ ಹೆಣಗಾಡುವ, ಸ್ವಾಯತ್ತ ಬದುಕನ್ನು ಕಟ್ಟಿಕೊಳ್ಳಬೇಕೆಂಬ 'ಸೌಗಂಧಿಯ' ಮಹತ್ವಾಕಾಂಕ್ಷೆ ಮತ್ತು ಆ ಎಲ್ಲಾ ನಿಲುವುಗಳಿಗೆ ವ್ಯತಿರಿಕ್ತವಾಗಿ ಪುನಃ 'ಸೌಗಂಧಿ' ಪಿತೃಪ್ರಧಾನ ಸಂಸ್ಕೃತಿಯ ಸಮಾಜೋ ಕೌಟುಂಬಿಕ ಸಂಸ್ಥೆಯ ಬಂಧಿಯಾಗಬೇಕಾದ ಕ್ರೂರವ್ಯಂಗ್ಯವನ್ನು ಧ್ವನಿಸುತ್ತದೆ. ಪುರುಷ ಲಿಂಗರಾಜಕಾರಣದ ಭೂಮಿಕೆಯಲ್ಲಿ ಪುರುಷನು ರೂಪಿಸಿದ ಸಂಪ್ರದಾಯಗಳು, ಕಟ್ಟುಪಾಡುಗಳು, ರೀತಿರಿವಾಜುಗಳು, ಇತ್ಯಾದಿಯಡಿಯಲ್ಲಿ ಆರ್ಥಿಕವಾಗಿ ಸಶಕ್ತಳಾಗಿದ್ದಾಗ್ಯೂ ಸೌಗಂಧಿ ಸ್ವಾತಂತ್ರ್ಯರಹಿತಳಾಗಿ ಪುರುಷನ ಕಟ್ಟುಪಾಡಿನಲ್ಲಿ ಒದ್ದಾಡಬೇಕಾದ ಅಸಹಾಯಕ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಸ್ತ್ರೀಯ ಬಯಸುವ, ಸ್ತ್ರೀಸ್ವಾತಂತ್ರ್ಯವನ್ನು ಪುರುಷಪ್ರಧಾನ ಸಮಾಜ ಹರಣ ಸಮಾಡಿರುವುದು, ಸೌಗಂಧಿಯ ಸ್ವಗತಗಳಲ್ಲಿ ಬಯಲು ಮಾಡುವುದು.

ಪಾದರಸದಂತಹ ಹುಡುಗಿ 'ಅಮ್ಮಚ್ಚಿ'ಯು ಅಕ್ಕು ತರದವಳು. ಅಮ್ಮಚ್ಚಿ ಮತ್ತು ಅಕ್ಕು ಯಾರ ಮುಲಾಜಿಗೂ ಒಳಗಾಗದೆ, ಯಾರ ಮರ್ಜಿಯಲ್ಲೂ ಇರದೆ ನಿರ್ಬಿಢೆಯಿಂದ ತಮಗೆ ಅನಿಸಿದ್ದನ್ನು ಆಡಿಬಿಡುವವರು. ಆಧುನಿಕತೆಯ ಭಾಗವಾಗಿರಲು ಬಯಸುವ ಅಮ್ಮಚ್ಚಿ ಗುಬ್ಬಿ ರವಿಕೆ ಉಡಬಯಸುವ, ವಾರೆಬೈತಲೆ ತೆಗೆದು ಬಾಚಿಕೊಳ್ಳಬಯಸುವ ಸ್ವತಂತ್ರ್ಯಪ್ರವೃತ್ತಿಯ ಧೈರ್ಯದ ಹುಡುಗಿ. ತನ್ನ ತಾಯಿಯು ವೆಂಕಪ್ಪಯ್ಯ ಎಂಬ ವ್ಯಕ್ತಿಯ ಮೇಲೆ ಅವಲಂಬಿತಳಾಗಿ ಕುಟುಂಬ ನಿರ್ವಹಣೆ ಮಾಡುತ್ತಿದ್ದ ಸಂದರ್ಭದಲ್ಲಿ ಅಮ್ಮಚ್ಚಿ ವೆಂಕಪ್ಪಯ್ಯನ ನಡವಳಿಕೆಗಳ ಬಗ್ಗೆ ಅಸಹನೀಯಳಾಗುವುದು. ಎದೆಯಲ್ಲಿ ಉದಯಿಸಿದ ಭಾವನೆಗಳನ್ನು ಬಚ್ಚಿಟ್ಟುಕೊಳ್ಳದೆ ದಿಟ್ಟವಾಗಿ ಬಿಚ್ಚಿಡುವವಳಾಗುತ್ತಾಳೆ. ಸ್ವಾಭಿಮಾನಿ ಹೆಣ್ಣಾದ ಅಮ್ಮಚ್ಚಿ ಸ್ವತಂತ್ರ್ಯ ಪ್ರವೃತ್ತಿಯವಳು. ಪರತಂತ್ರದಡಿಯಲ್ಲಿ ಜೀವನ ಸಾಗಿಸಬಯಸುವವಳಲ್ಲ. ದುರಂತ ವ್ಯಂಗ್ಯವೋ ಎಂಬಂತೆ ಅಮ್ಮಚ್ಚಿ ಅನಿವಾರ್ಯವಾಗಿ ತನ್ನ ಕಟುಟೀಕೆಗೆ ಒಳಗಾಗುತ್ತಿದ್ದ ವೆಂಕಪ್ಪಯ್ಯನನ್ನೆ ಮದುವೆಯಾಗತ್ತಾಳೆ. ವೈದೇಹಿಯವರ

ಕಥೆಗಳಲ್ಲಿ ಕಂಡು ಕಾಣದಂತಿರುವ ಲಿಂಗರಾಜಕಾರಣದ ಸುಳಿವನ್ನು ಅಮ್ಮಚ್ಚಿ ಎಂಬ ನೆನಪು ಕಥೆಯಲ್ಲಿಯು ಕಾಣಬಹುದು. ಪುರುಷಪ್ರಧಾನ ಸಂಸ್ಕೃತಿಯ ಪ್ರತಿನಿಧಿಯಾದ ವೆಂಕಪ್ಪಯ್ಯ ಅಮ್ಮಚ್ಚಿಯ ಮೇಲೆ ದೈಹಿಕವಾಗಿ ಆಕ್ರಮಣ ಮಾಡುವುದು ಲೈಂಗಿಕ ಕ್ರೌರ್ಯದ ಪರಮಾವಧಿಯಾಗುತ್ತದೆ. ಒಂಟಿ ಹೆಣ್ಣಿನ ಮೇಲೆ ಲೈಂಗಿಕ ಹಿಂಸೆ ಮಾಡುವ ವೆಂಕಪ್ಪಯ್ಯ ಅತ್ಯಂತ ಅಮಾನವೀಯನು, ಪೈಶಾಚಿಕನೂ ಆಗಿಬಿಡುತ್ತಾನೆ. ವೆಂಕಪ್ಪಯ್ಯನ ಪೈಶಾಚಿಕ ಕೃತ್ಯಕ್ಕೆ ಬಲಿಯಾದ ಅಮ್ಮಚ್ಚಿ ತಾಯಿಯ ಒತ್ತಾಯಕ್ಕೆ ಕಟ್ಟು ಬಿದ್ದು ಅವನನ್ನು ವಿವಾಹವಾಗುವುದು ಕಥೆ ಧ್ವನಿಸುವ ದುರಂತ ವ್ಯಂಗ್ಯ.

ಕಥೆಯೊಳಗಿನ ನಿರೂಪಣೆ ಮಾಡುವ ಹಲವು ನಿರೂಪಕರ ಕಥಾಭಿತ್ತಿಯನ್ನೊಳಗೊಂಡ 'ಕ್ರೌಂಚಪಕ್ಷಿಗಳು' ಲೇಖಕಿಯ ಶ್ರೇಷ್ಟ ಕಥನ ನಿರೂಪಣಾ ಕೌಶಲಕ್ಕೆ ಸಾಕ್ಷಿಯೆಂಬಂತಿದೆ. ಪೌರಾಣಿಕ ಪ್ರತಿಮೆಯಾದ ಕ್ರೌಂಚಪಕ್ಷಿಗಳನ್ನು ಶೀರ್ಷಿಕೆಯಾಗಿಟ್ಟುಕೊಂಡ ಕಥಾವಳಿಯೇ 'ಕ್ರೌಂಚಪಕ್ಷಿ' ಒಂದು ಸಂಕೇತವಾಗಿ, ಪ್ರತಿಮೆಯಾಗಿ ರೂಪಕವಾಗಿ ಕ್ರೌಂಚಪಕ್ಷಿಗಳು ಕಥೆಯಲ್ಲಿ ಮೈದಾಳುವುದು ಕಥಾ ವೈಶಿಷ್ಟ್ಯ. ಸಮಕಾಲೀನ ಜಗತ್ತಿಗೆ ಅನ್ವಯಿಸುವಂತೆ ಕಥೆಗಾರ್ತಿ ಕ್ರೌಂಚಪಕ್ಷಿಗಳ ಪ್ರತಿಮೆಯನ್ನು ನಿಷ್ಕಲ್ಮಶ ಪ್ರೇಮ ಮತ್ತು ವಿರಹದ ರೂಪಕವಾಗಿ ಬಳಸಿಕೊಂಡಿರುವುದು ಕಥೆಯಲೆದ್ದು ಕಾಣುವ ಅಂಶ. ಭಾರತದ ವಿಭಜನೆಯ ಸಂದರ್ಭದಲ್ಲಿ ಉಂಟಾದ ಕೋಮುಗಲಭೆಗೆ ತುತ್ತಾದ ಅಸಂಖ್ಯಾತ ಮಹಿಳೆಯರಲ್ಲಿ ಲಕ್ಷ್ಮೀನಾರಾಯಣಭಟ್ಟರ ಧರ್ಮಪತ್ನಿ ಲಕ್ಷ್ಮಮ್ಮನವರೂ ಕೋಮಗಲಭೆಯಲ್ಲಿ ಬಲಿಯಾದವರು ಅಸಂಖ್ಯಾತ ಹೆಂಗಳೆಯರು ಎಂಬುದು ಲಕ್ಷ್ಯ ವಹಿಸಬೇಕಾದ ವಿಚಾರ. ಕೋಮುಗಲಭೆಗೆ ತುತ್ತಾಗಿ ಲಕ್ಷ್ಮಮ್ಮಯೆಂಬ ಸ್ತ್ರೀ ತನ್ನ ಪತಿಯಿಂದ ದೂರವಾಗಿ ಪರನಾಡಿನಲ್ಲಿ ಪರ ಪುರುಷನೊಂದಿಗೆ ಹೆಣಗಬೇಕಾದ ದಯನೀಯ ಸ್ಥಿತಿಯನ್ನು ಕಥೆ ಓದುಗರಿಗೆ ಕಾಣಿಸುತ್ತದೆ. ಕಾಲಾಂತರದಲ್ಲಿ ಅಪಹರಣಕ್ಕೊಳಗಾದ ಸ್ತ್ರೀಯರ ವಿನಿಮಯ, ಪುರ್ನವಸತಿ ಇತ್ಯಾದಿ ಅಂಶಗಳು ಗಮನ ಸೆಳೆಯುವ ಅಂಶಗಳು ತನ್ನ ಪತ್ನಿ ಸಿಗಲಿಲ್ಲವೆಂದು ಅತ್ತ ಲಕ್ಷ್ಮಿನಾರಾಯಣಭಟ್ಟರು ಇತ್ತ ತನ್ನ ಪತಿ ತನ್ನನ್ನು ಕಂಡು ಕಾಣದಂತೆ ವರ್ತಿಸಿದ ಮತ್ತು ತನ್ನನ್ನು ತನ್ನ ಮನೆಗೆ ಕರೆದೊಯ್ಯದ ಗಂಡ ಲಕ್ಷ್ಮೀ ನಾರಾಯಣಭಟ್ಟರ ಬಗೆಗೆ ಪತ್ನಿ ಲಕ್ಷ್ಮಮ್ಮ ತಾಳುವ ಜಿಗುಪ್ಸೆ, ಈರ್ವರ ಮಧ್ಯೆ ಯಾರು ಕ್ರೌಂಚಪಕ್ಷಿಗಳೆಂಬ ಸ್ಪಷ್ಟ ನಿಲುವು ತಾಳಲಾಗದೆ ಹೋಗುವುದು ಕಥಾ ಅಂತ್ಯದಲ್ಲಿಯ ತಿರುಳು. ಏನೇ ಆದಾಗ್ಯೂ ಸ್ತ್ರೀಯೆ ವಂಚಿತಳಾದವಳು ಅಪಾರ ಹಾನಿಗೊಳಗಾದವಳು ಅತ್ಯಂತ ಸಂಕಷ್ಟೆಯಾದಾಗ್ಯೂ ಮೌನದಲ್ಲೇ. ಅದೆಲ್ಲವನ್ನು ಸಹಿಸಿಕೊಂಡು ಜೀವನ ಸಾಗಿಸುತ್ತಿರುವವಳು ಎಂಬ ವಸ್ತುವನ್ನು ಕಥೆ ಹಾಸುನಲ್ಲಿ ಸೂಚ್ಯವಾಗಿ ಸೂಕ್ಷ್ಮವಾಗಿ ವೈದೇಹಿ ಕಟ್ಟಿಕೊಡುತ್ತಾರೆ.

ಕನ್ನಡ ಕಥಾಸಾಹಿತ್ಯದಲ್ಲಿ ತನ್ನ ಅಸ್ಮಿತೆಯನ್ನು ಮೂಡಿಸಿರುವ ವೈದೇಹಿಯವರು ಕಥಾಬರವಣಿಗೆಯ ಕಾಯಕದಲ್ಲಿ ಕೌಶಲ ಮೂಡಿಸಿಕೊಂಡು ಮುನ್ನೆಡೆಯುತ್ತಿರುವ ಬರಹಗಾರ್ತಿ. ಪಾಶ್ಚಾತ್ಯ ಜಗತ್ತಿನಲ್ಲಿ ಸ್ತ್ರೀವಾದ ಕಾವು ಪಡೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಭಾರತೀಯ ಸಂದರ್ಭದಲ್ಲಿ ಸ್ಪಷ್ಟವಾದ ಹೆಜ್ಜೆಗಳನ್ನು ಮೂಡಿಸಬೇಕಾಗಿದ್ದ ಹೊತ್ತಿನಲ್ಲಿಯೇ ವೈದೇಹಿಯವರು ಮಹಿಳಾ ಪರವಾದವನ್ನು ಬಿಂಬಿಸತೊಡಗಿದವರು. ಅವರನ್ನು ನಿರ್ದಿಷ್ಟವಾಗಿ ಸ್ತ್ರೀವಾದಿ ಎಂದು ಹೀಗೆ ಪಟ್ಟಿ ಕಟ್ಟಲಾಗದಿದ್ದರೂ ನಿಸ್ಸಂಕೋಚವಾಗಿ ಅದರ ಕಥಾಮಾಲಿಕೆಗಳಲ್ಲಿ ಸ್ತ್ರೀಸಂಬಂಧಿತ ವಸ್ತು, ಸ್ತ್ರೀ ಸಂವೇದನೆ, ಮಹಿಳಾಪರ ಸಹಾನುಭೂತಿ ಸ್ತ್ರೀಸ್ವಾತಂತ್ರ್ಯದ ಆಶಯ, ಬಂಡಾಯ ಹಿಡಿಯಲೆತ್ನಿಸುವ ಗಟ್ಟಿ ಹೆಣ್ಣುಗಳು, ಅಸಹಾಯಕ ಸ್ತ್ರೀಜಗತ್ತು, ಪುರುಷ ಯಾಜಮಾನ್ಯತೆ, ಮತ್ತು ಅದರಡಿಯಲ್ಲಿಯ ಚಕ್ರಕ್ಕೆ ಸಿಕ್ಕು ವೇದನೆಯನ್ನು ಅನುಭವಿಸುತ್ತಿರುವ ಸ್ತ್ರೀಸಂಕುಲ, ಸಂಪ್ರದಾಯ ಆಧುನಿಕತೆಯ ಮದ್ಯೆ ಸಂಘರ್ಷ, ಶಿಕ್ಷಿತ ಅಶಿಕ್ಷಿತ ಮಹಿಳಾಮಣಿಗಳು, ಸ್ತ್ರೀಯರ ಹಕ್ಕುಬಾಧ್ಯತೆಗಳು, ಮಹಿಳೆಗೆ ದೊರಕಬೇಕಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಅವಕಾಶಗಳು ಮತ್ತು ಸಮಾನತೆ ಇತ್ಯಾದಿ ಪ್ರಮುಖಾಂಶಗಳ ಬಗ್ಗೆ ವೈದೇಹಿಯವರ ಕಥೆಗಳು ಬೆಳಕು ಚೆಲ್ಲುತ್ತವೆ. ಯಾವುದೇ ಪಂಥಕ್ಕೆ ಸೀಮಿತಗೊಳ್ಳದೆ ಮಾನವ ಜಗತ್ತಿನ ಹೆಂಗಳೆಯರ, ದಮನಿತರ, ಶೋಷಣೆಗೆ ಒಳಗಾದ ಅಗಣಿತ ಸ್ತ್ರೀಯರ ಕಷ್ಟಕೋಟಲೆಗಳನ್ನು ಬಿಚ್ಚಿಡುವ ಪ್ರಯತ್ನವನ್ನು ಸಾಹಿತ್ಯ ಮಾಧ್ಯಮದ ಮುಖೇನ ಪ್ರಯತ್ನಿಸುತ್ತಿರುವುದು ಸ್ತುತ್ಯಾರ್ಹ ಕಾರ್ಯ. ಅವರ ಕಥಾಜಗತ್ತಿನಲ್ಲಿ ಸಂಪ್ರದಾಯ ನಿಷ್ಟ ಬ್ರಾಹ್ಮಣ ಕುಟುಂಬಗಳು ಅಸಂಖ್ಯಾತವಿದ್ದಾಗ್ಯೂ ಸಂಪ್ರದಾಯ ನಿಷ್ಟಳಲ್ಲದ ವೈದೇಹಿಯವರು ಆ ಕುಟುಂಬ ವ್ಯವಸ್ಥೆಯೊಳಗೆ ಧಾರುಣ ಬದುಕನ್ನು ಸವೆಸಿದ ಅಸಹಾಯಕ, ನೊಂದ ಸ್ತ್ರೀ ಸಂಕುಲವನ್ನು ಎಡತಾಕುತ್ತಲೇ ಅವರ ಭಾವಕೋಶವನ್ನು ಅರ್ಥೈಸಿಕೊಳ್ಳಬಯಸುತ್ತಾರೆ.

೫.೪ ಕಥೆಗಳ ಭಾಷೆ

ವೈದೇಹಿ ಅವರು ತಮ್ಮ ಕಥೆಗಳಲ್ಲಿ ಬಳಸಿರುವ ಭಾಷೆ ವಿಭಿನ್ನವಾಗಿದೆ. ಅವರ ಆರಂಭದ ಮೂರು ಕಥಾ ಸಂಕಲನಗಳ ಕಥೆಗಳು ಮೈಸೂರು ಭಾಗದ ಭಾಷೆಯಂತೆ ಬಹುತೇಕ ಕಂಡುಬರುತ್ತವೆ. ನಂತರದ ಕಥೆಗಳಲ್ಲಿ ಕುಂದಾಪುರ, ಉಡುಪಿ ಪರಿಸರದ ಮಧ್ಯಮ ಹಾಗೂ ಕೆಳವರ್ಗಗಳ ಬದುಕು ಸಂಸ್ಕೃತಿಗಳು ತಮ್ಮದೇ ಆದ ರೀತಿಯಲ್ಲಿ ಪ್ರತಿಬಿಂಬಿಸುತ್ತಿರುವ ಭಾಷೆಯನ್ನು ಬಳಸಿದ್ದಾರೆ. ಹೀಗೆ ಅವರು ಇಬ್ಬಗೆಯ ಭಾಷೆಯನ್ನು ಬಳಸಿರುವುದು ವಿಭಿನ್ನವಾಗಿ ಕಾಣುತ್ತದೆ. ಈ ಭಿನ್ನತೆಗೆ ಕಾರಣ ಆರಂಭದಲ್ಲಿ ಅವರ ಕಥೆಗಳು ಸಮಗ್ರ ಕರ್ನಾಟಕಕ್ಕೂ ತಮ್ಮ ಕಥೆಗಳು ಪರಿಚಿತವಾಗಬೇಕು ಎಂಬ ದೃಷ್ಟಿಕೋನ

ಕೆಲಸ ಮಾಡಿರುವಂತಿದೆ. ನಂತರದಲ್ಲಿ ತನ್ನ ನೆಲಮೂಲದ ಸೊಗಡಿನ ಭಾಷೆಯನ್ನು ಕಥೆಗಳಲ್ಲಿ ತರಬೇಕೆಂಬ ಪ್ರಯತ್ನವನ್ನು ಅವರು ಮಾಡುತ್ತಾರೆ. ತನ್ನ ಪ್ರದೇಶದ ಭಾಷೆಯನ್ನು ಕಥೆಗಳಲ್ಲಿ ಬಳಸಬೇಕೆಂಬ ಒತ್ತಡ ಬರಲು ಏನು ಕಾರಣವಿರಬಹುದು ಎಂಬ ಪ್ರಶ್ನೆಯು ಸಹ ಏಳುತ್ತದೆ. ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸಂಸ್ಕೃತಿ, ಉಪಸಂಸ್ಕೃತಿ, ಪ್ರತಿಸಂಸ್ಕೃತಿ, ಪರ್ಯಾಯ ಸಂಸ್ಕೃತಿಯ ಚಿಂತನೆಗಳು ಸಾಹಿತ್ಯದಲ್ಲಿ ನಡೆಯುತ್ತಿರುತ್ತದೆ. ಇದರಿಂದ ಪ್ರೇರಣೆಗೊಳಗಾಗಿ ತನ್ನ ಸಂಸ್ಕೃತಿಯ ನೆಲೆಯಿಂದ ಕಥೆಗಳನ್ನು ಕಟ್ಟಲು ಪ್ರಯತ್ನಿಸುತ್ತಾರೆ.

ವೈದೇಹಿಯವರು ಗೀತಾ ನಾಗಭೂಷಣ ಮತ್ತು ವೀಣಾ ಶಾಂತೇಶ್ವರರಂತೆ ಈ ಬದುಕಿನ ಸಾಂಸ್ಕೃತಿಕ ವಿವರಗಳನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸ ಹೊರಟವರಲ್ಲ. ಈ ಮೂವರಲ್ಲೂ ಭಾಷೆಯ ಬಳಕೆಯ ವಿಚಾರದಲ್ಲಿ ಸಾಕಷ್ಟು ಸಾಮ್ಯತೆಗಳಂತೂ ಇಲ್ಲ. ಅವರೆಲ್ಲ ಭಿನ್ನ ಭಿನ್ನ ಪ್ರಾದೇಶಿಕ ವಲಯಕ್ಕೆ ಸೇರಿದವರು. ಹಾಗಾಗಿ ಮೂವರೂ ಭಾಷೆಯನ್ನು ಆಯಾ ಪ್ರಾದೇಶಿಕತೆಯ ಅನುಗುಣವಾಗಿ ದುಡಿಸಿಕೊಂಡಿದ್ದಾರೆ.

ವೈದೇಹಿ ಅವರ ಭಾಷಿಕ ಜಗತ್ತನ್ನು ಎರಡು ನೆಲೆಗಳಲ್ಲಿ ಗುರುತಿಸಿಕೊಳ್ಳಲಾಗಿರುವುದನ್ನು ಈ ಹಿಂದೆಯೇ ಹೇಳಲಾಗಿದೆ. ಹಾಗಾಗಿ ಅವರ ಕಥೆಗಳಲ್ಲಿ ಭಾಷೆಯನ್ನು ಕುರಿತು ವಿವೇಚಿಸುವಾಗ ೧. ಮೊದಲಘಟ್ಟದ ಕಥಾಸಂಕಲನಗಳಲ್ಲಿ ಭಾಷೆಯ ಬಳಕೆ.(ಮೈಸೂರು) ೨. ನಂತರದ ಕಾಲಘಟ್ಟದ ಕಥಾಸಂಕಲನಗಳಲ್ಲಿ ಭಾಷೆಯ ಬಳಕೆ(ಮಂಗಳೂರು) ಎಂದು ವಿಂಗಡಿಸಿಕೊಳ್ಳಬಹುದು. ಅವರ ಹೆಚ್ಚಿನ ಕಥೆಗಳ ವಸ್ತು ವಿಭಿನ್ನ ವರ್ಗಗಳಿಗೆ ಸಂಬಂಧಿಸಿರುವುದನ್ನು ವರ್ಗದ ಸಾಂಸ್ಕೃತಿಕ ವಿವರಗಳು ಮತ್ತು ಆಯಾ ವರ್ಗದ ಭಾಷೆಯು ಪ್ರಾಸಂಗಿಕವಾಗಿ ಇಲ್ಲಿ ದಾಖಲಾಗಿವೆ. ಕಥನ ಸಾಹಿತ್ಯದಲ್ಲಿ ಪ್ರಾದೇಶಿಕ ಸೊಗಡನ್ನು ಮೇಳವಿಸಿದ ಪ್ರಥಮ ಲೇಖಕಿಯಾಗಿಯೂ ವೈದೇಹಿ ಗಮನ ಸೆಳೆಯುತ್ತಾರೆ. ಅದುವರೆಗೆ ಬೇರೆ ಯಾವ ಲೇಖಕಿಯೂ ಪ್ರಾದೇಶಿಕತೆಯನ್ನು ಇಷ್ಟು ಸಮರ್ಥವಾಗಿ ದುಡಿಸಿಕೊಂಡಿರಲಿಲ್ಲ. ಅಸ್ಪೃಶ್ಯರು ಕಾದಂಬರಿಯನ್ನು ಈ ನೆಲೆಯಲ್ಲಿ ಗಮನಿಸಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಆಡುಭಾಷೆಯ ಬಳಕೆ ಮತ್ತು ನಿರೂಪಣೆಗೆ ಒಗ್ಗಿಸಿಕೊಂಡ ಆಡುಭಾಷೆಯ ಧಾಟಿ ಇವರ ಕಥೆಗಳಿಗೆ ವಿಶಿಷ್ಟ ಪ್ರಾದೇಶಿಕತೆಯ ಮೆರುಗು ನೀಡುತ್ತದೆ. ಅವರ ಕಥೆಗಳಲ್ಲಿ ಬಳಕೆಯಾಗಿರುವುದು ಮೈಸೂರು ಕನ್ನಡ ಮತ್ತು ಕುಂದಾಪುರದ ಕನ್ನಡ. ಈ ಆಡುಭಾಷೆಯಲ್ಲಿ ಸಹಜವಾಗಿಯೇ ಹಾಸ್ಯ ವ್ಯಂಗ್ಯ, ಬೈಗುಳ ಅಶ್ಲೀಲತೆ ವಿಶಿಷ್ಟವಾದವುಗಳು ಭೇದವಿಲ್ಲದಂತೆ ಬೆರೆತು ಹೋಗಿರುವುದನ್ನು ಕಾಣಬಹುದು. ವೈದೇಹಿಯವರ ಕಥೆಗಳಲ್ಲಿ ಬರುವ ಮೇಲ್ಜಾತಿಯ ಬ್ರಾಹ್ಮಣರು, ಕೃಷಿಕಾರ್ಮಿಕರು, ಕೂಲಿ ಹೆಣ್ಣುಗಳು, ಮನೆಗೆಲಸದ ಹೆಣ್ಣುಗಳಲ್ಲಿ ಬಳಕೆಯಾಗುವ ಭಾಷೆ, ಸ್ತ್ರೀಯ ಸ್ವಗತ

ಭಾಷೆ ಮುಂತಾದ ನೆಲೆಯಲ್ಲಿ ಭಾಷೆಯನ್ನು ಆಯಾ ಪಾತ್ರಗಳ ಮೂಲಕವು ಶೋಧಿಸಿಕೊಳ್ಳಬಹುದು. ಭಾಷೆಯನ್ನು ಆಯಾ ಪಾತ್ರಗಳು ಅಭಿವ್ಯಕ್ತಪಡಿಸುವ ಭಾಷಿಕ ದೃಷ್ಟಿಕೋನದ ಮೂಲಕ ಅವರ ತಾತ್ವಿಕ ನಿಲುವುಗಳನ್ನು ಹುಡುಕಾಡಲು ಸಾಧ್ಯವಿದೆ. ಹಾಗಾಗಿ ಭಾಷೆಯು ಯಾವಾಗಲೂ ಪ್ರತಿ ವ್ಯಕ್ತಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಈ ನೆಲೆಯಲ್ಲಿಯೇ ವೈದೇಹಿ ಅವರ ಕಥೆಗಳು ವಿವಿಧ ಭಾಷಿಕ ಜಗತ್ತನ್ನು ಅನಾವರಣ ಮಾಡುತ್ತವೆ.

ವೈದೇಹಿಯವರು ಬಳಸಿಕೊಂಡಿರುವ ಭಾಷೆಗೆ ಸಂಬಂಧಿಸಿದಂತೆ ಕುಂದಾಪುರದ ಹಾಗೂ ಕೋಟಾ ಪ್ರದೇಶದ ಹವ್ಯಕ ಕನ್ನಡ ಭಾಷೆಯು ಸೇರಿಕೊಳ್ಳುತ್ತದೆ. ಹವ್ಯಕರ ಆಡುಮಾತಿನ ಲಯಗಾರಿಕೆ ಅವರ ಕಥೆಗಳಿಗೆ ಸೊಗಡನ್ನು ಹೆಚ್ಚು ಅಧಿಕೃತತೆಯನ್ನು ತಂದುಕೊಟ್ಟಿದೆ. ಆ ಮೂಲಕ ಒಂದು ಸಮುದಾಯದ ಬದುಕನ್ನು, ಸಂಸ್ಕೃತಿಯನ್ನು ಕಟ್ಟಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಅವರ ಕಥೆಗಳಲ್ಲಿ ಕಾವ್ಯಾತ್ಮಕ ನಿರೂಪಣೆಯ ಭಾಷೆ ಗದ್ಯಕ್ಕೂ ಒದಗಿಬಂದಿದೆ.

ಕೊನೆ ಟಿಪ್ಪಣಿಗಳು

೧. ಸುಮಿತ್ರಾಬಾಯಿ. ಬಿ.ಎನ್. ಸ್ತ್ರೀವಾದ, ಪು.ಸಂ.

೨. ವೈದೇಹಿ. ವೈದೇಹಿ ಕಥೆಗಳು, (ಕಥೆ : ಬಂಜೆಂಬ ಶಬುದ ಹೊರಲಾರೆ) ಪು.ಸಂ. ೧೧೭

೩. ಪೂರ್ವೋಕ್ತ. ಪು.ಸಂ.೧೨೫

೪. ವೈದೇಹಿ. ವೈದೇಹಿ ಕಥೆಗಳು, (ಕಥೆ : ಧರ್ಮಸೂಕ್ಷ್ಮ ಪುರಾಣ) ಪು.ಸಂ. ೭೭೩

೫. ವೈದೇಹಿ. ವೈದೇಹಿ ಕಥೆಗಳು, (ಕಥೆ : ಅವಲಂಬಿತರು) ಪು.ಸಂ. ೧೯೫

೬. ಪೂರ್ವೋಕ್ತ. ಪು.ಸಂ.೧೯೭

೭. ಪೂರ್ವೋಕ್ತ. ಪು.ಸಂ.೧೯೭

೮. ವೈದೇಹಿ. ವೈದೇಹಿ ಕಥೆಗಳು, (ಕಥೆ : ಗುಲಾಬಿ ಟಾಕೀಸ್ ಮತ್ತು ಸಣ್ಣ ಅಲೆಗಳು) ಪು.ಸಂ.೩೨೨

೯. ಪೂರ್ವೋಕ್ತ. ಪು.ಸಂ.೩೨೯

೧೦. ಪೂರ್ವೋಕ್ತ. ಪು.ಸಂ.೩೩೦

೧೧. ಪೂರ್ವೋಕ್ತ. ಪು.ಸಂ.೩೩೨

೧೨. ಪೂರ್ವೋಕ್ತ. ಪು.ಸಂ.೩೩೪

೧೩. ವೈದೇಹಿ. ವೈದೇಹಿ ಕಥೆಗಳು, (ಕಥೆ : ಅಮ್ಮಚ್ಚಿಯೆಂಬ ನೆನಪು) ಪು.ಸಂ. ೫೭೯–೫೮೦

೧೪. ಪೂರ್ವೋಕ್ತ. ಪು.ಸಂ.೫೮೨–೫೮೩

೧೫. ಪೂರ್ವೋಕ್ತ. ಪು.ಸಂ.೫೮೬

೧೬. ಪೂರ್ವೋಕ್ತ. ಪು.ಸಂ.೫೮೭

೧೭. ಪೂರ್ವೋಕ್ತ. ಪು.ಸಂ.೫೮೮

೧೮. ವೈದೇಹಿ. ವೈದೇಹಿ ಕಥೆಗಳು, (ಕಥೆ : ಅಕ್ಕು) ಪು.ಸಂ.೧೬೧

೧೯. ಪೂರ್ವೋಕ್ತ. ಪು.ಸಂ. ೧೬೧–೧೬೨

೨೦. ವೈದೇಹಿ. ವೈದೇಹಿ ಕಥೆಗಳು, (ಕಥೆ : ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ) ಪು.ಸಂ.೩೫೯

೨೧. ಪೂರ್ವೋಕ್ತ. ಪು.ಸಂ.೩೬೧

೨೨. ವೈದೇಹಿ. ವೈದೇಹಿ ಕಥೆಗಳು, (ಕಥೆ : ಕ್ರೌಂಚಪಕ್ಷಿಗಳು) ಪು.ಸಂ.೬೭೦–೬೭೧

೨೩. ಪೂರ್ವೋಕ್ತ. ಪು.ಸಂ.೬೭೨

೨೪. ಪೂರ್ವೋಕ್ತ. ಪು.ಸಂ.೬೭೨–೬೭೩

೨೫. ಪೂರ್ವೋಕ್ತ. ಪು.ಸಂ.೬೭೬

೨೬. ವೈದೇಹಿ. ವೈದೇಹಿ ಕಥೆಗಳು, (ಕಥೆ : ಸೌಗಂಧಿಯ ಸ್ವಗತಗಳು) ಪು.ಸಂ.೩೩೬

೨೭. ಪೂರ್ವೋಕ್ತ. ಪು.ಸಂ.೩೩೭

೨೮. ವೈದೇಹಿ. ವೈದೇಹಿ ಕಥೆಗಳು, (ಕಥೆ : ಮನೆಯವರೆಗಿನ ಹಾದಿ) ಪು.ಸಂ.೬೨೫

೨೯. ಪೂರ್ವೋಕ್ತ. ಪು.ಸಂ. ೬೩೨

ಅಧ್ಯಾಯ : ಆರು

ಗೀತಾ ನಾಗಭೂಷಣ ಕಥೆಗಳ : ಅಭಿವ್ಯಕ್ತಿ ಮತ್ತು ತಾತ್ವಿಕತೆ

ಅಧ್ಯಾಯ : ಆರು

ಗೀತಾನಾಗಭೂಷಣ ಅವರ ಕಥೆಗಳ ಅಭಿವ್ಯಕ್ತಿ ಮತ್ತು ತಾತ್ವಿಕತೆ

ಭಾರತೀಯ ಸಾಹಿತ್ಯವನ್ನು ಅವಲೋಕನ ಮಾಡಿದರೆ ಪುರುಷಪ್ರಾಧಾನ್ಯತೆಯಲ್ಲಿ ಸಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲಿ ಸ್ತ್ರೀಯ ಸ್ಥಾನಮಾನ, ಸಂವೇದನೆಗಳನ್ನು ಮಾನವೀಯ ನೆಲೆಗಳಿಂದ ನೋಡಿರುವುದು ವಿರಳ. ಮನುವಿನ ಧರ್ಮಶಾಸ್ತ್ರ, ವೇದ, ಉಪನಿಷತ್, ಪುರಾಣ, ಇತಿಹಾಸ ಪರಂಪರೆಯಲ್ಲಿ ಸ್ತ್ರೀಯು ಶೋಷಣೆಗೊಳಪಟ್ಟಿದ್ದಾಳೆ. ಅದು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳವರೆಗೂ ವಿವರಿಸುತ್ತದೆ. ಈ ಮಾತು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಮಧ್ಯಕಾಲೀನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭಕ್ಕೂ ಅನ್ವಯವಾಗುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ಸ್ತ್ರೀಯು ಪುರುಷ ಸಮಾಜದ ಶೋಷಣೆಯ ಮಡುವಿನಲ್ಲೇ ಮುಳುಗಿದ್ದಾಳೆಂದು ಅರ್ಥವಲ್ಲ. ಆದ್ದರಿಂದ ಹೊರಬಂದ ಕೆಲವರು ಅಸ್ತಿತ್ವವನ್ನು ಕಾಯ್ದುಕೊಳ್ಳಲು ಬರವಣಿಗೆಯನ್ನು ಆರಂಭಿಸಿದ್ದಾರೆ. ಇದನ್ನು ಇಂದು ಮಹಿಳಾ ಸಾಹಿತ್ಯವೆಂದು ನಾವು ಕರೆಯುತ್ತಿರುವುದು.

ಮಹಿಳಾ ಸಾಹಿತ್ಯವು ಹೆಣ್ಣಿನ ಬಗೆಗಿನ ಅನಾಗರಿಕ ಪ್ರವೃತ್ತಿಯನ್ನು ಪ್ರಶ್ನಿಸುತ್ತಾ ಸಾಹಿತ್ಯದ ಮುಖೇನ ಸ್ತ್ರೀ, ಸ್ತ್ರೀತ್ವ, ಸ್ತ್ರೀತನಗಳ ಅರಿವನ್ನು ಮೂಡಿಸಿತು. ಇದು ಅಭಿವ್ಯಕ್ತವಾಗಿದ್ದು ಬರವಣಿಗೆಯ ಆರಂಭದಿಂದಲೂ ಪ್ರತಿಭಟನಾತ್ಮಕವಾಗಿಯೇ. ಈ ಪ್ರತಿಭಟನೆಯ ಸ್ವರೂಪ ಹೇಗಿತ್ತೆಂದರೆ ಹೆಣ್ಣಿನ ಅಸ್ತಿತ್ವದ ಬಗ್ಗೆ ಮೂಲಭೂತ ಅವಶ್ಯಕತೆಗಳ ಕುರಿತು ಸಮಾಜ ನಂಬಿಕೊಂಡು ಬಂದಿದ್ದ ಮೌಲ್ಯದೊಳಗಿನ ಏಕಮುಖ ಒತ್ತಡವನ್ನು ಪ್ರತಿಭಟಿಸುವಂತಾಯಿತು. ಹಾಗಾಗಿಯೇ ಜೀವವಿರೋಧಿ ಸಂಸ್ಕೃತಿಯನ್ನು ವಿರೋಧಿಸಿ ಜೀವಪರ ನಿಲುವನ್ನು ಮೊದಮೊದಲಿಗೆ ಸೂಕ್ಷ್ಮನೆಲೆಯಲ್ಲಿ ಪ್ರತಿಪಾದಿಸುವ ಕೆಲಸವನ್ನು ಮಹಿಳಾ ಬರವಣಿಗೆ ಮಾಡಿತು. ಈ ರೀತಿಯ ಕಾರ್ಯದಲ್ಲಿ ಹಲವಾರು ಬರಹಗಾರರ

ಪ್ರೇರಣೆ, ಪೋಷಣೆ ಇದೆ ಎಂಬುದರಲ್ಲಿ ಯಾವುದೇ ಸಂಶಯಗಳಿಲ್ಲ. ಹೆಣ್ಣೆಂಬ ಕಾರಣದಿಂದ ಸ್ವಾತಂತ್ರ್ಯ, ಸಮಾನತೆ, ಮೂಲಭೂತ ಅವಕಾಶಗಳಿಂದ ಮಹತ್ವವಾಗಿರುವುಗಳ ಪರವಾಗಿ ಹಲವರು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಲೇ ಬಂದಿದ್ದಾರೆ.

ಸಮಾನ ಮನಸ್ಸಿನ ಸ್ತ್ರೀ–ಪುರುಷರಿಬ್ಬರ ಸಮ್ಮಿಳಿತನ ಬರೆಹಗಳು ಮುಖ್ಯವಾಗಿ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದವು. ಹೀಗೆ ಸೃಷ್ಟಿಸಿದ ಬರಹದ ಪ್ರಧಾನ ಉದ್ದೇಶ ದೈಹಿಕವಾದ ವ್ಯತ್ಯಾಸಗಳಿಂದಲೂ ಶೋಷಣೆಗೊಳಗಾಗುತ್ತಿರುವ ಹೆಣ್ಣಿನ ಕುಲಕ್ಕೆ ಸಮಾಧಾನದ ಸ್ವಾತಂತ್ರ್ಯದ ಅವಕಾಶಗಳನ್ನು ಸಮಾಜಕ್ಕೆ ತಿಳಿಸಲು ಸಾಹಿತ್ಯವನ್ನು ಮಾಧ್ಯಮವನ್ನಾಗಿ ಬಳಸಿಕೊಳ್ಳಲಾಯಿತು. ಇದರ ಯಶಸ್ಸೇ ಸಮಾಜದಲ್ಲಿ ಅಸಮಾನತೆ, ಲಿಂಗತಾರತಮ್ಯ, ಏಕಮುಖವಾದ ತೀರ್ಮಾನಗಳನ್ನು ವಿರೋಧಿಸಿ, ತಮ್ಮ ಸ್ಥಾನಮಾನಗಳನ್ನು ಸಾರ್ವತ್ರಿಕ ಹಾಗೂ ಸಾಮಾಜಿಕ ಮೌಲ್ಯಗಳಲ್ಲಿ ಗುರುತಿಸಿಕೊಳ್ಳುವಂತಾಯಿತು. ಪರಿಣಾಮ ಮಹಿಳೆಯರು ತಮ್ಮ ದೃಷ್ಟಿಯಲ್ಲಿ ಬಂಧಿಸಲ್ಪಟ್ಟಿರುವ ಹಿಂದಿನಿಂದಲೂ ಈ ಸಂಕೋಲೆಗಳಿಂದ ಬಿಡುಗಡೆ–ಗೊಳಿಸುವ ನಿಟ್ಟಿನಲ್ಲಿ ಹಲವಾರು ಮಾರ್ಗಗಳನ್ನು ಗುರುತಿಸಿಕೊಂಡರು. ಇದರಲ್ಲಿ ಮುಖ್ಯವಾಗಿದ್ದು, ಪರಿಣಾಮಕಾರಿಯಾಗಿದ್ದು ಸಾಹಿತ್ಯ ಕೃತಿಗಳ ಪಾತ್ರವೇ ಆಗಿದೆ.

ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀ–ಪುರುಷನಿಗೆ ನೇರವಾದ ಸ್ಪರ್ಧೆಯನ್ನು ಎಲ್ಲಾ ರಂಗಗಳಲ್ಲಿ ನೀಡಲು ಶಕ್ತಳಾಗಿದ್ದಾಳೆ. ಇದಕ್ಕೆ ಕಾರಣ ಮೇಲೆ ತಿಳಿಸಿದಂತೆ ಹಿಂದಿನ ಬೆಳವಣಿಗೆಯ ಸ್ತ್ರೀವಾದಿಗಳ, ಸ್ತ್ರೀಪರ ಚಿಂತಕರು ಕಾರಣರಾಗಿದ್ದಾರೆ. ಈ ಪರಂಪರೆಯನ್ನು ಉಳಿಸಿ, ಬೆಳೆಸಿ, ಪ್ರಗತಿಯತ್ತ ಕೊಂಡೊಯ್ಯಲು ಸಾಹಿತಿಗಳು ಸಾಹಿತ್ಯ ಕೃತಿಗಳಲ್ಲಿ ಶ್ರಮಿಸಿದ್ದಾರೆ. ಈ ಹಿನ್ನಲೆಯಲ್ಲಿ ಸ್ತ್ರೀಚಿಂತಕರ ಪರಂಪರೆಯನ್ನು ಸ್ಥೂಲವಾಗಿ ನೋಡಬಹುದು.

ವೇದ, ಪುರಾಣ, ಉಪನಿಷತ್ತುಗಳ ಕಾಲದಿಂದಲೇ ಅಲ್ಲಲ್ಲಿ ಸ್ತ್ರೀಪ್ರಾಧಾನ್ಯತೆ ಕಂಡುಬರುತ್ತದೆ. ಮುಂದುವರಿದಂತೆ ಮುಖ್ಯವಾಗಿ ಸ್ತ್ರೀಯರು ಗುರುತಿಸಿಕೊಂಡಿದ್ದು ವಚನ ಸಂದರ್ಭದಲ್ಲಿ ಮತ್ತು ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ. ಈ ಸಂದರ್ಭದಲ್ಲಿ ಸಾಹಿತ್ಯ ಸಂಬಂಧಿಯಾಗಿ ಸ್ತ್ರೀಪರ ಕಾಳಜಿ ಹೊತ್ತ ಲೇಖಕರು, ಕೃತಿಗಳಲ್ಲಿ ಮುಖ್ಯವಾಗಿ ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ, ಕೆರೂರು ವಾಸುದೇವಚಾರ್ಯರ ಇಂದಿರೆ, ಕಾರಂತ ಕುಂವೆಪುರವರ ಕಾದಂಬರಿಗಳು, ತ್ರೀವೇಣಿ, ತಿರುಮಲಾಂಬ, ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಎಂ.ಕೆ.ಇಂದಿರಾರವರ ಸಣ್ಣಕತೆ, ಕಾವ್ಯಕಾದಂಬರಿಗಳು ಮುಖ್ಯವಾಗಿದ್ದು, ನಂತರ ಕುಂ.ವಿ.ರವರ ಸಾಹಿತ್ಯ, ಬರಗೂರು ರಾಮಚಂದ್ರಪ್ಪ, ರಹಮತ್ ತರೀಕೆರೆ, ರಂಜಾನ್‌ದರ್ಗಾ, ಚಂಪಾ, ವೀಣಾಶಾಂತೇಶ್ವರ, ಬಿ.ಟಿ.ಲಲಿತಾನಾಯಕ್, ವಿಜಯದಬ್ಬೆ, ಹೆಚ್.ಎಲ್.ಪುಷ್ಪ,

ವೈದೇಹಿ, ಬಿ.ಎನ್.ಸುಮಿತ್ರಬಾಯಿ, ನೇಮಿಚಂದ್ರ, ಡಾ.ಎನ್.ಗಾಯಿತ್ರಿ, ಸಾ.ರಾ.ಅಬೂಬಕರ್ ಹಾಗೂ ಗೀತಾ ನಾಗಭೂಷಣ ಮುಂತಾದವರು ಸ್ತ್ರೀಪರ ಚಿಂತನೆಯುಳ್ಳ ಸಾಹಿತ್ಯವನ್ನು ಮುಂದುವರೆಸಿಕೊಂಡು ಬಂದರು. ವಿಶೇಷವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳಾಪರವಾದ ಬರವಣಿಗೆಯಲ್ಲಿ ಪ್ರಧಾನವಾಗಿ ತಮ್ಮನ್ನ ತಾವು ತೊಡಗಿಸಿಕೊಂಡವರಲ್ಲಿ ಗೀತಾ ನಾಗಭೂಷಣರವರು ಮುಖ್ಯರು. ಅವರ ಒಟ್ಟು ಸಾಹಿತ್ಯ ಕೃಷಿಯೇ ಮಹಿಳೆಯರ ಬದುಕಿಗೆ ಮೀಸಲಾಗಿದ್ದಂತೆಯೇ ತೋರುತ್ತದೆ. ಹಾಗಾಗಿ ಗೀತಾ ನಾಗಭೂಷಣವರು ತಮ್ಮ ಬರವಣಿಗೆಯಲ್ಲಿ ಬಳಸಿಕೊಂಡಂತಹ ಭಾಷೆ ಯಾವುದು? ಅದರ ವಸ್ತು ಎಂತಾದ್ದು. ವಿಶೇಷವಾಗಿ ಕತೆಗೆ ಬಳಸಿಕೊಂಡಂತಹ ತಂತ್ರ ಹಾಗೂ ಸಂವಿಧಾನ ಯಾವುದು? ಸ್ತ್ರೀ ಹೇಗೆ ಅಭಿವ್ಯಕ್ತಿಗೊಂಡಿದ್ದಾಳೆ? ಎಂಬುದರೆಲ್ಲದರ ಪ್ರಯತ್ನವೇ ಈ ಅಧ್ಯಯನದ ಬಹುಮುಖ್ಯವಾದ ಉದ್ದೇಶವಾಗಿದೆ.

೬.೧ ಕಥೆಗಳ ವಸ್ತು

ಸಣ್ಣಕಥೆಯ ವಸ್ತುಗಳನ್ನು ಎಲ್ಲೆಲ್ಲಿ ಹುಡುಕಬೇಕು? ಎಲ್ಲೆಲ್ಲಿ ಸಿಗುತ್ತದೆ? ಎಂಬ ಪ್ರಶ್ನೆಗಳಿಗೆ ಉತ್ತರವು ಬರಹಗಾರನ ಅಥವಾ ಕಥೆಗಾರನ ಕಾಣುವ ಕಣ್ಣಿನಲ್ಲಿ ಹಾಗೂ ಕಟ್ಟುವ ಪ್ರತಿಭೆಯಲ್ಲಿಡಗಿರುತ್ತದೆ. ಕಾಣುವ ಕಣ್ಣು ಹಾಗೂ ಕಟ್ಟುವ ಪ್ರತಿಭೆ ಈ ಎರಡು ಇದ್ದರೆ ಸಾಕು ಒಬ್ಬ ಬರಹಗಾರ ಕಥೆ ಕಟ್ಟಬಹುದು. ಯಾವುದೋ ಒಂದು ಸಣ್ಣ ಘಟನೆ ಬೇಕಾದರೂ ಕಥಾವಸ್ತುವಾಗಿ ರೂಪುಗೊಳ್ಳುತ್ತದೆ. ಜೀವನದುದ್ದಕ್ಕೂ ನಡೆಯುವ ಅನೇಕ ಘಟನಾವಳಿಗಳು, ಸನ್ನಿವೇಶಗಳು, ಜೀವನದೊಂದಿಗೆ ನಡೆದ ಜೀವನಾನುಭವಗಳು, ಕತೆಗಾರರಿಗಿರುವ ಪ್ರತಿಭೆ ಹಾಗೂ ಕಲ್ಪನಾ ಶಕ್ತಿಯಿಂದ ಕತೆಗಳಾಗಿ ರೂಪುಗೊಳ್ಳುತ್ತವೆ. ಹಲವಾರು ಅನುಭವಗಳು ಒಂದೇ ರೀತಿಯ ಕತೆಗಳ ಸೃಷ್ಟಿಗೆ ಕಾರಣವಾಗಲಾರವು. ಬದಲಿಗೆ ಸಮಯ ಸಂದರ್ಭಕ್ಕೆ ಅನುಗುಣವಾಗಿ ಕತೆಗಳು ವಿಭಿನ್ನವಾಗಿ ರಚನೆಗೊಳ್ಳುತ್ತವೆ. ಕತೆಯನ್ನು ಬರೆಯುವಾಗ ವಸ್ತು ನಿರ್ವಹಣೆ, ನಿರೂಪಣೆ ಮುಖ್ಯವಾಗಿರುತ್ತದೆ. 'ಅನೇಕ ವೇಳೆ ಕಥಾವಸ್ತು ಭಾವಾವೇಶದ ಫಲವಾಗಿರುವುದಕ್ಕಿಂತಲೂ ಬುದ್ಧಿಶ್ರಮದ ಫಲವಾಗಿರುತ್ತದೆ' ಎಂಬ ಮಾತು ಅರ್ಥಸಮ್ಮತ.

ಮಹಿಳಾ ಸಾಹಿತಿಗಳಲ್ಲಿ ಕನ್ನಡಕ್ಕೆ ಮೊದಲ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟವರು ಗೀತಾ ನಾಗಭೂಷಣ. ಮಹಿಳಾ ಪರವಾದ ಬರವಣಿಗೆಯನ್ನು ಆರಂಭಿಸಿ ಸಮಾಜದಲ್ಲಿನ ಅಸಮಾನತೆ, ಮೌಢ್ಯತೆ, ಸಂಪ್ರದಾಯ ಇತ್ಯಾದಿ ಅಪಮೌಲ್ಯಗಳನ್ನು ಧಿಕ್ಕರಿಸುತ್ತ ಬಂದಿದ್ದಾರೆ. ಬದುಕಿನ ಎಲ್ಲಾ ಮಗ್ಗಲುಗಳನ್ನು ಹಿಡಿದಿಡಬಲ್ಲ

ಸಾಮರ್ಥ್ಯ ಕಥೆಗಳು ಹಾಗೂ ಕಾದಂಬರಿಗಳಲ್ಲಿರುವುದರಿಂದಲೇ ಗೀತಾ ನಾಗಭೂಷಣರು ಈ ಎರಡು ಕ್ಷೇತ್ರಗಳಲ್ಲಿ ಹೆಚ್ಚು ಕೃಷಿ ಮಾಡಿದರು. ಇವರ ಕತೆಗಳಲ್ಲಿ ದಲಿತ ಹೆಣ್ಣುಮಕ್ಕಳ ಮೇಲಿನ ಶೋಷಣೆ ವ್ಯಕ್ತವಾಗಿರುವಂತೆಯೇ ಪ್ರತಿಭಟನೆಯ ತೀವ್ರತೆಯೂ ಅನಾವರಣಗೊಂಡಿದೆ. "ಹೆಜ್ಜೆ ಹೆಜ್ಜೆಗೆ ಗಂಡಿನ ವಂಚನೆ, ಕ್ರೌರ್ಯಕ್ಕೆ ಒಳಗಾದ ಹೆಂಗಸಿನ ಪ್ರತಿಭಟನೆ ತಾಳುವ ಉಗ್ರರೂಪ ಗೀತಾನಾಗಭೂಷಣರ ಸಾಹಿತ್ಯ ಕೈಗನ್ನಡಿಯಂತಿದೆ."[೧] ಎನ್ನುವ ವಿಜಯದಬ್ಬೆಯವರ ಮಾತು ಉಲ್ಲೇಖಾರ್ಹವಾಗಿದೆ. ಈ ಮಾತಿನ ವಿಸ್ತಾರ ಗ್ರಹಿಕೆ ಹೀಗಿದೆ; ಜಾತಿಯ ಕಾರಣಕ್ಕಾಗಿ ಆಗುವ ಅಪಮಾನದ ಸಂಕಟ ದೌರ್ಜನ್ಯ, ದಬ್ಬಾಳಿಕೆಯ ನೋವನ್ನು ಗೀತಾರವರು ತಮ್ಮ ಕತೆಗಳಲ್ಲಿ ವಿವರಿಸುತ್ತಾರೆ.

ಬಡತನ, ದಾರಿದ್ರ್ಯ, ಕ್ರೌರ್ಯ, ದಲಿತ ಹೆಣ್ಣುಮಕ್ಕಳ ಲೈಂಗಿಕ ಶೋಷಣೆ, ಚಿತ್ರಹಿಂಸೆ ಹಾಗೂ ಕೆಳಸಮುದಾಯಕ್ಕೆ ಶಾಪದಂತೆ ಅಂಟಿಕೊಂಡಿರುವ ಬೆತ್ತಲೆ ಸೇವೆ, ಜೋಗಿಣಿಯಂಥ ಸಂಪ್ರದಾಯಗಳನ್ನು ಪಾರದರ್ಶಕವಾಗಿ ಬರವಣಿಗೆಯಲ್ಲಿ ತೆರೆದಿಟ್ಟಿದ್ದಾರೆ. ಸಮಸ್ಯೆಯ ಸುಳಿಯಲ್ಲಿ ಸಿಕ್ಕಿರುವ ದಲಿತ ಹೆಣ್ಣು ಗಂಡು ಮಕ್ಕಳ ಚಿತ್ರಣ ಇವರ ಕಥೆಗಳಲ್ಲಿ ದಟ್ಟವಾಗಿ ಕಂಡುಬರುತ್ತದೆ. ಉತ್ತರ ಕರ್ನಾಟಕದ ಹಳ್ಳಿ ಸೊಗಡಿನ ಭಾಷೆಯನ್ನು ಶೀಲ ಅಶ್ಲೀಲದ ಪದಗಳನ್ನು ಎಗ್ಗಿಲ್ಲದೆ ಬಳಸಿ ಜೋಪಡಿಪಟ್ಟಿ ಸಮಾಜದ ಚಿತ್ರಣವನ್ನು ಚಿತ್ರಿಸಿದ್ದಾರೆ. "ಬದುಕಿನ ಎಲ್ಲಾ ವಿಷಯಗಳನ್ನು ಒಳಗೊಳಿಸುವ ದೃಷ್ಟಿಯಿಂದ ತಮ್ಮ ಕೃತಿಗಳನ್ನು ರಚಿಸುವ ಗೀತಾ ನಾಗಭೂಷಣರವರು, ಶೂದ್ರ ಸಂಸ್ಕೃತಿಯ ಸ್ತ್ರೀಯರು ಗಂಡಸರ ಕಾಮದ ಸಲುವಾಗಿಯೇ, ಮಕ್ಕಳ ಬೆಳವಣಿಗೆಯ ಸಲುವಾಗಿಯೇ ಅನುಭವಿಸುವ ಹಿಂಸೆಗಳನ್ನು ಎದುರಿಸುವ ಸಮಸ್ಯೆಗಳನ್ನು ಗೆದ್ದು ಮೇಲೇಳುವ ಪರಿಯನ್ನು ಅಥವಾ ಸೋತು ಕರಗುವ ರೀತಿಯನ್ನು ಅತ್ಯಂತ ಯಶಸ್ವಿಯಾಗಿ ಮನಸ್ಸಿಗೆ ನಾಟುವ ಹಾಗೆ ಕೃತಿಗಳನ್ನು ಬರೆದು ಸ್ತ್ರೀ-ಪುರುಷರ ನಡುವಿನ ಸಮಾಜದ ಇಬ್ಬಗೆಯ ನೀತಿಯ ಬಗ್ಗೆ ಓದುಗರೆಲ್ಲರೂ ಆಲೋಚಿಸುವಂತ ಮಾಡಿದ್ದು ಉಲ್ಲೇಖನೀಯ."[೨] ಈ ಮಾತು ಸುಮಾರು ಐವತ್ತು ಕಥೆಗಳಿಗೆ ಸಂಪೂರ್ಣವಾಗಿ ಅನ್ವಯಿಸುತ್ತವೆ. ದೇವಿಯ ಹೆಸರಿನ ಮೇಲೆ ನಡೆಸುವ ಸೂಳೆಗಾರಿಕೆ, ನಿರ್ಗತಿಕ ಹೆಂಗಸರ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆ, ಲೈಂಗಿಕ ಶೋಷಣೆ, ಮೂಢನಂಬಿಕೆ, ಹಳ್ಳಿಯ ಅಮಾಯಕ ಅನಕ್ಷರಸ್ಥ ಹೆಂಗಸರ ಶೋಷಣೆ ಸಂಕಟಗಳು ಗೀತಾ ನಾಗಭೂಷಣರ ಕಥೆಗಳ ವಸ್ತುಗಳಾಗಿವೆ.

೬.೨ ಕಥೆಗಳ ಅಭಿವ್ಯಕ್ತಿ ವಿಧಾನ

ತಂತ್ರವೆಂದರೆ ಪ್ರತಿ ಅಣುರೇಣುವಲ್ಲೂ ಸುಪ್ತವಾಗಿ ಅಡಗಿ ಕುಳಿತಿರುವ ಸಾಧನ. ಮಗು ಅತ್ತಾಗ ತಾಯಿ ಮೊಲೆಯುಣಿಸುವುದು, ಅರಳುವ ಹೂವಿನಲ್ಲಿ ಜೇನು ತುಂಬಿ

[illegible]

[illegible]

ಕಣ್ಮನ ತಣಿಸುವುದು, ಸೂರ್ಯಚಂದ್ರರ ಆಗಮನ ನಿರ್ಗಮನ, ಸೃಷ್ಟಿಯ ನಿರಂತತೆ, ಪ್ರಕೃತಿಯ ಚೆಲುವು ಸಾಗರದ ಭೂರ್ಗರೆತ ಹೀಗೆ ಎಲ್ಲದರಲ್ಲೂ ಅಡಗಿ ಕುಳಿತಿರುವುದು ತಂತ್ರವೆ. ಪ್ರತೀ ಆಲೋಚನೆಯಲ್ಲಿ, ಮಾಡುವ ಕೆಲಸದಲ್ಲಿ ಹೆಜ್ಜೆಹೆಜ್ಜೆಗೂ ಒಡಮೂಡುವುದು ತಂತ್ರವೇ. ತಂತ್ರವಿಲ್ಲದೆ ಲೋಕವಿಲ್ಲ ಲೋಕದ ಎಲ್ಲರಿಗೂ ತಂತ್ರ ತಿಳಿಯುವುದಿಲ್ಲ ಬೆಳಕಿಗೆ ಕತ್ತಲಿನಾಸರೆ ಹೇಗೋ, ಕತ್ತಲಿಗೂ ಬೆಳಕಿನಾಸರೆ ತಂತ್ರ ಅದು ಪ್ರತಿಯೊಬ್ಬನಲ್ಲಿ ಹುಟ್ಟುತ್ತಲೇ ಸ್ಥಾಪಿತವಾಗಿರುವ ಬೆಳಕು. ತಂತ್ರದ ಬಗ್ಗೆ ತಿಳುವಳಿಕೆಗಿಂತ ತಪ್ಪು ಗ್ರಹಿಕೆಯೆ ಹೆಚ್ಚು. ಅದು ಬೆಳಕಿಗೆ ಸಮಾನ ತಂತ್ರ ಬೆಳಕನ್ನು ತೋರುವ ದಾರಿಯಷ್ಟೇ ಮತ್ತೇನಲ್ಲ ತಂತ್ರವನ್ನು ಒಂದು ಮಾರ್ಗ ಎಂದವರುಂಟು. ಇದು ಅತಂತ್ರ ಎಂದೂ ಅಂದಿದ್ದಾರೆ, ಆದರೆ ಬದುಕೆಲ್ಲವೂ ತಂತ್ರ. ತಂತ್ರ ಸಂದೇಶ ಸಾಮಾಜಿಕತೆ ಅಲ್ಲ 'ತನಗಾಗಿ ಎಲ್ಲವನ್ನೂ ತೊಕ್ತಿ' ಇದು ತಂತ್ರದ ಪ್ರಕ್ರಿಯೆ. ಸರಿಯಾದ ದಾರಿ ಇದ್ದರೂ ಅದನ್ನು ತಪ್ಪಿಸುವವರೂ ಇದ್ದಾರೆ. ತಪ್ಪುದಾರಿ ತುಳಿದವರನ್ನು ಸರಿದಾರಿಗೆ ಒಯ್ಯುವುದೆ ತಂತ್ರದ ಕೆಲಸ.

ಈ ಮೇಲಿನ ವಿಷಯದಂತೆ ಜೀವನದ ಅಣುಅಣುವಿನಲ್ಲಿ ಜೀವನದ ಪ್ರತಿಕ್ಷೇತ್ರದಲ್ಲಿ ತನ್ನದೇ ಆಗಿರುವ ತಂತ್ರ ಮತ್ತು ಸಂವಿಧಾನವನ್ನು ಒಳಗೊಂಡಿರುತ್ತದೆ. ಇದರಲ್ಲಿ ಬಹುಮುಖ್ಯವಾಗಿರುವುದು ಸಾಹಿತ್ಯಕ್ಷೇತ್ರ. ಗೀತಾ ನಾಗಭೂಷಣರವರ ನಿರೂಪಣಾ ತಂತ್ರವನ್ನು ಗುರುತಿಸುವುದು ಈ ಅಧ್ಯಾಯದಲ್ಲಿಯ ಒಂದಂಶವಾಗಿದೆ. ನಿರೂಪಣಾ ತಂತ್ರಗಾರಿಕೆಯು ಭಿನ್ನತೆಯಿಂದ ಕೂಡಿರುತ್ತದೆ. ತಂತ್ರಗಾರಿಕೆಯು ಆಯಾ ಕವಿಗಳ ಬರಹಗಾರರ ಬೌದ್ಧಿಕತೆ ಅನುಭವ ತಿಳುವಳಿಕೆಗಳ ಮೇಲೆ ರೂಪಿತವಾಗುತ್ತದೆ. ಯಾವುದೇ ಒಬ್ಬ ಬರಹಗಾರ ಬರವಣಿಗೆಯಲ್ಲಿ ತನ್ನದೇ ಪರಿಕಲ್ಪನಾತ್ಮಕ ಸಿದ್ಧಾಂತದ ಮೂಲಕ ನಿರೂಪಣಾ ತಂತ್ರಗಾರಿಕೆಯನ್ನು ಅಳವಡಿಸಿರುತ್ತಾರೆ. ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಬಿ.ಟಿ.ಲಲಿತಾನಾಯಕ್, ಬರಗೂರು ರಾಮಚಂದ್ರಪ್ಪ, ಡಾ.ರಹಮತ್ ತರೀಕೆರೆ, ಮೊಗಳ್ಳಿ ಗಣೇಶ್, ಡಾ.ಅಮರೇಶ್ ನುಗಡೋಣಿ, ಬಿ.ಎಂ.ಪುಟ್ಟಯ್ಯ, ಎಸ್.ಎಲ್.ಭೈರಪ್ಪ, ಮುಂತಾದವರ ಬರೆಹಗಳು ಅನುಭವದ ಬರೆಹಗಳಾಗಿವೆ. ನಿರೂಪಣಾ ತಂತ್ರವು ಒಬ್ಬರಿಂದ ಮತ್ತೊಬ್ಬರಿಗೆ ಭಿನ್ನವಾಗಿರುತ್ತದೆ. ಒಬ್ಬ ಕವಿ ಒಂದೇ ರೀತಿಯ ನಿರೂಪಣಾ ತಂತ್ರವನ್ನು ಅಳವಡಿಸಿಕೊಳ್ಳಬೇಕೆಂದೇನೂ ಇಲ್ಲ. ಕಾವ್ಯ, ಕವಿತೆ, ಕಥೆ, ಕಾದಂಬರಿ, ಮೀಮಾಂಸೆ, ವ್ಯಾಕರಣ ಮುಂತಾದ ಸಾಹಿತ್ಯ ಪ್ರಕಾರಗಳು ಒಂದೇ ರೀತಿಯ ನಿರೂಪಣಾ ತಂತ್ರ ಅಥವಾ ಸಂವಿಧಾನವನ್ನು ಹೊಂದಿರಬೇಕೆಂದೇನೂ ಇಲ್ಲ. ಪ್ರತಿಯೊಂದು ಸಾಹಿತ್ಯ ಪ್ರಕಾರವೂ ಕೂಡ ಭಿನ್ನ ತಂತ್ರಗಳಿಂದ ಕೂಡಿರಬಹುದು/ಕೂಡಿರುತ್ತವೆ.

ಗೀತಾ ನಾಗಭೂಷಣರವರ ಸಾಹಿತ್ಯ ಪ್ರಕಾರಗಳು ಕೂಡ ಭಿನ್ನ ನಿರೂಪಣಾ ತಂತ್ರಗಳಿಂದ ಕೂಡಿವೆ. ಸೂಚ್ಯತೆಯ ಶಿರ್ಷಿಕೆಯನ್ನು ಒಳಗೊಂಡ 'ಬದುಕು ನುಂಗುವ ಮಂದಿ' ಎಂಬ ಸಣ್ಣ ಕತೆಯಲ್ಲಿ ಗೀತಾರವರು ಕೆಳವರ್ಗದ ಜನರ ಹಲವು ಆಯಾಮಗಳನ್ನು ಸಾದರಪಡಿಸುತ್ತಾರೆ. ಈ ಕಥಾಲೋಕದಲ್ಲಿ ಶೇಕಡ ತೊಂಭತ್ತರಷ್ಟು ಪಾತ್ರಗಳು ದಲಿತವರ್ಗದಿಂದಲೇ ಬಂದವುಗಳು. ಈ ಕಥೆಯ ಪ್ರಧಾನಪಾತ್ರವಾದ 'ಕಜರಿ' ಹೆಣ್ಣೊಬ್ಬಳ ದುರಂತವನ್ನು ಅನಾವರಣ ಮಾಡಿಸುವ ಕತೆಗಾರ್ತಿ ಕಜರಿಯ ಭಾವಲೋಕ ಎಷ್ಟು ಶ್ರೀಮಂತವಾದದೆಂಬುದನ್ನು, ನೈತಿಕ ಎನ್ನುವುದನ್ನು ತೆರೆದಿಡುತ್ತದೆ.

ಕನ್ನಡದೊಳಗೆ ಮಿಳಿತಗೊಂಡ ಅಷ್ಟಿಷ್ಟು ಉರ್ದು ಪದಗಳು ಕನ್ನಡ ಭಾಷೆಯ ಒಪ್ಪಂದಕ್ಕೆ ವಿಘಟನೆಯಾಗದೆ, ವಿರೂಪಮಾಡದೆ, ಸಾವಯವ ಸಂಬಂಧವನ್ನು ರೂಪಿಸಿಕೊಂಡಿರುವುದು ಕಲ್ಮಾತಕ ರೂಪವನ್ನು ಒದಗಿಸಿಕೊಟ್ಟಿರುವುದು ಸುಸ್ಪಷ್ಟ. 'ಬದುಕುನುಂಗುವ ಮಂದಿ' ಕತೆಯಲ್ಲಿ ನರಕ ಸದೃಶ್ಯ ವಲಯದೊಳಗೆ ಬಾಳುತ್ತಿರುವ ದಲಿತರ ಅಸಹಾಯಕ ಬದುಕು, ನೆಲೆಯಲ್ಲಿದೆ ಅತಂತ್ರಗೊಂಡ ಅಪಾರವಾದ ಅಬಲ ಅಬಲೆಯರ ಸ್ಥಿತಿಗತಿಯನ್ನು ಚಿತ್ರಿಸಿದ್ದಾರೆ. ಈ ಹಂದರದೊಳಗೆ ತನ್ನ ಕಾಯ, ವಾಚ, ಮನಸ, ಸುಸ್ಥಿತಿಯಲ್ಲಿಟ್ಟುಕೊಂಡು ತನ್ನದೇ ಮೌಲ್ಯಪಥದಲ್ಲಿ ಸಾಗುತ್ತಿರುವ ನೈತಿಕಪ್ರಜ್ಞೆಯ ಸಾಕಾರಳಾಗುತ್ತಾಳೆ. ದಿಟ್ಟೆ 'ಕಜರಿ' ಕೆಳವರ್ಗದ ಬೇಡಿಕೊಂಡು ತಿಂದು ಬದುಕುವ ಪರಿವಾರಕ್ಕೆ ಸೇರಿದ 'ಕುಂಟು ಬಸಪ್ಪ'ನ ಮೊಮ್ಮಗಳು. ಅದೇ ಪರಂಪರೆಯನ್ನು ಮುಂದುವರೆಸುವ ನಿಟ್ಟಿನಲ್ಲಿ ಅಜ್ಜ ಅವಳನ್ನು ತಯಾರು ಮಾಡುತ್ತಾನೆ. ಆರಂಭದ ದಿನಗಳಲ್ಲಿ ಅಜ್ಜ ಕಲಿಸಿದ ಬೇಡುವ ಕ್ರಿಯೆಯನ್ನು ಮುಂದುವರೆಸುತ್ತಾಳೆ. 'ಕಜರಿ' ಕಾಲಾಂತರದಲ್ಲಿ ಪರಾಧಿನಾಳಾಗಿ ಬದುಕುವುದಕ್ಕೆ ಬದಲಾಗಿ ಬದುಕನ್ನು ಸಬಲೀಕರಣಗೊಳಿಸಿಕೊಳ್ಳಬೇಕೆನ್ನುವ ಮಹತ್ವಾಕಾಂಕ್ಷೆಯಲ್ಲಿ ಪರಿವರ್ತನೆ ಹೊಂದುತ್ತಾಳೆ.

ಮುಂಜಾನೆಯಿಂದ ಹಿಡಿದು ಮುಸ್ಸಂಜೆಯವರೆಗೂ ತದನಂತರ ರಾತ್ರಿಹೊತ್ತಿನವರೆಗೂ ಕುಳಿತು ಬೇಡುವ ಬದುಕು ಅವಳಿಗೆ ಬೇಡವಾಗುತ್ತದೆ. ಅದಕ್ಕೆ ಕಾರಣ ಸಾಂಧರ್ಬಿಕವಾಗಿ ಉನ್ನತ ಜಾತಿಯ ಬ್ರಾಹ್ಮಣ ಮುದುಕಿಯೋರ್ವಳು ಅವಳನ್ನು ಹಂಗಿಸಿ ಅವಹೇಳನ ಮಾಡಿದ್ದು. "ನಿಮಗೆ ಬಿಕ್ಕಿ ಬೇಡ್ಲಿಕ್ಕೇನು ಧಾಡಿ ಬಡದದಾ? ಕುಂಟ್ರಾ ಕುಡ್ಡರಾ ನೀವು? ಹರೇಕ್ಕ ಬಂದೀರಿ ದೇವರು ಕೈ ಕಾಲು ಕೊಟ್ಟಾನ. ದುಡ್ಕೊಂಡು ತಿನ್ಬೇಕು, ಬಿಕ್ಷಾ ಬೇಡ್ತಾವ, ನಾಚಿಗ್ಗೇಡಿಗೋಳು........ ಹೋಗ್ತಿರಾ ಇಲ್ಲಾ ಇಲ್ಲಿಂದ? ಹೂಂ......... ನಿಮ್ ಕಾಲ ಮುರೀತಿನಿ......"[೨] ಈ ಮಾತುಗಳ 'ಕಜರಿ'ಯ ಮನದಲ್ಲಿ ಅಳಿಸಲಾಗದ ಶಾಹಿಯಂತಾದವು. ವಾಸ್ತವಬದುಕಿಗೆ ಹೊಸರೂಪ ನೀಡುವ ಪರಿವರ್ತನೆಗೆ ಇಂಬು

ನೀಡುವ ಎಚ್ಚರಿಕೆಯ ಮಾತುಗಳಾಗುತ್ತವೆ. ಈ ಸಂದರ್ಭದಲ್ಲಿ ಭಾರತೀಯ ಸಮಾಜದ ಶ್ರೇಣೀಕೃತವ್ಯವಸ್ಥೆ, ಉಳ್ಳವರು ಮತ್ತು ಇಲ್ಲದವರ ಮಧ್ಯದ ಕಂದಕ ಕಾಯಕ, ಬಲ್ಲಿದರ ಸಾಮಾಜಿಕ ಶೋಷಣೆಯನ್ನು ಸಿರಿವಂತರ ಸೊಕ್ಕಿನಡಿಯಲ್ಲಿ ಸಿಕ್ಕು ಜರ್ಝರಿತವಾಗುತ್ತಿರುವ ಅಸಂಖ್ಯಾತರನ್ನು ಅಂಚಿಗೆ ತಳ್ಳಿದ ಮಂದಿಯ ಅಸಾಯಕತೆ ಗತಿಸ್ಥಿತಿಯನ್ನು ಕಥೆ ಮನಗಾಣಿಸುತ್ತದೆ. ಬ್ರಾಹ್ಮಣ ಮುದುಕಿಯ ಮನೆಯಲ್ಲಿ ಕಸಮುಸುರೆಯಾದರೂ ಸರಿಯೇ ಮಾಡಲು ಸಿದ್ಧವಿರುವ 'ಕಜರಿ'ಗೆ ಬ್ರಾಹ್ಮಣ ಮುದುಕಿಯ ಮಾತುಗಳು ಕಜರಿಯ ಮನಸ್ಥಿತಿಯನ್ನು ಅಲುಗಾಡಿಸಿ ಬಿಡುತ್ತದೆ. "ಅಯ್ಯ ಸುಡ್ಲೀ ..... ಇದೇನು ಹೊಸಾ ಹುನ್ನಾರು ಹುಡ್ಕೊಂಡು ಬಂದೇ ಪೋರಿ? ನಮ್ಮನಿ ಭಾಂಡಿ ಗಿಂಡಿ ಕಳು ಮಾಡ್ಕೊಂಡು ಹೋಗ್ಬೇಕಂತ ಹಂಚಿಕಿ ಹಾಕಿಯೇನು ಮತ್ತ? ಅದೆಲ್ಲಾ ಆಗಾಣಿಲ್ಲ, ನಡೀ ಇಲ್ಲಿಂದ, ನಿಮ್ಮಂತಾ ಬೇಡ್ಕೊಂಡು ತಿನ್ನೊ ಲಾವಾರಿಸಗೋಳಿಗೆಲ್ಲಾ ಮನಿ ಕೆಲ್ಸಕ್ಕೆ ಇಟಗೊಂಡ್ರ ಮುಗೀತು, ನಮ್ಮನಿ ಅಂಬೋದೆಲ್ಲಾ ತೂಳ್ದೇಬಿಟ್ಟು, ಸರ್ವನಾಶ ಮಾಡ್ತೀರಿ, ಹೋಗ್ ಹೋಗು .... ಹೋಗ್ತ್ಯಾ ಏನು ಹಾಕಲ್ಯಾ ಇದರಲಿಂದ ಎರಡೇಟೂ?"[೪] ಈ ಮಾತುಗಳನ್ನು ಕೇಳಿ ಕಜರಿಯ ಮನಸ್ಥಿತಿ ಬದಲಾದಾಗ 'ಕಜರಿ' ಆಡಿದ ಮಾತುಗಳಿವು. "ನಿನ್ ಬಾಯಾಗ ಮಣ್ಣ ಹಾಕ್ಲೀ.......ನಿನ್ ಕೈಗಿ ಕರಿನಾಗರ ಕಡೀಲಿ...... ನಿನ್ ಹೆಣ್ತಿ ಕಂಡಿ ಆಗಲೋ .... ನಿನ್ ತೆಲಿಮ್ಯಾಲಿನ ಜುಟ್ಟಾ ಕತ್ತರಸ್ಬೇಕೊ ನನ್ ಹಾಟ್ಯಾ..... ಹೊಡಿತಾನಂತ ನನಗ ಇಂವಾ ...... ಅದೇ ಚಪಲಿ ಕಸಗೊಂಡು ನಿನಗೇ ಹೊಡಿತೀನಿ ..... ನಾ ಒಂದೀಟು ದೊಡ್ಡಕ್ಕಿ ಆದ ಮ್ಯಾಲ ನಿನಗ ಮಾಡ್ತೀನಿ ಬಸ್ತಾನಿ ...... ಏ ಹಾರುವಾ ನನ್ ಭಾಡಕವೂ ...... ನೆನಪಿಟಗೋ ನೀ ..... ನಿನ್ ಅಂಸ ಅಳೀಲೀ ..... ನಿನ್ ಮೈಗಿ ದೊಡ್ಡರ್ವಾಗ ಹತ್ತಲೀ......"[೫] ಎಂದು ಸಾಪಳಿಸುತ್ತಾಳೆ.

ಮುಂದುವರೆದು ಕಜರಿ ಮನದಾಳದ ನೋವಿನ ಮಿಡಿತದ ಮೀಮಾಂಸೆಯನ್ನು ಸಮಾಜದ ಎದುರಿಗೆ ಬಿಚ್ಚಿಡುತ್ತಾಳೆ. "ಈ ದೊಡ್ಡ ಮಂದಿ ಅಂತ ಮೆರೆಯುವ ಸೊಕ್ಕಿನವರಿಗೆ ತಮ್ಮಂಥ ಅರ್ಧಾ ಉಪವಾಸ ಬಿದ್ದು ದಿನನೂಕೋ ಬಡಮಂದಿಯ ಮೇಲೆಯಾಕ್ ಬಂದೀಟೂ ಭರೋಸಾ ಇಲ್ಲ? ನಾವೆಲ್ಲಾ ಕಳ್ರು ಸುಳ್ರು ಅಂತ ಎಕದಂ ನಿರ್ಧಾರ ಮಾಡಿ ಬೈತಾರ, ಹೊಡಿತಾರಲ್ಲ ಇವರೆಲ್ಲೋರೂ...... ನಾವೇನೂ ತಾಯಿ ಹೊಟ್ಟಿಲಿಂದ ಹುಟ್ಟೋಮುಂದೇ ಕಳ್ಳತನ, ಸುಳ್ಳತನ ಕಲ್ತು ಬಂದಿರ್ತೇವೇನು? ನಮಗೇನೂ ಹೊಟ್ಟಿತುಂಬಾ ರೊಟ್ಟಿ, ಮೈತುಂಬಾ ಬಟ್ಟಿ, ಸಿಕ್ಕರ ನಾವ್ಯಾಕ್ ಬಿಕ್ಕಿ ಬೇಡ್ಕೋಂಡು ತಿಂತೀವಿ? ನಮಗ ಬಿಕ್ಕಿ ಬೇಡಬ್ಯಾಡಂತ ಬೈಯೋ ಈ ದೊಡ್ಡ ಮಂದಿ ನಮ್ ಕೈಗೋಳಿಗಿ ಕೆಲ್ಸಾ ಕುಡ್ಲಕ್ಕ ಯಾಕ ಹಿಂದಕ ಸರೀತಾರಂತೀನಿ? ಹುಟ್ಟುತ್ಲೇನೂ ಯಾರು

ಕಳ್ಳಾ, ಸುಳ್ಳಾ, ಬಿಕ್ಕಿ ಬೇಡಾಂವ ಅಂತ ಇತರಿಗಿಲ್ಲ. ಎಲ್ಲಾ ನಮ್ಮ ರೊಟ್ಟಿ ಹಸು ಮಾಡಸ್ತಾದ ದೊಡ್ಡಮಂದಿ ಮಕ್ಕಳು ನೀಡಾಮಂದಿ ಮಕ್ಕಳು ನೀಡಾಮಂದಿ ಆಗ್ತಾರ. ನಮ್ಮಂತಾ ಗರೀಬಮಂದಿ ಮಕ್ಕಳು ಬಿಕ್ಕಿ ಬೇಡ್ಕೊಂಡು ತಿನ್ನಾಮಂದಿ ಆಗ್ತೀವಿ. ಇದೆಲ್ಲಾ ಈ ದೊಡ್ಡ ಮಂದಿ ಅಂತ ಹಣೆಪಟ್ಟಿ ಕಡಗೊಂಡು ಸೊಕ್ಕಲಿಂದ ಮೆರಿತಾರಲ್ಲ – ಈ ಮಂದಿಗ್ಯಾಕ ತಿಳಂಗಿಲ್ಲಾಗ್ಯಾದಿದು ಅಂತೀನೀ......"[೬]

ಅಕ್ಷರಸ್ಥಳಲ್ಲದ ಕಜರಿಯ ಬಾಯಿಯಲ್ಲಿ ಹೊರಡುವ ಮಾತುಗಳಲ್ಲಿ ಸಾಮಾಜಿಕ ಅಸಮಾನತೆಯಲ್ಲಿ ಒದ್ದಾಡುವ ಮಂದಿಯ ನೋವಿನ ಕಠೋರ ವಿಮರ್ಶೆಯಿದೆ. ಸಾಮಾಜಿಕ ಮೀಮಾಂಸೆಯಿದೆ. ಹುಟ್ಟಿನಿಂದ ಯಾರೂ ಅಪರಾಧಿಗಳಾಗುವುದಿಲ್ಲ, ಸಮಾಜದ ಅಸಮಾನತೆ, ವರ್ಗಸೃಷ್ಟಿ ಮಾಡುತ್ತದೆಯೆಂಬ ಅರಿವಿದೆ. ಉಳ್ಳವನನ್ನು ಸಂತುಷ್ಟಿಯಿಂದ ಉಂಡವನನ್ನು ಬಿಳಿಬಣ್ಣದಲ್ಲಿ ಹಸಿದವನನ್ನು ಅರಿವೆಯಿಲ್ಲದವನನ್ನು ಕಪ್ಪುಬಣ್ಣದಲ್ಲಿ ಭಿತ್ತರಗೊಳಿಸುವ ಸಾಮಾಜಿಕ ಸಾಂಸ್ಕೃತಿಕ ವೈರುಧ್ಯಗಳನ್ನು ಕತೆ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಅನ್ನಕ್ಕಾಗಿ ಅಸಹಾಯಕ ಮಂದಿಯ ಅನುದಿನದ ಅವಿರತ ಹೋರಾಟವನ್ನು ಕತೆಯ ಹಂದರದುದ್ದಕ್ಕೂ ಕಾಣಬಹುದು. ನಗರದೊಳಗಿನ ರೈಲ್ವೆ ಪ್ಲಾಟ್‌ಫಾರಂನಿನ ಮೇಲೆಯೇ ದಿನದ ಬಹುಪಾಲು ಸಮಯವೆಲ್ಲವನ್ನೂ ವ್ಯಯಿಸುವ ನೆಲೆಯಿಲ್ಲದ ದಲಿತರ ವ್ಯಥೆಯನ್ನು ದಾಖಲಿಸುತ್ತದೆ. ಅಸ್ತಿತ್ವದ ಬೇರು ಭದ್ರಮಾಡಿಕೊಳ್ಳಲಾಗದ ಅಸಹಾಯಕ ಸ್ಥಿತಿಯ ದಲಿತ ಬದುಕನ್ನು ಮೂರ್ತ ಸ್ವರೂಪದಲ್ಲಿ ಕಡೆದಿರಿಸುತ್ತದೆ.

ಪ್ರವರ್ಧಮಾನಕ್ಕೆ ಬರುತ್ತಾ ಹೋದಂತೆ 'ಕಜರಿ'ಯ ಮನೋಧರ್ಮದಲ್ಲೂ ಧನ್ಮಾತಕ ಆಯಾಮ ಬರುತ್ತಾ ಹೋಗುತ್ತದೆ. ಭೌತಿಕವಾಗಿ ಮೈನೆರೆದ ಕಜರಿಯಲ್ಲಿ ಸ್ವಾಭಿಮಾನಿಯಾಗಿ ಬದುಕಬೇಕೆಂಬ ಆಕಾಂಕ್ಷೆ ಕುಡಿ ಹೊಡೆಯುವುದು. ಈಗ ಅವಳು (ಕಜರಿ) ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುವ, ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸಿಕೊಳ್ಳುವ ಗಟ್ಟಿ ಮನಸ್ಸಿನವಳಾಗುತ್ತಾಳೆ. ನೆರೆಹೊರೆಯವರಲ್ಲಿ ೫೦ ರೂಗಳನ್ನು ಕೈಗಡ ಪಡೆದು ಅಲ್ಪಬಂಡವಾಳದಲ್ಲಿ ಹೂಕಟ್ಟಿ ಮಾರುವ ಸಾತ್ವಿಕ ಬದುಕನ್ನು ಆಯ್ದುಕೊಳ್ಳುತ್ತಾಳೆ. ಯಾರ ಹಂಗಿನಲ್ಲೂ ಬದುಕಬಾರದೆಂಬ ದಿಟ್ಟ ನಿಲುವು ಕಜರಿಯ ಪಾತ್ರಕ್ಕೆ ಶ್ರೀಮಂತಿಕೆಯನ್ನು ಒದಗಿಸುವ ಬೆಳವಣಿಗೆಯಾಗುತ್ತದೆ. ಕಥಾಚಿತ್ರಣದಲ್ಲಿ ಗೀತಾ ನಾಗಭೂಷಣರವರ ಸಾಮಾಜಿಕ ಮನೋಧರ್ಮ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಹಾತೊರೆಯುವಿಕೆಯ ಅಂಶಗಳನ್ನು ಮನಗಾಣಬಹುದು. ಅರ್ಥವ್ಯವಸ್ಥೆ ರೂಪಿಸಿಕೊಳ್ಳುವ ಕಜರಿ ಆರ್ಥಿಕವಾಗಿ ಸಶಕ್ತೀಕರಣಗೊಳಗಾಗುತ್ತಾಳೆ. ತನ್ನ ಕುಟುಂಬದ ಏಕೈಕ ಆಧಾರ ತನ್ನ ಅಜ್ಜ 'ಕುಂಟು ಬಸಪ್ಪನ ಪಾಲಿಗೆ ಸಂಜೀವಿನಿಯಂತಾದವಳು. ಅರ್ಥವ್ಯವಸ್ಥೆ ರೂಪಿಸಿಕೊಳ್ಳುವಾಗ ಕಜರಿ

ಆಯ್ದದ್ದು ರುಜುಮಾರ್ಗವನ್ನು ಮಾತ್ರ. ಆ ರುಜುಮಾರ್ಗದಲ್ಲಿ ನಡೆದಾಗ ವ್ಯಕ್ತಿಗೆ ಮಾನಸಿಕ ಸ್ಥೈರ್ಯ ಮತ್ತು ಆತ್ಮವಿಶ್ವಾಸ ಮೂಡಿಸುವಂತಾಗುತ್ತದೆ. ಆದರೆ ಅವಳ ನೆರೆಹೊರೆಯವರಾದ ಕಾಮ್ಯ, ವಾಚ್ಯ, ಕರೀಮ ಇನ್ನಿತರರ ಹಣಗಳಿಕೆಯ ಮಾರ್ಗಗಳು ರುಜುಮಾರ್ಗಗಳಲ್ಲ. ಅದಮ್ಯಸ್ಥಿತಿಯಿಂದ ಹೊರಬರದ ಕಾಮನೆಯ ಭಾವನೆಗಳಿಗೆ ತುತ್ತಾಗಿ ಜೀವಪ್ರಜ್ಞೆಯ ಪ್ರತೀಕವು ದಲಿತ ಮಹಿಳೆಯ ದಿಟ್ಟಸ್ವರೂಪದ ಸಂಕೇತದಂತಿರುವ ಕಜರಿಯ ಅತ್ಯಚಾರಕ್ಕಿಳಿಯುವುದು ಅವರ ಕೆಟ್ಟಪ್ರವೃತ್ತಿಯನ್ನು ಪ್ರತಿಬಿಂಬಿಸುತ್ತದೆ. ಈ ಮಧ್ಯೆ ಬರುವ ಹನುಮಂತದೇವರ ಪ್ರತಿಮೆ ಮೂಕಸಾಕ್ಷಿಯಾಗಿ ನಿಲ್ಲುವುದು. ಒಂದರ್ಥದಲ್ಲಿ ಸಾಮಾಜಿಕ ಅನ್ಯಾಯ, ದೌರ್ಜನ್ಯ, ಶೋಷಣೆಗಳಿಗೆ ಎಚ್ಚರಿಕೆಗೊಂಡಿರಬೇಕಾಗಿದ್ದ ಧರ್ಮ ನಿರ್ಲಿಪ್ತತೆ ವಹಿಸಿದೆಯೇನೋ ಎಂಬಂತೆ ತೋರಿಸದ ರೂಪಕವು, ಪ್ರತಿಮೆಯ ಮಾದರಿಯಾಗುತ್ತದೆ.

ಸ್ವೇಚ್ಛೆಯಾಗಿ, ಸಾಮಾಜಿಕ, ಸಾಂಸ್ಕೃತಿಕ ಲೈಂಗಿಕ ಕ್ರಿಯೆಗಳನ್ನು ಎಸಗುವ ಕಾಮ್ಯ, ವಾಚ್ಯ, ಕರೀಮ ಇನ್ನಿತರರ ಮಧ್ಯೆ ತನ್ನ ಕಾಯಕ ಧರ್ಮದಿಂದ ಬೇರೆಯಾಗಿ ಕಾಣಿಸುವ ಪಾತ್ರ ರುಕ್ಕಾ. ಬಡತನದಲ್ಲಿ ಜರ್ಜರಿತನಾದರೂ ರುಕ್ಕ್ಯಾ ಅಪರಾಧಿ ಸ್ಥಾನಕ್ಕಿಳಿಯದೇ ತನ್ನ ಸಾಕುಪ್ರಾಣಿ ಕೋತಿಯ ನೃತ್ಯವನ್ನು ಲೋಕಾಂತರದಲ್ಲಿ ನ್ಯಾಯಸಮ್ಮತವಾಗಿ ಪ್ರದರ್ಶಿಸುತ್ತಾ ಹಣ ಸಂಪಾದಿಸುವ ರುಜುಮಾರ್ಗಿ. ಈ ದಲಿತ ಕಾಯಕನಿಷ್ಠೆಗೆ ಮನಸೋತ ಕಜರಿ ಮನಸ್ಸನ್ನು ಒಪ್ಪಿಸಿಕೊಳ್ಳುವತ್ತ ಕತೆ ಹೊಸತಿರುವನ್ನು ಪಡೆದುಕೊಳ್ಳುತ್ತದೆ. ಮನಸ್ಸು ಅರ್ಪಿಸಿದ ಕಜರಿ ಶುಭವಿವಾಹದ ಗಳಿಕೆಗಾಗಿ ಕಾಯುತ್ತಿರುವ ಸಂಧರ್ಭದಲ್ಲಿ ರುಕ್ಕ್ಯಾನ ತೋಳಬಂದಿಗೆ ಈಡಾಗದೆ ಕಾಮುಕರಾದ ವಾಚ್ಯ, ಕಾಮ್ಯ, ಕರೀಮರಿಗೆ ಬಲಿಯಾಗುವುದು ಕರುಣಾಜನಕ ಸಂಗತಿ. ದಲಿತ ಅಸಹಾಯಕ ಹೆಂಗಳೆಯ ಬದುಕಿನ ದುರಂತದ ಸಂಕಥನ ಕೂಡ. ಕಥಾಭಿತ್ತಿಯಲ್ಲಿ ಕತೆಗಾರ್ತಿ 'ಕಜರಿ' ಸ್ತ್ರೀಪಾತ್ರವನ್ನು ಅಳ್ಳಕ ಪಾತ್ರವಾಗಿಸದೇ 'ಪೂರ್ಣಪಾತ್ರ'ವಾಗಿ ಚಿತ್ರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಕಜರಿ ಕಾಲಾಂತರದಲ್ಲಿ ಸಮಯ ಸಂದರ್ಭಕ್ಕೆ ಅನುಗುಣವಾಗಿ ಸ್ಥಿತ್ಯಂತರಗೊಳ್ಳುತ್ತಾ ಹೋಗುತ್ತಾಳೆ.

೬.೩ ಸ್ತ್ರೀ ಕೇಂದ್ರಿತ ಅಭಿವ್ಯಕ್ತಿ

ವರ್ತಮಾನದಲ್ಲಿ ಹೆಣ್ಣಿನ ಗರ್ಭ ತೆಗೆಸುವುದು, ಕಿರುಕುಳ ನೀಡುವುದು, ಮಹಿಳೆಯರನ್ನು ಕೀಳಾಗಿ ಕಾಣುವುದು, ಚಿತ್ರಿಸುವುದು, ದೌರ್ಜನ್ಯ ನಡೆಸುವುದು, ಭೋಗದ ವಸ್ತುವನ್ನಾಗಿ ಕಾಣವುದು ಕಂಡುಬರುತ್ತದೆ. ದಲಿತಮಹಿಳೆ ಸ್ಥಿತಿ ಇನ್ನಷ್ಟು ಚಿಂತಾಜನಕ. ಕೊಲೆ, ಅಪಹರಣ, ಅತ್ಯಾಚಾರ, ಭ್ರೂಣಹತ್ಯೆ, ವರದಕ್ಷಿಣೆ, ಕಿರುಕುಳ ಮುಂತಾದ ಪ್ರಕರಣಗಳು ಇಂದಿಗೂ ನಡೆಯುತ್ತಲೇ ಇವೆ. ಹೆಣ್ಣಿನ ಕೂಗಿಗೆ ಎಲ್ಲರೂ ದನಿ ಸೇರಿಸಿ ಸಮಾಜ

ಇಷ್ಟು ಮುಂದುವರಿದರೂ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಇನ್ನೂ ನಿಂತಿಲ್ಲ. ಹೆಣ್ಣಿನ ಕೂಗಿಗೆ ಸಮಾಜದ ಪ್ರತಿಯೊಬ್ಬರೂ ಧ್ವನಿಗೂಡಿಸಬೇಕು. ಮಹಿಳೆಯರು ಸಂಘಟನಾತ್ಮಕವಾಗಿ ಪ್ರಬಲ ಹೋರಾಟದಿಂದ ಮಾತ್ರ ನೆಮ್ಮದಿಯಿಂದ ಬದುಕಲು ಸಾಧ್ಯ ಎಂದು ಲೇಖಕಿ ಎಚ್.ಎಸ್.ಅನುಪಮಾರವರು ತಮ್ಮ ಬರಹದಲ್ಲಿ ಗುರುತಿಸಿದ್ದಾರೆ.

ನಗರ ಕೇಂದ್ರಿತ ಝೋಪಡಿಪಟ್ಟಿಯ ಅಸಹಾಯಕ ಮಂದಿಯ, ದುಃಸ್ಥಿತಿಯನ್ನು ಅನಾವರಣಗೊಳಿಸುವುದರ ಜೊತೆಗೆ ಗ್ರಾಮೀಣ ಪರಿಸರವನ್ನು ಅದರ ಎಲ್ಲ ಓರೆ ಕೋರೆಗಳೊಂದಿಗೆ ತನ್ನ ಕಥಾಚೌಕಟ್ಟನ್ನು ಹೊಂದಿಸಿಕೊಳ್ಳುವ ಗ್ರಾಮೀಣ ಸಮಾಜದ ಸ್ತರವಿನ್ಯಾಸವನ್ನು ಅಲ್ಲಿಯ ದಲಿತರ ಬದುಕು ಬವಣೆ ಬೂದಿಯೊಳಗಿನ ಕೆಂಡದಂತೆ. ಎದೆಯೊಳಗೆ ಮೂಡುತ್ತಿರುವ ಬಂಡಾಯದ ಜ್ವಾಲಾಮುಖಿ ದಲಿತ ಪ್ರತಿನಿಧಿಯಾದ 'ಹುಲಿಗ್ಯಾ' ಪಾತ್ರದ ಮನೋಭೂಮಿಕೆಯಲ್ಲಿ ಅಭಿವ್ಯಕ್ತಗೊಳಿಸುವುದು ಅಂತಿಮವಾಗಿ ಅದು ಸೇಡಿನ ಕಿಡಿಯಾಗಿ ಶೋಷಕನನ್ನೇ ಸುಡುವ ಬೆಂಕಿಯಾಗುವ ಪರಿ ಹುಲಿಗ್ಯಾ ಕಥೆಯಲ್ಲಿ ಹಲವು ಮೂರ್ತ ಪ್ರತಿಮೆಗಳೊಂದಿಗೆ ಅನಾವರಣಗೊಳ್ಳುತ್ತದೆ.

ಹುಲಿಗ್ಯಾ ಮುಂದುವರೆದ ಭಾಗ ಗ್ರಾಮಗಳ ಪ್ರತಿನಿಧಿಯಂತೆ ಪ್ರತಿಬಿಂಬಿಸಲ್ಪಟ್ಟಿರುವ ಕತ್ತಲೆಳ್ಳು ಅದರ ಹಾಸುಹೊಕ್ಕಾದ ವರ್ಗ ಶ್ರೇಣೀಕೃತ ವ್ಯವಸ್ಥೆಯನ್ನು, ವರ್ಣ ಸ್ಥರವಿನ್ಯಾಸವನ್ನು ಭಿತ್ತರಿಸುವ ಕಥಾನಕ. ಕೊನೆಯ ಅವಧಿಯಲ್ಲಿ ಶೋಷಿತ ಜನಾಂಗದ ಪ್ರತಿನಿಧಿಯಾದ ದಲಿತ ಹುಲಿಗ್ಯಾ ಬಂಡಾಯದ ಬಾವುಟ ಹಾರಿಸುವುದರ ಸಂಕೇತವು ಎಂಬಂತೆ, ಕಥೆಯ ಕೊನೆಯಲ್ಲಿ 'ಹುಲಿಗ್ಯಾ' ಕಟ್ಟಕಡೆಯ ಕೃತ್ಯ ಮೂಡಿಬರುತ್ತದೆ. ವಿಧೇಯ ಹುಲಿಗ್ಯಾ ತನ್ನೊಡೆಯ ರಾಮಪ್ಪ ಕುಲಕರ್ಣಿಯ ಮನೆಯಲ್ಲಿ ಊಳಿಗಕ್ಕೆ ಸೇರಿ, ಧಣಿಯ ಎಲ್ಲಾ ಕೆಲಸಗಳನ್ನು ಒಪ್ಪ ಓರಣವಾಗಿ ಮಾಡುತಿದ್ದುದಲ್ಲದೇ ಎಂಥ ಸಂದರ್ಭದಲ್ಲಿಯೂ ಕುಲಕರ್ಣಿಯ ಮಾತಿಗೆ ಎದುರಾಡದೇ ಅವನ ಮನೆಯ ಕಷ್ಟದ ಕೆಲಸಗಳೆಲ್ಲವನ್ನು ನಿರ್ವಹಿಸುವ ಆಳುಮಗನಾಗಿ ಬೆಳೆದವನು.

ಗೀತಾ ನಾಗಭೂಷಣರವರ ಕಥೆಯಲ್ಲಿ ಎರಡು ವರ್ಗಗಳ ಜೀವನಕ್ರಮದ ವರ್ಣನೆ ದಟ್ಟವಾಗಿ ಕಟ್ಟುವಂತೆ ವರ್ಣಿತವಾಗಿದೆ. ಹುಲಿಗ್ಯಾನ ವಿಧವೆ ತಾಯಿ ಬಡತನದ ದೆಸೆಯಿಂದ ದೇಹಶಕ್ತಿ ಹುಡುಗಿರುವ ಕಾರಣ ಭಿಕ್ಷೆ ಬೇಡಿ ಬದುಕುವ ದುಸ್ಥಿತಿಗೆ ಬಂದು ನಿಂತವಳು. ಇದು ಪಾರಂಪರಿಕ ತಳವಾರಿಕೆ ಪದ್ಧತಿಯ ಮುಂದುವರಿಕೆಯ ಭಾಗವೂ ಆಗಿದ್ದಿರಬಹುದು. ಕುಲಕರ್ಣಿಯಂತಹ ಕುಲೀನರ ಮನೆಯಲ್ಲಿ ಬೆಳೆದ ಹುಲಿಗ್ಯಾ ಬಾಹುಬಲಿಯಂತೆ ಬೆಳೆದವನು. ಶೂದ್ರ-ದಲಿತ ಕುಟುಂಬಗಳ ಪ್ರತಿನಿಧಿಯಾದ ಹುಲಿಗ್ಯಾನ ದೇಹಸೌಷ್ಠವವನ್ನು ಬಲಿಷ್ಟ ಬಾಹುಗಳನ್ನು ಕಡೆದಂತಿದ್ದ ದೇಹದ ಮಾಟವನ್ನು ಗೀತಾ

ನಾಗಭೂಷಣ ವರ್ಣಿಸುವ ಪರಿ "ಹುಲಿಗ್ಯಾ ಏನೋ ಹರ್‍ಯಾಕ ಬಂದನು ಖರೇ, ಎಣ್ಣಿ ಹಚ್ಚಿ ಮಾಲಿಶ್ ಮಾಡಿದಂಥಾ ಕರ್ರಗ ಮಿರಿ ಮಿರಿ ಮಿಂಚಾ ಮೈ ಬಣ್ಣದ ಹುಲಿಗ್ಯಾನ ಕಣ್ಣು ಮೂಗು ಮಾತ್ರ ಈಟಗಲ, ಅಟುದ್ಧ ಆಗಿದ್ದುವು. ಉಬ್ಬಿದ ಗಲ್ಲಾಗೋಳು, ಸಣ್ಣಗ ಚಿಗುರು ಮೀಸಿ, ತೆಲಿಮ್ಯಾಲ ದಟ್ಟನ್ಯಾಗಿ ಬೆಳ್ದು ಕರಾಪು ಮಾಡಿಸಿಕೊಂಡ ಗುಂಗುರು ಕೂದಲು. ಪೈಲ್ವಾನನಂಥಾ ಮೈಕಟ್ಟಿನ ಹುಲಿಗ್ಯಾ ಭೀಮಕಾಯ."[೭]

ದೈಹಿಕವಾಗಿ ಸದೃಡವಾಗಿರುವ ದಲಿತರು ಕುಲಕರ್ಣಿಯಂತಹ ಶೋಷಕ ಪ್ರವೃತ್ತಿಯ ಜನರ ಮುಂದೆ ಬೌದ್ಧಿಕವಾಗಿ ಅಸಹಾಯಕರು. ಸವರ್ಣಿಯರಂತೆ ಸಾಮಾಜಿಕ ವಲಯದೊಳಗಿನ ಶಿಕ್ಷಣವ್ಯವಸ್ಥೆ, ಅರ್ಥವ್ಯವಸ್ಥೆ, ಸಿಕ್ಕಿಲ್ಲದಿರುವುದು ಮುಖ್ಯ ಕಾರಣ. ಬೌದ್ಧಿಕವಾಗಿ ಬೆಳೆದ ಉಚ್ಚಕುಲದ ರಾಮಪ್ಪ ಕುಲಕರ್ಣಿ ತನ್ನ ಬೌದ್ಧಿಕತೆಯನ್ನು ಸದೃಡ ಆರ್ಥಿಕತೆಯನ್ನು ಸುಸ್ಥಿತಿಯ ಸಾಮಾಜಿಕತೆಯನ್ನು ಸಮಾಜದ ಸರ್ವಾಂಗಿಣ ಬೆಳೆವಣಗೆಗೆ ವಿನಿಯೋಗಿಸದೆ ಒಂದು ಅಸ್ತ್ರದಂತೆ ಬಳಸುತ್ತ 'ಹುಲಿಗ್ಯಾ'ನಂತಹ ದಲಿತರ ಬಾಳಿಗೆ ಭಸ್ಮಾಸುರನಾಗುತ್ತಾನೆ.

ಮುಗ್ಧ ಹೃದಯದ ನಿರಕ್ಷರಕುಕ್ಷಿಯಾದ ಹುಲಿಗ್ಯಾನ ಮನಸ್ಸು ನಿರ್ಮಲವಾದುದು. ಕತೆಗಾರ್ತಿ ನಿರೂಪಿಸುವಂತೆ "ಹುಲಿಗ್ಯಾ ಸೀದಾ ಸದಾ ಸರಳ ಮನಶ್ಯಾ, ಏಚು ಪೇಚು ಹಿಂದಾ ಮುಂದಾ, ಸುಳ್ಯಾ ಸೊಗಡಾ, ಹುಷಾರು ಚಾಲಾಕು, ಉಹೂಂ ಒಂದು ಗೊತ್ತಿಲ್ಲದ ಭೋಳ್ಯಾ ಮನಶ್ಯಾ, ಕುಕ್ಕಣ್ಣಿ ಸಾಕಿದ ನಾಯಿ, 'ಕಾಳ್ಯಾ' ಯಾರರೆ ಹೊಡದರ ತಿರಗಿ ನಿಂತು ಬಾಲಾ ನಿಗರಿಸಿ ಗುರ್‍ರೆಂದೆತ್ತು ಖರೇ, ಆದರ ಈ ಹುಲಿಗ್ಯಾ ಮಾತರ ಯಾರ ಮುಂದನೂ ತೆಲಿಯೆತ್ತಿ ಜೊಗ್ಗಿ ಮಾತಾಡಿದ್ದು ಯಾರೂ ಕಂಡಿಲ್ಲ. ಭೀಮನ್ಹಂತಾ ಆಕಾರಿದ್ದರೂ ಮನಸು ಮಾತ್ರ ಹಸುಗೂಸಿಂದೆ."[೮] ಇಂತಹ ಮುಗ್ಧ ಮನಸ್ಸಿನ ಹಳ್ಳಿಗಾಡಿನ ಅನಕ್ಷರಸ್ಥ ಹುಲಿಗ್ಯಾನ ಮುಗ್ಧತೆಯ ಮೇಲೆ ಸ್ವಾರ್ಥದ ಸವಾರಿ ಮಾಡುವ ಕುಲಕರ್ಣಿಯ ಹೀನಕೃತ್ಯ ಅಕ್ಷಮ್ಯವೂ, ಅನೈತಿಕವಾದುದು. ದೈವ ವಿರುದ್ಧವಾದುದಾಗುತ್ತದೆ. (ಎಲ್ಲಾ ಧರ್ಮಗಳು ಹಾದರವನ್ನು ಕೆಟ್ಟದ್ದೆಂದು ಹೇಳುತ್ತವೆ).

ಹರೆಯಕ್ಕೆ ಬಂದ ಮಗ ಹುಲಿಗ್ಯಾನಿಗೆ ಲಗ್ನ ಮಾಡುವ ತಾಯಿಯ ಆಸೆ ಆಕಾಂಕ್ಷೆಗಳನ್ನು ಮನದೊಳಗಿನ ಬಯಕೆಗಳು ಹಲವಾರು. ಲಗ್ನವಾಗಿ ನಾಲ್ಕುವರ್ಷ ಕಳೆದರೂ ಹುಲಿಗ್ಯಾನ ಕಡೆಯಿಂದ ಸಂತತಿಯ ಮುಂದುವರಿಕೆಯ ಲಕ್ಷಣ ಕಾಣದ ಮುದುಕಿ ಕಂಟೀವ್ವಳ ಸಾವನ್ನು ವರ್ಣಿಸುವುದು ಹೀಗೆ. 'ಸೂಸಿ ಬಸರಾಗಲಿಲ್ಲಂಬೆ ಚಿಂತ್ಯಾಗ ಮುದುಕಿ ಕಂಟಿವ್ವ ಸವದೂ ಸವದೂ ಒಂದಿನಾ ಕಣ್ಣು ಮುಚ್ಚಿ ಸತ್ತೇ

ಹೋಯ್ತು' ಬಡ ದಲಿತರ ಮನೆಗಳ ಸೌಭಾಗ್ಯವೇ ಸಂತಾನಭಾಗ್ಯ ಅದಿಲ್ಲದೆ ಹೋದ ಕಂಟಿವ್ವ ಅದರ ಕೊರಗಿನಲ್ಲೆ ಗತಿಸಿ ಹೋದುದ್ದು ಓದುಗನ ಹೃದಯಕ್ಕೆ ತಟ್ಟುವ ಪ್ರಸಂಗವಾಗುತ್ತದೆ.

ಗ್ರಾಮೀಣ ಸಮಾಜದ ಒಳಹೊರಗನ್ನು ಅದರೆಲ್ಲಾ ಧನಾತ್ಮಕ, ಋಣಾತ್ಮಕ ಅಂಶಗಳೊಂದಿಗೆ ಪರಿಚಯಸುವ ಗೀತಾ ನಾಗಭೂಷಣ, ಗ್ರಾಮೀಣತೆಯ ಎಲ್ಲಾ ಸುಭಗತೆ ವಿರೂಪತೆಯೊಂದಿಗೆ ನಿರೂಪಣೆ ಮಾಡುತ್ತಾರೆ. ಗ್ರಾಮೀಣ ಪರಿಸರದ ಅಂತರ್ಗತ ಪಾಳೆಗಾರಿಕೆ ದರ್ಪದ ಬಲಾಢ್ಯ ಕೋಮಿನ ಆರ್ಥಿಕ ಸಬಲತೆಯ ವರ್ಗದ ಮಂದಿಯೊಳಗಿನ ಕತ್ತಲ ಪ್ರಪಂಚವನ್ನು ಅದಮ ಮನಸ್ಥಿತಿಯನ್ನು ಅವರೆಸಗುವ ಹೀನಕೃತ್ಯವನ್ನು ನಿರ್ಬಿಢೆಯಾಗಿಯೇ ವರ್ಣಿಸುತ್ತಾರೆ. ತಾನು ಮೇಲುವರ್ಗದವರಿಂದ ಅನುಭವಿಸಿದ ಕಷ್ಟಕಾರ್ಪಣ್ಯಗಳು, ನೋವುಗಳು, ಗೀತಾ ನಾಗಭೂಷಣರವರಿಗೆ ಈ ತೆರನಾಗಿ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯ ಭಾಗವಾದ ಗ್ರಾಮೀಣ ಸಂಸ್ಕೃತಿ ನಿರ್ಭಯತೆಯಿಂದ ಬ್ರಾಹ್ಮಣ ರಾಮಪ್ಪ ಕುಲಕರ್ಣಿ ಮತ್ತು ಮಠದಯ್ಯರ ಅನೈತಿಕ ಜೀವನಕ್ರಮವನ್ನು ನಿರೂಪಿಸಲು ಸಾಧ್ಯವಾದುದು. ಹಳ್ಳಿಗಾಡಿನ ಮುಗ್ಧ ಅಸಹಾಯಕ ದಲಿತ ಮಹಿಳೆಯನ್ನು ಉಚ್ಚಕುಲದವರು ಲೈಂಗಿಕವಾಗಿ ಶೋಷಣೆ ಮಾಡುವುದು. ಪರಸ್ಪರ ಹೆಣ್ಣಿನ ವಿಷಯ ಇಟ್ಟುಕೊಂಡು ಸದಾ ಸಂಘರ್ಷದಲ್ಲಿರುವುದು ಮನಃಶಾಂತಿ ಕಳೆದುಕೊಂಡು ಪರಿಸರ ಶಾಂತಿಯನ್ನು ಹಾಳು ಮಾಡುವಂತಾದ್ದು, ತದನಂತರ ಪರಸ್ಪರ ಇವರು ಹಿಂಸಾತ್ಮಕರಾಗುವುದು ನಡೆಯುತ್ತಾ ಹೋಗುತ್ತದೆ. ಈ ಮಧ್ಯೆ ಹುಲಿಗ್ಯಾನಂತಹ ಹಾಲಿನ ಮನಸ್ಸಿನವನು ಕುಲಕರ್ಣಿಯ ಪಾಪದ ಕೆಲಸಕ್ಕೆ ಬಲಿಯಾಗುವ ಬಲಿಪಶುವಾಗುತ್ತಾನೆ.

'ಕೋತಿ ಮೊಸರು ತಿಂದು ಮೇಕೆಯ ಬಾಯಿಗೆ ಒರೆಸಿದಂತೆ' ಎಂಬ ನಾಣ್ಣುಡಿಯಂತೆ ಅಮಾಯಕ ಹುಲಿಗ್ಯಾ ಕುಲಕರ್ಣಿ ರಾಮಪ್ಪನ ಹುನ್ನಾರಕ್ಕೆ ಬಲಿಯಾದುದು. ದಲಿತರ ಮೇಲಾಗುತ್ತಿರುವ ಅನ್ಯಾಯದ ಪರಾಕಾಷ್ಠೆಯಾಗುತ್ತದೆ. ಕುಟುಂಬದ ಆಧಾರಸ್ಥಂಬವೂ, ಬಾಳಿನ ಸಂಗಾತಿಯಾದ ಹುಲಿಗ್ಯಾ ಆಡಳಿತ ಅಧಿಕಾರಶಾಹಿಯ ಭಾಗವಾದ ಪೋಲಿಸರ ಕೈವಶವಾಗಿ ಜೈಲು ಸೇರುವುದು ಹುಲಿಗ್ಯಾನ ಹೆಂಡತಿಯಾದ ಲಕ್ಕಿಗೆ ಅಪಾರ ಸಂಕಟವನ್ನುಂಟು ಮಾಡುತ್ತದೆ. ಹುಲಿಗ್ಯಾನ ಪರವಾಗಿ ನಿಂತು ಜಾಮೀನು ಕೊಟ್ಟು ಬಿಡಿಸಿಕೊಂಡು ಬರುವ ಗೋಜಿಗೆ ಹೋಗದ ರಾಮಪ್ಪ ಕುಲಕರ್ಣಿ ಅಮಾನವೀಯನು ಬರ್ಬರ ಸಂಸ್ಕೃತಿಯ ಪ್ರತೀಕವೂ ಆಗುತ್ತಾನೆ.

ಉಂಡಮನೆಗೆ ಎರಡು ಬರೆಯದ ಹುಲಿಗ್ಯಾನ ಬಾಯಲ್ಲಿ ಎಂಥ ಮುಗ್ಧ ಮಾತುಗಳು "ಕುಕ್ಕಣ್ಣಿ ಏಟಾದರನೂ ನಮ್ಮ ಧಣಿ ಹನಾ ಲಕ್ಕೀ...... ನಾ ಬೆಳ್ದು ದೊಡ್ಡಾವ ಆಗಿದ್ದು

ಅವನ ಎಂಜಲ ಅನ್ನಾ ತಿಂದೇ. ಉಪ್ಪುಂಡ ಮನೀಗಿ ಹರಕಿ ಕುಡ್ಬೇಕು, ಸರಾಪ ಕುಡಬಾರ್ದು ಲಕ್ಕೀ....." ಗಂಡ ಜೈಲು ಸೇರಿದ ಮೇಲೆ ಒಂಟಿಯಾದ ಲಕ್ಕಿ ಮಾನಸಿಕವಾಗಿ ಕುಸಿದು ಹೋಗುತ್ತಾಳೆ. ಇಂಥ ಸಂದರ್ಭವನ್ನೇ ಸುಸಂದರ್ಭವೆಂದು ಭಾವಿಸುವ ರಾಮಪ್ಪ ಕುಲಕರ್ಣಿಯಂತಹ ವಿಷಯಲಂಪಟರು ಲಕ್ಕಿಯ ಬಾಳಲ್ಲಿ ನಂಜು ಕಾರುವವರಾಗುತ್ತಾರೆ. ನಯ ವಿನಯ ಕರುಣೆ ದಯೆಯ ಸೋಗು ಹಾಕುತ್ತ ಹಳ್ಳಿಯ ಆಡಳಿತ ವ್ಯವಸ್ಥೆಯ ಮುಖ್ಯಭಾಗವಾದ ರಾಮಪ್ಪ ಕುಲಕರ್ಣಿಯಂತವರು ಅಸಹಾಯಕ ಹೆಂಗಳೆಯರನ್ನು ಲೈಂಗಿಕ ತೃಷೆ ತೀರಿಸಿಕೊಳ್ಳಲು ಬಳಸಿಕೊಳ್ಳುವುದು ದಲಿತ ಮಹಿಳೆಯರ ಮೇಲಾಗುತ್ತಿರುವ ಲೈಂಗಿಕ ಶೋಷಣೆಯ ಪ್ರತೀಕವಾಗುತ್ತಾರೆ.

ಲಕ್ಕಿಯೊಂದಿಗೆ ಅನೈತಿಕ ಲೈಂಗಿಕ ಸಂಬಂಧ ಬೆಳೆಸುವ ರಾಮಪ್ಪ ಕುಲಕರ್ಣಿಯ ಅಂತರಂಗದಲ್ಲಿ ಪರಿಶುದ್ಧತೆಯೇ ಮಾಯ. ಬೇರೆಯವನ ಮಡದಿಯನ್ನು ತನ್ನ ಕಾಮಾಸಕ್ತಿಗೆ ಬಳಸಿಕೊಂಡು ಅದಮನಾದ ರಾಮಪ್ಪ ಕುಲಕರ್ಣಿ ಜೈಲಿನಿಂದ ಹಿಂತಿರುಗಿ ಬಂದ ಹುಲಿಗ್ಯಾನಿಗೆ ಬಂದವ ಮಾತನಾಡಿ ಬಾಯಿ ಮುಚ್ಚಿಸುತ್ತಾನೆ. ಅವನ ಎದೆಯಾಳದ ರೋಷ ಹೆಡೆಯಾಡದಂತೆ ನೋಡಿಕೊಳ್ಳುವಲ್ಲಿ ಎಚ್ಚರ ವಹಿಸುವ ರಾಮಪ್ಪ ಕುಲಕರ್ಣಿ ಕಾಲಾಂತರದಲ್ಲಿ ಅವಿತಿಟ್ಟು ಹುಲಿಗ್ಯಾನ ಆಕ್ರೋಶ ಅಸ್ಫೋಟನೆಯಲ್ಲಿ ದರ್ಪದ ಅಮಾನವೀಯ ಬರ್ಭರ ಸಂಸ್ಕೃತಿಯ ಅಸಂಸ್ಕಾರಯುತ ಕುಲಕರ್ಣಿಯನ್ನು ಬಲಿ ತೆಗೆದುಕೊಳ್ಳುತ್ತದೆ.

ಕುಡಿದ ಅಮಲಿನಲ್ಲಿ ಜಾಗೃತವಾಗುವ ಹುಲಿಗ್ಯಾನ ಪ್ರಜ್ಞೆ ಆಡಿಸುವ ಮಾತು ಕುಲಕರ್ಣಿ ರಾಮಪ್ಪನ ಜಂಘಾಬಲವನ್ನು ಉಡುಗಿಸುವಂತಿತ್ತು. "ಕುಕ್ಕಣ್ಣೀರೇ....... ನಾ ಒಂದ ಮಾತ ಕೇಳ್ತಿನಿ. ಎದಿಮ್ಯಾಲ ಕೈಇಟಗೊಂಡು ಖರೇ ಹೇಳ್ರಿ ನೀವು. ನನ್ ಹೆಂತಿ ಮೈಯಂಬಾದು ನೀವು ನಾಕೋರ್ಸ್ತನಕಾ ಮೇಯ್ದಿರಿ. ಎಲ್ಲಾ ಕಡಿ ನಾಲಿಗಿ ಆಡ್ಸಿ, ಕಚ್ಚಿ ತಿಂದು ತಿಂದು ತೇಗೀರಿ....... ಅದಕ್ಕ ಒಂದೇ ಒಂದ ದಿನಾ........ ಒಂದ ದಿನಾ....... ನನಗ ನಿಮ್ಮ ಹೆಣ್ತೀಗಿ ಕುಡ್ರಿ. ನಾ ಅವ್ರೀಗಿ ಉಣಂಗಿಲ್ರೀ......... ಬರೇ ಅವರ ಮೈಯೆಲ್ಲಾ ನೆಕ್ಕಿ ಅದರ ರುಚಿ ನೋಡ್ತಿನೆಂತ ಆಟೀ........... ಒಂದೇ ರಾತರೀ."[೧೦] ಶೂದ್ರಾತೀಶೂದ್ರನಾದ ಹುಲಿಗ್ಯಾನ ಕುಡಿತದ ಅಮಲು ಉಚ್ಚವರ್ಗದವರ, ಉಳ್ಳವರ ಬರಡು ಮನದ ನಗ್ನತೆಯನ್ನು ಬಯಲು ಮಾಡಿಸುತ್ತದೆ. ದಾಕ್ಷಿಣ್ಯತೆಯ ಹಂಗಿಲ್ಲದ, ಯಾವ ಮೂಲಾಜಿಗೂ ಬಲಿಯಾಗದ ಹುಲಿಗ್ಯಾನ ಬಾಯಿಯಲ್ಲಿ ಬರುವ ತೀವ್ರತೆಯ ಮಾತುಗಳು ಅವನುಂಡ ಕಹಿ ಅನುಭವದ ಭಾಗವಾಗಿ ಬರುತ್ತದೆ.

ಕಥೆಯ ಮುಕ್ತಾಯದ ಹಂತದಲ್ಲಿ ಗೀತಾ ನಾಗಭೂಷಣರಂತಹ ದಲಿತ ಬಂಡಾಯ ಕತೆಗಾರ್ತಿಯರು ಕಥೆಯ ಹಂದರದೊಳಗೆ ಪ್ರತಿಭಟನೆಯು ಜ್ವಾಲೆಯಾಗಿ ಪರಿವರ್ತಿತವಾಗುವುದನ್ನು ತಮ್ಮದೇ ಕಥನಕ್ರಮದಲ್ಲಿ ನಿರೂಪಿಸುತ್ತಾರೆ. ತನ್ನ ಹಾರೈಕೆಯಲ್ಲಿ ಬೆಳೆದ ಕಿಲಾರಿ ಎತ್ತುಗಳ ರೆಚ್ಚೆಗೆ ರಾಮಪ್ಪ ಕುಲಕರ್ಣಿಯನ್ನು ಬಲಿಯಾಗುವುದರ ಮುಖೇನ ಹುಲಿಗ್ಯಾ ತಾಯಿ ಮತ್ತು ತನ್ನ ಕುಟುಂಬದ ಮೇಲಾದ ಅನ್ಯಾಯದ ವಿರುದ್ಧ ಪ್ರತಿಕಾರ ತೀರಿಸಿಕೊಳ್ಳುತ್ತಾನೆ. "ಕುಕ್ಕಣೀ....... ನಿಂದ್ರೆಲೆ ಸೂಳ್ಯಾಮಗನೇ....... ನಿನ್ ಕತಿ ಇವತ್ತಿಗಿ ಮುಗೀತಂತ ತಿಳ್ಕೋ...... ನೀ ನನ್ ಹೆಣ್ತೀಗಿ ಕೆಡಸ್ದಿ. ಈಗ ನಮ್ ಕೇರಿ ಮಾಳಿಗಿ ಬಾ ಅಂತ ಕರದಿದ್ದಿ. ನೀ ಹಿಂಗೇ ಏಸು ಹೆಂಗ್ಸರಿಗಿ ಹಾಳ ಮಾಡಿದ್ದಿ ಅಂಬಾದು ನನಗ್ಗೊತ್ತದಾ........ ಇನ್ನ ನೀ ಬದಕಬಾರ್ದು. ನೀ ಇಸದ ಗಿಡಾಯಿದ್ದೀ....... ನಿನ್ನ ಆಳ ಮಕ್ಕಳ ಮೈಯಾಗಿನ ಸಗತಿ ಕರಗ್ಸಿ. ನಿನ್ ಹೋರಿಗೋಳ ತೊಡ್ಡ ಬಡಸಿ, ಅವರ ತಾಖತ್ ಕೊಲ್ಲಿ ನೀ ಮಜಾ ಮಾಡ್ತಿದ್ದಿ ಈಸ ದಿನಾ, ನಿನ್ ಹೋರಿ ಗೋಳು, ನಿನ್ ಆಳ ಮಕ್ಕಳು ನಿನಗ ತಿರಗಿಬೀಳಂಗಿಲ್ಲಂತ ಮಾಡಿದೆಲ್ಲಾ........ ಈಗ ನೋಡು....... ಅಂದವನೇ ಕಾಮ್ಯಾ ಭೀಮ್ಯಾರ ಕೊಳ್ಳಾಗಿನ ಹಗ್ಗ ಬಿಚ್ಚಿ ಕಾಮ್ಯಾ ಭೀಮ್ಯಾ ಬರ್ರೋ ದೋಸ್ತ್ .... ಈ ಸೂಳ್ಯಾ ಮಗನ ಜೀಂವಾ ಉಳಸಬ್ಯಾಡ್ರೀ .... ನಾ ಅಂವಗ ಕೊಲ್ಲಿ ಜೇಲಿಗಿ ಹೋಗಂಗಿಲ್ಲ. ನೀವೇ ಕೊಲ್ಲ್ರೀ ಅಂವಗಾ...... ಹುಂ .... ಓಡ್ರೀ......... ಇರೀರಿ .... ಕೂಲ್ರೀ........ ಎಂದು ಕೂಗಿ ಅವುಗಳನ್ನು ಹುರಿದುಂಬಿಸಿ ಬಾಲ ಒಡ್ಡು ಮುರಿದ. ಕುಕ್ಕಣ್ಣಿ ಭಯಗೊಂಡು ಕಂಗಾಲಾಗಿ ಮುಂದೆ ಓಡಿದ. ಅವನವೇ ಕಿಲಾರಿ ಹೋರಿ ಗೋಳು ಸಿಟ್ಟಿನಿಂದ ಧುರಕಿ ಹೊಡ್ದು ನೆಲಕ್ಕೆ ಕಾಲು ಕೆದರಿ. ಅವನ ಬೆನ್ನು ಹತ್ತಿದುವು, ಅರೆಚಣದೊಳಗೇ ಕುಕ್ಕಣೀ ಕುಸಿದು ಬಿದ್ದ......"[೧೧] ಪಶು ಪ್ರತಿಮೆ ಸಾಧನೆಯೊಂದಿಗೆ ಮಾನವ ಪ್ರತಿಮೆ ಒಡಗೂಡಿ ಕುಕ್ಕಣೀ ರಾಮಪ್ಪನಂತಹ ಕುಕೃತ್ಯ ಸಾರವನ್ನು ಮುಗಿಸಿಬಿಡುವ ಗೀತಾ ನಾಗಭೂಷಣರವರ ಸೃಜನಶೀಲ ಕಥನಕ್ರಿಯೆ, ಮನೋಜ್ಞ ಕಥನಕ್ರಮ ಮತ್ತು ಅನನ್ಯ ನಿರೂಪಣೆ ಓದುಗನ ಪ್ರಜ್ಞಾಕ್ಷಿತಿಜವನ್ನು ವಿಸ್ತರಿಸುವಂತಾಗುತ್ತದೆ.

ಗೀತಾ ನಾಗಭೂಷಣರವರ ಕಥೆಗಳ ಕಥಾ ನಿರೂಪಣೆಯು ಅವರ ಅನುಭವ ಲೋಕಕ್ಕೆ ಕೈಗನ್ನಡಿಯಂತಿವೆ ಹಾಗೂ ಕನ್ನಡ ಕಥಾಸಾಹಿತ್ಯದಲ್ಲೇ ವಿಶಿಷ್ಟವಾದದ್ದು. ಗೀತಾರವರು ಸೃಷ್ಟಿಸುತ್ತಿರುವ ಸಮಾಜವೇ ಕೇದಗೆಯ ಬನದಂತೆ ಮುಳ್ಳುಗಳಿಂದ ಕೂಡಿದೆ. ಅವರ ನಿರೂಪಣಾ ತಂತ್ರದಲ್ಲಿಡಗಿರುವ ಸುಮಾರು ಐವತ್ತು ಕಥೆಗಳು ತನ್ನದೇ ಆದಂತಹ ಶೈಲಿಯನ್ನು ಒಳಗೊಂಡು ನಿರೂಪಿತವಾಗಿವೆ.

ಸಾಮಾಜಿಕ ಅನೈತಿಕತೆ ಮತ್ತು ತಾಯ್ತನದ ಅಭಿವ್ಯಕ್ತಿ

ಗೀತಾ ನಾಗಭೂಷಣ ಅವರ ಐವತ್ತು ಕಥೆಗಳಲ್ಲಿ 'ಅವ್ವ' ಕಥೆಯು ಪ್ರಮುಖವಾದದು. ಈ ಕಥೆಯು ನಗರಕೇಂದ್ರಿತವಾದಂತಹ ಕಥೆಯಾಗಿದೆ. ಅನಾದಿ ಕಾಲದಿಂದ ನಂಬಿಕೊಂಡು ಬಂದಂತಹ ಆಸ್ಪತ್ರೆಯ ಅವಶ್ಯಕತೆಗಳು ಪುಗಸಟೆಯಾಗಿ ದೊರೆಯುತ್ತವೆ ಎಂಬ ಪರಿಕಲ್ಪನೆಯನ್ನಿಟ್ಟುಕೊಂಡು ಮಗುವನ್ನೆತ್ತಿಕೊಂಡು ಆಸ್ಪತ್ರೆಗೆ ಬಂದ ಗಂಗಾಳ ಕತೆಯಾಗಿದೆ. ಇಲ್ಲಿ ಹಳ್ಳಿಯ ಬದುಕಿಗೂ ನಗರಕೇಂದ್ರಿತ ಬದುಕಿಗೂ ಇರುವಂತ ವ್ಯತ್ಯಾಸವನ್ನು ಕತೆಗಾರ್ತಿ ಮಾರ್ಮಿಕವಾಗಿ ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಕತೆಯ ಒಂದೊಂದು ಸಂಗತಿಯು ಕತೆಗಾರ್ತಿ ಅನುಭವಂತರಾಳದಿಂದ ಬರುತ್ತಿದೆಯೋ ಏನೋ ಎನ್ನುವ ಹಾಗೆ ಅನಾವರಣಗೊಂಡಿದೆ. ನಿರೂಪಣೆಯ ಕ್ರಮವು ಸರಳ ಸ್ಪಷ್ಟವಾದಂತ ಹಳ್ಳಿ ಭಾಷೆಯಲ್ಲಿ ರಚನೆಗೊಂಡಿದೆ.

ಒಂದು ಹಳ್ಳಿಯ ಹೆಣ್ಣುಮಗಳನ್ನು ಆಸ್ಪತ್ರೆಗೆ ಕರೆತಂದು ಆಕೆಯಿಂದ ಆಸ್ಪತ್ರೆಯ ವ್ಯವಸ್ಥೆಯನ್ನು ಸಮಾಜಕ್ಕೆ ಅನಾವರಣಗೊಳಿಸುವ ಕಥಾ ನಿರೂಪಣೆಯ ತಂತ್ರವು ಅತ್ಯಂತ ಪ್ರಶಂಸನೀಯವಾದದ್ದು. ಬಡ ಹೆಣ್ಣುಮಗಳು ಗಂಗಾ ಮಗನನ್ನು ಉಳಿಸಿಕೊಳ್ಳುವುದಕ್ಕಾಗಿ ತಾನು ಆಸ್ಪತ್ರೆಯಲ್ಲಿ ಡಾಕ್ಟರ್‌ಗಳನ್ನು ಅಂಗಲಾಚಿ ಬೇಡಿಕೊಳ್ಳುವ ಸನ್ನಿವೇಶವು ಕರುಣಾಜನಕವಾದದ್ದು. ನಿರ್ಗತಿಕಳಾದ ಗಂಗಾ ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಪುಗಸಟೆಯಾಗಿ ಸಿಗುತ್ತದೆ ಎಂಬ ಭ್ರಮೆ ಮಣ್ಣಾಗುತ್ತದೆ. ಮಗನನ್ನು ಉಳಿಸಿಕೊಳ್ಳಲೇಬೇಕೆಂಬ ಆಸೆಯಿಂದ ಮೈಮಾರಿಕೊಂಡು ಬಂದು ಔಷಧಿ ತೆಗೆದುಕೊಂಡು ಬಂದರೂ ಮಗು ಉಳಿಯುವುದಿಲ್ಲ. ಅದೇ ವೇದನೆಯಲ್ಲಿ ಮತ್ತೆ ಅದೇ ಸ್ಥಳಕ್ಕೆ ಹೋಗಿ ನಿಂತಾಗ ಸಮಾಜ ಆಕೆಯನ್ನು ಒಬ್ಬ ವೇಶ್ಯೆಯನ್ನಾಗಿ ಮಾಡುತ್ತದೆ. ಆದರೆ ಗೀತಾರವರು ಗಂಗಾನ ಕಡೆಯಿಂದ ಸಮಾಜದಲ್ಲಿ ನಡೆಯುವ ಅನಿಷ್ಟತೆಯನ್ನು ನಿರೂಪಿಸುವುದು ಕರುಣಾಜನಕ. ನಗರ ಪ್ರದೇಶದ ಜನತೆಯ ಭಾವಗುಣಗಳು ಎಂತಹವು ಎಂಬುದನ್ನು ತಿಳಿಸುತ್ತದೆ. ಒಬ್ಬ ತಾಯಿ ಮಗುವಿಗಾಗಿ ಏನು ಬೇಕಾದರೂ ಮಾಡುತ್ತಾಳೆ ಎಂಬುದಕ್ಕೆ ತಾಯಿ 'ಗಂಗಾ'ನೇ ನಿದರ್ಶನವಾಗಿ ನಮ್ಮ ಕಣ್ಣ ಮುಂದೆ ಕಾಣುವಂತೆ ಮಾಡಿದ್ದಾರೆ. ತಾಯಿಯ ಹೃದಯ ಭಾವಸಂಬಂಧಿಯು ತುಂಬಾ ವಿಶಾಲವಾದದ್ದು ಏಕೆಂದರೆ ತನ್ನ ಸ್ಥಿತಿ ಏನೇ ಇದ್ದರೂ ಕರುಳಬಳ್ಳಿಗಾಗಿ ಹಂಬಲಿಸುವ ಗುಣ ತಾಯಿಯದು ಮಾತ್ರ ಬದಲಾಗಿ ತಂದೆಯದು ಇಲ್ಲದಿಲ್ಲ.

'ಅವ್ವ' ಕಥೆಯು ನಗರ ಜೀವನದಲ್ಲಾಗುವ ಸಮಸ್ಯೆಗಳು ತಲ್ಲಣಗಳನ್ನು ಕುರಿತು ಹೇಳುತ್ತದೆ. ಇದೇ ರೀತಿಯಾಗಿ ಬೆಸಗರಹಳ್ಳಿ ರಾಮಣ್ಣನವರು ಬರೆದಂತಹ 'ಗಾಂಧಿ'

ಕತೆಯು ನಗರಜೀವನ ಆಸ್ಪತ್ರೆಯ ವಿಭಿನ್ನತೆಗಳನ್ನು ಕಟ್ಟಿಕೊಡುತ್ತದೆ. ಕಥೆಗಾರ ಒಬ್ಬ 'ಗಾಂಧಿ' ಎನ್ನುವ ಹೆಸರನ್ನಿಟ್ಟುಕೊಂಡು ಅದಕ್ಕಿರುವ ಕಿಮ್ಮತ್ತು ಎಷ್ಟಿದೆ ಎಂಬುದನ್ನು ಅರಿಯುವ ಪ್ರಯತ್ನ ಮಾಡಿದ್ದಾರೆ. ಈ ಎರಡು ಕತೆಗಳ ವಸ್ತು ನಗರಪ್ರದೇಶದ ಆಸ್ಪತ್ರೆ. ಇಲ್ಲಿ ಗೀತಾ ಹಾಗೂ ಬೆಸಗರಹಳ್ಳಿ ರಾಮಣ್ಣನವರು ಬಹುಮುಖ್ಯವಾಗಿ ಆಸ್ಪತ್ರೆಯ ಸ್ಥಿತಿಗತಿಯನ್ನು ನಿರೂಪಿಸುವುದರ ಜೊತೆಗೆ ಸಮಾಜದ ಓರೆಕೋರೆಗಳ ಅರಿವನ್ನುಂಟು ಮಾಡುತ್ತಾರೆ. ಆಸ್ಪತ್ರೆ ಎನ್ನುವ ಒಂದು ಕೇಂದ್ರಬಿಂದುವನ್ನಿಟ್ಟುಕೊಂಡು ಜೀವನಗಾಥೆಯನ್ನು ಹೇಳುವುದು ಕತೆಗಾರ್ತಿಯ ನಿರೂಪಣಾ ತಂತ್ರದ ವೈಶಿಷ್ಟ್ಯವಾಗಿದೆ; ವಿಶೇಷವೂ ಆಗಿದೆ. ಹಾಗೆಯೇ 'ಗಾಂಧಿ' ಕತೆಯಲ್ಲಿ 'ಗಾಂಧಿ' ತೀರಿಕೊಳ್ಳುತ್ತಾನೆ. 'ಅವ್ವ' ಕತೆಯಲ್ಲೂ ಕೂಡ ತನ್ನ ಮಗ ಉಳಿಯುವುದಿಲ್ಲ. ಪಿ.ಲಂಕೇಶ್ ಅವರ 'ಮುಟ್ಟಿಸಿಕೊಂಡವನು' ಒಬ್ಬ ರೋಗಿಯ ಸುತ್ತ ಕಟ್ಟು ಕಥೆಯು ಅತ್ಯಂತ ಹೃದಯ ವಿದ್ರಾವಕವಾದ ವಿಷಯ. ಜಾತಿಪಂಥ, ಧರ್ಮ, ರಾಜಕೀಯ ಆಸ್ಪತ್ರೆಯ ಸಮಸ್ಯೆ ಜಾತಿಯಿಂದಾಗುವ ಸಮಸ್ಯೆಗಳು ಹೀಗೆ ಒಂದ ವಸ್ತುವನ್ನು ಪರಿಚಯಿಸುವುದರ ಜೊತೆಗೆ ಮತ್ತೊಂದು ಮಗದೊಂದನ್ನು ಸಮಾಜಕ್ಕೆ ತಿಳಿಸುವುದು ಲಂಕೇಶ್, ಗೀತಾ, ರಾಮಣ್ಣನವರ ಬರವಣಿಗೆಯ ಉದ್ದೇಶವಾಗಿದೆ.

ಚದುರಂಗ ಅವರು ಬರೆದಿರುವ 'ಶವದ ಮನೆ' ಕಥೆಯೂ ಕೂಡ ಈ ಕಥೆಗಳ ಸಾಲಿಗೆ ಸೇರುತ್ತದೆ. ಚದುರಂಗರವರ ಕಥಾನಿರೂಪಣೆಯ ತಂತ್ರ ಅಮೋಘವಾದದ್ದು. 'ಶವದ ಮನೆ' ಕಥೆ ನಗರ ಪ್ರದೇಶದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಸಂಬಂಧಿಸಿದ್ದು. ಕಥೆಯಲ್ಲಿ 'ನಾರಾಯಣಪ್ಪ' ಎಂಬ ಒಬ್ಬ ವ್ಯಕ್ತಿಯನ್ನು ಸೃಷ್ಟಿಸಿ ಆತನನ್ನು ಸರ್ಕಾರಿ ಆಸ್ಪತ್ರೆಗೆ ಕಳಿಸುವಂತೆ ಮಾಡಿ ಆತನ ಪ್ರಾಣ ಹೋಗದಂತೆ ಮಾಡಿ ಆತ ಸತ್ತು ಹೋಗಿದ್ದಾನೆ ಎಂಬ ಭ್ರಮೆಯಿಂದ ಆತನನ್ನು ಶವದ ಮನೆಗೆ ತೆಗೆದುಕೊಂಡು ಹೋಗಿ ಹಾಕುತ್ತಾರೆ. ನಂತರ ಎಚ್ಚರಗೊಂಡ ನಾರಾಯಣಪ್ಪ ತನ್ನ ಸುತ್ತಲಿನ ಜಗತ್ತು ಕಂಡು ಪರಮಾಶ್ಚರ್ಯ ಪಡುತ್ತಾನೆ. ಆಗ ಸುತ್ತಲೂ ನೋಡಿದಾಗ ಹೆಣಗಳ ರಾಶಿಯೇ ಇರುತ್ತದೆ. ಅಲ್ಲಿಂದ ಒಬ್ಬೊಬ್ಬರಾಗಿಯೇ ಎದ್ದು ತಮ್ಮ ತಮ್ಮ ಕಥೆಗಳನ್ನು ಆ ಬದುಕುಳಿದಿರುವ ನಾರಾಯಣಪ್ಪನಿಗೆ ಹೇಳುತ್ತಾರೆ. ಕಥೆಯಲ್ಲಿ ನಿರೂಪಣೆಗೊಂಡಿರುವುದು ನಾರಾಯಣಪ್ಪನೇ ಅವರೆಲ್ಲರ ಕಥೆಗಳನ್ನು ಸಹೃದಯ ಸಮಾಜಕ್ಕೆ ಹೇಳುವಂತೆ ಭಾಸವಾಗುತ್ತದೆ. ಇದು ಚದುರಂಗರವರ ಕಥಾ ನಿರೂಪಣೆಯ ತಂತ್ರ ಹಾಗೂ ಸಂವಿಧಾನವೂ ಆಗಿದೆ.

ಗೀತಾನಾಗಭೂಷಣ ಅವರ 'ಅವ್ವ', ಬೆಸಗರಹಳ್ಳಿ ರಾಮಣ್ಣನವರ 'ಗಾಂಧಿ' ಪಿ.ಲಂಕೇಶ್‌ರವರ 'ಮುಟ್ಟಿಸಿಕೊಂಡವನು', ಜೊತೆಗೆ ಚದುರಂಗರವರ 'ಶವದ ಮನೆ'

ಈ ನಾಲ್ಕು ಕಥೆಗಳು ನಗರ ಪ್ರದೇಶದ ಸರ್ಕಾರಿ ಆಸ್ಪತ್ರೆಯಲ್ಲಿ ನಡೆಯುವಂತಹ ಕಥೆಗಳು. ಆದರೆ ಆಸ್ಪತ್ರೆಯ ಕಥೆಯನ್ನು ಕಟ್ಟುವ ರೀತಿ–ನೀತಿಗಳು ತಂತ್ರ ಕೌಶಲ್ಯಗಳು ಮಾತ್ರ ಬೇರೆ ಬೇರೆಯಾಗಿದೆ. ಗೀತಾರವರ 'ಅವ್ವ' ಕಥೆಯಂತೆಯೇ ಬೆ.ರಾಮಣ್ಣನವರ 'ಗಾಂಧಿ' ಕಥೆಯು ಇದೆ ಎಂದಾದರೆ, ಈ ಎರಡೂ ಕಥೆಶೈಲಿಯ ಮಕ್ಕಳು ಸಾವನ್ನಪ್ಪುತ್ತಾರೆ. ಆದರೆ ಆಸ್ಪತ್ರೆಯಲ್ಲಿಯೇ ಹುಟ್ಟಿದಂತಹ ಲಂಕೇಶರವರ 'ಮುಟ್ಟಿಸಿಕೊಂಡವನು' ಕಥೆಯಲ್ಲಿ 'ಬಸಲಿಂಗ' ಎಂಬ ಮೇಲುವರ್ಗದ ವ್ಯಕ್ತಿ ಜಾತಿತಾರತಮ್ಯದಿಂದ ತನಗಿದ್ದಂತಹ ಎರಡು ಕಣ್ಣುಗಳಲ್ಲಿ ಒಂದು ಕಣ್ಣನ್ನು ಕಳೆದುಕೊಳ್ಳುತ್ತಾನೆ. ಆದರೆ ಲಂಕೇಶರವರು 'ಬಸಲಿಂಗ'ನ ಮತ್ತೊಂದು ಕಣ್ಣನ್ನು ಉಳಿಸುವುದಕ್ಕಾಗಿ ಮತ್ತೊಮ್ಮೆ ಕೆಳಜಾತಿಯ ಡಾ.ತಿಮ್ಮಪ್ಪನ ಹತ್ತಿರ ಕಳಿಸುತ್ತಾರೆ. ಅಂದರೆ ಇಲ್ಲಿ ಸೃಷ್ಟಿಯಾದ ಕಥಾ ನಿರೂಪಣೆಯಿಂದ ಔಷಧಿಯನ್ನು ನೀಡಲು ಜಾತಿ, ಮತ, ಪಂಥ, ಬೇಧವಿಲ್ಲವೆಂಬುದನ್ನು ತಿಳಿ ಹೇಳಲು ಹೊರಟಿದ್ದಾರೆ.

ಚದುರಂಗರ ಶವದಮನೆ ಕಥೆಯಲ್ಲಿ ನಾರಾಯನಪ್ಪ ಎಂಬ ವ್ಯಕ್ತಿಯು ಕಥೆಯ ನಿರೂಪಣಾ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರೂ ಕೂಡ ಎಲ್ಲರ ಕಥೆಗಳನ್ನು ಕೇಳಿ ಹೇಳಿದ ನಂತರ ಬೆಳಕಾಗುವ ಹೊತ್ತಿಗೆ ತಾನು ವಿಷಣ್ಣನಾಗಿರುತ್ತಾನೆ. ಶವದ ಮನೆಯಲ್ಲಿದ್ದಂತಹ ನಾರಣಪ್ಪ ಮತ್ತೆ ಕ್ರೂರ ಜಂತುಗಳಿಂದ ಕೂಡಿದ ಮನುಷ್ಯ ಜಗತ್ತಿಗೆ ಹೋಗಬಾರದು ಎಂಬ ನಿರ್ಧಾರಕ್ಕೆ ಬರುತ್ತಾರೆ. ಇಲ್ಲಿ ನಾರಣಪ್ಪ ಯಾವುದೇ ರೀತಿಯ ಸಾವನ್ನು ಅಪ್ಪಿರುವುದಿಲ್ಲ. ತನ್ನ ಯಾವ ಹೆಣ್ಣನ್ನು ಕಳೆದುಕೊಂಡಿರುವುದಿಲ್ಲ. ಆದರೆ ಎರಡು ಕಣ್ಣುಗಳಿದ್ದು, ಕಾಣದಂತೆ ಜೀವವಿದ್ದರೂ ಇಲ್ಲದವನಂತೆ ನಟಿಸಿ ಹಾಗೆಯೇ ಮಲಗುತ್ತಾನೆ. ಇಲ್ಲಿ ಚದುರಂಗದ ವ್ಯಂಗ್ಯತೆಯ ಸಾಮಾಜಿಕಪ್ರಜ್ಞೆ ವಿಶಿಷ್ಟವಾದದ್ದು.

'ಅವ್ವ' ಕಥೆಯಲ್ಲಿ ಬರುವ 'ಗಂಗಾ' ತಾನು ಕಲ್ಪಿಸಿಕೊಂಡ ಸರ್ಕಾರಿ ದವಾಖಾನೆಯ ಸ್ಥಿತಿಗತಿಯೇ ಬೇರೆ, ಅಲ್ಲಿ ಕಂಡುಂಡ ಪರಿಸ್ಥಿತಿಯೇ ಬೇರೆ. ಈ ಕಥೆಯಲ್ಲಿ ನಿರೂಪಿತಗೊಂಡಿರುವ ಸರ್ಕಾರಿ ದವಾಖಾನೆ, ಸರ್ಕಾರಿ ಡಾಕ್ಟರ್, ಹಾಗೂ ಸಮಾಜ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಮಗುವಿನ ತಾಯಿ ಗಂಗಾ ಮಗುವಿನ ಉಳುವಿಗಾಗಿ ಪರಿಪರಿಯಾಗಿ ಬೇಡಿಕೊಳ್ಳುವ ದುಃಖವನ್ನು ತೋಡಿಕೊಳ್ಳುವ ಅಂಗಲಾಚಿ ಬೇಡಿಕೊಳ್ಳುವ ಸಂದರ್ಭ ಎಂತಹವರಿಗೂ ಕಣ್ಣಲ್ಲಿ ನೀರುಕ್ಕುವಂತೆ ಮಾಡುತ್ತದೆ. ಗಂಗಾ ಸರ್ಕಾರಿ ದವಾಖಾನೆಯ ಡಾಕ್ಟರ್‌ಗೆ ಹೇಳುವ ಮಾತು. "ಯಪ್ಪಾ...... ಹಾಗಾದರೆ ಸಾಬ್ರೆ ...... ಇದು ಸರ್ಕಾರಿ ದವಾಖಾನಿ ಅದಾ ಅಲ್ರೀ...... ಬಡೂರಿಗೆಲ್ಲ ಪುಗಸಟ್ಟೆ ಆಗಸುದ್ಯೇ ಕುಡ್ತಾರಂತಲ್ರೀ ...... ನನ್ ಬಲ್ಲಿ ರೊಕ್ಕಾ ರುಪ್ಯೆ ಏನೋ ಇಲ್ಲಿಯಪ್ಪಾ."[೧೨] ಸರ್ಕಾರಿ ಆಸ್ಪತ್ರೆಯನ್ನು ಗಂಗಾ ತಿಳಿದುಕೊಂಡಿದ್ದು ಎಲ್ಲಾ ಸುಳ್ಳು ಎಂಬುದು ಗೊತ್ತಾಯಿತು.

“ಯಪ್ಪಾ ಸಾಬ್ರೇ ...... ನಿಮ್ ಕಾಲಿಗಿ ಬಿಳ್ತೀನ್ರೀ ಧಣಿ, ನಿಮ್ ರಿಣಾ ಇಟಗೋ ಮಂಗಿಲ್ರೀ .... ದುಡ್ಡು ನಿಮ್ ರುಪ್ಪೈ ಕೊಟ್ಟೀ ನಾ ನನ್ ಹಳ್ಳಿಗಿ ಹೋಗ್ತಿನ್ರೀ ಸಾಬ್ರೇ .... ನನ್ ಮಗಾ ಕಾಮಣಿರಿಂದೆ ಸಾಯ್ಲಕ್ಕತ್ತಾದ್ರೀ...... ಒಂದೇ ಮಗಾರಿ ನನಗಿರಾದು ...... ಆಗಸುದ್ಯಾ ಕುಡ್ರಿಯಪ್ಪಾ ..... ನಿಮ್ಮಕ್ಕಳಿಗ ಪುಣ್ಯ ಬರ್ತದ್ರೀ ತಂದೀ......”[೧೩] ಈ ರೀತಿಯಾಗಿ ಕಾಮಾಲೆರೋಗ ಬಂದ ಮಗುವಿನ ತಾಯಿ ಗಂಗಾ ಬೇಡಿಕೊಳ್ಳುತ್ತಾಳೆ.

‘ಮೂಡಿ ಬರ್ತಾನ ಚಂದ್ರಾಮ ನೋಡ’ ಸಣ್ಣಕಥೆಯಲ್ಲಿ ದಲಿತ ಬದುಕಿನ ಅನುಭವಗಳ ಆಗರವಾದ ಕಥಾನಿರೂಪಕಿ ಗೀತಾ ನಾಗಭೂಷಣರವರು ಕೆಳವರ್ಗದ ಬದುಕು-ಬವಣೆಗಳನ್ನು, ಆಸೆ ಆಶೋತ್ತರಗಳನ್ನು ಹಾಗೆಯೇ ಆದರ್ಶ ಮತ್ತು ಜೀವನಮೌಲ್ಯಗಳನ್ನು ತೆರೆದಿಡುವ ಪ್ರಯತ್ನ ಮಾಡುತ್ತಿದ್ದಾರೆ. ಕೆಳವರ್ಗದ ಕಡುಬಡವ, ನಿರ್ಗತಿಕ, ದಮನಿಕ ಜನಾಂಗದ ಅತಂತ್ರ ಬದುಕು, ತಮ್ಮದೆನ್ನುವ ಸೂರಿಲ್ಲದ ವಸತಿ ಹೀನರು ಗುಲ್ಬರ್ಗಾದಂತಹ ಮಹಾನಗರ ಸಮೀಪದ ಕುಣಿಗೇರಿ ಜೋಪಡಿ ಪಟ್ಟಿಯಲ್ಲಿ ಏನೆಲ್ಲಾ ಪ್ರಯಾಸದಿಂದ ನೆಲೆ ಕಂಡುಕೊಳ್ಳುವುದನ್ನು ಕಥೆಗಾರ್ತಿ ಕಟ್ಟಿಕೊಡುತ್ತಾರೆ. ಅಸಲಿ ಕುಣಿಗೇರಿ ಜೋಪಡಿಪಟ್ಟಿ ಸುಡುಗಾಡು ಪ್ರದೇಶ ಹೆಣಹೂಳುತ್ತಿದ್ದ ಸ್ಮಶಾನ ಜಾಗದಲ್ಲಿ ಗತಿಹೀನ ಕೆಳವರ್ಗದ ಜನ ತಮ್ಮದು ಎನ್ನುವ ಸೂರನ್ನೆ ಕಟ್ಟಿಕೊಳ್ಳುವುದು ಅವರ ಆಸ್ಮಿತೆಯ ಅಸ್ಥಿತ್ವದ ಅನಿವಾರ್ಯ ಭಾಗವೂ ಕೂಡ.

ಕಥಾ ನಿರೂಪಣೆಯಲ್ಲಿ ಕಥೆಗಾರ್ತಿ ಸೂಚ್ಯವಾಗಿ ನಿವೇದಿಸುವ ಪಟ್ಟಣಕ್ಕೆ ವಲಸೆ ಅಥವಾ ಗುಳೆ ಹೋಗುವ ಸಂಗತಿಯನ್ನು ಸಾದರಪಡಿಸುತ್ತಾರೆ. ಕಥಾನಾಯಕನಾದ ಈ ಹಿಂದೆ ಕಾರ್ಮಿಕನಾಗಿದ್ದ ಹೆಣಹೊರುವ ‘ಬೆಳ್ಯಾ’ ತನ್ನ ತಂದೆತಾಯಿಯರನ್ನು ಕಳೆದುಕೊಂಡು ತಬ್ಬಲಿಯಿಂದ ಕಾರಣದಿಂದ ಗುಲ್ಬರ್ಗಾದ ಕುಣಿಗೇರಿಗೆ ಬಂದು ಕಾಲಾಂತರದಲ್ಲಿ ಸಣ್ಣ ಜೋಪಡಿಯನ್ನು ಕಟ್ಟಿಕೊಳ್ಳುತ್ತಾನೆ. ಹಾಗೆಯೇ ‘ಸುಡುಗಾಡು’ ಕಾಯುವ ಕಾವಲುಗಾರ ಕೊರವರ ಮಿರೆಪ್ಪ ಹಸಿರು ಪರಿಸರ ನಾಶದ ಪರಿಣಾಮವಾಗಿ ಮೂಲಕಸುಬನ್ನು ತೊರೆಯಬೇಕಾದ ಹಿನ್ನೆಲೆಯಲ್ಲಿ ಗುಲ್ಬರ್ಗಾ ಶಹರಿಗೆ ಬಂದು ಸೇರಿ ‘ಸುಡುಗಾಡು’ ಕಾಯುವ ಹೊಸಪ್ರವೃತ್ತಿಯನ್ನು ಅವಲಂಬಿಸಬೇಕಾಯಿತು. ‘ಬೆಳ್ಯಾನ’ ಮುದ್ದಿನ ಮಡದಿ ‘ಗಂಗಾ’ಳ ಅಪ್ಪ ಮಾದಾರ ಮಾಪ್ಯ ಊರಲ್ಲಿ ಕೂಲಿಕೆಲಸ ಮಾಡುತ್ತಿದ್ದವನು ತನ್ನ ಹೆಂಡತಿ ತೀರಿಹೋದ ಮೇಲೆ ಊರನ್ನು ಬಿಟ್ಟು ಊರೂರು ಅಲೆಯುತ್ತಾ ಅಲೆಮಾರಿಯಾದಂತಹವನು ನಗರದ ಆಸ್ಪತ್ರೆಗೆ ಸೇರಿ ಕಾಲವಶನಾಗುವುದು ಈ ಮೇಲಿನ ಎಲ್ಲಾ ಪ್ರಕರಣಗಳಲ್ಲಿ ಸೂಕ್ಷ್ಮಮತಿಯಾದ ಗೀತಾ ನಾಗಭೂಷಣರವರಿಗೆ ವಲಸೆಯ ಹಿಂದೂ-ಮುಂದೂ, ಸಾಧಕ-ಬಾಧಕಗಳ, ಏಳು-ಬೀಳುಗಳ ದರ್ಶನ ಮಾಡಿಸುವಿಕೆಯ

ಹಂಬಲವಿದ್ದರೆಬಹುದೆನೋ ಎಂದೆನಿಸುತ್ತದೆ. ಅದರಲ್ಲೂ ದಿಕ್ಕುದೆಸೆಯಿಲ್ಲದ ಗತಿಹೀನ ದಲಿತ ಮಂದಿಯ ದುರಂತ ಬದುಕನ್ನು ಅನಾವರಣವೆಸಗುವ ಒಂದು ಸ್ಪಷ್ಟವಾದ ಸಾಮಾಜಿಕ ಕ್ರಿಯೆಯಾಗಿರಬಹುದೆನೋ ಎಂದೆನಿಸುತ್ತದೆ.

ಬೆಳ್ಯಾನ ಬದುಕು ಆರಂಭಗೊಳ್ಳುವುದು ಒಬ್ಬ ಸಾಮಾನ್ಯ ಕಾರ್ಮಿಕನಾಗಿ. ಪಾಯ ಕೆದುರುವ ಕಟ್ಟಡ-ಕಟ್ಟುವ ಗಾರೆ ಕೆಲಸದವರಿಗೆ ಸಹಾಯಕವಾಗಿ ಕಾರ್ಯ ನಿರ್ವಹಿಸುವ ಅವನ ಬಾಳಲ್ಲಿ ಸುಳಿಗಾಳಿಯಂತೆ ಸುಳಿದು ಬರುವ ಗಾಂಭಿರ್ಯದ ವೈದ್ಯ ಮುರುಳಿ. ಅವನಿಗೊಂದು ಹೊಸ ಉದ್ಯೋಗದ ಮಾರ್ಗವನ್ನು ಕಲ್ಪಿಸುತ್ತಾನೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಮೇಲ್ಮಟ್ಟದಲ್ಲಿರುವ ವೈದ್ಯ ಮುರಳಿ ಮಾನವೀಯತೆಯ ಸಾಕಾರನಾಗಿ ಕಾಣಿಸುವಲ್ಲಿ ಗೀತಾ ನಾಗಭೂಷಣರವರ ಉದಾತ್ತ ಮನೋಭಾವನೆ ಕಾರಣ. ಗುಣಕ್ಕೆ ಮತ್ಸರವೇ? ಎಂಬಂತೆ ಗುಣ ಸದ್ಗುಣಕ್ಕೆ ಪ್ರಾಶಸ್ತ್ಯ ನೀಡುವ, ಮುನ್ನಡೆಗೆ ತರುವ ಕಥೆಗಾರ್ತಿ ಉನ್ನತವರ್ಗದಲ್ಲಿಯ ಅಪರೂಪದ ಮಾನವ ರತ್ನಗಳನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ.

ಕಥಾಸಂದರ್ಭದಲ್ಲಿ ಬರುವ ಬಹುಸಂಖ್ಯಾತ ಪಾತ್ರಗಳು ದಿಕ್ಕು-ದೆಸೆಯಿಲ್ಲದ ಅಸಹಾಯಕ ದಲಿತರು ಅನಾಥಳಾದ ಗಂಗಾಳನ್ನು ಕರುಣೆಯಿಂದ ಕಾಣುವ ಬೆಳ್ಯಾ ಅವಳಿಗೆ ತನ್ನ ಜೋಪಡಿ ಪಟ್ಟಿಯಲ್ಲಿ ಸ್ಥಾನ ನೀಡುತ್ತಾನೆ. ತದನಂತರ ಅವಳ ಸ್ಥಿತಿ-ಗತಿಗೆ ಮರುಗುವ ಬೆಳ್ಯಾ ಅವಳಿಗಾಗಿ ತನ್ನ ಹೃದಯದಲ್ಲೂ ಸ್ಥಾನ ಕಲ್ಪಿಸುತ್ತಾನೆ. ಹೀಗೆ ಬೆಳ್ಯಾ ಅವಳಿಗೆ (ಗಂಗಾಳಿಗೆ) ಭೌತಿಕ ಸ್ಥಾನ ನೀಡುವುದಲ್ಲದೇ ತನ್ನ ಮಾನಸ ಲೋಕದಲ್ಲೂ ಒಂದು ಸುಂದರ 'ಕಾವು' ನಿರ್ಮಿಸಿ ಕೊಡುತ್ತಾನೆ. ಅವಳ ಪೂರ್ವಪರ ತಲೆಕೆಡಿಸಿಕೊಳ್ಳದೇ ಅವಳ ಅಂತಸ್ತು ಜಾತಿ ಮತ್ತಾವುದರ ಕಡೆಗೂ ತಲೆಗೆಡಿಸಿಕೊಳ್ಳದ ನಿಷ್ಕಳಂಕ ಮನಸ್ಸಿನ ಬೆಳ್ಯಾ ಬೆಳಕಿಲ್ಲದ ಗಂಗಾಳ ಬಾಳಲ್ಲಿ ಬೆಳದಿಂಗಳಾಗಿ ಬರುತ್ತಾನೆ. ಅವನು ಮುಂದುವರೆದ. ನೀ ಒಪ್ಕೊಳ್ಳಾ ಹಂಗಿದ್ರ ನಾ ನಿನಗ ಮದವಿ ಮಾಡ್ಕೊಂತಿನಿ. ನಾವಿಬ್ರೂ ಹೇಳಿ ಕೇಳಿ ಲಾವಾರಿಸಗೋಳು. ಯಾರು ದಿಕ್ಕಿಲ್ಲದ ಪರದೇಶಿಗೋಳು, ಇದ್ದೀವಿ ಇಬ್ಬರೂ ಮದಿ ಮಾಡ್ಕೊಂಡು ಒಬ್ಬರಿಗೊಬ್ಬರು ದಿಕ್ಕಾಗಿ ಬದಕ್ಕೋತ ಬಾಳ್ಯಾ ಮಾಡಾಮಿ, ಏನಂತಿ? ಎನ್ನುತ್ತಾನೆ.

ಅನಾಥಳಾಗಿ ಬಂದ ಹೆಣ್ಣೊಬ್ಬಳನ್ನು ಕಾಮನೆಗಳ ಕಣ್ಣಿಂದ ನೋಡದೆ ಅಂತಸ್ತಿನ ಮಾನದಂಡವಿಯದೇ ಅವಳ ಅಂತರಂಗದ ಬಹಿರಂಗದ ಭರವಸೆಯ ಕುರುಹಾಗಿ ಮೂಡಿ ಬರುವ ಬೆಳ್ಯಾವನ್ನು ಪಾತ್ರವನ್ನು 'ದಲಿತ ಸೂರ್ಯ' ಎಂದು ಕರೆಯಲಾಗಿದೆ.

ಬೇಂದ್ರೆ ಅವರ 'ಒಲವೆ ನಮ್ಮ ಬದುಕು' ಕವಿತೆಯಲ್ಲಿ ನಾನು ಬಡವಿ ಆತ ಬಡವ ಎಂಬ ಮಾತುಗಳು ದಂಪತಿಗಳ ಪ್ರಣಯದ ದಾಂಪತ್ಯ ಬದುಕನ್ನು ಚಿತ್ರಿಸುತ್ತದೆ. ಹಾಗೆಯೆ, ಪ್ರಸ್ತುತ ಕಥೆಯಲ್ಲಿ ನಿರೂಪಕಿ ಬೆಳ್ಯಾ ಮತ್ತು ಗಂಗಾ ಆರ್ಥಿಕವಾಗಿ ಅಬಲತ್ವವನ್ನು ಅನುಭವಿಸುತ್ತಿದ್ದರೂ ದಾಂಪತ್ಯದಲ್ಲಿ ಸಿರಿತನವನ್ನು ಅನುಭವಿಸುವ ಸಿರಿವಂತರೆಂಬುದನ್ನು ಕಾಣಿಸುತ್ತಾರೆ. ಪರಸ್ಪರ ಭಾವನೆಗಳ ವಿನಿಮಯ ಸುಮಧುರ ದಾಂಪತ್ಯ ಜೀವನ ಗೈವ ಬೆಳ್ಯಾ ಗಂಗಾ ಮದುವೆಯಾಗಿ ಆರು ವರ್ಷಗಳು ಕಳೆದುಹೋಗುತ್ತವೆ.

ಗಂಗಾಳಿಗೆ ತನಗೊಂದು ಮಗುಬೇಕೆಂಬ ಉತ್ಕಟ ಬಯಕೆಯ ಅನಾವರಣ ಮೂಡಿಸುವ ಸಂವೇದನಾಶೀಲತೆಯಿದೆ. ಗಂಗಾಳಿಗೆ ಮಕ್ಕಳ ಮೇಲೆ ಭಾಳ ಆಸೆಯಿತ್ತು. ತನಗೊಂದು ಕೂಸು ಹುಟ್ಟಲಿ ಅಂತ ಸಿಕ್ಕ ಸಿಕ್ಕ ದೇವರಿಗೆಲ್ಲ ಕೈಮುಗಿಯುತ್ತಿದ್ದಳು. ಹರಕೆ ಹೊತ್ತು ಮುಡಿಪು ಕಟ್ಟಿಡುತಿದ್ಲು. ಬೆಳ್ಯಾ ನಾ ಈಗ ಅತ್ತೂ ಅತ್ತೂ ಮುಗಿದು ಹೆಣವನ್ನು ಇಬ್ಬರೂ ಎತ್ತಿಕೊಂಡು ಒಯ್ದು ಕುಣಿಯಲ್ಲಿಟ್ಟರು. "ಒಂದ ಹಿಡಿ ಮಣ್ಣ ಹಾಕು ಗಂಗಾ..... ಅಂದನು ಬೆಳ್ಯಾ. ನಾ ಒಲ್ಲೇ ಬೆಳ್ಯಾ ಭಂಗಾರ ತುಕಡಿಹಂತಾ ಕೂಸಿನ ಮ್ಯಾಲ ನನ್ ಕೈಲಿಂದ ನಾನೇ ಮಣ್ಣ ಹಾಕಂಗಿಲ್ಲೋ ನಾನೂ...... ನನ್ ಕೈಲಿಂದಾಗಂಗಿಲ್ಲೊ ಸಿವನೇ...."[೧೪] ಎಂದು ಅಳುತ್ತ ಗಂಗಾ ಅಲ್ಲಿಂದ ಎದ್ದು ಹೊರಟಳು. ಬೆಳ್ಯಾನೇ ಮೆಣ್ಣೆಳೆದು, ಎಲ್ಲ ಮುಗಿಸಿ ಬಂದನು ಮಣ್ಣಾ ಮಾಡ್ತಾರ ಸಂತತಿಯ ಮುಂದುವರಿಕೆ ಸಂತಾನದಿಂದ ಮಾತ್ರ ಸಂತಾನ ಸಮುದಾಯಭಿವೃದ್ಧಿಗೆ ಮೂಲಸೂತ್ರ. ಸಮುದಾಯವಿರುವೆಡೆಯಲ್ಲಿ ಸಂಭ್ರಮ, ಸಂಬಂಧ ಸುಖ ಈ ಪರಿಕಲ್ಪನೆಯ ಗಂಗಾ ತನ್ನುದರದಲ್ಲಿ ಬೆಳ್ಯಾನ ಸಂತಾನ ಬಳ್ಳಿ ಹುಟ್ಟುವ ಹೆಬ್ಬಾಯಕೆಯ ತೋರ್ಪಡೆ.

ಮಾನವೀಯತೆಯ ಬೆಳ್ಯಾ, ಗಂಗಾಳನ್ನು ನಡೆಸಿಕೊಳ್ಳುವುದು ಪ್ರೀತಿ ಅನುರಾಗ ತೋರಿಸುವುದು, ಸಹಮತ ಸಹಾನುಭೂತಿ ತೋರಿಸುವುದು ಕಥೆಯುದ್ದಕ್ಕೂ ಸಹಜ ಸುಂದರವಾಗಿ ಮೂಡಿಬರುತ್ತದೆ. ಧಿಕ್ಕಿಲ್ಲದ ಹತ್ತು ವರ್ಷದ 'ಚಂದು' ಎಂಬ ಬಾಲಕ ಗಂಟಲುಬೇನೆಯ ಕಾರಣದಿಂದ ದವಾಖಾನೆಗೆ ಸೇರಿ ಗುಣಮುಖನಾಗದೇ ಮರಣ ಹೊಂದಿದ್ದು, ಅವನ ಹೆಣಹೊತ್ತು ಸ್ಮಶಾನಕ್ಕೆ ಹೊಯ್ದುಕೊಡುವ ಜವಾಬ್ದಾರಿ ಹೊತ್ತ ಬೆಳ್ಯಾನ ಭಾವನೆಗಳ ಮಹಾಪೂರವನ್ನು ಅವನನ್ನು ಹೆತ್ತ ಮಗನಂತೆ ಅಪ್ಯಾಯಮಾನದಂತೆ ಕಾಣುತ್ತಿದ್ದ ಗಂಗಾಳಿಗೆ ಚಂದೂನ ಸಾವು ಹೃದಯಘಾತ ಮಾಡಿಸುವ ಮಾನಸಿಕವಾಗಿ ಕೃಷವಾಗಿಸುವ ಪ್ರಕರಣವಾಗಿ ಪರಿಣಮಿಸುತ್ತದೆ. ಮಕ್ಕಳಿಲ್ಲದ ಮನೆ ಮತ್ತು ಮನುಷ್ಯರ ಮನಗಳಲ್ಲಿ ಅಮವಾಸ್ಯೆಯ ಕತ್ತಲು, ಕಾರ್ಗತ್ತಲು, ಅಕಾಳ ರಾತ್ರಿಯ ಭೇದಿಸಲೋ ಎಂಬಂತೆ ಆಕಾಶದಲ್ಲಿ ತೆಲಾಡುವ ಚಂದ್ರಮನ ಬೆಳದಿಂಗಳು ಕಾರ್ಮೋಡಗಳನ್ನು

ಸರಿಸಿ ಕತ್ತಲನ್ನು ಅಳಿಸಿ ನಸುತುಸು ಬೆಳಕಿನ ಕಿರಣವನಚ್ಚುವ ಆಶಾದೀಪವಾಗುತ್ತದೆ. ಸಾಂಕೇತಿಕವಾಗಿ ಬರುವ ಚಂದಿರ ಮೂಡಿಸುವ ಹೊಸ ಬರವಸೆಯ ಆಶಾವಾದದ ಸಂಕೇತವಾಗುತ್ತಾನೆ. ಬೆಳ್ಯಾಗಂಗಾರ ಪಾಲಿಗೆ.

ಮಾಸಿಕ ರಜಸ್ವಲೆಯಾಗದ ಕುರುಹು ಹರಿತ ಗಂಗಾ ಆಡುವ ಮಾತು "ನೀ ಅಂಬಾದು ಬರೇ ಅಂತ ಕಾಣಸ್ತದ ಬೆಳ್ಯಾ .... ಚಂದ್ರಾಮ ಮೂಡಿ ಬರ್ಲಕತ್ತಾನ........ ಬರಡಾದ ಬದುಕಿಗೆ ಹಸಿರು ತನವನ್ನೊದಗಿಸುವ ರೀತಿಯಲ್ಲಿ ಅವರ ಬದುಕು ನಳನಳಿಸುವಂತೆ ಮಾಡುವ ಸಂತಾನ ಭಾಗ್ಯಕೂ ದಲಿತ ಕುಟುಂಬದ ಸೌಭಾಗ್ಯವೂ, ಸುಲಕ್ಷಣವೂ ಆಗುತ್ತದೆ. ಕತೆಗಾರ್ತಿಯ ಅನನ್ಯ ಕಾವ್ಯಾತ್ಮಕ ಬಣ್ಣನೆ ಮನಸ್ಸನ್ನು ತಟ್ಟುತ್ತದೆ. ಮುಣಗಲಕ್ಕ ..... ಹೊಳೆಯುತ್ತಿತ್ತು ಆಕಾಸಂಬೇ, ಆಕಾಸರ ತುಂಬೆಲ್ಲ ಹರಡಿಕೊಂಡಿದ್ದ ಕೆಂಪನ್ನು ಕಪ್ಪು ನುಂಗತೊಡಗಿತು."[೧೫] ಉರ್ದುಮಿಶ್ರಿತ ಜವಾರಿ ಕಲಬುರಗಿ ಕನ್ನಡದೊಂದಿಗೆ ಕಥೆ ಕಾಣಿಸುವ ಪ್ರಸ್ತುತವಾಗುವ ಕಥಾ ನಿರೂಪಣೆ ಪ್ರಾದೇಶಿಕ ಚಿಗುರು ಒಗರುಗಳೊಂದಿಗೆ ಮನಸೆಳೆಯುತ್ತಾ ಓದುಗನ ಮನಗೆಲ್ಲುತ್ತಾ ಅಪ್ಯಾಯಮಾನವಾಗುವ ಅನನ್ಯತೆ ಗೀತಾ ನಾಗಭೂಷಣರವರ ಕಥನಕ್ರಮದ ಫಲಿತ.

'ಮಾನಪಮಾನ ನಿಮ್ಮದಯ್ಯ' ಸಣ್ಣಕಥೆಯಲ್ಲಿ ಕಥಾ ನಿರೂಪಣೆಗೆ ಬಳಕೆಯಾದ ಬತ್ತಳಿಕೆಗಳು ಹಲವು ತೆರನಾದವು. ಲೈಂಗಿಕ ಶೋಷಣೆಗೆ ತುತ್ತಾಗಿ ದುರಂತಮಯವಾಗುವ ತಾಯವ್ವನ ಬಾಳು ಓದುಗನ ಮನ ಕಲಕುತ್ತದೆ. ಹೃದಯ ವಿದ್ರಾವಕವಾಗುತ್ತದೆ. ಕಥೆಯ ಆರಂಭದಲ್ಲಿ 'ತಾಯವ್ವ'ನ ಮನದ ದುಗುಡಗಳ ವಿವಿಧ ಆಯಾಮಗಳೊಂದಿಗೆ 'ತಾಯವ್ವ'ನ ಪಾತ್ರವನ್ನು ಬಿಚ್ಚಿಡುವ ಗೀತಾರವರು ಕೆಳವರ್ಗದ ಅಂಚಿಗ ತಳ್ಳಲ್ಪಟ್ಟ ದಲಿತರ ಮಾನಸಲೋಕದ ಬೇಗುದಿಯನ್ನು ಪರಿಚಯಿಸುತ್ತಾರೆ. "ರಾತ್ರಿಯ ಒಂದು ಹೊತ್ತಿನಲ್ಲಿ ಅವಳಿಗೆ, ಆಕಾಸದಿಂದ ಯಾರೋ ಎತ್ತಿ ನೆಲಕ್ಕೆ ಕುಕ್ಕಿದಂಗಾಗಿ ಫಕ್ಕನೆ ಎಚ್ಚರವಾಯಿತು ಮೈಯೆಂಬ ಮೈಯೆಲ್ಲಾ ನೀರೊಡೆದಿತ್ತು. ಎದೆ ಒಂದೇ ಸವನೆ ಢವಗುಟ್ಟುತ್ತಿತ್ತು. ಕೈಕಾಲು ಥರ ಥರ ನಡುಗಿದಂಗಾಗಿ ದಿಗ್ಗನೆ ಎದ್ದು ಕುಂತಳು. ಎದುರಿಗೆ ರಾಚಿ ಬಿದ್ದ ಕಗ್ಗತ್ತಲು, ಸೀರೆಯ ಸೆರಗಿನಿಂದ ಮಾರಿ, ಹೆಡಕು, ಎದೆಯ ಮೇಲಿನ ಬೆವರೊರೆಸಿಕೊಂಡು ಗಾಳಿ ಹಾಕಿಕೊಂಡಳು. ಸೊಲಪ ಹಾಯೆನ್ನಿಸಿತು. ಗಂಟಲು ಬತ್ತಿದಂಗಾಗಿ ನೀರಿಗಾಗಿ ಕಾತರಿಸಿದಳು."[೧೬] ತಾಯವ್ವನ ಬೇಗುದಿಯ ಹಿಂದಿನ ಮೂಲದ ಹುಡುಕಾಟವನ್ನು ಅವಳ ಕನಸ್ಸುಗಳ ಅರಸುವಿಕೆಯ ಮುಖೇನವೇ ಕತೆಗಾರ್ತಿ ಒಂದೊಂದಾಗಿ ನಿವೇದಿಸಬಯಸ ಹೊರಟಿರುವುದು ಕತೆಗೊಂದು ವಿಶಿಷ್ಟ ರಚನಾ ಚೌಕಟ್ಟನ್ನು ಕಥಾ ನಿರೂಪಣೆಗೊಂದು ಅಂದದ ಶೈಲಿಯನ್ನು ಒದಗಿಸಿ ಕೊಡುತ್ತವೆ.

ಸಾಮಾಜಿಕ ಏಣಿಯ ಮೇಲುಸ್ತರದಲ್ಲಿಯ ಸಿರಿವಂತ 'ವಿಷಕಂಠಪ್ಪ'ನ ಕ್ರೌರ್ಯ ಅಟ್ಟಹಾಸ ಅಮಾನವೀಯತೆಗೆ ಬಲಿಪಶುವಾಗುವ 'ತಾಯವ್ವ'ನ ಮೈಮನಗಳು ಅದಕ್ಕಾಗಿ ಅವಳ ಒಡ್ಡುವ ಪ್ರತಿರೋಧ, ಪ್ರತಿಭಟನೆ ಇತ್ಯಾದಿಗಳನ್ನು ನಿರೂಪಿಸಿ ಮನ ಕಲಕಿಸುತ್ತಾರೆ. ಅಷ್ಟೇ ಅಲ್ಲದೆ ದಲಿತರ ಮೇಲಾಗುವ ಸಾಮಾಜಿಕ ಶೋಷಣೆಯ ಹಲವು ಹತ್ತುಮುಖಗಳ ದರ್ಶನವನ್ನು ಮಾಡಿಸುತ್ತಾರೆ. ವರ್ಣಾಶ್ರಮಧರ್ಮ, ಜಾತೀಯತೆ ಮತ್ತು ವರ್ಗಬೇಧನೀತಿ ದಳ್ಳುರಿಗೆ ಬಲಿಯಾಗುವ ಮುಗ್ದ ಮನಸ್ಸಿನ ಅಮಾಯಕ ಹೆಣ್ಣು 'ತಾಯವ್ವ'. ಸ್ತ್ರೀವಾದಿ ನೆಲೆಯಿಂದ ನೋಡುವುದರಲ್ಲಿ ಪುರುಷಕೇಂದ್ರಿತ ಸಮಾಜದಲ್ಲಿ ವಿಷಕಂಠಪ್ಪನಂತಹ ಪುರುಷರ ಆಕ್ರಮಣಶೀಲತೆ, ಅನ್ಯಾಯದ ಪರಮಾವಧಿ ಮತ್ತು ಮಿತಿಮೀರಿದ ಅನಾವರಣ ಮಾಡಿಸುವ 'ಮಾನಪಮಾನ ನಿಮ್ಮದಯ್ಯ'......... ಕಥೆಯಲ್ಲಿ ಸಾಹುಕಾರ ವಿಷಕಂಠಪ್ಪನ ಮಗಳು ಶಿಕ್ಷಿತ ನೀಲಾ ಜಾತೀಯತೆಯ ಸಂಕೋಲೆ ಕಳಚಿಕೊಂಡು ಪುರುಷಪ್ರಧಾನ ವ್ಯವಸ್ಥೆಯ ಭಾಗವಾದ ಎಲ್ಲಾ ಕರ್ಮದ ಸಂಪ್ರದಾಯಗಳ ತೊರೆದು ಸಂವೇದನಾಶೀಲನೂ ಶಿಕ್ಷಿತನೂ ಆದ ಕೆಳವರ್ಗದ ದಲಿತ ಜನಾಂಗಕ್ಕೆ ಸೇರಿದ ತಾಯವ್ವನ ಮಗ ಶಾಂತವೀರನನ್ನು ಅಧಿಕೃತವಾಗಿ ರಿಜಿಸ್ಟರ್ ಮದುವೆಯಾಗುತ್ತಾಳೆ. ಅಪ್ಪ ಹಾಕಿದ ಸಂಪ್ರದಾಯ ಲಕ್ಷ್ಮಣರೇಖೆಯನ್ನು ದಾಟಿ ತಾನೋರ್ವ ಆಧುನಿಕ ಮಹಿಳೆಯೆಂಬುದನ್ನು ಸಾಬೀತು ಪಡಿಸುವುದು ಕಥೆಯ ಹೂರಣದಲ್ಲಡಗಿದೆ. ಶಾಂತವೀರನ ಸಾಂಗತ್ಯದೊಂದಿಗೆ ಸಾಹುಕಾರ ವಿಷಕಂಠಪ್ಪನ ಮಗಳು 'ನೀಲಾ' ಬದುಕು ಕಟ್ಟಿಕೊಳ್ಳುವುದು ಮೇಲುವರ್ಗದವರ ಕೆಂಗೆಣ್ಣಿಗೆ ಗುರಿಯಾಗಬಹುದಾದರೂ ಶಾಂತವೀರ ನೀಲರ ಪಾಲಿಗೆ ಸಾಮರಸ್ಯದ ಲೈಂಗಿಕ ಸ್ವಾಯತ್ತತೆಯ ಸಂಕೇತವು ಆಗುತ್ತದೆ.

ಇದು ಹೊಸ ತಲೆಮಾರಿನ ಸುಶಿಕ್ಷಿತ ಪ್ರಜ್ಞಾವಂತಿಕೆಯ ಆಧುನಿಕ ಜಗತ್ತಿನ ಆಯಾಮ. ಆದರೆ 'ವಿಷಕಂಠಪ್ಪ'ನ ಮರ್ಜಿಯಲ್ಲಿ ಬದುಕುವ 'ತಾಯವ್ವ' ಮಗ ಶಾಂತವೀರನ ನೀಲಾಳೊಂದಿಗಿನ ಸಂಬಂಧ ಕುರಿತು ಒದ್ದಾಡುವುದು ಮಾನಸಿಕ ಕ್ಲೇಶಕ್ಕೆ ಇಡಾಗುವುದು ಮನಸ್ಸಿಗೆ ತಾಕುವಂತೆ ಕಥಾ ಚಿತ್ರಣ ಮಾಡುವಲ್ಲಿ ಗೀತಾರವರು ಯಶಸ್ವಿಯಾಗಿದ್ದಾರೆ. ಮ್ಯಾಗೇರಿ (ಮೇಲಿನ ಕೇರಿ) ಉನ್ನತಸ್ಥರದ ಸಾಹುಕಾರ ವಿಷಕಂಠಪ್ಪನ ಮಗಳು ಮತ್ತು ಕೆಳಗೇರಿ (ಕೆಳವರ್ಗ) ದ/ ಕೆಳಜಾತಿಯ ತಾಯವ್ವನ ಮಗ ಶಾಂತವೀರರ ಅಂತರ್‌ಜಾತಿಯ ವಿವಾಹ ಸಾಮಾಜಿಕ ಸಾಮರಸ್ಯ ಮೂಡಿಸಬಹುದಾದರೂ ತಾಯವ್ವನಂತಹ ಅಸಹಾಯಕ ದಲಿತಮಹಿಳೆಯ ಮುಗ್ದಮನಸ್ಸಿಗೆ ತುಮಲವನ್ನು ಸೃಷ್ಟಿಸುತ್ತದೆ. ಸೋಗಿನ ಮಡಿವಂತಿಕೆಯ ಕಪಟ ಮನಸ್ಸಿನ ವಿಷಯಾಸಕ್ತ ಸಾಹುಕಾರ ವಿಷಕಂಠಪ್ಪನ ಕರಾಳ ಮುಖಗಳನ್ನು ತೆರೆದು ತೋರಿಸುವ ಕಥೆಯು ನಮ್ಮ ಸಮಾಜದ ಅಸಮಾನತೆಯನ್ನು ಗ್ರಾಮೀಣ ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಹುಳುಕುಗಳನ್ನು ಬಯಲಿಗೆಳೆಯುತ್ತದೆ.

ಅಂತರಂಗದಲ್ಲಿ ನೈತಿಕದಾರಿದ್ರ್ಯವನ್ನು ಅನುಭವಿಸುತ್ತಿರುವ, ಭೌತಿಕವಾಗಿ ಸಿರಿಸಂಪದನಾದ 'ವಿಷಕಂಠಪ್ಪ'ನಂತಹ ವ್ಯಕ್ತಿ ತನ್ನ ಲೈಂಗಿಕತೃಷೆ ತೀರಿಸಿಕೊಳ್ಳಲು ಪರಸ್ತ್ರಿಯಾದ ದಲಿತರ ತಾಯವ್ವನ ಬಳಸಿಕೊಳ್ಳುವ ಯೋಜನೆಗಳನ್ನು ರೂಪಿಸುವುದು ಅವನ ವಿಲಕ್ಷಣ ಚಹರೆಗಳು, ಪೊಳ್ಳುಮಾತುಗಳು, ಬೆದರಿಕೆಯ ಹೇಳಿಕೆಗಳು ಅವನ ಅಂತರಂಗದ ಸ್ವರೂಪವನ್ನು ತೆರೆದಿಡುತ್ತದೆ. ಸಾಹುಕಾರನ ಲೈಂಗಿಕ ಬಯಕೆಗೆ ಪ್ರತಿರೋಧ ತೋರಿಸುವ 'ತಾಯವ್ವ' ಗಿಡುಗನ ಕೈಗೆ ಸಿಕ್ಕ ಗುಬ್ಬಚ್ಚಿಯಂಥಾದಳು. ತನ್ನ ಪಾಷವೀ ಪ್ರವೃತ್ತಿ ಮತ್ತು ಅನಾಗರಿಕತ್ವದ ಪರಮಾವಧಿಯ ಸಾಹುಕಾರನಾದ ವಿಷಕಂಠಪ್ಪ 'ತಾಯವ್ವ'ನ ಕುಪ್ಪಸಹರಿಯುವ ಸೀರೆಯೆಳೆಯುವ ಬೆತ್ತಲಾಗಿಸುವ ಕ್ರಿಯೆಗಳ ಮುಖೇನ ರಾಕ್ಷಸ ತನವನ್ನು ಬಯಲು ಮಾಡಿಕೊಳ್ಳುತ್ತಾನೆ. ಇಂತಹ ಬರ್ಬರ ಸಂಸ್ಕೃತಿಯ ಹೀನಮಂದಿಯ ದೌರ್ಜನ್ಯಕ್ಕೆ ಬಲಿಯಾಗಿ ಅಮಾಯಕ ದಲಿತಮಹಿಳೆ 'ತಾಯವ್ವ'ಳ ಬದುಕು ದುರಂತದಲ್ಲಿ ಅಂತ್ಯವಾಗುವುದು.

ಕನಸಿನ ಜಾಡು ಹಿಡಿದು ನಡೆದ ಘಟನೆಗಳನ್ನು ನೆನಪುಮಾಡಿಕೊಳ್ಳುವ 'ತಾಯವ್ವ'ನ ಪಾತ್ರದ ಮುಖೇನ ಕತೆಗಾರ್ತಿ ನಿರೂಪಣೆಗೆ ಹೊಸ ಕಸುವು ನೀಡುತ್ತಾರೆ. ಜೊತೆಗೆ ಆತ್ಮಸ್ಮರಣೀಯ ಪೂರಕವಾಗಿ ಬರುವ ಹಳೆಯ ನೆನಪುಗಳು ತನ್ನ ನೆರೆಹೊರೆಯ ಸಹೃದಯ ಮುದಕಪ್ಪನೆಯೊಳಗಿನ ಸಂಭಾಷಣೆ ಇತ್ಯಾದಿಗಳಿಂದ ಕತೆಯ ಬಿತ್ತರ ಮಾಡುವ ಅನನ್ಯ ನಿರೂಪಣೆಯನ್ನು ಕಥೆಗಾರ್ತಿ ಗೀತಾ ನಾಗಭೂಷಣರವರು ಮಾಡಿರುವುದಲ್ಲದೆ ಅದನ್ನು ಕಣ್ಣಿಗೆ ಕಟ್ಟುವಂತೆ ಮಾಡುವಲ್ಲಿ ಸಫಲರಾಗುತ್ತಾರೆ. ಸಾಮಾಜಿಕ ಸಂದೇಶವೊಂದನ್ನೂ ಸೂಚ್ಯವಾಗಿ, ಸಾಂಕೇತಿಕವಾಗಿ ಹೇಳುವಲ್ಲಿ ದಿಟ್ಟತನ ತೋರುತ್ತಾರೆ.

'ಜ್ವಲಂತ' ಕಥೆಯಲ್ಲಿ ಬಂಡಾಯದ ಅಭಿವ್ಯಕ್ತಿ

ಹಲವು ಕಥೆಗಳ ಶೀರ್ಷಿಕೆಗಳಲ್ಲಿ ಗೀತಾ ನಾಗಭೂಷಣರವರು ಸಾಂಕೇತಿಕವಾಗಿ ಸೂಚ್ಯವಾಗಿ ರೂಪಕಾತ್ಮಕವಾಗಿ ಬಳಸುವ ಕಲೆಗಾರಿಕೆ ಕುಶಲತೆ ಸಾಧಿಸಿರುವುದು ಸುಸ್ಪಷ್ಟ. 'ಜ್ವಲಂತ' ಎಂಬ ಸಣ್ಣ ಕಥೆಯಲ್ಲಿ ಶಿವನಿಂಗವ್ವ ಅರ್ಥಾತ್ ಸೀನಿಂಗಿ ಎಂಬ ಹುಡುಗಿ ಪ್ರಾಯಕ್ಕೆ ಬಂದಾಗ ಅವಳಿಗೆ ಹೇಳದೆಯೇ ಅವಳ ಆಸೆ-ಆಕಾಂಕ್ಷೆಗಳಿಗೆ ಕಿವಿಗೊಡದೆ ಅವಳ ಪೋಷಕರು ಅವಳನ್ನು ಶೋಷಣೆಯ ವ್ಯವಸ್ಥೆಯ ಭಾಗವಾದ ಜೋಗಿಣಿಗೆ ಬಿಡುತ್ತಾರೆ. ಆ ಬಲವಂತದ ಜೋಗಿಣಿತನವನ್ನು ಕಿತ್ತೆಸೆಯುವ ಸೀನಿಂಗಿ ಜಾಗೃತಿಯ ಜ್ವಾಲೆಯಾಗುತ್ತಾಳೆ. ತನ್ನ ನೆಲೆ-ಬೆಲೆಯನ್ನು ಅರ್ಥೈಸಿಕೊಳ್ಳುವ ತನ್ನ ಅನ್ಯಮಾರ್ಗವನ್ನು ತಾನೇ ಕಂಡುಕೊಳ್ಳಬೇಕೆಂಬ ಹಂಬಲದ ಸ್ತ್ರೀಸಬಲೀಕರಣ ಆಶಯದೊಂದಿಗೆ ತನ್ನ ಹಳ್ಳಿ

ತೊರೆಯುವುದು ಕಾಯಕದ ಹುಡುಕಾಟದಲ್ಲಿ 'ಕಾಡಳ್ಳಿ'ಗೆ ಬಂದು ಸೇರಿದವಳು. ತನ್ನ ದೈಹಿಕ ಸಾಮರ್ಥ್ಯ ಮತ್ತು ಮಾತಿನ ಬಲದ ಮುಖೇನ ಮಾನರಕ್ಷಣೆ, ದೇಹರಕ್ಷಣೆ ಮಾಡಿಕೊಳ್ಳ ಬಯಸುವ ಸೀನಿಂಗಿ ಎಲ್ಲಾ ನಿರ್ಗತಿಕ ದಮನಿತ ಮಹಿಳಾಸಂಕುಲದ ಮಾದರಿ ವ್ಯಕ್ತಿಯಾಗಿ ನಿಲ್ಲಬಲ್ಲ ಮಹಿಳಾ ಮಣಿಯಾಗುತ್ತಾಳೆ.

ತನ್ನನ್ನು ಕೆಣಕುವ, ತಂಟೆಗೆ ಬರುವ ಗಂಡು ಈರಣ್ಣನಿಗೆ ಅವಳು ಬೀಸುವ ಮಾತಿನ ಚಾಟಿ. 'ಯಾಕೋ........ ಬಾಡಕ್ಕೊಗಳು' ಮೇಲುಸ್ತರದ ಕುಲೀನ ರಾಘವೇಂದ್ರ ಕುಲಕರ್ಣಿ ಸೀನಿಂಗಿಯ ಒಂಟಿತನ ಮತ್ತು ಅಸಹಾಯಕತೆಯನ್ನು ಅರ್ಥ ಮಾಡಿಕೊಂಡು ಸೀನಿಂಗಿಯ ಆಸ್ಥಿತಿಗೆ ಸ್ಪಂದನೆ ತೋರಿಸುವ ಕುಲಕರ್ಣಿ ಕಾಲಾಂತರದಲ್ಲಿ ಅವಳನ್ನು 'ಇಟ್ಟುಕೊಳ್ಳುವುದು' ಹಾಗೆಯೇ ದಲಿತ ಸೀನಿಂಗಿ ತನ್ನೆಲ್ಲ ಮಾನವನನ್ನು ಅವನಿಗೆ ಅರ್ಪಿಸಿಕೊಂಡು ತನ್ನ ದೇಹದೊಳಗಿನ ಕಾಮದ ಜ್ವಾಲೆಯ ತಾಪವನ್ನು ತಗ್ಗಿಸುವ ಹೆಣ್ಣಾಗುತ್ತಾಳೆ. ಪ್ರೀತಿ–ಪ್ರೇಮ ಮಧುರತೆಯಲ್ಲಿ ಸಾಗುವ ಈರ್ವರ ಲೈಂಗಿಕ ಜೀವನಕ್ಕೆ ಗರಬಡಿದಂತೆ ಇದಕ್ಕಿದ್ದ ಹಾಗೆಯೇ ಒಂದು ರಾತ್ರಿ ರಾಘವೇಂದ್ರ ಕುಲಕರ್ಣಿ ಮರಣ ಹೊಂದುವುದು. ಘಾಸಿಗೊಂಡ ಸೀನಿಂಗಿ ಸಾವರಿಸಿಕೊಂಡು ರಾಘವೇಂದ್ರ ಕುಲಕರ್ಣಿಯ ಹೆಣದ ಅಂತಿಮ ಸಂಸ್ಕಾರಕ್ಕೆ ಪಡುವ ಪರಿತಾಪದ ಪ್ರಸಂಗವನ್ನು ಗೀತಾರವರು ಅತ್ಯಂತ ನೈಜವಾಗಿ ನಿರೂಪಿಸುತ್ತಾ ಹೋಗುತ್ತಾರೆ. ಕರ್ಮಟ ಬ್ರಾಹ್ಮಣರು ಶವಸಂಸ್ಕಾರ ಮಾಡುವ ಜವಾಬ್ದಾರಿ ಹೊತ್ತುಕೊಳ್ಳದೇ ಹೋದಾಗ 'ಸೀನಿಂಗಿ' ಸಹೃದಯ ಮುಸಲ್ಮಾನನಾದ ಪಿಂಜಾರ ಗುಡಿಸಾಬಿಯ ಸಹಾಯವನ್ನು ಪಡೆಯುವುದು. ಅವನು ಕಳಿಸಿದ ಆಳುಗಳೊಂದಿಗೆ ಬ್ರಾಹ್ಮಣರ ಸ್ಮಶಾನದಲ್ಲಿ ಹೆಣ ಸುಡುವ ಕಾರ್ಯವನ್ನು ಯಾರ ನಿಂದನೆಯ ಮಾತಿಗೂ ಕಿವಿಗೊಡದೇ ರಾಜಾರೋಷವಾಗಿಯೇ ಮಾಡುತ್ತಾಳೆ.

ತಾನು ಮಾಡಿದ ಕೃತ್ಯಕ್ಕೆ ಬ್ರಾಹ್ಮಣ ಸಮುದಾಯವರು ಹಾಕಿದ ದಂಡಕ್ಕೆ ಅವಳು ತೋರುವ ಪ್ರತಿಭಟನೆ ಗವನಾರ್ಹವಾದುದು. ಮಡಿಮೈಲಿಗಿಯ ಸೊಂಕಿನಲ್ಲಿ ಸದಾ ಜೀವಿಸುವ ಕರ್ಮಟ ಬ್ರಾಹ್ಮಣ ರಾಯರ ಮಠದ ಮೆಟ್ಟಿಲು ಹತ್ತಿನಿಲ್ಲುವುದು ತನ್ನ ಪ್ರಿಯತಮ ರಾಘವೇಂದ್ರ ಕುಲಕರ್ಣಿ ಹೆಣದ ಬೂದಿ ಎಲುಬುಗಳ ಗಂಟು ಎಸೆಯುವುದು, ಮುಂತಾದ ಚಹರೆಗಳು ಅವಳ ಅಸಾಧಾರಣ ಪ್ರತಿಭಟನಾ ಚೈತನ್ಯವನ್ನು ಅನ್ಯಾಯದ ವಿರುದ್ಧ ಸಾರಿದ ದಲಿತ ಮಹಿಳೆಯೋರ್ವಳ ಸಮರ. "ತಗೋರಿ ನಿಮ್ಮ ತಪ್ಪು ದಂಡ...... ಹುಂ......"[೧೭] ಆಕೆಯ ಈ ಕಡೆಯ ಮಾತುಗಳಲ್ಲಿ ಬಂಡಾಯದ ಬಿಸಿಯಿತ್ತು ಪ್ರತಿಭಟನೆಯ ಜ್ವಾಲೆಯಿತ್ತು ಹಾಗಾಗಿ 'ಜ್ವಲಂತ' ಶೀರ್ಷಿಕೆ ಅರ್ಥಪೂರ್ಣವೂ, ರೂಪಕವೂ

ಆಗಿಬಿಡುತ್ತದೆ. ಇಂತಹ ಪ್ರತಿಭಟನೆಯ ಹುಡುಗನ್ನು ಹೊರಗೆಡುವ ತನ್ಮೂಲಕ ದಲಿತ ಸಮುದಾಯದಲ್ಲಿ ಹೊಸಸಂಚಲನ ಉಂಟು ಮಾಡುವ ಆಶಯ ಗೀತಾ ನಾಗಭೂಷಣರವರದು.

ಗರ್ಭಧಾರಣೆಯಾಗಲಿಲ್ಲವೆಂದು ದುಗುಡಕ್ಕೆ ಒಳಗಾಗಿ ಚಡಪಡಿಸುವ ಗೌರವ್ವ ಶಿವಪುರದ ಸಾಹುಕಾರ ಈಶ್ವರಪ್ಪನ ಮಡದಿ. ತನ್ನ ತವರಿನ ಕಡೆಯ ಚಿಕ್ಕಿಯೆರು ಅವಿವಾಹಿತ ಹುಡುಗಿಯ ಮುಗ್ದತೆಯನ್ನು ವಿಧೇಯತೆಯನ್ನು ಸ್ವಾರ್ಥ ಸಾಧನೆಗೆ ಬಲಿ ಮಾಡುವ ಹೆಣ್ಣಾದ ಗೌರವ್ವನೊಳಗಿನ ಪಿತೃ ಪ್ರಧಾನ ಸಂಸ್ಕೃತಿಪ್ರಜ್ಞೆಯನ್ನು ಅನಾವರಣ ಮಾಡಿಸುವ 'ಗರ್ಭ' ಕಥೆ. ಹೆಣ್ಣಿನ ಮತ್ತೊಂದು ಮುಖವನ್ನು ಪರಿಚಯಿಸುತ್ತದೆ. ಬಂಜೆತನವನ್ನು ಮುಚ್ಚಿಟ್ಟುಕೊಳ್ಳಲು ಸಂತಾನ ಫಲವಂತಿಕೆಯ ತೋರಿಸಲೋ ಎಂಬಂತೆ ಗೌರವ್ವ ತನ್ನ ಆಶ್ರಯಕ್ಕೆ ಬಂದ ಕನ್ಯೆಚಿಕ್ಕಿಯ ಮನವೊಲಿಸಿ ಅವಳ ಶೀಲಹರಣವಾಗುವಂತೆ ಮಾಡುವವಳಲ್ಲದೆ ಚಿಕ್ಕಿಯ ಗರ್ಭದಲ್ಲಿ ತನ್ನ ವಂಶದ ಕುಡಿಯನ್ನು ಬೆಳೆಸುವ ಹುನ್ನಾರದಲ್ಲಿ ವಿಜಯಿಯಾಗುತ್ತಾಳೆ. ಆದರೆ ಕಥಾಹಂದರದಲ್ಲಿ ಕಥೆ ಅಂತ್ಯದಲ್ಲಿ ಹೊಸತಿರುವು ಪಡೆಯುತ್ತದೆ. ತನ್ನ ಜೈವಿಕ ಉದರದೊಳಗೆ ಉದಯಗೊಂಡ ಮಗುವಿನ ಒಡೆತನ ತನಗೆ ಸೇರಬೇಕಾದದು ತಾನದರ ತಾಯಿ ಎಂಬ ಭಾವನಾತ್ಮಕತೆ ಮೊಳಕೆಯೊಡೆದ ಚಿಕ್ಕಿಯ ಮನಸ್ಸು ಉಡುವ ತಂತ್ರ ಅತ್ಯಂತ ಮಾರ್ಮಿಕವಾದುದು. ತನ್ನ ಮಗುವನ್ನು ಎತ್ತಿಕೊಂಡು ಬೇರೊಂದು ರೈಲಲ್ಲಿ ಪಯಣಿಸುವ ಚಿಕ್ಕಿ ಗೌರವ್ವ ಈಶ್ವರಪ್ಪರಿಂದ ದೂರವಾಗುವುದು ಸಹ ದಲಿತ ಯುವತಿಯಲ್ಲಾದ ಅರಿವಿನ ಪರಿವರ್ತನೆ ಮತ್ತು ಪ್ರತಿಭಟನೆಯ ಪ್ರಮುಖ ಅಸ್ತ್ರ. ಈ ಮುಖೇನ ಚಿಕ್ಕಿ ತನ್ನ ಶೋಷಿತ ಬಯಸಿದ ಮಂದಿಗೆ ಮುಟ್ಟಿಸಿದ ಬಂಡಾಯದ ಬಿಸಿ.

ವಿಷಯ ಲೋಪದ ಮೇಲ್ವರ್ಗದವರ ಹಾದರದ ಕಥೆ

ಗೌಡನ ಗೋರಿ ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆಯೊಳಗೆ ಜೀವಿಸುವ ಸಂಗಪ್ಪಗೌಡ ಮತ್ತು ನೀಲಗಂಗವ ಲೋಕದ ಕಣ್ಣಿಗೆ ಸಂಪ್ರದಾಯಸ್ಥರೆಂತಲೂ, ಮಡಿವಂತರೆಂತಲೂ, ಸಾತ್ವಿಕರೆಂತಲೂ, ಕಾಣಿಸುವ ಹಾಗೆ ಬದುಕುವ ಲಜ್ಜೆಗೇಡಿ ಸೋಗಲಾಡಿ ವ್ಯಕ್ತಿಗಳು. ಮೇಲುಸ್ಥರದ ನಾಜೂಕಿನ ಕುಲಸ್ಥ ಮನೆತನದ ಲೈಂಗಿಕ ಸ್ವಚ್ಚಂದತೆ, ಅನ್ಯೆತಿಕತೆ ಹಾಗೂ ಆಕ್ರಮಣಶೀಲತೆಯನ್ನು ಅನಾವರಣಗೊಳಿಸುವ ಕಥಾ ಸಂವಿಧಾನವನ್ನು ಹೊಂದಿರುವ 'ಗೌಡನಗೋರಿ' ಮೇಲುವರ್ಗದವರ ಹಾದರದ ಕಡೆಯೂ ಆಗಿದೆ. ನಿಯಮಿತದಂತೆ ಪ್ರತಿವರ್ಷದ ಜೋಗಿಣಿಗೆ ಬಿಟ್ಟ ಹರೆಯದ ಹೆಣ್ಣಿನ ಶೀಲಭಂಗ

ಮಾಡುವ ಸಂಗಪ್ಪಗೌಡ ರಾಕ್ಷಸಿ ಪ್ರವೃತ್ತಿಯವನಾಗುತ್ತಾನೆ. ಬಲವಂತವಾಗಿ ಜೋಗಿಣಿ ಅನಿಷ್ಟ ಸಮಾಜೋ-ಧಾರ್ಮಿಕ ಅನಿಷ್ಟ ಪದ್ಧತಿಗೆ ತಳ್ಳಲ್ಪಟ್ಟ ಕೆಳವರ್ಗದ ಮುಗ್ಧ ದಲಿತ ಮಹಿಳೆಯರು ಅತ್ಯಾಚಾರಕ್ಕೊಳಗಾಗುವುದು. ಲೈಂಗಿಕ ಮಾನಸಿಕ ಹಿಂಸೆಯನ್ನು ಅನುಭವಿಸುವುದು. ಈ ಕ್ರೂರ ಪದ್ಧತಿಯು ಹಿಂಸಾತ್ಮಕತೆಯನ್ನು ಪರಿಚಯಿಸುವ ಆಶಯವೂ ಕತೆಗಾರ್ತಿಯದು. ತಾನು ಲಗ್ನವಾದ ಸಂಗಪ್ಪಗೌಡನಿಂದ ಗರ್ಭಧಾರಣೆಗೆ ಒಳಗಾಗದೆ ಒದ್ದಾಡುವ ನೀಲಗಂಗವ್ವ ಲೈಂಗಿಕ ಅಡ್ಡಹಾರಿಯನ್ನಿಡಿದು ತನ್ನೊಂದಿಗೆ ಪುರಾಣ ಪ್ರವಚನಕ್ಕೆ ಆಗಮಿಸಿದ್ದ ಪುರಾಣಿಕನಿಂದ ಅನೈತಿಕವಾಗಿ ಗರ್ಭಧರಿಸುವುದು ಮೇಲುಸ್ತರದ ಸ್ಥಿತಿವಂತ ಕುಲೀನರ ಮನೆಯಲ್ಲಿನ ಹಾದರದ ಕತೆಯ ಸಂಕಥನವೂ ಕೂಡ.

ಧಾರ್ಮಿಕ ಸ್ಥಿತ್ಯಂತರದ ಅಭಿವ್ಯಕ್ತಿಯ ಕಥೆಗಳು

ಮಟದಯ್ಯ ಮತ್ತು ಧರ್ಮ ಎಂಬ ಕತೆಯಲ್ಲಿ ಪೊಳ್ಳು ಧಾರ್ಮಿಕ ವ್ಯಕ್ತಿಗಳ ಡೊಂಗಿ ತನವನ್ನು, ಕಪಟತನವನ್ನು ಆಧ್ಯಾತ್ಮಿಕ ದಾರಿದ್ರ್ಯವನ್ನು ವಿಷಯ ಲಂಪಟತೆಯನ್ನು ಬಯಲಿಗೆಳೆಯುವ ಸಮಕಾಲೀನ ಸಮಾಜದ ಸೋಗಿನ ಕಾವಿಧಾರಿಗಳಿಗೆ ಬಿಸಿಮುಟ್ಟಿಸುವ ಸಾಮಾಜಿಕ ಸಂದೇಶವುಳ್ಳ ಸಣ್ಣಕಥೆ. ನವಿಲೂರಿನ ಲಿಂಗಾಯಿತರ ಹಳೆಯ ದೊಡ್ಡಮಠದ ಸ್ವಾಮಿಯಾಗಿ ಬರುವ ಮುರುಗಯ್ಯ ಸ್ವಾಮಿಯ ಕಾಮನೆಗಳು ಭಾವನೆಗಳು, ವಿಷಯಲಂಪಟತನ, ಲಜ್ಜೆಗೆಡಿತನ, ಇತ್ಯಾದಿಯನ್ನು ಕತೆಗಾರ್ತಿ ತೋರಿಸುತ್ತಾಳೆ. ಸಮಾಜದೊಳಗೆ ಸಾಮಾಜಿಕರು ಶ್ರದ್ಧಾಭಕ್ತಿಯಿಟ್ಟ ಮಠದ ಸ್ವಾಮಿಯ ಠಕ್ಕುತನ, ಪೊಳ್ಳುತನ ಮತ್ತು ಸೋಗಾಲಾಡಿತನದಿಂದ ವ್ಯಕ್ತಿತ್ವ ಶೂನ್ಯತೆಯನ್ನು ಗಳಿಸಿಕೊಳ್ಳುವ ನಿಟ್ಟಿನಲ್ಲಿ ಕತೆಜಾಡು ಸಾಗುತ್ತದೆ.

ಪ್ರಗತಿಶೀಲ, ಸೃಜನಶೀಲ ಕಾದಂಬರಿಕಾರ ಬಸವರಾಜ ಕಟ್ಟಮನಿ ತಮ್ಮ ಅನನ್ಯ ಕೃತಿ 'ಜರತಾರಿ ಜಗದ್ಗುರು'ವಿನಲ್ಲಿ ಹುಸಿ ಧಾರ್ಮಿಕ ಜಗದ್ಗುರುಗಳ ಪೊಳ್ಳುತನವನ್ನು ವ್ಯಕ್ತಿತ್ವದ ಹುಳುಕುಗಳನ್ನು ಅವರ ಮನೋವಾಂಚಲ್ಯವನ್ನು ಚಿತ್ತ ಚಾಂಚಲ್ಯವನ್ನು ಯಾವುದೇ ಬಿಢೆಯಿಲ್ಲದೇ ತೆರೆದಿಡುತ್ತಾರೆ. ಹಾಗೆಯೇ ಅದೇ ಮನೋಧರ್ಮದ ಪ್ರಗತಿಶೀಲ ಮಹಿಳೆಯು ದಲಿತ ಬಂಡಾಯ ಲೇಖಕಿಯು ಆದ ಗೀತಾನಾಗಭೂಷಣರವರು ಅಷ್ಟೇ ದಿಟ್ಟತನದಿಂದ ಹುಸಿ ಸನ್ಯಾಸಿಗಳ ಢಾಂಬಿಕ ತನವನ್ನು ಲೈಂಗಿಕ ತಹತಹಿಕೆಯನ್ನು ಪರಿಣಾಮಕಾರಿಯಾಗಿಯೇ ಚಿತ್ರಿಸುತ್ತಾ ಹೋಗುತ್ತಾರೆ.

ಕುರುಬ ಸಮುದಾಯಕ್ಕೆ ಸೇರಿದ, ಅನಾಥಳಾಗಿ ಮಠದ ಆಶ್ರಯಕ್ಕೆ ಬಂದ 'ಶಿವಿ' ಎಂಬ ವಿಧವೆಯೋರ್ವಳನ್ನು ತನ್ನ ಲೈಂಗಿಕ ತೃಷೆಗೆ ಬಳಸಿಕೊಳ್ಳುವ ಮಠದಯ್ಯನ

ಹೀನಕೃತ್ಯ ಕ್ಷಮಾರ್ಹವಾದುದಲ್ಲ. ವಿಧವೆ ಮಹಿಳೆಯ ಅಸಹಾಯಕ ಸ್ಥಿತಿಯನ್ನು ತನ್ನ ಸ್ವಾರ್ಥ ಲಾಲನೆಗೆ ಬಳಸಿಕೊಂಡು ಬಹಿರಂಗವಾಗಿ ಪವಿತ್ರತೆಯ ನಾಟಕವಾಡುವ ಮುರುಗಯ್ಯನ ಪಾತ್ರ ನಾಟಕೀಯತೆಯನ್ನು ಧ್ವನಿಸುತ್ತದೆ. ಅಂತರಂಗದ ಕೊಳಗೇರಿಯನ್ನು ತೆರೆದಿಡುತ್ತದೆ. ಇದು ಸಾಮಾಜಿಕ ವ್ಯಂಗ್ಯವೂ, ಧಾರ್ಮಿಕ ದುರಂತವನ್ನು ಸ್ವಾಮೀಜಿಯ ಅಂತರಂಗದ, ಆಧ್ಯಾತ್ಮದ ದರಿದ್ರವನ್ನು ಅಭಿವ್ಯಕ್ತಿಸುವ ಕಥಾ ನಿರೂಪಣೆಯಾಗಿದೆ. ಶಿವಿಯೆಂಬ ವಿಧವೆಯನ್ನು ಲೈಂಗಿಕವಾಗಿ ಶೋಷಿಸಿ ಅವಳೊಂದಿಗಿನ ವ್ಯಭಿಚಾರದಲ್ಲಿ ಜನಿಸುವ ಮಗುವಿಗೆ ಜವಾಬುದಾರನಾಗದ ಠಕ್ಕ ಮಠದಯ್ಯ ತನ್ನ ನಿಷ್ಠ ಖಾಸೀಮನ ಪಾಲಿಗೆ ವಹಿಸಿ ಕೈತೊಳೆದುಕೊಳ್ಳುವುದು ಪಾಪದ ಪ್ರಪಾತ ಆಳವನ್ನು ತಿಳಿಸುವ ಪ್ರಸಂಗದಂತಾಗುತ್ತದೆ. ಓದುಗನ ಪಾಲಿಗೆ, ಧರ್ಮದ ಮಾತಾಡುತ್ತಲೇ ಅಧರ್ಮದ ಕೃತ್ಯವೆಸಗುವ ಇಂತಹ ಹುಸಿ ಸನ್ಯಾಸಿಗಳು ಮುಗ್ಧ ಜನತೆಯನ್ನು ಮರುಳು ಮಾಡುವುದು ಮೋಸದಾಟ ಮಾಡುತ್ತಾ ಹೋಗುವುದು, ನಂಬಿಕೆ ದ್ರೋಹಿಗಳಾಗಿ ಬದುಕುವುದು ಸಮಕಾಲೀನ ಸಮಾಜದ ಹಲವು ಹತ್ತು ಡೋಂಗಿ ಸ್ವಾಮೀಜಿಗಳ ನಿತ್ಯ ಕಾಯಕವಾಗಿದೆ.

ಬಹುಪಾಲು ಸಣ್ಣಕಥೆಗಳಲ್ಲಿ ನಿರೂಪಣೆ ತೃತೀಯ ಪುರುಷ, ಉತ್ತಮ ಪುರುಷದೊಂದಿಗೆ ಸಾಗುವ ಕ್ರಮದಲ್ಲಿ ವಸ್ತುನಿಷ್ಠತೆ ನಿಚ್ಚಳವಾಗಿ ಕಂಗೊಳಿಸುತ್ತದೆ. ಕತೆಗಾರ್ತಿ ಕಥಾಪಾತ್ರಗಳಿಗೆ ಆತ್ಮನಿವೇದನೆಗೆ ಹೆಚ್ಚು ಅವಕಾಶ ನೀಡದೆ ನಿಯಂತ್ರಣಕ್ಕೊಳ-ಪಡಿಸುತ್ತಿದ್ದಾಳೇನೋ ಎನಿಸುತ್ತದೆ. ಆದರೆ ಪ್ರಥಮಪುರುಷ ನಿರೂಪಣೆಯಲ್ಲಿ ಪಾತ್ರ ತನ್ನ ಬಣ್ಣಿಸಿಕೊಳ್ಳುತ್ತ ಆತ್ಮರತಿಯನ್ನು, ರಾಗಭಾವಗಳನ್ನು, ಕಾಣದ್ದನ್ನು ಕಂಡಂತೆ ಅನುಭವಿಸದಿದ್ದನ್ನೂ ಅನುಭವಿಸಿದಂತೆ ಉತ್ಪ್ರೇಕ್ಷಿಸುವ ಅತೀರೇಕಿಸುವ ಸಂಭವವಿರುತ್ತದೆ. ಆದಾಗ್ಯೂ ಬರೆಹಗಾರ್ತಿ ಕಥೆಯ ಚೌಕಟ್ಟಿನೊಳಗೆ ಸಮಯೋಚಿತವಾಗಿ, ಸಹ್ಯವಾಗಿ ಪಾತ್ರಗಳ ಸಂಭಾಷಣೆ ಸೀಮಿತವಾದರೂ ಅರ್ಥಪೂರ್ಣವಾಗುತ್ತದೆ; ಸಹಜ ಸುಂದರವಾಗುತ್ತದೆ.

'ಮುಂಡಿ ಪೂಜಾರಿಯಾದಾಗ' ಕತೆ ತೃತೀಯ ಪುರುಷ ನಿರೂಪಣಾ ತಂತ್ರವನ್ನು ಬಳಸಿರುವುದು ಕಥೆಯ ಪರಿಣಾಮಕಾರಿತನಕ್ಕೆ ಸಹಾಯಕವಾಗುತ್ತದೆ. ಶಿವಳ್ಳಿ ಎಂಬ ಗ್ರಾಮ ಪರಿಸರದಲ್ಲಿ ಮ್ಯಾಗೇರಿ ಮತ್ತು ಹೊಲಗೇರಿ ಎಂದು ಊರು ಸೀಳಿಕೊಂಡ ಬಡಾವಣೆಗಳು. ಸವರ್ಣೀಯರ ಅಸ್ಪೃಷ್ಯ ಎರಡು ವಿಭಿನ್ನ ಜೀವನ ಮಾರ್ಗಗಳು ಮತ್ತು ಅದರೊಳಗೆ ತಳಕು ಹಾಕಿಕೊಂಡ ರೀತಿ ರಿವಾಜುಗಳು ಆಚರಣೆಗಳು ಪದ್ಧತಿಗಳ ಅನಾವರಣಗೊಳಿಸುವ 'ಮುಂಡಿ ಪೂಜಾರಿಯಾದಾಗ' ಕಥೆಯ ಮಗ್ಗಲುನಲ್ಲಿ ಮತ್ತೊಂದು ಹೊಸ ವಸ್ತುವಿನ ಕಾಣಿಸುವಿಕೆಗೆ ಓದುಗನನ್ನು ಈಡುಮಾಡುವ ಕತೆಗಾರ್ತಿಯ ಕುಶಲತನ ಅನನ್ಯವಾದುದು.

ದಲಿತರ ಹೊಲಗೇರಿಯಲ್ಲಿ 'ಮರಗವ್ವ'ನ ಗುಡಿ ಒಂದೆಡೆಯಾದರೆ, ಶಿವಳ್ಳಿಯ ಮ್ಯಾಗೇರಿಯ ಮಹಾಲಕ್ಷ್ಮೀಯ ಮಂದಿರ ಮತ್ತೊಂದು ಕಡೆ. ಜಾನಪದ ಪರಂಪರೆಯ ಶಿಷ್ಟವಲ್ಲದ ಗ್ರಾಮ್ಯ ಆಚಾರ ವಿಚಾರಗಳ ನೆಲೆಯಲ್ಲಿ ಮರಗವ್ವನ ಪೂಜೆಗೈಯುವ ದಲಿತರು ಕಾಣಸಿಗುತ್ತಾರೆ. ಸಿರಿವಂತರ ಕೈಗೆ ಸಿಲುಕಿದ ಮಹಾಲಕ್ಷ್ಮೀಮೂರ್ತಿ ಬೆಲೆಬಾಳುವ ಒಡವೆ ವಸ್ತ್ರಗಳಿಂದ ಅಲಂಕೃತಳಾಗಿ ಶೋಭಾಯಮಾನವಾಗಿ ಅರ್ಚಿಸಿಕೊಳ್ಳುವ ಮತ್ತೊಂದು ಶಿಷ್ಟ ಪೂಜಾಪದ್ಧತಿಯನ್ನು ಗ್ರಾಮ್ಯದ ಸರಪಡಿನಲ್ಲಿಯೇ ನಡೆಯುವ ಸಂಗತಿಯನ್ನು ಸ್ಪಷ್ಟಮಾಡುತ್ತಾರೆ. ಎರಡೂ ಸ್ತ್ರೀದೇವತೆಗಳಾದರೂ ಸಾಮಾಜಿಕ ಸ್ಥರವಿನ್ಯಾಸದ ವಿವಿಧ ನೆಲೆಗಳಲ್ಲಿಯ ಜನ ಸಲ್ಲಿಸುವ ಪೂಜಾಕ್ರಮದಲ್ಲಿ ಭಿನ್ನಮಾರ್ಗಗಳಿರುವುದು ಸಾಮಾಜಿಕ ವ್ಯವಸ್ಥೆಯಲ್ಲಿಯ ಭಿನ್ನತೆಯನ್ನು ಕಾಣುವುದಾಗಿದೆ.

ಮಕ್ಕಳ ಮನಸ್ಸಿಗೆ ಮಲಿನತೆ ಇರುವುದಾದರೆ ಅದು ಮುಗ್ಧತೆ ಮತ್ತು ನಿಷ್ಕಳಂಕ ಮನಸ್ಸು. ಹೊಲೆಯರ ಮಲ್ಲಣ್ಣನು ತನ್ನ ಬಾಯಿಯಿಂದ ಕಬ್ಬಿನ ಸಿಪ್ಪೆ ಸುಲಿದುಕೊಟ್ಟಾಗ ಅದನ್ನು ಎಂಜಲೆಂದು ಭಾವಿಸದೆ ಈಶ್ವರ ಅದನ್ನು ತಿನ್ನುವ ಪ್ರಸಂಗ ಉದಾರನೀತಿಯನ್ನು ಹೇಳುತ್ತದೆ. 'ಈಶ್ವರ' ಮುಂದೆ ವಿದ್ಯಾವಂತನಾಗಿ ಕಲ್ಬುರ್ಗಿಜಿಲ್ಲೆಗೆ ಕಲೆಕ್ಟರಾಗಿ ಜವಬ್ದಾರಿ ವಹಿಸಿಕೊಳ್ಳುವ, ಸ್ಥಿತ್ಯಂತರಗಳೊಂದಿಗೆ ಕತೆಯನ್ನು ಕಟ್ಟಿಕೊಡುತ್ತಾರೆ. ಆಧುನಿಕ ಶಿಕ್ಷಣಕ್ರಮ, ಸರ್ಕಾರದ ಜನಪರ ನೀತಿಗಳು, ಮುಂತಾದ ಕ್ರಮಗಳಿಂದಾಗಿ ಕೆಳವರ್ಗದ ಜೀವನಕ್ರಮದಲ್ಲಿ ಬದಲಾವಣೆಗಳಾಗುತ್ತವೆ. ಪಾರಂಪರಿಕವಾಗಿ ಮೇಲುಜಾತಿಯವರು ಮಹಾಲಕ್ಷ್ಮೀ ಮಂದಿರಕ್ಕೆ ಅರ್ಚಕರಾಗಿ ಸೇವೆಮಾಡುವ ಕೆಲಸದಿಂದ ವಿಮುಖರಾಗುತ್ತಾರೆ. ಇದು ಪಾರಂಪರಿಕ ವೃತ್ತಿಯನ್ನು ಪಲ್ಲಟಗೊಳಿಸುವ, ಆ ಕಾರ್ಯಕ್ಕೆ ನಿಯೋಜನೆಗೊಳ್ಳುವ ಪುಂಡಿ ಪೂಜಾರಿಯಾಗಿ ನೇಮಕಗೊಳ್ಳುತ್ತಾನೆ.

ಇದು ಸವರ್ಣೀಯರ ಮತ್ತು ದಲಿತರ ಸಾಮಾಜಿಕ ಬದುಕಿನಲ್ಲಿ ಉಂಟು ಮಾಡಿದ ಮನೋಕ್ಷೋಭೆಗಳು, ತಳಮಳಗಳು, ತಲ್ಲಣಗಳು ಹಲವಾರು. ಮ್ಯಾಗೇರಿಯ ಮಹಾಲಕ್ಷ್ಮೀ ಮಂದಿರದ ದೇವಿಗೆ ಪೂಜಾರಿಯಾಗಿ ಪುಂಡಿ ನೇಮಕಗೊಳ್ಳುತ್ತಾನೆ. ಹೊಲಗೇರಿಯ ಪುಂಡಿಯ ನೇಮಕದೊಂದಿಗೆ ಸಾಮಾಜಿಕ ನಂಬಿಕೆಗಳು, ಆಚರಣೆಗಳು ಸ್ಥಿತ್ಯಂತರಗೊಳ್ಳುತ್ತವೆ. ಬ್ರಾಹ್ಮಣನಲ್ಲದ ಕೆಳಜಾತಿಯ ದಲಿತನಿಗೆ ಪೂಜಾರಿಕೆಯನ್ನು ಮಿಸಲಾಗಿಟ್ಟು, ಜಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಗೆ ಚೈತನ್ಯ ಮೂಡಿಸುವ ಅಂಶವೆಂಬುದನ್ನು ಬಯಸುತ್ತಾರೆ. ಚಲನಶೀಲ ಸಮಾಜಕ್ಕೆ ಸಮಾನತೆಯ ತಳಹದಿ ಬೇಕು. ಸಮಾನತೆಯ ಅವಕಾಶಗಳು ಎಲ್ಲಾ ರಂಗದಲ್ಲೂ ಲಭ್ಯವಿರಬೇಕು. ಧಾರ್ಮಿಕ ಕ್ಷೇತ್ರವೂ ಮೀಸಲಾತಿಯ ಹಕ್ಕಿನಿಂದ ಹೊರತಾಗಿರಬಾರದೆಂಬುದೇ ಕತೆಗಾರ್ತಿಯ ಆಶಯವಾಗಿದೆ.

ಅನೈತಿಕತೆ ಮತ್ತು ಶಿಕ್ಷಣದ ಅಭಿವ್ಯಕ್ತಿ

ಮಹಿಳೆಯನ್ನು ಕುರಿತು ಮನು ಹೀಗೆ ದಾಖಲಿಸಿದ್ದಾನೆ. 'ಯತ್ರ ನಾರ್ಯಸ್ತೂ ಪೂಜ್ಯಂತೆ ರಮಂತೆ ತತ್ರ ದೇವತಾಃ' ಮುಂದುವರಿದಂತೆ 'ನಾ ಸ್ತ್ರೀ ಸ್ವತಂತ್ರಮನರ್ಹತೆ' ಎಂದು ನುಡಿಯುತ್ತಾನೆ. ಮನುವಿನ ದೃಷ್ಟಿಯಲ್ಲಿ ಮಹಿಳೆ ಶಿಕ್ಷಣವನ್ನು ಕಲಿಯುವುದು ಬೇಡವಾಗಿತ್ತು. ಅಕ್ಷರಲೋಕ ಪ್ರವೇಶ ಮಾಡಿದರೆ ಜಗತ್ತಿನಲ್ಲಿ ನಡೆಯುವ ಸಮಾಚಾರ ತಿಳಿದುಕೊಂಡು ಮುಂದುವರೆದರೆ ಪುರಾತನ ತೋಳತೆಕ್ಕೆಯಿಂದ ದೂರಹೋಗಿ ಸ್ವಚ್ಛಂದವಾಗಿ ಹಾರಾಡುವುದು ಕಲಿತುಕೊಂಡು ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಂಡು ಸಬಲವಾಗುತ್ತಾಳೆ. ಈ ಮಹಿಳಾ ಸಬಲೀಕರಣ ಮನುವಿಗೆ ಬೇಡವಾಗಿತ್ತು. ಜ್ವಲಂತ ಕಥಾಸಂಕಲನದ 'ಬೆಳಕಿನಡೆಗೆ' ಕಥೆಯಲ್ಲಿ ಬರುವ ಚೆಂಬಸಪ್ಪ ಸಾವಾತಿರೆನ ಒಬ್ಬನೇ ಮಗನಾದ ಈರಣ್ಣ. ಅವರ ಮನೆಯಲ್ಲಿ ಕೆಲಸಗಾರ್ತಿಯಾಗಿದ್ದ ಭವಾನಿಯ ಮೇಲೆ ಮನಸ್ಸಾಗಿ ಅತ್ಯಾಚಾರ ಮಾಡಿದ ವಿಷಯ ಮನೆಮಂದಿಗೆ ತಿಳಿಯುತ್ತದೆ. ಅವನನ್ನು ಚೆಂಬಸಪ್ಪ ಕರ್‍ದು ನೀ ಭವಾನಿಗೆ ಕೆಡಸಿದ್ದು ಖರೇ ಅದಾ ಏನೋ ಅಬ್ಬರಿಸಿ ಕೇಳಿದಾಗ "ಹೊಯಿಂದು ಯಪ್ಪಾ.. ಭವಾನಿ ಇವತ್ತಿಲಿನಿಂದ ನನಗೆ ಸೇರಿಬಿಟ್ಟಳು. ಇನ್ನ ಮುಂದ ಆಕೀನ ಸುಕಾ ದುಕಾರ ಎಲ್ಲಾ ನಂದು ಇಕಿ ಮನಿ ಕಟ್ಟಿಸಿ ನನ್ ಅಸ್ತಿದಾಗ ಅರ್ಧಾ ಪಾಲಾ ಕೊಟ್ಟು ಇಟಗೋತೀನಿ"[೧೮] ಎಂದಾಗ ಚೆಂಬಸಪ್ಪ, ಕತಾಲಪ್ಪ, ಮೈಲಾರಪ್ಪನವರ ಕಡೆ ನೋಡಿದ 'ಏನೆಪ್ಪಾ ..... ನಿಮಗ ಒಪ್ಪಿಗಿ ಏನು ಇದು ಹೇಳ್ರಿ ಇಲ್ಲಂದ್ರ ನೀವು ಹೇಳಿದ ದಂಡಾ ಕಟ್ಟಿ ಪಂಚಾಯ್ತಿ ಮುಂದ ನಿಂತು ಈರ್‍ರಾ ನಿಮಗ ಮಾಫಿ ಕೇಳೋಹಾಂಗ ಮಾಡ್ತಿನೆಂತ' ಎಂದರು. ಅಂದರೆ ಇಲ್ಲಿ ಭವಾನಿ ನಾಯಿಮುಟ್ಟಿದ ಮಡಕೆ ಯಾರೂ ಮದವಿ ಆಗಲಕ್ಕ ಮುಂದ ಬರಂಗಿಲ್ಲ ಎಂದು ಕತಾಲುಪ್ಪ ಹೇಳುತ್ತಾನೆ.

ಭವಾನಿ ಅಸಹಾಕತೆಯಿಂದ ಒಪ್ಪಿದಳು. ಮೇಲ್ವರ್ಗದವರು ಹಿರಿಯ ಪಂಚ ಕೆಳಗೇರಿಯಲ್ಲಿ ಹೇಳಿದ ಮೇಲೆ ಮುಗಿಯಿತು. ನಾಲ್ಕುಗೋಡೆಗಳ ಮಧ್ಯದಲ್ಲಿ ಇಟ್ಟುಕೊಂಡವಳಾದಳು. ಭವಾನಿ ತಂದೆಗೆ ಗುಡಿಕಟ್ಟಿ ಊರು ಹೆಂಡದಂಗಡಿ ಇತರೆ ಸ್ಥಳಗಳಲ್ಲಿ ಜನರಿಂದ ವಿಷದ ಬಾಣಗಳಂತೆ ವ್ಯಂಗ್ಯದ ಮಾತುಗಳು ನೇರವಾಗಿ ಬಂದು ಅವನ ಕಾಳಜಿ ಕತ್ತರಿಸುತ್ತಿದ್ದವು. ನೇಣಬಿಗಿದು ಸತ್ತು ಹೋದ ನಂತರ ಭವಾನಿ ಅನಾಥೆಯಾದಳು. ದಿನಗಳೆದಂತೆಲ್ಲ ಬುದ್ಧಿ ಬೆಳೆಯಿತು. ಅಚ್ಚಗರತಿಯಾಗಿ ಬಾಳುತ್ತಿದ್ದರೂ ಸಮಾಜದಲ್ಲಿ ಅವನ ಹೆಂಡತಿಯಾಗಿರುವಷ್ಟು ಮಾನಮರ್ಯಾದೆ, ಹಕ್ಕುಗಳು ದೊರಕುತ್ತಿಲ್ಲ ಎಂದು ಕೊರಗಿದಳು. ಕರಿಮಣಿ ತಾಳಿ ಹೇಗೆ ಕಡ್ತನಾ? ಅವ ನೋಡೆದ್ರು ಊರಾಳೋ ಸಾವಾಕಾರ ಮಾಲಿಕುಲದಿಂದ ಈಕಿ ಹೇಳಿ ಕೇಳಿ ಮಾದರ ಜಾತಿ. ಏನೋ ಮನಸೆ

ಮೈ ಕಲಿತು ಖರೇ ಇಂಥವು ಹತ್ತು ಹಲವು ಮಾತಿಗಳಿಂದಜನರು ಚುಚ್ಚಿದರು ಮೊದಲ ಹೆಂಡತಿ ಹುಟ್ಟಿದ ಮಗಳಾದ ಶಾರದೆಯ ಮದುವೆ ನೆರೆಯೂರಿನ ಗೌಡನ ಮಹನೊಂದಿಗೆ ಭರ್ಜರಿಯಾಗಿ ಮಾಡಿದ. ಭವಾನಿ ಮನೆಗೆ ಆಗಾಗ ಬರುತ್ತಿದ್ದರಿಂದ ಕಟ್ಟಿಕೊಂಡವಳು ಕಡೇತನಕ ಇಟ್ಟುಕೊಂಡವಳು ಹರೆಯ ಇರೋತನಕ ಎನ್ನುವಂತೆ ಜನಾರಾಡುವ ಮಾತುಗಳು ಭವಾನಿ ಕಿವಿಯಲ್ಲಿ ಕಾದಸೀಸ ಎರೆಯುತ್ತಿದ್ದವು.

ಅನ್ಯಾಯ ಅಪಮಾನಗಳನ್ನು ಸಹಿಸಿಕೊಳ್ಳದಿದ್ದರೂ ಅವಳೊಂದು ಹಲ್ಲುಕಿತ್ತ ಹಾವಾಗಿದ್ದಳು. ಒಬ್ಬಳೇ ಮಗಳಾದ ಗೌರಿಗೂ ಮದವಿ ಮಾಡಿಕುಡ್ರಿ ಎಂದು ಈರಣ್ಣಗೆ ಕೇಳಿದಾಗ "ಗಂಡು ಹ್ಯಾಂಗ್ ಸಿಗತದ ಹೇಳು, ನೀ ಏನು ನನ್ ಕೈಲಿಂದ ನಾಲ್ಕು ಮಂದ್ರಾಗ ಎದುರು ತಾಳಿ ಕಟ್ಟಿಸಿಕೊಂಡ ಹೆಣ್ತಿ ಏನು? ನಮ್ ಕುಲದಕ್ಕಿ ಏನು? ನಮ್ ಕುಲದೇವರ್ತಾರೂ ಮದವಿ ಆಗಾಗಿಲ್ಲ ಹಂಗೇ ನಿಮ್ ಕುಲದವ್ರ ಯಾರೂ ತಯಾರಿಲ್ಲ ಗೊತ್ತೇನು"[೧೯] ಎಂದು ಗರತಿಯರಿಗೆ ನಿಮ್ಮ ಹುಟ್ಟಿದ್ದ ಮಗುವಿಗೆ ಮದುವೆ ಮಾಡಳ್ವಾ? ಮಕ್ಕಳಿಗಿ ತಂದಿ ಜಾತಿನೇ ಬರ್ತದಂತ ಹೇಳ್ತಾರ. ಆಗಾದ್ರೆ ಸುಳ್ಳು ಏನು? ಅಂದಾಗ ಈರಣ್ಣ ನನ್ ತಂಗಿ ಮಗಾ ಶಾಂತವೀರೂ ಅವನು ಗೌರಿನ ಮೆಚ್ಚಿದನಾ ಅವನಿಗೆ ಹೆಣ್ತಿ ಎಟ್ಟು ಮಕ್ಕಳವಾ ಗೌರಿನಾ ಇಟಗೋಳಕ್ಕರ ಮುಂದ ಬಂದಾನ ಎಂದಾಗ ಭವಾನಿ ಬೆಂಕಿ ಬಾಂಬಿನಿಂತೆ ಸಿಡಿದಳು. ಉರಿ ತಗುಲಿದ ಮುದ್ದಿನ ಕುಳ್ಳಿಯಂತೆ ಅಸ್ಫೋಟಿದಳು ಗಾಯಗೊಂಡ ಹೆಣ್ಣು ಹುಲಿಯಂತೆ ಗರ್ಜಿಸಿದಳು. ಹೆತ್ತ ಮಗಳಾ ನಿಂಗೆ? ನಾ ಉಂಡ ದುಕ್ಕ ಸಂಕಟ, ಚಿಂತಿ, ಅಪಮಾನಗಳೇ ಸಾಕು. ನನ್ ಮಗಳಿಗೆ ಹಾಗೆ ನೆಡೆಯೋಕೆ ಬಿಡಲ್ಲ ಯಾವ ಗಂಡಸಿನ ಹಂಗಿನ ಅನುಕರ ಅಸಿ ಬಳಲಾರ್ದೆ ಸತಂತ್ರವಾಗಿ ಬಾಳ್ತಾಳ. ಇಲ್ಲಿ ಪುರುಷನ ದೃಷ್ಟಿಯಾಗಲಿಲ್ಲ ಬದಲಾಗಿ ಪುರುಷ ಪ್ರಧಾನ ಸಮಾಜದಲ್ಲಿ ಬಾಳಲು ಹಿಂಜರಿದಳು ಪ್ರಪಂಚವನ್ನು ಬದಲಿಸಬಲ್ಲ ಪ್ರಬಲ ಅಸ್ತ್ರವೆಂದರೆ ಅದು ಶಿಕ್ಷಣದಿಂದ ಎಂದು ಭವಾನಿ ನನ್ನ ಮಗಳಿಗೆ ಸಾಲಿ ಕಲಸ್ತೀನಿ ವಿದ್ಯಾ ಕುಡಸ್ತೀನಿ ಖುಬೇರ ಗಂಡಸು ಬಂದು ಆಕಿಗಿ ಮದವಿ ಆಗ್ತಾನ ಇಲ್ಲ ತಾಕಲ್ತಾ ವಿದ್ಯಾನಲಿಯ ಯಾವ ಸಾವಾಕಾರನ ಹಂಗೂ ಇಲ್ದೆ ಬಾಳ್ತಾಳೆ. ಭವಾನಿ ತನ್ನ ಮಗಳನ್ನು ಕರೆದುಕೊಂಡು ಮನೆಬಿಟ್ಟು ಹೊರಟಳು. ಮಗಳು ಕೇಳಿದಾಗ ಬೆಳಕಿನ ಕಡೀಗಿ ಹೊರಟೀವಿ ಮಗಾ ಎಂದಳು. ಕತ್ತಲಿನ ಅರಿದರೆ ಪುರುಷರ ದಬ್ಬಾಳಿಕೆ, ಮೇಲುವರ್ಗ ದಾರಬಾರು, ಪುರುಷ ಪ್ರಧಾನ ಸಮಾಜ ಹೆಣ್ಣಿನ ಅಸಯಾಕತೆ, ಲೈಂಗಿಕ ಕಿರುಕುಳ, ಅತ್ಯಾಚಾರ ಒಮ್ಮತ್ ವಿದ್ಯೆಯಲ್ಲಿದೆ. ಪ್ರಜ್ಞೆಯಿಲ್ಲದ ಭವಿಷತ್ ಅರಿವಿಲ್ಲದ ತಾತ್ಕಾಲಿಕ ಸುಖದಿಂದ ತುಂಬಿದ

ಅಜ್ಞಾನದಿಂದ ಬೆಳಕಿನ ಕಡೆ ಅಂದರೆ ಶಿಕ್ಷಣದ ಮೂಲಕ ವಿದ್ಯೆ, ತಿಳುವಳಿಕೆ ನೀತಿ ನಿಯಮಗಳು ಸಮಾಜ, ಕುಟುಂಬ, ಸ್ವಾತಂತ್ರ್ಯ, ಹಕ್ಕು, ನೀನೆ ಕಂಡುಕೊಳ್ಳುವುದಾಗಿದೆ. ಅದನ್ನು ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ ವಚನಕಾರರು ಹೇಳಿದ್ದಾರೆ.

ಮಹಿಳೆ: ಕೌಟುಂಬಿಕ ಅಭಿವ್ಯಕ್ತಿ

ಕೆಳಜಾತಿಯ ಮಹಿಳೆಯರು ಮೇಲ್ವರ್ಗದ ಪುರುಷಸಮಾಜದ ತುಳಿತಕ್ಕೆ ಒಳಗಾಗಿ, ಅವರ ತೋರುವ ಆಸೆ–ಆಮಿಷಗಳಿಗೆ ಬಲಿಯಾಗಿ ಸ್ವತಂತ್ರ ರೀತಿಯಲ್ಲಿ ಮನೆಯಿಂದ ಹೊರಗೆ ಹೋಗಿ ವ್ಯವಹಾರ ನೆಡೆಸುವುದು ಅತ್ಯಂತ ಕಷ್ಟವೇ ಆಗಿತ್ತು. ಮಾತೃಶಕ್ತಿ ವಾತ್ಸಲ್ಯ, ಸಹನೆ, ತಾಳ್ಮೆ, ಪ್ರೀತಿ, ಆರೈಕೆ, ಸತ್ಕಾರ, ಸನ್ಮಾನ, ಸಾಂತ್ವನ ಗುಣಗಳು ಆಕೆಗೆ ಹುಟ್ಟಿನಿಂದಲೇ ಬಂದವುಗಳಾಗಿವೆ. 'ಜಲ್ವಂತ' ಕಥೆಯಲ್ಲಿ "ಸೀನಿಂಗಿಯ ತಾಯಿ ಮಗಳನ್ನು ಜೋಗಿತಿ ಮಾಡಿದ್ದಾಗ ಸೀನಿಂಗಿ ಗಂಡೆಸರ ತಲೆಯ ಮೇಲಿನ ಪರಡಿಗಳಲ್ಲಿ ತಾಯಿಯ ಗುಡಿಯ ಮುಂದಿನ ಬಾವಿಗೆಸದಳು."[೨೦] ದೇವದಾಸಿ ಪದ್ಧತಿಯ ತಿರಸ್ಕಾರ ಮಾಡಿದಳು. ಕುಲಕರ್ಣಿ ಅವಳನ್ನು ಮದುವೆ ಆದ. ಆದರೆ ದೊಡ್ಡ ಕುಕ್ಕಣ್ಣಿ ಅಂತವರು ಶೂದ್ರಹೆಣ್ಣು, ವೇಶ್ಯೆ, ಹಲಕಟ ಹೆಂಗಸು ಎಂದನು. ಸೀನಿಂಗಿಯ ಸುಖ ದುಃಖದಲ್ಲಿ ಕುಲಕರ್ಣಿ ಭಾಗಿಯಾದ ಬಹಿಷ್ಕಾರ ಹಾಕಿದ ಮೇಲೆ ಕುಲಕರ್ಣಿ ಸಾವನ್ನಪ್ಪಿದಾಗ ಶೂದ್ರ ಹೆಣ್ಣು ಅಂತ್ಯಸಂಸ್ಕಾರ ಮಾಡಿದಳೇ ವಿನಹಃ ನೆರೆಹೊರೆ ಸಂಬಂಧಿಯವರಲ್ಲ. ಸ್ಮಶಾನದಲ್ಲಿ ಹೆಣಕ್ಕೆ ಹಣಕಟ್ಟುವ ವಿಷಯದಲ್ಲಿ ತಕರಾರು ತೆಗೆದು ಸೀನಿಂಗಿ ರೋಷದಿಂದ ಸಿಡಿದೆದ್ದು ನಿಂತಳು. ಅಸಾಯಕತೆಯಿಂದ ಬಂದಾಗ ಗಂಡೊಬ್ಬ ದಾರಿತೋರಿ ಜೀವನ ಕೊಟ್ಟರೂ ಸಮಾಜದಲ್ಲಿ ಹೆಣ್ಣಿಗೆ ಸ್ಥಾನಮಾನ ಸಿಗಲಿಲ್ಲ. ಹೆಣ್ಣಿನ ಕಷ್ಟ ಸುಖದಲ್ಲಿ ಗಂಡನೇ ಆಗುವನು ಎಂದು ಗೀತಾ ನಾಗಭೂಷಣ ಅವರು ಪ್ರತಿಬಿಂಬಿಸಿದ್ದಾರೆ. ಇವರ ಕಥೆಗಳು ವಾಸ್ತವ ಬದುಕಿಗೆ ಕೈಗನ್ನಡಿಯಂತಿವೆ.

ಜಾತಿ ತಾರತಮ್ಯದಿಂದ ಅವಮಾನಕ್ಕೊಳಗಾದದ ಮಹಿಳೆಯರು ಅನುಭವಿಸುವ ಶೋಷಣೆಯು ಜಾತಿತಾರತಮ್ಯ ಅವಮಾನದ ಜೊತೆಗೆ ಪುರುಷರಿಂದ ಕಿರುಕುಳ ಅನುಭವಿಸುವ ಮಹಿಳೆಯರ ಸ್ಥಿತಿ ಭಯಾನಕವಾಗಿದೆ. ಹತ್ತಿರ ಬಂದದ್ದನ್ನೇ ಸುತ್ತಿ ಬಳಸಿ ಬೆಳೆಯುವ ಬಳ್ಳಿ ಎಂದು ವರ್ಣಿಸಲಾಗಿದೆ. ಜಾತಕ ಕತೆಯೊಂದರಲ್ಲಿ ದುರಾಶೆಯ ಆಕಳು ಒಂದಾದ ಮೇಲೊಂದು ಹುಲ್ಲುಗಾವಲನ್ನು ಅರಸುತ್ತ ಹೋಗುವಂತೆ ಹೆಂಗಸೂ ಒಬ್ಬರಾದ ಮೇಲೊಬ್ಬ ಪುರುಷನನ್ನು ಅರಸುತ್ತಾಳೆ ಎಂದು ಆರೋಪಿಸಲಾಗಿದೆ. 'ಬೇಲಿ' ಕಥೆಯಲ್ಲಿ ಬರುವ ಸೀನಿಂಗಿ ತನ್ನ ಗಂಡನನ್ನು ಕಳೆದುಕೊಂಡು ಮಾವನ ಮನೆಯ

[illegible]

[illegible]

[illegible]

[illegible]

[illegible]

ಆಶ್ರಿತಳಾಗಿ ಬಾಳುತ್ತಿದ್ದಾಗ ತನಗೆ ಅರಿವಿಲ್ಲದೇ ಮಾವನಿಂದ ಬಲತ್ಕಾರಕ್ಕೆ ಒಳಗಾದಳು. ತುಂಬಿದ ಅಗಲವಾದ ಬಾವಿಯ ನೀರಿನ ನಡುವೆ ಸೊಸೆ ಸೀನಿಂಗಿಯ ಶವ ತೇಲುತ್ತಿತ್ತು. ಹಾಗಾದರೆ ಹುಲ್ಲುಗಾವಲು ಅರಸಿದವರು ಯಾರು? ಮಹಿಳೆಗೆ ತ್ಯಾಗಮೂರ್ತಿ ತಾಯಿ, ದೇವತೆ, ಪತ್ನಿ, ಗೆಳತಿ, ಸೊಸೆ, ಮಗಳು, ಎಂಬ ಕಿರೀಟಗಳಿವೆ. ಆದರೆ ಅದರೊಳಗೆ ಮುಳ್ಳಿದೆ. ಸೀನಿಂಗಿಯಂತ ಹೆಣ್ಣು ಏನನ್ನೂ ಹೇಳಲಾಗದೆ ಅನುಭವಿಸಲಾಗದೆ ಆತ್ಮಹತ್ಯೆಗೆ ಶರಣಾಗುವವರೂ ಇದ್ದಾರೆ. ಹೆಣ್ಣನ್ನು ಕಾಮಧೇನುವಿಗೆ ಭೂಮಿಗೆ ಹೋಲಿಸುತ್ತಾರೆ. ಅದೇ ಕಾಮಧೇನುವನ್ನು ಕಾಮದ ರೀತಿಯಲ್ಲ ಮಾಂಸಮುದ್ದೆಗಾಗಿ, ಆಸ್ತಿಗೆ, ಹಣಕ್ಕಾಗಿ, ಸ್ವಾರ್ಥಕ್ಕಾಗಿ ಕೊಲ್ಲುವವರೂ ಇದ್ದಾರೆ. ಭೂಮಿಗೆ ಬರಡು ಎಂದು ಮಾರುವವರಿದ್ದಾರೆ. ಬೀಜ ಭಿತ್ತಿ ಫಲ ಪಡೆಯುವವರೂ ಇದ್ದಾರೆ. ಅನಕ್ಷರತೆ, ಅವರ ಅಂಧಕಾರ, ತಾಳ್ಮೆ ಎಲ್ಲವೂ ಇದರಲ್ಲಿ ಅಡಕವಾಗಿದೆ. ಮಹಿಳೆ ಒಬ್ಬ ಅಸಹಾಯಕಳಂತೆ ತನ್ನ ಪ್ರಾಣವನ್ನೇ ಪ್ರತಿವ್ರತ ಧರ್ಮವನ್ನು ಕಾಪಾಡುವವಳಾಗಿದ್ದಾಳೆ.

ಮಹಿಳೆಯನ್ನು ಲೈಂಗಿಕವಾಗಿ ಅಪೇಕ್ಷಿಸುವುದು ಅಥವಾ ಆಕೆಗೆ ಸಾರ್ವಜನಿಕ ಬೆಂಬಲವನ್ನು ಕಡಿಮೆ ಮಾಡುವ ಉದ್ದೇಶದಿಂದ ಆಕೆಯ ಚಾರಿತ್ರ್ಯಹರಣ ಮಾಡುವಂತಹ ಪ್ರಯತ್ನಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ವ್ಯಾಪಕವಾಗಿಯೂ ಪ್ರಚಲಿತದಲ್ಲಿದೆ. 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಕಲಿತ ಹೆಣ್ಣು ಮನೆಯ ಕಣ್ಣು ಅನ್ನುವ ಹಾಗೆ. ಕೌಟುಂಬಿಕ ವಲಯದಲ್ಲಿ ಸಾಧನೆಯ ಹಾದಿಯಲ್ಲಿ ಅಸಹಾಯಕತೆಯ ದಾರಿಯಲ್ಲಿ ಹೆಣ್ಣಿಗೆ ಸಂಶಯ, ಅಸೂಯೆ, ವಿವಿಧ ಬಾಣಗಳ ಬೇಲಿಯಾಕಿರುವ ಜನರು ಪುರುಷರು ಒಬ್ಬ ಹೆಣ್ಣು ಹೆಂಡತಿ ಸತ್ತಾಗ ಮರು ಮದವೆ ಆಗುವಂತಹ ಸಂಧರ್ಭಗಳೇ ಹೆಚ್ಚು. "ಶೂದ್ರ ಮುಂಡೇರಿಗಿ ಭಾಳ ಸೊಕತಿ ಬಂದದ, ವೈನೀ, ಒಂದಿಷ್ಟು ಮೆಟ್ರಿಕ್ ತನಕಾ ನೌಲಿ ಕಲೀತಾವೋ ಇಲ್ಲೋ ಟೀಚರಾದ್ರಂದ್ರ ಸಾಕು, ಆಕಾಶ ಅಂಗೈಯಾಗ ಬಿದ್ದಾಂಗ ಕುಣೀತಾವು, ಸುಡ್ಲಿ, ಆಕೆ ಸತ್ತಿದ್ದೇ ಛಲೋ ಆಯ್ತು ಬಿಡ್ರಿ. ಪತೀವ್ರತಾ ಇಲ್ದ ಹೆಂಗಸ್ರು ಇರಬಾರ್ದು ಅದೂ ಶೂದ್ರರ ಅಂತೂ ಖಂಡಿತಾ ಇರಬಾರ್ದು ನೋಡ್ರಿ."[೨೧]

ಲಕ್ಷ್ಮೀ ಸತ್ತ ಮೇಲೆ ಅವಳ ಸಾವಿನ ಸುತ್ತ ನೂರಾರು ಮಾತುಗಳು ತಿರುಗುತ್ತಿದ್ದವು. ಲಕ್ಷ್ಮೀ ಧೈರ್ಯವಂತೆ, ದಿಟ್ಟಹೆಣ್ಣು, ಬೆಂಕಿ ಹತ್ತಿಕೊಂಡು ಆಕಸ್ಮಿತವೇ ಆತ್ಮಹತ್ಯೆಯೇ? ಅವಳ ಗೆಳತಿಗೆ ಸಂದೇಹ. ಲಕ್ಷ್ಮೀ ಬೆಳಿಗೊ ಸಂಜಿ ೪ರವರೆಗೆ ಶಾಲೆಶಿಕ್ಷಕಿಯಾಗಿ ಆದರೆ ಗಂಡಮಕ್ಕಳ ಜೊತೆ ಇರಬೇಕೆಂದಿಲ್ಲ. ಶಾಲೆಯ ಮಕ್ಕಳು ಅವಳ ಮಕ್ಕಳೇ. ಆದರೆ ಬುದ್ಧಿಗೇಡಿ ಜನ ಒಬ್ಬರನ್ನು ಕಂಡು ಹೇಗೆ ಬಿಂಬಿಸುತ್ತಾರೆ. ಪ್ರತ್ಯಕ್ಷವಾಗಿ

ಕಂಡರೂ ಪ್ರಮಾಣಿಸಿ ನೋಡಬೇಕು. ಶೀಲದ ನಡತೆ ಹಾಗೂ ಮಾತಾಡಬಾರದು ಬೇರೆ ಹೆಣ್ಣಿನ ಸ್ನೇಹ ಮಾಡಿದ ಗಂಡಸರು ತಲೆಯೆತ್ತಿ ಬದುಕುತ್ತಿದ್ದಾರೆ. 'ತಲಾಕ್' ಎಂಬ ಹೆಸರನಲ್ಲಿ ಮತ್ತು ಮರುಮದುವೆ ವಿವಾಹ ವಿಚ್ಛೇದನ ಹೆಸರಿನಲ್ಲಿ ಆದರೆ ಹೆಂಗಸರಿಗೆ ಮಾತ್ರ ಹಕ್ಕು ಇಲ್ಲವೇ? ಸ್ವತಂತ್ರ ಜೀವನ ನೆಡೆಸುವ ಹಕ್ಕು ಇಲ್ಲವೇ? ಸಮಾಜವು ಹೆಣ್ಣಿಗೆ ಬೇಲಿಯಾಗಿ ಪರಿಕ್ರಮಿಸಿದೆ, ಕಟ್ಟುಕಟ್ಟಲೆಗಳನ್ನು ಪರಿಧಿಯನ್ನು ಬೇಧಿಸಿ ಹೆಣ್ಣು ಹೊರಬಾರದೇ? ಸುತ್ತಲಿನ ಸಮಾಜಕ್ಕೆ ಹೆದರಿ ಸ್ವಂತ ವ್ಯಕ್ತಿತ್ವವನ್ನು ಅದುಮಿಡಬೇಕಾ? ಸಾವಿನ ಬಾಯಿಗೆ ತುತ್ತಾಗಬೇಕಾ? ವಿದ್ಯಾವಂತರೇ, ಅವಿದ್ಯಾವಂತರೇ ಸಂದೇಹಪಡುವಾಗ ಯೋಚಿಸಿ ಏನು ಅರ್ಥ? ವಿದ್ಯೆ, ಹುದ್ದೆಗಳಲ್ಲಿ ಹೊರಗಿನ ಮೆರಗಿನ ಬಣ್ಣಗಳು ಅಷ್ಟೇ ಆ ಬಣ್ಣದ ಬಟ್ಟೆ ಕಳಚಿದರೆ ವಿದ್ಯಾವಂತರು, ಅವಿದ್ಯಾವಂತರಿಲ್ಲ ಬರೀ ಬೆತ್ತಲೆಯೇ ಅಲ್ಲವೇ? ಇಂಥ ವಿಚಾರ ಧಾರೆಗಳು ಸಮಾಜಿಕ ಮೌಲ್ಯಗಳ ನಡುವೆ ಹೆಣ್ಣು ವಿಚಾರವಂತೆಯಾಗಿ, ಜಾಣೆಯಾಗಿ, ಪ್ರಜ್ಞಾವಂತೆಯಾಗಿ, ಬದುಕುವುದು ಎಷ್ಟು ಕಷ್ಟ ಎಂದು ಗೀತಾ ನಾಗಭೂಷಣರವರು ಹೇಳಿದ್ದಾರೆ.

ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣು ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಹೆಂಡತಿಯಾಗಿ, ನಾದಿನಿಯಾಗಿ, ಅತ್ತಿಗೆಯಾಗಿ, ಅತ್ತೆಯಾಗಿ, ಗೆಳತಿಯಾಗಿ, ಪ್ರೇಮಿಯಾಗಿ, ಆಕೆ ನಿರ್ವಹಿಸುವ ಪಾತ್ರ ಅತ್ಯದ್ಬುತವಾಗಿವೆ. ಕುಟುಂಬದ ಕಟ್ಟುಪಾಡುಗಳಿಗೆ ಒಳಗಾಗಿ ಜೀವನವನ್ನು ನೆಡೆಸುತ್ತಿದ್ದಾಳೆ. ತನ್ನ ಕುಟುಂಬಕ್ಕಾಗಿ ಏನೆಲ್ಲಾ ತ್ಯಾಗ ಮಾಡಲು ಹಿಂಜರಿಯುವುದಿಲ್ಲ ಪ್ರಾಣತ್ಯಾಗಕ್ಕೂ ಸಿದ್ಧಳಾಗಿರುತ್ತಾಳೆ. 'ಅವ್ವ' ಕಥೆಯಲ್ಲಿ ತಾಯಿ ರೋಗಿಷ್ಟ ಮಗುವಿನ ಜೀವ ಕಾಪಾಡಲು ತನ್ನ ಶೀಲವನ್ನು ೫೦ ರೂಪಾಯಿಗೆ ಮಾರಿದಳು. ಆದರೂ ಮಗುವನ್ನು ಧಕ್ಕಿಸಿಕೊಳ್ಳಲು ಆಗಲಿಲ್ಲ. ಗಂಗಾ ತನ್ನ ಮಗುವಿನ ಉಳಿವಿಗಾಗಿ ದಾರಿಹೋಕರನ್ನು ಔಷಧಿ ಅಂಗಡಿಯವರನ್ನು ಗೋಗರಿದರೂ ಔಷಧಿ ದೊರಕಲಿಲ್ಲ.

ಹಣ ಕಂಡರೆ ಹೆಣನೂ ಬಾಯಿ ಬಿಡುವುದು ನಿಜವೆನಿಸುತ್ತೆ. ಮಾನವೀಯತೆ ಇಲ್ಲದ ಜನರು ಸಮಾಜದಲ್ಲಿದ್ದಾರೆ. ಪ್ರಾಣಕ್ಕೆ ಬೆಲೆ ಇರುತ್ತದೇ ಇಲ್ಲವೇ ಆದರೆ ಸತ್ತ ಹೆಣಕ್ಕೂ ನಾಮ ಸುಡುವಾಗ ಸ್ಮಶಾನದಲ್ಲಿ ಆಸ್ಪತ್ರೆಯಲ್ಲಿ ಹಣ ನೀಡಬೇಕು. ಅದೇ ನಿಟ್ಟಿನಲ್ಲಿ ಗೌಡ ಕುಕ್ಕಣ್ಣಿ ಹೇಳಿಕೆಯಂತೆ ಗಂಗೆಯ ಗಂಡ ಮೈಲಾರಿ ಗೌಡನ ವೈರಿಯ ಕಾಲು ಮುರಿದು ಜೈಲಿಗೆ ಹೋದ. ಆಗ "ಗೌಡ ಹೆಣ್ತ ಅಂದ್ರೆ ನನ್ ಮಗಳದ್ದಾಂಗ 'ಅಂದೂ' ಗಂಗಾ ಇನ್ನೊಂದು ಹದಿನೈದು ದಿನಾ ಹೋಗಲಿ ನಿನ್ ಮೈ ಆರ್ತದ ಈಗ ಇನ್ನೂ ಹಸಿಹಸಿ ಬಾಣಂತಿ ನೀ ಆ ಮ್ಯಾಲ ನಿನಗೆ ರುಪೈ ಕುಡ್ತಿನೆಂತ ತುಟಿ

ಸವರಿಕೊಳತ್ತಾ ಹೇಳ್ತಾನೆ"[೨೨] ಗಂಗಾ ಅಸಹಾಯಕತೆಯಿಂದ ಕೋಪದಿಂದ ಅಲ್ಲಿಂದ ಹೊರಟಳು. ಕಪ್ಪುಕಾರಿನ ಮಾಲೀಕ ಕೈಯಲ್ಲಿ ೫೦ ರೂಪಾಯಿ ನೀಡಿದ್ದನು. ಗಂಗಾ ಸಿಟ್ಟು, ಸಂತಾಪ, ಆಸೆಗಳಿಂದ ಹಲ್ಲು ಕಿತ್ತ ಹಾವನಂತಿದ್ದಳು. ಮಗು ತೀರಿದಾಗ ಹುಚ್ಚಿಯಂತೆ ಭ್ರಮಿಸಿದಳು. ಗಂಗಾ ಹೆತ್ತಕರುಳು ಕಿತ್ತು ಬರುವ ಆರ್ತತೆ, ಅಸಹಾಯಕತೆ, ದುಃಖದಿಂದ ರೋಧಿಸತೊಡಗಿದಳು. ಸಿರಿವಂತರನ್ನು ಪೆಟ್ರೋಲ್ ಹಾಕಿ ಸುಟ್ಟುಬಿಡುವಂತಹ ರೋಷದಲ್ಲೂ ಏನೂ ಮಾಡದ ಸ್ಥಿತಿಯಲ್ಲಿದ್ದಳು. ಮತ್ತೆ ಕಾರಿನ ಸಾಹುಕಾರನಿಗೆ ಹೊಡೆದಳು. ಹರೆಯದ ಹೆಂಗಸಿನ ಆಕ್ರೋಶದ ಹೊಡೆತ ಅದು.

ತಾಯಿ ಪಾತ್ರ ಅವ್ವನ ಕಥೆಗಳಲ್ಲಿ ವ್ಯಕ್ತವಾಗಿದೆ. ಗಂಗಾ ತನ್ನ ಹೆಣ್ತನವನ್ನು ತಾಯ್ತನದ ಕರುಳಿಗಾಗಿ ಮಾರಿದಳು. ಈ ಕಠೋರ ಚಿತ್ರಣ ಮನಕಲಕುವಂತದ್ದು. ಉಳ್ಳವರು ಮತ್ತು ಇಲ್ಲದವರು ನಡುವಿನ ಹೋರಾಟದಲ್ಲಿ ಎಚ್ಚೆತ್ತ ಮಹಿಳೆಯಾಗಿ ಹೊರಹೊಮ್ಮಿದಳು. ದಲಿತ ಮಹಿಳೆ ಮೇಲ್ಜಾತಿ ಮಹಿಳೆಗಿಂತ ಪ್ರತಿರೋಧ ಒಡ್ಡುವುದರಲ್ಲಿ ಗಟ್ಟಿಗಳು ಎಂದು ಗಂಗಾ ಸಾಬೀತು ಮಾಡಿದಳು. ಗಂಗಾ ದಲಿತ ಮಹಿಳೆಯು ಮನೆಯ ಒಳಗೆ ಹೊರಗೆ ಎರಡೂ ಕಡೆಯಿಂದ ಲೈಂಗಿಕ ಅಕ್ರಮಗಳು ಹಿಂಸಾಚಾರಗಳು ನಡೆಯುತ್ತಿವೆ. ಜಲ್ವಂತ ಅವ್ವ ಮತ್ತು ಇತರ ಕಥೆಗಳು ಕೆಳವರ್ಗದ ಮಹಿಳೆಯರು ಮೇಲ್ವರ್ಗದ ಪುರುಷರ ಆಸೆ ಆಮಿಷಗಳಿಗೆ ಹೇಗೆ ಬಲಿಯಾಗಿ ಬದುಕು ಕಳೆದುಕೊಳ್ಳುತ್ತಾರೆ. ಎಂಬುದರ ನಿರೂಪಿಸುತ್ತದೆ. ಜೊತೆಗೆ ಅವರಲ್ಲಿ ಪ್ರತಿಭಟಿಸುವ ಕ್ಷಮಿಸುವ ಗುಣ ದಲಿತರಲ್ಲಿದೆ ಎಂಬುದನ್ನು ನಿರೂಪಿಸುತ್ತದೆ.

ಗೀತಾ ನಾಗಭೂಷಣ ಅವರು ಪುರುಷದ್ವೇಷಿಯಲ್ಲ ಬದಲಾಗಿ ಪುರುಷಪ್ರಧಾನ ಸಮಾಜದಲ್ಲಿ ಮಾನವೀಯತೆಯ ಗಂಡಸರು ಅದೇ ರೀತಿ ಕೆಟ್ಟ ಹೆಂಗಸರು ಇರುತ್ತಾರೆ. ತಮ್ಮ ಸ್ವಾರ್ಥಕ್ಕಾಗಿ ಏನನ್ನಾದರೂ ಮಾಡಲು, ನಿರೂಪಿಸಲು ಮುಂದಾಗಿರುತ್ತಾರೆ. ಬಂಜೆತನವನ್ನು ಹೊತ್ತ ಮಹಿಳೆಗೆ ಸಮಾಜದಲ್ಲಿ ಇಂದಿಗೂ ಬೆಲೆಯಿಲ್ಲ. ಅದೇ ರೀತಿ ಅವರು ಜನರ ಆಡುಮಾತುಗಳಿಗೆ ತುತ್ತಾಗಬೇಕಾಗುತ್ತದೆ? ಇದಕ್ಕೆ ಸಹಕಾರ, ಗೌರವ, ಮಾನವೀಯತೆ ಉಳ್ಳುವರು ಇದ್ದಾರೆಯೇ? ನೀತಿನಿಯಮಗಳಿಂದ ಮಧ್ಯವರ್ತಿಗಳು ಹಾಗೂ ವೈದ್ಯರಿಂದ ಬಡ ಮಹಿಳೆಯರು ಶೋಷಿತರಾಗುವ ಪ್ರಕರಣಗಳು ನಡೆಯುತ್ತಿವೆ ಎಂಬುದೂ ನಿಜ. ಬಾಡಿಗೆ ತಾಯಂದಿರಿಗೂ ಹೆಚ್ಚು ಅಪಾಯಕಾರಿ ಸಂಪೂರ್ಣ ಪಾನನಿಷೇಧ, ಅಂಗಾಂಗ ಜೋಡಣೆ ನಿಷೇಧದಂತಹ ವಿಚಾರಗಳಲ್ಲಾಗಿರುವುದೂ ಇದೇ. ಒಂದು ಆರೋಗ್ಯಕರ ಮಗು ಹೊಂದಿರುವ ವಿವಾಹಿತ ಮಹಿಳೆ ಮತ್ತೊಂದು ಮಗುವನ್ನು

ಸಂಬಂಧಿಗಳಿಗೆ ಹೆತ್ತು ಕೊಡುವಂತಹ ಉದಾರ ಮನಸ್ಸು ಮಾಡುತ್ತಾಳೆಯೇ? 'ಗೌರವ್ವ ಜೈವಿಕ ತಾಯಿಯಾದರೆ ಚೆಕ್ಕಿ ಜನ್ಮ ನೀಡಿದ ತಾಯಿ ನಡುವೆ ಉಂಟಾಗಬಹುದಾದ ಭಾವಾನಾತ್ಮಕ ಗೊಂದಲಗಳು.

ಗರ್ಭ ಕಥೆಯಲ್ಲಿ ಬರುವ ಸಾಹುಕಾರ ಈಸೂರಪ್ಪ ತನ್ನ ಹೆಂಡತಿ ಗೊಡ್ಡು ಅಂತ ತಿಳಿದರೂ ಮರು ಮದುವೆ ಆಗಲಿಲ್ಲ 'ನಾ ನಿನ್ ಮ್ಯಾಲ ಸವತಿಗಿ ಮಾತರ ಎಂದು ತರಂಗಿಲ್ಲ ಗೋರಿ.... ಬ್ಯಾರೆ ಏನೆರೆ ದಾರಿ ಹುಡ್ಕ ಭಂಗಾರಾ' ಎಂದನು ಹೆಂಡತಿ ಗೌರವ್ವಗೆ ದತ್ತು ಮಗುವಿನ ಮೇಲೆಯೂ ಆಸೆಯಿರಲಿಲ್ಲ. ಬಂಜೆಯ ಪಟ್ಟ ಹೊತ್ತಿ ನಿಂತಿದ್ದಳು. ಎಲ್ಲರ ಬಾಯಿಯಲ್ಲಿ ಸಿಲುಕಿದಳು. ಆದರೆ ಅವಳಿಗೆ ಗೌಡ್ತಿ ಪಟ್ಟ ಕೆಳಕೊಳೋಕೆ ಇಷ್ಟ ಇರಲಿಲ್ಲ. ಅದೇ ರೀತಿ ಮಗುನೂ ಬೇಕಿತ್ತು ಅವ ಸ್ವಾರ್ಥಕ್ಕಾಗಿ ತನ್ನ ಹೆಣ್ತತನವನ್ನು ಪಟ್ಟವನ್ನು ಕಾಪಾಡಿಕೊಳ್ಳಲು 'ಚೆಕ್ಕಿ'ನ ಉಪಯೋಗಿಸಿದಳು. ಬಾಲ್ಯದ ಗೆಳತಿಯನ್ನು ತನ್ನ ಗಂಡನೊಂದಿಗೆ ಹಂಚಿಕೊಟ್ಟಳು. ಒಂದು ಕಡೆ ಅವಳ ಪಟ್ಟ, ಸ್ವಾರ್ಥಕ್ಕೋಸ್ಕರ ಚೆಕ್ಕಿನ ಬಾಳ್ವೆ ನಾಶ ಮಾಡಿದರೆ ನಂಬಿಕೆದ್ರೋಹ ಮಾಡಿದರೆ ಇನ್ನೊಂದು ಕಡೆ ಅವಳ ಹೆಣ್ತತನವನ್ನೇ ಕಾಪಾಡಿಕೊಳ್ಳಲು ಸೆಣೆಸಾಡಿದಳು. ಚೆಕ್ಕಿ ಒಬ್ಬ ಮುಗ್ದೆ ಹೆಣ್ಣು ತನ್ನ ತಾಯ್ತತನವನ್ನೇ ಅದಕ್ಕೂ ಮಿಗಿಲಾಗಿ ತನ್ನ ತನ್ನವನ್ನೇ ಸ್ನೇಹಿತೆಯ ಜೀವನಕ್ಕಾಗಿ ಮುಡುಪಾಗಿಯಿಟ್ಟಳು. ಆರೆ ಮಗು ಪಡೆದ ನಂತರ ಗೌರವ್ವ ಹೆಳತಿಯನ್ನಾ ಮರೆತಳು ಉಪಕಾರ ಮಾಡಿದವರಿಗೆ ಅಪಕಾರ ಮಾಡಬಾರದು. ಆದರೆ ಚೆಕ್ಕಿ ತನ್ನ ಹೆತ್ತ ಕರುಳನ್ನು ಮೀರಿ ಹೋಗಲಿಕ್ಕೆ ಸಾಧ್ಯವಾಗಲಿಲ್ಲ. ಕೊನೆಗೂ ಚೆಕ್ಕಿ ತನ್ನತನವನ್ನೂ ತಾಯ್ತತನವನ್ನು ಅವರ ಮುಷ್ಠಿಯಿಂದ ಕಾಪಾಡಿಕೊಂಡಳು. ಒಬ್ಬ ಹೆಣ್ಣು ಇನ್ನೊಬ್ಬ ಹೆಣ್ಣಿಗೆ ಆಸರೆಯಾದಳು. ಮುಗ್ಧ ಹೆಣ್ಣಿನ ಕರಾಳ ಕಥೆಯನ್ನು ಮೊದಲಿಗೆ ಬೇಜಾದಾನ ತಗೊಳುವಂತ ಕಾಲವಿತ್ತು ಇಂದೂ ಭೂಮಿದಾನ ತಗೋಳಾದು' ಇಂದಿಗೂ ಸಮಾಜದಲ್ಲಿ ದತ್ತು ಮಗು ಬದಲಾಗಿ ಇವತ್ತೂ ತಮ್ಮ ಬೀಜ ಮೊಳಕೆಯೊಡೆಯುವುದಕ್ಕೆ ಭೂಮಿದಾನ ತಗೊಳುತ್ತಿದ್ದಾರೆ ಅದಕ್ಕೆ ತಕ್ಕ ಬೆಲೆಯನ್ನು ಸಹಾ ಕೊಡುತ್ತಿದ್ದಾರೆ. ಬಯಕೆಗಳು ಕಡಿಮೆ ಇದ್ದಾಗ ಕಲ್ಲು ಬಂಡೆಯ ಮೇಲೆ ಮಲಗಿದರೂ ಹಿತವಾದ ನಿದ್ರೆ ಬರುತ್ತದೆ. ಬಯಕೆಗಳು ಹೆಚ್ಚಾದಾಗ ನಯವಾದ ಹಾಸಿಗೆಯು ಕೂಡ ಚುಚ್ಚುತ್ತದೆ ಎಂಬ ಪರಿಸ್ಥಿತಿಯು ಗೌರವ್ವನದು.

ತನ್ನ ಸ್ವಾರ್ಥ ಹೆಣ್ತನಕ್ಕಾಗಿ ಬಣ್ಣ ಬದಲಿಸುವ ವ್ಯಕ್ತಿಯಾದಳು. ದತ್ತುಮಗುವನ್ನು ಸ್ವೀಕರಿಸಿ ಆ ಮಗುವಿಗೂ ಜೀವನ ಕಟ್ಟಿಕೊಡಬಹುದಿತ್ತು. ಚಿಕ್ಕಿಯನ್ನು ತನ್ನ ಈಸೂರಪ್ಪನಿಗೆ ಮದುವೆ ಮೂಡಿಸಬಹುದಿತ್ತು. ಆದರೆ ಬಾಡಿಗೆ ತಾಯ್ತನ ಇಂದು ಹೆಣ್ಣು ಪ್ರಚಲಿತದಲ್ಲಿದೆ. ಕೆಲವರು ಗರ್ಭಧಾರಣೆಯಾಗಿಲಿಲ್ಲವೆಂದು ಮೊರೆಹೋದರೆ ಇನ್ನು ಕೆಲವರು ಸೌಂದರ್ಯಪ್ರಜ್ಞೆ

ಹಾರಿಹೋಗುವುದು ಎಂಬ ಬಾಡಿಗೆ ತಾಯಿಯ ಮೊರೆ ಹೋಗ್ತಾರೆ. ಅದರಲ್ಲೂ ಶ್ರೀಮಂತರು ದುಸ್ಸಾಹಸಕ್ಕೆ ಕೈಹಾಕಿದರೆ ತಲೆಯನ್ನೇ ದಂಡ ತೆರೆಬೇಕಾಗುತ್ತದೆ? ಹಾಗಾದರೆ ಎಲ್ಲಿದೆ ನ್ಯಾಯ? ಮ್ಯಾಲಾಗಿ ಮೇಲಜಾತಿ ಅನ್ನೊದು ಇನ್ನೂ ತಾರತಮ್ಯ ಇದೆ. ದಲಿತರ ಕಂಡ್ರೆ ಶ್ರೀಮಂತರು ಗೌಡ್ರು ಜಮೀನ್ದಾರು ಸಿಟ್ಟು ನೆತ್ತಿಗೇರಿ ಮೈ ಬಿಸಿಯಾಗಿ ಬೆಂಕಿ ತಾಕಿದ ಮದ್ದಿನ ಕುಳ್ಳಿ ಹಾಂಗ ಮದ್ದಿನ ಕುಳ್ಳಿ ಹಾಂಗ ಧಕಾ ಧಕಾ ಅಂತ ಸಿಡೀತಾನೆ ನೀರು ಕುಡಿಯುವುದಕ್ಕೆ ನೆತ್ತರೂ ಹರಿಸುವುದಕ್ಕೆ ನೆತ್ತರಲ್ಲಿ ನೀರು ಇದ್ದರೆ ಹೇಗೆ ರಕ್ತಸಂಚಲನ ಜೀವಿಕುಲಕ್ಕೆ ಹೇಗೆ ಪರಸ್ಪರ ಅವಲಂಬನೆವಾಗಿ ಜೀವನಕ್ಕೆ ಜೀವಿಸಂಕುಲಕ್ಕೆ ಹೇಗೆ ಆಧಾರವಾಗಿಯೋ ಅದೇ ರೀತಿ ಮೇಲುವರ್ಗ ಕೆಳವರ್ಗದವರೂ ಪರಸ್ಪರ ಅವಲಂಬಿತ ಜೀವನ ಸಮರಸದಿಂದ ಕೂಡಿದೇ ಅದನ್ನೇ ಅರಿತು ಸಮರಸವೇ ಜೀವನ ಎಂದು ತಿಳಿದು ಬಾಳಬೇಕು.

'ದುರಂತ' ದರ್ಗಾದ ಮೌಲ್ವಿ ಸಾಹೇಬರು ನಮಗ ಅವರ ಕುಲದಾಗ ತಗೋತಾರಂತ ರೂಪಾಯಿ ಬಟ್ಟಿ ಬರಿ ಇರ್ಲಿಕ ಗುಡಿಸಲ ಕೊಟ್ಟು ರಿಕ್ಷಿನೂ ಇಸ್‌ಕೊಡ್ತಾರಂತ ಏಳು ಹೋಗಾಮಿ ಎಂದಾಗ ಮಲ್ಲೇಶಿ ಮಾದೇವಿ ತಿರಸ್ಕರಿಸಿದಳು. ರಿಕ್ಷಾವನ್ನು ಕಸಿದು ಬಾಡಿಗೆ ಕೊಡ್ಲಲಿದ್ದಕ್ಕೆ ಕೇವಲ ಹಣಕ್ಕಿ, ಬಟ್ಟೆ, ಗುಡಿಸ್ಲುಕೋಸ್ಕಾರ ಬೇರೆಜಾತಿಗೆ ಮತಾಂತರ ಆಗುವುದು ಮಾದೇವಿಗೆ ಇಷ್ಟ ಇರಲಿಲ್ಲ ತನ್ನ ತನವನ್ನು ಬೇರೊಬ್ಬರಿಗೆ ಮಾರಲು ಇಷ್ಟವಿರಲಿಲ್ಲ ಐಷರಾಮಿ ಜೀವನಕೊಸ್ಕರ ದಲಿತ ಮಹಿಳೆಯರು ಆಮಿಷಕೆರ ಒಳಗಾಗುತ್ತಿದ್ದರು. ಆದರೆ ಮಾದೇವಿ ಹಾಗೆ ಮಾಡಲಿಲ್ಲ 'ಅಲ್ಪನಿಗೆ ಐಶ್ವರ್ಯಸಿಕ್ರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದರಂತೆ' ಬಡತನ ಇದ್ರೂ ಕಷ್ಟಸುಖ ಹಂಚಿಕೊಳ್ಳುತ್ತಿದ್ದರು. ಆದರೆ ಕೇವಲ ಅಲ್ಪ ಐಶ್ವರ್ಯಕ್ಕೋಸ್ಕರ ತಮ್ಮ ಜೀವನವನ್ನು ಸುಗಮವಾಗಿ ನಡೆಸುತ್ತಿದ್ದರು. ಆದರೆ ಗಂಡನು ಜೈಲಿನಲ್ಲಿ ಸೆರೆಯಾದಾಗ ಅತ್ಯಾಚಾರಕ್ಕೆ ಒಳಗಾದ ಹೆಣ್ಣು ಗಂಡನನ್ನು ತಿರಸ್ಕರಿಸಿದಳು. ಮಲ್ಲೇಶಿ ಸಲೀಮ್‌ನಾದನು. ಹೆಂಡತಿ ಮಕ್ಕಳು ಇದ್ದು ಮಾದೇವಿ ಒಂದು ಸಲ ಸಿಕ್ಕಿದಾಗ ಬ್ರಾಹ್ಮಣರ ಮನೆಗಳಲ್ಲಿ ಕೆಲಸಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಮುಸ್ಲಿಂ ಧರ್ಮಕ್ಕೆ ಮತಾಂತರ ಆಗಿದ್ದೂ ಸರಿಯಲ್ಲ, ಮಾದೇವಿಗೆ ಅನ್ಯಾಯ ಮಾಡಿಬಿಟ್ಟ. ಮಾದೇವಿ ಊರಿನಿಂದ ಬಹಿಷ್ಕಾರ ಆಗ್ತಾರೆ ಅಂದು ಮತಾಂತರ ಆಗೋದಕ್ಕೂ ಹೆದರಿರಬಹುದು.

ಅವಳ ಭಾವನೆಗಳನ್ನು ಅರಿಯದ ಗಂಡನಿಂದಲೂ ಅವಳು ಸುಖಿಸಲಿಲ್ಲ ಜೀವನಕ್ಕೆ ಆಧಾರವಾಗಲಿಲ್ಲ ಕೊನೆಗೆ ಅವಳ ಅಂತ್ಯಸಂಸ್ಕಾರದಲ್ಲೂ ಬಂದು ಮುಷ್ಟಿ ಮಣ್ಣನ್ನು ಹಾಕುವ ಹಕ್ಕನ್ನು ಕಳೆದುಕೊಂಡಳು. ಮಾದೇವಿಯಂತ ಮಹಿಳೆಯರು ಇಂದಿನ ಸಮಾಜದಲ್ಲಿ

ಇದ್ದಾರೆ. ಕೆಲವರು ಹುಟ್ಟಿದ ಜಾತಿಯನ್ನು ಬಿಡುವುದಿಲ್ಲ. ಬೇರೆ ಜಾತಿಧರ್ಮವನ್ನು ಹೋಗಲಿಕ್ಕೆ ಇಷ್ಟಪಡುವುದಿಲ್ಲ. ಕನಕದಾಸರ ಕೀರ್ತನೆ ನೆನಪು ಬರುತ್ತದೆ. ಕುಲ ಕುಲವೆಂದು ಹೊಡೆದಾಡದಿರಿ ಕುಲವನ್ನೇ ನೆಲೆಯೇನೆದಾದರೂ ಬಲ್ಲಿರಾ? ಕುಲ ಕುಲವೆನ್ನತಿಹರು ಕುಲವುದಾದರೂ ಸತ್ಯ ಸುಖವುಳ್ಳ ಜನರಿಗೆ ಆತ್ಮ ಯಾವ ಕುಲ ಜೀವ ಯಾವ ಕುಲ ತತ್ವೇಂದ್ರಿಯ ಕುಲ ಪೇಳಿರಯ್ಯಾ ಹಿಗೆ ಕುಲ ಗೋತ್ರಗಳ ಬಗ್ಗೆ ಕನಕದಾಸರು ಹೊಂದಿದ್ದ ನಿಲುವು ವೇದವಾಗುತ್ತದೆ ಎಂದು ತಿಳಿಸಿದರು. ಇರುವುದು ಒಂದೇ ಕುಲ ಅದೇ ಮಾನವ ಕುಲ ಆದರೆ ಜಾತಿ, ಧರ್ಮ, ಲಿಂಗ, ಸ್ಥಾನ, ವರ್ಗ ಎನ್ನುವ ಮಾತಿನಲ್ಲಿ ಇಂದಿಗೂ ಕೋಮುಗಲಭೆ ಆಗ್ತಿದ್ದಾವೆ. ಮಾದೇವಿಯ ವಿಷಯದಲ್ಲಿ ಒಬ್ಬ ಗಂಡು ರಕ್ಷಕನಾದರೆ ಇನ್ನೊಬ್ಬ ಗಂಡು ಭಕ್ಷಕನಾಗಿರುವವನು. 'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ ಎನ್ನುವ ಮಾತು ಸುಳ್ಳಾಯಿತು ಕೇವಲ ತನ್ನ ಜಾತಿ ಮತ್ತು ತನ್ನ ತನಕೋಸ್ಕರ ಗಂಡನನ್ನು ತ್ಯಜಿಸಿದಳು. ಇಲ್ಲಿ ದಲಿತ ಹೆಣ್ಣು ಮಗಳಾದ ಮಾದೇವಿ ಯಾರ ಅಂಗಿಲ್ಲದಿದ್ದರೂ ಸ್ವತಂತ್ರ ಜೀವನವನ್ನು ನೆಡೆಸುವುದಕ್ಕೆ ಸಿದ್ಧಳಾದಳು. ಯಾವುದೇ ಆಮಿಷಕ್ಕೂ ಅವಳೂ ಒಳಗಾಗಲಿಲ್ಲ ಬಡತನವು ಜೀವನದ ಪಾಠ ಕಲಿಸುತ್ತದೆ ಎಂದು ತೋರಿಸಿದಳು. ಸ್ವತಂತ್ರಳಾಗಿ ಬದುಕಿ ಸಾವನ್ನಪ್ಪಿದಳು.

'ವೇದನೆಯ ವರ್ತುಲ' ಕಥೆಯಲ್ಲಿ "ಕನಸು ಕಲ್ಪನೆಗಳಲ್ಲಿ ಸುಳಿಯುವ ಹಸಿ ಸತ್ಯ ಅದು ಸತ್ಯ ಸುಂದರವೇ ಆಗಿರಬೇಕೆಂಬ ನಿಯಮವೇನಾದ್ರೂ ಇದೆಯೇ? ಸತ್ಯ ಕೆಟ್ಟದಾಗಿದ್ದರೆ ಅದನ್ನು ಮರೆತುಬಿಡಬೇಕಲ್ಲವೇ? ಹೌದು ಆದರೆ ಅದನ್ನು ಹೇಗೆ ಮರೆಯಲು ಸಾಧ್ಯ......?"[೨೩] ಎಂದು ರಶ್ಮಿ ಹಿಂದಿನ ನೆನಪುಗಳ ಪುಟವನ್ನು ತಿರುವಿ ಹಾಕುತ್ತಿದ್ದಳು. ಆದಿಕಾಲದಿಂದ ಆಧುನಿಕ ಕಾಲದಲ್ಲಿ ವೇದನೆ ಇದೆ. ಅದೇ ರೀತಿ ಹುಲಿಗ್ಯಾ, ಗೋಡನಗೋರಿ ಕಥೆಗಳಲ್ಲಿ ಕೂಡ ಇದೇ ತರದ ವರ್ತುಲದ ವೇದನೆ ಕಂಡುಬರುತ್ತದೆ. ಹುಲಿಗ್ಯಾ ಹೆಂಡತಿಯು ಗೌಡನ ಜೊತೆ ಸೇರುವಾಗ ಒಂದು ಕಡೆ ವೇದನೆ ಮತ್ತೊಂದು ಕಡೆ ಬಡತನ ವೇದನೆ ಮತ್ತು ಬಡತನಕ್ಕೆ ಹುಲಿಗ್ಯಾನ ಸಂಸಾರ ಸೂತ್ರವಿಲ್ಲದ ಗಾಳಿಪಟದಂತೆ ಹಾರಾಡುವಂತಾಯಿತು. 'ಗೋಡಿನ ಗೋರಿ' ಕಥೆಯಲ್ಲೂ ಕೂಡ ನೀಲಗಂಗಾ ಸಂಗಪ್ಪಗೌಡನನ್ನು ಕಳೆದುಕೊಂಡು ಸಮಾಧಿಯ ಹತ್ತಿರ ಕುಳಿತು ತನ್ನ ಜೀವನದ ಪ್ರತಿ ಘಟನೆಗಳನ್ನು ತಿರುವಿ ಹಾಕಿದಳು.

ರವೀಂದ್ರ ಶರ್ಮಾ ಡೈವೋರ್ಸ್ ಕೇಳಿದಾಗ ರಶ್ಮಿ ಜೀವನದ ಪ್ರತಿಪುಟಗಳನ್ನು ತಿರುವಿಹಾಕುತ್ತಾ ತನ್ನ ಮಗನಾದ ರಾಹುಲನನ್ನು ನೆನೆದು ಸಹಿ ಹಾಕಿದಳು. ಒಬ್ಬ ಗಂಡಸು ತನ್ನ ತೆವಲನ್ನು ತೀರಿಸಿಕೊಳ್ಳದಕ್ಕೆ ಮದುವೆಯಾಗಿದ್ರು ಬೇರೆ ಹೆಣ್ಣಿನ ಸಹ

ಮಾಡುವನು ಆದರೆ ತನಗೆ ಅರಿವೆಯಿಲ್ಲದೆ ಅನ್ಯವ್ಯಕ್ತಿಗಳಿಂದ ಅತ್ಯಾಚಾರಕ್ಕೆ ಒಳಗಾದ ರಶ್ಮಿಯನ್ನು ಏಕೆ ರವೀಂದ್ರ ದೂರ ಮಾಡಿದರು? ತಪ್ಪು ಹೆಣ್ಣು ಮಾಡಿದವರೇನು? ಗಂಡು ಮಾಡಿದರೇನು ತಪ್ಪು ತಪ್ಪೇ. ಕೇವಲ ಸುಖಕ್ಕೋಸ್ಕರ ಅವಳನ್ನು ಮದುವೆಯಾದ ಮೇಲೆ ಅವಳಿಗೆ ಅಪಚಾರ ನಡೆದಾಗ ಬಿಟ್ಟು ಹೋಗುವುದು ಸರಿಯೇ? ಗಂಡ ಹೆಂಡತಿಯ ಸಂಬಂಧ ಉಳಿಯುವುದೇ? ಮದುವೆಯ ಸಮಯದಲ್ಲಿ ಅಗ್ನಿಸಾಕ್ಷಿಯಾಗಿ ಧರ್ಮೇಚ, ಅರ್ಥೇಚ, ಕಾಮೇಚ ಎಂದು ಮಂತ್ರ ಪಠಿಸುವುದು ಅನುಸರಿಸುವುದು ಸುಳ್ಳೆ? ರವೀಂದ್ರನಿಂದ ಬಸಿರಾದ ರಶ್ಮಿಯ ಕಥೆಯ ಏನು? ರಶ್ಮಿಯನ್ನು ತೊರೆದು ಬೇರೆ ಹೆಣ್ಣನ್ನು ಮದುವೆಯಾದರೆ ರಶ್ಮಿಯ ಜೀವನ.....? ಅವಳ ಮಗು.....? ಸಮಾಜದಲ್ಲಿ ಅವಳ ಸ್ಥಾನ? ಇಂತಹ ಸಮಾಜದಲ್ಲಿ ಕಗ್ಗಂಟಿಗೆ ಸಿಲುಕಿದವರು ರಶ್ಮಿ ಅಂತ ಹೆಣ್ಣು ಎಂದರೆ ತಪ್ಪಾಗಲಾರದು.

ಈ ಕಥೆಗಳಲ್ಲಿ ಚಿತ್ರಿತವಾಗಿರುವ ಸ್ತ್ರೀಪುರುಷರ ವೈವಿಧ್ಯ ಬೆರಗು ಹುಟ್ಟಿಸುವಂತಹದು. ಕಳ್ಳತನದ ದಂಧೆಯನ್ನು ಆರಂಭಿಸಿದರೂ ತಕ್ಷಣವೇ ಅದು ತಪ್ಪೆಂದು ಅರಿವಾಗಿ ಮೈಮುರಿದು ದುಡಿಮೆಗೆ ಒಡ್ಡಿಕೊಳ್ಳುವ 'ಕಜರಿ' ಗೆಳತಿಯರ ಹಳ್ಳಿಯ ಹಿರಿಯರ ಒತ್ತಾಯಕ್ಕೆ ಮಣಿದು ಚುನಾವಣೆಗೆ ನಿಂತು ಎದುರಾಳಿಯಾದ ಮಾಜಿ ಗಂಡನಿಂದ ಅತ್ಯಾಚಾರಕ್ಕೊಳಗಾಗಿ ಕೊಲೆಯಾಗುವ 'ಕಾಶಿ', ತಾನು ಮೈನೆರೆಯದಿದ್ದರೂ ಸೋಬಾನದ ಹಾಡು ಹಾಡುತ್ತಾ ಹೊಟ್ಟೆ ಹೊರೆಯುವ ಹಾಡಿನ ಹನುಮವ್ವ, ತನ್ನನ್ನು ಇಟ್ಟುಕೊಂಡ ಸಾಹುಕಾರ ತನಗೆ ದ್ರೋಹ ಬಗೆಯುತ್ತಿದ್ದಾನೆಂದು ಅರಿವಾದೊಡನೆ ಅವನ ವಿರುದ್ಧ ಬಂಡೆದ್ದು ಅವನನ್ನು ಪೋಲಿಸರ ಕೈಗೆ ಒಪ್ಪಿಸುವ 'ಲವಂಗಿ', ಕಳ್ಳತನವೇ ವೃತ್ತಿಯಾಗಿದ್ದರೂ ತನ್ನನ ಹೃದಯವೈಶಾಲ್ಯದಿಂದ ಸಾಯುತ್ತಿದ್ದ ಮಗುವಿನ ಪ್ರಾಣ ಉಳಿಸುವ 'ಬೇಲಿ', ತನ್ನನ್ನು ಇಟ್ಟುಕೊಂಡ ಜಮೀನುದಾರನ ಹಂಗನ್ನು ತೊರೆದು ಮಗಳಿಗೆ ವಿದ್ಯಾಭ್ಯಾಸ ಕೊಡಿಸಲು ಪಟ್ಟಣಕ್ಕೆ ಹೋಗುವ 'ಭವಾನಿ', ರಿಕ್ಷಾವಾಲಿ ಚಿತ್ತಿ ಇವೆಲ್ಲಾ ಮನಸ್ಸಿನಲ್ಲಿ ಗಟ್ಟಿಯಾಗಿ ನಿಲ್ಲುವ ಸ್ತ್ರೀಪಾತ್ರಗಳಾದರೆ, ಹೃದಯವಂತ ಪುರುಷರ ಹಲವಾರು ಪಾತ್ರಗಳನ್ನು ಗೀತಾ ಸೃಷ್ಟಿಸಿದ್ದಾರೆ.

ಶೋಷಣೆಯ ಜೊತೆಜೊತೆಗೆ ಶೋಷಿತ ಸಮುದಾಯದ ಜಾಗೃತಿ ಎಚ್ಚರದ ಎಳೆಗಳನ್ನು ದಾಖಲಿಸುವ ಕೆಲಸವನ್ನು ಗೀತಾರವರು ಮಾಡಿದ್ದಾರೆ. 'ನೀರು ಮತ್ತು ನೆತ್ತರು' ಕಥೆಯಲ್ಲಿ ಮಾದಿಗರಿಗೆ ನೀರು ದೊರಕಿಸಲು ಮಠದ ಆವರಣದಲ್ಲಿರುವ ಬಾವಿಗೆ ಮಾದಿಗ ಯುವಕರು ಒಳಹೊಕ್ಕು ಜಯಶೀಲರಾದಂತೆ ಕಂಡರೂ ನೇತೃತ್ವ ವಹಿಸಿದ್ದ ಕಾಶಿ ಪ್ರಾಣ ಕೊಡಬೇಕಾಗುತ್ತವೆ. ತನ್ನನ್ನು ಜೈಲಿಗೆ ಕಳುಹಿಸಿ ತನ್ನ ಹೆಂಡತಿಯ

ಮಾನ ಕಳೆದು ಅವಳನ್ನು ಭೋಗಕ್ಕೆ ಮೀಸಲಿಟ್ಟುಕೊಂಡ ಒಡೆಯನ ಪ್ರಾಣ ತೆಗೆಯಲು ಬಂಡೇಳುವ ಹುಲಿಗ್ಯಾ ಎಚ್ಚೆತ್ತ ದಲಿತಪ್ರಜ್ಞೆಯ ಸಂಕೇತವಾಗುತ್ತಾನೆ. ಹೀಗೆ ಗೀತಾರವರು ಜೀತದಾಳುಗಳನ್ನು ತಮ್ಮ ದಾಳಗಳಾಗಿ ಉಪಯೋಗಿಸಿಕೊಳ್ಳುವ ಗೌಡರು ಅವರ ಕೈಯಲ್ಲಿ ಕೊಲೆ ಮಾಡಿಸಿ, ಆಳುಗಳನ್ನು ಜೈಲಿಗೆ ಕಳುಹಿಸಿ ಅವರಿಲ್ಲದಾಗ ಅವರ ಹೆಂಡಿರನ್ನು ಆಕ್ರಮಿಸಿಕೊಳ್ಳುವ ಹುನ್ನಾರವನ್ನು ಹಲವಾರು ಕಥೆಗಳಲ್ಲಿ ಚಿತ್ರಿಸಿದ್ದಾರೆ.

ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವಷ್ಟು ಅಲ್ಲ ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಹೆಣ್ಣುಮಕ್ಕಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಇದು ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಗೆಡುವುತ್ತಿದೆ. ಅವಿರತವಾಗಿ ನಡೆಯುತ್ತಿರುವ ಹೆಣ್ಣಿನ ಮೇಲಿನ ದೌರ್ಜನ್ಯ ಕೂಡಾ ಹೆಣ್ಣು ಸಂತತಿ ಕುಂಠಿತವಾಗಲು ಕಾರಣವಾಗುತ್ತಿರುವುದು ಆಧುನಿಕ ಸಮಾಜ ಕೊಟ್ಟಿರುವ ಕೊಡುಗೆ, ಹೆಚ್ಚುತ್ತಿರುವ ವರದಕ್ಷಿಣೆ ಸಾವು, ಹೆಣ್ಣುಮಕ್ಕಳ ಅಪಹರಣ, ಅತ್ಯಾಚಾರ, ಕೊಲೆಯಂತಹ ಪ್ರಕರಣಗಳಿಂದಾಗಿ ತಾಯಂದಿರು ಬೆಚ್ಚಿಬಿದ್ದಿದ್ದಾರೆ. ಹೆಣ್ಣುಮಕ್ಕಳನ್ನು ಕಾಪಾಡುವುದು ಕಷ್ಟ ಎಂಬ ಭಾವನೆ ಎಲ್ಲರಲ್ಲಿ ಬಲವಾಗುತ್ತಿದೆ. ಇದು ನಿಜಕ್ಕೂ ಆತಂಕದ ವಿಷಯ ಮರ್ಯಾದಾ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆ ಧರ್ಮ, ಕೋಮು ಜಾತಿ ವೈಷಮ್ಯದ ದಾಳವಾಗಿ ಬಳಕೆಯಾಗುತ್ತಿದ್ದಾಳೆ ಹಾಗಾಗಿ ಮಹಿಳೆಯರೆಲ್ಲ ಸಂಘಟಿತರಾಗುವ ತುರ್ತು ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಮಹಿಳೆಯರಿಗೆ ಸಮಾನ ಶಿಕ್ಷಣ, ಸಮಾನ ವೇತನ, ರಾಜಕೀಯದ ಸಮಪಾಲು ಕೇಳಲು, ಹೆಣ್ಣುಭ್ರೂಣ ಹತ್ಯೆ ವಿರೋಧಿಸಲು, ಹೆಣ್ಣುಮಕ್ಕಳನ್ನು ಕಾಪಾಡಲು ಮಹಿಳೆಯರ ಮೇಲಿನ ಅತ್ಯಾಚಾರ ಹಿಂಸೆ, ದೌರ್ಜನ್ಯಗಳು ಅಳಿಯದೆ ಸ್ವಸ್ಥ ಸಮಾಜ ಸಾಧ್ಯವಿಲ್ಲವೆಂಬ ಅರಿವು ಮೂಡಿಸಲು ಸಹಜೀವಿಯಾಗಿ ಸಮಾನತೆ, ಸಹಬಾಳ್ವೆಯ ಬದುಕನ್ನು ಕಟ್ಟಲು ಈ ನೆಲದ ಮಹಿಳೆಯರು ಸಂಘಟಿತರಾಗಿ ಹೋರಾಡಬೇಕಿದೆ.

೬.೪ ಕಥೆಗಳ ಭಾಷೆ

'ನನ್ನ ಕಥೆ ನನ್ನ ತರಹ. ನನ್ನ ಚರ್ಮ ಸುಲಿದು ನಿಮ್ಮ ಚರ್ಮದೊಳಕ್ಕೆ ತುರುಕೋದಿಕ್ಕೆ ಆಗುವುದಿಲ್ಲ. ನಾನು ಮತ್ತು ನನ್ನ ಚರ್ಮ ಒಂದೇ. ನಾನು ಬರೆಯುವ ರೀತಿಯಲ್ಲಿ ಕಥೆ ಇರಬೇಕು. ವಸ್ತು ಮತ್ತು ಶೈಲಿಯನ್ನು ಬೇರ್ಪಡಿಸುವುದಕ್ಕೆ ಆಗುವುದಿಲ್ಲ' ಎಂಬ ಪಿ.ಲಂಕೇಶರವರ ಮಾತಿನೊಂದಿಗೆ ಕನ್ನಡ ಸಾಹಿತ್ಯದ ಬರವಣಿಗೆಯನ್ನು ತೌಲನಿಕವಾಗಿ ಅಧ್ಯಯನಿಸಿದಾಗ ಇವರ ಮಾತು ಅಕ್ಷರಶಃ ಸತ್ಯವೆನಿಸುತ್ತದೆ. ಬರವಣಿಗೆಯಲ್ಲಿ ಭಾಷೆ

ಮತ್ತು ವಸ್ತು ಅತ್ಯಂತ ಮಹತ್ವವಾದದ್ದು. ಒಬ್ಬ ಬರಹಗಾರ ಒಂದು ಕಥೆಯನ್ನು ಬರೆಯುವಾಗ ತಾನು ಆಯ್ದುಕೊಳ್ಳುವ ವಸ್ತುವಿಗೆ ತಕ್ಕ ಭಾಷೆಯ ಜೊತೆಗೆ ಅನುಸಂದಾನ ಹೊಂದಿರಬೇಕು. ಹಾಗಾದರೆ ಭಾಷೆ ಎನ್ನುವುದಕ್ಕೆ ಸಾಹಿತ್ಯದ ಯಾವುದೇ ಪ್ರಕಾರದಲ್ಲಿರುವ ಪಾತ್ರಗಳನ್ನು, ಘಟನೆಗಳನ್ನು, ಸನ್ನಿವೇಶಗಳನ್ನು ಓದುಗರ ಅರಿವಿಗೆ ತಂದುಕೊಡುವುದೇ ಭಾಷೆ ಎಂಬರ್ಥವನ್ನು ನೀಡುವುದಾಗಿದೆ.

ಸಾಹಿತ್ಯದ ಕೃತಿಗಳನ್ನು ರಚಿಸುವಾಗ ಭಾಷೆಯ ಮೇಲೆ ಹಿಡಿತವಿರಬೇಕು ಹಾಗೂ ಅದರಲ್ಲಿ ಅನುಭವವಿರಬೇಕು. ದಲಿತ-ಬಂಡಾಯದ ಸಂದರ್ಭದಲ್ಲಿ ಬರೆಯುತ್ತಿದಂತಹ ಹಲವಾರು ಬರಹಗಾರರಲ್ಲಿ ಭಾಷೆಯ ಪ್ರಬುದ್ಧತೆಯನ್ನು ಕಾಣಬಹುದು. ಜೊತೆಗೆ ತಮಗನಿಸಿದ ಭಾಷೆಯಲ್ಲಿಯೇ ಕೃತಿರಚನೆ ಮಾಡಿದ್ದಾರೆ. ಸಿದ್ಧಲಿಂಗಯ್ಯನವರು ಒಂದು ಕಡೆ ದೇವನೂರ ಮಹಾದೇವರ ಬರವಣಿಗೆಯ ಭಾಷೆಯನ್ನು ಕುರಿತು ಹೆಗ್ಗಳಿಕೆಯ ಮಾತುಗಳನ್ನಾಡಿದ್ದಾರೆ. "ದೇವ್ನೂರ್ ಮಹಾದೇವ ಅವರು 'ಕುಸುಮಬಾಲೆ'ಯನ್ನು ಆ ಉಪಭಾಷೆಯಲ್ಲಿ ಬರೆಯದೇ ಇದ್ದಿದ್ರೆ ಪರಿಣಾಮ ಏನಾಗ್ತಿತ್ತೊ ಗೊತ್ತಿಲ್ಲ. ಆದ್ರೆ ಅವರು ಹಾಗೆ ಬರ್ದಿದ್ದರಿಂದ ಬಹಳ ಪರಿಣಾಮವಾಯ್ತು, ಭಾಷೆಯನ್ನು ಆಯ್ಕೆ ಮಾಡಿಕೊಳ್ಳೊದು ಬಹಳ ಮುಖ್ಯ. ಮೊದಲೇ ಇದರ ಬಗ್ಗೆ ತೀರ್ಮಾನ ಮಾಡಬೇಕು ಅಂತ ಮೇಲುವರ್ಗದವರ ಭಾಷೆಯನ್ನು ನಾವು ಒಪ್ಕೊಂಡ ಕೂಡ್ಲೆ ಸೃಜನಶೀಲ ಬರಹಗಾರರ ಸಮಸ್ಯೆ ಏನಾಗ್ತದೆ ಅಂದ್ರೆ ಭಾಷೆ ಜೊತೆಗೆ ಆ ಮೌಲ್ಯಗಳು ಬಂದು ಬಿಡ್ತವೆ. ಆ ನಂಬಿಕೆಗಳು ಬರ್ತವೆ ಭಾಷೆಯ ಜೊತೆಗೆ ಇಡೀ ಸಂಸ್ಕೃತಿಯೇ ಬಂದುಬಿಡ್ತದೆ. ಆದ್ರಿಂದ ಮೇಲುವರ್ಗದವರ ಭಾಷೆಯಲ್ಲಿ ಕೆಳವರ್ಗದ ಮೌಲ್ಯಗಳನ್ನು, ಸಂಸ್ಕೃತಿಯನ್ನು ಹೇಳಲು ಸಾಧ್ಯವಾಗುವುದಿಲ್ಲ."[೨೪] ಎನ್.ಗಾಯತ್ರಿ ಮತ್ತು ಸರಸ್ವತಿ ಚಿಮ್ಮಲಗಿಯವರಿಬ್ಬರೂ ಗೀತಾ ನಾಗಭೂಷಣರವರ ಬರೆಹದ ಭಾಷೆಯನ್ನು ಕುರಿತು ಒಂದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 'ಗೀತಾರವರು ಆರಂಭದಲ್ಲಿ ಜನಪ್ರಿಯ ಮಾದರಿಯ ಶಿಷ್ಟಭಾಷೆಯಲ್ಲಿಯೇ ಕೃತಿಗಳನ್ನು ರಚಿಸುತ್ತಾ ಇದ್ದರು. ಒಮ್ಮೆ ಚಂದ್ರಶೇಖರ ಕಂಬಾರರು ಬರೆದ 'ಸಿಂಗಾರವ್ವ ಮತ್ತು ಅರಮನೆ' ಎಂಬ ಕೃತಿಯನ್ನು ಓದಿದ ಆನಂತರ ಬಹುವಾಗಿ ಮೆಚ್ಚಿಕೊಂಡರು. ಈ ಕೃತಿಯ ಭಾಷೆಯನ್ನು ಓದಿದ ಮೇಲೆ ಅವರಿಗೆ ಧೈರ್ಯ ಬಂದಿತು. ಅಲ್ಲಿಂದ ಅವರು ಹಿಂದೆ ನೋಡಲಿಲ್ಲ ಅನಂತರ ಅವರು ತಮ್ಮದೇ ಆಡುಭಾಷೆಯಲ್ಲಿ/ಹಳ್ಳಿಭಾಷೆಯಲ್ಲಿ ಕೃತಿರಚನೆಗೆ ತೊಡಗಿದರು ಎಂದು ತಮ್ಮ ಕೃತಿಗಳಲ್ಲಿ ಗುರುತಿಸಿದ್ದಾರೆ.

ಗೀತಾ ನಾಗಭೂಷಣರವರ ಕಥೆಗಳಲ್ಲಿ ಶೋಷಿತರ ನೋವಿಗೆ ಸ್ಪಂದಿಸುವ ನೊಂದವರಿಗೆ ನೆಮ್ಮದಿಯ ನುಡಿ ಸಾಂತ್ವಾನ ಹೇಳುವ ಅಬಲೆಯರಿಗೆ ಸಬಲತೆಯ

ಕಿಚ್ಚು ತುಂಬುವ, ಅಸಹಾಯಕರಿಗೆ ಅಭಯಹಸ್ತ ನೀಡುವ ಮತ್ತು ಬಲಾತ್ಕಾರ ದೌರ್ಜನ್ಯಗಳಿಗೆ ಬಲಿಯಾಗಿ, ಬಿಸಿಯುಸಿರಿಂದ ಬಿಕ್ಕುವವರ ಬೆನ್ನಿಗೆ ಗುದ್ದಿ ಬಡಿದೆಬ್ಬಿಸಿ, ಬಂಡೆದ್ದು ಬಲ ಪ್ರದರ್ಶಿಸುವ ಹತ್ತು ಹಲವಾರು ಪಾತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಣವಿದೆ. ಗೀತಾ ನಾಗಭೂಷಣರವರ 'ಬಂಜೆಂಬ ಶಬುದ ಹೊರಲಾರೆ' ಕತೆಯ ಕೆಲವು ಮಾತುಗಳನ್ನು ಇಲ್ಲಿ ಉದಾಹರಿಸಲಾಗಿದೆ. "ಗೌಡನ ಮಗಳು ಪಾರ್ವತಿ ಶರಣಪ್ಪನನ್ನು ಕುರಿತು ಶ್ಯಾಣಪ್ಪ ಮುತ್ಯಾ ಒಂದು ಮರ ಜ್ವಾಳಾ ನಿನ್ನ ಹೊಟ್ಟಿಗಿ, ಇಗಾ ನನ್ನ ಕಡಿಂದ ಇನ್ನೊಂದು ಮರ ಜ್ವಾಳಾ ನಿನ್ನ ಬೀಡಿ ಗಟ್ಟಕ್ಕ ಎಂದು ಹೇಳುತ್ತಾಳೆ. ಈ ಎಲ್ಲ ಮಾತುಗಳು ನಮ್ಮ ಗ್ರಾಮೀಣ ಪ್ರದೇಶದ ಜನರು ಬಳಸುವ ಸಹಜನುಡಿಗಳೇ. ಕಟಗೊಂಡಂವಾ ನಡುಮಧ್ಯಾಣದಾಗೇ ಕೈ ಬಿಟ್ಟು ಕಣ್ಮುಚ್ಚಿದ. ಇದ್ದೊಂದು ಮಗನ ಮ್ಯಾಲ ತಪಾಗಳಿದಿನೇ ನಾನು ಶಿವಮ್ಮಕ್ಕು......ಒಂದಕ್ಕ ಹತ್ತಾಗ್ತಾವ........ನಮ್ಮ ಮನಿತನಾ ಹೊಳಿ ದಂಡ್ಯಾಗಿನ ಕರಕಿ ಬೇರಿನಾಂಗ ಹಬ್ಬತಾದ ಅಂತ ತಿಳ್ಕೊಂಡ್ರ ಹಿಂಗಾಯ್ತು ನೋಡು. ಮಗನ ಮದ್ವಿ ಆಗಿ ನಾಕೊರ್ಸಾದ್ರು ಮನ್ಯಾಗ ಒಂದು ಕೂಸಿನ ಅಳು ಕೇಳಲಿಲ್ಲ. ನನಗ ಹಿಂತಾ ಗೊಡ್ಡು ಸೊಸಿ ಗಂಟುಬಿತ್ತು."[೨೫] ಗೀತಾರವರ ಈ ಮಾತುಗಳಲ್ಲಿ ಉಪಮೆಗಳಿವೆ. ಗಂಡ ಅನ್ನುವುದಕ್ಕೆ ಬದಲಾಗಿ ಕಟಗೊಂಡವ, ಅಕಾಲಿಕೆ ಅನ್ನುವುದಕ್ಕೆ ನಡು ಮಧ್ಯಾಣ, ಮನೆತುಂಬ ಮಕ್ಕಳು ಅನುವುದಕ್ಕೆ ಕರಕಿ ಬೇರಿನಂಗ ಹಬ್ಬತಾದ. ಬಂಜೆ ಅನ್ನುವಲ್ಲಿ ಗೊಡ್ಡು ಸೊಸೆ ಹೀಗೆ ಈ ಎಲ್ಲ ಸಾಲುಗಳು ನಮ್ಮ ಹಳ್ಳಿಯ ಪಾತ್ರಗಳೇ ಜೀವತಳೆದು ಓದುಗನೆದುರು ತೆರೆದುಕೊಂಡ ಅನುಭವವಾಗುತ್ತದೆ. ಕತೆಯ ವಸ್ತು, ಪರಿಸರ, ಭೌಗೋಳಿಕ, ಸಾಮಾಜಿಕ ಚಿತ್ರಣ, ಊಟ, ಉಡುಗೆ, ತೊಡುಗೆ ಎಲ್ಲವೂ ನಿಖರವಾದ ಪ್ರದೇಶವನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಪಾತ್ರಗಳ ಮಾತುಗಳು ಮಹತ್ವ ಪಡೆದುಕೊಳ್ಳುವುದರಿಂದ ಪ್ರಾದೇಶಿಕ ಭಾಷೆಯು ಗೀತಾ ನಾಗಭೂಷಣ ಅವರ ಅನಾವರಣಗೊಂಡಿವೆ. ಗೀತಾನಾಗಭೂಷಣ ಅವರ ಕಥೆಗಳಲ್ಲಿ ಭಾಷಾ ಮಡಿವಂತಿಕೆಯಿಲ್ಲ.

ಪ್ರಾದೇಶಿಕ ಭಾಷೆಗಳೊಂದಿಗೆ ಆ ಭಾಗದ ನೆರೆಯ ಭಾಷೆಗಳ ಅನೇಕ ಪದಗಳು ನುಡಿಗಟ್ಟುಗಳು ನಮ್ಮವೇ ಅನ್ನುವಷ್ಟರ ಮಟ್ಟಿಗೆ ನಮ್ಮೆಲ್ಲರ ದಿನನಿತ್ಯದ ಕಲಾಪಗಳಲ್ಲಿ ಮಿಳಿತವಾಗುತ್ತವೆ. ಉದಾಹರಣೆಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಕನ್ನಡದಲ್ಲಿ ಹಾಸುಹೊಕ್ಕಾಗಿರುವ ಉರ್ದು ಮತ್ತು ಮರಾಠಿ ಪದಗಳು, ಯಾರೋ ಟೈಂ ಎಷ್ಟು? ಅಂತ ಕೇಳಿದರೆ ಥಟ್ಟನೆ ಬರುವ ಉತ್ತರ 'ಸಾಡೇಗ್ಯಾರ' ಅಥವಾ 'ಸಾಡೇಅಖಾರಾ' ಎಂದು ಜೊತೆಗೆ ಹನ್ನೊಂದುವರೆ ಎಂದು ಹೇಳುವವರೂ ಇಲ್ಲದಿಲ್ಲ. "ತುಮ್ ಕಾಲಿ ಹೈ ತೋ ಕ್ಯಾ ಹುವಾ ದಿಲ್‌ವಾಲೀ ಹೋ..... ಹಮಕೋ .... ಹಮಕೋ.....ಹಮಕೋ....

ಛೀ. ಏಕೆ ಚಾನಸ್ ದೋ.... ಹೋರಗಿ ಫಸಲಿಗ..... ಫಸಲೀ....”[೨೬] ಅನ್ನುವ ಗೀತಾನಾಗಭೂಷಣ ಅವರ ಈ ಹಿಂದೀ-ಉರ್ದು, ಬೀದರ ಭಾಷೆ ಮಿಶ್ರಿತ ಸಂಭಾಷಣೆ ಗೀತಾರವರು ಬರೆದ 'ಮೂಡಿ ಬರ್‍ತಾನ ಚಂದ್ರಾಮ ನೋಡ' ಕತೆಯಲ್ಲಿ ಕಂಡು ಬರುತ್ತವೆ. ಇದೇ ಕತೆಯಲ್ಲಿ ಕಂಡುಬರುವ ಕೆಲವು ಉರ್ದು ಪದಗಳಿಂದ ಇವರ ಭಾಷಾ ವೈವಿಧ್ಯತೆಯನ್ನರಿಯಬಹುದು. ಲಾವಾರಸ್, ಬಿಲ್‌ಕುಲ್, ಜಬರದಸ್ತಿ, ಭರೋಸಾ, ದವಾಖಾನಿ, ಲಫಂಗ್ ಮತ್ತು ಇಜ್ಜತ್ ಇತ್ಯಾದಿ ಉರ್ದು ಪದಗಳಿಗೆ ಸಮಾನವಾಗಿ ಕನ್ನಡದಲ್ಲಿ ಅನಾಥ, ಖಂಡಿತ, ಒತ್ತಾಯ, ನಂಬಿಕೆ, ಆಸ್ಪತ್ರೆ, ಅಯೋಗ್ಯ, ಮತ್ತು ಮರ್ಯಾದೆ ಅನ್ನುವ ಅಚ್ಚಕನ್ನಡದ ಶಬ್ಧಗಳನ್ನು ದಿನನಿತ್ಯ ಬಳಸುತ್ತಿದ್ದೇವೆ. ಹೀಗಾಗಿ ಗೀತಾರವರು ಅತ್ಯಂತ ಸಮರ್ಥವಾಗಿ ಇಂಥ ಪ್ರಾದೇಶಿಕ ಭಾಷೆಯಬಳಕೆಯನ್ನು ಕತೆಗಳಲ್ಲಿ ಬಳಸಿದ್ದಾರೆ. ಗ್ರಾಮೀಣ ಜನರ ಆಡುನುಡಿಗಳು ಕನ್ನಡ ನಿಘಂಟಿನಲ್ಲಿ ಇಲ್ಲದೆಯೊ ಜನಪದರ ನಾಲಗೆಯಿಂದ ನಾಲಗೆಯೆ ಹರಿದಾಡಿ ಜೀವಂತವಾಗಿರಲು ಪ್ರಯತ್ನಿಸಿದ್ದಾರೆ.

ಗೀತಾ ನಾಗಭೂಷಣ ಅವರ ಕಥೆ ಕಾದಂಬರಿಗಳ ಉದ್ದಕ್ಕೂ ಕಾಣಿಸಿಕೊಳ್ಳುವ ಸಿಂಧಿಖಾನೆ, ಮಾಂಸದ ಅಡುಗೆ ಹುರಿದಮೀನು, ಕರಿದತತ್ತಿ, ಬಾಳಕಖಂಡದ ಪಲ್ಯಾ ಈ ಎಲ್ಲಾ ವಿವರಗಳು ಇಲ್ಲಿ ಜೀವಂತವಾಗಿರುವ ಜನರ ಜೀವನದ ವಾಸ್ತವ ಚಿತ್ರಣಗಳಾಗಿವೆ. 'ತಮ್ಮ ಅನುಭವಕ್ಕೆ ದಕ್ಕಿರುವುದನ್ನೆಲ್ಲವನ್ನು ಅದರಲ್ಲೂ ಸಾಂಸ್ಕೃತಿಕ ಲೋಕದ ಸಂಗತಿಗಳನ್ನು ಅಕ್ಷರಗಳಲ್ಲಿ ಬೆರಗು ಮೂಡಿಸುವ ಭಾಷಾಕಟ್ಟಿನಲ್ಲಿ ಜೋಡಿಸಿರುವ ಕಲಾತ್ಮಕತೆ ಅನನ್ಯವಾದದ್ದು' ಎಂಬ ಡಾ.ಕೆ.ಷರೀಪಾ, ಬಸವರಾಜ ಸೂಳಿಬಾವಿಯವರ ಮಾತು ಅಕ್ಷರಶಃ ಸತ್ಯವಾದದ್ದು ದಲಿತಬಂಡಾಯದ ಕಾಲಘಟ್ಟದಲ್ಲಿ ಹಳ್ಳಿಯ ಜವಾರಿ ಭಾಷೆಯನ್ನು ಅತ್ಯಂತ ಸಮೃದ್ಧಿಯಾಗಿ ದುಡಿಸಿಕೊಂಡವರು ಎಂದರೆ ಗೀತಾ ನಾಗಭೂಷಣರು.

ಕೊನೆ ಟಿಪ್ಪಣಿಗಳು

೧. ವಿಜಯಾದಬ್ಬೆ. ಮಹಿಳೆ ಸಾಹಿತ್ಯ ಸಮಾಜ. ಪು.ಸಂ. ೧೪

೨. ಸರಸ್ವತಿ ಚಿಮ್ಮಲಗಿ. ಸಂ. ಗೀತಾನಾಗಭೂಷಣ ಕಲಬುರ್ಗಿಯ ಸ್ಪಂದನ,ಪು.ಸಂ.

೩. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, (ಕಥೆ: ಬದುಕು ನುಂಗುವ ಮಂದಿ) ಪು.ಸಂ.೦೪

೪. ಪೂರ್ವೋಕ್ತ. ಪು.ಸಂ. ೦೫

೫. ಪೂರ್ವೋಕ್ತ. ಪು.ಸಂ. ೦೬

೬. ಪೂರ್ವೋಕ್ತ. ಪು.ಸಂ.

೭. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, (ಕಥೆ: ಹುಲಿಗ್ಯಾ) ಪು.ಸಂ.೨೭

೮. ಪೂರ್ವೋಕ್ತ. ಪು.ಸಂ. ೨೮

೯. ಪೂರ್ವೋಕ್ತ. ಪು.ಸಂ. ೩೧

೧೦. ಪೂರ್ವೋಕ್ತ. ಪು.ಸಂ. ೩೭

೧೧. ಪೂರ್ವೋಕ್ತ. ಪು.ಸಂ. ೩೯–೪೦

೧೨. ಗೀತಾನಾಗಭೂಷಣ, ಅವ್ವ, ಪು.ಸಂ.೩೩

೧೩. ಪೂರ್ವೋಕ್ತ. ಪು.ಸಂ.೩೬

೧೪. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, (ಕಥೆ: ಮೂಡಿ ಬರ್‍ತಾನ ಚಂದಿರಮ) ಪು.ಸಂ.೫೧

೧೫. ಪೂರ್ವೋಕ್ತ. ಪು.ಸಂ.೫೫

೧೬. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, (ಕಥೆ: ಮಾನಾಪಮಾನ ನಿಮ್ಮದಯ್ಯ) ಪು.ಸಂ.೮೧

೧೭. ಗೀತಾ ನಾಗಭೂಷಣ, ಜ್ವಲಂತ, ಪು.ಸಂ. ೧೮

೧೮. ಪೂರ್ವೋಕ್ತ. ಪು.ಸಂ.೧೦೭

೧೯. ಪೂರ್ವೋಕ್ತ. ಪು.ಸಂ.೧೧೧–೧೧೨

೨೦. ಪೂರ್ವೋಕ್ತ. ಪು.ಸಂ.೦೩

೨೧. ಪೂರ್ವೋಕ್ತ. ಪು.ಸಂ.೮೨–೮೩

೨೨. ಪೂರ್ವೋಕ್ತ. ಪು.ಸಂ.೯೩

೨೩. ಪೂರ್ವೋಕ್ತ. ಪು.ಸಂ.೬೦

೨೪. ಮಹಾದೇವಯ್ಯ. ಪಿ. ಸಂ. ದಲಿತರು: ಭಾಷೆ ಮತ್ತು ಸಮಾಜ.ಪು.ಸಂ.೨೮

೨೫. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, (ಕಥೆ: ಬಂಜೆಂಬ ಶಬುದ ಹೊರಲಾರೆ) ಪು.ಸಂ.೨೦೩

೨೬. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, (ಕಥೆ: ಮೂಡಿ ಬರ್‍ತಾನ ಚಂದಿರಮ) ಪು.ಸಂ.೫೦

ಅಧ್ಯಾಯ : ಏಳು

ತೌಲನಿಕ ಅಧ್ಯಯನ : ಈ ಮೂವರು ಕಥೆಗಾರ್ತಿಯರ ಕಥೆಗಳ ಭಿನ್ನತೆಗಳು ಮತ್ತು ಸಾಮ್ಯತೆಗಳು

ಅಧ್ಯಾಯ : ಏಳು

ತೌಲನಿಕ ಅಧ್ಯಯನ : ಈ ಮೂವರು ಕಥೆಗಾರ್ತಿಯರ ಭಿನ್ನತೆಗಳು ಮತ್ತು ಸಾಮ್ಯತೆಗಳು

ಕನ್ನಡದಲ್ಲಿನ ಇಂಗ್ಲೀಷ್‌ನ ನುಡಿಗಟ್ಟಿಗೆ ಸಮಾನಾರ್ಥಕವಾಗಿ ತೌಲನಿಕ ಸಾಹಿತ್ಯ ಎಂಬ ಮಾತು. ಬಳಕೆಗೆ ಬಂದಿದೆಯೇ ಹೊರತು ಆ ಬಗೆಯ ಅಧ್ಯಯನ, ಗಮನಾರ್ಹವೆನ್ನುವಂತಹ ಚರ್ಚೆ ನಡೆದಿಲ್ಲ. ಪ್ರಾಸಂಗಿಕವಾಗಿ ಇಂಥ ಮಾತುಗಳು ನಮಗೆದುರಾಗುತ್ತವೆ. "ನಮ್ಮ ವಾಲ್ಮೀಕಿ ವ್ಯಾಸರು(ಗಳ) ದೊಡ್ಡತನವೆಂಥಾದ್ದು? ಅದು ಯಾವ ಮಟ್ಟದ್ದು? ಈ ವಿವರವನ್ನು ಕಾಣಬೇಕಾದರೆ ವಾಲ್ಮೀಕಿಯನ್ನು ಮಿಲ್ಟನಿನೊಡನೆ, ಕಾಳಿದಾಸನನ್ನು ಶೇಕ್ಸ್‌ಪಿಯರಿನೊಡನೆ ಹೋಲಿಸಿ ನೋಡಬೇಕು. ಸರ್ವದೇಶಿಕಗಳೂ, ಸರ್ವಕಾಲೀನಗಳೂ ಆಗಿ ಸಮಸ್ತ ಮಾನವರ ಸ್ವಭಾವಕ್ಕೂ ಏಕಪ್ರಕಾರವಾಗಿ ಸಂಬಂಧ ಕಟ್ಟಿರುವ ಸನ್ನಿವೇಶಗಳನ್ನು ಲಕ್ಷ್ಯಕ್ಕೆ ತಂದುಕೊಂಡು ನೋಡಿದರೆ, ಆಂಗ್ಲಕವಿ, ಭಾರತ ಕವಿಗಳಲ್ಲಿ ಯಾರು ಯಾರು ಯಾವ ದರ್ಜೆಗೆ ಹತ್ತುತ್ತಾರೆ? ನಮ್ಮೆಲ್ಲರರೆಲ್ಲರೂ ಅವರೆಲ್ಲರಿಗಿಂತ ಮೇಲ್ಮಟ್ಟಕ್ಕೇರುವರೆಂದು ಹೇಳಲಾಗದು. ನಮ್ಮ ಸಾಹಿತ್ಯದಲ್ಲಿ ಕಂಡುಬರುವ ಅನೇಕ ಸೂಕ್ಷ್ಮಧ್ವನಿಗಳು, ನಮ್ಮಲ್ಲಿ ಕಾಣಬಾರದ ಅನೇಕ ಸೂಕ್ಷ್ಮ ತೇಜಸ್ಸುಗಳು ಇಂಗ್ಲೀಷ್‌ಕಾವ್ಯದಲ್ಲಿ ಗೋಚರವಾಗುತ್ತವೆ. ಅಲ್ಲಿಯ ವಿದ್ಯುತ್ಚಲನೆಯ ವೇಗವೆಂಥದೆಂದು ಕಂಡುಕೊಳ್ಳುವುದೇ ನಮಗೆ ಹೊಸದರ್ಶನ."[೧] ಆದರೆ ಕನ್ನಡ ಸಾಹಿತ್ಯದ ಇತರ ಮುಖ್ಯಕೃತಿಗಳ ತೌಲನಿಕ ಅಧ್ಯಯನ ಗಂಭೀರವಾಗಿ ಗಣನೀಯ ಪ್ರಮಾಣದಲ್ಲಿ ನಮ್ಮಲ್ಲಿ ನಡೆದಿಲ್ಲ. ಈ ಲೇಖನದಲ್ಲಿ ತೌಲನಿಕ ಸಾಹಿತ್ಯದ ಪರಿಕಲ್ಪನೆಯ ಸ್ಥೂಲ ವಿವರಗಳನ್ನು ಕುರಿತು ನಡೆದಿರುವ ಚರ್ಚೆಗಳನ್ನು ಸಂಕ್ಷೇಪವಾಗಿ ಹೇಳಲಾಗಿದೆ.

ವಿಶ್ವಸಾಹಿತ್ಯ (ಯೂನಿವರ್ಸಲ್ ಲಿಟರೇಚರ್), ಅಂತರ್‌ರಾಷ್ಟ್ರೀಯ ಸಾಹಿತ್ಯ, ಜಾಗತಿಕ ಸಾಹಿತ್ಯ, ಈ ಎಲ್ಲಾ ಪದಗಳನ್ನು ತೌಲನಿಕ ಸಾಹಿತ್ಯ ಎಂಬ ಅರ್ಥದಲ್ಲಿ ಬಳಸುವುದುಂಟು. ಆದರೆ ಅವು ಯಾವುವು ಅಷ್ಟು ಸಮಗ್ರವಲ್ಲ. ತೌಲನಿಕ ಸಾಹಿತ್ಯವನ್ನು 'ಹೋಲಿಸಲು

ಸಾಧ್ಯವಾಗುವಂತಹ ಸಾಹಿತ್ಯಗಳು' ಎಂಬುದರಿಂದ ಹಿಡಿದು 'ಅಂತರ್‌ರಾಷ್ಟ್ರೀಯ ಸಾಹಿತ್ಯಿಕ ಸಂಬಂಧಗಳು' ಎನ್ನುವವರೆಗೆ ಬೇರೆ ಬೇರೆ ರೀತಿಗಳಲ್ಲಿ ಅದರ ವ್ಯಾಪ್ತಿ, ಉದ್ದೇಶಗಳನ್ನು ವಿವರಿಸುವ ಪ್ರಯತ್ನ ನಡೆದಿದೆ. ಭಾಷೆಯ, ಜನಾಂಗದ ಮತ್ತು ರಾಜಕೀಯ ಗಡಿಗಳಿಗೆ ಬದ್ಧವಾಗದೆ ಎಲ್ಲಾ ಸಾಹಿತ್ಯಗಳ ಸೃಷ್ಠಿ ಮತ್ತು ಅನುಭವದ ಏಕತೆಯನ್ನು ಗಮನದಲ್ಲಿಟ್ಟುಕೊಂಡು, ಅವುಗಳನ್ನು ಅಂತರ್‌ರಾಷ್ಟ್ರೀಯ ದೃಷ್ಠಿಕೋನದ ಅಧ್ಯಯನ ಮಾಡುವುದು ಎಂದು ಸಂಗ್ರಹವಾಗಿ ತೌಲನಿಕ ಸಾಹಿತ್ಯವನ್ನು ವಿವರಿಸಬಹುದು. ತೌಲನಿಕ ಸಾಹಿತ್ಯದ ಅಧ್ಯಯನವು ಕೇವಲ ಸಾಹಿತ್ಯಗಳ ಹೋಲಿಕೆ ಮಾತ್ರವಾಗಿರುವುದಿಲ್ಲ. ತೌಲನಿಕ ಸಾಹಿತ್ಯ ವಿಮರ್ಶೆಯ ವಿವರಣೆ, ನಿರೂಪಣೆ, ವಿಶ್ಲೇಷಣೆ, ಚಿತ್ರಣ, ಪಾತ್ರಚಿತ್ರಣ, ಮೌಲ್ಯಮಾಪನಗಳನ್ನು ಒಳಗೊಂಡಿರುತ್ತದೆ. ಈ ವಿಮರ್ಶೆಯ ಧ್ವನಿ ವಿಶ್ಲೇಷಣೆಗಿಂತ ಹೆಚ್ಚಾಗಿ ಸಂಯೋಜನೆಯದ್ದಾಗಿರುತ್ತದೆ.

ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣಾ ಕಥೆಗಳ, ತೌಲನಿಕತೆಯನ್ನು ಕುರಿತು ಚರ್ಚಿಸುವುದು ಪ್ರಸ್ತುತದ ವಿಷಯವಾಗಿದೆ. ಈ ಮೂವರು ಕಥೆಗಾರ್ತಿಯರ ಕಥಾ ಪ್ರಕಾರಗಳ ಅಭಿವ್ಯಕ್ತಿಯ ಹಿನ್ನಲೆಯನ್ನಿಟ್ಟುಕೊಂಡು ಹಾಗೂ ಅವರವರುಗಳ ಪ್ರಾದೇಶಿಕ ಹಿನ್ನೆಲೆಯಲ್ಲಿ ಬರುವ ಭಾಷೆ, ಸಂಪ್ರದಾಯ, ಆಚಾರ, ವಿಚಾರ, ರೀತಿ–ನೀತಿಗಳು, ಊಟೋಪಚಾರಗಳು, ಇನ್ನೂ ಮುಂತಾದ ಅಂಶಗಳು ಕೌಟುಂಬಿಕ ಹಿನ್ನೆಲೆಯಿಂದ ಬಂದ ಸ್ತ್ರೀಲೋಕದ ಅಸ್ಮಿತೆಯ ಕುರಿತು ಇಲ್ಲಿ ಚರ್ಚಿಸಲಾಗಿದೆ. ಪ್ರಮುಖವಾಗಿ ವೈಶಿಷ್ಟ್ಯತೆ, ಕಥೆಗಾರ್ತಿಯರ ಪಾತ್ರಗಳಲ್ಲಿನ ಭಿನ್ನತೆ, ವಸ್ತುಗಳಲ್ಲಿನ ಭಿನ್ನತೆ ಅಲ್ಲಿ ಅನಾವರಣಗೊಳ್ಳುವ ಅಕ್ಷರಸ್ಥ ಹಾಗೂ ಅನಕ್ಷರಸ್ಥರ ವಿಷಯಗಳು, ಇವುಗಳ ಜೊತೆ–ಜೊತೆಯಲ್ಲಿ ಮಹಿಳಾ ಸಬಲೀಕರಣ, ಕಥೆಗಳಲ್ಲಿ ಅಭಿವ್ಯಕ್ತಿಗೊಂಡಂತಹ ಸ್ತ್ರೀಯ ಸಾಮಾಜಿಕ ಜೀವನಶೈಲಿ ಹಾಗೂ ಸಂಸ್ಕೃತಿ ಎಂಬಂಶಗಳನ್ನು ಕುರಿತು ಈ ಅಧ್ಯಾಯನದಲ್ಲಿ ಈ ಮೂವರು ಕತೆಗಾರ್ತಿಯರ ಕತೆಗಳ ತೌಲನಿಕತೆಯ ಅಧ್ಯಯನ ಮಾಡಲಾಗುತ್ತದೆ. ಆದರೆ ಯಾರೊಬ್ಬರು ಶ್ರೇಷ್ಠ, ಕನಿಷ್ಟವೆಂದು ಮಾನದಂಡಗಳ ಮೂಲಕ ನಡೆಯುವ ಅಧ್ಯಯನದಲ್ಲಿ ಹೆಚ್ಚು ಕಡಿಮೆ ಒಂದೇ ಕಾಲಘಟ್ಟಕ್ಕೆ ಸೇರಿದ ಸಮಕಾಲೀನರಾದ ಈ ಮೂವರು ಲೇಖಕಿಯರ ಕಥೆಗಳಲ್ಲಿ ಸಂಸ್ಕೃತಿ ಪಡೆದ ಭಿನ್ನ ಭಿನ್ನ ಸ್ವರೂಪದ ಅಧ್ಯಯನದ ಜೊತೆಗೆ ಅವರಲ್ಲಿನ ಚಿಂತನೆಗಳು, ಪ್ರಾಮುಖ್ಯತೆ ಪಡೆದ ಸಂಗತಿಗಳು ಭಿನ್ನ? ಎಂಬುದರ ಚರ್ಚೆ ಇಲ್ಲಿನ ವಿಷಯ.

ಈ ಮೂವರು ಕಥೆಗಾರ್ತಿಯರು ಹೊರಟಿರುವುದು ಸಾಮಾಜಿಕ ಬದುಕಿನ ಚಿತ್ರಣ ಕೊಡಲು ಅದರಲ್ಲೂ ಹೆಚ್ಚಿನ ಬದುಕಿನ ಚಿತ್ರಣ ಕೊಡಲು, ಆದರೆ ಹೊರಬಿದ್ದು

ಬೇರೆಬೇರೆ ನೆಲೆಗಳಿಂದ. ಇದಕ್ಕೆ ಅವರವರ ಪ್ರಾದೇಶಿಕ, ಪರಿಸರ, ಸಂಸ್ಕೃತಿಯ ಹಿನ್ನಲೆ ಅವರ ಬದುಕಿನ ಅನುಭವಗಳು ಆ ಕಾಲದ ತುರ್ತು ಕಾರಣವಾಗಿರಬಹುದು. ಈ ಎಲ್ಲಾ ಸಾಧ್ಯತೆಗಳಿಂದಲೇ ಹೆಚ್ಚಿನ ಬದುಕಿನ ಬೇರೆ ಬೇರೆ, ಸಂಗತಿಗಳು ಅನಾವರಣಗೊಳ್ಳುತ್ತಾ ಹೋಗುತ್ತದೆ. ಇದರಿಂದಾಗಿ ಈ ಮೂವರು ಕಥೆಗಾರ್ತಿಯರ ಸಾಹಿತ್ಯ ಮಹತ್ವ ಪಡೆಯುತ್ತದೆ.

ವ್ಯಕ್ತಿಕೇಂದ್ರಿತ ಚಿಂತನೆಯಿಂದ ಹೊರಟ ವೀಣಾ ಶಾಂತೇಶ್ವರ, ಕುಟುಂಬ ಕೇಂದ್ರಿತ ಚಿಂತನೆಯಿಂದ ಹೊರಟ ವೈದೇಹಿ, ಸಮಾಜ ಕೇಂದ್ರಿತ ಚಿಂತನೆಯಿಂದ ಹೊರಟ ಗೀತಾನಾಭೂಷಣ ಈ ಮೂವರ ಮುಖ್ಯ ಸಂಗತಿಗಳು ಬೇರೆ-ಬೇರೆ ಆದರೆ ಕೊನೆಗೆ ಅವರು ತಲುಪುವುದು ಹೆಣ್ಣಿನ ಬದುಕಿನ ಅನಾವರಣ ಮತ್ತು ಹೆಣ್ಣಿಗೆ ಒಂದು ಅಭಿವ್ಯಕ್ತಿಕೊಡುವಲ್ಲಿ ಏಕೆಂದರೆ ಅವರವರಿಗೆ ಆಯಾ ಸಂಗತಿಗಳು ಮುಖ್ಯವಾಗುತ್ತವೆ.

ಇವರ ಮೇಲೆ ಪ್ರಭಾವ ಬೀರಿದ ಸಾಹಿತ್ಯಿಕ ಪಂಥಗಳ ಬಗೆಗೆ ಯೋಚಿಸಿದಾಗ, ನವ್ಯಪಂಥವು ಗೀತಾ ನಾಗಭೂಷಣರವರ ಮೇಲೆ ಯಾಕೆ ಪ್ರಭಾವ ಬೀರಲಿಲ್ಲ? ನವೋದಯ, ವೀಣಾ ಶಾಂತೇಶ್ವರವರ ಮೇಲೆ ಯಾಕೆ ಪ್ರಭಾವ ಬೀರಲಿಲ್ಲ? ಮತ್ತು ಈ ಯಾವ ಸಾಹಿತ್ಯಪಥಗಳು ವೈದೇಹಿಯವರ ಮೇಲೆ ಯಾಕೆ ಪ್ರಭಾವ ಬೀರಲ್ಲಿಲ್ಲ? ಎಂಬ ಪ್ರಶ್ನೆಗಳು ಇಲ್ಲಿ ಮಹತ್ವ ಪಡೆಯುತ್ತವೆ. ನಿರೂಪಣಾ ಶೈಲಿಯಾಗಿರಬಹುದು ಮತ್ತು ಅಭಿವ್ಯಕ್ತಿ ವಿಧಾನ ಭಿನ್ನ-ಭಿನ್ನವಾಗಲು ಕಾರಣ ಏನು? ಎಂಬ ಈ ಎಲ್ಲಾ ಮೇಲಿನ ಅಂಶಗಳು ಮುಖ್ಯವಾಗುತ್ತವೆ. ಈ ಮೂಲಕ ಅವರವರ ಅಭಿವ್ಯಕ್ತಿ ಮತ್ತು ಸ್ವರೂಪದ ಮಾದರಿಗಳ ತೌಲನಿಕ ಅಧ್ಯಯನ ಇಲ್ಲಿ ಮಾಡಲಾಗುತ್ತದೆ.

ವೀಣಾ ಶಾಂತೇಶ್ವರ ಬಂದಿರುವ ಧಾರವಾಡ, ವೈದೇಹಿಯವರ ಕುಂದಾಪುರ ಪ್ರದೇಶ ಮತ್ತು ಗೀತಾ ನಾಗಭೂಷಣರವರು ಪ್ರತಿನಿಧಿಸುವ ಗುಲ್ಬರ್ಗಪ್ರಾಂತ್ಯ ಈ ಮೂರು ಕರ್ನಾಟಕದ ವಿಶಿಷ್ಟ ಚಹರೆಯುಳ್ಳ ಪ್ರದೇಶಗಳು ಮತ್ತು ಕರ್ನಾಟಕದ ಮಟ್ಟಿಗೆ ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಭಾಷಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಭಿನ್ನ ಚಿತ್ರಣಗಳನ್ನು ಪಡೆದಿವೆ.

ಮುಂಬಯಿ ಕರ್ನಾಟಕ ಪ್ರದೇಶವೆಂದು ಕರೆಯಲ್ಪಡುವ ಧಾರವಾಡ ಪರಿಸರ, ಮೇಲುವರ್ಗದ ಬ್ರಾಹ್ಮಣ ಕುಟುಂಬದ ಪರಿಸರ ಮತ್ತು ಹಿನ್ನಲೆ ಪೇಶ್ವೆಗಳ ಆಡಳಿತ ನೆರಳಿನಿಂದಾಗಿ ಮರಾಠಿ ಭಾಷೆಯ ಪ್ರಭಾವ ಪ್ರಾದೇಶಿಕವಾಗಿ ಹತ್ತಿರವಾಗಿರುವ ಬೆಳಗಾಂ, ಮುಂಬಯಿ, ಪುಣೆ, ನಗರಗಳೆಂಬ ಈ ಎಲ್ಲಾವುಗಳು ವೀಣಾರವರ ಕಥೆಗಳಲ್ಲಿ

ಒಡಮೂಡಿವೆ. ನವ್ಯಪಂಥದ ಪ್ರಮುಖ ಬರೆಹಗಾರ್ತಿಯಾದ ವೀಣಾ ಶಾಂತೇಶ್ವರ ಕತೆಗಳಲ್ಲಿ ಒದಗಿ ಬರುವ ಭಾಷೆ ಅತ್ಯಂತ ಪ್ರಮುಖವಾದದು. ಉತ್ತರ ಕರ್ನಾಟಕದ ಧಾರವಾಡದ ದೇಸಿಶೈಲಿಯನ್ನು ಕಥೆಗಳ ಸಂಭಾಷಣೆಯಲ್ಲಿ ಮಿಳಿತಗೊಳಿಸಿ ಕಥಾಹಂದರವನ್ನು ಬೆಳೆಸುವ ವೀಣಾಶಾಂತೇಶ್ವರವರ ಕಥನಕ್ರಮ ವಿಶಿಷ್ಟವಾದದು; ಅನನ್ಯವಾದದು. ಪ್ರಥಮಪುರುಷ ಅಭಿವ್ಯಕ್ತಿಯಲ್ಲಿ ಅನಾವರಣಗೊಳ್ಳುವ ಕಥೆ ಉತ್ತಮಪುರುಷ ಅಭಿವ್ಯಕ್ತಿಯೊಂದಿಗೆ ಸಮಾಗಮಗೊಂಡು ಕಥೆಗೆ ಸಾಮರಸ್ಯವನ್ನೊದಗಿಸುವ ವಿಶಿಷ್ಟ ಅಭಿವ್ಯಕ್ತಿ ಸಾಧನವೂ ಆಗುತ್ತದೆ.

ಕರ್ನಾಟಕದ ಕರಾವಳಿ ಪ್ರದೇಶ ಕುಂದಾಪುರ ಕೋಟಾ ಪ್ರದೇಶದ ಭಾಷೆ, ಜೀವನಶೈಲಿ ಮತ್ತು ಪ್ರಾದೇಶಿಕವಾಗಿ ಹತ್ತಿರವಾಗುವ ಕೇರಳದ ಜೀವನಶೈಲಿಯ ಪ್ರಭಾವ ಕರ್ನಾಟಕದ ಇತರೆ ಪ್ರದೇಶಗಳಿಗಿಂತ ಭಿನ್ನವಾದ ಆಚರಣೆಗಳು ಹಾಗೂ ಹೆಚ್ಚಾಗಿ ಮನೆವಾರ್ತೆಯ ಗೃಹಿಣಿಯ ಬದುಕು ವೈದೇಹಿಯವರನ್ನು ಪ್ರಭಾವಿಸಿದೆ. ಅಲ್ಲಿನ ನೈಸರ್ಗಿಕವಾದ ಕಾಡುಗಳು ಸಸ್ಯಗಳು ಸಹಜವೆಂಬಂತೆ ಅವರ ಕತೆಗಳಲ್ಲಿ ಪ್ರವೇಶಿಸಿದ ಬಗೆ ಅಮೋಘವಾದದ್ದು. ಮಲೆನಾಡಿನ ಹವ್ಯಕ ಮತ್ತು ಕುಂದ ಕನ್ನಡದ ಆಡುಭಾಷೆಯ ಸೊಗಡಿನಲ್ಲಿ ವೈದೇಹಿಯವರ ಬಹುತೇಕ ಕತೆಗಳು ಬರೆಯಲ್ಪಟ್ಟಿವೆ. ಅವುಗಳ ವಸ್ತು, ಪಾತ್ರಗಳು, ಘಟನೆಗಳು ಎಲ್ಲವೂ ಆ ಪರಿಸರದಿಂದಲೇ ಜನ್ಮ ತಳೆದವುಗಳಾಗಿವೆ. ಕನ್ನಡದ ಆಧುನಿಕ ಕಥೆಗಾರ್ತಿಯರಲ್ಲಿ ಪ್ರಾದೇಶಿಕ ಭಾಷೆಯನ್ನು ಇವರಷ್ಟು ಸಮರ್ಥವಾಗಿ ಬಹುಶ: ಬೇರೆ ಯಾರೂ ಬಳಸಿಲ್ಲ. ವೀಣಾ ಶಾಂತೇಶ್ವರ, ನೇಮಿಚಂದ್ರರಂತಹ ಸಂವೇದನಾಶೀಲರಾದ ಲೇಖಕಿಯರು ತಮ್ಮ ಪಾತ್ರಗಳಿಗೆ ಹೊಸದೊಂದು ಬೌದ್ಧಿಕ ಚೌಕಟ್ಟನ್ನು ನಿರ್ವಹಿಸುವಾಗಲೂ ಗ್ರಾಮೀಣ ಅಥವಾ ಆಯಾ ಪರಿಸರದ ಸಾಂಸ್ಕೃತಿಕ ವಿವರಗಳು ಪ್ರಧಾನವಾಗದೆ, ಪಾತ್ರಗಳು ಪರಕೀಯತೆಯನ್ನು ಅನುಭವಿಸುತ್ತವೆ. ಇಂತಹ ಕಡೆ ನಗರಕೇಂದ್ರಿತ ಬದುಕಿನ ಒಂಟಿತನ, ಹೆಣ್ಣಾಗಿ ಎದುರಿಸುವ ಸಮಸ್ಯೆ, ಬೌದ್ಧಿಕಪ್ರಜ್ಞೆ ಈ ಭಾರಗಳಿಂದ ಪಾತ್ರಗಳು ಕುಸಿದು ಸೋಲೊಪ್ಪುತ್ತವೆ. ವೈದೇಹಿಯವರ ಕಥಾಲೋಕದಲ್ಲಿ ಬರುವ ಎಲ್ಲಾ ವಿವರಗಳೂ ಕೂಡ ಅಲ್ಲಿಯ ನೆಲದಿಂದಲೇ ಹುಟ್ಟಿ ಅಲ್ಲಿಯೇ ಕೊನೆಗೊಳ್ಳುವಂತವು.

ಕರ್ನಾಟಕದ ಎಲ್ಲಾ ರೀತಿಯಿಂದಲೂ ಹಿಂದುಳಿದಿರುವ ಜಿಲ್ಲೆಗಳ ಸಾಲಿಗೆ ಸೇರುವ ಗುಲ್ಬರ್ಗಾ ಪ್ರಾಂತ್ಯದ ಸುತ್ತಮುತ್ತಣ ಪ್ರದೇಶಗಳು ಯಾವಾಗಲೂ ಮಳೆಯಿಂದ ವಂಚಿತವಾದ ಬರಪೀಡಿತ ಪ್ರದೇಶಗಳು. ಈ ಕಾರಣದಿಂದಲೇ ಆರ್ಥಿಕವಾಗಿ ಹಿಂದುಳಿದು, ಬಡತನ, ಹಸಿವು ನಿರಂತರದ ಸಮಸ್ಯೆಗಳಾಗಿವೆ. ರಾಜಕೀಯವಾಗಿ ಆಡಳಿತ ಪ್ರದೇಶದಿಂದ ದೂರ

ಉಳಿದಿರುವುದು. ಬಡತನದಿಂದ ಶೈಕ್ಷಣಿಕವಾಗಿ ಹಿಂದುಳಿವಿಕೆ, ಸರ್ಕಾರದ ಯೋಜನೆಗಳು ತಲುಪುವ ಸ್ಥಿತಿ ಇರುವ ಸಂಪತ್ತು ಕೆಲ ಜನರಲ್ಲಿಯೇ ಕೇಂದ್ರಿಕೃತವಾಗಿದ್ದು, ಈ ಎಲ್ಲಾ ಅಂಶಗಳು ಗೀತಾ ನಾಗಭೂಷಣ ಅವರ ಕಥೆಗಳ ಪಾತ್ರಗಳ ಶೋಷಣೆಗೆ ಗುರಿಯಾಗುತ್ತದೆ. ಈ ಎಲ್ಲಾ ವಾಸ್ತವ ಸಂಗತಿಗಳು ಅವರ ಬರವಣಿಗೆಯ ಮೇಲೆ ಪ್ರಭಾವ ಬೀರಿವೆ ಹಾಗೂ ಸುಲ್ತಾನರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾದ್ದರಿಂದ ಉರ್ದು ಭಾಷೆಯ ಪ್ರಭಾವ ಮತ್ತು ಸೊಗಡು ಸಹಜವಾಗಿ ಪ್ರವೇಶಿಸಿವೆ.

ಅಸ್ತಿತ್ವದ ಪ್ರಶ್ನೆ

ಈ ಮೂವರ ಕಥೆಗಳಲ್ಲಿ ಅಸ್ತಿತ್ವದ ಪ್ರಶ್ನೆ ಬೇರೆ ಬೇರೆ ಸ್ವರೂಪವನ್ನು ಪಡೆಯುತ್ತಾ ಹೋಗುತ್ತದೆ. ವೀಣಾ ಶಾಂತೇಶ್ವರರಲ್ಲಿ ವ್ಯಕ್ತಿಯ ವೈಯಕ್ತಿಕ ಮತ್ತು ಸಾಮಾಜಿಕನೆಲೆಗಳಲ್ಲಿ ಅಸ್ತಿತ್ವದ ಪ್ರಶ್ನೆ ಎದುರಾಗುತ್ತದೆ. ಉನ್ನತ ಶಿಕ್ಷಣ ಪಡೆದ ವಿಚಾರವಂತ ಉದ್ಯೋಗಸ್ಥ ಮಹಿಳೆಯರು ಆ ಮೂಲಕ ಲಭಿಸಿದ ಪ್ರಜ್ಞೆಯಿಂದ ಬಹುಪ್ರಕಾರವಾಗಿ ಹರಣವಾಗುತ್ತಿರುವ ಅಸ್ತಿತ್ವ ಕಾಪಾಡಕೊಳ್ಳಲು ಹವಣಿಸುತ್ತಾರೆ. ವಿವಾಹ, ದಾಂಪತ್ಯ, ಕುಟುಂಬದ ಚೌಕಟ್ಟಿನ ಆಚೆ ಬಂದು ಸ್ವತಂತ್ರರಾಗಿರಲು ಬಯಸುತ್ತಾರೆ.

ವೀಣಾ ಶಾಂತೇಶ್ವರ ವೈದೇಹಿಯವರ ಕಥೆಗಳಲ್ಲಿ ಹಸಿವು ಅನ್ನದ ಸಮಸ್ಯೆಯಿಲ್ಲ. ಬದಲಿಗೆ ಸುವ್ಯವಸ್ಥಿತ ಜೀವನ ನಡೆಸುತ್ತಿದ್ದಾಗಲೂ ತನ್ನತನದ ಪ್ರಶ್ನೆಯೇ ಕಾಡುತ್ತದೆ. ವೈದೇಹಿಯವರಲ್ಲಿ ಕುಟುಂಬದ ಒಳಗೆ ಎಲ್ಲಾ ತಲ್ಲಣಗಳ ನಡುವೆ ಹೆಣ್ಣು, ತನ್ನ ಅಸ್ಥಿತ್ವವನ್ನ ಕಾಯ್ದುಕೊಳ್ಳುವುದು ಅದಕ್ಕೆ ನಡೆಸುವ ಮಾನಸಿಕ ಸಂಘರ್ಷ ಮುಖ್ಯವಾಗುತ್ತದೆ. ಗೀತಾ ನಾಗಭೂಷಣ ಅವರ ಕಥೆಗಳಲ್ಲಿ ಅಸ್ತಿತವೆಂದರೆ ಹಸಿವು ಬಡತನ ಮತ್ತು ಅಧಿಕಾರಶಾಹಿಯ ಮುಂದೆ ತನ್ನ ಸ್ಥಿತಿಯನ್ನು ಕಾಪಾಡಿಕೊಳ್ಳುವುದು ಮುಖ್ಯ.

೭.೧ ಕಥಾವಸ್ತುಗಳ ಭಿನ್ನತೆ ಮತ್ತು ಸಾಮ್ಯತೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ವಸ್ತು' ಒಂದು ಬಹುಮುಖ್ಯವಾದ ಅಂಗವಾಗಿದೆ. ಕವಿರಾಜಮಾರ್ಗಕಾರನಿಂದ ಹೊಸ ತಲೆಮಾರಿನ ಬರಹಗಾರರವರೆಗೂ ಬರಹದ ವಸ್ತುಗಳು ಭಿನ್ನತೆಯನ್ನು ಪಡೆದುಕೊಂಡಿದೆ. ಕನ್ನಡದ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಅಳವಡಿಸಲಾರದಂತಹ ಕಥೆಯು ಅಂದಿನ ಕಾಲದಲ್ಲಿ ಆಳ್ವಿಕೆ ಮಾಡುತ್ತಿದ್ದಂತಹ ರಾಜ ಮಹಾರಾಜರುಗಳ ಕಥೆಯೇ ಕಾವ್ಯಗಳ ವಸ್ತುಗಳಾಗಿವೆ. ಸಾಹಿತ್ಯ ಚರಿತ್ರೆಯುದ್ಧಕ್ಕೂ ಒಂದೇ ರೀತಿಯಾದ ವಸ್ತುಗಳ ಬಳಕೆ ಕಂಡುಬಂದರೆ ಕೆಲವು ಸಾಹಿತ್ಯಘಟ್ಟಗಳಲ್ಲಿ ಬರೆಹಕ್ಕೆ ಆಯ್ಕೆ ಮಾಡಿಕೊಂಡಂತಹ ವಸ್ತುಗಳು ಬದಲಾವಣೆಯ

ಸ್ವರೂಪ ಪಡೆದುಕೊಳ್ಳುತ್ತವೆ. ವಚನಕಾರರು, ತತ್ವಪದಕಾರರು, ಹರಿದಾಸರು ಸೇರಿದಂತೆ ತಮ್ಮ ಸಾಹಿತ್ಯ ಕೃಷಿಯಲ್ಲಿ ಅಳವಡಿಸಲಾದ ಅಥವಾ ಆಯ್ಕೆ ಮಾಡಿಕೊಂಡ ವಸ್ತುಗಳು ಸಮಾಜಮುಖಿಯಾದವುಗಳು. ಸಮಾಜಮುಖಿಯಾದ ಕೆಲವು ವಸ್ತುಗಳಾದರೆ ಇನ್ನು ಕೆಲವು ಧಾರ್ಮಿಕತೆಯ ಹಿನ್ನೆಲೆಯನ್ನಿಟ್ಟುಕೊಂಡು ರಚನೆಯಾದ ಸಾಹಿತ್ಯವಿದೆ. ವಿದೇಶಿಯನ್ನರ ಆಗಮನ ಸ್ವಾತಂತ್ರ್ಯ ಸಂಗ್ರಾಮ, ಸ್ವತಂತ್ರ್ಯ ನಂತರದ ಭಾರತದ ಸ್ಥಿತಿಗತಿ, ಭಾರತೀಯ ಸಾಹಿತ್ಯದಲ್ಲಿಯೂ ವಸ್ತುಗಳ ಆಯ್ಕೆಯಲ್ಲಿ ಬದಲಾವಣೆ ಕಂಡುಬಂದವು. ಆಧುನಿಕ ಶಿಕ್ಷಣವ್ಯವಸ್ಥೆಯಿಂದ ಗ್ರೀಕ್ ಸಾಹಿತ್ಯದ ಓದಿನ ಹಿನ್ನೆಲೆಯಲ್ಲಿ ಭಾರತದ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬದಲಾಣೆಯ ಗಾಳಿ ಬೀಸತೊಡಗಿದೆ. ಆಧುನಿಕ ಕನ್ನಡ ಕಥಾಲೋಕದಲ್ಲಿ ಕಾಣಬರುವ ಹಲವು ಮಹಿಳಾ ಕತೆಗಾರರಲ್ಲಿ ಬಹುಮುಖ್ಯವಾಗಿ ಗೀತಾ ನಾಗಭೂಷಣ, ವೈದೇಹಿ ಮತ್ತು ವೀಣಾ ಶಾಂತೇಶ್ವರ ಇವರನ್ನು ಗುರುತಿಸಬಹುದು. ಈ ಮೂವರು ಕಥೆಗಾರ್ತಿಯರು ತಮ್ಮ ಕಥಾಲೋಕಕ್ಕೆ ಆಯ್ದುಕೊಂಡಂತಹ ವಸ್ತುಗಳಲ್ಲಿನ ಭಿನ್ನತೆಗಳನ್ನು ಗುರುತಿಸುವುದು ಮುಖ್ಯವಾದುದಾಗಿದೆ.

ವೀಣಾ ಶಾಂತೇಶ್ವರರವರು ತಮ್ಮ ಕಥಾಲೋಕಕ್ಕೆ ಆಯ್ಕೆ ಮಾಡಿಕೊಂಡ ವಸ್ತುಗಳನ್ನು ಕುರಿತು ಅವರೇ ಹೇಳಿಕೊಂಡ ಹಾಗೆ ನಾಲ್ಕು ಹಂತಗಳಲ್ಲಿ ಆಯ್ಕೆ ಮಾಡಿಕೊಂಡಿದ್ದಾರೆ. ಮೊದಲನೆಯ ಹಂತದಲ್ಲಿ ಅವರು ಐದನೇ ವರ್ಷವಿರುವಾಗೇ ಸಂಪೂರ್ಣ ವಸ್ತುವನ್ನುಳ್ಳ ಮೊದಲ ಕತೆಯನ್ನು ಬರೆದಾಗ ಅವರಿಗೆ ಐದನೆಯ ವರ್ಷ ತುಂಬಿ ಆರನೆಯ ವರ್ಷಕ್ಕೆ ನಡೆಯುತ್ತಿತ್ತು ಎಂದಿದ್ದಾರೆ. ಸಾಹಸಿಯಾದ ರಾಜಕುಮಾರಿಯೊಬ್ಬಳು ರಾಕ್ಷಸನೊಬ್ಬನು ಬಂಧಿಯಾಗಿಸಿದ್ದ ರಾಜಕುಮಾರರನ್ನು ಬಿಡಿಸಿಕೊಂಡು ಬಂದ ರೋಮ್ಯಾಂಟಿಕ್ ಕತೆಯಾಗಿತ್ತು. ವೀಣಾರವರ ಹೈಸ್ಕೂಲಿನಲ್ಲಿ ಬರೆದ ಕಥೆಗಳಲ್ಲಿ ಬಳಸಿದ ಕಥಾವಸ್ತುಗಳು ವಿಶಿಷ್ಟ ಹಾಗೂ ಸ್ತ್ರೀಪರವಾದದ್ದು, ಅನನ್ಯವಾದದ್ದು, ಹೆಣ್ಣಿನ ವಿಚಾರಗಳನ್ನು ಪ್ರಕಟಿಸಲು, ಅವಳ ಭಾವನೆಗಳಿಗೆ ಸ್ಪಂಧಿಸಲು, ಹೆಣ್ಣಿಗೆ ಇಷ್ಟ ಬಂದಹಾಗೆ ಜೀವನವನ್ನು ರೂಪಿಸಿಕೊಳ್ಳಲು ಪೂರ್ಣ ಅಧಿಕಾರವಿರಬೇಕು. ಹೆಣ್ಣನ್ನು ಹತ್ತಿಕ್ಕ ಬಯಸುವ ಯಾವುದೇ ಕನಿಷ್ಟ ಸಾಮಾಜಿಕ ಸಂಪ್ರದಾಯಗಳನ್ನು ಧಿಕ್ಕರಿಸಲು ಆಕೆ ಹಿಂದೆಗೆಯಬಾರದು. ತಲೆ-ತಲಾಂತರದಿಂದ ಹೆಣ್ಣಿನ ಮೇಲೆ ದಬ್ಬಾಳಿಕೆ ನಡೆಸುತ್ತಾ ಬಂದಿರುವ ಗಂಡಸರನ್ನು ಹೆಣ್ಣು ಮುಲಾಜಿಲ್ಲದೇ ಬಗ್ಗು ಬಡಿಯಬೇಕು ಎಂಬಂತಹ ವಿಷಯ ವಸ್ತುಗಳ ಆಧಾರದಲ್ಲಿ ತಮ್ಮ ಕಥಾ ಸಂವಿಧಾನವನ್ನು ನಿರೂಪಿಸಿದ್ದಾರೆ.

ಎರಡನೆಯ ಹಂತದಲ್ಲಿ ಸಾಮಾಜಿಕ ಅನಿಷ್ಟಗಳ ಬಗ್ಗೆ ಪ್ರತಿಭಟನೆ ಹೆಂಗಸಿನ ಮೇಲಾಗುವ ದೌರ್ಜನ್ಯದ ವಿವಿಧ ರೂಪಗಳು, ಅನ್ಯಾಯವನ್ನು ವಿರೋಧಿಸುವ ಕಥಾನಾಯಕಿಗೆ ಸೋಲು ಅಪನಿಂದೆ, ಅಪಮಾನಗಳು ಮುಂತಾದ ವಸ್ತುಗಳನ್ನು ಬಳಸಿ ಕಥೆ ಸೃಷ್ಟಿಸಿದ್ದಾರೆ. ಮೂರನೆಯ ಹಂತದಲ್ಲಿ ಹೆಣ್ಣು ಮಕ್ಕಳು ಎದುರಿಸಬೇಕಾದ ಸಾಮಾಜಿಕ, ವೈಯಕ್ತಿಕ, ವೈಚಾರಿಕ ಹಾಗೂ ಮಾನಸಿಕ ಸಮಸ್ಯೆಗಳು ಈ ಹಂತದ ಕಥೆಗಳ ವಸ್ತುಗಳಾಗಿವೆ. ನಾಲ್ಕನೆಯ ಹಂತದ ಕಥೆಗಳಲ್ಲಿ ಮಹಿಳೆ ಧೈರ್ಯವಂತಳಾಗಲಿ ಗಂಡನನ್ನು ಧಿಕ್ಕರಿಸುವವಳಾಗಿರಲಿ, ಸಂಪ್ರದಾಯ ವಿರೋಧಿಯಾಗಿರಲಿ ನಮ್ಮ ಪ್ರಸ್ತುತ ಸಮಾಜ ಆಕೆಯನ್ನು ಸುಖನಿದ್ರೆ ಮಾಡಲು ಬಿಡುವುದಿಲ್ಲ ಎಂಬ ನೋವಿನ ಅರಿವಿದೆ. ಏಕಾಏಕಿಯಾಗಿ ಗಂಡಸಿನ ಹಾಗೂ ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡುವ ಮಹಿಳೆಯ ದಾರಿ ಇನ್ನು ಸುಗುಮವಾಗಿಲ್ಲ. ಪರಿಪೂರ್ಣ ಮಹಿಳಾಸ್ವಾತಂತ್ರ್ಯಕ್ಕೆ ಕಾಲವಿನ್ನೂ ಪಕ್ವವಾಗಿಲ್ಲ. ಆಕೆ ಹೊಂದಾಣಿಕೆ ಮಾಡಿಕೊಳ್ಳಬೇಕು ಇಲ್ಲವೆ ತನ್ನ ತತ್ವಗಳಿಗಾಗಿ ನೋವು ಅನುಭವಿಸುವಲ್ಲಿ ಬದುಕಿರಬೇಕು ಎಂಬ ಆಶಯಗಳನ್ನು ಪ್ರತಿಬಿಂಬಿಸುವಂತಹ ವಸ್ತುಗಳು ಇವರ ಕಥೆಗಳಲ್ಲಿ ಒಡಮೂಡಿವೆ.

ಒಟ್ಟಾರೆಯಾಗಿ ಹೇಳುವುದಾದರೆ ವೀಣಾ ಅವರ ಕಥಾವಸ್ತುವು ಸಂಪ್ರಾದಾಯಿಕ ಕಥಾವಸ್ತುಗಳಿಗಿಂತ ಭಿನ್ನ. ಗಂಡು ಹೆಣ್ಣಿನ ಸಂಬಂಧಗಳ ವಿಶ್ಲೇಷಣೆಯೇ ಅವರ ಎಲ್ಲಾ ಕಥೆಗಳ ವಸ್ತು. ವೀಣಾ ಅವರ ನಿಲುವುಗಳು ಸ್ತ್ರೀಪರವಾಗಿದ್ದರೂ ಅವು ಎಲ್ಲೂ ಘೋಷಣೆಯ ರೂಪ ತಾಳುವುದಿಲ್ಲ. ಕಥೆಯ ಸಂದರ್ಭದಿಂದಲೇ ಸಹಜವೆಂಬಂತೆ ಹೊಮ್ಮುತ್ತದೆ. ಪುರುಷರ ನಯವಂಚನೆ, ಹೇಡಿತನ ಸಂಪ್ರದಾಯ ಶರಣತೆಗಳನ್ನು ಕಥೆಯ ಮೂಲಕವೇ ಬಯಲುಗೊಳಿಸುತ್ತಾರೆ.

ವೈದೇಹಿಯವರ ಬಹುತೇಕ ಕಥೆಗಳ ಕೇಂದ್ರವಸ್ತು ಹೆಣ್ಣು, ಗ್ರಾಮೀಣದ ಬದುಕು, ಕೌಟುಂಬಿಕ ಜೀವನ, ಹೆಣ್ಣು-ಗಂಡುಗಳ ಸಂಬಂಧದ ತಾಕಲಾಬಿಗಳು, ಆಧುನಿಕ ಬದುಕು ತಂದೊಡ್ಡುವ ಸ್ಥಿತ್ಯಂತರಗಳು ಹೀಗೆ ಯಾವುದೇ ವಿಷಯ ವಸ್ತುಗಳನ್ನು ಆಯ್ಕೆ ಮಾಡಿಕೊಂಡರೂ ಸಹ ಆ ವಿಷಯಕ್ಕೆ ಜೀವ ತುಂಬುವ ಹಾಗೂ ಅದರಲ್ಲಿರುವ ಪಾತ್ರಗಳಿಗೆ ನ್ಯಾಯ ಒದಗಿಸುವ ಕೆಲಸ ಅವರ ಕಥೆಗಳುದ್ದಕ್ಕೂ ಕಂಡುಬರುತ್ತದೆ. ಈ ವಿಷಯದ ವಸ್ತುಗಳ ಹಿನ್ನೆಲೆಯಲ್ಲಿ ವೈದೇಹಿಯವರ 'ಗೋಲ' ಕಥಾಸಂಕಲನದ ಕಥೆಗಳನ್ನು ಉದಾಹರಿಸಬಹುದಾಗಿದೆ. ವೈದೇಹಿಯವರ ವೈಶಿಷ್ಟ್ಯತೆಯಿರುವುದು ವಿಭಿನ್ನವರ್ಗ, ಸ್ಥರಗಳ ಹೆಣ್ಣು ಮಕ್ಕಳ ಅಂತರಂಗದ ಜೀವನಶೈಲಿಯನ್ನು ಚಿತ್ರಿಸುವಲ್ಲಿ. ಗಂಡು ಹೆಣ್ಣುಗಳ

ಮುಖಾಮುಖಿಯಾಗಿರುವುದಕ್ಕಿಂತ ಹೆಚ್ಚಾಗಿ ಒಟ್ಟು ಸಾಮಾಜಿಕ, ಕೌಟುಂಬಿಕನೆಲೆಯಲ್ಲಿ ಮಹಿಳೆಯ ಶೋಷಣೆಯಗಳತ್ತ ಗಮನಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಕ್ಕು, ಒಂದು ಅಪರಾಧ ತನಿಖೆ, ಗುಲಾಬಿಯ ಟಾಕೀಸು ಮತ್ತು ಸಣ್ಣ ಅಲೆಗಳು, ಗೂಡಿನೊಳಗಿನ ಒಂದು ಹಕ್ಕಿ, ಶೋಧ ಮೊದಲಾದ ಕಥೆಗಳು ಮಹತ್ವಾದವುಗಳಾಗಿವೆ.

ಗೀತಾ ನಾಗಭೂಷಣ ಅವರ ಕಥೆಗಳ ವಸ್ತುಗಳಲ್ಲಿ ಭಿನ್ನತೆಯನ್ನು ಕುರಿತು ಚರ್ಚಿಸುವುದಾದರೆ ಅವರ ಕಥೆಗಳಲ್ಲಿ ಬಳಕೆಯಾದ ವಸ್ತುಗಳ ಸ್ವರೂಪ ವಿಶಿಷ್ಟವಾದದ್ದು. ಬಡತನ, ದಾರಿದ್ರ್ಯ, ಕ್ರೌರ್ಯ, ದಲಿತ ಹೆಣ್ಣುಮಕ್ಕಳ ಲೈಂಗಿಕ ಶೋಷಣೆ, ಚಿತ್ರಹಿಂಸೆ ಹಾಗೂ ಕೆಳಸಮುದಾಯಕ್ಕೆ ಶಾಪದಂತೆ ಅಂಟಿಕೊಂಡಿರುವ ಬೆತ್ತಲೆಸೇವೆ. ಜೋಗಿಣಿಯಂಥಹ ಸಂಪ್ರದಾಯಗಳನ್ನು ಅತ್ಯಂತ ಪಾರದರ್ಶಕವಾಗಿ ತೆರೆದಿಟ್ಟಿದ್ದಾರೆ. ಹೀಗೆ ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿರುವ ದಲಿತ ಹೆಣ್ಣು/ಗಂಡು ಮಕ್ಕಳ ಚಿತ್ರಣವೇ ಇವರ ಕಥೆಗಳಲ್ಲಿ ದಟ್ಟವಾಗಿ ಕಂಡುಬರುತ್ತದೆ. ಅಲ್ಲದೆ ತಮ್ಮ ಕಥೆಗಳಲ್ಲಿನ ಉತ್ತರ ಕರ್ನಾಟಕದ ಹಳ್ಳಿ ಸೊಗಡಿನ ಭಾಷೆಯನ್ನು ಶೀಲ–ಅಶ್ಲೀಲದ ಪದಗಳನ್ನು ಎಗ್ಗಿಲ್ಲದೆ ಬಳಸುತ್ತಾರೆ. ಝೋಪಡಿಪಟ್ಟಿ ಸಮಾಜದ ಚಿತ್ರಣವನ್ನು ಢಾಳಾಗಿ ಕಣ್ಣಮುಂದೆ ರಾಚುವಂತೆ ಚಿತ್ರಿಸಿದ್ದಾರೆ. ದೇವಿಯ ಹೆಸರಿನ ಮೇಲೆ ನಡೆಸುವ ಸೂಳೆಗಾರಿಕೆ ನಿರ್ಗತಿಕ ಹೆಂಗಸರ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆ ಹಳ್ಳಿಯ ಅಮಾಯಕ ಅನಕ್ಷರಸ್ಥ ಹೆಂಗಸರ ಸಂಕಟಗಳೇ ಗೀತಾ ನಾಗಭೂಷಣರ ಕಥೆಗಳ ಒಟ್ಟು ವಸ್ತುಗಳಾಗಿವೆ.

೭.೨ ಪಾತ್ರಗಳ ಭಿನ್ನತೆ ಮತ್ತು ಸಾಮ್ಯತೆ

ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಈ ಮೂವರ ಕಥೆಗಳಲ್ಲಿರುವ ಪಾತ್ರಗಳು ಭಿನ್ನತೆಯಿಂದ ಕೂಡಿವೆ. ವೀಣಾ ಶಾಂತೇಶ್ವರವರು ಕಥೆಗಳನ್ನು ಸೃಷ್ಟಿಸಿರುವ ಪಾತ್ರಗಳೆಲ್ಲವು ಹೆಣ್ಣುಪಾತ್ರಗಳೇ ಹೆಚ್ಚು. ಒಂದು ಹೆಣ್ಣು ಎಷ್ಟೆಲ್ಲಾ ಪಾತ್ರಗಳನ್ನು ಮಾಡಬಲ್ಲಳು, ಏನೇನೆಲ್ಲಾ ಪಾತ್ರಗಳಾಗಿ ಜೀವ ತುಂಬಬಲ್ಲಳು ಎಂಬುದನ್ನು ಅವರ ಕಥಾಸಂಕಲನಗಳನ್ನು ಅಧ್ಯಯನಿಸಿದಾಗ ತಿಳಿದುಬರುತ್ತದೆ. ತಾಯಿ, ಮಗಳು, ಅತ್ತೆ, ಸೊಸೆ, ಅಜ್ಜಿ, ಹೆಂಡತಿ, ತಂಗಿ, ಅಕ್ಕ, ನಾದಿನಿ ಇನ್ನಿತ್ಯಾದಿ ಪಾತ್ರಗಳಲ್ಲಿ ನಟಿಸಬಲ್ಲಳು. ವೀಣಾ ಶಾಂತೇಶ್ವರರವರು ಕಥೆಗಳಿಗೆ ಆಯ್ಕೆ ಮಾಡಿಕೊಂಡ ಪಾತ್ರಗಳೆಲ್ಲವೂ ವಿದ್ಯಾವಂತರಾಗಿದ್ದಾರೆ. ಯಾವುದಾದರೊಂದು ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರಾಗಿದ್ದಾರೆ. ಆಧುನಿಕ ಶಿಕ್ಷಣದ ಪರಿಜ್ಞಾನವಿರುವಂತಹ ಪಾತ್ರಗಳೇ ಹೆಚ್ಚಾಗಿವೆ. ಮದುವೆಯಾದವರು ಇಲ್ಲವೆಂದರೆ ಮದುವೆಯಾಗಲು ಸಿದ್ಧವಿರುವತಂಹ

ವಿದ್ಯಾವಂತ ಸ್ತ್ರೀಪಾತ್ರಗಳೇ ಇವರ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಉದಾಹರಣೆಗೆ: ವೀಣಾ ಶಾಂತೇಶ್ವರವರ 'ಕೊನೆಯದಾರಿ' ಕಥೆಯಲ್ಲಿ ನಾಯಕಿ ಲೀಲಾ ತನ್ನ ಬದುಕಿನಲ್ಲಿ ಕಂಡುಂಡ ಅನುಭವಗಳನ್ನು ಕನಸುಗಳನ್ನು ಡೈರಿಯಲ್ಲಿ ಬರೆದ ತುಣುಕುಗಳ ಮೂಲಕ ಕಟ್ಟಿಕೊಳ್ಳುತ್ತಾರೆ. ಕುಡುಕ, ಪಶುಸದೃಶ ಗಂಡನ ಹಿಂಸೆಗಳಿಗೆ ಬೇಸತ್ತು ಅವನಿಂದ ತನ್ನ ಸಂಬಂಧಗಳನ್ನು ಹರಿದು ಕೆಲಸಕ್ಕೆ ಸೇರುತ್ತಾಳೆ. ಅವಳ ಜೀವನದ ಒಂದೇ ಒಂದು ಹಸಿಬಯಕೆ ಎಂದರೆ 'ತಾಯ್ತನ' ಗಂಡನಿಲ್ಲದೆ ತನ್ನ ಬದುಕಿನಲ್ಲಿ ಪ್ರವೇಶಿಸಿದ ಅನೇಕ ಗಂಡುಗಳಿಂದ ಆಕೆ ನಿರೀಕ್ಷಿಸುವುದು ಕೇವಲ 'ಮಗು'ವೊಂದನ್ನು. ಆದರೆ ಅದನ್ನು ನೀಡಲು ಒಪ್ಪದ ಪುರುಷ ಜಗತ್ತಿನ ಮೇಲೆ ಅವಳಿಗೆ ಸಿಟ್ಟು. ಲೈಂಗಿಕ ಸುಖಕ್ಕಾಗಷ್ಟೇ ಆಪೇಕ್ಷಿಸುವ ಗೋವಿಂದಮೂರ್ತಿಯಾಗಲಿ, ವಿನಯಸಾಳಕರ ಆಗಲಿ, ಅಥವಾ ಬಾಸ್ ಆಗಲಿ ವಿಲಿಯಂಸ್ ಆಗಲಿ ಈ ಎಲ್ಲಾ ಪುರುಷಪಾತ್ರಗಳ ಧೋರಣೆ ಒಂದೇ ಆಗಿದೆ. ಇಲ್ಲಿ ಸ್ತ್ರೀಯು ಪುರುಷಲೋಕಕ್ಕೆ ಸವಾಲೆಸೆಯುತ್ತಿದ್ದಾಳೆ ಆ ಮುಖಾಂತರವಾಗಿ ಹೆಣ್ಣು ಸಬಲೆಯೇ ಹೊರತು ಅಬಲೆಯಲ್ಲ ಎಂಬುದನ್ನು ತಿಳಿಸುವ ನಡೆ ವೀಣಾ ಶಾಂತೇಶ್ವರವರದು.

ವೈದೇಹಿಯವರು ಕಥೆಗಳಿಗೆ ಬಳಸಿಕೊಂಡಿರುವ ವಿಷಯ ವಸ್ತು ಮುಖ್ಯವಾಗಿ ಹೆಣ್ಣು. ವೈದೇಹಿಯವರ ಕಥೆಗಳುದ್ದಕ್ಕೂ ಹೆಣ್ಣುಪಾತ್ರ ಮತ್ತು ಗಂಡುಪಾತ್ರಗಳು ಸಹಜವಾಗಿ ಕಾಣಿಸಿಕೊಳ್ಳುತ್ತವೆ. ಇವರಿಗೆ ಪ್ರಮುಖವಾಗಿರುವ ವಿಷಯವಸ್ತು ಪಾತ್ರ, ಕಥೆಯ ವಸ್ತು ಪಾತ್ರವಾಗಿರುವುದಿಲ್ಲ. ಬದಲಾಗಿ ಗಮನಕ್ಕೆ ಬಾರದೆ ಇರುವ, ಗಮನ ಸೆಳೆಯದಿರುವ ವಿಷಯ ವಸ್ತು, ಪಾತ್ರಗಳು ಇವರ ಬರೆಹದ ಮುಖ್ಯ ಘಟಕಗಳಾಗುತ್ತವೆ. 'ಮದುವೆ ಹೆಣ್ಣು ಸೀರೆ', 'ಗುಲಾಬಿ ಟಾಕೀಸು ಮತ್ತು ಸಣ್ಣಅಲೆಗಳು', 'ಅಮ್ಮಜ್ಜಿಯೆಂಬ ನೆನಪು', 'ಅಕ್ಕು' ಇಂತಹ ಹಲವಾರು ಕಥೆಗಳಲ್ಲಿ ಸಮಾಜಕ್ಕೆ ಮುಖ್ಯವಾಗದೇ ಇರುವ ಪಾತ್ರಗಳು, ಕಥೆಗಳ ವಸ್ತುಗಳಾಗಿರುವುದನ್ನು ಮನಗಾಣಬಹುದಾಗಿದೆ. ಉದಾಹರಣೆಗೆ: 'ಒಂದು ಅಪರಾಧ ತನಿಖೆ' ಎಂಬ ಕಥೆಯಲ್ಲಿ ವಿದ್ಯಾವಂತೆ ಪದವೀಧರೆ ಪಾತ್ರವಾದ ಕುಸುಮ ಮತ್ತು ಬಾಬಿ ಇಬ್ಬರೂ ಮದುವೆಯ ಚೌಕಟ್ಟಿನಲ್ಲಿರುವವರು. ಮದುವೆಯಿಂದ ತಾನು ಸ್ವತಃ ಹೆಚ್ಚೇನೂ ಸುಖ ನೆಮ್ಮದಿಗಳನ್ನು ಪಡೆಯದಿದ್ದರೂ ಬಾಬಿಗೆ ತನ್ನ ಮಗಳಿಗೆ ಮದುವೆಯ ಎಲ್ಲಾ ಸುಖ ನೆಮ್ಮದಿಗಳನ್ನು ಹಾಗೂ ಸುರಕ್ಷತೆಗಳನ್ನು ಒದಗಿಸುವ ಆಸೆ. ಕುಸುಮಾಳ ದಾಂಪತ್ಯ ಕುರಿತ ಹಲವು ಪ್ರಶ್ನೆಗಳನ್ನವಳು ಎತ್ತುತ್ತಾಳೆ. 'ಹೌದು ನೀವೀಗ ಇಲ್ಲಿಯೇ ಇರುವುದಂತೆ? ಗಂಡನನ್ನು ಬಿಟ್ಟರಂತೆ' ಎಂಬ ಪ್ರಶ್ನೆಯನ್ನು ಕೇಳುತ್ತಲೇ ಕುಸುಮ ಎಂಬ ಕಥಾನಾಯಕಿ ಮನೆಯ ಒಳಕ್ಕೆ ಕಾಲಿಡುತ್ತಾಳೆ. ಬಾಬಿ ಎಂಬ ಮನೆಗೆಲಸದ ಹೆಣ್ಣು, ಈ ನಾಟಕೀಯ ಪ್ರವೇಶ ಕುಸುಮಳ ಮನೆಗೆ ಸೀಮಿತವಾಗದೆ,

ಅವಳ ಮನಸ್ಸಿಗೆ ಇಡುವ ದಾಳಿಯಾಗಿ ಕಥೆಯು ಬೆಳೆಯುತ್ತಾ ಹೋಗುತ್ತದೆ. ಕಥೆಗೆ ಮುಖ್ಯವಾಗುವುದು ಕುಸುಮಾಳ ದಾಂಪತ್ಯದ ಪ್ರತ್ಯಕ್ಷಿಕತೆ ಏನು ಎಂಬುದಲ್ಲ. ಬದಲಾಗಿ ಅಡುಗೆ ಮಾಡುವ ನಾಗಮ್ಮ, ಮನೆಕೆಲಸದ ವೃತ್ತಿಯವಳಾಗಿರುವ ಬಾಬಿ ಇವರಿಬ್ಬರೂ ಸಾಂಸಾರಿಕ ಬದುಕುಗಳ ತುಂಬಾ ಎದುರಿಸಿದ ಸಂಕಟಗಳು. ಅವುಗಳನ್ನು ಆ ವಿದ್ಯಾವಂತ ಹೆಣ್ಣುಮಕ್ಕಳಿಬ್ಬರೂ ಎದುರಿಸಿ ದಿಟ್ಟವಾಗಿ ಬದುಕಿದ ಬಗೆಗಳು ಕಥೆಯ ಬಹುಭಾಗವನ್ನು ಆಕ್ರಮಿಸಿರುತ್ತದೆ.

ವೀಣಾ ಶಾಂತೇಶ್ವರ ಹಾಗೂ ವೈದೇಹಿಯವರು ಒಂದೇ ರೀತಿಯ ಕಥಾವಸ್ತುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. (ಕೆಲವು ಕಥೆಗಳನ್ನು ಹೊರತುಪಡಿಸಿ) ಇವರಿಬ್ಬರ ಕಥೆಗಳಲ್ಲಿ ವಿಶೇಷವೆನೆಂದರೆ ಹಸಿವುಮುಕ್ತ ಸಮಾಜವನ್ನು ಗುರುತಿಸಬಹುದಾಗಿದೆ. ಕೆಲವು ಇತಿಹಾಸ ಪ್ರಸಿದ್ಧವಾದ ಪಾತ್ರಗಳನ್ನು ಇಟ್ಟುಕೊಂಡು ಕಥೆ ರಚಿಸಿದ್ದಾರೆ. ಅದರಲ್ಲೂ ಒಂದೇ ತರಹದ ವಸ್ತು ವಿಷಯವನ್ನಿಟ್ಟುಕೊಂಡು ಕಥೆ ಕಥೆ ರಚಿಸಿದ್ದಾರೆ. ವೀಣಾ ಶಾಂತೇಶ್ವರರವರು ಕಾಳಿದಾಸನ ಶಕುಂತಲೆ ನಾಟಕವನ್ನಿಟ್ಟುಕೊಂಡು 'ನಿರಾಕರಣೆ' ಎಂಬ ಕಥೆ ರಚಿಸಿದ್ದಾರೆ. ವೈದೇಹಿಯವರು ಇದೇ ಕಾಳಿದಾಸನ ಶಾಕುಂತಲೆ ನಾಟಕವನ್ನಿಟ್ಟುಕೊಂಡು 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಎಂಬ ಶೀರ್ಷಿಕೆಯಡಿಯಲ್ಲಿ ಕಥೆ ರಚಿಸಿದ್ದಾರೆ. ಈ ಎರಡೂ ಕಥೆಗಳು ತುಂಬಾ ಅದ್ಭುತವಾಗಿ ಅಭಿವ್ಯಕ್ತಿಗೊಂಡಿವೆ. ನಮ್ಮ ಸಾಹಿತ್ಯದ ಪರಿಜ್ಞಾನವಿರುವಂತಹ ಹಾಗೂ ಇಂಗ್ಲೀಷ್ ಸಾಹಿತ್ಯದ ಪರಿಚಯದೊಂದಿಗೆ ಅತ್ಯಂತ ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. 'ನಿರಾಕರಣೆ' ಕಥೆಯ ಹಂದರದೊಳಗೆ ಬರುವ ಶಾಕುಂತಲೆ, ದುಶ್ಯಂತ ಮಹಾರಾಜ, ಕಣ್ವ ಮಹರ್ಷಿ, ಮೇನಕೆ, ಭರತಕುಮಾರ, ಅರಮನೆ, ರಾಜವೈಭವ, ಅಂತ:ಪುರ ಇವುಗಳ ಜೊತೆಗೆ ಅತ್ಯಂತ ಪ್ರಮುಖವಾದವೆಂದರೆ ಈ ಕಥೆಯಲ್ಲಿ ಬರುವ ಉಂಗುರ. ಈ ಉಂಗರವೇ (ಕಾಳಿದಾಸರ ಶಾಕುಂತಲೆ ನಾಟಕದ ಜೀವಾಳ) ನಿರಾಕರಣೆ ಕಥೆಯ ಜೀವಾಳವೂ ಆಗಿದೆ. ಆದರೆ ಉಂಗುರದ ವಿಷಯದಲ್ಲಿ ಶಾಕುಂತಲೆಯು ಅತ್ಯಂತ ಕಟುವಾದ ನಿರ್ಧಾರವನ್ನು ತೆಗೆದುಕೊಂಡು ಕೊನೆಗೆ ತನ್ನ ತನವನ್ನು ಬಿಟ್ಟುಕೊಡದೇ ತನ್ನ ಪತಿಯಾದ ದುಶ್ಯಂತ ಮಹಾರಾಜನನ್ನೇ ನಿರಾಕರಿಸುವ ವ್ಯವಸ್ಥೆಗೆ ಬರುತ್ತಾಳೆ. ಶಾಕುಂತಲೆ ದುಶ್ಯಂತನನ್ನು ನಿರಾಕರಿಸಿದಾಗ ರಾಜನು ನಿಸ್ಸಹಾಯಕನಾಗಿ ನಿಲ್ಲುತ್ತಾನೆ. ತಿರಸ್ಕರಿಸಿದಂತಹ ಸಮಯ ಅತ್ಯಂತ ಮುಖ್ಯವಾದದ್ದು. ಆ ಕ್ಷಣವನ್ನು ನೆನೆಸಿಕೊಂಡರೆ ಎಂತಹ ವ್ಯಕ್ತಿಯಾದರೂ ನಿರುತ್ಸಕನಾಗುವ ಸಂದರ್ಭ ಬಂದೊದಗುತ್ತದೆ.

ಈ ಕಥೆಯ ಹಿಂದಿನ ಕಥೆಯನ್ನು ವೈದೆಹಿಯವರು ರಚಿಸಿದ್ದಾರೆ. 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಎಂಬ ಕಥೆಯು ನಿರಾಕರಣೆ ಕಥೆಯ ಹಿಂದಿನ ಕಥೆಯನ್ನು

ಒಳಗೊಂಡಿದೆ. ವೈದೇಹಿಯವರು ಸ್ತ್ರೀಯನ್ನು ಮೋಹಕ್ಕೀಡು ಮಾಡುವುದರ ಮೂಲಕವಾಗಿ ಹೆಣ್ಣಿನ ಮನದಾಳದ ಇಂಗಿತವನ್ನು ವ್ಯಕ್ತಪಡಿಸುತ್ತಾರೆ. ಈ ಕಥೆಯನ್ನು ಹೆಣ್ಣು-ಗಂಡುಗಳಷ್ಟೇ ಪಾತ್ರಗಳಾಗಿರದೆ ಶಕುಂತಲೆಯ ಸುತ್ತ ಇರುವ ಪರಿಸರ, ಕಣ್ವಮಹರ್ಷಿಗಳ ಆಶ್ರಮ, ಕಾಡು, ಸಮಯ, ಸ್ಥಳ, ಮುಂತಾದವುಗಳು ಕಥೆಗೆ ಮೆರಗನ್ನು ತಂದುಕೊಡುತ್ತವೆ. ಸಮಯ, ಸ್ಥಳ, ಮುಂತಾದವುಗಳು ಕಥೆಯ ಪಾತ್ರಧಾರಿಗಳು ಎನಿಸುತ್ತವೆ. ಅದರಂತೆಯೇ ಬರೆಹ ರಚನೆಗೊಳ್ಳುತ್ತದೆ. ಇದರಂತೆಯೇ ದುಶ್ಯಂತನ ಪಾತ್ರ ಶಾಕುಂತಲೆ ಎಂಬ ಪಾತ್ರದೊಂದಿಗೆ ವನವಿಹಾರದ ಸಮಯದಲ್ಲಿ ಕೂಡಿಕೊಳ್ಳುವುದು ಒಂದು ರೀತಿಯ ಅಮೋಘವಾದ ಸುಸಂದರ್ಭವೆನಿಸುತ್ತದೆ. ವಿಶಿಷ್ಟ ವಿಭಿನ್ನ ವಸ್ತು ಪಾತ್ರಗಳನ್ನಿಟ್ಟುಕೊಂಡು ವೈದೇಹಿಯವರು ಸರಿ ಸುಮಾರು ನೂರಕ್ಕೂ ಹೆಚ್ಚು ಕಥೆಗಳನ್ನು ರಚಿಸಿ ಕನ್ನಡ ಸಾಹಿತ್ಯದ ಸಹೃದಯ ಲೋಕಕ್ಕೆ ನೀಡಿ ಕಥಾಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಗೀತಾ ನಾಗಭೂಷಣ ಅವರು ಕಥೆಗಳಿಗೆ ಆಯ್ಕೆ ಮಾಡಿಕೊಂಡ ವಸ್ತು ಹಾಗೂ ಪಾತ್ರಪ್ರಪಂಚ ಅತ್ಯಂತ ವಿಶಿಷ್ಟವಾದವುಗಳು. ದಲಿತ-ಬಂಡಾಯದ ಕಾಲಘಟ್ಟದಲ್ಲಿ ಬರೆಯತೊಡಗಿದ ಗೀತಾ ನಾಗಭೂಷಣ ಅವರು ನೆಲದ ಭಾಷೆ, ಪ್ರಾದೇಶಿಕತೆಯ ಹಿನ್ನಲೆಯನ್ನಿಟ್ಟುಕೊಂಡು ಕಥೆಗಳಿಗೆ ವಸ್ತು ಮತ್ತು ಪಾತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಹಿಂದುಳಿದ ಪ್ರದೇಶದಲ್ಲಿರುವ ಝೋಪಡಿ ಪಟ್ಟಿಗಳಲ್ಲಿ ವಾಸಿಸುವ, ಕೊಳಚೆ ಪ್ರದೇಶಗಳಲ್ಲಿ ಕೆಲಸ ಮಾಡುವ, ಭೀಕ್ಷೆ ಬೇಡುವ, ಕಸ ಆರಿಸುವ, ಕೂಲಿಕಾರ್ಮಿಕರಾಗಿ ಸೇವೆ ಸಲ್ಲಿಸುವ, ಮತ್ತೊಬ್ಬರ ಹೊಲಗಳಲ್ಲಿ ಕೆಲಸ ಮಾಡುವ, ಜೀತ ಇರುವ, ನಿರ್ಗತಿಕವಾಗಿರುವವರ ಬದುಕನ್ನು ಕಥೆಗಳಲ್ಲಿ ದಾಖಲಿಸುತ್ತಾರೆ. 'ಬದುಕು ನುಂಗುವ ಮಂದಿ' ಎಂಬ ಸಣ್ಣಕಥೆಯನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಕಜರಿಯು ಭಿಕ್ಷೆ ಬೇಡುವ, ಕಸತೆಗೆಯುವ, 'ಹೂ' ಮರಾಟ ಮಾಡುವ ಕೆಲಸ ಆಯ್ದುಕೊಳ್ಳುತ್ತಾಳೆ. ಕಜರಿಯು ಸಮಾಜದಲ್ಲಿ ದಿಟ್ಟಹೆಣ್ಣಾಗಿ ನಿಲ್ಲುತ್ತಾಳೆ. ಗೀತಾ ನಾಗಭೂಷಣ ಅವರು ಕಥೆಗಳಲ್ಲಿ ಹೆಣ್ಣನ್ನು ಉದಯೋನ್ಮುಖತೆಯ ಕಡೆ ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ.

೭.೩ ಅಕ್ಷರಸ್ಥರು – ಅನಕ್ಷರಸ್ಥರು

ವೀಣಾಶಾಂತೇಶ್ವರ, ವೈದೇಹಿ ಮತ್ತು ಗೀತಾನಾಗಭೂಷಣರವರ ಕಥೆಗಳಲ್ಲಿ ಎರಡು ಅಂಶಗಳು ಪ್ರತಿಫಲನವಾಗುತ್ತವೆ. ಅಕ್ಷರಸ್ಥ-ಅನಕ್ಷರಸ್ಥರು ಮೂವರೂ ಕಥೆಗಾರ್ತಿಯರ ಕಥೆಗಳಲ್ಲಿ ಕಂಡುಬರುವುದು ತುಂಬಾ ವಿರಳ. ಆದರೆ ವೀಣಾ ಶಾಂತೇಶ್ವರವರ ಕಥೆಗಳಲ್ಲಿ ಭಾಗಶಃ ಕಂಡು ಬರುವುದನ್ನು ಮನಗಾಣಬಹುದು. ವೀಣಾ ಅವರ ಕಥೆಗಳುದ್ದಕ್ಕೂ ಕಾಣಿಸಿಕೊಳ್ಳುವಂತಹ ಹೆಣ್ಣುಗಳು ಸುಶಿಕ್ಷಿತರು, ಉದ್ಯೋಗಸ್ಥರು. ಮುಂಬಯಿಯಂತಹ

ನವನಾಗರಿಕ ಜಗತ್ತಿನಲ್ಲಿ ಬದುಕುತ್ತಿರುವವರು. ಹೀಗಾಗಿ ಸಹಜವಾಗಿ ಇವರ ಆಲೋಚನೆ, ನಡವಳಿಕೆಯ ಮೇಲೆ ಪಾಶ್ಚಾತ್ಯ ಪ್ರಭಾವ ಬಿದ್ದಿರುತ್ತದೆ. ಅಕ್ಷರಸ್ಥ ಕಥೆಯಲ್ಲಿನ ವ್ಯಕ್ತಿಗಳು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಅರ್ಥಮಾಡಿಕೊಳ್ಳಬಲ್ಲರು. ತಮಗೆ ಸಂವಿಧಾನದಲ್ಲಿ ನೀಡಲ್ಪಟ್ಟಿರುವ ಹಕ್ಕುಗಳ ಬಗೆಗೆ ಯೋಚಿಸಬಲ್ಲರು. ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದು ಸ್ವಾವಲಂಬಿಗಳಾಗಿದ್ದಾರೆ. ಇದರಿಂದ ಅವರಿಗೆ ನಿಧಾನವಾಗಿಯಾದರೂ ಗುರಿಯನ್ನು ನಾವೇ ತಲುಪಬಲ್ಲೆವು ಎಂಬ ಆತ್ಮವಿಶ್ವಾಸ ಬೆಳೆಸಿಕೊಂಡಿದ್ದಾರೆ. ಇಂತಹ ಅಕ್ಷರಸ್ಥ ಪಾತ್ರಗಳು ಕೆಲವು ಕಡೆ ಗೆಲ್ಲುತ್ತವೆ ಕೆಲವು ಸಲ ಸೋಲುತ್ತವೆ. ಆದರೆ ಸೋಲು–ಗೆಲುವುಗಳೇನೇ ಇರಲಿ ಸೃಜನಶೀಲತೆಯ ಹೊಸ ಪರಿಭಾಷೆಯನ್ನು ಆಧುನಿಕ ಮಹಿಳಾ ಚರಿತ್ರೆಯಲ್ಲಿ ಮೂಡಿಸುವ ಪ್ರಯತ್ನ ವೀಣಾ ಶಾಂತೇಶ್ವರ ಅವರು ಮಾಡಿದ್ದಾರೆ. ಪುರಾತನ ಕಾಲದ ಹೆಣ್ಣಿನ ಜೀವನ ವಹಿವಾಟಿಗಿಂತ ವೀಣಾರವರು ಸೃಷ್ಟಿಸಿರುವ ಹೆಣ್ಣುಗಳು ಮುರಿದು ಕಟ್ಟಿಕೊಳ್ಳುವ ಪ್ರಯತ್ನ ಮಾಡಿರುವುದನ್ನು ಮನಗಾಣಬಹುದು.

'ಮುಳ್ಳುಗಳು' ಕಥೆಯಲ್ಲಿ ಬರುವ ಶಾಂತಿ, ಪ್ರೊ. ದೇಸಾಯಿ, ಶಂಕರಶೆಟ್ಟಿ, ವಡಗಾಂವಕರ ಇನ್ನೂ ಮುಂತಾದ ಪಾತ್ರಗಳೆಲ್ಲವು ಅಕ್ಷರವನ್ನು ಒಳಗೊಂಡು ಸಾಮಾಜಿಕ ಪರಿಜ್ಞಾನದ ಜೊತೆಗೆ ತಮ್ಮ–ತಮ್ಮ ತನಗಳನ್ನು ಕುರಿತು ಅರಿವಿರುವಂತಹವರು. ಬೌದ್ಧಿಕವಾಗಿ ಗಟ್ಟಿಯಾಗಿರುವವರು, ಸಮಾಜವನ್ನು ತಿದ್ದುವಂತಹ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. 'ಅತಿಥಿ' ಕಥೆಯಲ್ಲಿ ಬರುವ ಪ್ರೊ. ಲೀಲಾವತಿ ಯಾವುದೋ ಕಾರಣಕ್ಕಾಗಿ ಮದುವೆಯಾಗದೆ ಉಳಿದು, ಹೆಣ್ಣುಮಕ್ಕಳ ಹಾಸ್ಟೆಲಿನ ವಾರ್ಡನ್ ಆಗಿ ಸೇವೆ ಸಲ್ಲಿಸುತ್ತಿದ್ದ ಅಕ್ಷರಸ್ಥ ಮಹಿಳೆಯಾಗಿದ್ದಾಳೆ. ಪ್ರೊ. ಲೀಲಾವತಿ ಹಾಸ್ಟೆಲಿನ ವಾರ್ಡನ್ ಆದಾಗ ಅಕ್ಷರಸ್ಥ ಹದಿಹರಿಯದ ಹೆಣ್ಣುಗಳ ಹೊಸ ಪ್ರಣಯ, ಮುಗ್ಧತೆ, ಬದುಕಿನ ಚೆಲುವನ್ನು ಮೊಗೆದು ಕುಡಿಯುವಂತೆ ಅನರಾಡುವ ಚೆಲ್ಲಾಟಗಳು, ಜೀವಂತಿಕೆ, ಇವುಗಳನ್ನು ಕಂಡು, ಕಳೆದುಕೊಂಡ ಬದುಕಿನ ಕ್ಷಣಗಳಿಂದಾಗಿ ಹುಡುಗಿಯರ ಮೇಲೆ ಸೇಡು ತೀರಿಸಿಕೊಳ್ಳುವ 'ಸ್ಯಾಡಿಸ್ಟ್'ಳ ಕಥೆಯಾಗಿ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ. 'ಕಾಯುತ್ತಲಿದ್ದ ಕರಿಯ' ಎನ್ನುವ ಕಥೆಯಲ್ಲಿ ಕರಿಯನಿಗೆ ಹುಟ್ಟಿದಂತಹ ಲಕ್ಷ್ಮೀ ಎಂಬಾಕೆ ತನ್ನ ಮಗಳನ್ನು ಕರಿಯ ಚೆನ್ನಾಗಿ ವಿದ್ಯಾಭ್ಯಾಸ ಕೊಡಿಸತೊಡಗಿದ, ಲಕ್ಷ್ಮೀ ಗೌಡರ ಮಕ್ಕಳ ಜೊತೆಯಲ್ಲೇ ವಿದ್ಯಾವಂತೆಯಾದಳು. ಆಕೆ ಸ್ಥಳೀಯ ಮಟ್ಟದಿಂದ ಜಿಲ್ಲಾ, ರಾಜ್ಯ, ಅಂತರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾಭ್ಯಾಸ ಪಡೆದು ಬೇರೊಂದು ದೇಶದಲ್ಲಿ ವೈದ್ಯಕೀಯ ವೃತ್ತಿಯನ್ನು ಪಡೆಯುತ್ತಾಳೆ. ವೀಣಾ ಅವರಿಗೆ ಆಧುನಿಕ ಕುರಿತ ಪರಿಪೂರ್ಣವಾದ ಪರಿಜ್ಞಾನವಿದೆ ಎಂಬುದನ್ನು ಈ ಸನ್ನಿವೇಶ ಅರ್ಥೈಸುತ್ತದೆ.

ವೈದೇಹಿಯವರ ಕಥೆಗಳನ್ನು ಅಧ್ಯಯನಿಸಿದಾಗ ನಮಗೆ ಅಕ್ಷರಸ್ಥರು-ಅನಕ್ಷರಸ್ಥರು ಯಾರು ಎಂಬುದನ್ನು ತಿಳಿಯುವುದು ಸಂಕೀರ್ಣವಾದ ವಿಷಯವಾಗಿದೆ. ಏಕೆಂದರೆ ಅಕ್ಷರಸ್ಥರು ಎಂದರೆ ಅಕ್ಷರವನ್ನು ಬಲ್ಲವರು. ಇವರ ಕಥೆಗಳಲ್ಲಿ ಅಕ್ಷರಸ್ಥ ಮಹಿಳೆಯರ ಸಂಖ್ಯೆ ತುಂಬಾ ವಿರಳ. ಇವರದು ಮೂಲತಃ ಕುಂದಾಪುರ ಮಲೆನಾಡಿನ ಪ್ರದೇಶ. ಅಲ್ಲಿಯ ಜನರು ತುಂಬಾ ಬುದ್ಧಿವಂತರು. ಜ್ಞಾನವುಳ್ಳವರು, ಸೂಕ್ಷ್ಮಮತಿಗಳೂ ಸಮಾಜವನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಭಾವಿಸುವಂತಹ ಬುದ್ಧಿವುಳ್ಳವರೆಂದರೆ ತಪ್ಪಾಗಲಾರದು. ವೈದ್ಯೇಹಿವರ ಕೆಲ ಕಥೆಗಳಲ್ಲಿ ಅಕ್ಷರಸ್ಥ ಸಮಾಜವನ್ನು ಗುರುತಿಸಬಹುದು. ಆದರೆ ಗುರುತಿಸಿಕೊಂಡ ಅಕ್ಷರಸ್ಥ ಮಹಿಳೆಯರ ಕಥೆಯಲ್ಲಿ, ಬದಲಾಗಿ ಅವರಿಂದ ಬರೆಸಲ್ಪಟ್ಟ-ಹೆಣಿಸಲ್ಪಟ್ಟ ಕಥೆಗಳಾಗಿವೆ. 'ಕ್ರೌಂಚಪಕ್ಷಿಗಳು' ಕಥೆಯಲ್ಲಿ ಬರುವ 'ಅರುಂಧತಿ' ಹೆಚ್ಚು ಓದಿದವಳು. ಸಂಶೋಧನೆಗಾಗಿ ದೆಹಲಿಗೆ ಹೋದವಳು. ಅವಳ ಜೊತೆಗೆ ಹೋದ 'ಅನಿತಾ' ಎಂಬ ಪಾತ್ರ, 'ವಿಶಾಖಾಬೆನ್' 'ಗಾಂಧೀಜಿ' ಇವೆಲ್ಲ ಪಾತ್ರಗಳು ಅಕ್ಷರಸ್ಥ ಪಾತ್ರಗಳಾಗಿವೆ. ಈ ಕಥೆಯ ಆಶಯವೇನೆಂದರೆ ಅಕ್ಷರ ಕಲಿತವರಷ್ಟೇ ಜಿವಿಸುತ್ತಿಲ್ಲ, ಅಕ್ಷರ ಕಲಿಯದವರೂ ಎಲ್ಲಿ ಬೇಕಾದರೂ ಜೀವಿಸಬಲ್ಲರು ಎಂಬುದು. ವಿದ್ಯಾವಂತ ಸಮಾಜದ ಜೊತೆಯಲ್ಲಿ ಅವಿದ್ಯಾವಂತ ಸಮಾಜವೂ ಕೂಡ ತುಳಕು ಹಾಕಿಕೊಂಡಿರುತ್ತದೆ ಎಂಬುದು ಸತ್ಯದ ಮಾತು. ಈ ನವಸಮಾಜದ ಭಾರತದಲ್ಲಿ ಕೇವಲ ಕಲಿತವರಿಗಷ್ಟೇ ಕಲಿತನವಿದೆ ಎಂದರೆ ತಪ್ಪಾಗುತ್ತದೆ. ಕಲಿಯದವನು ದಡ್ಡತನವಿದ್ದರೂ ಸಣ್ಣತನ ವಿಲ್ಲದಂತೆ ಜೀವನ ನಡೆಸಬಲ್ಲನು ಎಂಬುದು ಅರ್ಥವಾಗುತ್ತದೆ. 'ಗುಲಾಬಿ ಟಾಕೀಸು ಮತ್ತು ಸಣ್ಣಅಲೆಗಳು' ಕಥೆಯಲ್ಲಿ ಬರುವ ಗುಲಾಬಿ ಅಕ್ಷರಸ್ಥಳಲ್ಲ. ಅನಕ್ಷರಸ್ಥಳಾಗಿದ್ದರೂ ಒಳ್ಳೆತನವಿರುವ ಗುಲಾಬಿಯು ಟಾಕೀಸಿನ ಗೇಟ್‌ಕೀಪರಾಗಿ ಪ್ರಾಮಾಣಿಕವಾಗಿಯೇ ಕಾರ್ಯನಿರ್ವಹಿಸುತ್ತಾಳೆ.

ಗ್ರಾಮ ಮತ್ತು ನಗರಗಳು

ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ ಈ ಮೂವರು ಕತೆಗಾರ್ತಿಯರು ವಿಭಿನ್ನವಾದ ಪ್ರಾದೇಶಿಕ ಹಿನ್ನಲೆಯಿಂದ ಬಂದವರು ಜೊತೆಗೆ ಗುರುತಿಸಿಕೊಂಡವರು. ವೀಣಾ ಶಾಂತೇಶ್ವರರು ಮುಂಬೈ ಕರ್ನಾಟಕ ಭಾಗದಿಂದ ಗುರುತಿಸಲ್ಪಟ್ಟವರು ಇವರು ಬಹುತೇಕ ಕಥೆಗಳಲ್ಲಿ ಅಭಿವ್ಯಕ್ತಿಗೊಂಡಿರುವ ಅಥವಾ ಅನಾವರಣಕ್ಕೊಳಪಟ್ಟಿರುವ ಸ್ಥಳಗಳು ನಗರೀಕರಣಕ್ಕೆ ಒಳಗಾದ ನಗರ ಪ್ರದೇಶಗಳು ಉದಾಹರಣೆಗೆ ವೀಣಾ ಶಾಂತೇಶ್ವರ 'ತಿರುಗಿ ಹೋದನು' ಕಥೆಯಲ್ಲಿ ಬರುವ ಹುಬ್ಬಳ್ಳಿ, ನೀರಾ, ಸಿತಾರ ಲೊಂಡಾ, ಪುನಾ ಈ ಸ್ಥಳಗಳನ್ನು ಗಮನಿಸಿದರೆ ಆಧುನೀಕರಣಕ್ಕೆ

ಒಳಗಾದ ಪ್ರದೇಶಗಳೆಂದೆನಿಸುತ್ತವೆ. ಇವರ ಎಲ್ಲಾ ಕಥೆಗಳ ಕಥಾನಾಯಕಿಯರುಗಳು ನಗರ ಪ್ರದೇಶದ ಸಂಸ್ಕೃತಿಗೆ ಒಳಗಾದವರು, ವಿದ್ಯಾವಂತರು, ತಿಳುವಳಿಕೆಯುಳ್ಳವರು, ಉದ್ಯೋಗಸ್ಥ ಮಹಿಳೆಯರು ಜೊತೆಗೆ ಆರ್ಥಿಕವಾಗಿ ಸಬಲರಾದವರು ಇವರು ಕೆಲ ಪ್ರದೇಶಗಳಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕೊಸ್ಕರ ತಮ್ಮನ್ನು ತಾವು ತೊಡಗಿಸಿಕೊಂಡವರಾಗಿದ್ದಾರೆ. ಕೆಲವೊಂದು ಧಾರ್ಮಿಕ ವಿಚಾರಗಳನ್ನು ಗಮನಿಸುವ ಸಂದರ್ಭದಲ್ಲಿ ಹಳ್ಳಿ ಅಥವಾ ಗ್ರಾಮಗಳ ಸಂಸ್ಕೃತಿ ಇವರ ಕಥೆಗಳಲ್ಲಿ ಅಭಿವ್ಯಕ್ತಿಗೊಂಡಿದೆ. 'ಹನುಪುರದ ಹನುಮಜಯಂತಿ' ಕಥೆಯಲ್ಲಿ ಕಂಡುಬರುವ ಜಾತಿ ಜಾತಿಗಳ ನಡುವಿನ ಕಲಹ ಧಾರ್ಮಿಕ ವಿಧಿವಿಧಾನಗಳು, ಪೂಜೆ ಪುನಸ್ಕಾರಗಳು, ವಿಭಿನ್ನ ಆಚಾರಣೆಗಳು ಇಲ್ಲಿ ಅಭಿವ್ಯಕ್ತಿಗೊಂಡಿರುವುದು ಆ ಪ್ರದೇಶ ಪ್ರಾದೇಶಿಕತೆಯನ್ನು ಗುರುತಿಸುವುದಾಗಿದೆ.

ವೈದೇಹಿಯವರು ಮೂಲತ: ಕರ್ನಾಟಕದ ಕರಾವಳಿ ಪ್ರದೇಶವಾದ ಕುಂದಾಪುರದವರು. ಇವರ ಕಥೆಗಳು ಅಭಿವ್ಯಕ್ತಿಸುವುದು ಕರಾವಳಿ ಪ್ರದೇಶದ ಜೀವನ ಶೈಲಿಯನ್ನು ಇವರ ಕಥೆಗಳು ಬೆಳೆಯುವುದ ಕುಟುಂಬ ಕೇಂದ್ರಿತವಾಗಿ ಹಳ್ಳಿಗಳ ಜೀವನ ಸಂಸ್ಕೃತಿಯನ್ನು ಅಭಿವ್ಯಕ್ತಿಸುವುದರಲ್ಲಿ ವೈದೇಹಿಯವರ ಪಾತ್ರ ಅನನ್ಯವಾದದ್ದು. ಕೆಲವೊಂದು ಕಥೆಗಳಲ್ಲಿ ನಗರ ಪ್ರದೇಶದ ಸಂಸ್ಕೃತಿಯನ್ನು ತಿಳಿಸ ಬಯಸುತ್ತಾರೆ. 'ಕ್ರೌಂಚ ಪಕ್ಷಿಗಳು' ಕಥೆಯು ಪ್ರಾರಂಭವಾಗುವುದು ದೆಹಲಿ ಎಂಬ ನಗರ ಪ್ರದೇಶದಿಂದ ಭಾರತ ವಿಭಜನೆಗೊಂಡ ಕಥೆ ಇದಾದರೆ, ಇದರೊಳಗೊಂದು ಎರಡು ಮನಸ್ಸುಗಳು ಬೇರೆಯಾದ ಮತ್ತೊಂದು ಕಥೆ ಬೇರೆತ್ತಾದ್ದಾಗಿದೆ. ಹಾಗೂ ಅಂದು ಭಾರತ ವಿಭಜನೆಯ ಸಂದರ್ಭದಲ್ಲಾದ ಕೋಲಾಹಲವನ್ನು ಮನಮಿಡಿಯುವಂತೆ ಅಭಿವ್ಯಕ್ತಿಸಿದ್ದಾರೆ. ವೈದೇಹಿಯವರ ಜೀವನಗಾಥೆಯ ಕಥೆಗಳಲ್ಲಿ ಕಂಡು ಬರುವ ಗ್ರಾಮ – ನಗರಗಳು ಅಷ್ಟೊಂದು ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಂಡಿಲ್ಲ. ಬದಲಾಗಿ ಕುಟುಂಬ ಕೇಂದ್ರಿತ ಜೀವನ ಶೈಲಿಯು ಕಥೆಗಳೂದ್ದಕ್ಕೂ ಅನಾವರಣಗೊಳ್ಳುತ್ತವೆ.

ಗೀತಾ ನಾಗಭೂಷಣರವರ ಕಥೆಗಳುದ್ದಕ್ಕು ಗ್ರಾಮ ಮತ್ತು ನಗರ ಪ್ರದೇಶಗಳು ಅನಾವರಣಗೊಂಡಿವೆ. ಗ್ರಾಮುಗಳನ್ನು ಚಿತ್ರಿಸುವಂತಹ ಸಂದರ್ಭದಲ್ಲಿ ಗೀತಾ ನಾಗಭೂಷಣರವರು ಕೆಳಗೇರಿ, ಕೊಳಚೆಗೇರಿ, ದಲಿತಕೇರಿಯ ವರ್ಣನೆಯ ಬಗ್ಗೆ ಅತಿಹೆಚಿನದಾಗಿ ತಿಳಿಸುತ್ತಾರೆ. ಜ್ವಲಂತ ಕಥೆಯಲ್ಲಿ ಬರುವ ಕಾಡಳ್ಳಿಯ ವರ್ಣನೆ ಈಗಿದೆ.

'ಮೋಡಗಳಿಗೆಲ್ಲ ಹೊಟ್ಟೆ ಬೇನೆ ಎದ್ದು ಆಕಾಶದ ಅಂಗಳದಲ್ಲಿ ಒಂದೇ ಸಮನೆ ಹೊರಳಾಡುತ್ತ ವಿಕಾರ ದನಿ ಹೊರಡಿಸಿದವು. ಸುತ್ತಮುತ್ತ ಒದ್ದುಕೊಂಡು ಬಂದು

ಗಬ್ಬಿಯಾಗಿ ಗಡ್ಡೆಗಟ್ಟಿನಿಂತ ಮಳೆಗಾಲದ ಅಮವಾಸ್ಯೆಯ ಕತ್ತಲೆ. ಮರುಗಳಿಗೆಯಲ್ಲಿ ಧೋ ಎಂದು ಬೀಳುವ ಬಿರುಸಿನ ಮಳೆಗೆ ಕಾಡಳ್ಳಿಯ ಗುಡಿಸಲು ಮನೆಗಳೆಲ್ಲ ಸೋರತೊಡಗಿದವು'

ಈ ತರಹದ ಗ್ರಾಮಗಳ ವರ್ಣನೆಗಳು ಇವರು ಬಳಸಿಕೊಂಡಿರುವ ಎಲ್ಲಾ ಕಥೆಗಳಲ್ಲಿ ಕಂಡು ಬಂದಿವೆ. ಇನ್ನೂ ಗೀತಾ ನಾಗಭೂಷಣರವರು ನಗರ ಪ್ರದೇಶಗಳನ್ನು ಹೆಚ್ಚು ಬಳಸಿಕೊಂಡಿದ್ದಾರೆ. ಅದರಲ್ಲು ನಗರ ಪ್ರದೇಶದ ಕೊಳಚೇರಿಗಳು, ಜೋಪಡಿಪಟ್ಟಿಗಳು ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು ಮಾರಾಟ ಮಾಡುವ ಸ್ಥಳಗಳು ಒಟ್ಟಾರೆಯಾಗಿ ದಲಿತರು ವಾಸಮಾಡುವಂತಹ ಸ್ಥಳಗಳು ಇವರ ಕಥೆಗಳಲ್ಲಿ ಗೋಚರವಾಗುತ್ತವೆ. ಅಲ್ಲಿನ ಜನರ ಜೀವನ ವಿಧಾನಗಳ ಜೊತೆಜೊತೆಗೆ ಅಲ್ಲಿಯ ಭೂಪ್ರದೇಶದ ವರ್ಣನಾತ್ಮಕ ಚಿತ್ರಣಗಳು ಇವರ ಕಥೆಗಳಲ್ಲಿ ಅನಾವರಣಗೊಂಡಿವೆ.

ದುರ್ಬಲರು ಮತ್ತು ಸಬಲರು

ವೀಣಾ ಶಾಂತೇಶ್ವರ ಕಥೆಗಳಲ್ಲಿ ಬರುವ ದುರ್ಬಲರೆಂದರೆ ವಿದ್ಯಾವಂತ, ಉದ್ಯೋಗಸ್ಥ, ಆರ್ಥಿಕವಾಗಿ ಸಬಲರಾಗಿ ಅನ್ನ-ಅರಿವೆಯ ಚಿಂತೆಯಿಲ್ಲದ ಆಗತಾನೇ ಮದುವೆಯಾದವರು, ಇಲ್ಲವೇ ಮದುವೆಯಾಗುವ ಹೊಸ್ತಿಲಲ್ಲಿರುವ ಮಹಿಳೆಯರು. ಇವರು ಸಾಮಾಜಿಕವಾಗಿ ತಮ್ಮ ಅಸ್ತಿತ್ವನ್ನು ಕಾಪಾಡಿಕೊಳ್ಳುವಲ್ಲಿ ಸೋತವರಾಗಿದ್ದಾರೆ. ಹೀಗಾಗಿ ಇವರು ದುರ್ಬಲರಾಗಿದ್ದಾರೆ. ಇವರ ಜೊತೆಯಲ್ಲಿರುವ ಎಲ್ಲಾ ಪುರುಷ ಸಮಾಜ ಸಬಲರಾಗಿದ್ದಾರೆ. ಕೆಲವೊಂದು ಪಾತ್ರಗಳು ಎರಡು ಪರಿಕಲ್ಪನೆಗಳನ್ನು ಅಳವಡಿಸಿಕೊಂಡವುಗಳಾಗಿವೆ. ಮರ್ಯಾದೆ ಕಥೆಗಳಲ್ಲಿ ಬರುವ ಕಮಲಗಳ ತಂದೆ ಹಾಗೂ 'ಕಾಯುತ್ತಲಿದ್ದ ಕರಿಯ' ಕಥೆಯಲ್ಲಿರುವ 'ಕರಿಯ' ಎನ್ನುವ ಪಾತ್ರಗಳು ಸಬಲರು ಹೌದು - ದುರ್ಬಲ ಅಸಹಾಯಕರೂ ಹೌದು ಎಂಬುದನ್ನು ಕಥೆಯ ತಾತ್ವಿಕತೆಯಿಂದ ತಿಳಿದು ಬರುತ್ತದೆ. ಇಲ್ಲಿ ತಂದೆಯ ಸ್ಥಾನದಲ್ಲಿರುವ ವ್ಯಕ್ತಿ ತಾಯಿಯ ಸ್ಥಾನವನ್ನು ವಹಿಸಿಕೊಳ್ಳುತ್ತಾರೆ. ಮಗಳ ಸ್ಥಾನದಲ್ಲಿರಬೇಕಾದ 'ಕಮಲ' ತನ್ನ ತಂದೆಯ ವಿಷಯದಲ್ಲಿ ತಂದೆ - ತಾಯಿ ಎನ್ನುವ ಎರಡು ಅರ್ಥಕ್ಕೆ ತಕ್ಕಂತೆ ವರ್ತಿಸುವ ಕಮಲಳ ಗುಣ ಅವರ್ಣನೀಯವಾದದ್ದು.

ನಾಡಿನ ಕಥೆಗಾರ್ತಿಯರ ಸಾಲಿನಲ್ಲಿ ಒಬ್ಬರಾದ ವೈದೇಹಿಯವರ ಕಥೆಗಳಲ್ಲಿ ದುರ್ಬಲರು ಮತ್ತು ಸಬಲರು ಕಂಡು ಬರುತ್ತಾರೆ. ವೈದೇಹಿಯವರು ವ್ಯಕ್ತಿಗಳನ್ನು ಹೆಚ್ಚು ವರ್ಣಿಸುವುದಿಲ್ಲ. ಬದಲಾಗಿ ಅವರ ಜೀವನಕ್ಕೆ ಅಭಿವ್ಯಕ್ತಿ ನೀಡುತ್ತಾರೆ. ಇವರ ಕಥೆಗಳಲ್ಲಿ ಬರುವ ಹೆಣ್ಣು ಮಕ್ಕಳು ದುರ್ಬಲರಾಗಿದ್ದಾರೆ. ಕುಟುಂಬವನ್ನು ನಡೆಸುವ ಯಜಮಾನ

ಸಬಲನಾಗಿ ಪ್ರತಿಬಿಂಬಿತವಾಗಿದೆ. 'ಗುಲಾಬಿ ಟಾಕೀಸ್ ಮತ್ತು ಸಣ್ಣ ಅಲೆಗಳು' ಎನ್ನುವ ಕಥೆಯಲ್ಲಿ ಬರುವ "ಲಿಲ್ಲಿಬಾಯಿ" ಒಬ್ಬ ಪುರಷ ನಡೆಸುವ ಜೀವನ ವಿಧಾನವನ್ನು ನಡೆಸುತ್ತಾಳೆ. ಜೋತೆಗೆ ಬೇರೆಯವರನ್ನು ಸಾಮಾಜಿಕವಾಗಿ ಬೆಳೆಯುವಂತೆ ಪ್ರಚೋದಿಸುತ್ತಾಳೆ. ಇವರ ಕೆಲವೊಂದು ಕಥೆಗಳಲ್ಲಿ ಮಹಿಳೆಯೇ ಸಬಲಳಾಗಿ ಅಭಿವ್ಯಕ್ತಿಗೊಂಡಿರುವುದು ಕಂಡು ಬರುತ್ತದೆ.

ಗೀತಾ ನಾಗಭೂಷಣರವರ ಕಥೆಗಳಲ್ಲಿ ಕಾಣಬರುವ ದುರ್ಬಲರೆಂದರೆ ಕೆಳವರ್ಗದವರು ದೀನದಲಿತರು, ಅನ್ನ-ಅರಿವೆಯಿಲ್ಲದಿರುವವರು, ಬೇಡುವ ಜನ, ದುಡಿಯುವ ಜನ, ನಿರ್ಗತಿಕರು, ಕೊಳಚೆಪ್ರದೇಶದಲ್ಲಿ ವಾಸಿಸುವವರು, ನಗರ ಪ್ರದೇಶಕ್ಕೆ ಬಂದರೆ ಜೋಪಡಿಪಟ್ಟಿಗಳಲ್ಲಿ ವಾಸಿಸುವವರು, ಸೌಲಭ್ಯವಂಚಿತ ಪ್ರದೇಶದಲ್ಲಿ ವಾಸಿಸುವವರು, ಮುಂತಾದವರು. ಭೂ ಒಡೆಯರು, ಕಾರ್ಖಾನೆಯ ಮಾಲಿಕರು, ಮೇಲುವರ್ಗದ ಜನತೆ, ಶ್ರೀಮಂತರು, ಮುಂತಾದವರು ಸಬಲರಾಗಿ ಕಾಣುತ್ತಾರೆ.

ಗೀತಾ ನಾಗಭೂಷಣರ 'ಬದುಕು ನುಂಗುವ ಮಂದಿ'ಕತೆಯ 'ಕಜರಿ' ಹುಲಿಗ್ಲಾ, ಚಿತ್ತಿ, ಸೀನಿಂಗಿ, ಅವ್ವ ಕಥೆಯ ಗಂಗಾ ಮತ್ತು ಭವಾನಿ, ನೀಲಗಂಗವ್ವ, ಮುಂತಾದ ಪಾತ್ರಗಳು ದುರ್ಬಲವಾದ ಪಾತ್ರಗಳು, ಇವರ ಪಾತ್ರಗಳು ದುರ್ಬಲವೆಂದು ಗ್ರಾಹಿಸಿದರೂ ಜೀವನದ ಕೊನೆಯಲ್ಲಿ ಜಯವನ್ನು ಗಳಿಸುವಂತವರು. ಸಬಲರ ವಿರುದ್ಧವಾಗಿ ದಂಗೆ ಎದ್ದು ಜೀವಿಸುವವರು. ಸಬಲರ ಸಣ್ಣತನಗಳನ್ನು ಬಯಲಿಗೆಳೆಯುವವರು. ಆದರೆ ಸಮಾಜ ಇವರನ್ನು ದುರ್ಬಲರೆಂದೇ ಹಣೆಪಟ್ಟಿ ಕಟ್ಟಿದೆ. ಕಥೆಗಳಲ್ಲಿ ಬರುವ ಕಥಾ ನಾಯಕಿಯರಷ್ಟೇ ಜಯವನ್ನು ಗಳಿಸಿದ್ದಾರೆಂದರೆ ತಪ್ಪಾಗುತ್ತದೆ. ಇಂದಿನ ಸಮಾಜದಲ್ಲಿ ಮಹಿಳೆಯರನ್ನು ಪ್ರತಿನಿಧಿಸುತ್ತಿರುವಂತಹ ಪ್ರತಿಯೊಬ್ಬ ಪ್ರಜ್ಞಾವಂತ ಮಹಿಳೆಯರು ಜೀವನೋತ್ತರದಲ್ಲಿ ಜಯಗಳಿಸುತ್ತಿದ್ದಾರೆ. ಕೌಟುಂಬಿಕವಾಗಿ ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳೆಯರು ಪ್ರಜ್ಞಾವಂತರಾಗುತ್ತಿದ್ದಾರೆ. ಪ್ರಬಲರಾಗುತ್ತಿದ್ದಾರೆ. ಅದಕ್ಕೆ ಸಂವಿಧಾನ ನೀಡಿದಂತಹ ಮಹಿಳಾ ಹಕ್ಕು ಸಾಕ್ಷಿಯಾಗಿದೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರವರ ಪ್ರಯತ್ನ ಫಲಕಾರಿಯಾಗಿದೆ. ಇಂದಿನ ಸ್ತ್ರೀಯರು ಪ್ರತಿಯೊಂದು ಕ್ಷೇತ್ರದಲ್ಲಿ ತಮ್ಮ ತಮ್ಮ ತನವನ್ನು ಅಭಿವ್ಯಕ್ತಿಸುತ್ತಿದ್ದಾರೆ. ಮನುಷ್ಯರಾಗುತ್ತಿದ್ದಾರೆ. ಆದರೂ ಕೂಡ ಕೆಲವೊಂದು ಕಡೆ ಪುರುಷ ಪ್ರಧಾನತೆಯೇ ರಾಜ್ಯಭಾರ ಮಾಡುತ್ತಿದೆ. ಇದರಿಂದ ಮುಕ್ತಿ ಹೊಂದಬೇಕೆಂದರೆ ಇಂದಿನ ಸ್ತ್ರೀ ಸಂಕುಲ ಶಿಕ್ಷಣ ಕಲಿತು ವಿದ್ಯಾವಂತರಾಗಬೇಕು. ಉದ್ಯೋಗಿಗಳಾಗಬೇಕು. ಸಮಾಜವನ್ನು ಅರ್ಥಮಾಡಿಕೊಂಡು ಬದುಕುವ ಕೌಶಲ್ಯ ಕಂಡುಕೊಳ್ಳಬೇಕು. ಇಂದಿನ ಆಧುನಿಕತೆಯ ಶೋಕಿಬದುಕಿನಿಂದ

ದುರ ಸರಿದು ಮಾನವೀಯತೆಯ ಸಮಾಜ ಕಟ್ಟಲು ಪ್ರಯತ್ನಿಸಬೇಕು. ತನ್ನ ತನಕ್ಕೆ ಕುಂದು ಬರದ ಹಾಗೆ ಸ್ವಾಭಿಮಾನದ ಸಮಾಜ ಕಟ್ಟಲು ಪ್ರಯತ್ನಿಸಬೇಕು. ಹೆಣ್ಣಿಗೆ – ಹೆಣ್ಣೇ ಶತ್ರು ಎಂಬ ಮನೋಭಾವವನ್ನು ಹೊಡೆದು ಹಾಕಬೇಕು. ಒಟ್ಟಾರೆಯಾಗಿ ಈ ಮೂವರು ಕಥೆಗಾರ್ತಿಯರು ಕಟ್ಟಿಕೊಟ್ಟ ಮಹಿಳಿಯರ ಜೀವನ ವಿಧಾನವು ವಿಭಿನ್ನತೆಯಿಂದ ಕೂಡಿದ್ದರು ಸಹ ಕೊನೆಗೆ ಬಂದು ನಿಲ್ಲುವುದು ಮಾತ್ರ ದಾಸ್ಯತ್ವದಿಂದ, ಗುಲಾಮಗಿರಿಯಿಂದ ಬಿಡಿಸಿಕೊಂಡು ಸ್ವಾತಂತ್ರ್ಯರಾಗಿ ಜೀವಿಸಲು ಇಷ್ಟ ಪಡುತ್ತಾರೆ.

೭.೪ ಮಹಿಳಾ ಸಬಲೀಕರಣ

ಮಹಿಳೆಯರಲ್ಲಿ ಬೌದ್ಧಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಬಲವನ್ನು ಹೆಚ್ಚಿಸುವುದಕ್ಕೆ ಮಹಿಳಾ ಸಬಲೀಕರಣ, ಸಶಕ್ತತೆ ಎನ್ನುತ್ತಾರೆ. ಸಬಲೀಕರಣ ಶಕ್ತತೆ ಎನ್ನುವುದು ಸಾಮಾನ್ಯವಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿ, ಅವರ ಸಾಮರ್ಥ್ಯವನ್ನು ಹೆಚ್ಚಿಸುವುದೇ ಆಗಿರುತ್ತದೆ. ಸಬಲೀಕರಣ ಸಶಕ್ತತೆ ಎಂದರೆ, ಪ್ರತಿಯೊಂದು ಕ್ಷೇತ್ರಗಳಲ್ಲಿ ಅರ್ಹತೆ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ.

ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದುವುದು ಮಾಹಿತಿ ಮತ್ತು ಸಂಪನ್ಮೂಲಗಳ ಬಗ್ಗೆ ತಿಳಿದುಕೊಳ್ಳುವ ಹಾಗೂ ಅವುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದುವುದು. ಅವರ ಇಚ್ಛೆಗೆ ಅನುಸಾರವಾಗಿ ಆಯ್ಕೆ ಮಾಡುವ ಅವಕಾಶಗಳನ್ನು ಹೊಂದುವುದು ಒಟ್ಟಿಗೆ ಅಥವಾ ಗುಂಪು ನಿರ್ಣಯ ತೆಗೆದುಕೊಳ್ಳುವುದರಲ್ಲಿ ವಿಶ್ವಾಸದಿಂದ ದೃಢಪಡಿಸುವ ಸಾಮರ್ಥ್ಯವನ್ನು ಹೊಂದುವುದು. ಬದಲಾವಣೆಯನ್ನು ಮಾಡುವುದರಲ್ಲಿ ಧನಾತ್ಮಕ ಭಾವನೆಯನ್ನು ಹೊಂದುವುದು ಸ್ವಯಂ ಮತ್ತು ಗುಂಪು ಪ್ರಾಬಲ್ಯವನ್ನು ಹೆಚ್ಚಿಸಲು ವಿವಿಧ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು. ಪ್ರಜಾಪ್ರಭುತ್ವದ ಮಾರ್ಗದಲ್ಲಿ ಇತರರ ಗ್ರಹಿಕಾ ಶಕ್ತಿಯನ್ನು ಬದಲಾಯಿಸುವಂತೆ ಮಾಡುವುದು. ಸ್ವಯಂ ಪ್ರೇರೇಪಿತರಾಗಿ ನಿರಂತರ ಬದಲಾವಣೆಯ ಬೆಳವಣಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು, ಆತ್ಮಾಭಿಮಾನ ಹೆಚ್ಚು ಮಾಡುವುದರಲ್ಲಿ ಹಾಗೂ ಕಳಂಕದಿಂದ ಪಾರಾಗುವುದರಲ್ಲಿ ತೊಡಗಿಕೊಳ್ಳುವುದು. ಇಂತಹ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಂಪೂರ್ಣವಾದ ಅವಕಾಶಗಳನ್ನು ಕಲ್ಪಿಸಿಕೊಟ್ಟಲ್ಲಿ ಮಹಿಳೆಯರು ಸಬಲಿಗೊಳ್ಳುತ್ತಾರೆ. ಮಹಿಳಾ ಸಬಲೀಕರಣವನ್ನು ಕುರಿತು ಚರ್ಚಿಸುವಾಗ ಸಮಾಜ ಓರೆಕೋರೆಗಳ ಬಗ್ಗೆ ತಿಳಿದುಕೊಳ್ಳಬೇಕು. ಸಬಲೀಕರಣ ಎನ್ನುವುದು ಶಕ್ತಿಯೇ ಹೊರತು ಮಿತಿಯಲ್ಲ.

ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣರವರ ಕಥೆಗಳಲ್ಲಿ ಮಹಿಳೆಯನ್ನು ಸಬಲ/ಪ್ರಬಲರನ್ನಾಗಿ ಮಾಡುವ ಕಥೆಗಳಿವೆಯೇ ಇಲ್ಲವೇ, ಎಂಬುದನ್ನು

ಹುಡುಕುವುದಕ್ಕಿಂತ ಅವರ ಬರೆಹಗಳು ಆ ನೆಲೆಯಲ್ಲಿ ರಚನೆಯಾಗಿವೆಯೇ ಇಲ್ಲವೋ ಎಂಬುದರ ಬಗ್ಗೆ ಅಧ್ಯಯನಿಸುವುದು ಸೂಕ್ತವೆನಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ಮಹಿಳಾ ಬರೆಹಗಳೆಲ್ಲವು ಸ್ತ್ರೀಯನ್ನು ಹಿನ್ನೆಲೆಯಾಗಿಟ್ಟುಕೊಂಡೇ ರಚನೆಗೊಂಡವುಗಳಾಗಿವೆ. ಆಧುನಿಕ ಕನ್ನಡ ಸಾಹಿತ್ಯದ ಮಹಿಳಾ ಕಥೆಗಾರ್ತಿಯರಲ್ಲಿ ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣರವರು ಪ್ರಮುಖರು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಥಾಪ್ರಕಾರದಲ್ಲಿ ವಿಭಿನ್ನವಾದ ಅಭಿವ್ಯಕ್ತಿಯನ್ನು ಹುಟ್ಟುಹಾಕಿದವರಾಗಿದ್ದಾರೆ. ಇವರ ಅಭಿವ್ಯಕ್ತಿಯ ಮೂಸೆಯಲ್ಲಿ/ನೆಲೆಯಲ್ಲಿ ಮೂಡಿಬಂದ ಬರೆಹಗಳು ಸ್ತ್ರೀವಾದವನ್ನು ಮೈಗೂಡಿಸಿಕೊಂಡವುಗಳಾಗಿವೆ. ಮಹಿಳಾ ಸಬಲೀಕರಣ ಎನ್ನುವುದು ಇವರ ಬರೆಹಗಳ ಸೃಷ್ಟಿಯಲ್ಲಿ ವಿಭಿನ್ನವಾದ ನೆಲೆಯಲ್ಲಿ ಕಂಡುಬಂದಿದೆ. ವೀಣಾ ಶಾಂತೇಶ್ವರರವರು ಮಹಿಳಾ ಸಬಲೀಕರಣವನ್ನು ವ್ಯಕ್ತಿಗತ ನೆಲೆಯಲ್ಲಿ ಪ್ರತಿಬಿಂಬಿಸಿದರೇ. ವೈದೇಹಿಯವರು ಕುಟುಂಬದ ಹಿನ್ನೆಲೆಯಲ್ಲಿ ಸಾದರಪಡಿಸುತ್ತಾರೆ. ಆದರೆ ವೈದೇಹಿಯವರ ಸಬಲೀಕರಣ ಕೇವಲ ಕೌಟುಂಬಿಕ ಜೀವನಕ್ಕಷ್ಟೇ ಸೀಮಿತವಾಗಿರದೆ ಹೊರ ಸಮಾಜದ ಜೊತೆಗೂ ಬೆಸೆದುಕೊಂಡಿರುವುದನ್ನು ಗುರುತಿಸಬಹುದಾಗಿದೆ. ಗೀತಾ ನಾಗಭೂಷಣರವರು ಮಹಿಳಾ ಸಬಲೀಕರಣವನ್ನು ಬಂಡಾಯದ ಪ್ರದುರ್ಭವತೆಯಲ್ಲಿ ಹಾಗೂ ಸ್ತ್ರೀವಾದಿಯ ತೀವ್ರತೆಯಲ್ಲಿ ಕಟ್ಟಿಕೊಡುತ್ತಾರೆ. ಗೀತಾ ನಾಗಭೂಷಣ ಅವರ ಬರೆಹಗಳಲ್ಲಿ ಸಂವಿಧಾನಿಕವಾದ ಹಕ್ಕು ಮತ್ತು ಹೋರಾಟಗಳನ್ನು ಪಡೆಯುವ ಧೀರೋದತ್ತವಾದ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಸ್ತ್ರೀಯರ ಸ್ಥಾನಮಾನ, ಸೌಲಭ್ಯಗಳು, ಸ್ತ್ರೀಯರ ಶಿಕ್ಷಣದ ಬಗ್ಗೆ ಅರಿವು ಮೂಡಿಸುವ ಕೆಲಸ ಇವರ ಪ್ರಮುಖ ನಿಲುವುಗಳಾಗಿವೆ.

ವೀಣಾ ಶಾಂತೇಶ್ವರ ಅವರು ವ್ಯಕ್ತಿಗತ ಹಿನ್ನೆಲೆಯಲ್ಲಿ ಮಹಿಳೆಯನ್ನು ಸಬಲಪಡಿಸಲು ಪ್ರಯತ್ನಸುತ್ತಾರೆ. ನವ್ಯ ಸಾಹಿತ್ಯಪಂಥದ ಹಿನ್ನೆಲೆಯಲ್ಲಿ ರಚಿಸಿದಂತಹ ಇವರ ಬರೆಹಗಳು ವ್ಯಕ್ತಿಗತವಾಗಿವೆ. ವೀಣಾಶಾಂತೇಶ್ವರ ಅವರ ಬರೆಹದಲ್ಲಿ ಹೆಣ್ಣು ಅಕ್ಷರಸ್ಥಳು, ಹಣವಂತಳು, ಹಸಿವಿಲ್ಲದವಳು, ಸುಶಿಕ್ಷಿತ ಕುಟುಂಬದಿಂದ ಬೆಳೆದವಳು. ಜೊತೆಗೆ ಮದುವೆಯಾಗಲು ಸಿದ್ಧವಿರುವವರು ಬಹಳ ಜನರು ಅದರಲ್ಲಿ ಕೆಲವರು ವಿವಾಹವಾಗಿ ಕಷ್ಟದಲ್ಲಿ ಸಿಲುಕಿ ಅದರಿಂದ ಹೊರಬರಲು ಇಚ್ಚಿಸುತ್ತಿರುವಂತಹ ಮಹಿಳೆಯರು ಕೆಲವರಿದ್ದಾರೆ. ಭಾರತದ ಸಂವಿಧಾನ ನೀಡಿರುವಂತಹ ಸಂವಿಧಾನಿಕ ಹಕ್ಕುಗಳ ಬಗ್ಗೆ ವಿವರವಾದ ಮಾಹಿತಿಯಿರುವ ತಮ್ಮ ಕಥೆಗಳಲ್ಲಿ ಬರುವ ಶಿಕ್ಷಣವಂತ, ಅಕ್ಷರಸ್ಥ ಸ್ತ್ರೀ ಸಂಕುಲಕ್ಕೆ ಸಂವಿಧಾನಾತ್ಮಕವಾದ ಹಕ್ಕುಗಳನ್ನು ಕೊಡಿಸುವಲ್ಲಿ ಸೋತಿದ್ದಾರೆ ಎಂದೆನಿಸುತ್ತದೆ. ಇದು ಅವರ ಮಿತಿಯು ಹೌದು. ಆದರೆ ಕಥೆಗಾರ್ತಿ ಇಲ್ಲಿ ಕೆಲವು ಕಥೆಗಳಲ್ಲಿ ಬರುವ ಸ್ತ್ರೀಸಂಕುಲಕ್ಕೆ ತಾನು

ಸ್ವಾತಂತ್ರ್ಯಳಾಗಬೇಕೆನ್ನುವ ಮಹದಾಸೆಯನ್ನು ಈಡೇರರಿಸಿದ್ದಾಳೆ. ವೀಣಾ ಶಾಂತೇಶ್ವರ ಅವರ ಕಥೆಗಳಲ್ಲಿ 'ಬಿಡುಗಡೆ' ಎನ್ನುವ ಕಥೆಯು ವಿಭಿನ್ನವಾದ ಕಥೆಯಾಗಿದೆ. ಈ ಕಥೆಯಲ್ಲಿ ಬರುವ ಸರೋಜಾ ಎಂಬುವವಳು ತನ್ನ ಗಂಡನಿಂದ ಅನುಭವಿಸಬಾರದ ನೋವುಗಳನ್ನು ಅನುಭವಿಸಿ ನೋವಿನಿಂದ ಒದ್ದಾಡಿ ಸೋತು ಸುಣ್ಣವಾಗುವಂತಹ ಸಂದರ್ಭದಲ್ಲಿ ತನ್ನ ಗಂಡನ ಸಾವು ಅವಳಿಗೆ ಅಮೃತ ಕುಡಿದಷ್ಟು ಆನಂದನನ್ನು ತಂದುಕೊಡುತ್ತದೆ. ಅದಕ್ಕಾಗಿಯೇ ಆಕೆಯು ಸಾವಿನ ಸಂದರ್ಭದಲ್ಲಿ ಮಾಡುವ ಕೆಲಸ ಎಲ್ಲಾ ಸಹೃದಯರನ್ನು ನಿಬ್ಬೆರಾಗಾಗುವಂತೆ ಮಾಡುತ್ತದೆ. "ಮೈ–ಮನಸ್ಸು ಹಗುರವಾದಂತಹ ಭಾವ, ಅದೆಂಥದೋ, ಬಿಡುಗಡೆಯ ಸುಖಭಾವ, ಎಲ್ಲ ನೋವುಗಳಿಂದ, ಅಪಮಾನಗಳಿಂದ, ಹಿಂಸೆಯಿಂದ, ನಿರಾಶೆಯಿಂದ, ಅನ್ಯಾಯದಿಂದ, ದಬ್ಬಾಳಿಕೆಯಿಂದ ಕಳಚಿಕೊಂಡಂತಹ ಭಾವ, ತನಗೆ ದುಃಖವಾಗುತ್ತಿಲ್ಲ ಎಂದು ಆಕೆಗೆ ತಿಳಿಯುತ್ತದೆ. ದುಃಖವೇಕೆ ಆಗುತ್ತಿಲ್ಲವೆಂದು ಕಸಿವಿಸಿಯಾ ಆಗುತ್ತಿಲ್ಲ, ದುಃಖವಾಗುತ್ತಿದ್ದರೆ ಕಸಿವಿಸಿಯಾಗುತ್ತಿದ್ದರೆ, ಸಂತಾಪವಾಗುತ್ತಿದ್ದರೆ ಅದು ಈ ಗಂಡ ಸತ್ತು ಹೋದದ್ದಕ್ಕಾಗಿ ಅಲ್ಲ, ಆತ ಸಾಯಿಸಿದ ತನ್ನ ಅಸಂಖ್ಯ ಕನಸುಗಳಿಗಾಗಿ.. ತಲೆ ಕೊಡವಿಕೊಂಡು ಸರೋಜಾ ಎದ್ದಳು. ಕೂದಲನ್ನು ಸೀರೆಯನ್ನು ಸರಿಪಡಿಸಿಕೊಂಡಳು. ಒಳಗಿನ ಬಾಗಿಲಿಂದ ಒಬ್ಬಳೇ ಅಡಿಗೆ ಮನೆಗೆ ಹೋಗಿ ಕಾಯಿಸಿಟ್ಟಿದ್ದ ಹಾಲನ್ನು ಗ್ಲಾಸಿಗೆ ಬಗ್ಗಿಸಿಕೊಂಡು ಸಕ್ಕರೆ ಬೆರೆಸಿ ಗಟಗಟ ಕುಡಿದಳು. ನಂತರ, ಮಗ ತನ್ನನ್ನು ಕರೆಯಲು ಬರುವ ಮೊದಲೇ ಹಗುರವಾದ ದಿಬ್ಬವಾದ ಹೆಜ್ಜೆಗಳನ್ನಿಡುತ್ತ ಪಡಸಾಲೆಗೆ ಬಂದಳು."[೨] ಈ ಮಾತುಗಳನ್ನು ಕೇಳಿಸಿಕೊಂಡ ಯಾವುದೇ ಸಹೃದಯನಿಗೆ ಮೈ ರೋಮಾಂಚನಗೊಳ್ಳದಿರುವುದಿಲ್ಲ. ಈ ಮೂಲಕವಾಗಿ ವೀಣಾಶಾಂತೇಶ್ವರ ಅವರು ತಮ್ಮ ಕಥೆಗಳಲ್ಲಿನ ಸ್ತ್ರೀಸಂಕುಲಕ್ಕೆ ನ್ಯಾಯವನ್ನು ಒದಗಿಸುವ ಹಾಗೂ ಮಹಿಳೆಯನ್ನು ಸಬಲೀಕರಣದತ್ತ ಕೊಂಡೊಯ್ಯುವ ಕಾರ್ಯ ಮಾಡಿದ್ದಾರೆ.

ಸಮಾಜದಲ್ಲಿ ಜೀವಿಸುತ್ತಿರುವಂತಹ ಮಹಿಳೆ ತನ್ನ ಗಂಡನಿಂದ ದೂರವಾಗಿ ಸ್ವಾತಂತ್ರಳಾದಳೆಂದರೆ ಅವಳು ಬಿಡುಗಡೆ ಹೊಂದಿದಳು ಅಥವಾ ಮಹಿಳೆ ಸಬಲಳಾದಳು ಎಂದರ್ಥವಲ್ಲ. ಅವಳು ಬದುಕುತ್ತಿರುವ ಸಮಾಜದಿಂದ ಅವಳೆಂದೂ ಮುಕ್ತಿ ಹೊಂದಲಾರಳು. ಬದಲಾಗಿ ತನಗೆ ದಿನನಿತ್ಯ ನೀಡುತ್ತಿದ ಹಿಂಸೆಗಳಿಂದ, ನೋವುಗಳಿಂದ, ಸಂಕಟಗಳಿಂದ ದೂರವಾಗಿ ಈಗಲಾದರೂ ಬದುಕಿರುವಷ್ಟು ಕಾಲ ಇವುಗಳಿಂದ ಮುಕ್ತಿ ಹೊಂದಿ ಸ್ವಾತಂತ್ರಳಾದೆ ಎಂಬ ಪರಿಭಾವನೆ ಮಹಿಳೆಯದು. ಹೆಣ್ಣು ಅಬಲೆಯಲ್ಲ ಸಬಲೆ ಎಂದು ತೋರಿಸಿಕೊಳ್ಳುವ ಕಾಲ ಬಂದೇ ಬರುತ್ತದೆ ಎಂಬ ಆಶಾಭಾವನೆ ವೀಣಾಶಾಂತೇಶ್ವರ ಅವರ ಕಥೆಗಳಲ್ಲಿ ಅಲ್ಲಲ್ಲಿ ಘೋಚರವಾಗುತ್ತವೆ.

'ನಿರಾಕರಣೆ' ಇದೊಂದು ಪೌರಾಣಿಕ ಪ್ರಸಿದ್ಧವಾದ ಕಥೆಯಾಗಿದೆ. ಈ ಕಥೆಯಲ್ಲಿ ಬರುವ ಶಕುಂತಲೆಯು ಕೂಡ 'ಬಿಡುಗಡೆ' ಕಥೆಯಲ್ಲಿಯ ಸರೋಜಾಳಷ್ಟೇ ನೋವುಂಡವಳು. 'ನಿರಾಕರಣೆ' ಬಹುಮುಖ್ಯ ಕಥೆಯಾಗಿದೆ. ನೋವುಂಡ ಸ್ತ್ರೀಜಗತ್ತು ಈ ಕಥೆಯನ್ನು ಓದಿದರೆ ಬೇರೆಯವರಿಗೆ ಕಾಣಲಾರದ ಜಗತ್ತು ಅವರಿಗೆ ಕಣುತ್ತದೆ. ಪುರುಷಪ್ರಧಾನವಾದ ಜಗತ್ತಿನಲ್ಲಿ 'ಹೆಣ್ಣು ಕೇವಲ ಆಟದ ಬೊಂಬೆಯಾಗಿದ್ದಾಳೆ ಎಂಬುದು ಸ್ತ್ರೀವಾದದ ಪ್ರಖರವಾದ ನಿಲುವಾಗಿದೆ. ವೀಣಾ ಶಾಂತೇಶ್ವರ ಅವರು 'ನಿರಾಕರಣೆ' ಕಥೆಯಲ್ಲಿ ಕೇವಲ ಬೊಂಬೆಯಲ್ಲ, ಅದೊಂದು ವಸ್ತುವಲ್ಲ, ಅದೊಂದು ಸಾಗರದಷ್ಟು ಭಾವನೆಗಳನ್ನು ತುಂಬಿಕೊಂಡಿರುವಂತಹ ಭಾವನೆಗಳ ಪ್ರಪಂಚ ಎಂಬುದನ್ನು ಅಭಿವ್ಯಕ್ತಿಸುವುದರ ಮೂಲಕವಾಗಿ ಹೊಸ ಸ್ತ್ರೀ ಸಂಕುಲಕ್ಕೆ ಹೊಸದೊಂದು ದಾರಿಯನ್ನು ಹಾಕಿಕೊಟ್ಟಿದ್ದಾರೆ. ಈ ಕಥೆಯ ಮೂಲಕ ವೀಣಾ ಶಾಂತೇಶ್ವರ ಅವರು ಸಹೃದಯ ಸಮಾಜಕ್ಕೆ ಒಂದು ಹೆಣ್ಣು ಏನೇನೆಲ್ಲಾ ಆಗಬಲ್ಲಳು ಎಂಬುದನ್ನು ಅವರ ಕಥಾಹಂದರದಿಂದ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ವೀಣಾ ಶಾಂತೇಶ್ವರ ಅವರ ಸಮಾಜಮುಖಿಯಾದ ಕಾರ್ಯವೆಸಗಲು ತೊಡಗಿದ್ದಾರೆಂದರೆ ತಪ್ಪಾಗಲಾರದು. ಏಕೆಂದರೆ 'ಯಾವುದೇ ಒಬ್ಬ ಬರೆಹಗಾರ ತನ್ನ ಬರೆಹದಲ್ಲಿ ಒಬ್ಬ ಪುರುಷನ್ನು ಅಥವಾ ಒಂದು ಹೆಣ್ಣನ್ನು ಬದಲಾಯಿಸುವ ಅಥವಾ ತಿದ್ದುವ ಕೆಲಸ ಮಾಡುತ್ತಾರೆಂದರೆ ಸಮಾಜಮುಖಿಯಾದುದ್ದೆಂದೇ ಅರ್ಥ. ವೀಣಾ ಶಾಂತೇಶ್ವರ ಅವರು 'ನಿರಾಕರಣೆ' ಕಥೆಯಲ್ಲಿ ಸ್ತ್ರೀಯನ್ನು ಪ್ರಾಬಲ್ಯದ ಹೆಣ್ಣಾಗಿ ಚಿತ್ರಿಸಿದ್ದಾರೆ. 'ದುಶ್ಯಂತ ಮಹಾರಾಜ ಶಕುಂತಲೆಯನ್ನು ಮೋಹಿಸಿ ಪ್ರೀತಿಸಿ ಪ್ರೇಮಿಸಿದ ಸಂದರ್ಭಗಳನ್ನು ಯಾವುದೋ ಋಷಿಮುನಿಯ ಶಾಪಕ್ಕೊಳಗಾಗಿ ತನ್ನ ಎಲ್ಲಾ ಸಂಗತಿಗಳನ್ನು ಮರೆಯುವುದು ಎಷ್ಟರ ಮಟ್ಟಿಗೆ ನ್ಯಾಯ.? ಇದನ್ನು ಸಮಾಜ ಹೇಗೆ ಸ್ವೀಕರಿಸುತ್ತದೆ ಎಂಬ ಅರಿವನ್ನು ವೀಣಾರವರು ಅಭಿವ್ಯಕ್ತಿಸುತ್ತಾರೆ, ಶಾಪ ಎನ್ನುವುದು ಪುರುಷನಿಗೆ ಕೇವಲ ಒಂದು ನೆಪಮಾತ್ರ ಅಷ್ಟೇ ಅದರ ಹಿಂದೆ ಪುರುಷತ್ವದ ದಬ್ಬಾಳಿಕೆ, ದರ್ಬಾರು, ದುರಹಂಕಾರ, ದುರ್ವಿದ್ಯೆ, ದುರ್ಬುದ್ಧಿಯನ್ನು ಒಳಗೊಂಡು ಕುಹಕತನವನ್ನು ಒಳಗೊಂಡಿರುತ್ತದೆ. ಇವುಗಳನ್ನು ದುಶ್ಯಂತ ಮನೋಸ್ಥೈರ್ಯದ ಹಿನ್ನೆಲೆಯಲ್ಲಿ ಗುರುತಿಸಬಹುದು.

ದುಶ್ಯಂತ ಮಹಾರಾಜ ಮತ್ತೊಮ್ಮೆ ಶಕುಂತಲೆಯನ್ನು ವರಿಸಲು ಮುಂದಾದಾಗ ಅವಳಾಡುವ ಮಾನದಾಳದ ಮಾತುಗಳು ನಿಜವಾಗಲೂ ಪುರುಷತ್ವವನ್ನೇ ಸಂಪೂರ್ಣವಾಗಿ ತಿರಸ್ಕರಿಸಿ ನಾನು ಕೂಡ ಪುರುಷಗಿಂತ ಏನೂ ಕಡಿಮೆಯಿಲ್ಲ. ಅವನಿಲ್ಲದೇ ಬದಕಬಲ್ಲೆನು ಎಂಬ ಮಾತುಗಳು ಶಕುಂತಲೆಯ ಅಂತರಂಗವನ್ನು ಅಭಿವ್ಯಕ್ತಿಸುತ್ತವೆ. "ಇಲ್ಲ ಮಹಾರಾಜ,

ವರ್ಷಗಳ ಕಾಲ ತಪ್ಪಿಸಿರುವ ನಿನ್ನ ಮೈ-ಮನಸ್ಸುಗಳು ಒಂದು ಅಪ್ಪುಗೆಯಿಂದ ಶಾಂತವಾಗಬಹುದು. ಹಳೆಯದನ್ನೆಲ್ಲಾ ಮರೆತು ನೀನು ಮತ್ತೆ ತುಂಬು ಉತ್ಸಾಹದಿಂದ ಹೊಸಜೀವನ ಶುರು ಮಾಡಬಹುದು. ಆದರೆ ನೀನು ಘಾಸಿಗೊಳಿಸಿದ ನನ್ನ ಒಳಗು ಮತ್ತೆ ಚೇತರಿಸಲಾರದು. ನೀನು ಹೊಸಕಿ ಹಾಕಿದ ನನ್ನ ಭಾವನೆಗಳು ಮತ್ತೆ ಜೀವ ತಳೆಯಲಾರವು. ಈ ಶಕುಂತಲೆಯ ಆತ್ಮಸಮ್ಮಾನಕ್ಕೆ ಮಾಯಲಾರದ ಗಾಯವಾಗಿದೆ. ಆಕೆಯಿನ್ನೆಂದೂ ಮೊದಲಿನಂತಾಗಲಾರಳು..."[೩]

ಇಲ್ಲಿನ ಮಾತುಗಳು ಕೇವಲ ಶಕುಂತಲೆಯ ನುಡಿಗಳಷ್ಟೇ ಅಲ್ಲ, ಬದಲಾಗಿ ಈ ಸಮಸಮಾಜದಲ್ಲಿ ಇಂತಹ ನೋವುಗಳನ್ನು ಅನುಭವಿಸುತ್ತಿರುವಂತಹ ಪ್ರತಿಯೊಬ್ಬ ಸ್ತ್ರೀಸಂಕುಲದ ಮನದಾಳದ ನೋವಿನ ಅನುಭವದ ಮಾತುಗಳಾಗಿವೆ. ಇಂದಿನ ಆಧುನಿಕಯುಗಕ್ಕೆ ಶಕುಂತಲೆಯ ಮಾತುಗಳನ್ನು ಸಮಷ್ಟೀಕರಿಸುವುದಾದರೆ ಜಾಗತೀಕರಣ, ತಂತ್ರಜ್ಞಾನ, ವೈಜ್ಞಾನಿಕತೆ ಖಾಸಗೀಕರಣದ ಯುಗದಲ್ಲಿ ಹೆಣ್ಣು ವಿದ್ಯಾವಂತಳಾಗಿ ಅಕ್ಷರಸ್ಥಳಾಗಿ ದುಡಿಯುವ ಬುದ್ಧಿಯನ್ನು ಕಲಿತ ಹೆಣ್ಣುಗಳು ಸ್ವಾವಲಂಬಿಗಳಾಗಿರಬೇಕು. ಹಾಗೆಯೇ ಬದುಕಬೇಕೆಂಬ ಆಸೆಯನ್ನು ಹೊಂದಿದವರಾಗಿದ್ದಾರೆ. ಪುರುಷನ ಸರಿಸಮಾನವಾಗಿ ಎಲ್ಲಾ ಕೆಲಸಕಾರ್ಯಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಯಶಸ್ವಿಯ ಹಾದಿ ಹಿಡಿಯುವುದರ ಮೂಲಕ ಮಹಿಳೆ ಅಬಲೆಯಲ್ಲ ಸಬಲೆ ಎಂಬುದನ್ನು ಸಾಬೀತುಪಡಿಸಲಿಕ್ಕೆ ಮುಂದಾಗುತ್ತಿದ್ದಾರೆ.

ವೀಣಾ ಶಾಂತೇಶ್ವರರಂತೆಯೇ-ವೈದೇಹಿಯವರು ಸ್ತ್ರೀಯರನ್ನು, ಸ್ತ್ರೀತ್ವವನ್ನು ಕುರಿತು ತಮ್ಮ ಬರೆಹಗಳಲ್ಲಿ ಪಡಿಮೂಡಿಸಿದ್ದಾರೆ. ವೈದೇಹಿಯವರು ಸ್ತ್ರೀಯನ್ನು ಕಟ್ಟಿಕೊಡುವುದು ಕುಟುಂಬ ಕೇಂದ್ರಿತವಾದ ನೆಲೆಯಿಂದ. ಇವರು ಕುಟುಂಬದಲ್ಲಿರುವ ಹೆಣ್ಣು ಹೇಗೆ ನೋವುಗಳನ್ನು ಅನುಭವಿಸುತ್ತಿದ್ದಾಳೆ, ಅವಳ ಪಾಡು ಎಂತಾದ್ದು ಎಂಬಂತಹ ಹತ್ತು-ಹಲವಾರು ಹೆಣ್ಣಿನ ನೋವಿನ ಮುಖಗಳನ್ನು ತಮ್ಮ ಲೇಖನಿಯ ಕುಂಚದಿಂದ ಅಭಿವ್ಯಕ್ತಿಸಿದ್ದಾರೆ. ವೈದೇಹಿಯವರು ಹೆಣ್ಣನ್ನು ಹಲವಾರು ಮುಖಗಳಿಂದ ನೋಡಿದ್ದಾರೆ. ಇವರ ಕಥೆಗಳು ಕುಟುಂಬ ಕೇಂದ್ರಿತವಾದವುಗಳಾಗಿವೆ. ಕುಟುಂಬದಲ್ಲಿ ಸ್ತ್ರೀಯ ಪಾತ್ರವೇನು; ಅವಳು ಹೇಗೆ ಪ್ರಬಲಳಾಗಬೇಕು ಎಂಬುದನ್ನು ಅವರ ಕೆಲವು ಕಥೆಗಳ ಮೂಲಕವಾಗಿ ವಿವರಿಸುವುದು ಸೂಕ್ತವೆಂದೆನಿಸುತ್ತದೆ.

ವೈದೇಹಿಯವರ ಕಥಾಹಂದರದಲ್ಲಿ ಮೂಡಿಬಂದಿರುವ ಸುಮಾರು ಐವತ್ತಕ್ಕಿಂತ ಹೆಚ್ಚು ಕಥೆಗಳಲ್ಲಿ ಪ್ರಸ್ತುತ ಸಂಶೋಧನೆಗೆ ಹತ್ತಿರವಾದ ಕಥೆಯೆಂದರೆ 'ಗುಲಾಬಿ ಟಾಕೀಸು

ಮತ್ತು ಸಣ್ಣ ಅಲೆಗಳು'. ಈ ಕಥೆಯು ಸ್ತ್ರೀಕುಲಕ್ಕೆ ಒಂದು ಆಧಾರಸ್ತಂಭದಂತೆ ನಿಂತು ಸ್ವಾತಂತ್ರ್ಯವನ್ನು ಒದಗಿಸುತ್ತದೆ. ವೈದೇಹಿಯವರು ಈ ಕಥೆಯಲ್ಲಿ ಒಂದು ಸಿನಿಮಾ ಮಂದಿರವನ್ನು ಪ್ರಾರಂಭಿಸಿ ಅದಕ್ಕೊಂದು ರೂಪಕವಾದ ಗುಲಾಬಿ ಎಂಬ ಹೂವಿನ ಹೆಸರಿಟ್ಟು ತಮ್ಮ ಬರವಣಿಗೆಯ ಶಕ್ತಿಯನ್ನು ಮೆರೆದಿದ್ದಾರೆ. ಅಂದರೆ 'ಗುಲಾಬಿ' ಎಂಬುವುದು ಕೇವಲ ಒಂದು ಹೆಣ್ಣಿನ ಹೆಸರಲ್ಲ ಅದೊಂದು ಹೂ ಹೌದು. ಆದರೆ ಕಥೆಯೊಳಗಿಂದ ನೋಡುವುದಕ್ಕೂ ಹೊರಗಡೆಯಿಂದ ನೋಡುವುದಕ್ಕೂ ತುಂಬಾ ವ್ಯತ್ಯಾಸಗಳಿವೆ. ಗುಲಾಬಿ ಹೂವಿನ ಬಣ್ಣ ಕೆಂಪು. ಇದು ಕೆಲವರಿಗೆ ಇಷ್ಟವಾಗಬಹುದು ಆಗದೇ ಇರಬಹುದು ಆದರೆ ಗುಲಾಬಿ ಹೂ ಮಾತ್ರ ಎಲ್ಲಾ ಸ್ತ್ರೀಸಂಕುಲಕ್ಕೆ ಇಷ್ಟವಾಗದಿರುವುದಿಲ್ಲ.

'ಗುಲಾಬಿ' ಹೂ ಪ್ರೀತಿಯ ಸಂಕೇತ. ಎರಡು ಮನಸ್ಸುಗಳನ್ನು ಬೆಸೆಯುವ ಸಂಕೇತವನ್ನು ಒಳಗೊಂಡಿದೆ. ಇದು ಒಂದು ಅರ್ಥವಾದರೆ 'ಗುಲಾಬಿ' ಎಂಬ ಹೆಸರಿನ ಸಿನಿಮಾಮಂದಿರ ಲಿಲ್ಲಿಬಾಯಿ ಊರಿನವರ ಹೆಣ್ಣುಮಕ್ಕಳ ಮನಸ್ಸುಗಳನ್ನು ತನ್ನತ್ತ ಸೆಳೆಯುತ್ತಾ ಅವರಿಗೊಂದು ಆಧುನಿಕತೆಯ ಅಲೆಯನ್ನು ತೋರಿಸಿ, ಹೆಣ್ಣಿನ ಸ್ವಾತಂತ್ರ್ಯದ ಕಡೆಗೆ ಕೊಂಡೊಯ್ಯುವ ಕೆಲಸ ಮಾಡುತ್ತದೆ. ಲಿಲ್ಲಿಬಾಯಿ ಎಂಬ ಪಾತ್ರದೊಂದಿಗೆ ಅವರ ಊರಿನ ಹೆಣ್ಣುಮಕ್ಕಳು ಕೂಡ ಸ್ವಾತಂತ್ರ್ಯವನ್ನು ಪಡೆದುಕೊಳ್ಳುತ್ತಾ ಹೋಗುತ್ತಾರೆ. ವೈದೇಹಿಯವರು ಸ್ತ್ರೀಯನ್ನು ಅಡುಗೆಮನೆಯಿಂದ ಸಮಾಜದ ಕಡೆಗೆ ಕೊಂಡೊಯ್ಯುವ, ಆಧುನಿಕತೆಯೊಂದಿಗೆ ಮುಖಾಮುಖಿಯಾಗಿಸುವ ಪ್ರಯತ್ನ ಮಾಡಿದ್ದಾರೆ. ಇದು ನಿಜವಾದ ಮಹಿಳಾ ಸಬಲೀಕರಣ ಎನಿಸಿದೆ. ಮತ್ತೊಂದು ಕಥೆ 'ಅಕ್ಕು'. ಈ ಕಥೆಯನಾಯಕಿಯ ಹೆಸರು ಕೂಡ 'ಅಕ್ಕು' ಎಂತಲೇ ಅಕ್ಕುವಿಗೆ ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಮಾಜ ಆಕೆಯನ್ನು ಬಿಟ್ಟಿಲ್ಲ. ಅಂದರೆ ಆಕೆಯು ಅಸ್ವಸ್ಥಳಲ್ಲ, ಬದಲಾಗಿ ಆಕೆಯನ್ನು ಸಮಾಜವೇ ಆಕೆಯನ್ನು ಅಸ್ವಸ್ಥಳನ್ನಾಗಿ ಮಾಡಿದೆ.

ಪುರುಷಪ್ರಧಾನ ವ್ಯವಸ್ಥೆಯಡಿಯಲ್ಲಿ ಹೆಣ್ಣು ಸಿಲುಕಿಕೊಂಡು ನೋವು, ಶೋಷಣೆ, ಅತ್ಯಾಚಾರ, ಇನ್ನಿತ್ಯಾದಿ ಸಮಸ್ಯೆಗಳಿಗೆ ಬಲಿಯಾಗಿ ನೋವುಣ್ಣುತ್ತಿದ್ದಾರೆ. ಅಕ್ಕುವಿಗೆ ಯಾವಾಗಲೂ ಹಣೆಗೆ ದೊಡ್ಡದಾದ ಕುಂಕುಮವಿರುತ್ತಿತ್ತು. ಕೈಯಲ್ಲೊಂದು ಟವಾಲು ಯಾವಾಗಲೂ ಇರಲೇಬೇಕಿತ್ತು. ಆದರೆ ಅಕ್ಕು ಊರ ಹೆಣ್ಣುಮಕ್ಕಳು ಮೈನೆರೆದ ಸಂದರ್ಭದಲ್ಲಿ ಹೋಗಿ ಹಾಡುಗಳನ್ನು ಹೇಳಿ ಮಕ್ಕಳು ಹುಟ್ಟಿದಾಗ ಅವರೆಲ್ಲ ಚಾಕರಿಯನ್ನು ಮಾಡಿ ಬರುವವಳಾಗಿದ್ದಳು. ಹೆಣ್ಣುಮಕ್ಕಳ ಸಮಾರಂಭ ಇರುತ್ತಿತ್ತೋ ಅಲ್ಲಿ ಅಕ್ಕು ಹಾಜರಿರುತ್ತಿದ್ದಳು. ಇದು ಒಂದು ಕಡೆ ಸಮಾಜಸೇವೆ, ಮತ್ತೊಂದು ಕಡೆ ತನಗಾಗದ ಕಾರ್ಯಗಳು ಬೇರೆಯ ಕಡೆ ನಡೆಯುವಾಗ ಅದರಲ್ಲಿ ತಾನು ಭಾಗಿಯಾಗಿ ತೃಪ್ತಿಪಡುವವಳು.

ಅಕ್ಕುವಿನ ಗಂಡ ಅಕ್ಕುವನ್ನು ಬಿಟ್ಟು ಓಡಿಹೋದವನು. ಆದ್ದರಿಂದಲೇ ಅಕ್ಕು ಸಮಾಜವು ಕೆಟ್ಟದೃಷ್ಟಿಯಿಂದ ನೋಡಬಾರದೆಂದು ದೊಡ್ಡ ಕುಂಕುಮ ಮತ್ತು ಟವಾಲನ್ನು ಯಾವಾಗಲೂ ತನ್ನಲ್ಲಿಯೇ ಇಟ್ಟುಕೊಳ್ಳುತ್ತಿದ್ದಳು.

ಈಕೆ ಮನೆಯ ಯಾರಿಂದಲೂ ಹೊರತಾದವಳಲ್ಲ, ಯಾರಿಗೂ ಹೆದರುವವಳಲ್ಲ; ಅಜ್ಜಯ್ಯನೊಬ್ಬನನ್ನು ಬಿಟ್ಟು. ಹೆಣ್ಣು ಸಮಯ ಬಂದರೆ ವ್ಯಕ್ತಿತ್ವಕ್ಕೆ ಹರಣವಾಗದ ಸಂದರ್ಭದಲ್ಲಿ ತನ್ನ ಹರಣ ಮಾಡುವವನನ್ನು ಸುಮ್ಮನೆ ಬಿಡುವವಳಲ್ಲ. ತನ್ನ ಗಂಡ ಸಂಕಪ್ಪ ಬಂದಾಗ ದೊಡ್ಡತ್ತೆ ಕೇಳುತ್ತಾಳೆ 'ಅಂತೂ ಬಂದ್ಲ! ಊರ್ ಮೇಲಿನ್ ಹೆಣ್ಮಕ್ಕೆಲ್ಲ ಖರ್ಚಾದ್ವ? ಅಂದಿದ್ದಕ್ಕೆ ಅಕ್ಕು ನೇರವಾಗಿ ತನ್ನ ವಿಚಾರವನ್ನೆಲ್ಲಾ ಬಾಯಿಬಿಟ್ಟಳು. ನಾನೇನ್ ಬಿಟ್ಟದ್ನ? ಈ ಊರೋಳ್ಗ್ ಯಾವ ಗಂಡ್ಸನ್ನ ನಾನ್ ಬಿಟ್ಟಿದ್ದೆ ಅಂಬ್ರ! ಹೇಳೊ ಗಂಡ್ಸ್ ಯೆದ್ರ್ ಬರ್ಲಿ ಕಾಂಬ? ಇಂಥಾ ಕಳ್ಳನ್ನ ಹಕ್ಕುಂದ್ರೆ ಹೌದ ಮತ್ತೆ'ಳ? ವೈದೇಹಿಯವರು ಮಹಿಳೆಯೆಂಬುವಳು ಸಬಲೆಯೋ ಅಬಲೆಯೋ ಎಂಬುದನ್ನು ಅಕ್ಕುವಿನ ಮಾತುಗಳಿಂದ ಹೊರಹಾಕಿದ್ದಾರೆ. ಅಕ್ಕುವಿನ ಒತ್ತಡವನ್ನು ತಂದೊಡ್ಡುವುದರ ಮೂಲಕವಾಗಿ ಸ್ತ್ರೀಯ ಮನದಲ್ಲಿರುವುದನ್ನು ಹೊರಹಾಕಿಸಿದ್ದಾರೆ. ಇದರಿಂದ ಪುರುಷಪ್ರಧಾನ ಸಮಾಜಕ್ಕೆ ಸವಾಲೆಸೆದಿದ್ದಾರೆ. ಹೆಣ್ಣು ಪ್ರಬಲವಾದ ಅಸ್ತ್ರದಂತೆ, ಆಕೆ ಅಬಲೆಯಲ್ಲ ಸಬಲೆಯೆಂಬುದನ್ನು ಅಕ್ಕುವಿನ ಮಾತುಗಳ ಮೂಲಕ ವೈದೇಹಿಯವರು ಹೊರಚೆಲ್ಲಿದ್ದಾರೆ. ಇದೇ ರೀತಿಯಲ್ಲಿ ಇವರ ಹಲವಾರು ಕಥೆಗಳು ಮಹಿಳಾ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತವೆ.

ಕೊನೆ ಟಿಪ್ಪಣಿಗಳು

೧. ನಾಗಭೂಷಣ. ಓ.ಎಲ್. ವಿಮರ್ಶೆಯ ಪರಿಭಾಷೆ. ಪು.ಸಂ.

೨. ವೀಣಾ ಶಾಂತೇಶ್ವರ. ನಡೆದದ್ದೇ ದಾರಿ, ಪು.ಸಂ. ೨೪೯

೩. ಪೂರ್ವೋಕ್ತ. ಪು.ಸಂ. ೨೭೩

೪. ವೈದೇಹಿ. ವೈದೇಹಿ ಕಥೆಗಳು, ಪು.ಸಂ. ೧೬೧

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ವೀಣಾ ಶಾಂತೇಶ್ವರ, ವೈದೇಹಿ ಹಾಗೂ ಗೀತಾ ನಾಗಭೂಷಣ, ಕನ್ನಡ ಕಥಾಲೋಕದಲ್ಲಿ ತಮ್ಮದೇ ವಿಶಿಷ್ಟ ಭಾಷೆಯ ಮುಖೇನ ಅಸ್ತಿತ್ವ ಮತ್ತು ಅಸ್ಮಿತೆಯನ್ನು ರೂಪಿಸಿಕೊಂಡ ಕನ್ನಡದ ತ್ರಿವಳಿಗಳು. ಇವರ ಕಥಾಹಂದರಲ್ಲಿ ಸೃಷ್ಟಿಗೊಂಡ ಪಾತ್ರಗಳು ವೈವಿಧ್ಯತೆ, ವೈಶಿಷ್ಟತೆ ಮತ್ತು ಪಾತ್ರಗಳೊಳಗಿನ ಅಂತರಂಗದ ತಲ್ಲಣಗಳ ಅನಾವರಣಗೊಳಿಸುವಿಕೆ ಕನ್ನಡ ಕಥಾಸಾಯತ್ವದ ವಿಶೇಷ ಮಜಲೆಂದು ಪರಿಗಣಿಸಬಹದು.

ಕಥಾನಿರೂಪಣೆಯಲ್ಲಿ ಈ ಮೂವರು ಭಾಷೆಯ ಬಳಕೆಯಲ್ಲಿ ಹೊಸ ಮೈಲುಗಲ್ಲನ್ನೇ ಸ್ಥಾಪಿಸಿದವರಾಗಿದ್ದಾರೆ. ಕಥಾಹಂದರದಲ್ಲಿ ಬಿತ್ತರಗೊಂಡ ಕಥಾವಸ್ತು, ನಿರೂಪಣಾ ತಂತ್ರ, ಶೈಲಿ ಓದುಗರ ಮನಸೆಳೆಯುತ್ತದೆ. ಸಮಕಾಲೀನ ವಾಸ್ತವದ ಸಮಾಜದ ಓರೆಕೋರೆಗಳ ಬಗ್ಗೆ ಎಚ್ಚರ ಮೂಡಿಸುವಂತವುಗಳಾಗಿವೆ. ಮೂರು ಜನ ಕಥೆಗಾರ್ತಿಯರ ಕಥೆಗಳಲ್ಲಿ ಎದ್ದುಕಾಣುವ ಸಮಾನ ಅಂಶವೆಂದರೆ ಸ್ತ್ರೀಪರ ದನಿಯಾಗಿದೆ. ದನಿಯಿಲ್ಲದವರ, ದಮನಿತರ ಪರವಾದ ಧ್ವನಿಯಾಗಿ, ಧ್ವನಿಪೂರ್ಣವಾದ ಕಥೆಗಳನ್ನು ರಚಿಸಿದ್ದಾರೆ. ಸ್ವಾತಂತ್ರ್ಯ ಹರಣಗೊಂಡ ಸಮಾನತೆಯ ಹಕ್ಕನ್ನು ಕಳೆದುಕೊಂಡ ಪರಾವಲಂಬಿ ಸ್ವಾವಲಂಬನೆಯಿಲ್ಲದ ಪುರುಷನ ಅಧೀನಕ್ಕೆ ಒಳಪಡುವ ಹೆಣ್ಣಿನ ವೇದನೆ, ಅವಳು ಪಡುವ ಪಾಡು ಕಷ್ಟ-ನಷ್ಟಗಳು, ಸ್ಥಿತಿ-ಗತಿಗಳು ದರ್ಶನ ಮಾಡಿಸುವ ಸೂಕ್ಷ್ಮತೆ ಇವರ ಕಥೆಗಳಲ್ಲಿ ಕಾಣಿಸುತ್ತವೆ.

ತಮ್ಮ ಜೀವನದಲ್ಲಿ ಕಂಡುಂಡ ಜೀವನಾನುಭವಗಳನ್ನು ಮಿಳಿತಗೊಳಿಸಿಕೊಂಡು ತಮ್ಮೆದುರಿಗೆ ಕಂಡ ಮಾನವ ಸಮಾಜದ ಲಿಂಗತಾರತಮ್ಯ, ಸ್ತ್ರೀಶೋಷಣೆ, ತುಳಿತಕ್ಕೆ ಒಳಗಾಗಿ ಅದನ್ನು ಅಭಿವ್ಯಕ್ತಿಸಲಾಗದ ಮೂಕ ಅಸಹಾಯಕ ಹೆಂಗಳೆಯರ ಬದುಕನ್ನು ಭಾಷಿಕ ನೆಲೆಯಲ್ಲಿ ತೆರೆದಿಡುವ ಪ್ರಯತ್ನಶೀಲರು, ಸೃಜನಶೀಲತೆ ಮತ್ತು ಗತಿಶೀಲತೆಯನ್ನು ಮೈಗುಡಿಸಿಕೊಂಡ ಈ ತಿವಳಿ ಕಥೆಗಾರ್ತಿಯರ ಕಥೆಗಳು ಓದುಗನ ಮನೋಸ್ಥರದ ಮೇಲೆ ಮೂಡಿಸುವ ಪರಿಣಾಮಗಳು ಹಲವಾರು.

ವೀಣಾ ಶಾಂತೇಶ್ವರರ ಕಥೆಗಳಲ್ಲಿ ಸ್ತ್ರೀಪಾತ್ರಗಳು ಅಕ್ಷರಜ್ಞಾನ ಬಲ್ಲವರು, ಆರ್ಥಿಕವಾಗಿ ಸಬಲೀಕರಣಗೊಂಡವರು ಮತ್ತು ತಮ್ಮದೇ ಆದ ಸಾಮಾಜಿಕ ನೆಲೆ–ಬೆಲೆ ಇರುವವರು ಆಗಿರುವವರು. ಆದಾಗ್ಯೂ ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆ ರೂಪಿಸಿದ ಕಟ್ಟುಪಾಡುಗಳು ಸ್ತ್ರೀಸಂಕುಲಕ್ಕೆ ಕಂಠಕಗಳಾಗಿ ಅವುಗಳ ನಿವಾರಣೆಗಾಗಿ ಪಾತ್ರಗಳೇ ಕಂಡುಕೊಳ್ಳುವ ಹಾದಿಗಳು ಮತ್ತು ಸಾಧನಗಳು ನಿರೂಪಿತಗೊಳ್ಳುತ್ತವೆ. ಹೊಸನೆಲೆಯಲ್ಲಿ ಹೊಸ ಬದುಕು ಕಟ್ಟಿಕೊಳ್ಳಬೇಕೆಂಬ ಹೆಣ್ಣಿನ ತುಡಿತ ಓದುಗನ ಮನಸ್ಸನ್ನು ತಟ್ಟುತ್ತದೆ, ನವ್ಯದ ಕಥೆಗಾರ್ತಿಯರಲ್ಲಿ ಮುಂಚೂಣಿಯಲ್ಲಿದ್ದ ವೀಣಾ ಶಾಂತೇಶ್ವರರ ಪಾತ್ರಗಳ ಚಿತ್ರಣ ಮತ್ತು ಕಥಾ ಆವರಣ ಓದುಗನ ಮನಸ್ಸಿನಲ್ಲಿ ಸ್ಥಾಯಿಯಾಗಿ ಉಳಿದುಬಿಡುತ್ತದೆ. ತುಂಬಾ ನಾಜೂಕಾಗಿ ಕಥೆ ಹೆಣೆಯುವ ವೀಣಾ ಶಾಂತೇಶ್ವರರ ಭಾಷೆಯ ಬಳಕೆ ಮೂಡಿಸುವ ಪ್ರಭಾವ ಪರಿಣಾಮಕಾರಿಯಾದದು. ಅಕಾಡೆಮಿಕ್ಕಾಗಿ ಬರೆಯುವ ವೀಣಾ ಶಾಂತೇಶ್ವರರ ಕಥೆಗಳು ಮನಃಶಾಸ್ತ್ರೀಯವಾಗಿ ಅಧ್ಯಯನ ಮಾಡಲು ತಕ್ಕವುಗಳಾಗಿವೆ.

ಸಾಂಪ್ರದಾಯಕ ವ್ಯವಸ್ಥೆಯಲ್ಲಿ ಬೆಳೆದುಬಂದ ವೈದೇಹಿ ಅದರಿಂದಾಚೆ ನೋಡಬಲ್ಲ ಲೋಕದೃಷ್ಟಿ ಬೆಳೆಸಿಕೊಂಡ ವಿಶಿಷ್ಟ ಕಥೆಗಾರ್ತಿ. ಸೀಮಿತ ಪ್ರದೇಶದಲ್ಲಿ ನಡೆಯುವ ಎಲ್ಲಾ ವಿದ್ಯಮಾನಗಳನ್ನು ಅವಲೋಕಿಸುವ ಸೂಕ್ಷ್ಮ ಪರಿಗ್ರಹಿಕೆಯವರು. ಕುಟುಂಬದ ಆವರಣದ ಒಳಗೆ ನಡೆಯುವ ಲಿಂಗತಾರತಮ್ಯ ಮತ್ತು ಕುಟುಂಬದ ಪರಿಧಿಯ ಆಚೆ ನಡೆಯುವ ಹೆಣ್ಣಿನ ಶೋಷಣೆ ಇತ್ಯಾದಿಗಳನ್ನು ಗಾಢವಾಗಿ ಮನಸ್ಸಿಗೆ ತಟ್ಟುವಂತೆ ನಿರೂಪಿಸುವಲ್ಲಿ ವೈದೇಹಿಯವರು ಯಶಸ್ವಿಯಾಗುತ್ತಾರೆ. ಪಾತ್ರಗಳ ದಟ್ಟವಾದ ವರ್ಣಣೆ, ಅಂತರಂಗದ ತುಮುಲ ತುಡಿತಗಳ ಅನಾವರಣ, ಸಹಜೀವಿಗಳೊಂದಿಗಿನ ಅಂತರ್‌ಕ್ರಿಯೆಗಳು ಮತ್ತು ಪ್ರಾದೇಶಿಕ ಚಿತ್ರಣವನ್ನು ಮನೋಜ್ಞವಾಗಿ ಕಥೆಗಳು ಓದುಗನ ಮನಸ್ಸಿನಲ್ಲಿ ಛಾಪು ಮೂಡಿಸುವಂತಾದವುಗಳು. ಈ ಎಲ್ಲವುಗಳಲ್ಲಿ ವೈದೇಹಿಯವರ ಭಾಷೆಯ ಸೂಕ್ಷ್ಮ ಬಳಕೆ ಕಥೆಗಳಿಗೆ ಹೊಸ ಮೆರಗು ತಂದುಕೊಡುತ್ತದೆ. ಕಥಾ ನಿರೂಪಣೆಯಲ್ಲಿ ಬಳಕೆಯಾಗುವ ಕುಂದಾಪುರ ಕನ್ನಡವು ಕಥೆಗೆ ಹೊಸ ಸೊಬಗು ತಂದುಕೊಡುವ ವಿಶಿಷ್ಟ ತಂತ್ರವಾಗಿದೆ. ಕಥೆಗಳ ಸೊಬಗತೆಯನ್ನು ಹೆಚ್ಚಿಸುವಂತಾದ್ದಾಗಿದೆ. ಹೆಣ್ಣುತನವನ್ನು ಮಾನವ ಸಹಜ ಆಸೆ–ಆಕಾಂಕ್ಷೆಗಳನ್ನು ಅಭಿವ್ಯಕ್ತಿಸುತ್ತವೆ. ಆ ಕಥೆಗಗಳ ಜಾಡಿನಲ್ಲಿ ಎದುರಾಗುವ ಪಿತೃಪ್ರಧಾನ ಸಂಸ್ಕೃತಿಯಲ್ಲಿ ಸಿಕ್ಕು ಜರ್ಜರಿತವಾಗುವ ಹೆಣ್ಣಿನ ಬದಲಾವಣೆ ಬಯಸುವ ಹೊಸನೋಟದ ಹೆಂಗಳೆಯರು ಮತ್ತು ಅವರ ಸಹಜ ಲೈಂಗಿಕ ಬಯಕೆಯ ಸೂಚ್ಯ ಅಭಿವ್ಯಕ್ತಿ ಮನಸ್ಸಿಗೆ ನಾಟುತ್ತವೆ. ಸ್ತ್ರೀ ಬಗ್ಗೆ ಸ್ತ್ರೀತ್ವದ ಬಗ್ಗೆ ಅರಿವು ಮೂಡಿಸುವಂತಾಗುತ್ತವೆ.

ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಅತ್ಯಂತ ಸೃಜನಶೀಲ ಬರಹಗಾರ್ತಿ ಗೀತಾ ನಾಗಭೂಷಣ ಕನ್ನಡ ಸಾಹಿತ್ಯದ ಸಣ್ಣಕಥಾ ಪ್ರಕಾರದ ಪ್ರಖರ ಲೇಖಕಿಯು ಹೌದು. ಹೈದರಾಬಾದ್ ಕರ್ನಾಟಕ ಭಾಗದ ಜವಾರಿ ಭಾಷೆಯನ್ನು ಅದರ ಸೊಗಡಿನೊಂದಿಗೆ ದಮನಿತರ ಬದುಕನ್ನು ಯಾವತ್ತಾಗಿ ಚಿತ್ರಿಸಿ ಕೊಡುವ ಅನನ್ಯ ಕ್ರೌರ್ಯ ಮತ್ತು ಅನ್ಯಾಯದ ಪರಮಾವಧಿಯನ್ನು ದಿಟ್ಟತನದಿಂದಲೇ ಭಾಷಿಕ ನೆಲೆಯಲ್ಲಿ ನೆರೆದಿಡಬಲ್ಲ ಬಂಡಾಯಗಾರ್ತಿ. ಇವರ ಕಥೆಗಳಲ್ಲಿ ಪಾತ್ರಗಳ ದಟ್ಟ ಚಿತ್ರಣವಿದೆ. ಆ ಪಾತ್ರಗಳಿಗೆ ಪೂರಕವಾದ ಪರಿಣಾಮಕಾರಿ ಆವರಣವಿದೆ ಮತ್ತು ಪಾತ್ರಗಳ ಒಳತೋಟಿಯ ಬಿಂಬವೂ ಕಥೆಯ ಕೇಂದ್ರಬಿಂದುವಿನಲ್ಲಿ ಕಾಯಿಸಲ್ಪಡುತ್ತದೆ. ಉಳಿಗವಾನ್ಯ ಪದ್ಧತಿಯ ಪಳೆಯುಳಿಕೆಯೆಂಬಂತೆ ಜೀವಂತವಾಗಿರುವ ಜೀತಪದ್ಧತಿ, ಅಸ್ಪುಶ್ಯತೆ, ಯಾಜಮಾನ್ಯ ಸಂಸ್ಕೃತಿ ಮತ್ತು ಅಮಾನವೀಯ ಪಿತೃಪ್ರಧಾನ ಸಂಸ್ಕೃತಿಯನ್ನು ಕಥೆಯ ಜಾಡಿನಲ್ಲಿ ಕಾಯಿಸುತ್ತಾ ಹೋಗುವ ಕಥೆಗಾರ್ತಿ ಅವೆಲ್ಲವುಗಳು ಎತ್ತರಮಟ್ಟಿಗೆ ಗ್ರಾಮೀಣ-ನಗರ, ಜೀವನ ಸಂಸ್ಕೃತಿಯನ್ನು ಹಿಸುಕಿಹಾಕುತ್ತಿವೆ.

ಗೀತಾ ನಾಗಭೂಷಣ ಕಥೆಗಳಲ್ಲಿ ಕಥೆಯ ಆರಂಭದಲ್ಲಿಯೇ ಕಥಾ ಆವರಣವನ್ನು ಸೃಷ್ಟಿಸಿ ಕಥೆಗೆ ಬೇಕಾದ ಕಥಾಹಂದರವನ್ನು ಕಟ್ಟುತ್ತಾ ಸಾಗುತ್ತಾರೆ. ಕಥೆಗಳಲ್ಲಿ ಹೊಲಗೇರಿ, ಕೊಳಚೆಗೇರಿ, ದಲಿತರ ಹಟ್ಟಿಗಳು, ಇತ್ಯಾದಿಗಳನ್ನು ಢಾಳಾಗಿ ಚಿತ್ರಿಸುತ್ತಲೇ ಅಲ್ಲಲ್ಲಿ ಕಾಯಿಸುವ ಮೇಲುಸ್ಥರದ ಮೇಲ್ವರ್ಗದ ಕುಲೀನರ ಮ್ಯಾಗೇರಿಗಳನ್ನು ಕಟ್ಟಿಕೊಡುತ್ತಾರೆ. ಹೊಲಗೇರಿ-ಕೊಳಚೆಗೇರಿ ಮತ್ತು ಮ್ಯಾಗೇರಿಗಳ ವೈದೃಷ್ಯದ ಚಿತ್ರಣ ಕಟ್ಟಿಕೊಡುತ್ತಲೇ ಆ ಎರಡೂ ಭಿನ್ನ ಸ್ಥರಗಳ ಮಧ್ಯೆ ಸಂಬಂಧ ಸಂಘರ್ಷವನ್ನು ಭಾಷಿಕ ನೆಲೆಯಲ್ಲಿಯೇ ನಿರೂಪಿಸುತ್ತಾ ಹೋಗುತ್ತಾರೆ. ಕುಲೀನ ಕುಟುಂಬದಲ್ಲಿ ಹುಟ್ಟಿದಾಗ್ಯೂ ಸಿರಿವಂತಿಕೆಯ ಸುಖವನ್ನು ಅನುಭವಿಸುತ್ತಿದ್ದಾಗ್ಯೂ ಮಾನಸಿಕವಾಗಿ ನೈತಿಕವಾಗಿ ಅಧಃಪತನಗೊಂಡಿರುವ ಶೋಷಕ ಪ್ರವೃತ್ತಿಯ ಮೇಲುವರ್ಗದ ಜನರು ತಮ್ಮ ಭೋಗಲಾಲಸೆಗೆ ರೂಪಿಸಿದ ತಂತ್ರಗಳು, ಹುನ್ನಾರಗಳು ಕೆಳಸ್ಥರದ ದಲಿತರ ಬದುಕಿಗೆದು ಸ್ವಪ್ನವೂ, ದುರಂತವೂ ಆಗಿ ಪರಿಣಮಿಸಿದೆ. ಬಂಡಾಯದ ಧ್ವನಿಗೈಯುತ್ತಲೇ ದಮನಿತ ದಲಿತರು ಹೊಸನೆಲೆಯ ಪರಿವರ್ತನಾ ಹಾದಿಯನ್ನು ಕಂಡುಕೊಳ್ಳುವ ಹೊಸ ಮಾರ್ಗವೊಂದನ್ನು ಗೀತಾ ನಾಗಭೂಷಣ ಸೂಚ್ಯವಾಗಿ ಕಥೆಯ ಮಗ್ಗುಲಲ್ಲೇ ಕಾಣಿಸುತ್ತಾರೆ. 'ಪುಂಡಿ ಪೂಜಾರಿಯಾರಾಗ' ಎಂಬ ಕಥೆಯಲ್ಲಿ ಹೊಲಗೇರಿಯ ಮರಗವ್ವನಗುಡಿ ಮತ್ತು ಮ್ಯಾಗೇರಿಯ ಮಹಾಲಕ್ಷ್ಮೀ ಮುಂದಿರದ ವೈದೃಶ್ಯವನ್ನು ಚಿತ್ರಿಸುತ್ತಲೇ ಎರಡು ಭಿನ್ನ ಜನಸಂಸ್ಕೃತಿಯನ್ನು ನಿರೂಪಿಸುವ ಕಥೆಗಾರ್ತಿ ಮಾನವೀಯ ನೆಲೆಯನ್ನು ಬದುಕು

[illegible] [illegible]

ನೆಡೆಸುವ ಜೀವಂತ ಕ್ರಿಯೆಗೆ ಹೆಚ್ಚಿನ ಅಸ್ಥೆ ವಹಿಸುತ್ತಾರೆ. ಶ್ರೇಣೀಕೃತ ಸಮಾಜದ ಉನ್ನತಸ್ಥರದ ಸಾಹುಕಾರ ಗುರುಪಾದಪ್ಪ ಮತ್ತು ಕೆಳದರ್ಜೆಯ ಹೊಲೆಯರ ಮಲ್ಲಣ್ಣ ಇವರುಗಳ ಕೌಟುಂಬಿಕ ಸ್ವರೂಪ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ನಿರೂಪಿಸುತ್ತ ಮನೋಧರ್ಮವನ್ನು ಅಭಿವ್ಯಕ್ತಿಸುತ್ತಾ ಹೋಗುತ್ತಾರೆ. ಆಧುನಿಕ ಶಿಕ್ಷಣ ಪಡೆದ ಸಾಹುಕಾರನ ಮಗ ಈಸೂರು ಜಿಲ್ಲಾ ಕಲೆಕ್ಟರ್ ಆಗುವುದು, ಮನದಲ್ಲಿ ವಿವೇಕ ತುಂಬಿಕೊಂಡು ಸಾಮಾಜಿಕ ಸಾಮರಸ್ಯ ಮೂಡಿಸಬಯಸುವವನು. ಸಮಾನತೆ ಬ್ರಾತೃತ್ವ ಕೊಡಮಾಡುವುದು ಸರ್ಕಾರ ಮತ್ತು ಸಮುದಾಯಗಳ ಆದ್ಯ ಕರ್ತವ್ಯವೆಂದು ಪರಿಭಾವಿಸಿದವನು. ಪರಿಣಾಮವಾಗಿ ಮಲ್ಲಣ್ಣನ ತಮ್ಮ 'ಪುಂಡಪ್ಪ' 'ಮಹಾಲಕ್ಷ್ಮಿ' ಮಂದಿರದ ಅರ್ಚಕನಾಗುವ ಅವಕಾಶ ಪಡೆದುದು. ಸ್ಥಗಿತ ಸಮಾಜದ ಅಸ್ತಿತ್ವವನ್ನು ಭಯಸುವ ಮೇಲುವರ್ಗದ ಆಚಾರಿ ಕಟ್ಟಕಡೆಗೆ ದೇವಿಯ ಎಲ್ಲಾ ಆಭರಣಗಳನ್ನು ಲಪಟಾಯಿಸಿಕೊಂಡು ಊರು ಬಿಟ್ಟೋದ ಅನಾಚಾರದವನು. ಇಂತಹದೇ ಭಿನ್ನ-ಭಿನ್ನ ಮನೋಧರ್ಮದ ವಿವಿಧ ವರ್ಗದ ಜನರನ್ನು ಚಿತ್ರಿಸುತ್ತಲೇ ದಮನಿತರ ಬದುಕಲ್ಲೂ ಹೊಸ ಚೈತನ್ಯ ಕಾರಂಜಿ-ಜಿಮ್ಮುವಂತೆ ಮಾಡಬಲ್ಲ ಸೃಜನಶೀಲ ಕಥೆಗಾರ್ತಿ ಗೀತಾ ನಾಗಭೂಷಣ.

ಕನ್ನಡ ಸಾಹಿತ್ಯದ ಕಥನ ಮಾರ್ಗದಲ್ಲಿ ಮುಖ್ಯವಾಹಿನಿಯನ್ನು ಸೃಷ್ಟಿಸಿ ಹೊಸ ಸಂಚಲನವನ್ನುಂಟು ಮಾಡಿದ ಧೀಮಂತ ಕಥೆಗಾರ್ತಿಯರೆಂದರೆ ವೀಣಾ ಶಾಂತೇಶ್ವರ, ವೈದೇಹಿ ಮತ್ತು ಗೀತಾ ನಾಗಭೂಷಣ. ಕಥಾವಸ್ತು, ಪಾತ್ರಗಳ ಪರಿಣಾಮಕಾರಿ ಚಿತ್ರಣ, ಕಥಾನಿರೂಪಣೆ ಮನತಟ್ಟುವ ಶೈಲಿ ಮತ್ತು ಕಥಾತಂತ್ರದ ಮುಖೇನ ಈ ಮೂವರು ಪರಿಣಾಮಕಾರಿಯಾಗಿ ಕಥಾ ನಿರೂಪಣೆ ಮಾಡುವಂತಾದ್ದು ಕನ್ನಡ ಸಣ್ಣಕಥೆ ಪ್ರಕಾರದ ನಿಟ್ಟಿನಲ್ಲಿ ಒಂದು ಅಭೂತಪೂರ್ವ ಸಾಧನೆಯಂದೇ ಪರಿಗಣಿಸಬಹುದು. ಸ್ತ್ರೀಲೋಕದ ಸದಸ್ಯರಾಗಿ ಅದರ ಆಳ-ಅಗಲ ಅರ್ಥ ಮಾಡಿಕೊಂಡ ಅನುಭವಿ ಕಥೆಗಾರ್ತಿಯರು ಮಾತೃಹೃದಯದ ಕೆಲವು ಪುರುಷ ಸದಸ್ಯರನ್ನು ಅವಗಣನೆ ಮಾಡದೇ ಅಂತಹವರನ್ನು ಗುರುತಿಸುವುದು ಅವರ ಅಸ್ಮಿತೆಯನ್ನು ಪರಿಭಾವಿಸುವುದು ಇವರುಗಳ. ಶ್ರೇಷ್ಠ ಸಾಹಿತ್ಯಕ-ಮಾನವಿಕ ಗುಣ. ಮೂವರು ಮಹಿಳಾವಾದಿಗಳಾದರೂ, ಜನಪರವಾದಿಗಳಾಗಿ ಬಯಸುವ ಮಾನವೀಯ ಗುಣದವರು. ತುಳಿತಕ್ಕೆ ಒಳಗಾದ, ದನಿಯಿಲ್ಲದ ಅಗಣಿತ ಸ್ತ್ರೀಯರ ದುಃಖದುರ್ಮಾಕ್ಕೆ ಸ್ಪಂದಿಸಿದವರು. ಸಹಾಯಕರ ಮೇಲಾಗುತ್ತಿರುವ ದೌರ್ಜನ್ಯ, ಕ್ರೌರ್ಯ, ಹಿಂಸೆಯ ವಿರುದ್ಧ ಕಥೆಯ ಭಾಷಿಕದ ಮುಖೇನವೇ ಪ್ರತಿಭಟನೆಯ ಧ್ವನಿಯೆತ್ತಿದವರು. ಹೀಗಾಗಿ ಈ ಮೂವರು ಕನ್ನಡ ಕಥಾಲೋಕದ ಮಹಿಳಾ ಸಾಹಿತಿಗಳು ಮತ್ತು ಅವರ ಕಥಾಸಾಹಿತ್ಯ ಜೀವನಾನುಭವ ಮತ್ತು ಲೋಕಾನುಭವಿಗಳಿಂದ ಸಾಂಗತ್ಯಗೊಂಡ ಕಥನ ಸಾಂದ್ರತೆ ಓದುಗನ ಮನಸ್ಸಿನಲ್ಲಿ ಪರಿಣಾಮ ಮೂಡಿಸುವ ಅನನ್ಯ ಕಥೆಗಳಾಗಿವೆ.

ಅಧ್ಯಯನದ ಫಲಿತಗಳು

೧. ವಿಭಿನ್ನವಾದ ತಾತ್ವಿಕ ನಿಲುವುಗಳನ್ನು ವ್ಯಕ್ತಿ, ಸಮಾಜ ಮತು ್ತತನ್ನ ಸುತ್ತಲ ಪರಿಸರದ ಜತೆಗಿನ ಸಂಬಂಧದಿಂದಾಗಿ ಹೊಸ ಆಯಾಮದಲ್ಲಿ ಕಥಾಭಿವ್ಯಕ್ತಿಯನ್ನು ಮಾಡಿದ್ದಾರೆ. ಈ ಮೂವರು ಲೇಖಕಿಯರ ಕಥೆಗಳಲ್ಲಿ ಸ್ತ್ರೀಪರವಾದ ಸಂವೇದನೆ, ಲಿಂಗತಾರತಮ್ಯವಿಲ್ಲದ ಸಮಾನ ಸಾಮಾಜಿಕ ನ್ಯಾಯ ಮತ್ತು ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಗಟ್ಟಿಧ್ವನಿ ಎತ್ತಿರುವುದು.

೨. ವೀಣಾ ಶಾಂತೇಶ್ವರರ ಕಥೆಗಳಲ್ಲಿ ಹೆಣ್ಣಿನ ವ್ಯಕ್ತಿತ್ವದ ಆಶಯ, ಸ್ವಾತಂತ್ರಹರಣ ಮತ್ತು ಅಸ್ಮಿತೆಯ ನಾಶದ ವಿರುದ್ಧ ಸ್ತ್ರೀಸಂಕುಲ ಎಚ್ಚರವಿದೆ. ವೈದೇಹಿಯವರ ಕಥೆಗಳಲ್ಲಿ ಹೆಣ್ಣಿಗೆ ತನ್ನದೇ ವ್ಯಕ್ತಿತ್ವ ಕಟ್ಟಿಕೊಳ್ಳಬಯಸುವ ಆಶೋತ್ತರ ಮತ್ತು ಅಸ್ಮಿತೆಯ ಸ್ಥಾಪಿಸಿಕೊಳ್ಳಬಯಸುವ ಹೆಣ್ಣಿನ ಮನದಾಳದ ಅಂಕಿತವನ್ನು ವೈದೇಹಿಯವರು ಸೂಕ್ಷ್ಮ ಭಾಷಾಕೌಶಲ್ಯದ ಮುಖೇನ ಸೂಚ್ಯವಾಗಿ ಮತ್ತು ಸಾಂಕೇತಿಕವಾಗಿ ಅಭಿವ್ಯಕ್ತಿಸುತ್ತಾರೆ.

೩. ಗೀತಾ ನಾಗಭೂಷಣರವರ ಕಥೆಗಳ ಸ್ತ್ರೀಪಾತ್ರಗಳ ಅನಾವರಣಗೊಳ್ಳುವುದು ನಗರ ಅಥವಾ ಗ್ರಾಮ ಪರಿಸರದ ಕೊಳಚೆಗೇರಿ, ದಲಿತಗೇರಿ, ಜೋಪಡಿಪಟ್ಟಿಯ ಪರಿಸರದಲ್ಲಿ. ಈ ಮುಖೇನ ಧಮನಿತ ಸಮುದಾಯಕ್ಕೆ ಧನಿನೀಡಿ ಪ್ರಾತಿನಿಧ್ಯ ಕೊಟ್ಟು ಅವರನ್ನು ಮುಖ್ಯವಾಹಿನಿಗೆ ಕರೆದೊಯ್ಯುವ ಆಶಯವಿದೆ. ಮೇಲುವರ್ಗದವರ ಶೋಷಣೆಯ ವಿರುದ್ಧ ಬಂಡಾಯವಿದೆ.

೪. ಸ್ತ್ರೀ ಮತ್ತು ಪುರುಷ ನಿಸರ್ಗ ನಿಯಮದ ಪ್ರಕಾರ ಸಮಾನರು ಮತ್ತು ವಿಶಿಷ್ಟರು. ಆದಾಗ್ಯೂ ಸಾಮಾಜಿಕ ಪರಿಸರದಲ್ಲಿ ಸ್ತ್ರೀಯನ್ನು ಕೆಳದರ್ಜೆಯ ಪ್ರಜೆಯೆಂದು ಪರಿಭಾವಿಸುವ ಕ್ರೌರ್ಯದ ಪರಕಾಷ್ಠೆಯಿದೆ. ಹಲವು ಸ್ತ್ರೀಪಾತ್ರಗಳಲ್ಲಿ ಸ್ವಾತಂತ್ರ್ಯ ಮನೋಭಾವ ಮತ್ತು ಪುರುಷಪ್ರಧಾನ ಸಂಸ್ಕೃತಿಯನ್ನು ಎದುರಿಸುವ ದಿಟ್ಟತನದ ಮನೋಧರ್ಮವಿದೆ. ಈ ಹಿನ್ನೆಲೆಯಲ್ಲಿ ಹೆಣ್ಣಿನ ಆತ್ಮಗೌರವ, ಸ್ವಾಭಿಮಾನ ಮತ್ತು ಅಸ್ಮಿತೆಗೆ ದಕ್ಕೆಯನ್ನು ತರಬಾರದು ಎಂಬ ಸಾಮಾಜಿಕ ಎಚ್ಚರ ಮೂಡಿಸಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೫. ಮೂವರು ಲೇಖಕಿಯರು ಹಲವು ಕಥೆಗಳಲ್ಲಿ ಸಾಂಪ್ರದಾಯಿಕ ಸಮಾಜದ ಗೊಡ್ಡು ಆಚರಣೆಗಳನ್ನು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ವಿರೋಧಿಸುವ ಸ್ತ್ರೀಪಾತ್ರಗಳಿವೆ.

ಮಾನವೀಯತೆಯ ಸ್ಪರ್ಶವಿಲ್ಲದ ಜಡಸಂಪ್ರದಾಯಗಳ ವಿರುದ್ಧ ತಿರುಗಿಬೀಳುವ ಅನಿವಾರ್ಯತೆ ಶೋಷಿತ ಸ್ತ್ರೀಯ ಪಾಲಿಗೆ ಒದಗಿಬರುತ್ತದೆ ಎಂಬುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

೬. ಹೆಣ್ಣಿನ ಲೈಂಗಿಕ ಬಯಕೆ/ಆಸಕ್ತಿಯ ಬಗ್ಗೆ ಗಮನ ಕೊಡದ ಪುರುಷಪ್ರಧಾನ್ಯತೆಯ ವಿರುದ್ಧ ತನ್ನದೇ ಆದ ಮಾರ್ಗಗಳ ಮುಖೇನ ಹೆಣ್ಣು ಅಭಿವ್ಯಕ್ತಗೊಳಿಸುವಿಕೆ ಕಾಣುತ್ತದೆ. ಹೆಣ್ಣನ್ನು ದೇಹಮೀಮಾಂಸೆಯ ನೆಲೆಯಲ್ಲಿ ಪುರುಷರು ಅವಳ ಸೌಂದರ್ಯವನ್ನು ಬಳಸಿಕೊಳ್ಳುವುದು ಅನೇಕ ಕಥೆಗಳಲ್ಲಿ ಕಾಣುತ್ತದೆ. ಹೆಣ್ಣು ಕೂಡ ಗಂಡಿನ ಸಾಂಗತ್ಯಕ್ಕಾಗಿ ಧರ್ಮ, ಜಾತಿ, ಸಂಪ್ರದಾಯವನ್ನು ಮೀರಿಹೋಗುವ ಹೆಣ್ಣುಗಳನ್ನು ಅವರ ಕಥೆಗಳಿಂದ ಕಂಡುಕೊಳ್ಳಲಾಗಿದೆ.

೭. ಹೆಣ್ಣನ್ನು ತನ್ನ ಮಾನವ ಸಮಾಜದ ಅವಿಭಾಜ್ಯ ಅಂಗವೆಂದು ಪರಿಗಣಿಸದ ಪುರುಷಪ್ರಧಾನ ಸಮಾಜ ಮಹಿಳೆಯನ್ನು ಅನುಭೋಗದ ವಸ್ತುವಿನಂತೆ ಪರಿಗಣಿಸುತ್ತದೆ. ಲೈಂಗಿಕವಾಗಿ ಅನುಭವಿಸಿ ಶೋಷಿಸುವ ರಾಕ್ಷಸಪ್ರವೃತ್ತಿಯ ಪ್ರತ್ಯಕ್ಷದರ್ಶನವನ್ನು ಹಲವು ಕತೆಗಳು ಮೂಡಿಸುತ್ತವೆ. ತನ್ಮೂಲಕ ಸ್ತ್ರೀಯು ಪುರುಷನಿಂದ ಒದಗಿ ಬರುವ ಋಣಾತ್ಮಕ ಅಂಶಗಳ ಬಗ್ಗೆ ಸದಾ ಜಾಗೃತಳಾಗಿರಬೇಕೆಂಬುದನ್ನು ಕಥಾಭಿವ್ಯಕ್ತಿಯಲ್ಲಿ ರೂಪಿಸಿಕೊಂಡಿರುವುದನ್ನು ಗುರುತಿಸಲಾಗಿದೆ.

೮. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸರ್ವರಿಗೂ ಪ್ರಾಪ್ತವಾಗಿರಬೇಕು. ಲಿಂಗದ ಆಧಾರದ ಮೇಲೆ ಯಾವೊಬ್ಬ ವ್ಯಕ್ತಿಯೂ ವಂಚಿತನಾಗಬಾರದು ಎಂಬುದು ಕಥೆಗಾರ್ತಿಯರ ಕಳಕಳಿಯಾಗಿದೆ. ಕತೆಗಾರ್ತಿಯರು ಲಿಂಗಾತೀತವಾಗಿ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ಥರದಲ್ಲಿ ಬರುವ ಸಾಮಾಜಿಕ ವರ್ಗಕ್ಕೂ ಅದೇ ಮಾನವೀಯ ಸ್ಪಂದನೆ ನೀಡಿರುವುದು ಕಥೆಗಳ ಹೆಗ್ಗಳಿಕೆ ಮತ್ತು ಸಾಂಸ್ಕೃತಿಕ ಆಯಾಮವಿರುವುದನ್ನು ಅವರ ಕಥೆಗಳ ಮೂಲಕ ಕಂಡುಕೊಳ್ಳಲಾಯಿತು.

೯. ಕಥೆಗಳಲ್ಲಿ ಕೆಲವು ಪಾತ್ರಗಳನ್ನು ವಸ್ತು ನಿರ್ವಹಣೆಯ ದೃಷ್ಟಿಯಿಂದ ಪುರಾಣಪಾತ್ರಗಳೊಂದಿಗೆ ಪುನರ್ ನವೀಕರಿಸಿ ವರ್ತಮಾನಕ್ಕೆ ಜೋಡಿಸಿ-ಕೊಂಡಿರುವುದನ್ನು ಕಥೆಗಳಲ್ಲಿ ಕಾಣುತ್ತದೆ. ಆ ಮೂಲಕ ಹೆಣ್ಣಿನ ಸ್ವಾಭಿಮಾನಕ್ಕೆ ಅಂಟಿಕೊಂಡಿದ್ದ ಕಳಂಕವನ್ನು ನಿರಚನಗೊಳಿಸುವ ಪ್ರಯತ್ನವನ್ನು ಕಥೆಗಾರ್ತಿಯರು ಮಾಡಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೧೦. ಸಾಹಿತ್ಯ ಕೃತಿಗಳನ್ನು ಪುರುಷಘೋಷಿತ ತತ್ವಗಳ ಪ್ರಕಾರವೇ ಓದಬೇಕಾಗಿಲ್ಲ ಎಂಬುದನ್ನು ವೈದೇಹಿಯವರಿಂದ ಅಭಿವ್ಯಕ್ತಿಗೊಂಡ ಕಥೆಗಳನ್ನು ಅಧ್ಯಯನಿಸಿದಾಗ ತಿಳಿದು ಬರುತ್ತದೆ. ಈ ಮೂಲಕ ಪುರುಷಪ್ರಜ್ಞೆಯನ್ನು ಮೀರಿಯೂ ಸ್ತ್ರೀಪ್ರಜ್ಞೆಯ ನಿಲುವಿನಿಂದ ಅನಾವರಣಗೊಳಿಸುವ ಕ್ರಮವು ಕಥೆಗಳಲ್ಲಿ ಬರುತ್ತದೆ. ಪರಂಪರೆಯಿಂದ ಬಂದ ಸ್ತ್ರೀವಿರೋಧಿ ನಿಲುವುಗಳು, ಭಾಷೆಯಲ್ಲಿ ಮೂಡುವ ಪುರುಷ ಪಕ್ಷಪಾತ ಇವೆಲ್ಲವನ್ನು ಕಥೆಗಳ ಮೂಲಕವೇ ಉತ್ತರಿಸಿರುವುದನ್ನು ಅವರಲ್ಲಿ ಕಾಣಬಹುದು.

೧೧. ಸಾಮಾನ್ಯವಾಗಿ 'ಗಂಡು ಗುಣಗಳು' ಎಂದು ಗುರುತಿಸಲಾಗುವ ಧೈರ್ಯ, ಸಾಹಸ, ಜವಾಬ್ದಾರಿ, ನಾಯಕತ್ವ ಹಾಗೂ 'ಹೆಣ್ಣಿನ ಗುಣಗಳು' ಎಂದು ಗುರುತಿಸಲಾಗುವ ವಿಧೇಯತೆ, ಕೋಮಲತೆ, ಲಜ್ಜೆ, ಸೇವಕತ್ವ ಮುಂತಾದವು ವಾಸ್ತವಕ್ಕೆ ಬಂದಾಗ ಬುಡಮೇಲಾಗುವ ಸಂಗತಿಯನ್ನು ವೈದೇಹಿಯವರ ಕಥೆಗಳಲ್ಲಿ ಕಾಣುತ್ತದೆ. ಹೆಸರಿಗೆ ಗಂಡಸರು ಮನೆ ಒಡೆಯರಾದರೂ ಹೆಂಗಸರೇ ಮನೆಯ ಸರ್ವಸಮಸ್ತ ಜವಾಬ್ದಾರಿಯನ್ನು ನಿರ್ವಹಿಸುವವರು ಎಂಬುದು ಅವರ ಕಥೆಗಳ ಮೂಲಕ ತಿಳಿಯಬಹುದಾಗಿದೆ. ಹೀಗೆ ಸ್ತ್ರೀ ಯಾಜಮಾನಿಕೆಗಳನ್ನು ಕೂಡ ಅಭಿವ್ಯಕ್ತಿಸುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಯಿತು.

೧೨. ವರ್ಗ, ಜಾತಿ, ಲಿಂಗವ್ಯವಸ್ಥೆ ಕುರಿತಂತೆ ಪ್ರಚಲಿತವಿರುವ ಶೋಷಕರು–ಶೋಷಿತರು ಎಂಬ ದ್ವಿತ್ವದ ಪರಿಕಲ್ಪನೆಗಳ ಪರದೆ ಸರಿಸಿ ಹಿಂದೆ ಗ್ರಾಮೀಣ ಭಾರತದಲ್ಲಿ ಇವೆಲ್ಲವೂ ಸಾಮಾಜಿಕ ಒಳನೇಯ್ಗೆಯಲ್ಲಿ ಹೇಗೆ ಅನಿವಾರ್ಯ ಹೊಂದಾಣಿಕೆಗಳಾಗಿರುತ್ತಿದ್ದವು ಎಂಬುದನ್ನು ವೈದೇಹಿಯವರ ಕಥೆಗಳಿಂದ ಕಂಡುಕೊಳ್ಳಬಹುದಾಗಿದೆ.

೧೩. ಜೀವನ ವಿಧಾನದ ಪರಿವರ್ತನೆಗಳು, ಜಾಗತೀಕರಣದಿಂದಾಗುವ ದುಷ್ಪರಿಣಾಮಗಳು, ಹೆಣ್ಣು ಗಂಡಿನ ನಡುವಿನ ಆಂತರಿಕ ಸಂಬಂಧಗಳ ಅನಾವರಣ, ಭ್ರಷ್ಟಾಚಾರದ ತೋರ್ಪಡಿಕೆಯ ಜೊತೆಗೆ ಅದರಿಂದಾಗುವ ಮನುಷ್ಯನ ಅಶಾಂತಿಯ ಅತೃಪ್ತಿತನ, ಆಶಾವಾದದ ಪರಾಕಾಷ್ಠೆ, ಹೇಳಿಕೊಳ್ಳದ ಭಾವನೆಗಳಿಂದಾಗುವ ಪರಿಣಾಮಗಳು, ದಾಂಪತ್ಯದ ನಡುವಿನ ವೈರುಧ್ಯಗಳು, ಹಗಲು ಕತ್ತಲುಗಳ ವಿಶೇಷತೆಗಳು ಸಾಂಸ್ಕೃತಿಕ ರಾಜಕಾರಣ ಹಾಗೂ ಆರ್ಥಿಕರಾಜಕಾರಣವೂ ಕೂಡ ವೈದೇಹಿಯವರ ' ಕಥೆಗಳಿಂದ ತಿಳಿದು ಬರುತ್ತದೆ.

೧೪. ವೈದೇಹಿ ಕಥೆಗಳ ವಸ್ತುಗಳು ಕೇವಲ ಎರಡು ಮೂರು ಪೀಳಿಗೆಯಷ್ಟೇ ಹಿಂದಿನವು. ಆದರೆ ಇವು ಎಲ್ಲವೂ 'ಹೇಳುವ' ಮತ್ತು 'ಕೇಳುವ' ಲಕ್ಷಣಗಳನ್ನು ಬಲವಾಗಿ

ಹೊಂದಿರುವಂಥವು. ಕಥೆ ಹೇಳುವವರು ಬೇಕಾದಷ್ಟು ಜೀವನವನ್ನು ಕಂಡುಂಡಿರುವ ಅನುಭವಿ ಹಿರಿಯರು. ಕೇಳುವವರು ಬದುಕಿನ ಬಗ್ಗೆ ಕುತೂಹಲ ಮತ್ತು ತಲೆತುಂಬ ಪ್ರಶ್ನೆಗಳುಳ್ಳ ಹಿರಿಯರು ಮತ್ತು ಮಕ್ಕಳು ಅವರು ಕಥೆ ಹೇಳುತ್ತ ನಡುನಡುವೆ ತಾವೇ ಸಾಂದರ್ಭಿಕ ಉಪಕಥೆಗಳನ್ನು ಸೇರಿಸಬಹುದು. ಕೇಳುಗರ ಪ್ರಶ್ನೆಗಳಿಗೆ ಉತ್ತರರೂಪದಲ್ಲಿ ಬೇರೆ ಪ್ರಸಂಗಗಳನ್ನು ಅವರು ನಿರೂಪಿಸಬಹುದು. ಇದೊಂದು ವಿಶಿಷ್ಟವಾದ ಕಥನಕ್ರಮವಾಗಿದೆ. ಪರಸ್ಪರ ಭಿನ್ನವಾದ ವ್ಯಕ್ತಿತ್ವಗಳು ಅಥವಾ ವಿಭಿನ್ನವಾದ ದೃಷ್ಟಿಕೋನಗಳನ್ನು ಒತ್ತಟಿಗೆ ತಂದು ನಿಜದ ಆವಿಷ್ಕಾರಕ್ಕೆ ವೈದೇಹಿ ಯತ್ನಿಸುವ ಈ ಹೊಸ ಕ್ರಮವನ್ನು ಗ್ರಹಿಸಬಹುದಾಗಿದೆ.

೧೫. ವೈದೇಹಿ ಸ್ತ್ರೀಲೋಕದಲ್ಲಿ ತಮ್ಮ ಅನುಭವಕ್ಕೆ ದಕ್ಕಿದ, ಮನದಲ್ಲಿ ದೃಢವಾಗಿ ನೆಲೆನಿಂತ ಹೆಣ್ಣುಮಕ್ಕಳು ಹಾಗೂ ಅವರ ಅನುಭವಗಳನ್ನು ಶೋಧಿಸುವ ಮೂಲಕ ಸಣ್ಣಕಥೆಗಳಿಗೆ ವಿಶಿಷ್ಟ ಪ್ರಜ್ಞೆಯನ್ನು ಸಂವೇದನಾತ್ಮಕ ಲಕ್ಷಣವನ್ನು ಒದಗಿಸುತ್ತಾ ಬಂದಿದ್ದಾರೆ. ವೈದೇಹಿಯವರಲ್ಲಿ ಸ್ತ್ರೀಯರ ಕಣ್ಣಿನ ನೆಲೆಯಿಂದ ಅಂತಃಕರಣದ ಆರ್ದ್ರತೆಯ ಮೂಲಕವಾಗಿ ಜಗತ್ತನ್ನು ನೋಡುವ ಕ್ರಮವಿದೆ.

೧೬. ಪುರುಷರನ್ನು ದೂರವಿಡಬೇಕು, ದ್ವೇಷಿಸಬೇಕು, ಅವರೊಡನೆ ಸಂಘರ್ಷಕ್ಕಿಳಿಯಬೇಕು ಎಂದರ್ಥವಲ್ಲ. ಬದಲಾಗಿ ಆ ಪುರುಷರು ಆಳುವ ಜಗತ್ತಿನ ವ್ಯವಹಾರ, ಚಿಂತನೆ, ವರ್ತನೆಗಳೆಲ್ಲವೂ ಯಾವಾಗಲೂ ಮಾನವೀಯತೆಯ ದೃಷ್ಟಿಯಿಂದ ಮೌಲಿಕವೆಂದೇ ತಿಳಿಯಬೇಕಿಲ್ಲ. ಏಕೆಂದರೆ ಅವು ಬಗೆಬಗೆಯಾಗಿ ಹೆಣ್ಣಿಗೆ ಮಾರಕವಾಗಿಯೇ ತಮ್ಮ ಹಿತ ಸಾಧಿಸುತ್ತಿರುತ್ತವೆ ಎಂಬ ಸ್ತ್ರೀಅನುಭವಗಳನ್ನು ವೈದೇಹಿ ಕಥೆಗಳು ಪ್ರತಿಬಿಂಬಿಸುತ್ತವೆ.

೧೭. ಗ್ರಾಮಾಡಳಿತದ ವ್ಯವಸ್ಥೆಯಲ್ಲಿ ಅಬಲನನ್ನು ಸಬಲರು ತಮ್ಮ ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳುವುದು, ಹಂಗಿನ ಬದುಕಿನಲ್ಲಿ ಊಳಿಗಮಾನ್ಯವ್ಯವಸ್ಥೆಯಲ್ಲಿ ಮೌನದಲ್ಲಿ ನೋವನ್ನು ಅನುಭವಿಸುವ, ಒಂದು ಆಯಾಮದಲ್ಲಿ ಕುಲಕರ್ಣಿಗೆ ತಿರುಗಿ ಬೀಳುವುದು ಅವನ ಅಂತ್ಯಕ್ಕೆ ಕಾರಣವಾಗುವುದು ಬಂಡಾಯದ ಪರಾಕಾಷ್ಠೆಯಾಗುತ್ತದೆ. ಅನ್ಯಾಯ ಅಳಿಯಬೇಕಾದರೆ ಅನ್ಯಾಯವೆಸಗುವವರ ಹತ್ಯೆ ಮಾಡಲೇಬೇಕೆಂಬ ಆಂತರಿಕ ಕಿಚ್ಚಿನ 'ಹುಲಿಗ್ಯಾ' ಪ್ರತಿಭಟನೆಯ ಪ್ರತಿರೂಪದಂತೆ ಕಾಣಿಸುವಲ್ಲಿ ನಿರೂಪಕಿಯ ಬಣ್ಣನೆ ಪರಿಣಾಮಕಾರಿಯಾದುದು.

೧೮. ಸಮಾಜದ ಜ್ವಲಂತ ಸಮಸ್ಯೆಯಾದ ಸಾಮಾಜಿಕ ಅನಿಷ್ಟವೆಂದು ಬಿಂಬಿತವಾದ ಜೋಗಿಣಿ ಪದ್ಧತಿಗೆ ಧಿಕ್ಕಾರ ತೋರಿ ಅದರಿಂದ ಹೊರಬರುವ 'ಶೀನಿಂಗಿ'ಯೆಂಬ ಹೆಣ್ಣು ಅಳ್ಳಕ ಪಾತ್ರವನ್ನಾಗಿಸದೆ ಪೂರ್ಣಪಾತ್ರವಾಗಿ ಬೆಳೆಸಿ ಬಂಡಾಯದ ಸಾಂಕೇತಿಕತೆಯನ್ನು ಗೀತಾನಾಗಭೂಷಣ ಅವರು ತೆರೆದಿಡುತ್ತಾರೆ.

೧೯. ಕರ್ಮಟ ಬ್ರಾಹ್ಮಣರ ಅಮಾನವೀಯ ನಡವಳಿಕೆಗಳಿಗೆ ತೀವ್ರ ಬಂಡಾಯದ ಬಿಸಿಯನ್ನು ಮುಟ್ಟಿಸುವ ದಲಿತ-ಶೋಷಿತ ಸ್ತ್ರೀಸಂಕುಲದ ಮಾದರಿಯಿದೆ. ಸಾಮಾಜಿಕ ಮೇಲುಸ್ಥರದ ಸಿರಿವಂತರ ಮನೋದಾರಿದ್ರ್ಯವನ್ನು ಅಂತರಂಗದ ಭ್ರಷ್ಟತೆಯನ್ನು ಅನಾವರಣಗೊಳಿಸುವ, ಕುಲೀನ ಕುಟುಂಬಗಳಲಿ ನಡೆಸುವ ಲೈಂಗಿಕ ಚಟುವಟಿಕೆಗಳು ಮತ್ತು ಅದನ್ನು ಎಸಗುವ ವ್ಯಕ್ತಿಗಳ ಮನೋವಿಕೃತಿಗಳನ್ನು ಅನಾವರಣ ಮಾಡಿಸುತ್ತವೆ.

೨೦. ಕಾವಿಧಾರಿಗಳ ಅನೈತಿಕ ಲೈಂಗಿಕ ಸಂಬಂಧವನ್ನು ಜಡ್ಡುಗಟ್ಟಿದ ಅವರ ಮನಸ್ಸುಗಳನ್ನು ಅವರು ಹಿಡಿದ ಶೋಷಣೆಯ ಮಾರ್ಗಗಳನ್ನು ಅವರ ಸೋಗಲಾಡಿತನ ಮತ್ತು ಢಂಬಾಚಾರಗಳನ್ನು ತೆರೆದಿಡುವ ವಸ್ತುವನ್ನು ಧಾರ್ಮಿಕ ದಾರಿದ್ರ್ಯವನ್ನು ಪ್ರಧಾನವಾಗಿ ಕಾಣುತ್ತದೆ.

೨೧. ಸ್ಥಾವರ ಸಮಾಜವನ್ನು ಚಲನಶೀಲಗೊಳಿಸಿ ಜಂಗಮ ಸಮಾಜವಾಗಿ ಪರಿವರ್ತಿಸುವಲ್ಲಿ ಪ್ರಜಾಪ್ರಭುತ್ವದ ಮೂಲ ಧ್ಯೇಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಬ್ರಾತೃತ್ವ ಅವುಗಳ ನಿಜದ ನೆಲೆಗಳಲ್ಲಿ ಸಕಾರಗೊಳ್ಳಬೇಕು.

೨೨. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇರುವ ವೈಪರೀತ್ಯಗಳು, ವೈರುದ್ಯಗಳು ವಿಚಿತ್ರಗಳನ್ನು ಗ್ರಹಿಸಿದ ಕತೆಗಾರ್ತಿ ಅದಕ್ಕೆ ಹೊಸ ತಿರುವು ಕೊಡಲು ಸಮಾನತೆಯ ಅಸ್ತ್ರವಾದ ಮೀಸಲಾತಿಯ ಅಂಶವನ್ನು ತರುತ್ತಾರೆ.

೨೩. ಪುರೋಹಿತಶಾಹಿ, ಯಾಜಮಾನ್ಯವನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಮೀಸಲಾತಿ ಹಿನ್ನಲೆಯಲ್ಲಿ ಅರ್ಚಕವೃತ್ತಿಗೆ ಆಯ್ಕೆಗೊಳ್ಳುವ ದಲಿತ 'ಮುಂಡಪ್ಪ'ನ ಪಾತ್ರ ಕಡೆದಿಡುವಲ್ಲಿ, ಸಾಮಾಜಿಕ ಸ್ಥಿತ್ಯಂತರಗಳಿಗೆ ಒಡ್ಡಿಕೊಂಡು ಒಂದಾಗಿ ಹೋಗಬೇಕೆನ್ನುವ ಸೂಚ್ಯತೆಯನ್ನು ಹೊಂದಿರುವ ಸೂಕ್ಷ್ಮಕತೆಯಾಗಿದೆ. ಡಾ. ಬಾಬಾಸಾಹೇಬ್ ಅಂಬೇಡ್ಕರವರ ಸಮಾನತೆಯ ಭಾರತದ ಆಶಯವನ್ನು ಮೀಸಲಾತಿ ಕೊಡಮಾಡಬಹುದೆನೋ ಎಂಬ ಭರವಸೆಯ ಆಶಯವನ್ನು ವ್ಯಕ್ತಪಡಿಸುತ್ತಾರೆ.

೨೪. ಕಾಯಕದ ಮೂಲಕ ಸಮಾಜ ಸಮುದಾಯದ ಸೇವೆಗೈಯುವ ಶ್ರಮಿಕರು. ದಲಿತರ ಶ್ರಮವನ್ನು ಗರಿಷ್ಟಮಟ್ಟದಲ್ಲಿ ಬಳಸಿಕೊಂಡು ಶ್ರಮಕ್ಕೆ ತಕ್ಕ ಪ್ರತಿಫಲ ನೀಡದ

ಸಿರಿವಂತ ಬಂಡವಾಳಶಾಹಿಗಳು ಅವರನ್ನು ಶೋಷಿಸುವುದು, ಅನ್ಯಾಯದ ಪರಮಾವಧಿಯಾಗುತ್ತದೆ. ಆಧುನಿಕ ಶಿಕ್ಷಣದ ಅರಿವು ಮತ್ತು ನವಸಮಾಜದ ಬೆಳವಣಿಗೆಯ ಕಾರಣದಿಂದಾಗಿ ದಮನಿತರಲ್ಲಿ ಜಾಗೃತಿಮೂಡಿಸಿ ವಿಮೋಚನೆಯತ್ತ ಸಾಗಿಸುವ ಧೋರಣೆಯನ್ನು ಇಲ್ಲಿನ ಕಥೆಗಳು ಅಭಿವ್ಯಕ್ತಿಸಿವೆ ಎಂಬುದನ್ನು ಕಂಡುಕೊಳ್ಳಬಹುದು.

ಗ್ರಂಥಸೂಚಿ

ಮೂಲ ಆಕರಗಳು

೧. ಗೀತಾ ನಾಗಭೂಷಣ, ಜ್ವಲಂತ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦.

೨. ಗೀತಾ ನಾಗಭೂಷಣ, ಅವ್ವ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦.

೩. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕಥೆಯಾಗಿ ನಿಂತವರು ಇಲ್ಲಿವರೆಗಿನ ಕಥೆಗಳು ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೬.

೪. ವೀಣಾ ಶಾಂತೇಶ್ವರ, ನಡೆದದ್ದೇದಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.

೫. ವೈದೇಹಿ, ವೈದೇಹಿ ಕಥೆಗಳು(೧೯೭೯-೨೦೧೬), ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೮.

೬. ವೈದೇಹಿ, ಕ್ರೌಂಚಪಕ್ಷಿಗಳು, ಅಕ್ಷರ ಪ್ರಕಾಶನ ಹೆಗ್ಗೋಡು.೨೦೧೨.

೭. ವೈದೇಹಿ. ಕತೆ ಕತೆ ಕಾರಣ, ಅಕ್ಷರ ಪ್ರಕಾಶನ ಹೆಗ್ಗೋಡು.೨೦೧೬.

ಪರಾಮರ್ಶನ ಆಕರಗಳು

೧. ಅನ್ನದಾನೇಶ್. ಸಂ, ವಿಚಾರ ಸಾಹಿತ್ಯ ೨೦೧೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೬.

೨. ಅನುಪಮಾ. ಹೆಚ್.ಎಸ್. ಮಹಿಳೆ:ದಲಿತತ್ವ ಮತ್ತು ರಾಜಕೀಯಪ್ರಜ್ಞೆ, ಲಡಾಯಿ ಪ್ರಕಾಶನ, ಗದಗ, ೨೦೧೨.

೩. ಅನುಪಮಾ. ಹೆಚ್.ಎಸ್. ಹೆಣ್ಣು, (ಸಂಕರಕಾಲದ ಆತ್ಮಪ್ರಜ್ಞೆ), ಲಡಾಯಿ ಪ್ರಕಾಶನ, ಗದಗ, ೨೦೧೩.

೪. ಅಬೂಬಕ್ಕರ್. ಸಾ.ರಾ. ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೭.

೫. ಅರವಿಂದ ಮಾಲಗತ್ತಿ. (ಸಂ). ಕನ್ನಡ ವಿಮರ್ಶೆಯ ಮಾರ್ಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು. ವಿಶ್ವವಿದ್ಯಾಲಯ, ೨೦೦೪.

೬. ಅರವಿಂದ ಮಾಲಗತ್ತಿ. ದಲಿತಸಾಹಿತ್ಯ, ಚೇತನ್ ಬುಕ್‌ಹೌಸ್, ಮೈಸೂರು. ೨೦೧೧.

೭. ಅರ್ಜುನ ಗೊಳಸಂಗಿ (ಸಂ). ಕನ್ನಡದಲಿತ ಸಾಹಿತ್ಯ: ಸಮಾಲೋಕನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೩.

೮. ಅರ್ಜುನ ಗೊಳಸಂಗಿ (ಸಂ). ದಲಿತ ಚಿಂತನಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೧೦.

೯. ಅಶೋಕ ಟಿ. ಪಿ. ವೈದೇಹಿ ಕಥನ, ಅಕ್ಷರ ಪ್ರಕಾಶನ, ಸಾಗರ, ೨೦೧೩.

೧೦. ಅಣ್ಣಮ್ಮ, ಸ್ತ್ರೀಸಂಕಥನಗಳು, ಬಸವ ಪ್ರಕಾಶನ, ಗುಲಬರ್ಗಾ, ೨೦೧೩.

೧೧. ಆಶಾದೇವಿ ಎಮ್.ಎಸ್. ಸ್ತ್ರೀ ಮತವನುತ್ತರಿಸಲಾಗದೇ, ಅಕ್ಷರ ಪ್ರಕಾಶನ, ಸಾಗರ, ೨೦೦೬.

೧೨. ಉಜ್ವಲಾ ಹಿರೇಮಠ. (ಸಂ). ಲೇಖಕಿಯರ ಕೃತಿಗಳಲ್ಲಿ ಸ್ತ್ರೀಪಾತ್ರಗಳು ಪ್ರಸಾರಾಂಗ ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ, ೧೯೯೪

೧೩. ಉಷಾ.ಎಂ. ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೪. ಉಷಾ.ಎಂ. ಸಂಸ್ಕೃತಿಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೫. ಉಷಾ.ಎಂ. ಸಂ. ಆಧುನಿಕ ಮಹಿಳಾ ಸಾಹಿತ್ಯ, ಪ್ರಸಾರಾಂಗಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭.

೧೬. ಕರೀಗೌಡ ಬೀಚನಹಳ್ಳಿ. ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೧೧.

೧೭. ಕವಿತಾರೈ. ಮಹಿಳೆ–ಅಸ್ತಿತ್ವದ ಸಂಕಥನ, ಪ್ರಗತಿಗ್ರಾಫಿಕ್ಸ್, ಬೆಂಗಳೂರು, ೨೦೦೯.

೧೮. ಗಾಯಿತ್ರಿ.ಎನ್. ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ, ಲಡಾಯಿ ಪ್ರಕಾಶನ, ಗದಗ, ೨೦೧೨

೧೯. ಗಾಯಿತ್ರಿ.ಎನ್. ಮಹಿಳಾ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬.

೨೦. ಗಾಯಿತ್ರಿನಾವಡ. ಭಾರತೀಯ ಸ್ತ್ರೀವಾದ ಒಂದು ಸಂಕಥನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦.

೨೧. ಗಿರಡ್ಡಿಗೋವಿಂದರಾಜ. ಸಮಗ್ರ ವಿಮರ್ಶೆ ಸಂಪುಟ. ೨, ಸಪ್ನ ಬುಕ್‌ಹೌಸ್, ಬೆಂಗಳೂರು. ೨೦೧೩

೨೨. ಗಿರಡ್ಡಿಗೋವಿಂದರಾಜ.ಸಂ. ಜೋಗತಿ ಜೋಳಿಗೆ ಕಥೆಗಳು ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೫.

೨೩. ಗಿರಡ್ಡಿಗೋವಿಂದರಾಜ. ಸಣ್ಣಕಥೆಯ ಹೊಸ ಒಲವುಗಳು, ಸಾಹಿತ್ಯ ಭಂಡಾರ, ಹುಬ್ಬಳ್ಳಿ. ೨೦೦೦

೨೪. ತಾರಿಣಿ ಶುಭದಾಯಿನಿ. ಸನ್ನೆಗೋಲು, ಸಿ.ವಿ.ಜಿ ಬೆಂಗಳೂರು.೨೦೧೬.

೨೫. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (ಸಂ): ಸ್ತ್ರೀವಾದಿ ಸಾಹಿತ್ಯ ವಿಮರ್ಶೆ; ಕನ್ನಡ ಸಂಘ, ಕ್ರೈಸ್ತಕಾಲೇಜು, ಬೆಂಗಳೂರು. ೧೯೯೪

೨೬. ದೇವರಾಜ್‌ಆರ್. ಸಾಹಿತ್ಯ ಸಂದರ್ಭ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ, ೨೦೧೧.

೨೭. ನಂದಿಶ್ವರದಂಡೆ. ಸಂ. ಸಣ್ಣಕಥೆ ಎಂದರೇನು, ವಿಜಯಕಲ್ಯಾಣ ಪ್ರಕಾಶನ ಹೊಸಪೇಟೆ, ೨೦೧೫.

೨೮. ನರನಹಳ್ಳಿ ಬಾಲಕೃಷ್ಣ. ನವ್ಯತೆ, ಅಭಿನವ ಪ್ರಕಾಶನ ಬೆಂಗಳೂರು, ೨೦೧೭.

೨೯. ನಾಗರಾಜ್ ಡಿ. ಆರ್. 'ಸಂಸ್ಕೃತಿಕಥನ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ಭವನ, ಬೆಂಗಳೂರು, ೨೦೦೬.

೩೦. ನಾಗರತ್ನಕುಮಾರಿ. ಸಂ. ಸಾಹಿತ್ಯವಿಮರ್ಶೆ, ಕರ್ನಾಟಕ ಸಾಹಿತ್ಯಅಕಾಡೆಮಿ ಬೆಂಗಳೂರು, ೨೦೦೮.

೩೧. ನಾರಾಯಣ ಕೆ. ವಿ. ತೊಂಡುಮೇವು, ಕೆ.ಬಿ. ಪ್ರಗತಿ ಬರೆಹ ಬೆಂಗಳೂರು.

೩೨. ನಾಗಭೂಷಣ ಓ.ಎಲ್. ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ಬೆಂಗಳೂರು. ೨೦೧೫

೩೩. ನಾಗೇಶ್. ಹೆಚ್. ವಿ. ಕುಟುಂಬ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೪.

೩೪. ಪಂಡಿತಾರಾಧ್ಯ. ಸಂ. ಸಾಹಿತ್ಯ ವಿಮರ್ಶೆ,-೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೧.

೩೫. ಪ್ರಭಾವತಿ.ಎಸ್ ವಿ. ಸಮದರ್ಶಿ, ಸೂರ್ಯ ಪ್ರಕಾಶನ ಮಲ್ಲಾಡಿಹಳ್ಳಿ

೩೬. ಪ್ರಧಾನಗುರುದತ್ತ. ಸಂ. ವೈದೇಹಿ ಕೇಂದ್ರ ಸಾಹಿತ್ಯ ಅಕಾಡೆಮಿ-೫೩, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೨.

೩೭. ಪ್ರಧಾನಗುರುದತ್ತ. ಸಂ. ಬದುಕು ಬರೆಹ, ನವಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೧೨

೩೮. ಪ್ರಧಾನಗುರುದತ್ತ. ಸಂ. ಗೀತಾನಾಗಬೂಷಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು.೨೦೦೯

೩೯. ಪ್ರಸನ್ನಕುಮಾರ್.ಸಿ.ಎಲ್. ಸಂ. ಆಧುನಿಕ ಕನ್ನಡ ಸಾಹಿತ್ಯ ಮತ್ತು ಸ್ತ್ರಿವಾದ ಸೇಕ್ರೆಡ್ ಹಾರ್ಟ್ ಪ್ರಥಮದರ್ಜೆ ಮಹಿಳಾ ಕಾಲೇಜು, ಬೆಂಗಳೂರು, ೨೦೧೫.

೪೦. ಪ್ರಶಾಂತ್ ನಾಯಕ್ ಜಿ. ಸಂ. ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೬.

೪೧. ಪುಟ್ಟಯ್ಯ. ಬಿ. ಎಂ. ಶ್ರಮ ಭಾಷೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೫.

೪೨. ಪುಟ್ಟಯ್ಯ. ಬಿ. ಎಂ. ಸಂಶೋಧನೆ: ತಾತ್ವಿಕ ಆಯಮಗಳು ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ, ೨೦೧೫.

೪೩. ಪುರುಷೋತ್ತಮ ಬಿಳಿಮಲೆ. ಮೆಲುದನಿ(ವಿಮರ್ಶಾ ಲೇಖನಗಳು) ಯಾಜಿ ಪ್ರಕಾಶನ ಹೊಸಪೇಟೆ, ೨೦೧೪

೪೪. ಪುರುಷೋತ್ತಮ ಬಿಳಿಮಲೆ. ಬಂಡಾಯ ದಲಿತ ಚಳುವಳಿ ಮತ್ತು ಸಾಹಿತ್ಯ ಅಭಿನವ ಪ್ರಕಾಶನ ಬೆಂಗಳೂರು, ೨೦೧೭

೪೫. ಪುಷ್ಪ ಹೆಚ್. ಎಲ್. ಸ್ತ್ರೀ ಎಂದರೆ ಅಷ್ಟೇ ಸಾಕೆ, ಯಾಜಿ ಪ್ರಕಾಶನ ಹೊಸಪೇಟೆ, ೨೦೧೫.

೪೬. ಪ್ರೀತಿ ಶುಭಚಂದ್ರ, ಸುಮನಾ ಸಂ. ಸಕಾರದತ್ತ ಸಮಾನತೆಯ ಕನಸು (ಮಹಿಳಾ ಪ್ರತಿರೋಧದ ನೆಲೆಗಳು), ಲಡಾಯಿ ಪ್ರಕಾಶನ, ಗದಗ, ೨೦೧೫.

೪೭. ಬಸವರಾಜ ಕಲ್ಗುಡಿ ಸಂ. ಸುವರ್ಣ ವಿಚಾರ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೪೮. ಮಲ್ಲಿಕಾಘಂಟಿ. ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ, ಯುವ ಪ್ರಕಾಶನ, ಧಾರವಾಡ, ೧೯೯೪.

೪೯. ಯರ್ರಿಸ್ವಾಮಿ. ಈ. ಗ್ರಹಿಕೆ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೦.

೫೦. ಯರ್ರಿಸ್ವಾಮಿ ಈ. ಮಹಿಳೆ ಮತ್ತುಜಾತಿ ಶ್ರೇಣಿಕರಣ ಅಂಬೇಡ್ಕರ್ ದೃಷ್ಟಿಕೋನ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೦.

೫೧. ರಾಹು. ಅನು: ಭಾರತೀಯ ಮಹಿಳಾ ವಿಮೋಚನೆಯ ಆಂದೋಲನ, ಲಡಾಯಿ ಪ್ರಕಾಶನ, ಗದಗ, ೨೦೧೩.

೫೨. ರಾಘವೇಂದ್ರರಾವ್ ಹೆಚ್.ಎಸ್. ಹಾಡೇ ಹಾದಿಯ ತೋರಿತು, ಕನ್ನಡಸಂಘ, ಬೆಂಗಳೂರು, ೧೯೯೫.

೫೩. ವಿನಯಾ ಒಕ್ಕುಂದ. ಉರಿ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೪.

೫೪. ವಿಜಯಾದಬ್ಬೆ. ಮಹಿಳೆ ಸಾಹಿತ್ಯ ಸಮಾಜ, ರಚನಾ ಪ್ರಕಾಶನ ಮೈಸೂರು, ೧೯೮೯.

೫೫. ವಿಜಯಾದಬ್ಬೆ. ನಾರಿ: ದಾರಿ–ದಿಗಂತ; ರಚನಾ ಪ್ರಕಾಶನ, ಮೈಸೂರು. ೧೯೯೭

೫೬. ವಿಜಯಲಕ್ಷ್ಮಿ. ಸ್ತ್ರೀವಾದ ಸಾಹಿತ್ಯದ ಒಂದು ಚಳುವಳಿ ಮತ್ತು ಇತರ ಲೇಖನಗಳು, ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೫೭. ವಿಜಯಶ್ರೀ ಸಬರದ. ಸಂ. ಮಹಿಳಾ ಶೋಷಣೆ ಸವಾಲುಗಳು, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ೨೦೦೫.

೫೮. ವಿವಿಧ ಲೇಖಕಿಯರು. ಕನ್ನಡ ಸಾಹಿತ್ಯದಲ್ಲಿ ಸ್ತ್ರಿಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೭.

೫೯. ವಿಠಲ್‌ರಾವ್ ಗಾಯಕವಾಡ. ಟಿ. ಅನು. ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೮.

೬೦. ವೈದೇಹಿ. ಜಾತ್ರೆ. ಸ್ಮೃತಿಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು. ಸಾಗರ, ೨೦೧೦.

೬೧. ಶಾಂತಾಇಮ್ರಾಪುರ, ಸಂ. ನಿರ್ದಿಗಂತ ಸಂ.೧. (ವೀಣಾಶಾಂತೇಶ್ವರರ ಅಭಿನಂದನ ಗ್ರಂಥ) ಸುಂದರ ಪ್ರಕಾಶನ, ಧಾರವಾಡ, ೨೦೦೯.

೬೨. ಶಾಂತಾಇಮ್ರಾಪುರ. ಸಂ. ನಿರ್ದಿಗಂತ ಸಂ.೨, ಸುಂದರ ಪ್ರಕಾಶನ, ಧಾರವಾಡ, ೨೦೦೯.

೬೩. ಶ್ರೀಮತಿ ಹೆಚ್.ಎಸ್,ಕನ್ನಡ ಮಹಿಳಾಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೬.

೬೪. ಷರೀಫಾ. ಕೆ. ಮತ್ತು ಬಸವರಾಜ ಸೂಳಿಬಾವಿ ಸಂ. ಮಹಿಳಾಮಾರ್ಗ, ಲಡಾಯಿ ಪ್ರಕಾಶನ, ಗದಗ, ೨೦೧೦.

೬೫. ಸರಸ್ವತಿ ಚಿಮ್ಮಲಗಿ. ಸಂ. ಗೀತಾನಾಗಭೂಷಣ ಕಲಬುರ್ಗಿಯ ಸ್ಪಂದನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೬೬. ಸಬಿಹಾ ಭೂಮಿಗೌಡ. ಸಂ. ಸಂಸ್ಕೃತಿ ಮಹಿಳಾಮಾಲಿಕೆ. ೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೦೮.

೬೭. ಸಬಿಹಾ ಭೂಮಿಗೌಡ. ಸಂ. ಮಹಿಳೆ ಇಂದಿನ ಸವಾಲುಗಳು, ಲಡಾಯಿ ಪ್ರಕಾಶನ, ಗದಗ, ೨೦೧೪.

೬೮. ಸುಜ್ಞಾನಮೂರ್ತಿ. ಅನು, ಸ್ತ್ರೀವಾದಿ ಅರಿವಿನ ಹಾದಿ, ಲಡಾಯಿ ಪ್ರಕಾಶನ, ಗದಗ, ೨೦೧೮.

೬೯. ಸುಜ್ಞಾನಮೂರ್ತಿ. ಅನು, ಕುಟುಂಬವ್ಯವಸ್ಥೆ ಮಾರ್ಕ್ಸ್‌ವಾದ – ಸ್ತ್ರೀವಾದ, ಲಡಾಯಿ ಪ್ರಕಾಶನ, ಗದಗ, ೨೦೧೮.

೭೦. ಸುಬ್ರಹ್ಮಣ್ಯ. ಓ, ಅಸ್ತಿತ್ವವಾದ ಮತ್ತು ಕನ್ನಡ ಸಾಹಿತ್ಯಚೈತ್ರ, ಪಲ್ಲವಿ ಪ್ರಕಾಶನ ಮೈಸೂರು, ೨೦೧೧.

೭೧. ಸುಮಿತ್ರಾಬಾಯಿ ಬಿ. ಎನ್. ನೆಲದ ಸುರಭಿ; ಮನದ ಮಾರುತ ವೈದೇಹಿ, ಕನ್ನಡ ಸಂಘ ಕಾಂತಾವರ(ರಿ), ಕಾರ್ಕಳ, ಉಡುಪಿ, ೨೦೧೭.

೭೨. ಸುಮಿತ್ರಾಬಾಯಿ. ಬಿ. ಎನ್. ಸ್ತ್ರೀಸಂವೇದನೆಯಲ್ಲಿ ಕನ್ನಡಕಥನ, ಶಕ್ತಿ ಪ್ರಿಂಟರ್ಸ್, ಬೆಂಗಳೂರು, ೨೦೦೪.

೭೩. ಸುಮಿತ್ರಾಬಾಯಿ. ಬಿ.ಎನ್. ಸ್ತ್ರೀವಾದ ಸಾಹಿತ್ಯ ಪಾರಿಭಾಷಿಕ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೯.

೭೪. ಹನುಮಂತಯ್ಯ. ಎಲ್. ಬೂದಿ ಮುಚ್ಚಿದ ಕೆಂಡ (ದಲಿತ ಲೋಕದ ಅನಾವರಣ) ಅಂಕಿತ ಪ್ರಕಾಶನ ಬೆಂಗಳೂರು, ೨೦೧೬.


೭೫. ಹಲಸಂಗಿ ಗೆಳೆಯರು. ಸಂ. ಗರತಿಯ ಹಾಡು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೮.

೭೬. ಹಳ್ಳಿಕೇರಿ. ಎಫ್. ಟಿ. ಸಂ. ದಶಕದ ಕನ್ನಡ ಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨.

೭೭. ಹಾಲತಿ ಸೋಮೇಶ್ವರ. ಮಹಿಳೆ ಒಂದುಚಿಂತನೆ, ವಿಸ್ಮಯ ಪ್ರಕಾಶನ, ಮೈಸೂರು, ೨೦೧೨.

೭೮. ಹಾಲತಿ ಸೋಮೇಶ್ವರ. ಮಹಿಳಾ ಹಕ್ಕುಗಳು, ವಿಸ್ಮಯ ಪ್ರಕಾಶನ, ಮೈಸೂರು, ೨೦೧೬.

೭೯. ಹೇಮಲತಾ. ಹೆಚ್. ಎಂ. ಮಹಿಳಾ ಅಧ್ಯಯನ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೧೦.



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ